Sri B. D. JATTI.—Before the half-hour discussion begins, I would draw attention to the promise I made earlier to-day that I would enquire and inform whether sufficient replies would be ready from tomorrow onwards. I wish to say that necessary arrangements have now been made. Tomorrow replies will be supplied and from Monday onwards, we will send replies regularly.

HALF-AN-HOUR DISCUSSION ON STARRED QUESTION No. 889

re: House Building Co-operative Societies registered for the construction of Houses for the Scheduled Caste people in the State during 1962-63 and 1963-64.

ಶ್ರೀ ವೈ. ರಾಮಕೃಷ್ಣ (ಯಲಹಂಕ).—ಮಾನ್ಯ ಸಭಾಧ್ಯಕ್ಷರೇ, 52ನೇ ಕಟ್ಟಿನಲ್ಲಿ 889ನೇ ಪ್ರಶ್ನೆಯ ಮೇಲೆ ಈ ಅರ್ಧ ಗಂಟೆ ಕಾಲ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮ್ಮನ್ನು ವಂದಿಸುತ್ತೇನೆ. ಹರಿಜನರ ಗೃಹನಿರ್ಮಾಣ ಸಹಕಾರ ಸಂಘಗಳ ವಿಚಾರವಾಗಿ ಅನೇಕ ಸದಸ್ಯರು ಪ್ರಶ್ನೆಗಳನ್ನು ಕಳಿಸಿದರು. ಆದರೆ ಇದು ನಮ್ಮ ದೇಶದ 1/5 ಭಾಗದ ಜನರ ಆರ್ಥಿಕ ಮಟ್ಟವನ್ನು ಮುಂದೆ ತರತಕ್ಕ ಸಮಸ್ಯೆ; ಇದಕ್ಕೆ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಬೆಂಬಲ ಕೊಡಬೇಕು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಒಂದು ಪ್ರಶ್ನೆಯನ್ನು ಕಳಿಸಿದ್ದೆ.

ನಮಗೆ ಸ್ವರಾಜ್ಯ ಬಂದ ಮೇಲೆ ಹರಿಜನ ಗಿರಿಜನರ ಪುರೋಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಕೈಕೊಳ್ಳಲಾಯಿತು. ಅದರಲ್ಲಿ ಬಹು ಮುಖ್ಯವಾದುದು ಎಂದರೆ ಅವರ ಗೃಹನಿರ್ಮಾಣ ಕಾರ್ಯಾಚರಣೆ. 1948ನೇ ಇಸವಿಯಿಂದ, ಈ ಹರಿಜನರು ಎಲ್ಲಿಯಾದರೂ ಮನೆಗಳನ್ನು ಕಟ್ಟಿದರೆ ಅದಕ್ಕೆ ಸರ್ಕಾರದಿಂದ ಸಬ್ಸಿಡಿ ಕೊಡತಕ್ಕ ಪದ್ಧತಿ ಜಾರಿಯಲ್ಲಿತ್ತು. ಮೊದಲು ಹಳೆಯ ಮೈಸೂರಿ

ನಲ್ಲಿ ಇದು 200 ರೂಪಾಯಿ ಇತ್ತು. ತರುವಾಯ 250ಕ್ಕೆ ಏರಿತು. ಐದಾರು ವರ್ಷಗಳ ಹಿಂದೆ ಅದನ್ನು 300 ರೂಪಾಯಿಗಳಿಗೇರಿಸಿದರು. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 400 ರೂಪಾಯಿ ಒಂದು ಮನೆಗೆ ಸಬ್ಸಿಡಿ ಕೊಡುವಂಥ ಆಜ್ಞೆ ಜಾರಿಯಲ್ಲಿತ್ತು. ಇದರಿಂದ ಬಹಳ ಹರಿಜನರು ಮನೆಗಳನ್ನು ಕಟ್ಟಿಕೊಂಡಿದ್ದಾರೆಂದರೆ ತಪ್ಪಾಗಲಾರದು. ನನಗೆ ಗೊತ್ತಿರುವ ಅಂಕಿ ಅಂಶಗಳ ಪ್ರಕಾರ ಮೊದಲನೆಯ ಯೋಜನೆಯಲ್ಲಿ 85 ಲಕ್ಷ ರೂಪಾಯಿಗಳನ್ನು ಮನೆಗಳನ್ನು ಕಟ್ಟಲು ನಿಗದಿ ಮಾಡಿದರು. ಆ ಪೈಕಿ 83.34 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಸುಮಾರು 33,000 ಮನೆಗಳನ್ನು ಕಟ್ಟಿಸಿದ್ದಾರೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 135 ಲಕ್ಷ ರೂಪಾಯಿಗಳನ್ನು ನಿಗದಿಮಾಡಿ, ಅದರಲ್ಲಿ 42,500 ಮನೆಗಳನ್ನು ಕಟ್ಟಿದ್ದಾರೆ. ಈಗ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣವನ್ನು ನಿಗದಿಮಾಡಿದ್ದಾರೆ, ಈಗಾಗಲೇ ಎಷ್ಟು ಖರ್ಚಾಗಿದೆ ಮತ್ತು ಮುಂದೆ ಮೂರನೆಯ ಯೋಜನೆ ಮುಗಿಯುವುದರೊಳಗೆ ಎಷ್ಟು ಖರ್ಚಾಗಬಹುದು ಎಂಬುದನ್ನೂ ನಾವು ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ಕಾಣಿಸುತ್ತದೆ.

ಈ ಸಬ್ಸಿಡಿ ಸ್ಕೀಮನ್ನು 7-4-1961ರಲ್ಲಿ ಸರ್ಕಾರದವರು ನಿಲ್ಲಿಸಿ loan scheme ಜಾರಿಗೆ ತಂದರು. ಈ loan scheme ಹಿಂದೆ ಇದ್ದಂಥ ಬೊಂಬಾಯಿ ಸರ್ಕಾರದಲ್ಲಿ ಜಾರಿಯಲ್ಲಿತ್ತು ಎಂದು ಹೇಳಿದ್ದಾರೆ. ಇದರ ಪ್ರಕಾರ ಪ್ರತಿಯೊಬ್ಬ ಹರಿಜನರಿಗೂ ಒಂದು, ಒಂದೂವರೆ ಕುಂಟೆ ಜಮೀನನ್ನು ಫ್ರೀಯಾಗಿ ಕೊಟ್ಟು, ಹೊಸದಾಗಿ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ 1,[illegible]00 ರಿಂದ 3,000 ರೂಪಾಯಿಗಳ ತನಕ ಸಾಲ ಕೊಡುವ ವ್ಯವಸ್ಥೆಯನ್ನು ಮಾಡಿದರು. ಈ ಯೋಜನೆ ಜಾರಿಗೆ ಬಂದು 2½ ವರ್ಷವಾಯಿತು. ಇದು ಹೇಗೆ ಕೆಲಸಮಾಡುತ್ತಿದೆಯೆಂದು ನಮಗೆ ಗೊತ್ತಾಗುತ್ತಿಲ್ಲ. ಹರಿಜನರಲ್ಲಿ ನಿರಾಸೆಯ ಮನೋಭಾವ ಇವತ್ತಿನ ದಿವಸ ಮೂಡಿದೆ. ಗೃಹನಿರ್ಮಾಣ ಸಹಕಾರ ಸಂಘ ಎಂದು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಮಾಡಿ ಹಣವನ್ನು ಶೇಖರಿಸಿ, 10-11 ರೂಪಾಯಿ ಷೇರು ಮೊಬಲಗನ್ನು ತೆಗೆದುಕೊಂಡಿದ್ದಾರೆ. ನಮಗೆ ಮನೆ ಕಟ್ಟಲು ದುಡ್ಡು ಕೊಡಿ ಎನ್ನುವ ಕೂಗು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇರಬಹುದೆಂದು ಕಾಣುತ್ತದೆ. ನಮ್ಮ ತಾಲ್ಲೂಕಿನಲ್ಲಂತೂ ಬಹಳ ಜಾಸ್ತಿಯಾಗಿದೆ. 2½ ವರ್ಷವಾದರೂ ಕೂಡ ಇದನ್ನು ಜಾರಿಗೆ ತರದ ಇರುವುದಕ್ಕೆ ಏನು ಕಾರಣ? ಒಂದು ವೇಳೆ ಇದಕ್ಕೆ ಹಣವನ್ನೇನಾದರೂ ಇಟ್ಟಿದ್ದೀರಾ? ಇಟ್ಟಿದ್ದ ಪಕ್ಷದಲ್ಲಿ ಎಷ್ಟು ಹಣವನ್ನಿಟ್ಟಿದ್ದೀರಿ ಎಂಬ ಬಗ್ಗೆ ಅಂಕಿ ಅಂಶಗಳನ್ನು ಒದಗಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ.

Loan Scheme ಪ್ರಕಾರ ಮನೆ ಕಟ್ಟಬೇಕಾದರೆ ಎಲ್ಲಕ್ಕಿಂತ ಮೊದಲು ಒಂದು, ಒಂದೂವರೆ ಕುಂಟೆ ಭೂಮಿಯನ್ನು free ಆಗಿ ಕೊಡಬೇಕೆಂದು ಸರ್ಕಾರಿ ಆರ್ಡರಿನಲ್ಲಿದೆ. ಇತ್ತೀಚೆಗೆ ಒಂದು ಆರ್ಡರ್ ಮಾಡಿದ್ದಾರೆ. ಅದರ ಪ್ರಕಾರ ಎಕರೆ ಒಂದಕ್ಕೆ 600 ರೂಪಾಯಿಗಳಿಗಿಂತ ಕಡಮೆ ಬೆಲೆ ಇರತಕ್ಕ ಜಮೀನು ಸಿಕ್ಕಿದರೆ ಅದನ್ನು ಮಾತ್ರ ಅಕ್ವೈರ್ ಮಾಡಿಕೊಳ್ಳಬೇಕು, 600 ರೂಪಾಯಿಗಳಿಗಿಂತ ಮೇಲ್ಪಟ್ಟ ಬೆಲೆಯ ಜಮೀನನ್ನು ಅಕ್ವೈರ್ ಮಾಡಿಕೊಳ್ಳಕೂಡದು. ಈ ಆರ್ಡರ್ ಜಾರಿಗೆ ಬಂದ ಮೇಲೆ ಬಹುಶಃ ನನಗನ್ನಿಸುತ್ತದೆ, ಒಂದು ಅಕ್ವಿಜಿಷನ್ ಕೂಡ ಅದರ ಪ್ರಕಾರ ಆಗಿರಲಾರದು ಎಂದು. ಇಂಥ ಆರ್ಡರ್ ಜಾರಿಯಲ್ಲಿದ್ದರೆ ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ಸೊಸೈಟಿಗಳಿಂದ ಹಣ ದೊರಕುವುದಿಲ್ಲವೆನ್ನುವ ವಿಚಾರವನ್ನು ಖಚಿತವಾಗಿ ಸರ್ಕಾರದ ಮುಂದೆ ಹೇಳುವುದಕ್ಕೆ ಸಿದ್ಧನಾಗಿದ್ದೇನೆ. Director of Social Welfare ಮತ್ತು Registrar of Co-operative Societies ಇವರಿಬ್ಬರೂ ಅವರ ಡಿಸ್ಟ್ರಿಕ್ಟ್ ಅಧಿಕಾರಿಗಳ ಮುಖಾಂತರ ಈ ಹಣವನ್ನು ಸೊಸೈಟಿಗಳಿಗೆ ಹಂಚಬೇಕು ಎಂದು ಸರ್ಕಾರಿ ಆರ್ಡರಿನಲ್ಲಿ ಹೇಳಿದ್ದಾರೆ. ಆದರೆ ಈ ಕೆಲಸ ಸಮರ್ಪಕವಾಗಿ ನಡೆದಿಲ್ಲ. ಇದನ್ನು ಬಹುಶಃ, ಅಂಕಿ ಅಂಶಗಳನ್ನು ನೋಡಿದರೆ, ಒಂದೇ ಒಂದು ಇಲಾಖೆ ಹಣವನ್ನು ಪಾವತಿ ಮಾಡುವ ಹಾಗೆ ನನಗೆ ಭಾಸವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ನಾನು ಪ್ರಶ್ನೆ ಕೇಳಿದೆ, 1962-63 ಮತ್ತು 1963-64ನೆ ಸಾಲಿನೊಳಗೆ ರಾಜ್ಯದಲ್ಲಿರುವ ಅನುಸೂಚಿತ ಜಾತಿಗಳವರಿಗಾಗಿ ಮನೆಗಳನ್ನು ನಿರ್ಮಿಸಲು, ನೋಂದಣಿಗೊಳಿಸಲಾದಂಥ ಗೃಹ ನಿರ್ಮಾಣ ಸಹಕಾರ ಸಂಘಗಳ ಸಂಖ್ಯೆ ಎಷ್ಟು ಎಂದು ಅದಕ್ಕೆ ಅವರು 1962-63ರಲ್ಲಿ 86 ಮತ್ತು 1963-64ರಲ್ಲಿ ಒಟ್ಟು 96 ಸೊಸೈಟಿಗಳನ್ನು ಎರಡು ಮೂರು ವರ್ಷಗಳಲ್ಲಿ ಸ್ಥಾಪಿಸಲಾಗಿದೆ ಎಂಬ ಉತ್ತರವನ್ನು ಅಚ್ಚು ಹಾಕಿದ್ದಾರೆ. ಈ ಸೊಸೈಟಿಗಳಿಂದ ಬಂದಿರತಕ್ಕ ಹಣವೆಷ್ಟು, ಷೇರು ಮೊಬಲಗೆಷ್ಟು, ಎಷ್ಟು ಜನ ಷೇರು ಹೋಲ್ಡರುಗಳಾಗಿ ಈ ಸಹಕಾರ ಸಂಘಗಳಲ್ಲಿದ್ದಾರೆ ಎಂಬುದನ್ನು ದಯವಿಟ್ಟು ತಿಳಿಸಬೇಕು. ಸುಮಾರು ಎಂಟು ಸ್ಥಳಗಳಲ್ಲಿ ಅಂದರೆ ಕೆ. ಜಿ. ಎಫ್., ಬೆಂಗಳೂರು ನಗರ, ನೂಕಪುರ, ಹನುಮನಹಟ್ಟಿ, ಮುಂಡಗೋಡು, ಕೊರವಾರ, ಸುರಪುರ, ಸಿರಸಿ, ಈ ಸ್ಥಳಗಳಲ್ಲಿ 96 ಗೃಹ ನಿರ್ಮಾಣ ಸಹಕಾರ ಸಂಘಗಳ ಪೈಕಿ ಕೇವಲ 8 ಸೊಸೈಟಿಗಳಿಗೆ ಹಣ ಕೊಟ್ಟು ಉಳಿದ ಸೊಸೈಟಿಗಳಿಗೆ ಏಕೆ ಹಣ ಕೊಡಲಿಲ್ಲ? 96 ಸೊಸೈಟಿಗಳು ರಿಜಿಸ್ಟರ್ ಆಗಿವೆ ಎಂದು ಹೇಳಿ

(ಶ್ರೀ ವೈ. ರಾಮಕೃಷ್ಣ)

ದ್ದೀರಿ. ಈ ರೀತಿ ಇದ್ದರೂ ಕೂಡ ಉಳಿದ ಸೊಸೈಟಿಗಳಿಗೆ ಹಣ ಕೊಡದೇ ಇರುವುದಕ್ಕೆ ಕಾರಣ ವೇನು? ಇದರಿಂದ ಏನಾಗಿದೆ ಎಂದರೆ ಹರಿಜನರಲ್ಲಿ ಮನಸ್ಸಿಗೆ ನೋವಾಗಿದೆ. ಪ್ರಭಾವಶಾಲಿ ಯಾದವರಿಗೆ, ಸರಕಾರದ ಹತ್ತಿರ ಯಾರ ಮಾತು ನಡೆಯುತ್ತದೆಯೋ ಅಂಥವರಿಗೆ ಮಾತ್ರ ಹಣ ದೊರೆಯುತ್ತದೆ ಎಂಬ ಭಾವನೆಯುಂಟಾಗಿದೆ. ಇಂಥ ಸಂಕುಚಿತ ಭಾವನೆ ಉಂಟಾಗಬಾರದು. ಇದನ್ನು ತೆಗೆಯ ತಕ್ಕಂಥ ಜವಾಬ್ದಾರಿ ಸರಕಾರದ್ದು.

ಇನ್ನೊಂದು ವಿಷಯ ಮಂತ್ರಿಗಳು ಉತ್ತರ ಕೊಡುವಾಗ್ಗೆ ಹೇಳಿದ್ದಾರೆ. 1963-64ನೇ ಸಾಲಿನಲ್ಲಿ 3,93,500 ರೂಪಾಯಿ ಹಣ ಒದಗಿಸಿರುವುದು ಯಾವ ಯಾವ ಸೊಸೈಟಿಗಳಿಗೆ ಕೊಟ್ಟಿದ್ದೀರಿ. ಒಂದೇ ತಾಲ್ಲೂಕಿನಲ್ಲಿ 4 ಸೊಸೈಟಿಗಳನ್ನು ರಚಿಸಲಾಗಿದೆ. ಒಂದು ತಾಲ್ಲೂಕಿಗೆ ಒಂದು ಸೊಸೈಟಿ ಇರಬೇಕೆಂದು ನಮಗೆ ಒಂದು ಸರ್ಕ್ಯುಲರ್ ಕಳಿಸಿದ್ದೀರಿ. ತಾಲ್ಲೂಕು ಬೋರ್ಡಿನ ಅಧ್ಯಕ್ಷರೇ ಈ ಸೊಸೈಟಿಗೆ ಅಧ್ಯಕ್ಷರಾಗಿರಬೇಕು ಎಂದಿದೆ. ಆದರೆ ಅದಕ್ಕೆ ವಿರೋಧವಾಗಿ ಒಂದೇ ತಾಲ್ಲೂಕಿನಲ್ಲಿ ನಾಲ್ಕು ಸೊಸೈಟಿಗಳಿಗೆ ಅವಕಾಶ ಮಾಡಿಕೊಟ್ಟು ಮೂರು ಲಕ್ಷ ರೂಪಾಯಿ ಹಣ ಒಂದೇ ತಾಲ್ಲೂಕಿನಲ್ಲಿ ಕೊಟ್ಟಿದ್ದೀರಿ. ಟಿ.-ನರಸೀಪುರ ತಾಲ್ಲೂಕಿನಲ್ಲಿ ಈ ಸೊಸೈಟಿಗಳು ಇವೆ. ಈ ಗೃಹ ನಿರ್ಮಾಣ ಸಹಕಾರಿ ಸಂಘಗಳಿಗೆ 1,29,000 ರೂಪಾಯಿ ಮಂಜೂರು ಮಾಡಿದ್ದೀರಿ. ಎಲ್ಲ ಹಣ ಒಂದೇ ತಾಲ್ಲೂಕಿನಲ್ಲಿ ಕೊಡುವುದಾದರೆ ಉಳಿದ 171 ತಾಲ್ಲೂಕುಗಳ ಗತಿ ಏನು? ಬಡವರ ಗತಿ ಏನು? ಯಾವ ಮುಖದಿಂದ ಬರುವ ಚುನಾವಣೆಯಲ್ಲಿ ನಾವು ಓಟು ಕೇಳೋಣ? ಆದುದರಿಂದ ಯಾವ ಯಾವ ಸೊಸೈಟಿ ಡಿಪಾಜಿಟ್ ಇಟ್ಟಿದೆ, ಯಾವ ಯಾವ ಸೊಸೈಟಿಗೆ ಹಣ ಕೊಟ್ಟಿದ್ದೀರಿ, ಡಿಸ್ಟ್ರಿಕ್ಟ್‌ವೈಜ್, ತಾಲ್ಲೂಕ್‌ವೈಜ್ ಎಷ್ಟೆಷ್ಟು ಹಣ ಕೊಟ್ಟಿದ್ದೀರಿ ಎಂಬುದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ಅವರನ್ನು ಬೇಡಿಕೊಳ್ಳುತ್ತೇನೆ.

ಇನ್ನೊಂದು ಉದಾಹರಣೆ ಹೇಳುತ್ತೇನೆ. ತಾಲ್ಲೂಕ್ ಬೋರ್ಡ್ ಅಧ್ಯಕ್ಷರೇ ಈ ಸೊಸೈಟಿಗೆ ಅಧ್ಯಕ್ಷರಾಗಿರಬೇಕೆಂಬ ಒಂದು ಸರ್ಕ್ಯುಲರ್ ಕಳಿಸಿದ್ದಾರೆ. ಅದನ್ನು ಯಾವ ಸೊಸೈಟಿಯಲ್ಲಿ ಕಾರ್ಯಗತ ಮಾಡಿದ್ದೀರಿ? ರಂಗಸಮುದ್ರ ಸೊಸೈಟಿಯ ಅಧ್ಯಕ್ಷರು ಯಾರು? ಅಂದರೆ ಅವ ರೊಬ್ಬ ಸ್ಕೂಲ್ ಟೀಚರ್ ಆಗಿದ್ದು ಚಾಮರಾಜನಗರದಲ್ಲಿ ವಾಸ ಮಾಡುತ್ತಾರೆ. ಬನ್ನೂರು ಸೊಸೈಟಿ ಅಧ್ಯಕ್ಷರೂ ಕೂಡ ಸರಕಾರಿ ನೌಕರಿಯಿಂದ ಡಿಸ್‌ಮಿಸ್ ಆಗಿರತಕ್ಕಂಥವರು. ಇಂಥ ಸೊಸೈಟಿಗಳಿಗೆ ಸಾವಿರಾರು ರೂಪಾಯಿ ಹಣ ಕೊಡುತ್ತಾ ಇದ್ದೀರಿ. 10 ಸೊಸೈಟಿಗಳಿಗೆ ಕೊಟ್ಟರೆ ಆಯಿತೇ? ಉಳಿದ ಎಲ್ಲ ತಾಲ್ಲೂಕುಗಳ ಉದ್ಧಾರವಾದಂತಾಯಿತೇ? ದೇಶದ ಉದ್ಧಾರವಾಗುತ್ತದೆಯೇ? ತಮ್ಮ ನೆಂಟರಿಗೆ ಬಂಧು ಬಳಗದವರಿಗೆ ಹಣ ಕೊಡುವುದು ಅಂದರೆ ಅನ್ಯಾಯದ ಪರಮಾವಧಿ. ಪ್ರಜಾ ಸರಕಾರ ಇದನ್ನು ಸಹಿಸುವುದಕ್ಕಾಗುವುದಿಲ್ಲ ಎಂದು ನನಗೆ ಅನ್ನಿಸುತ್ತದೆ. ದಯವಿಟ್ಟು ಇನ್ನು ಮುಂದೆಯಾದರೂ ಇರತಕ್ಕಂಥ ಹಣವನ್ನು ತಾಲ್ಲೂಕವೈಜ್ ಹಂಚುವುದಕ್ಕೆ ಆಗ ದಿದ್ದರೆ ಡಿಸ್ಟ್ರಿಕ್ಟ್‌ವೈಜ್ ಆದರೂ ಹಂಚಬೇಕು ಮತ್ತು ಇದಕ್ಕೆ ಸಮಾಧಾನವಾಗುವ ಹಾಗೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಕೇಳುತ್ತೇನೆ. ಹರಿಜನರಿಗಾಗಿ ಪ್ರತ್ಯೇಕ ಸೊಸೈಟಿ ಮಾಡಿ ಅವರ ಆರ್ಥಿಕ ಸ್ಥಿತಿ ಸುಧಾರಿಸಲು ಇಂಡಿಯಾ ಸರಕಾರದವರು ಅನೇಕ ಸ್ಕೀಂ ಹಾಕಿದ್ದಾರೆ. ಇಂಥ ಯೋಜನೆ ಮೂಲಕ ಹಣ ಒದಗಿಸಿ ಹರಿಜನರಿಗೆ ಏಕೆ ಕೊಡಬಾರದು ಎಂದು ಕೇಳುತ್ತೇನೆ. ಲೋ ಇನ್‌ಕಂ ಗ್ರೂಪ್ ಹೌಸಿಂಗ್ ಸ್ಕೀಂನಲ್ಲಿ ಇಂಡಿಯಾ ಸರಕಾರದವರು ಸಾಲ ಕೊಡುತ್ತಾರೆ. ಈ ಹಣ ಹರಿಜನರಿಗಾಗಿ ಮೀಸಲಾಗಿ ಇಡಬೇಕು. ಬರೀ ಪುಸ್ತಕದಲ್ಲಿ ಇದ್ದರೆ ಸಾಲದು. ಇದಲ್ಲದೆ ಸ್ಲಮ್ ಕ್ಲಿಯರನ್ಸ್ ಆಕ್ಟ್ ಇದೆ.

Mr. SPEAKER.—I suppose that the Hon'ble Member expects a reply to all these points. At the end of half-an-hour, it automatically comes to a close. If the Hon'ble Member takes away much of the time, it may not be possible for the Minister to reply to all the points.

ಶ್ರೀ ವೈ. ರಾಮಕೃಷ್ಣ.—ಈಗ ಸ್ಲಮ್ ಕ್ಲಿಯರನ್ಸ್ ಆಕ್ಟ್ ಇದೆ. ಇದರಲ್ಲಿ ಶೇಕಡ 50ರಷ್ಟು ಸಾಲ ಕೊಡುತ್ತಾರೆ. ಹರಿಜನ ಗಿರಿಜನರಿಗಾಗಿ ಶೇಕಡ ಮೂವತ್ತೇಳೂವರೆಯಷ್ಟು ಹಣ ಇದೆ. ಈ ಹಣವನ್ನು ಉಪಯೋಗಿಸಿಕೊಂಡು ಇಲ್ಲದೆ ನಮ್ಮ ತಾಲ್ಲೂಕಿಗೆ ಜನರಲ್ ಸ್ಕೀಂ ಪ್ರಕಾರ ಕೊಡುವ ಹಣವನ್ನೂ ಇದಕ್ಕೆ ಸೇರಿಸಿ ಸಹಕಾರಿ ಸಂಘಗಳು ಯಶಸ್ವಿಯಾಗಿ ಕಾರ್ಯ ನೆರವೇರಿಸುವ ಹಾಗೆ ಮಾಡಬೇಕೆಂದು ನಾನು ಸರಕಾರಕ್ಕೆ ಪ್ರಾರ್ಥಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ (ಸಹಕಾರ ಮತ್ತು ಅಭಿವೃದ್ಧಿ ಶಾಖೆಗಳ ಮಂತ್ರಿಗಳು).—ಸ್ವಾಮಿ ಮಾನ್ಯ ಸದಸ್ಯರಾದ ಶ್ರೀವರ್ಮ ರಾಮಕೃಷ್ಣ ಅವರು ಹರಿಜನ ಮತ್ತು ಗಿರಿಜನರ ವಸತಿ ಸೌಕರ್ಯದ ವಿಷಯವಾಗಿ ಕೇಳಿದ ಪ್ರಶ್ನೆಯ ಮೇಲೆ ವಿವರಣೆ ಕೇಳಿದೆ. ಅವರಿಗೆ ಮತ್ತು ಈ ಮಾನ್ಯ ಮನೆಯ ಅವಗಾಹನೆಗೆ ಮೊಟ್ಟ ಮೊದಲನೆಯದಾಗಿ ಕೆಲವು ಅಂಕಿ ಅಂಶಗಳನ್ನು ಕೊಡಬೇಕೆಂದು ಬಯಸುತ್ತೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಹರಿಜನ ಮತ್ತು ಗಿರಿಜನರ ವಸತಿ ಸೌಕರ್ಯಕ್ಕೆ ಮೊದಲನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಹಳೆ ಮೈಸೂರು ರಾಜ್ಯದಲ್ಲಿ ಒಂದೊಂದು ಮನೆಗೆ 200 ರೂಪಾಯಿನಂತೆ ಸಬ್ಸಿಡಿ ರೂಪದಲ್ಲಿ ಕೊಟ್ಟಿತ್ತು. ಆಮೇಲೆ 400 ರೂಪಾಯಿಗೆ ಏರಿಸಿದರು. ಉತ್ತರ ಕರ್ನಾಟಕದ 4 ಜಿಲ್ಲೆಗಳಲ್ಲಿ ಪೋಸ್ಟ್‌ವಾರ್ ರೀಕನ್‌ಸ್ಟ್ರಕ್ಷನ್ ಸ್ಕೀಂ ಪ್ರಕಾರ ಒಂದೊಂದು ಕುಟುಂಬಕ್ಕೆ 1,500 ರೂಪಾಯಿನಿಂದ 3,000 ರೂಪಾಯಿಗಳವರೆಗೂ ವಸತಿ ಸೌಕರ್ಯಕ್ಕೆ ಸಾಲ ಕೊಡುವ ಮತ್ತೊಂದು ಸ್ಕೀಂ ಇತ್ತು. 1960–61ನೇ ಇಸವಿಯಲ್ಲಿ ಸರ್ಕಾರದ ಈ ಮೂರನೆಯ ಪಂಚವಾರ್ಷಿಕ ಯೋಜನೆ ಸಿದ್ಧವಾಗ ವಂತಹ ಸಮಯದಲ್ಲಿ ಹರಿಜನ ಮತ್ತು ಗಿರಿಜನರಿಗೆ ವಸತಿ ಸೌಕರ್ಯಕ್ಕಿಂತ ಮುಖ್ಯವಾದುದು ಶಿಕ್ಷಣ ಅವರಿಗೆ ಉಚಿತವಾದ ಮತ್ತು ಸಾಕಾಗುವಷ್ಟು ಪ್ರಮಾಣದ ಶಿಕ್ಷಣ ಸೌಲಭ್ಯವನ್ನು ಏರ್ಪಾಡು ಮಾಡಿದರೆ ಅವರ ಉತ್ಪಾದನೆ ಹೆಚ್ಚಾಗುತ್ತದೆ, ಅವರ ಗಳಿಕೆ ಹೆಚ್ಚಾಗುತ್ತದೆ ಮತ್ತು ಈ ವಸತಿ ಸೌಕರ್ಯವನ್ನು ಆಮೇಲೆ ಅವರಾಗಿಯೇ ಕಲ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂಬ ಉದ್ದೇಶದಿಂದ ಈ ಸಬ್ಸಿಡಿ ಸ್ಕೀಮನ್ನು ಇಲ್ಲಿಗೇ ನಿಲ್ಲಿಸಿದರು. ಆದ್ದರಿಂದ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹರಿಜನ ಮತ್ತು ಗಿರಿಜನರಿಗಾಗಿ ವಸತಿ ಸೌಕರ್ಯದ ಬಗ್ಗೆ ಯಾವ ಹಣದ ಅನುಕೂಲತೆಯನ್ನೂ ಕೂಡ ಮಾಡಲಿಲ್ಲ. 1961ನೇ ಇಸವಿಯಲ್ಲಿ ಸರ್ಕಾರದವರು ಮತ್ತೊಂದು ಸ್ಕೀಮನ್ನು ತಯಾರು ಮಾಡಿದರು. ಸ್ವಲ್ಪ ಹೆಚ್ಚು ಕಡಿಮೆ ಹಿಂದೆ ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಯಾವ ಮಾದರಿಯಲ್ಲಿ ಸ್ಕೀಮು ಜಾರಿಯಲ್ಲಿತ್ತೋ ಅದೇ ತರಹದ ಸ್ಕೀಮು ಅದಾಗಿತ್ತು. ಅದಕ್ಕಾಗಿ ಹಣ ಬೇಕು ಎಂದು ನಾವು ಕೇಳಿದ್ದಕ್ಕೆ ಯೋಜನಾ ಆಯೋಗ ಮತ್ತು ಕೇಂದ್ರ ಸರ್ಕಾರದವರಿಂದ ನಕಾರದ ಉತ್ತರ ಬಂತು. ನಾವಾಗಿಯೇ ಹಿಂದೆ ವಸತಿ ಸೌಕರ್ಯಕ್ಕಿಂತ ಶಿಕ್ಷಣ ಸೌಕರ್ಯ ಮುಖ್ಯ ವಸತಿ ಸೌಕರ್ಯ ಇಲ್ಲದಿದ್ದರೂ ಪರವಾಗಿಲ್ಲ ಎಂದು ಹೇಳಿದ್ದುದರಿಂದ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಪ್ರತ್ಯೇಕವಾಗಿ ಇಡಲಿಲ್ಲ, ಅದಕ್ಕೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು ಆದ್ದರಿಂದ 61ನೇ ಇಸವಿಯಲ್ಲಿ ಯಾವ ಸರ್ಕಾರದ ಆಜ್ಞೆ ಹೊರಟಿತ್ತೋ ಅದು ಜಾರಿಗೆ ಬರಲೇ ಇಲ್ಲ. ಕಳೆದ ವರ್ಷ ನಾನು, ಸೋಷಿಯಲ್ ವೆಲ್‌ಫೇರ್ ಮಿನಿಷ್ಟರು ಮತ್ತು ಇನ್ನಿತರ ಸಂಬಂಧಪಟ್ಟ ಅಧಿಕಾರಿಗಳು ಎಲ್ಲಾ ಸೇರಿ ಈ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಬಹುದು ಎನ್ನುವ ವಿಚಾರದಲ್ಲಿ ಯೋಚನೆ ಮಾಡಿದೆವು. ವಸತಿ ಸೌಕರ್ಯ ಅತ್ಯವಶ್ಯಕವಾದ ಸೌಕರ್ಯ. ಮನುಷ್ಯನಿಗೆ ಅನ್ನ, ಬಟ್ಟೆ ಇವೆರಡನ್ನು ಬಿಟ್ಟರೆ ಮೂರನೆಯದು ಬಹಳ ಮಹತ್ವವಾದುದ್ದು ಜೀವನದಲ್ಲಿ ಎಂದರೆ ವಸತಿ. ಅದರಲ್ಲೂ ನಮ್ಮ ಸಮಾಜದಲ್ಲಿ ಬಹು ಕಾಲದಿಂದ ದುರ್ದೈವದಿಂದ ಅತಿ ಕಷ್ಟಕ್ಕೆ ಮತ್ತು ಅನೇಕ ರೀತಿಯಲ್ಲಿ ತೊಂದರೆಗೆ ಒಳಗಾಗಿರುವಂತಹ ಈ ಸಹೋದರರಿಗೆ ಇದನ್ನು ಒದಗಿಸುವುದು ನಮ್ಮ ಆದ್ಯ ಕರ್ತವ್ಯ ಎಂಬ ಅಭಿಪ್ರಾಯದಿಂದ ನಾವು ಪ್ರತಿಯೊಂದು ತಾಲ್ಲೂಕಿನಲ್ಲೂ ಹರಿಜನ ಮತ್ತು ಗಿರಿಜನರಿಗಾಗಿ ಒಂದು ಪ್ರತ್ಯೇಕವಾದಂತಹ ವಸತಿ ಸೌಕರ್ಯದ ಸಹಕಾರಿ ಸಂಘ ಆಗಬೇಕೆಂದು ನಿರ್ಣಯ ಮಾಡಿದೆವು. ಆ ಹೊತ್ತಿನಲ್ಲಿ ಎಲ್ಲಿಂದ ಹಣ ಬರುತ್ತದೆ ಎಂಬ ಸ್ಪಷ್ಟವಾದ ಕಲ್ಪನೆ ನಮಗೆ ಇರಲಿಲ್ಲ. ಆದರೂ ದಿಟ್ಟ ಹೆಜ್ಜೆ ಇಟ್ಟು ಮುಂದೆ ನಡೆಯಬೇಕೆಂದು ಎಲ್ಲಾ ವಿಧದಲ್ಲೂ ಪ್ರಯತ್ನ ಮಾಡಿ ಹಣವನ್ನು ಒದಗಿಸಬೇಕೆನ್ನುವುದೇ ನಮ್ಮ ಉದ್ದೇಶವಾಗಿತ್ತು. ಅಷ್ಟೇ ಅಲ್ಲದೆ ಆಗಲೇ ಪ್ರತಿ ತಾಲ್ಲೂಕಿನಲ್ಲಿ ಈಗಾಗಲೇ ಸ್ವಲ್ಪಮಟ್ಟಿಗೆ ವಸತಿ ಸೌಕರ್ಯವಿರುವಂತಹ ಹರಿಜನ ಮತ್ತು ಗಿರಿಜನರ ಕುಟುಂಬಗಳು ಎಷ್ಟಿವೆ ಮತ್ತು ಏನೂ ವಸತಿ ಇಲ್ಲದಂತಹ ಕುಟುಂಬಗಳು ಎಷ್ಟಿವೆ ಮತ್ತು ಅದಕ್ಕೆ ಸಂಬಂಧಪಟ್ಟ ಇನ್ನಿತರ ಅಂಕಿಸಂಖ್ಯೆಗಳನ್ನು ನಿರ್ದಿಷ್ಟ ಸಮಯದಲ್ಲಿ ಕಳುಹಿಸಬೇಕೆಂದು ನಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಟ್ಟೆವು. ಆ ಸ್ಕೀಂ ಪ್ರಕಾರ ಪ್ರತಿಯೊಂದು ತಾಲ್ಲೂಕಿನಲ್ಲಿ ಪ್ರತ್ಯೇಕವಾದಂತಹ ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿ ಸ್ಥಾಪನೆ ಆಗಬೇಕು, ಅದಕ್ಕೆ ತಾಲ್ಲೂಕು ಬೋರ್ಡು ಅಧ್ಯಕ್ಷರು ಅಧ್ಯಕ್ಷರಾಗಿರಬೇಕು, ಅದರ ಉಪಾಧ್ಯಕ್ಷರು ಷೇರ್‌ಹೋಲ್ಡರ್ಸ್ ಪೈಕಿ ಒಬ್ಬರು ಆಗಿರಬೇಕು ಮತ್ತು ಅದರ ಸೆಕ್ರೆಟರಿ ಕೋ-ಆಪರೇಟೀವ್ ಎಕ್ಸ್‌ಟೆನ್‌ಷನ್ ಆಫೀಸರು ಆಗಿರಬೇಕು ಮತ್ತು ಜಾಯಿಂಟ್ ಸೆಕ್ರೆಟರಿ ಸೋಷಿಯಲ್ ವೆಲ್‌ಫೇರ್ ಆಫೀಸರು ಆಗಿರಬೇಕು ಎಂದು ತೀರ್ಮಾನವಾಗಿದೆ ಮತ್ತು ಪ್ರತಿಯೊಂದು ಕುಟುಂಬಕ್ಕೂ ಒಂದು ಮನೆಗೆ ಬೇಕಾಗುವಂತಹ ಕಟ್ಟಿಗೆ ಸಾಮಾನುಗಳಲ್ಲಿ ಸುಮಾರು ಒಂದು ನೂರು ರೂಪಾಯಿ ಕಿಮ್ಮತ್ತಿನ ಸಾಮಾನುಗಳನ್ನು ಮುಫತ್ತಾಗಿ ಸರ್ಕಾರದವರು ಕೊಡಬೇಕೆಂದು ತೀರ್ಮಾನ ಮಾಡಿದ್ದೆವು ಮತ್ತು ಯಾವ ಬಾಬಿನಿಂದ ಸಾಲ ತಂದರೂ ಆ ಸಾಲದ ಮೇಲಿನ ಬಡ್ಡಿಯ ಭಾರ ಸಂಪೂರ್ಣವಾಗಿ ಹರಿಜನರ ಮೇಲೆ ಬೀಳಕೂಡದು

(ಶ್ರೀ ರಾಮಕೃಷ್ಣ ಹೆಗ್ಗಡೆ)

ಎಂದು ಯೋಚನೆ ಮಾಡಿ ಮೂರು ಅಥವಾ ಮೂರುವರೆ ಪರ್ಸೆಂಟ್ ಅಷ್ಟು ಸೋಷಿಯಲ್ ವೆಲ್ ಫೇರ್ ಡಿಪಾರ್ಟ್‌ಮೆಂಟಿನಿಂದ ಸಬ್ಸಿಡಿ ಕೊಡಬೇಕೆಂದೂ ಕೂಡ ತೀರ್ಮಾನ ಮಾಡಿದ್ದೆವು. ಆದರೆ ಈ ಬಗ್ಗೆ ಮಾನ್ಯ ಸದಸ್ಯರನೇಕರು ಒಂದೆರಡು ಆಕ್ಷೇಪವನ್ನೆತ್ತಿದರು. ಅದೇನೆಂದರೆ ಹರಿಜನ ಮತ್ತು ಗಿರಿಜನರ ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿಗೆ ಬೇರೆ ಯಾರೂ ಅಧ್ಯಕ್ಷರಾಗಕೂಡದು, ಹರಿಜನರೇ ಆಗಬೇಕು, ಅದರಿಂದ ಅವರ ಹಿತ ಹೆಚ್ಚು ಸಾಧನೆ ಆಗಬಹುದು ಎಂದು ಹೇಳುವಂತಹ ಆಕ್ಷೇಪ ಇದೆ. ಅದಕ್ಕೆ ನಾನು ಪುನಃ ಒಂದು ಸಲ ಕೇಳಿಕೊಂಡೆ ಆ ರೀತಿಯಲ್ಲಿ ಎಲ್ಲ ಹರಿಜನರ ಅಭಿಪ್ರಾಯವಿದ್ದರೆ ಅದು ಒಂದೇ ಕಾರಣದಿಂದ ಇದಕ್ಕೆ ಆತಂಕ ಹಾಕುವಂತಹದು ಬೇಡ ಎಂಬ ಉದ್ದೇಶದಿಂದ ಸಂಬಂಧಪಟ್ಟ ಬಿ.ಡಿ.ಓ. ಅದಕ್ಕೆ ಅಧ್ಯಕ್ಷ ಆಗಬೇಕೆಂದು ತೀರ್ಮಾನ ಮಾಡಿದೆವು. ತಾಲ್ಲೂಕು ಬೋರ್ಡ್ ಅಧ್ಯಕ್ಷರೇ ಅದಕ್ಕೆ ಅಧ್ಯಕ್ಷರಾಗಬೇಕೆಂದು ಹೇಳುವಂತಹ ಉದ್ದೇಶ ತಾಲ್ಲೂಕು ಬೋರ್ಡಿಗೂ ಈ ಅತ್ಯವಶ್ಯಕವಾದ ಜವಾಬ್ದಾರಿ ಅರಿವು ಆಗಬೇಕು. ತಾಲ್ಲೂಕು ಬೋರ್ಡಿನಲ್ಲಿರುವಂತಹ ಸಿಬ್ಬಂದಿ ಸಹಾಯ ಇದಕ್ಕೆ ಸಿಕ್ಕಬೇಕು ಎಂದು ಅಷ್ಟೇ ಹೊರತು ಮತ್ತೇನೂ ಇಲ್ಲ. ಅದು ಹೇಗೆ ಇರಲಿ ಸರ್ಕಾರದವರು ಕೈಕೊಂಡ ಕೊನೆಯ ನಿರ್ಣಯ. ಕಳೆದ ನಾಲ್ಕೈದು ವರ್ಷಗಳಲ್ಲಿ ಬೇರೆ ಬೇರೆ ಬಾಬುಗಳಿಗೆ ಎಷ್ಟು ಹಣ ಖರ್ಚಾಗಿದೆ ಎಂದು ಒಂದೆರಡು ಮಾತನ್ನು ಹೇಳಬಯಸುತ್ತೇನೆ. ಉತ್ತರ ಕರ್ನಾಟಕದ 4 ಜಿಲ್ಲೆಗಳಲ್ಲಿ ಇದ್ದಂತಹ ಸ್ಕೀಂನೊಳಗೆ:

1956-57ರಲ್ಲಿ 92,467 ರೂಪಾಯಿ ಖರ್ಚಾಗಿದೆ.

1957-58ರಲ್ಲಿ 59,248 ,,

1958-59ರಲ್ಲಿ 84,000 ಚಿಲ್ಲರೆ ರೂಪಾಯಿ ಖರ್ಚಾಗಿದೆ.

1959-60ರಲ್ಲಿ 1,47,000 ರೂಪಾಯಿ ಖರ್ಚಾಗಿದೆ.

1960-61ರಲ್ಲಿ 2,66,000 ,,

ಇದರಂತೆಯೇ ಹಳೇ ಮೈಸೂರು ಭಾಗದಲ್ಲಿ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ:

1957-58ರಲ್ಲಿ 28 ಲಕ್ಷ ರೂಪಾಯಿ ಪ್ರೊವಿಷನ್ ಇತ್ತು 29,87,000 ರೂಪಾಯಿ ಖರ್ಚಾಗಿದೆ.

1958-59ರಲ್ಲಿ 22 ,, 28,91,000 ,,

1959-60ರಲ್ಲಿ 26 ,, 26,71,000 ,,

1960-61ರಲ್ಲಿ 37 ,, 34,90,000 ,,

1961-62ರಲ್ಲಿ ಸಬ್ಸಿಡಿ ಸ್ಕೀಂ ಬಂದಾಯಿತು ಆಗ

1961-62ರಲ್ಲಿ 1,50,000 ರೂಪಾಯಿ ಪ್ರೊವಿಷನ್ ಇತ್ತು 94,000 ರೂಪಾಯಿ ಖರ್ಚಾಗಿದೆ

1962-63ರಲ್ಲಿ 3,00,000 ,, 3,89,000 ,,

1963-64ರಲ್ಲಿ 3,00,000 ರೂಪಾಯಿ ಪ್ರೊವಿಷನ್ ಇದೆ. ಈಗಾಗಲೇ ಮಂಜೂರು ಮಾಡಿರುವಂತಹ 3,93,500 ರೂಪಾಯಿ ಸ್ಕೀಂ ಇರುವುದರಿಂದ ಈಗ ಎಲ್ಲಕ್ಕಿಂತ ದೊಡ್ಡ ಸಮಸ್ಯೆ ನಮಗೆ ಇರುವಂತಹದು ಎಂದರೆ ಈ ಸಹಕಾರೀ ಸಂಘಗಳಿಗೆ ಎಲ್ಲಿಂದ ಹಣ ಒದಗಿಸಬೇಕೆನ್ನುವುದು? ನಾವು ಈಗಾಗಲೇ ಲೈಫ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್ ಜೊತೆಗೆ ಈ ವಿಚಾರದಲ್ಲಿ ಮಾತುಕತೆ ನಡೆಸಿದ್ದೇವೆ, ಅವರನ್ನು ಒಂದು ಕೋಟಿ ರೂಪಾಯಿ ಸಾಲ ಕೊಡಿ ಎಂದು ಕೇಳಿದ್ದೇವೆ.

5-30 P.M.

ಅವರು ಅದಕ್ಕೆ ಸ್ಥೂಲವಾಗಿ ಒಪ್ಪಿ ಕೆಲವು ಷರತ್ತುಗಳನ್ನು ಹಾಕಿದ್ದಾರೆ. ಈಗ ಈ ವಿಚಾರದಲ್ಲಿ ಪತ್ರ ವ್ಯವಹಾರ ನಡೆಯುತ್ತಿದೆ. ಆದರೆ ಈಗ ಮಾನ್ಯ ಸದಸ್ಯರು ಕೆಲವು ಆಕ್ಷೇಪಣೆಗಳನ್ನು ಮಾಡಿದ್ದಾರೆ. ಹಣವನ್ನು ಕೇವಲ ಒಂದೇ ಕಡೆಗೆ ಅಥವಾ ಒಂದೇ ತಾಲ್ಲೂಕಿಗೆ ಹಂಚುತ್ತಿದ್ದಾರೆ ಎಂದು ಹೇಳಿದರು. ಇದು ಸರಿಯಲ್ಲ. ಎಲ್ಲ ಕಡೆಗೂ ಹಣವನ್ನು ಒಂದೇ ಸಮನಾಗಿ ಹಂಚಬೇಕೆಂದು ಹೇಳಿದರು. ಆದರೆ ಇದು ವೈಯಕ್ತಿಕವಾಗಿ ಹಣ ಕೊಡತಕ್ಕ ಪ್ರಶ್ನೆಯಲ್ಲಿ ಬರುವುದಿಲ್ಲ. ಎಲ್ಲ ಜನರು ಒಟ್ಟಾಗಿ ಸೇರಿಕೊಂಡು ಮನೆಗಳನ್ನು ಕಟ್ಟಲು ಪ್ರಯತ್ನ ಮಾಡಿ, ನಿವೇಶನಗಳನ್ನು ಮಾಡಿಕೊಂಡು ಮನೆಗೆ ಬೇಕಾದ ಇತರ ಸಾಮಾನುಗಳನ್ನು ಜೋಡಿಸಿಕೊಂಡು ಹಣ ಬೇಕೆಂದರೆ ಸರ್ಕಾರದವರು

ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಆದರೆ ಈ ಹಿಂದೆ ಹಂಚುತ್ತಿದ್ದ ಹಾಗೆ ತಲಾ 400 ರೂಪಾಯಿಗಳನ್ನು ಹಂಚುವುದಾಗಿದ್ದರೆ ಅದು ಬಹಳ ಸುಲಭವಾಗಿ ಆಗುತ್ತಿತ್ತು. ಈಗ ನಾವು ಆ ರೀತಿ ಮಾಡಿದರೆ ಪ್ರಯೋಜನವಿಲ್ಲವೆಂದು ಒಂದೊಂದು ಕಡೆಗೂ 50 ಸಾವಿರ ರೂಪಾಯಿಗಳ ಮೇಲ್ಪಟ್ಟು ಹಣವನ್ನು ಹಂಚುತ್ತಿದ್ದೇವೆ. ಆದುದರಿಂದ ಈಗ ಎಲ್ಲ ಜಿಲ್ಲೆಗಳಿಗೂ ಒಂದೇ ಸಮನಾಗಿ ಹಣವನ್ನು ಹಂಚಬೇಕೆಂದರೆ ಯಾವ ಕೆಲಸಕಾರ್ಯಗಳೂ ಸಮರ್ಪಕವಾಗಿ ನಡೆಯುವುದಿಲ್ಲ. ಹಣವನ್ನು ಒದಗಿಸುವುದು ಸಾಧ್ಯವಿದ್ದರೂ ಇತರ ಕಾರಣಗಳಿಂದ ಕೆಲಸಗಳು ಸಮರ್ಪಕವಾಗಿ ನಡೆಯುವುದಿಲ್ಲ. ಇನ್ನು ಮಾನ್ಯ ಸದಸ್ಯರು ಹಳ್ಳಿಗಳ ಕಡೆ ಎಕರೆ ಒಂದಕ್ಕೆ 600 ರೂಪಾಯಿಗಳ ಪ್ರಕಾರ ಜಮೀನನ್ನು ಅಕ್ವಯರ್ ಮಾಡಬಾರದೆಂದು ಹೇಳಿದರು. ಆದರೆ ಹಳ್ಳಿಗಳ ಕಡೆ ಎಲ್ಲೋ ನೂರಕ್ಕೆ ಒಂದು ಕಡೆ ಅಂಥ ಬೆಲೆ ಇದ್ದರೆ ಇರಬಹುದು. ಆದರೆ ಸಾಮಾನ್ಯವಾಗಿ ಹಳ್ಳಿಗಳ ಕಡೆ ಅಂಥ ಬೆಲೆಯುಳ್ಳ ಜಮೀನಿರುವುದು ಅಪರೂಪ. ಆದುದರಿಂದ ಅಂಥ ಪ್ರಸಂಗವೇ ಬರಲು ಅವಕಾಶವಿಲ್ಲ. ಹಾಗೂ ಅಂಥ ಸಂದರ್ಭ ಬಂದರೆ ಸರ್ಕಾರದವರು ರೂಲ್ಸನ್ನು ಸಡಿಲಮಾಡಲು ಸಿದ್ಧವಾಗಿದ್ದಾರೆ. ಆದರೆ ನಾನು ಸರ್ಕಾರದ ಪರವಾಗಿ ಈಗ ಇಷ್ಟನ್ನು ಹೇಳಬಯಸುತ್ತೇನೆ. ಮಾನ್ಯ ಸದಸ್ಯರು ಈ ವಿಚಾರದಲ್ಲಿ ಎಷ್ಟು ತೀವ್ರವಾಗಿ ಆಲೋಚನೆ ಮಾಡುತ್ತಿದ್ದಾರೋ ಸರ್ಕಾರದವರೂ ಅಷ್ಟೇ ತೀವ್ರವಾಗಿ ಈ ವಿಚಾರದಲ್ಲಿ ಆಸಕ್ತಿಯುಳ್ಳವರಾಗಿದ್ದಾರೆ. ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದವರು ಸಾಧ್ಯವಾದ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ.

Mr. SPEAKER.—One point that was missed which I think is important, is that a suggestion was made that some head of the Department in respect of his own village or neighbouring village, whatever it is, with a view to helping somebody is supposed to have done something. Is there any substance in it, because I do not want that officer to be exposed to that criticism if there is no substance?

Sri RAMAKRISHNA HEGDE.—I am sorry, I am unable to say anything in that matter, because I do not have the correct information before me; but if there is any truth in that, I will see that such things will not occur in future.

Mr. SPEAKER.—So till now nothing has come to the notice of Government?

Sri RAMAKRISHNA HEGDE.—No.

Mr. SPEAKER.—The House now adjourns and will meet tomorrow at 8-30 A.M.

The House adjourned at Thirty five Minutes past Five of the Clock to meet again at Thirty Minutes past Eight of the Clock on Saturday, the 5th October 1963.

WD 1306—GPB—900—27-12-1963

V-325063
N63-3-66-76
(B) 4798

MYSORE LEGISLATIVE ASSEMBLY

SIXTY-SEVENTH DAY.

Saturday, 5th October 1963.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Number of Hostels, Children and Women Welfare Centres, etc., started from 1-4-1960 to 1-4-1962 in the State.

***Q.—802.** SRI J. L. KABADI (Baradol).—

Will the Government be pleased to state :—

(*a*) the number of hostels, children and women welfare centres, tailoring institutions have been started since 1st April 1960 to 1st April 1962 in the State (talukwar information may be given) ;

(*b*) the number of these institutions proposed to be started afresh during the remaining period of the III Five-Year Plan ?

A.—SMT. YASHODARA DASAPPA (Minister for Social Welfare).—

(*a*) 310. A list showing talukwise distribution of these institutions is placed on the tab e of the House. [Placed in Mysore Legislature Library, *vide* No. 13/dated 5-10-1963.]

(*b*) 216.

ಶ್ರೀ ಜೆ. ಎಲ್. ಕಬಾಡಿ.—(ಅ) ಗೆ ಉತ್ತರವಾಗಿ 216 ಸಂಸ್ಥೆಗಳು ಎಂದು ಹೇಳಲಾಗಿದೆ ಎಂದರೆ ಶೇಕಡ 20 ರಷ್ಟು ಎಂದು ಇಷ್ಟು ಕಡಿಮೆಯಾಗಿ ಹಣ ಒದಗಿಸಿರುವುದು ಸರಿಯೇ ?

† ಶ್ರೀಮತಿ ಯಶೋಧರ ದಾಸಪ್ಪ.—ಇದನ್ನು ಪ್ಲಾನ್ ಮಾಡಿಯೇ ಬೇಕಾದಷ್ಟು ಹಣ ಇಟ್ಟುಕೊಂಡು ಯೋಚನೆಮಾಡಿ ಕೊಡುವುದರಿಂದ ಕೆಲವು ಕಡೆ ಜಾಸ್ತಿಯಾಗುತ್ತದೆ, ಕೆಲವು ಕಡೆ ಕಡಿಮೆಯಾಗುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ತಾಲ್ಲೂಕುವಾರು ಹಂಚುವಾಗ ಕೆಲವು ಕಡೆ ಜಾಸ್ತಿಯಾಗಿ ಕೆಲವು ಕಡೆ ಕಡಿಮೆಯಾಗಿ ಹಂಚುವುದು ಕಂಡುಬರುತ್ತದೆ. ಹೀಗೆ ಹಂಚಲು ಜನಸಂಖ್ಯೆಯ ಮೇಲೆ ಹಂಚುತ್ತೀರಾ ಇಲ್ಲವೇ ಬೇರಾವ ನೀತಿ ಅನುಸರಿಸುತ್ತೀರಿ ?

ಶ್ರೀಮತಿ ಯಶೋಧರ ದಾಸಪ್ಪ.—ಸಂಟರ್‌ಗಳನ್ನು ನೋಡಿ ಕೊಡಬೇಕಾಗಿದೆ. ಅಲ್ಲಿರುವ ಜನಸಂಖ್ಯೆ ಎಂದರೆ ಮಕ್ಕಳ ಸಂಖ್ಯೆಯನ್ನು ನೋಡಿಕೊಂಡು ಅಂಥ ಸ್ಥಳಗಳಲ್ಲಿ ಸೌಲಭ್ಯಗಳು ದೊರೆಯದೇ ಇರುವ ಕಡೆಗಳಲ್ಲಿ ಸಹಾಯವನ್ನು ಕೊಡಬೇಕಾಗುತ್ತದೆ.

†Indicates that the remarks or speeches have not been revised by the member concerned

Sri G. DUGGAPPA.—May I know the number of institutes they are now thinking of starting during 63-64?

ಶ್ರೀಮತಿ ಯಶೋಧರ ದಾಸಪ್ಪ.—63-64 ನೇ ಸಾಲಿನಲ್ಲಿ ಮೂರನೇ ಪ್ಲಾನಿನಲ್ಲಿ 130 ಸೆಂಟರುಗಳು ಆಗಿವೆ. ಇದಕ್ಕಾಗಿ ಒಟ್ಟು 18·7 ಲಕ್ಷ ರೂ. ಆಗಿದೆ. 83 ಸೆಂಟರುಗಳನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ.

ಶ್ರೀ ಜೆ. ಎಲ್. ಕಬಾಡಿ.—ಬೆಳ್ತಂಗಡಿ ಕ್ಷೇತ್ರದಲ್ಲಿ ಆರು ಸೆಂಟರುಗಳನ್ನು ಕೊಡಲಾಗಿದೆ. ಇಷ್ಟು ಜಾಸ್ತಿಯಾಗಿ ಕೊಡಲು ಕಾರಣವೇನು ?

ಶ್ರೀಮತಿ ಯಶೋಧರ ದಾಸಪ್ಪ.—ಅಲ್ಲಿ ಟ್ರೈಬಲ್ ಜನ ಜಾಸ್ತಿಯಾಗಿರಬೇಕೆಂದು ತೋರುತ್ತೆ. ಷೆಡ್ಯೂಲು ಕ್ಯಾಸ್ಟು ಮತ್ತು ಟ್ರೈಬಲ್ಸ್‌ಗಳಿಗೋಸ್ಕರ ಹಣವನ್ನು ಕೊಡಬೇಕೆಂದು ನಾಲ್ಕನೇ ಯೋಜನೆಯಲ್ಲಿ 4·4 ಲಕ್ಷದಷ್ಟು ಹಣವನ್ನು ಸೇರಿಸಲಾಗಿದೆ.

ಶ್ರೀ ಡಿ. ಎಂ. ಸಿದ್ದಯ್ಯ.—310 ಸಂಸ್ಥೆಗಳು ಇಲ್ಲಿವೆ, ಇವುಗಳಲ್ಲಿ ವೆಲ್‌ಫೇರ್ ಸೆಂಟರುಗಳೆಷ್ಟು ? ಟೇಲರಿಂಗ್ ಇನ್ಸ್‌ಟಿಟ್ಯೂಷನ್‌ಗಳೆಷ್ಟು ?

ಶ್ರೀಮ ಯಶೋಧರ ದಾಸಪ್ಪ.—

1959–60 ನೇ ಸಾಲಿನಲ್ಲಿ		
23 ಸೆಂಟರುಗಳಿಗಾಗಿ	73,354	ರೂ.
51 ಸೆಂಟರುಗಳಿಗಾಗಿ	39,799	,,
60–61 ನೇ ಸಾಲಿನಲ್ಲಿ		
91 ಸೆಂಟರುಗಳಿಗೆ	5,09,896	,,
1961–62 ನೇ ಸಾಲಿನಲ್ಲಿ		
56 ಸೆಂಟರುಗಳಿಗೆ	1,04,443	,,
32 ಸೆಂಟರುಗಳಿಗಾಗಿ	3,04,000	,,

1959–60 ರಲ್ಲಿ 30 ಹಾಸ್ಟಲ್ಲುಗಳು ತೆರೆಯಲಾಗಿದೆ. ಅದರಲ್ಲಿ 30 ಹುಡುಗರಿಗಾಗಿ 17 ಹುಡುಗಿಯರಿಗಾಗಿ.

1960–61 ನೇ ಸಾಲಿನಲ್ಲಿ 47 ಹುಡುಗರಿಗೆ 18 ಹುಡುಗಿಯರಿಗಾಗಿ
1961–62 ನೇ ಸಾಲಿನಲ್ಲಿ 43 ಹುಡುಗರಿಗಾಗಿ 14 ಹುಡುಗಿಯರಿಗಾಗಿ
1962-63 ನೇ ಸಾಲಿನಲ್ಲಿ 8 ಹುಡುಗರಿಗಾಗಿ 8 ಹುಡುಗಿಯರಿಗಾಗಿ ಹಾಸ್ಟಲುಗಳು ಆಗಿವೆ. ಒಟ್ಟು 205 ಹಾಸ್ಟಲ್ಲುಗಳು ಆಗಿವೆ. 7,489 ಬೋರ್ಡರುಗಳಿದ್ದಾರೆ. ಇದಕ್ಕೆ ಆಗಿರುವ ಖರ್ಚು

1,93,369
6,21,613
2,33,147
4,70,800
1,80,000

ಎಂದು ಹೀಗೆ ಹಣ ಕೊಡಲಾಗಿದೆ.

Tailoring Centres ಗಳಿಗಾಗಿ 59–60ನೇ ಸಾಲಿನಲ್ಲಿ 19 ಯೂನಿಟ್ಟುಗಳಾಗಿವೆ. 60-61ನೇ ಸಾಲಿನಲ್ಲಿ ಇದನ್ನೇ ಮುಂದುವರಿಸಿದ್ದೇವೆ. ಇದಕ್ಕೆ ಖರ್ಚು 59–60 ನೇ ಸಾಲಿನಲ್ಲಿ 69,165 ರೂಪಾಯಿಗಳು. 60–61 ನೇ ಸಾಲಿನಲ್ಲಿ 98,892 ರೂಪಾಯಿಗಳು.

Sri G. DUGGAPPA.—Sir, I want to know the number of these institutes to be started during 63-64 and whether Government is starting any; the districtwise figures may be given.

ಶ್ರೀಮತಿ ಯಶೋಧರ ದಾಸಪ್ಪ.—ಮೂರನೇ ಪ್ಲಾನಿನಲ್ಲಿ 63–64 ನೇ ಸಾಲಿನಲ್ಲಿ 39 Welfare Centres 12 Tailoring Institutions ಮತ್ತು 22 ಹಾಸ್ಟಲ್ಲುಗಳು ಆಗಬೇಕು. ಇದಲ್ಲದೆ ಚನ್ನಪಟ್ಟಣದಲ್ಲಿ ಲ್ಯಾದರ್‌ವೇರ್ ಯೂನಿಟ್ಟನ್ನು ಆರಂಭಿಸಲಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಎಲ್ಲೆಲ್ಲಿ ಬ್ಯಾಕ್‌ವರ್ಡ್ ಆಗಿರುವ ಟ್ರೈಬಲ್ ಜನರಿದ್ದಾರೆಯೋ ಅಂತಹ ಜನಕ್ಕೆ ಸಂಸ್ಥೆಗಳನ್ನು ಸ್ಥಾಪನೆ ಮಾಡಲು ಕಮಿಟಿಗಳನ್ನು ಮಾಡಿ ಅಷ್ಟನ್ನೂ ಸ್ಥಾಪನೆ ಮಾಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ನಾನು ಬಂದಮೇಲೆ ಮೂರು ಕಮಿಟಿಗಳನ್ನು ಷೆಡ್ಯೂಲು ಕ್ಯಾಸ್ಟಿಗೆ ಬೇರೆ, ಟ್ರೈಬ್ಸ್‌ಗೇ ಬೇರೆ ಮತ್ತಿತರ ಹಿಂದುಳಿದ ಜನಕ್ಕೇ ಬೇರೆ ಎಂದು ಮಾಡಿ ಹಣ ವನ್ನೂ ಕೂಡ ಹೆಚ್ಚಾಗಿ ಒದಗಿಸಲಾಗಿದೆ. ತಾವು ಹೇಳಿದಹಾಗೆ ಷೆಡ್ಯೂಲು ಟ್ರೈಬ್ಸ್‌ಗೆ Women Welfare Centres ಗಾಗಿ ಐದು ಸೆಂಟರುಗಳಿಗೆ 31,444 ರೂ. ಗಳಷ್ಟು ಖರ್ಚಾಗಿದೆ. ಮೂರನೇ ಪ್ಲಾನಿನಲ್ಲಿ 6 ಸೆಂಟರುಗಳಿಗಾಗಿ 61-62 ನೇ ಸಾಲಿನಲ್ಲಿ 2,54,500 ರೂಪಾಯಿಗಳು ಖರ್ಚಾಗಿವೆ. 10 ಸೆಂಟರುಗಳನ್ನು ಮಾಡಲು 32,498 ರೂಪಾಯಿಗಳಾಗಿವೆ. ಇದನ್ನು ನಡೆಸಿ ಕೊಂಡು ಹೋಗುವುದು ಕಷ್ಟವಾಗುತ್ತದೆ ಎಂದು ಮಕ್ಕಳಿಗಾಗಿ ನಾಲ್ಕು ಹಾಸ್ಟಲುಗಳನ್ನು ತೆರೆಯ ಲಾಗಿದೆ. ಇದಕ್ಕೆ 56,362 ರೂಪಾಯಿಗಳಾಗಿವೆ. ಎರಡನೇ ಪ್ಲಾನಿನಲ್ಲಿ ಹಾಸ್ಟಲುಗಳಿಗಾಗಿ 1.7 ಲಕ್ಷ ರೂ. ಮೂರನೇ ಪ್ಲಾನಿನಲ್ಲಿ ಮೂರು ಹಾಸ್ಟಲುಗಳಿಗಾಗಿ 1,11,800 ರೂ. ಗಳು.

MR. SPEAKER.—Sri Duggappa wanted the number of centres contemplated to be started in 63-64 districtwise. If the Hon'ble Minister has got the information, that can be furnished.

ಶ್ರೀಮತಿ ಯಶೋಧರ ದಾಸಪ್ಪ.—Districtwise figures ಇಲ್ಲಿಲ್ಲ.

ಶ್ರೀ ಟಿ. ಮಾದಯ್ಯ ಗೌಡ.—ಗ್ರ್ಯಾಂಟ್-ಇನ್-ಏಡ್ ಹಾಸ್ಟಲ್ಲುಗಳು ಸೇರಿವೆಯೇ?

ಶ್ರೀಮತಿ ಯಶೋಧರ ದಾಸಪ್ಪ.—ಇಲ್ಲ.

SRI S. RAJAGOPAL.—Is Government aware that there is representation from the K.G.F. to open more boys' hostels. What action has been taken so far?

ಶ್ರೀಮತಿ ಯಶೋಧರ ದಾಸಪ್ಪ.—ಕೆ. ಜಿ. ಎಫ್. ನಲ್ಲಿ ಹೆಣ್ಣು ಮಕ್ಕಳಿಗೆ, ಗಂಡು ಮಕ್ಕಳಿಗೆ ಹಾಸ್ಟಲು ಇದೆ. ಜನಸಂಖ್ಯೆ ಜಾಸ್ತಿ ಇದೆಯೆಂದು ಹೇಳಿ ಇನ್ನೊಂದು ಹಾಸ್ಟಲು ಬೇಕೆಂದು ಕೇಳಿ ದ್ದಾರೆ. ಅದನ್ನು ಪರಿಶೀಲಿಸುತ್ತಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎ. ಕೆ. ಗಳಿಗೆ, ಎ.ಡಿ. ಗಳಿಗೆ, ಎಂದು ಹೀಗೆ 4–4 ಹಾಸ್ಟಲು ಗಳನ್ನು ಮಾಡುತ್ತಿದ್ದೀರಿ ಇದು ಏನು ಸಮಾಚಾರ? ಇದರಲ್ಲಿ ಸರಕಾರದ ನೀತಿ ಏನು? ಒಂದೇ ಒಂದು ಕಡೆ 4 ಹಾಸ್ಟಲುಗಳನ್ನು ಮಾಡುವುದಕ್ಕೆ ಕಾರಣವೇನು?

ಶ್ರೀಮತಿ ಯಶೋಧರ ದಾಸಪ್ಪ.—ಹಿಂದಿನಿಂದ ಅದು ನಡೆದುಕೊಂಡು ಬಂದಿದೆ. ಈಗ ಸರ್ಕಾರ ಜನರಲ್ ಹಾಸ್ಟಲ್ ಇರಬೇಕು ಎಂಬ ತತ್ವವನ್ನು ಅನುಸರಿಸಿ ಜನಸಂಖ್ಯೆಗೆ ಅನುಗುಣವಾಗಿ ಹಾಸ್ಟಲು ಕೊಡುತ್ತೇವೆ. ಬೇರೆ ಜಾತಿಗಳವರೂ ಸೇರಲು ಇಷ್ಟಪಡುವವರು ಫ್ರೀ ಆಗಿ, ಅನು ಸೂಚಿತ ಜಾತಿಗಳವರಿಗೆ ತೊಂದರೆಯಾಗದ ರೀತಿಯಲ್ಲಿ ಸೇರಬಹುದು. ಹೀಗೆ ಎರಡು ಹಾಸ್ಟಲು ಗಳನ್ನು ಪ್ರಾಯೋಗಿಕವಾಗಿ ನಡೆಸುತ್ತಿದೆ, ಮುಂದೆ ಈ ರೀತಿ ಮಾಡಬೇಕೆನ್ನುವುದೇ ಸರಕಾರದ ಉದ್ದೇಶ.

ಶ್ರೀಮತಿ ಸುಶೀಲಾಬಾಯ್ ಹೀರಾಚಂದ ಷಾ.—ಜನರಲ್ ಹಾಸ್ಟಲುಗಳನ್ನು ಎಲ್ಲೆಲ್ಲಿ ತೆಗೆದಿ ದ್ದೀರಾ, ಮತ್ತು ಎಷ್ಟೆಷ್ಟು ಸಂಖ್ಯೆಯಲ್ಲಿ?

ಶ್ರೀಮತಿ ಯಶೋಧರ ದಾಸಪ್ಪ.—ಈಗ ಮೈಸೂರು ಮತ್ತು ಬೆಂಗಳೂರಿನಲ್ಲಿ ಒಂದೊಂದು 50–50 ಮಕ್ಕಳಿಗೆ ತೆಗೆದಿದ್ದೇವೆ. ಬ್ರಾಹ್ಮಣರು, ಹಿಂದುಳಿದವರು, ಹರಿ ಜನರು, ಗಿರಿಜನರು, ಎಲ್ಲ ಜನರೂ ಸೇರಬಹುದು.

SRI N. O. SAMAJI.—(Marathi).

ಶ್ರೀಮತಿ ಯಶೋಧರ ದಾಸಪ್ಪ.—ಹಾಗೆ ಮಾಡಿಲ್ಲ. ಹರಿಜನರ ಜನಸಂಖ್ಯೆ ಎಲ್ಲೆಲ್ಲಿದೆ ಅಲ್ಲಲ್ಲಿ ಹೆಚ್ಚಾಗಿ ಮಾಡುತ್ತೇವೆ. ಸರ್ವೆ ಮಾಡಿ, ಜನ ಸಂಖ್ಯೆಗೆ ಅನುಗುಣವಾಗಿ ಮಾಡಿದ್ದೇವೆಂದು ಹೇಳಲಿಲ್ಲ.

ಶ್ರೀ ಜಿ. ಎಲ್. ಕಬಾಡಿ.—ಈ ಹಾಸ್ಟಲುಗಳಲ್ಲಿ ಎಷ್ಟು ಪೂರ್ತಿಯಾಗಿದೆ, ಎಷ್ಟು ಅಪೂರ್ತಿ ಯಾಗಿವೆ?

ಶ್ರೀಮತಿ ಯಶೋಧರ ದಾಸಪ್ಪ.—ಅನೇಕ ಸಲ ಹೇಳಿದ್ದೇನೆ. 47 ಪೂರ್ತಿಯಾಗಿವೆ. ಇನ್ನು 34 ಪೂರ್ತಿಯಾಗುವುದರಲ್ಲಿವೆ. ಈ ವರ್ಷದಲ್ಲಿ ಆಗುತ್ತವೆ.

ಶ್ರೀ ಸಿದ್ದಯ್ಯ ಕಾಶೀಮಠ.—ಮೂರನೆ ಯೋಜನೆಯ ಅವಧಿಯಲ್ಲಿ 216 ಸಂಸ್ಥೆಗಳನ್ನು ಪ್ರಾರಂಭಿಸುವ ಉದ್ದೇಶವಿದೆಯೆಂದು ಹೇಳಿದ್ದೀರಿ. ಈ 216ರಲ್ಲಿ ಈ ವರ್ಷ ಎಲ್ಲೆಲ್ಲಿ ಈ ಹಾಸ್ಟಲು ಗಳನ್ನು ಪ್ರಾರಂಭ ಮಾಡುತ್ತೀರೆಂದು ಜಿಲ್ಲಾವಾರು ಹೇಳುತ್ತೀರಾ.

ಶ್ರೀಮತಿ ಯಶೋಧರ ದಾಸಪ್ಪ.—ಜಿಲ್ಲಾವಾರು, ತಾಲ್ಲೂಕುವಾರು ಪಟ್ಟಿ ಇಲ್ಲ. ಜನರಲ್ ಹಾಸ್ಟಲುಗಳನ್ನು ಮಾಡಿ ಎಲ್ಲ ತಾಲ್ಲೂಕುಗಳಿಗೂ ನ್ಯಾಯ ಒದಗಿಸುವುದಕ್ಕೆ ಸರಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಜಿ. ವಿ. ಗೌಡ.—ಷೆಡ್ಯೂಲ್ಡ್ ಟ್ರೈಬ್ಸ್ ಡಿನೋಟಿಫೈಡ್ ಟ್ರೈಬ್ಸ್ ಅಂತ ಆ ಸಂಸ್ಥೆಗಳ ಹೆಸರು ಮಾತ್ರ ಹೇಳಿ, ಬೇರೆಯವರ ಮಕ್ಕಳಿಗೆ ಹೆಚ್ಚು ಕೊಟ್ಟಿದ್ದಾರಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ಹೆಸರಿನಲ್ಲಿ ಮಾತ್ರವಲ್ಲ. ಅಲ್ಲಿ ಷೆಡ್ಯೂಲ್ಡ್ ಟ್ರೈಬಿನವರೂ, ಗಿರಿಜನರೂ ಇದ್ದಾರೆ. ಎಲ್ಲೆಲ್ಲಿ ಅವರು ಅವಕಾಶಗಳನ್ನು ಉಪಯೋಗಿಸಿಕೊಳ್ಳುತ್ತಿಲ್ಲ, ಅಲ್ಲಿ ಎಷ್ಟೆಷ್ಟು ಹೆಣ್ಣುಮಕ್ಕಳು ಇರಬೇಕೋ ಅಷ್ಟನ್ನು ಕೆಲಸಕ್ಕೆ ತಂದು ಬಿಟ್ಟು, ಅದಕ್ಕೆ ಬೇಕಾದಂಥ ಸಲಹೆಗಳನ್ನು ಮಾಡುತ್ತಾ ಇದ್ದೇವೆ. ಮೈಸೂರಿನಲ್ಲಿ ಗಿರಿಜನರ 50-50ರ ಒಂದು ಬ್ಯಾಚು ಹೆಣ್ಣು ಮತ್ತು ಗಂಡು ಮಕ್ಕಳನ್ನು ತರಿಸಿ, ಅವರ ಜೊತೆಗೆ 10-16 ಜನ ಇತರ ಜನಾಂಗದವರನ್ನು ಸೇರಿಸಿ ಅವರ ಮನಸ್ಸಿನ ಮೇಲೆ ಪರಿಣಾಮವಾಗುವ ರೀತಿಯಲ್ಲಿ ಓದುಕುವುದಕ್ಕೆ ಪ್ರಾರಂಭ ಮಾಡಿದ್ದಾರೆ.

ಶ್ರೀ ಜಿ. ವಿ. ಗೌಡ. ಈ ಡಿನೋಟಿಫೈಡ್ ಹಾಸ್ಟಲುಗಳನ್ನು ಏಪ್ರಲ್ ತಿಂಗಳಲ್ಲಿ ಪ್ರಾರಂಭ ಮಾಡಿದ್ದಾರೆ,ಡಿಸೆಂಬರ್ ತಿಂಗಳಿನಲ್ಲಿ ಗ್ರಾಂಟು ಕೊಡುತ್ತಾ ಇರುವುದರಿಂದ, ತೊಂದರೆಯಾಗುತ್ತಿದೆ, ಇದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರ ?

ಶ್ರೀಮತಿ ಯಶೋಧರ ದಾಸಪ್ಪ.—ಗ್ರಾಂಟು ಎಲ್ಲಾ ಬಾಬ್ತಿನಲ್ಲಿಯೂ ಕೂಡ ಜಿಲ್ಲಾವಾರಾಗಿ ಇಲ್ಲಿಂದ ಹೊರಟುಹೋಗಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಈ ಜನರಲ್ ಹಾಸ್ಟಲುಗಳಲ್ಲಿ ಅಡಿಗೆ ಮಾಡತಕ್ಕಂಥವರು ಯಾವ ಜನಾಂಗಕ್ಕೆ ಸೇರಿದವರು ; ಈ 18 ರೂಪಾಯಿ ಎಂದು ಹೇಳಿದ್ದು ಒಂದು ಹೊತ್ತಿನ ಊಟಕ್ಕೇ, ಎರಡು ಊಟಕ್ಕೇ ?

ಶ್ರೀಮತಿ ಯಶೋಧರ ದಾಸಪ್ಪ.—ಎಲ್ಲಾ ಜನಾಂಗದವರನ್ನೂ ಇಲ್ಲಿ ಅಡಿಗೆಗೆ ಇಟ್ಟಿದೆ.

Mr. SPEAKER.—How does it arise ? It is an associate idea. Supplementaries must be limited to the scope of the main question and the answer given thereto. Let it be answered.

ಶ್ರೀ ಎಸ್. ಗೋಪಾಲಗೌಡ.—ಈ ಅವಶ್ಯಕತೆಗಳನ್ನು ಕುರಿತು ಸರಕಾರದವರು ಸರ್ವೆ ಮಾಡಿಲ್ಲವೆಂತ ಹೇಳಿದಿರಿ. ಹಾಗಾದರೆ ಎಲ್ಲೆಲ್ಲಿ ವಿದ್ಯಾರ್ಥಿನಿಲಯಗಳನ್ನು ತೆಗೆಯಬೇಕು ಅನ್ನುವುದರ ಬಗ್ಗೆ ಸರಕಾರದವರಿಗೆ ಸಲಹೆ ಮಾಡತಕ್ಕಂಥ ಏಜನ್ಸಿ ಯಾವುದು ?

ಶ್ರೀಮತಿ ಯಶೋಧರ ದಾಸಪ್ಪ.—ಗೋಪಾಲ ಗೌಡರಂಥ ಮಾನ್ಯ ಸದಸ್ಯರುಗಳು ಬಂದು ಇಂಥ ಕಡೆ ಹಾಸ್ಟಲ ಗಳನ್ನು ಇಡಬೇಕೆಂದು ಒತ್ತಾಯ ಮಾಡಿದರೆ, ಅವರ ಸಲಹೆಯನ್ನು ಒಪ್ಪಿಕೊಂಡು ಆ ಸ್ಥಳದಲ್ಲಿ ಹಾಸ್ಟಲು ಮಾಡುತ್ತಾ ಇದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಹಾಸ್ಟಲಿನಲ್ಲಿ ಹರಿಜನ ಗಿರಿಜನರೇ ಅಲ್ಲದೆ, ಬೇರೆ ಸವರ್ಣೀಯರ ಮಕ್ಕಳು ಸೇರಿದ್ದಾರೆಂದು ಅಪ್ಪಣೆ ಕೊಡಿಸಿದಿರಿ : ಯಾವ ವರ್ಷದಿಂದ ಇದನ್ನು ಬೇರೆ ಜಾರಿಗೆ ತಂದಿದೆ.

ಶ್ರೀಮತಿ ಯಶೋಧರ ದಾಸಪ್ಪ.—ಕಳೆದವರ್ಷ ಜಾರಿಗೆ ತಂದಿದೆ. ಈಗ ಎರಡು ಹಾಸ್ಟಲುಗಳು ಪ್ರಾರಂಭವಾಗಿವೆ. ಈಗಲೂ ಕೂಡ ಎಲ್ಲೆಲ್ಲಿ ಹಾಸ್ಟಲು ಬಿಲ್ಡಿಂಗ್‌ಗಳು ಹೆಚ್ಚಾಗಿವೆ, ಅಂಥ ಸ್ಥಳಗಳಲ್ಲಿ ಹರಿಜನರ ಗಿರಿಜನರ ಮಕ್ಕಳು ಕಡಿಮೆ ಬಂದರೆ, ಬೇರೆ ಜನಾಂಗದವರು ಬರುತ್ತೇವೆಂದರೆ, ಅವರನ್ನು ಸೇರಿಸುವುದಕ್ಕೆ ಯಾವ ಅಡ್ಡಿಯೂ ಇಲ್ಲ.

ಶ್ರೀ ಜಿ. ವಿ. ಗೌಡ.—ಈ 12 ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾ ಇಲಾಖೆಯಿಂದ ವಹಿಸಿಕೊಟ್ಟ ಮೇಲೆ ವಿದ್ಯಾ ಇಲಾಖೆಯಲ್ಲಿ ಅವುಗಳಿಗೆ ಖರ್ಚುವಾಗುತ್ತಿದ್ದ ಹಣವನ್ನು ತಮ್ಮ ಇಲಾಖೆಗೇ ವರ್ಗಾಯಿಸಿದ್ದಾರೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಪೂರ್ತಿ ಹಣವನ್ನು ವರ್ಗಾಯಿಸಿದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಕ್ರಿಮಿನಲ್ ಟ್ರೈಬುಗಳಿಗೆ ಏನೇನು ಸೌಲಭ್ಯಗಳನ್ನು ಕೊಟ್ಟಿದ್ದೀರಿ ?

ಶ್ರೀಮತಿ ಯಶೋಧರ ದಾಸಪ್ಪ.—ಈಗ ಹೊಸ ಮೈಸೂರಿನಲ್ಲಿ ಡಿನೋಟಿಫೈಡ್ ಟ್ರೈಬುಗಳಿಗೆ ಏನೇನು ಸೌಲಭ್ಯಗಳನ್ನು ಕೊಟ್ಟಿದೆ ಅವುಗಳನ್ನು ಆ ಜನಾಂಗಳಿಗೂ ಒದಗಿಸುತ್ತಿದೆ.

ಶ್ರೀ ಸಿ. ಜೆ. ಮುಕಣ್ಣಪ್ಪ.—ಈ ಹಾಸ್ಟಲುಗಳನ್ನು ತೆಗೆಯುವ ವಿಚಾರ ತಮ್ಮ ನಿಶ್ಚಿತ ಧೋರಣೆಗೆ ವಿರುದ್ಧವಾಗಿದೆ. ಒಂದು ಕಡೆ ಹರಿಜನ ಹಾಸ್ಟಲುಗಳನ್ನು ತೆಗೆದು ಅದಕ್ಕೆ ಸವರ್ಣೀಯರನ್ನೂ ಹರಿಜನರನ್ನೂ ಸೇರಿಸುತ್ತೀರ. ಇದು ತಮ್ಮ ನಿಶ್ಚಿತ ಧೋರಣೆಗೆ ವಿರುದ್ಧವಾದ್ದರಿಂದ, ಇದಕ್ಕೆ ಯಾವುದಾದರೂ ಪರಿಹಾರ ಕಂಡುಹಿಡಿಯಬೇಕು.

ಶ್ರೀಮತಿ ಯಶೋಧರ ದಾಸಪ್ಪ.—ಸವರ್ಣೀಯರು ಅನುಸೂಚಿತ ಜಾತಿಗಳವರ ಮಕ್ಕಳನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುವವರಿಗೂ, ಈ ರೀತಿಯಾದ ಒಂದು ಪ್ರೊಟೆಕ್ಷನ್ನನ್ನು ಅನುಸೂಚಿತ ಜಾತಿಗಳವರಿಗೆ ಮಾಡಿಕೊಡಬೇಕಾಗುತ್ತದೆ. ಈಗ ಜನಗಳ ಮನಸ್ಸು ಸುಧಾರಿಸವಾಗಿ ಎಲ್ಲ ಜನಾಂಗಗಳು ಸೇರಬಹುದು ಎಂಬ ಮನೋಭಾವ ಬರುತ್ತಾ ಇರುವುದರಿಂದ, ಅದಕ್ಕೆ ಅನುಗುಣವಾಗಿ ಮಾಡಿಕೊಂಡು ಹೋಗುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಜಿ. ಎಲ್. ಕಬಾಡಿ.—ಈ ಷೆಡ್ಯೂಲ್ಡ್ ಟ್ರೈಬ್ಸ್ ಜನರನ್ನು ಡಿನೋಟಿಫೈಡ್ ಟ್ರೈಬ್ಸಿಗೆ ಸೇರಿಸಿರುವುದು, ರಾಜ್ಯಾಂಗಬದ್ಧವಾಗಿ ಯಾವ ಲಿಸ್ಟಿಗೆ ಸೇರಬೇಕೆಂದಿದೆಯೋ, ಆ ಕ್ರಮದಂತೆ ಇಲ್ಲ. ಸೆಂಟ್ರಲ್ ಗವರ್ನ್‌ಮೆಂಟಿನ ಲಿಸ್ಟಿನಂತೆ ಇಲ್ಲಿಯೂ ಅವರಿಗೆ ಸರಕಾರ ನ್ಯಾಯ ದೊರಕಿಸಿ ಕೊಡುತ್ತಿದೆಯೋ?

ಶ್ರೀಮತಿ ಯಶೋಧರ ದಾಸಪ್ಪ.—ಡೀನೋಟಿಫೈಡ್ ಟ್ರೈಬ್ಸ್ ಯಾರು ಯಾರು ಎನ್ನುವುದು ಗವರ್ನ್‌ಮೆಂಟ್ ಆಫ್ ಇಂಡಿಯ ಪರಿಶೀಲನೆಯಲ್ಲಿದೆ. ಆದ್ದರಿಂದ ಅದು ಜಾಗ್ರತೆ ತೀರ್ಮಾನವಾಗುತ್ತದೆ.

ಶ್ರೀ ಗೋಪಾಲ್ ರಾವ್ ಮುಡ್ಬಿ.—ಬಿದರ್ ಜಿಲ್ಲೆಯ ಡೀನೋಟಿಫೈಡ್ ಟ್ರೈಬ್ಸ್ ಜನಸಂಖ್ಯೆ ಎಷ್ಟು? ಮತ್ತು ಅವರಿಗೆ ಪ್ರತಿ ತಾಲ್ಲೂಕಿನಲ್ಲಿಯೂ ತೆರೆದಂಥ ಹಾಸ್ಟಲ್ ಎಷ್ಟು?

ಶ್ರೀಮತಿ ಯಶೋಧರ ದಾಸಪ್ಪ.—ಇದು ಈಗ ನನ್ನ ಎದುರಿನಲ್ಲಿ ಇಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಈ ಹರಿಜನರ ವಿದ್ಯಾರ್ಥಿನಿಲಯಕ್ಕೆ ಸವರ್ಣೀಯರನ್ನು ಸೇರಿಸಿಕೊಳ್ಳುವುದಕ್ಕೆ, ನಗದಿಯಾದಂಥ ರೀತಿಯಲ್ಲಿ ಏನಾದರೂ ಇನ್‌ಸೆಂಟಿವ್ ಸ್ಕಾಲರ್‌ಷಿಪ್ ಕೊಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತಾ ಇದೆಯೋ?

ಶ್ರೀಮತಿ ಯಶೋಧರ ದಾಸಪ್ಪ.—ಈಗ ಸುಮಾರು ಶೇಕಡ 5ರಷ್ಟು ಬಡ ಮಕ್ಕಳು ಬಂದು ಯಾರು ಸೇರಿಕೊಂಡಿದ್ದಾರೆಯೋ ಅವರಿಗೆ, ಫ್ರೀ ಬೋರ್ಡಿಂಗ್ ಅಂಡ್ ಲಾಡ್‌ಜಿಂಗ್ ಕೊಡುತ್ತಾ ಇದ್ದೇವೆ.

ಶ್ರೀಮತಿ ಬಿ. ಸಿ. ಭಾಗೀರಥಮ್ಮ.—ತುಮಕೂರಿನಲ್ಲಿರತಕ್ಕ ಹರಿಜನ ಬಾಲಕಿಯರ ಹಾಸ್ಟಲನ್ನು ಹೊಸ ಕಟ್ಟಡದಿಂದ ಬಾಡಿಗೆ ಕಟ್ಟಡಕ್ಕೆ ವರ್ಗಾಯಿಸುತ್ತಾರೆನ್ನುವ ಸಮಾಚಾರ ನಿಜವೆ?

ಶ್ರೀಮತಿ ಯಶೋಧರ ದಾಸಪ್ಪ.—ನಿಜವಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಭದ್ರಾವತಿಯಲ್ಲಿರುವ ಹಾಸ್ಟಲಿಗೆ ಎರಡು ವರ್ಷವಾದರೂ ಹಣ ಕೊಡದೆ ಈಗ ಮುಚ್ಚತಕ್ಕ ಅಭಿಪ್ರಾಯಕ್ಕೆ ಬಂದಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೋ?

ಶ್ರೀಮತಿ ಯಶೋಧರ ದಾಸಪ್ಪ.—ಯಾವ ಹಾಸ್ಟಲ್ಲಿಗೆ ಹಣ ಬಂದಿಲ್ಲ, ಅಲ್ಲಿಯ ಲೆಕ್ಕಪತ್ರಗಳು ಸರಿಯಾಗಿ ಬಾರದೆ ಹೋದರೆ ಮ್ಯಾನೇಜ್‌ಮೆಂಟ್ ಸರಿಯಾಗಿಲ್ಲವೆ ಇಂಥದ್ದಕ್ಕೆ ಸರಿವಾಗಿದೆ ಎಂದು ತಿಳಿದು ಅವರಿಗೆ ಹಣ ಕೊಡುತ್ತಿಲ್ಲ. ಇದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀಮತಿ ಸಶೀಲಾಬಾಯಿ ಹೀರಾಚಂದ್ ಷಾ.—ಬಿಜಾಪುರ ಜಿಲ್ಲೆಯ ಹರಿಜನ ಹಾಸ್ಟಲ್ಲಿಗೆ ಹಣ ಲಗೂನೆ ಮುಟ್ಟಿಲ್ಲವೆಂದು ಅಲ್ಲಿಯ ಸೆಕ್ರೆಟರಿಗಳು ಮನೆ ಮನೆಗೂ ಕಡ ಕೊಡಿ ಎಂದು ಕೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಯೋ?

ಶ್ರೀಮತಿ ಯಶೋಧರ ದಾಸಪ್ಪ.—ಸರ್ಕಾರದ ಗಮನಕ್ಕೆ ಬಂದಿಲ್ಲ. ಅಂಥದ್ದೇನಾದರೂ ಇದ್ದರೆ ಸರ್ಕಾರದ ಗಮನಕ್ಕೆ ತಂದರೆ ಪರಿಶೀಲಿಸುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮೈಸೂರು ಸಂಸ್ಥಾನದ ಬಹುಭಾಗದಲ್ಲಿ ಅಸ್ತಿಭಾರ ಶಿಲೆಗಳನ್ನು ಹಾಕಿದ್ದಾರೆ. ಅವುಗಳನ್ನು ನೋಡಿಕೊಳ್ಳುವುದಕ್ಕೆ, ಅವುಗಳ ರಕ್ಷಣೆಗೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ?

ಶ್ರೀಮತಿ ಯಶೋಧರ ದಾಸಪ್ಪ.—ಅಂಥದ್ದು ಎಷ್ಟು ಕಡೆ ಆಗಿದೆ ಎಂದು ತಿಳಿಸಿದರೆ ಅಲ್ಲಿ ಅದರ ರಕ್ಷಣೆಯನ್ನು ನೋಡಿಕೊಳ್ಳಬಹುದು.

ಶ್ರೀ ಟಿ. ಮಾದಯ್ಯ ಗೌಡ.—ಆಶ್ರಮ ಸ್ಕೂಲುಗಳು ಎಂದು ಪ್ರಾರಂಭ ಮಾಡಿರುವುದು ಈ ಹಾಸ್ಟಲುಗಳಲ್ಲಿ ಸೇರುತ್ತವೆಯೋ?

ಶ್ರೀಮತಿ ಯಶೋಧರ ದಾಸಪ್ಪ.—ಅವು ಬೇರೆ. ಅದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಒದಗಿಸಿಕೊಡುತ್ತೇನೆ.

Number of Scheduled Castes Hostels that were transferred from Education Department to Social Welfare Department in the State during 1962 and 1963.

*Q.—886. Sri Y. RAMAKRISHNA (Yelahanka).—

Will the Government be pleased to state :—

(*a*) the number of Scheduled Castes Hostels that were transferred from Education Department to Social Welfare Department in the State during 1962 and 1963;

(*b*) the expenditure incurred by the Education Department per boarder per month and the expenditure incurring by the Social Welfare Department per boarder per month in these hostels;

(*c*) the difficulties and inconveniences experienced by the Education Department necessitating transfer of these hostels to Social Welfare Department ?

A.—Smt. YASHODARA DASAPPA (Minister for Social Welfare).—

(*a*) During 1962—Nil.
During 1963—12.

(*b*) Rs. 18 per boarder per month.

(*c*) There were no difficulties. This action was taken to secure uniformity, avoid duplication of work and secure administrative efficiency.

ಶ್ರೀ ವೈ. ರಾಮಕೃಷ್ಣ.—ವಿದ್ಯಾ ಇಲಾಖೆಯಿಂದ ಸಮಾಜಕಲ್ಯಾಣ ಇಲಾಖೆಗೆ 12 ಹಾಸ್ಟಲುಗಳನ್ನು ತೆಗೆದುಕೊಂಡಿರುತ್ತೀರಿ. ವಿದ್ಯಾ ಇಲಾಖೆಯು ಆಡಳಿತದಲ್ಲಿದ್ದಾಗ ಒಬ್ಬ ವಿದ್ಯಾರ್ಥಿಗೆ 30 ರೂಪಾಯಿ ಬೀಳುತ್ತಿತ್ತು. ಸಮಾಜಕಲ್ಯಾಣ ಇಲಾಖೆಗೆ ಸೇರಿದ ಮೇಲೆ 18 ರೂಪಾಯಿ ಮಾತ್ರ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ನಾವು 18 ರೂಪಾಯಿ ಗಳನ್ನು ಕೊಡುತ್ತೇವೆ. ವಿದ್ಯಾ ಇಲಾಖೆಯವರು ಕೊಡುವುದೂ 18 ರೂಪಾಯಿ. ವಿದ್ಯಾ ಇಲಾಖೆಯವರು 30 ರೂಪಾಯಿಗಳಂತೆ ಕೊಡುತ್ತಿದ್ದರು ಎಂಬುದನ್ನು ನಮ್ಮ ಗಮನಕ್ಕೆ ತಂದರೆ ವಿಚಾರಿಸಿ ಅದೇರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧಳಾಗಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ಈ 12 ಹಾಸ್ಟಲುಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಶ್ರೀಮತಿ ಯಶೋಧರ ದಾಸಪ್ಪ.—ಅದನ್ನು ತಿಳಿದುಕೊಂಡು ಹೇಳುತ್ತೇನೆ.

Sri G. DUGGAPPA.—When these 12 hostels were under the management of the Education Department, the High School Headmasters and the Headmasters of some educational institutions used to be Superintendents and Divisional Supervisors. May I know who are managing the Hostels after they are taken over by the Social Welfare Department—whether by the officials of the Education Department or Social Welfare Department ?

ಶ್ರೀಮತಿ ಯಶೋಧರ ದಾಸಪ್ಪ.—ಸಮಾಜಕಲ್ಯಾಣ ಇಲಾಖೆಯವರು ನೋಡಿಕೊಳ್ಳುತ್ತಾರೆ.

ಶ್ರೀ ಜಿ. ವಿ. ಗೌಡ.—12 ವಿದ್ಯಾರ್ಥಿನಿಲಯಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಈಗ ವಿದ್ಯಾ ಇಲಾಖೆಯ ಆಡಳಿತದಲ್ಲಿ ಇನ್ನು ಯಾವುದೂ ನಿಮ್ಮವರ್ಗದ ಹಾಸ್ಟಲುಗಳಿಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ಗ್ರ್ಯಾಂಟ್-ಇನ್-ಏಡ್ ಹಾಸ್ಟಲುಗಳು ಅವರ ಕಡೆಯೇ ಉಳಿದಿವೆ.

Sri G. DUGGAPPA.—It was only in ex-Mysore area that these Hostels were managed by the Government under the Education Department. May I know whether there were any such Hostels in the erstwhile Bombay, Madras and Coorg areas?

ಶ್ರೀಮತಿ ಯಶೋಧರ ದಾಸಪ್ಪ.—ಸಮಾಜಕಲ್ಯಾಣ ಇಲಾಖೆಯವರು ಅವುಗಳ ಕಾರ್ಯ ನಿರ್ವಹಣೆ ಮಾಡುತ್ತಿದ್ದಾರೆ.

Sri G. DUGGAPPA.—May I know the number of such hostels managed by the Social Welfare Department ?

ಶ್ರೀಮತಿ ಯಶೋಧರ ದಾಸಪ್ಪ.—ಸುಮಾರು 70-80 ಹಾಸ್ಟಲುಗಳನ್ನು ಸಮಾಜಕಲ್ಯಾಣ ಇಲಾಖೆಯವರು ನಡೆಸುತ್ತಿದ್ದಾರೆ. ವಿವರಗಳನ್ನು ಆಮೇಲೆ ನಿಮಗೆ ಕೊಡುತ್ತೇನೆ.

ಶ್ರೀ ಕೆ. ವಿ. ಬೈರೇಗೌಡ.—ಈ ಹಾಸ್ಟಲುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದಕ್ಕೆ ಖಾಯಂ ಆಗಿ ಏನು ವ್ಯವಸ್ಥೆಯನ್ನು ಮಾಡಿದ್ದೀರಿ ?

ಶ್ರೀಮತಿ ಯಶೋಧರ ದಾಸಪ್ಪ—ಹಾಸ್ಟಲುಗಳನ್ನು ನೋಡಿಕೊಳ್ಳುವುದಕ್ಕೆ ಒಬ್ಬ ವಾರ್ಡನ್ ಇರುತ್ತಾರೆ, ಸಮಾಜಕಲ್ಯಾಣ ಇಲಾಖೆಯ ಇನ್‌ಸ್ಪೆಕ್ಟರೂ, ಆಫೀಸರುಗಳೂ ಇರುತ್ತಾರೆ. ಅವರೆಲ್ಲರೂ ನೋಡಿಕೊಳ್ಳುತ್ತಾರೆ. ಕೆಲವು ಕಡೆ ವಿದ್ಯಾ ಇಲಾಖೆಯವರನ್ನೂ ವಾರ್ಡನ್ ಆಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಗೋಪಾಲ ಸಾರನ್ನ.—ವಿದ್ಯಾ ಸಂಬಂಧವಾದ ಹಾಸ್ಟಲುಗಳನ್ನು ವಿದ್ಯಾ ಇಲಾಖೆಯವರು ನಡೆಸಬೇಕು. ಈ ವಿಷಯದಲ್ಲಿ ಯೂನಿಫಾರ್ಮಿಟಿ ಬರಬೇಕು ಎಂದು ಎಜುಕೇಷನ್ ಸಬ್-ಕಮಿಟಿ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಹೀಗಿರುವಾಗ ವಿದ್ಯಾ ಇಲಾಖೆಯಿಂದ ತೆಗೆದುಕೊಂಡಿರುವ ಮತ್ತು ನಿಮ್ಮ ಕಡೆಗೆ ಇರುವ ಹಾಸ್ಟಲುಗಳನ್ನೆಲ್ಲ ವಿದ್ಯಾ ಇಲಾಖೆಗೆ ಏಕೆ ಕೊಡಬಾರದು ?

ಶ್ರೀಮತಿ ಯಶೋಧರ ದಾಸಪ್ಪ.—ಶ್ರೀ ದುಗ್ಗಪ್ಪನವರು ಕೇಳಿದ ಪ್ರಶ್ನೆಗೆ ಉತ್ತರವಾಗಿ, ವಿದ್ಯಾ ಇಲಾಖೆ 3,15,230 ರೂಪಾಯಿಗಳನ್ನು ನಮಗೆ ಒದಗಿಸಿದೆ ಮತ್ತು ಸುಮಾರು 1,040 ವಿದ್ಯಾರ್ಥಿಗಳು ಆ ಹಾಸ್ಟಲುಗಳಲ್ಲಿದ್ದಾರೆ. ಶ್ರೀ ಗೋಪಾಲ ಸಾರನ್ನರವರು ಕೇಳಿದ್ದಕ್ಕೆ ಅಡ್ವೈಸರಿ ಬೋರ್ಡ್ ಸಬ್‌ಕಮಿಟಿ ಸಭೆ ಸೇರಿ ಸಮಾಜಕಲ್ಯಾಣ ಇಲಾಖೆಯಲ್ಲಿ ನಡೆಯುತ್ತಿರುವ ಎಲ್ಲ ಹಾಸ್ಟಲುಗಳನ್ನೂ ವಿದ್ಯಾ ಇಲಾಖೆಗೆ ಕೊಡುವ ಒಂದು ಸಲಹೆಯನ್ನು ಮಾಡಿದ್ದಾರೆ. ಈ 12 ಹಾಸ್ಟಲುಗಳನ್ನು ತೆಗೆದುಕೊಳ್ಳಬೇಕಾದರೆ ಹಿಂದೆ ವಿದ್ಯಾ ಇಲಾಖೆ ಮತ್ತು ಸಮಾಜಕಲ್ಯಾಣ ಇಲಾಖೆಯವರಿಬ್ಬರೂ ಸೇರಿ ಹಾಸ್ಟಲುಗಳೆಲ್ಲ ಒಂದೇಕಡೆಗೆ ಇದ್ದರೆ ಅವುಗಳನ್ನು ಚೆನ್ನಾಗಿ, ವ್ಯವಸ್ಥಿತವಾಗಿ ನೋಡಿಕೊಳ್ಳಬಹುದು ಎಂದು ತೀರ್ಮಾನವಾಗಿದೆ. 1961ನೆ ಇಸವಿಯಲ್ಲಿ ಆಗಿನ ಮುಖ್ಯಮಂತ್ರಿಗಳು, ವಿದ್ಯಾಮಂತ್ರಿಗಳು ಮತ್ತು ಸಮಾಜಕಲ್ಯಾಣ ಮಂತ್ರಿಗಳೂ ಸೇರಿ ತೀರ್ಮಾನ ಮಾಡಿದ್ದು, ನನ್ನ ಅಭಿಪ್ರಾಯಕ್ಕಾಗಿ ಬಂದಾಗ ನಾನೂ ಅದೇ ಅಭಿಪ್ರಾಯವನ್ನು ಅನುಮೋದಿಸಿದ್ದರಿಂದ 12 ಹಾಸ್ಟಲುಗಳೂ ನಮ್ಮ ಮೇಲ್ವಿಚಾರಣೆಗೆ ಬಂದಿವೆ. ಈಗ ಎಲ್ಲ ಹಾಸ್ಟಲುಗಳನ್ನೂ ಸಂಪೂರ್ಣವಾಗಿ ವಿದ್ಯಾ ಇಲಾಖೆಗೇ ವಹಿಸಬೇಕೆಂದು ಒಂದು ಸಲಹೆ ಬಂದಿದೆ. ಅದನ್ನು ಸರ್ಕಾರ ತೀರ್ಮಾನ ಮಾಡಬೇಕು. ಯಾವರೀತಿ ಮಾಡಬೇಕು, ಹೇಗೆ ಮಾಡಬೇಕು, ಹಾಗಿದ್ದಮೇಲೆ ಸಮಾಜಕಲ್ಯಾಣ ಇಲಾಖೆ ಇದ್ದೂ ಏನು ಪ್ರಯೋಜನ ಎಂದೂನ್ನು ಯೋಚನೆ ಮಾಡಬೇಕು.

Constitution of an elected Municipal Civic Body to Kolar Gold Fields.

*Q.—948. **Sri S. RAJAGOPAL** (K.G.F.).—

Will the Government be pleased to state :—

the steps they intend to take to constitute an elected Municipal Civic Body to Kolar Gold Fields ?

A.—**Sri K. PUTTASWAMY** (Minister for Municipal Administration).—

The Government propose to constitute a Town Municipality for a part of the non-mining area of Kolar Gold Fields. As suitable legislation has to be enacted towards this end, a Bill entitled The Robertsonpet Municipality (Formation and Miscellaneous Provisions) Bill, 1962 has been prepared and published. Further action will be taken as soon as the Bill is passed.

Sri S. RAJAGOPAL.—May I know who is managing the administration of this K.G.F. Sanitary Board ?

Sri K. PUTTASWAMY.—Now, it is managed by a Sanitary Board.

Sri S. RAJAGOPAL.—May I know who are all the members of that Committee and is there any non official member there ?

Sri K. PUTTASWAMY.—The constitution of the Sanitary Board is published in the Gazette, and I am sure my friend coming from that area knows as to who are the members of the committee.

Sri G. V. GOWDA.—Should we not know ?

Mr. SPEAKER.—Publication is meant for information for all those who care to read.

Sri S. RAJAGOPAL.—In that administrative committee, no non-official members are there ? May I know the reason why non-official members are not there ?

Sri K. PUTTASWAMY.—Sir, as the answer discloses, the Government is now considering to constitute an elected body for the non-mining area. In the interim period, Government thought it best to have only official members.

Sri S. M. KRISHNA.—Is it not a fact that the Government is thinking of constituting a Municipal Council for K.G.F. area for quite some time ?

Sri K. PUTTASWAMY.—Yes, Sir.

ಶ್ರೀ ಇ. ನಾರಾಯಣಗೌಡ.—ಕೋಲಾರದ ಚಿನ್ನದ ಗಣಿ ಪ್ರದೇಶದ ಸಿಟಿಜನ್ಸ್ ವೆಲ್‌ಫೇರ್ ಕಮಿಟಿಯವರು ಈಗಿರತಕ್ಕ ಸ್ಯಾನಿಟರಿ ಬೋರ್ಡಿನಿಂದ ಯಾವ ಕೆಲಸ ಕಾರ್ಯಗಳೂ ಆಗದೆ ತೊಂದರೆಯಾಗಿರುವುದರಿಂದ ಅದನ್ನು ತಕ್ಷಣ ರದ್ದುಪಡಿಸಬೇಕೆಂದು ಸರ್ಕಾರಕ್ಕೆ ಮನವಿಗಳನ್ನೇನಾದರೂ ಸಲ್ಲಿಸಿದ್ದಾರೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅವರು ಕಾಲದಿಂದ ಕಾಲಕ್ಕೆ, ಅವರಿಗೆ ಯುಕ್ತ ತೋರಿದಂತೆ ಸಲಹೆಗಳನ್ನು ಮಾಡುತ್ತಲೇ ಇದ್ದಾರೆ. ಕೆಲವು ಸಾರಿ ಅದು ಇರಬೇಕೆಂದೂ ಮತ್ತೆ ಕೆಲವು ಸಾರಿ ಅದು ಬೇಕಾಗಿಲ್ಲವೆಂದೂ ಹೇಳುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಭೆಯಲ್ಲಿ ಮಂಡಿಸಿರುವ ಪೌರಸಭೆಗಳ ಕಾನೂನಿನ ವತಿಯೊಳಗೆ ಇದನ್ನು ಒಳಪಡಿಸುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟನ್ನು ಸಭೆಯ ಅವಗಾಹನೆಗೆ ಇಟ್ಟಿದ್ದೇನೆ ಸ್ವಾಮಿ. ಅದರಲ್ಲಿರತಕ್ಕ ಪ್ರಾವಿಷನ್ ಕೆಳಗೆ ಇದು ಬರುವುದಕ್ಕೆ ಸಾಧ್ಯವೆಂದು ನಾನು ಅಭಿಪ್ರಾಯಪಡುತ್ತೇನೆ.

9-00 A.M.

ಶ್ರೀ ಇ. ನಾರಾಯಣ ಗೌಡ.—1959-60ನೇ ಸಾಲಿನಲ್ಲಿ ಗಣಿ ಪ್ರದೇಶಕ್ಕೆ ಸ್ಯಾನಿಟರಿ ಬೋರ್ಡ್ ಸ್ಯಾಂಕ್ಷನ್ ಮಾಡಿ, ಪೌರಸಭೆ ರಚಿಸುವ ಬಗ್ಗೆ ಒಂದು ಬಿಲ್ ತಯಾರು ಮಾಡಲಾಗಿತ್ತು, ಅದು ಏನಾಯಿತು ?

ಶ್ರೀ ಕೆ. ಪುಟ್ಟಸ್ವಾಮಿ.—ಆ ಬಿಲ್ಲು ಲ್ಯಾಪ್ಸ್ ಆಯಿತು.

SRI S. RAJAGOPAL.—Here it is said: "further action will be taken as soon as possible after the Bill is passed." Has that Bill any relation to this?

SRI K. PUTTASWAMY.—I already submitted to the House that the provisions that are contained in the Report of the Joint Select Committee on the Bill, may be sufficient for this purpose. If there is any lacuna, yet there is enough time for this House to examine and include suitable provisions. In that case, there will be no necessity to go through this Bill.

SRI G. V. GOWDA.—May I know the reason why the Bill referred to by Sri Narayana Gowda was allowed to lapse?

SRI K. PUTTASWAMY.—That is because the August House could not find time.

Government Policy in granting Building Subsidy to Primary School building in Rural Areas.

*Q.—979. SRI S. M. KRISHNA (Maddur).—

Will the Government be pleased to state;—

(a) the present policy of the Government in granting building subsidy in the rural areas for Primary School building;

(b) the difference between the old policy and the revised policy in so far as the monetary aspect is concerned;

(c) whether representations have not been made, requesting for reverting to the old policy?

A.—SMT. GRACE TUCKER (Deputy Minister for Education).—

(a) The Taluk Boards will construct Primary School buildings out of their own funds, contributions from the Panchayats, and the public and financial assistance from Government. The financial assistance from Government is limited to Rs. 1,000 per class room.

(b) (i) Under the Old Policy Government grant was 60 per cent of the estimated cost of construction, *viz.*, Rs. 3,000 for RCC roof buildings and Rs. 2,800 for Mangalore tiled buildings.

(ii) Under the New Policy, Government will pay Rs. 1,000 per class room as its share, which works out to about 33 per cent of the cost of construction.

(c) Representations have been received.

SRI S. M. KRISHNA.—Are the Government aware that this revision of the policy with reference to these subsidies to primary school buildings would not go a step further to fulfil that constitutional obligation of free and compulsory primary education?

SMT. GRACE TUCKER.—We have not found it like that. We have found that the taluk boards are willing to help out because they are so much in need of compulsory primary education.

Sri S. M. KRISHNA.—Are the Government aware of the number of schools in Mysore State which do not have school buildings in the rural areas? Have they any specific figures?

Smt. GRACE TUCKER.—Out of about 30,000 schools, the buildings that we have are 12,381. So, we have about 18,000 schools without buildings.

ಶ್ರೀ ಜಿ. ರಾಮೇಗೌಡ.—1962-63 ನೇ ಸಾಲಿನಲ್ಲಿ ಇದಕ್ಕೆ ಗೊತ್ತುಮಾಡಿದ ಹಣದಲ್ಲಿ ಈಗಾಗಲೇ ಎಷ್ಟು ಹಣ ಖರ್ಚಾಗಿದೆ?

Smt. GRACE TUCKER.—For 1962-63 the allotment is two lakhs.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕೆಲವು ಗ್ರಾಮಾಂತರ ಪ್ರದೇಶದಲ್ಲಿ ತಾಲ್ಲೂಕ್ ಬೋರ್ಡ್ ಸ್ಕೂಲ್ ಬಿಲ್ಡಿಂಗ್ಸ್ ಅತ್ಯಗತ್ಯವಾಗಿ ಬೇಕಾಗಿವೆ. ಆದರೆ ಈ ವಿಚಾರ ಲ್ಲಿ ಸ್ಟೆಪ್ ಮದರ್ಲೀ ಟ್ರೀಟ್ ಮೆಂಟ್ ಕೊಡುತ್ತಾ ಇದ್ದೀರಿ. ಇದನ್ನು ಪರಿಹರಿಸಲು ಸರಕಾರ ಏನಾದರೂ ಕ್ರಮ ತೆಗೆದು ಕೊಳ್ಳುತ್ತೀರಾ?

Smt. GRACE TUCKER.—We request the Taluk Boards to take up buildings on a priority basis and many of the Taluk Boards are conforming to the request of the Government and have come forward not only to give buildings, but even requests for schools.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅನೇಕ ಕಡೆ ಪಂಚಾಯುತಿ ಹಾಗು ಜನರು ತಮ್ಮ ಭಾಗದ ಹಣ ಕೊಟ್ಟಿದ್ದರೂ ಕೂಡ ಉಳಿದ ಹಣವನ್ನು ಸರಕಾರ ಕೊಡುವದಕ್ಕೆ ಶಕ್ತಿ ಇಲ್ಲ ಎಂಬ ನಿದರ್ಶನ ಬಂದಿದೆ. ಇದು ಸರಕಾರಕ್ಕೆ ಗೊತ್ತಿದೆಯೇ?

Smt. GRACE TUCKER.—That is a fact. Many of the Panchayets have come forward and asked for monies. But because of paucity of funds and limits of the budget allotments, we have not been able in some cases to afford the Goverment quota this year. It will be given for the next year.

Sri D. M. SIDDAIYA.—Is there any restriction with regard to the quantum of contribution which Panchayets should make to these school buildings?

Smt. GRACE TUCKER.—There is no restriction with regard to the Panchayet contribution or Taluk board contribution. But the Government contribution is limited to Rs. 1,000 per building.

Sri B. V. MAGAVI.—Are the Government aware that the Taluk Boards are not having sufficient funds to finance the school buildings?

Smt. GRACE TUCKER.—The Taluk Boards have been provided with certain amount of monies—one lakh of rupees. Of course, it is for various other items of expenditure. But many of the taluk boards have taken school buildings as thair priority need and are giving attention to it.

ಶ್ರೀ ಎಸ್. ಭೀಮಣ್ಣ.—ಎಜ್ಯುಕೇಷನಲ್ ಬಹಳ ಬ್ಯಾಕ್‌ವರ್ಡ್ ಆಗಿರುವ ಏರಿಯಾದಲ್ಲಿ ಸ್ಕೂಲ್ ಕಟ್ಟಡಕ್ಕೆ 3,000 ಇರುವುದನ್ನು 5,000ಕ್ಕೆ ಏರಿಸುವ ಹಾಗೆ ಸ್ಪೆಷಲ್ ಪ್ರೊವಿಜನ್ ಏನಾದರೂ ಮಾಡುತ್ತೀರಾ?

Smt. GRACE TUCKER.—Every taluk is treated in the same way and every taluk board has got its funds. Even from taluks which are backward, I must say, reports are very encouraging in the matter of school buildings.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್‌ಷಾ.—ಅನೇಕ ಹಳ್ಳಿಗಳಲ್ಲಿ ಶಾಲಾ ಕಟ್ಟಡದ ಬಾಗಿಲುಗಳು ಮುರಿದುಹೋಗಿವೆ. ಅವುಗಳ ರಿಪೇರಿ ಮಾಡಿಸಲು ಎಷ್ಟು ಹಣ ಸರಕಾರದಿಂದ ಖರ್ಚು ಮಾಡಿದ್ದೀರಿ?

Smt. GRACE TUCKER.—Repair and maintenance also is the obligation of the taluk board.

Sri S. SIVAPPA.—Where the village panchayet or the taluk boards do not come forward with the contribution where there is no school building, what is the policy of the Government in such cases to provide buildings on their own initiative ?

Smt. GRACE TUCKER.—There is no such policy as yet. We are not faced with such difficulties because practically every village which asks for school, comes forward with some accommodation.

Sri D. M. SIDDAIAH.—Formerly Government was giving 60 per cent grant, but now it is cut down to $33\frac{1}{3}$ per cent. What prompted the Government to change this policy ?

Smt. GRACE TUCKER.—Because of lack of funds there has been a change of policy. Chiefly that is the reason.

Sri V. S. PATIL.—Although primary education is the responsibility of the Government and it is being managed by the Government without handing over the same to the taluk board or the panchayet, why Government is imposing a burden of $\frac{2}{3}$ cost on these local bodies ?

Smt. GRACE TUCKER.—While we say $\frac{2}{3}$ cost is the contribution of the local body, it is clearly seen that while we give one-third, the other one-third is generally from the taluk board and that is a quasi-Government body and the other one-third is practically the part of Government share there also. So, there is no question of Taluk Boards being asked to pay two-thirds.

ಶ್ರೀ ಎಸ್. ಎಂ. ಗುರೆಡ್ಡಿ.—ಈ ತರ್ತು ಪರಿಸ್ಥಿತಿಯಲ್ಲಿ ಜನರಿಂದ ಕಾಂಟ್ರಿಬ್ಯೂಷನ್ 1,000 ರೂಪಾಯಿ ತೆಗೆದುಕೊಳ್ಳದೇ ಸರಕಾರವೇ ಎಲ್ಲ ಹಣ ಒದಗಿಸುವುದಕ್ಕೆ ಸಾಧ್ಯವಿದೆಯೇ ?

Smt. GRACE TUCKER.—I just said that it was limited to the budget grants.

ಶ್ರೀ ಕೆ. ಲಕ್ಕಪ್ಪ.—ಈ ದೇಶದಲ್ಲಿ 30,000 ಸ್ಕೂಲ್ ಕಟ್ಟಡಗಳು ಬೇಕಾಗಿವೆ. ಕಟ್ಟಡ ಕಟ್ಟಿಸುವ ಕೆಲಸ ಸರಕಾರದ ಜವಾಬ್ದಾರಿಯಾಗಿದ್ದರೂ ಕಳೆದ 15 ವರ್ಷಗಳಲ್ಲಿ ಅದನ್ನು ನೆರವೇರಿಸಲು ಸರಕಾರಕ್ಕೆ ಆಗಿಲ್ಲ. ಆದುದರಿಂದ ನಿಗದಿ ಮಾಡಿರುವ ಕಾಲದಲ್ಲಿ ಕೆಲಸಕಾರ್ಯಗಳನ್ನು ಪೂರೈಸುವುದಕ್ಕೆ ಏನಾದರೂ ಕಾರ್ಯಕ್ರಮ ಸರಕಾರ ಇಟ್ಟುಕೊಂಡಿದ್ದಾರೆಯೇ ?

Smt. GRACE TUCKER.—Sir, I do not agree that the Government has not been giving school buildings. In fact we have been giving school-buildings. School buildings are given at a very fast rate indeed. During the Second Five-year Plan we have given 700-800 school buildings. Within the first three years of the Third Five Year Plan, we have already given about 700 school buildings. We are giving school buildings at a very fast rate.

Sri GANJI VEERAPPA.—When the question of repairing the existing school buildings is left to the taluk board, may I know whether the funds that the Department was spending on repair and maintenance, have been transferred to taluk boards ?

Smt. GRACE TUCKER.—A large part of it has been transferred, but not as funds for repair and maintenance. We have given it as a lumpsum.

Sri SANJEEVANATH AIKALA.—In view of the Government assistance restricted to Rs. 1,000/- will the Government be pleased not to insist upon the type-design rooms for primary school buildings or will it change its policy in this connection ?

Smt. GRACE TUCKER.—Irrespective of the type design, when the Government is giving financial assistance to the extent of Rs. 1,000/- we would like to have Taluk Boards to try and see that they have a good enough building.

Sri Y. RAMAKRISHNA.—In answer to (e) it is said that "representations have been received ? ." May I know the number of representations received and the action taken on them.

Smt. GRACE TUCKER.—A large number of representations have been received, asking us to revert to the old scheme ; but it is not possible in view of the limited budget.

ಶ್ರೀ ಕೆ. ಪಿ. ರೇವಣ್ಣ ಸಿದ್ಧಪ್ಪ.—ಕಡ್ಡಾಯ ಶಿಕ್ಷಣ ಜಾರಿಗೆ ತಂದಿದ್ದೇವೆ ಎಂದು ಹೇಳುವಾಗ ಆ ಮಕ್ಕಳ ವಿದ್ಯಾಭ್ಯಾಸಕ್ಕೆ ತಕ್ಕ ವಸತಿ ಸೌಕರ್ಯ ಕಲ್ಪಿಸಬೇಕಾದ್ದು ಮುಖ್ಯವಾಗಿರುವುದರಿಂದ ತಾಲ್ಲೂಕು ಬೋರ್ಡು, ಪಂಚಾಯ್ತಿ ಅಂತ ಹೇಳಿ ಇನ್ನೊಬ್ಬರ ಮೇಲೆ ಜವಾಬ್ದಾರಿ ಹಾಕುವುದರ ಬದಲು ಸರ್ಕಾರವೇ ನೇರವಾಗಿ ವಹಿಸಿಕೊಳ್ಳದೇ ಇರುವುದರಿಂದ ತಮ್ಮ ಕರ್ತವ್ಯಲೋಪವ ಗಿದೆಯಲ್ಲವೇ ?

Smt. GRACE TUCKER.—No. We have taken up the responsibiity of compulsory primary education very well and we have given shools in a large number and when we have given schools, school teachers and other equipments, it is only fair that the rural area also should come forward with their contributions.

Sri V. MASIYAPPA.—Is this policy of giving grants to the buildings at one-third of the cost of construction applicable to rural areas and urban areas ?

Smt. GRACE TUCKER.—Equally applicable to both areas.

Sri G. V. GOWDA.—This year, it is said, Rs. 2 lakhs have been provided for the construction of school buildings. So 200 school buildings could be constructed per year. 18,0 0 school buildings have got to be constructed. Are the Government aware that at this rate, it would take 90 to 100 years to achieve the target ?

Smt. GRACE TUCKER.—It would not go up to 90 years ; but it would take 40 years. It cannot be helped, because while schools have come up, school buildings of the stable type would have to be got built as years go on.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರದಲ್ಲಿ, ತಾಲ್ಲೂಕು ಬೋರ್ಡಿನಲ್ಲಿ, ಪಂಚಾಯ್ತಿಯಲ್ಲಿ ಸಾಕಾದಷ್ಟು ಹಣ ಇಲ್ಲ ಎಂದು ಹೇಳುತ್ತಿರುವಾಗ ಮಣ್ಣಿನ ಗೋಡೆಯಿಂದ ಕಟ್ಟುತಕ್ಕ ಮಾದರಿಯಲ್ಲಿ, ಹಳ್ಳಿ ಕ್ರಮದಲ್ಲಿ ಕಟ್ಟಡ ಕಟ್ಟಲಿಕ್ಕೆ ಸರ್ಕಾರದವರ ಯೋಚನೆ ಇದೆಯೇ ?

Smt. GRACE TUCKER.—In all parts of the State we have thought of giving good buildings first, but where it is not possible and where there are not enough funds, it is quite possible for the village to give temporary accommodation.

Sri S. SIVAPPA.—What were the compelling reasons on the part of the Government to reduce the grant per building which was originally 60 per cent of the total cost, to 33 per cent ?

Mr. SPEAKER.—I think that question was put.

Smt. GRACE TUCKER.—There was lack of funds; secondly the Local Bodies Act which brought the Taluk Board into the picture.

Major and Minor Tanks in Chickmagalur District.

*Q.—1023. Smt. B. L. SUBBAMMA (Chickmagalur)....

Will the Government be pleased to state :—

(a) the number of major and minor tanks in Chickmagalur District;

(b) the number and names of major tanks in the said District which have an atchkat area of more than 1,000 acres of lands;

(c) the departments that are responsible for maintenance of these tanks?

A.—Sri ALUR HANUMANTHAPPA (Deputy Minister for Minor Irrigation).—

(a) Major tanks	...	117
Minor tanks	...	2,327

(b) Five:

1. Belvadi Doddakere, Chickmagalur Taluk;
2. Madag Tank;
3. Birur Devanakere;
4. Iyyanakere;
5. Kukkasamudra.

(c) Belvadi Doddakere is maintained by Revenue authorities.

Other four tanks are maintained by the Public Works Department.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—(ಸಿ) ಗೆ ಉತ್ತರವಾಗಿ 117 ದೊಡ್ಡ ಕೆರೆಗಳು ಇವೆ. ಅದರಲ್ಲಿ ನಾಲ್ಕು ಕೆರೆಗಳನ್ನು ಪಿಡಬ್ಲ್ಯುಡಿ ನವರು ಮತ್ತು ಒಂದು ಕೆರೆಯನ್ನು ರೆವಿನ್ಯೂ ಇಲಾಖೆಯವರು ನಿರ್ವಾಹ ಮಾಡುತ್ತಾ ಇದ್ದಾರೆ ಎಂದು ಹೇಳಿದ್ದೀರಿ. ಇನ್ನುಳಿದ ಕೆರೆಗಳನ್ನು ಯಾರು ನೋಡಿಕೊಳ್ಳುತ್ತಾ ಇದ್ದಾರೆ ?

† ಶ್ರೀ ಆಲೂರು ಹನುಮಂತಪ್ಪ.—ಇವತ್ತಿನವರೆಗೂ ರೆವೆನ್ಯೂ ಮೇನ್‌ಟೇನ್ಡ್ ಟ್ಯಾಂಕ್ಸ್ ಎಂತಲೇ ಇದೆ. ಆ ಕೆರೆಗಳನ್ನು ಪಿ. ಡಬ್ಲ್ಯು. ಡಿ. ಅವರಿಗೆ ವಹಿಸಬೇಕಾದರೆ ಎಷ್ಟು ಅಚ್ಚುಕಟ್ಟು ಇರುವ ಕೆರೆಗಳನ್ನು ತೆಗೆದುಕೊಳ್ಳಬೇಕೆಂಬ ವಿಷಯ ಸರ್ಕಾರದವರ ತೀವ್ರ ಪರಿಶೀಲನೆಯಲ್ಲಿದೆ ?

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ 5 ಕೆರೆಗಳಿಗೆ ಎಷ್ಟು ಅಚ್ಚುಕಟ್ಟು ಇದೆ ?

ಶ್ರೀ ಆಲೂರು ಹನುಮಂತಪ್ಪ.—2,674 ಎಕರೆ ಅಚ್ಚುಕಟ್ಟು ಇದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಅಯ್ಯನ ಕೆರೆ ಮೇಲ್ಭಾಗದಲ್ಲಿ ಜಮೀನು ವ್ಯವಸಾಯಕ್ಕೆ ಕೊಟ್ಟಿರುವುದು ನಿಜವೇ ?

ಶ್ರೀ ಆಲೂರು ಹನುಮಂತಪ್ಪ.—ಹಿಂದೆ ಆಗಲೇ ಪ್ರಶ್ನೆ ಹಾಕಿದ್ದೀರಿ, ಆ ಬಗ್ಗೆ ತನಿಖೆ ನಡೆಯುತ್ತಾ ಇದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ಧಪ್ಪ.—ರೆವಿನ್ಯೂ ಇಲಾಖೆಯ ಸುಪರ್ದಿನಲ್ಲಿರುವ ಕೆರೆಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂಬ ವಿಷಯ ತೀವ್ರ ಆಲೋಚನೆಯಲ್ಲಿದೆ ಎಂದು ಹೇಳುತ್ತಾ ಇದ್ದಾರೆ. ನಿಮಗಿಂತ ಹಿಂದೆ ಇದ್ದವರು ಅದಕ್ಕಿಂತ ಹಿಂದೆ ಇದ್ದವರು ಆ ಕಾಲದಿಂದ ತೀವ್ರ ಎಂದು ಹೇಳುತ್ತಾ ಇದ್ದಾರೆ, ಎಷ್ಟು ದಿವಸಗಳಿಂದ ತೀವ್ರವಾಗಿದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ಹತ್ತು ಎಕರೆಗೆ ಒಳಪಟ್ಟು ಅಚ್ಚುಕಟ್ಟು ಇರತಕ್ಕ ಕೆರೆಗಳನ್ನು ತಾಲ್ಲೂಕು ಬೋರ್ಡಿನವರಿಗೇ ವಹಿಸಿಕೊಡಲಾಗಿದೆ. ಅಂತಹ 16,000 ಕೆರೆಗಳು ಇವೆ. ಬಾಕಿ ಉಳಿಕೆಯಾಗಿರತಕ್ಕ 22,000 ಕೆರೆಗಳ ಬಗ್ಗೆ ಸರ್ಕಾರದವರು ತೀವ್ರ ಪರಿಶೀಲನೆ ಮಾಡುತ್ತಾ ಇದ್ದಾರೆ. ಕೋಟ್ಯಾಂತರ ರೂಪಾಯಿ ಹಣ ಸಹ ಬೇಕಾಗಿದೆ. ಪಿ. ಡಬ್ಲ್ಯು. ಡಿ. ಅವರ ವಶಕ್ಕೆ ಎಷ್ಟು ಕೆರೆಗಳನ್ನು ತೆಗೆದುಕೊಳ್ಳಬಹುದು ಎಂಬುದನ್ನು ತೀವ್ರ ಆಲೋಚನೆ ಮಾಡಿ ಒಂದು ನಿರ್ಧಾರಕ್ಕೆ ಬರಲಾಗುತ್ತದೆ ಎಂದು ಹೇಳಿದೆ.

Sri H. R. KESHAVAMURTHY.—What are the departments that are responsible for the maintenance of the tanks ?

ಶ್ರೀ ಆಲೂರು ಹನುಮಂತಪ್ಪ.—ಪಿ. ಡಬ್ಲ್ಯು. ಡಿ. ಅವರ ಕಂಟ್ರೋಲಿಗೆ ಬಂದಿರತಕ್ಕ ಕೆರೆಗಳನ್ನು ಅವರು ಮೇನ್‌ಟೇನ್ ಮಾಡುತ್ತಾರೆ. ಬಾಕೀದನ್ನು ರೈತರೇ ಮೇನ್‌ಟೇನ್ ಮಾಡಿಕೊಳ್ಳಬೇಕಾಗುತ್ತದೆ, ರಿಪೇರಿ ಕೆಲಸ ಪಿ. ಡಬ್ಲ್ಯು. ಡಿ. ಅವರು ಮಾಡುತ್ತಾ ಇದ್ದಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಚಿಕ್ಕಮಗಳೂರು ತಾಲ್ಲೂಕು ಬೆಳವಾಡಿ ಕೆರೆಯನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಪ್ರಯತ್ನ ಮಾಡುತ್ತೇವೆ.

Posting of Doctor to the Government Hospital at Gurmitkal.

*Q.—1036. Sri VIDYADHAR GURUJI SAYANNA (Gurmitkal).—

Will the Government be pleased to state:—

(a) since how long the post of doctor at the Government Hospital, Gurmitkal is vacant ;

(b) the reasons for the delay in posting the doctor to the said hospital so far ;

(c) whether they are aware that the stock of medicines in the above hospital has been sealed up ?

A.—Sri K. NAGAPPA ALVA (Minister for Health).—

(a) From 7-5-1963.

(b) Paucity of doctors.

(c) No.

ಶ್ರೀ ವಿದ್ಯಾಧರ ಗುರೂಜಿ ಸಾಯಣ್ಣ.—ಗುರುಮಿಟ್‌ಕಲ್ ಸರ್ಕಾರಿ ಆಸ್ಪತ್ರೆಯಲ್ಲಿ ಸುಮಾರು 5 ತಿಂಗಳಿನಿಂದ ಡಾಕ್ಟರು ಇಲ್ಲ ಎಂದು ಹೇಳಿದ್ದೀರಿ; ಇದಕ್ಕೆ ಕಾರಣ ಏನೆಂದರೆ ವೈದ್ಯರ ಕೊರತೆ ಎಂದು ಹೇಳಿದ್ದೀರಿ; ಹಾಗಿದ್ದ ಮೇಲೆ ಮೊದಲು ಅಲ್ಲಿದ್ದ ಡಾಕ್ಟರನ್ನು ಅಲ್ಲಿಂದ ಬೇರೆ ಕಡೆಗೆ ಕಳುಹಿಸಲಿಕ್ಕೆ ಕಾರಣವೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಆ ಡಾಕ್ಟರು ಅಲ್ಲಿ ಮೂರು ವರ್ಷಕ್ಕೂ ಮೇಲ್ಪಟ್ಟು ಇದ್ದರು ಅಲ್ಲದೇ ಟ್ರಾನ್ಸ್‌ಫರ್ ಬೇಕೆಂದು ಕೇಳಿಕೊಂಡಿದ್ದರು; ಆದ್ದರಿಂದ ಟ್ರಾನ್ಸ್‌ಫರ್ ಮಾಡಿದೆ. ಡಿಫೆನ್ಸ್ ಸರ್ವೀಸಿಗೂ ಕೂಡ ಅವರು ಸೇರಿದ್ದಾರೆ.

ಶ್ರೀ ವಿದ್ಯಾಧರ ಗುರೂಜಿ ಸಾಯಣ್ಣ.—ಅಲ್ಲಿ ಸರಿಯಾದ ವ್ಯವಸ್ಥೆ ಮಾಡಲಾರದೇ ಎಂದರೆ ಬೇರೆ ಡಾಕ್ಟರ ವ್ಯವಸ್ಥೆ ಮಾಡದೇ ಇದ್ದ ಡಾಕ್ಟರನ್ನು ಅಲ್ಲಿಂದ ಕಳುಹಿಸುವುದು ಸರ್ಕಾರದ ಅಯೋಗ್ಯತನ ಸೂಚಿಸುವುದಿಲ್ಲವೇ ?

Mr. SPEAKER.—I know that the hon. member did not mean anything. If he wants let him put a question in Hindi.

ಶ್ರೀ ಕೆ. ನಾಗಪ್ಪ ಆಳ್ವ.—ಅಯೋಗ್ಯತನ ಎಂಬ ಶಬ್ದಕ್ಕೆ ಉತ್ತರ ಕೊಡಬೇಕೇ, ಸ್ವಾಮಿ ? (ಸಭೆಯಲ್ಲಿ ನಗು).

Mr. SPEAKER.—He did not mean anything at all. I can see from that.

ಶ್ರೀ ಕೆ. ನಾಗಪ್ಪ ಆಳ್ವ.—ಆ ರೀತಿ ಏನೂ ಇಲ್ಲ, ಅದಕ್ಕೆ ಬೇಕಾದ ಏರ್ಪಾಡುಗಳನ್ನೂ ಕೂಡ ಮಾಡಿದ್ದೇವೆ.

Sri J. P. SARWESH.—What is the daily average number of patients who are treated in this hospital ?

Sri K. NAGAPPA ALVA.—That information is not here.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಇಂಥಾ ಪ್ರಶ್ನೆಗೆ ಯಾವಾಗಲೂ ಈ ಸಭೆಯಲ್ಲಿ ವೈದ್ಯರ ಕೊರತೆ ಇದೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ಈ ಅಭಾವವನ್ನು ನೀಗಿಸುವುದಕ್ಕೆ ಬೇರೆ ರಾಜ್ಯದಿಂದ ಏನಾದರೂ ಡಾಕ್ಟರುಗಳನ್ನು ಕರೆಸತಕ್ಕ ವ್ಯವಸ್ಥೆ ಮಾಡಿದ್ದೀರಾ ಸ್ವಾಮಿ ?

Mr. SPEAKER.—Does the member propose to import doctors from outside the State to make up the shortage ? That is the question.

ಶ್ರೀ ಕೆ. ನಾಗಪ್ಪ ಆಳ್ವ.—ಪಬ್ಲಿಕ್ ಸರ್ವೀಸ್ ಕಮಿಷನ್ ಮುಖಾಂತರ ರೆಕ್ರೂಟ್‌ಮೆಂಟ್ ಮಾಡಿಕೊಳ್ಳತಕ್ಕ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಸಿದ್ದಯ್ಯ ಕಾಶಿಮಠ.—ಗುರುಮಿಟ್‌ಕಲ್ 12-13 ಸಾವಿರ ಜನಸಂಖ್ಯೆ ಇರತಕ್ಕ ಟೌನು ಎರಡು ತಿಂಗಳ ಹಿಂದೆ ಅಲ್ಲಿ ಕಾಲರಾ ಸೋಂಕು ತಗಲಿ ಇನಾಕ್ಯುಲೇಷನ್ ಮಾಡಲು ಡಾಕ್ಟರು ಇಲ್ಲದೇ ತೊಂದರೆಯಾದುದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಅದಕ್ಕೆ ಬೇಕಾದ ವ್ಯವಸ್ಥೆ ಮಾಡಿ ತಕ್ಕ ಕಾರ್ಯ ಕ್ರಮ ತೆಗೆದುಕೊಂಡಿದ್ದೆವು ?

ಶ್ರೀಮತಿ ಯಶೋಧರ ದಾಸಪ್ಪ.—ಅದು ಹರಿಜನರಲ್ಲಿ ಮಾತ್ರವೇ ಅಲ್ಲ ಎಲ್ಲಾ ಜಾತಿಯಲ್ಲೂ ಇದೆ. ಹಿಂದುಳಿದ ಜನಾಂಗದಲ್ಲಿ ಎಡಗೈ ಬಲಗೈ ಎಂದರೆ ಹೆಚ್ಚಿನ ಅವಿದ್ಯಾವಂತರು, ತಿಳಿವಳಿಕೆ ಇಲ್ಲದವರು ಯಾರಿದ್ದಾರೆ ಅವರನ್ನು ಎಕ್ಸ್‌ಪ್ಲಾಯಿಟ್ ಮಾಡುವುದಕ್ಕೆ ಮುಖಂಡರು ಆ ರೀತಿ ಹೇಳುತ್ತಾರೆಯೇ ಹೊರತು ಬಡತನದಲ್ಲಿರುವ ಆ ಜನರಲ್ಲಿ ಈ ತರಹ ಎಂದಿಗೂ ಭೇದ ಇಲ್ಲವೇ ಇಲ್ಲ. ಅದನ್ನು ಬೇರೆಯವರು ಎತ್ತಿ ಹೇಳುತ್ತಾ ಇದ್ದಾರೆ ವಿಪರೀತ ಮಾಡುತ್ತಾ ಇದ್ದಾರೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಆದ್ದರಿಂದ ಹಳ್ಳಿಗಾಡಿನಲ್ಲಿ ಹೋದರೆ ಈ ಎಡಗೈ ಬಲಗೈ ಎಂಬುದು ಇಲ್ಲವೇ ಇಲ್ಲ. ಹಾಗೆ ನೋಡುವುದಾದರೆ ಎಲ್ಲಾ ಜಾತಿಯಲ್ಲೂ ಒಂದಲ್ಲ ಒಂದು ಭೇದ ಇದ್ದೇ ಇರುತ್ತದೆ. ಆದ್ದರಿಂದ ಇದು ಕೇವಲ ಹರಿಜನರಲ್ಲಿದೆ ಎಂದು ಹೇಳುವುದು ಬೇಡ ಎಂಬುದನ್ನು ಸದಸ್ಯರೆಲ್ಲರೂ ಮನಗಾಣುತ್ತಾರೆ ಎಂಬ ನಂಬಿಕೆ ನನಗಿದೆ. ಎಡಗೈ ಬಲಗೈ ಎಂಬುದು ಹಾಸ್ಟೆಲ್‌ನಲ್ಲಿ ಅಡಿಗೆ ಮಾಡುವ ವಿಷಯವಾಗಿ ಬರುತ್ತಾ ಇದೆ. ಇದನ್ನು ಬಹಳ ಧೈರ್ಯದಿಂದ ಸುಧಾರಣೆ ಮಾಡಬೇಕಾಗಿ ಬರುತ್ತದೆ. ಈ ದಿನ ಜನರಲ್ ಹಾಸ್ಟೆಲುಗಳನ್ನು ಹೆಚ್ಚಾಗಿ ತೆರೆದು ಅಸ್ಪೃಶ್ಯತೆಯ ನಿವಾರಣೆ ಮಾಡಬೇಕೆನ್ನುವುದೇ ಸರ್ಕಾರದ ಸಂಪೂರ್ಣ ಉದ್ದೇಶವಾಗಿರುವುದರಿಂದ ಅತಿ ಜಾಗ್ರತೆಯಾಗಿ ಈ ಒಂದು ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಅಷ್ಟು ಮಾತ್ರ ಈ ದಿವಸ ಹೇಳಬಯಸುತ್ತೇನೆ. ಮಂಗಳೂರು, ಶಿವಮೊಗ್ಗ ಮತ್ತು ಕಾರವಾರದಲ್ಲಿ ಹಾಸ್ಟೆಲುಗಳಿಲ್ಲ, ಅಲ್ಲೂ ಕೂಡ ಹಾಸ್ಟೆಲುಗಳನ್ನು ಏರ್ಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನೂ ಅನೇಕ ವಿಷಯಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ ಇನ್ನೊಂದು ಸಮಯ ಉಪಯೋಗಿಸಿಕೊಂಡು ಸೂಕ್ತವಾದ ಉತ್ತರವನ್ನು ಅಂಕಿ ಅಂಶಗಳ ಮುಖೇನ ಎಷ್ಟು ಹಾಸ್ಟೆಲುಗಳು ಇವೆ, ಸೋಷಿಯಲ್ ವೆಲ್‌ಫೇರ್ ಸೆಂಟರ್ಸ್ ಯಾವ ಯಾವ ಜನಾಂಗಕ್ಕೆ ಎಷ್ಟೆಷ್ಟು ಇವೆ, ಎಲ್ಲೆಲ್ಲಿವೆ ಯಾವ ರೀತಿ ಸಾರ್ವಜನಿಕ ಮುಖಂಡರಾಗಲಿ ಬೇರೆಯವರಾಗಲಿ ಅವರವರಿಗೆ ಇಷ್ಟ ಬಂದ ಹಾಗೆ ಶಿಫಾರಸು ಮಾಡಿಕೊಂಡು ಹಣ ತೆಗೆದುಕೊಂಡಿದ್ದಾರೆ—ಎಲ್ಲರೂ ಆ ರೀತಿ ಮಾಡಿದ್ದಾರೆ ಎಂದು ಹೇಳುವುದಿಲ್ಲ ಆ ರೀತಿ ಹೇಳುವುದನ್ನು ಸರ್ಕಾರ ಒಪ್ಪುವುದಿಲ್ಲ—ಅಂತೂ ಸಾರ್ವಜನಿಕರ ಉಪಯೋಗಕ್ಕಾಗಿ ಕೊಟ್ಟ ಹಣ ಯಾವ ರೀತಿ ದುರುಪಯೋಗವಾಗಿದೆ ಯಾವ ರೀತಿ ದುರುಪಯೋಗವಾದಂತೆ ನೋಡಿಕೊಳ್ಳಬೇಕು

ಅದಕ್ಕೆ ಚಿಕಿತ್ಸೆ ಕಂಡುಹಿಡಿಯಬೇಕೆಂಬುದನ್ನು ಹೇಳುತ್ತೇನೆ. ಸರ್ಕಾರದವರು ಕೊಟ್ಟ ಹಣ ಸಹಾಯವೇನಿದೆ ಅದು ಖರ್ಚಾಗಬೇಕಾದರೆ ಸ್ವಲ್ಪ ನಿಧಾನವಾಗುತ್ತದೆ. ಇಲ್ಲಿ ಪ್ರತಿಯೊಂದೂ ಅ ಇಂದ ಹಿಡಿದು ಕ್ಷ ವರೆಗೂ ಯಾವ ಸುಧಾರಣೆಯಾಗಿದೆ ಎಂಬ ಅಂಶ ಇದೆ, ಆ ಪ್ರಕಾರ ಸುಧಾರಣೆಯಾಗುತ್ತಾ ಇದೆ ಕೊಟ್ಟ ಹಣ ಸದುಪಯೋಗವಾಗುತ್ತಾ ಇದೆ. ಜಿಲ್ಲಾವಾರು ಹಣ ಕೊಟ್ಟಿದ್ದೇವೆ. ವಿಶೇಷವಾಗಿ ಮುಖಂಡರು ತಮ್ಮ ಭಾಗದಲ್ಲಿ ನಿಜವಾಗಿಯೂ ಯಾರು ಹಿಂದೆ ಬಿದ್ದಿದ್ದಾರೆ ಎಂಬುದನ್ನು ನೋಡಿ ಯಾರು ದೀನರು, ದಿಕ್ಕಿಲ್ಲದವರು ಇದ್ದಾರೆ ಎಂಬುದನ್ನು ವಿಚಾರಮಾಡಿ ನೋಡಿ ಅವರಿಗೆ ಸಲ್ಲಬೇಕಾದ ಹಣವನ್ನು ಹಂಚಬೇಕು ಆ ರೀತಿ ಮಾಡದಿದ್ದರೆ ಸರಿಯಾಗುವುದಿಲ್ಲ. ಅದ್ದರಿಂದ ಬಹಳ ದೈನ್ಯವಾಗಿ ಹೇಳುತ್ತಾ ಇದ್ದೇನೆ ಇದು ನಿಜವಾಗಿಯೂ ನಡೆಯುತ್ತಿರುವ ವಿಚಾರ, ನಿಜನುಡಿಯುವವನು ಲೋಕ ವಿರೋಧಿ ಎಂದು ಹೇಳುತ್ತಾರೆ ಅದು ಸತ್ಯವಾದ ವಿಷಯ, ಯಾವ ಭಯ ಭೀತಿ ಇಲ್ಲದೇ ಏನು ಬೇಕಾದರೂ ನಮ್ಮ ಇಲಾಖೆಯ ಮೂಲಕ ನಿರ್ವಂಚನೆಯಿಂದ ಮಾಡಿಸಿಕೊಳ್ಳಬೇಕಾದ ಕೆಲಸಗಳನ್ನು ಮಾಡಿಸಿಕೊಳ್ಳಲು ಯಾವ ಕಾಲದಲ್ಲಿ ಬೇಕಾದರೂ ಬರಬಹುದು ಅವನ್ನು ಕಾರ್ಯಗತ ಮಾಡಿಕೊಡಲು ನಾನು ಸದಾ ಸಿದ್ಧವಾಗಿದ್ದೇನೆ ಎಂದು ಹೇಳಿ ಶ್ರೀಮಾನ್ ಸರ್ವೇಶ್ ಅವರು ತಂದಿರತಕ್ಕ ನಿರ್ಣಯ ಎಷ್ಟರವರೆಗೆ ಕಾರ್ಯಗತ ಮಾಡಬಹುದೋ ಅಷ್ಟರವರೆಗೆ ಕಾರ್ಯಗತ ಮಾಡುತ್ತೇವೆ ಎಂಬ ಭರವಸೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† Sri M. V. RAMA RAO.—I will merely say a few sentences with respect to the central point of the resolution which is under discussion. The pith and substance of the resolution before the House urges that the Government should make provision to give effect to what is said to be the Supreme Court's verdict in regard to the reservation of posts to be filled by promotion in the public services. All that I would wish to say to respect of that point is that when the Supreme Court dealt with an appeal from an order made by the High Court of Madras upon a Writ Petition filed by some officer in the Railways challenging the action taken by the Railway authorities, the Supreme Court found that upon a proper interpretation of Article 16 (4) read with arclicle 335, it could not be said that it was not within the authority of the State to make a reasonable provision within the meaning of Article 16 (4)—read, as I said, with Artile 335—for enabling the Scheduled Castes, Scheduled Tribes and other Backward Classes, to secure adequate representation in the public services. Actually what they have said is that is permissible for the State to make such reservations keeping in mind the requirements of Article 335. Therefore it connot be suggested that the Supreme Court have required the Union or State Governments to make provision for such reservation as a constitutional duty cast. The Union Government have been considering whether in view of the opinion expressed by the Supreme Court in the matter, steps should be taken and if so, what steps should be taken to ensure that such reservation should be made consistently with the requirements of Article 335. Actually, the Supreme Court dealt with the question of filling posts by promotion by selecting a person, otherwise suitable for filling that post. Therefore the question of reservation of certain percentage of pos's to be filled by ipromotion, rrespective of other considerations, would not be in public interest.

Sri G. V. GOWDA.—Does the Minister justify that it is not in public interest?

Sri K. H. RANGANATH.—It is only promotion to Selection Posts, not all posts

Sri M. V. RAMA RAO.—I am not importing any of my arguments into it. I am merely making a ireference to what the Supreme Court itself said. The Supreme Court observed:

"Under the construction by which the word 'posts' includes selection posts, the use of the word, 'posts' is not superflous but serves a very important purpose. It shows that reservation can be made not only in regard to appointments which are initial appointments but also in regard to selection posts which may fall to be filled by employees after their employment. Therfore, we are disposed to take the view that the power of reservation which is conferred on the State under Art. 16 (4) can be exercised by the State in a proper case not only by providing for reservation of appointments but also by providnig for reservation of selection posts. This construction, in our opinion, would serve to give effect to the intention of the constitution-makers to make adequate safeguard for the advancement of backward classes and to secure for their adequate representation in the services. Our conclusion therefore, is that the High Court was in error in holding that the impugned circulars do not fall within Art. 16 (4).

It is true that in providing for the reservation of appointments or posts under Art. 16 (4), the State has to take into consideration the claims of the members of the backward classes, consistently with the maintenance of the efficiency of administration. It must not be forgotten that the efficiency of administration is of such paramount importance that it would be unwise and impromissible to make any reservation at the cost of efficiency of administration. That undoubtedly is the effect of Art. 335. Reservation of appointments or posts may theoretically and conceivably mean some impairment of efficiency; but the risk involved in sacrificing efficiency of administration must always be borne in mind when any State sets about making a provision for reservation of appointment or posts. It is also true that the reservation which can be made under Art. 16 (4) is intended merely to give adequate representation to backward communities. It cannot be used for creating monopolies or for unduly or illegitimately disturbing the legitimate interests of other employees. In exercising the powers under Art. 16 (4), the problem of adequate representation of the backward class of citizens must be fairly and objectively considered and an attempt must always be made to strike a reasonable balance between the claims of backward classes and claims of other employees, as well as the important consideration of the efficiency of administration; but in the present case, as we have already seen, the challenge to the validity of the impugned circulars is based on the assumption that the said circulars are outside Art. 16 (4) because the posts referred to in the said Article are posts outside the cadre or services and in any case, do not include selection post."

This is what the Supreme Court have said, and the main point is that it is permissible for the State Government or the Union Government consistently with the requirements of Art. 335 and every other

consideration which would be relevant to the question of recruitment to public services and promotion of those who are already in the public services, to make provision for providing, firstly selection post and secondly reserving the requisite, proportion out of those selection posts for backward classes and scheduled castes and scheduled tribes, the other things being equal. This question, subsequent to the decision of the Supreme Court, is engaging the current attention of the Union Government and the Union Government have not taken a decision yet and the matter has been under consideration at other levels where State Governments have to consider these problems, which are of common interest to more than one State ; and as the matter is engaging the attention of Government and the question of feasibility of making this reservation would impair efficiency in the public services has to be examined thoroughly before any decision is taken, I would suggest, that since the resolution has been debated and has covered a very wide range, the mover may not press, but may withdraw it.

Sri G. V. GOWDA.—Government should assure, Sir. No time limit is given and no assurance is given ; so it is indefinite.

Mr. DEPUTY SPEAKER.—Who is the mover in this case ?

Sri G. V. GOWDA.—I am arguing against the mover to withdraw the resolution.

11-30 A.M.

ಶ್ರೀ ಕೆ. ಎಚ್. ರಂಗನಾಥ್.—ಈ ಸೋಷಿಯಲ್ ವೆಲ್ಫೇರ್ ಆಫೀಸಿನಲ್ಲಿ ನೌಕರರಾಗಿರತಕ್ಕವರ ಅಪಾಯಿಂಟ್‌ಮೆಂಟಿನ ಬಗ್ಗೆ ಅದು ಸರಿಯಾಗಿಲ್ಲ. ತಪ್ಪಾಗಿದೆ ಎನ್ನತಕ್ಕ ವಿಚಾರದಲ್ಲಿ ಈಗ ಮೈಸೂರು ಹೈಕೋರ್ಟಿನ ಮುಂದೆ ಒಂದು ರಿಟ್ ಕೇಸು ಬಿದ್ದು ಅದು ಪೆಂಡಿಗ್‌ನಲ್ಲಿದೆ. ಹಾಗೆ ಅಲ್ಲಿ ಒಂದು ಕೇಸು ಪೆಂಡಿಂಗ್‌ನಲ್ಲಿರುವಾಗ, ಸರ್ಕಾರದವರು ಇಷ್ಟು ಆತುರಾತುರವಾಗಿ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಲು ಕಾರಣವೇನಿತ್ತು ?

ಶ್ರೀಮತಿ ಯಶೋಧರ ದಾಸಪ್ಪ.—ಈಗ ಅವರ ಅಪಾಯಿಂಟ್‌ಮೆಂಟ್ ವಿಚಾರದಲ್ಲಿ ಅದು ಕ್ರಮವಾಗಿಲ್ಲ ಎಂದು ಹೇಳಿ ಅಕೌಂಟೆಂಟ್ ಜನರಲ್ಲರು ಆ ಬಗ್ಗೆ ಖರ್ಚು ಮಾಡಲು ಹಣವನ್ನು ಕೊಡುತ್ತಿಲ್ಲ. ಇತ್ತಲಾಗಿ ಪಿ. ಎಸ್. ಸಿ. ಅವರೂ ಕೂಡ ಇದನ್ನು ಒಪ್ಪುತ್ತಿಲ್ಲ. ಹೀಗಾಗಿ ಅವರು ಸಂಬಳವಿಲ್ಲದೆ ಬಹಳ ತೊಂದರೆ ಪಡುತ್ತಿದ್ದರು. ಆದುದರಿಂದ ನಾವು ಲಾ ಇಲಾಖೆಯವರಿಂದ ಈ ವಿಚಾರವನ್ನು ಪರಿಶೀಲನೆ ಮಾಡಿಸಿ ಈ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

Sri G. DUGGAPPA (Holalkere).—Sir, the Hon'ble Minister while replying did not make any sassurance as to whether the Government would take any decision. He imply said that it is under consideration of the Government. Of course it has been under the active consideration of the Government, but I take this opportunity to bring to the notice of the Government, that Government, if I say, should not only recognised the merit of the candidates but also the qualifications and other considerations of some very efficient young officials belonging to scheduled caste, who are working in some Department. In fact, they have been denied the opportunity of discharging their duties for which they were sent abroad. There are certain glaring instances where Government have failed. Therefore, I request the Government to take note of these things, and when things are to be given equal preference, I do not say

(SRI G. DUGGAPPA)

that the efficiency should be impaired. If there are candidates who are duly qualified or better qualified in the field in a particular Department, they should be recognised and given due share. I hope the Government will take into consideration these things and do justice, and also take a decision early about this resolution.

ಶ್ರೀಮತಿ ಯಶೋಧರ ದಾಸಪ್ಪ.—ನಾನಾಗಲೇ ಹೇಳಿದ್ದೇನೆ. ಈ 17 ಜನ ಅವರ ತಪ್ಪಿಗಾಗಿ ಅವರು ಅನುಭವಿಸುತ್ತಿಲ್ಲ. ಅವರನ್ನು ತೆಗೆದುಕೊಂಡ ಕ್ರಮ ಸರಿಯಾಗಿಲ್ಲದೆ ಇದ್ದು, ಅವರು ಸರಿಯಾಗಿ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲದೆ ಅವರಿಗೆ ಸಂಬಳವಿಲ್ಲದೆ ತೊಂದರೆಯಾಗಿತ್ತು. ಇವರಿಗೆ ವ್ಯವಸ್ಥಿತ ರೀತಿಯಲ್ಲಿ, ಅವರ ಯೋಗ್ಯತಾನುಸಾರ ಕೆಲಸಕಾರ್ಯಗಳನ್ನು ಕೊಡುವುದು ಸರ್ಕಾರದ ಗಮನದಲ್ಲಿ ಇವತ್ತೂ ಇದೆ. ಅದರಲ್ಲಿ ಅನುಮಾನವಿಲ್ಲ. ಒಂದೇ ಇಲಾಖೆಯಲ್ಲಿ ಇಷ್ಟು ಜನ ಇರತಕ್ಕದ್ದು ನ್ಯಾಯವಲ್ಲ. ಈಗ ಶೇಕಡ 15+3=18% ಪ್ರಕಾರ ಲೆಕ್ಕಾಚಾರಕ್ಕೆ ತಕ್ಕಂತೆ ಕೆಲಸಮಾಡಬೇಕು.

†Sri J. P. SARWESH.—Sir, I thank all the Hon'ble Members who have supported this resolution. All of them have agreed that it is a very important resolution and that scheduled caste should get due representation.

Sir, the Supreme Court gave two decisions in Scheduled castes. The first decision said that reservations in the promotions should be made to scheduled castes, scheduled tribes and backward classes and the second decision said that the places which are not filled should not be kept vacant indefinitely. This Second resolution, the Government is very strictly following. And it is not applying the first resolution. My request is, it is a national problem and it is not only the scheduled castes who are interested in this, the whole nation should be interested in it, and particularly those who are highly qualified. It is their duty. If they are suffering, it is due to the culture and religion and education, we have and it is their duty; and realising this thing, I request the Government that they should treat this issue as a national issue and bestow the needed attention on this subject and take early decision. As the Government has assured that they have not yet taken a decision, I seek the leave of the House to withdraw my resolution.

The resolution was, by leave of the House, withdrawn.

NON-OFFICIAL RESOLUTION

Re: Replacement of the present Single Party Government by a Popular Non-party Government.

ಶ್ರೀ ವೀರಭದ್ರಪ್ಪ ಈರಪ್ಪ (ಎಲ್ಬುರ್ಗ).—ಮಹಾಸ್ವಾಮಿ, ಇಂದಿನ ತುರ್ತುಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ರಾಜ್ಯದಲ್ಲಿ ಈಗಿರುವ ಏಕ ಪಕ್ಷೀಯ ಸರಕಾರವನ್ನು ಬದಲಾಯಿಸಿ ಪಕ್ಷಾತೀತವಾದ ಜನತಾ ರಾಜ್ಯವನ್ನು ಸ್ಥಾಪಿಸಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ.

Mr. DEPUTY SPEAKER.—Resolution moved :

"That this Assembly is of opinion that keeping in view the present national emergency, the present single party Government of the State be replaced by popular non-party Government."

ಶ್ರೀ ವೀರಭದ್ರಪ್ಪ ಈರಪ್ಪ.—ಮಾನ್ಯ ಸಭಾಪತಿಗಳೇ, ಈ ಸಭೆಯ ಮುಂದೆ ನಾನು ತಂದಿರುವ ಈ ಠರಾವಿನ ಬಗ್ಗೆ ಕೆಲವೊಂದು ಮಾತುಗಳನ್ನೂ ಅರಿಕೆಮಾಡಿಕೊಳ್ಳಬೇಕೆಂದಿದ್ದೇನೆ.

ಮಹಾಸ್ವಾಮಿ, ಈ ದೇಶ ಬಹು ವಿಸ್ತಾರವಾದುದೂ ಅನೇಕ ರಾಜಕೀಯ ಪಕ್ಷಗಳಿಂದ ಕೂಡಿದ್ದೂ ಆಗಿದೆ. ದೇಶದಲ್ಲಿ ಈಗ ಅಧಿಕಾರದಲ್ಲಿರತಕ್ಕ ರಾಜಕೀಯ ಪಕ್ಷದಲ್ಲಿಯೂ ಕೂಡ ಅನೇಕ ಭಿನ್ನಾಭಿಪ್ರಾಯಗಳು ತಲೆದೋರಿವೆ. ಆ ಪಕ್ಷದಲ್ಲಿ ಅಧಿಕಾರಲಾಲಸೆ ಹೆಚ್ಚಾಗುತ್ತಿದೆ. ಈ ಆಡಳಿತ ಪಕ್ಷದಲ್ಲಿ ಅನೇಕ ಜನ ಸ್ವಾರ್ಥಿಗಳೂ, ಸಮಯ ಸಾಧಕರೂ ಸೇರಿಕೊಂಡು ಅದನ್ನು ಶಿಥಿಲಗೊಳಿಸುತ್ತಿದ್ದಾರೆ. ಅದರಲ್ಲಿ ಲಂಚಕೋರತನ ಮತ್ತು ಸ್ವಾರ್ಥಲಾಲಸೆ ಹೆಚ್ಚಾಗಿ ಆಡಳಿತದಲ್ಲಿ ವಶೀಲಿಬಾಜಿಯೂ ಹೆಚ್ಚಾಗಲಿಕ್ಕೆ ಹತ್ತಿದೆ. ಹಿಂದೆ ಸ್ವಾತಂತ್ರ್ಯ ಹೋರಾಟ ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಪ್ರಾರಂಭವಾಗಿ ಜನರ ಬಲಿದಾನ ಮಾಡತಕ್ಕ ಪ್ರಸಂಗ ಬಂತು. ದೇಶದಲ್ಲಿ ಈ ಹೋರಾಟಕ್ಕೆ ಕರೆ ಇತ್ತಾಗ ಮಹಾತ್ಮಾಜಿಯವರು ಜನತೆಯಲ್ಲಿರುವ ಅಜ್ಞಾನತನ ಬಡತನ, ದಾರಿದ್ರ್ಯ—ಇವುಗಳನ್ನು ನಿವಾರಣೆಮಾಡತಕ್ಕ ಒಂದು ಆಶ್ವಾಸನೆಯನ್ನು ಕೊಟ್ಟು ಜನತೆಯನ್ನು ಹೋರಾಟಕ್ಕೆ ಅನುಗೊಳಿಸಿದರು. ಆದರೆ ಈಗ ಆಡಳಿತದಲ್ಲಿರುವ ಪಕ್ಷ ಆ ಕೆಲಸ ಮಾಡುವುದರಲ್ಲಿ ವಿಫಲಗೊಂಡಿದೆ.

ಮಹಾಸ್ವಾಮಿ, ಈಗಿರುವ ಏಕಪಕ್ಷೀಯ ಸರ್ಕಾರದ ಬದಲಾಗಿ ಈ ನಮ್ಮ ಘನಸಭೆಗೆ ಹೊಣೆಗಾರಿಕೆಯುಳ್ಳಂಥ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲಿಕ್ಕೆ, ಪಕ್ಷಾತೀತ ಸರ್ಕಾರವನ್ನು ಸ್ಥಾಪಿಸಲಿಕ್ಕೆ ನಾನು ಈ ಸಭೆಯನ್ನು ಬೇಡಿಕೊಳ್ಳುತ್ತೇನೆ. ಏಕೆಂದರೆ ಹಿಂದೆ, ಕಾಂಗ್ರೆಸ್ ಸಂಸ್ಥೆಯ ಕೀರ್ತಿ ಮತ್ತು ಪ್ರಭಾವದಿಂದ ಅನೇಕ ಸ್ವಾರ್ಥಿಗಳು ಅದರಿಂದ ದುರ್ಲಾಭ ಪಡೆಯಬಹುದೆಂಬ ದೂರದೃಷ್ಟಿಯಿಂದ ಮಹಾತ್ಮಾಜಿಯವರು ಒಂದು ಸಂದರ್ಭದಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ವಿಸರ್ಜಿಸಿ ಲೋಕ ಸೇವಾಸಂಘ ಎಂಬ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಜನತೆಗೆ ಆದೇಶ ಕೊಟ್ಟಿದ್ದರು. ಆದರೆ ನಮ್ಮ ಮಾನ್ಯ ನಾಯಕರು ಅದನ್ನು ಮಾನ್ಯ ಮಾಡದೆ ಕಾಂಗ್ರೆಸ್ ಸಂಸ್ಥೆಯನ್ನು ಮುಂದುವರಿಸಿಕೊಂಡುಬಂದು ಇವತ್ತು ಆಡಳಿತದಲ್ಲಿ ಇಷ್ಟೊಂದು ಅನಾಹುತಗಳಾಗಲಿಕ್ಕೆ ಹತ್ತಿವೆ. ಈ ಅನಾಹುತಗಳನ್ನು ತಪ್ಪಿಸಲೇಬೇಕು. ಈಗ ನಮ್ಮ ದೇಶದಮೇಲೆ ಚೀಣಾದೇಶದವರು ಆಕ್ರಮಣ ನಡೆಸಲಿಕ್ಕೆ ಹತ್ತಿದ್ದಾರೆ ಮತ್ತು ಪಾಕಿಸ್ತಾನದವರು ಕೂಡ ಅವರೊಂದಿಗೆ ಸ್ನೇಹ ಬೆಳಸಿ ನಮ್ಮ ಮೇಲೆ ಮಾತ್ಸರ್ಯವನ್ನೂ ಮಾಡಲಿಕ್ಕೆ ಹತ್ತಿದ್ದಾರೆ. ಕಾರಣ ಈ ತುರ್ತುಪರಿಸ್ಥಿತಿಯಲ್ಲಿ ನಮ್ಮ ಈ ರಾಜ್ಯದಲ್ಲಿ ಪಕ್ಷಾತೀತವಾದ ಸರ್ಕಾರವನ್ನೂ ಸ್ಥಾಪಿಸಿ ನಾವು ನಮ್ಮ ಸಂಘಟನೆಯನ್ನೂ ಹೆಚ್ಚಿಸಬೇಕೆಂದು ತಮ್ಮೆಲ್ಲರನ್ನೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇಂಥ ಒಂದು ನಿರ್ಣಯವನ್ನು ತರುವುದಕ್ಕೆ ನನಗೆ ಅವಕಾಶ ಸಿಕ್ಕಿದ್ದು ಪಕ್ಷಾತೀತವಾದ ಸರ್ಕಾರ ಈ ರಾಜ್ಯದಲ್ಲಿ ಪ್ರಪ್ರಥಮವಾಗಿ ಬರಬಹುದೆಂಬ ಆಶೆ ಇದೆ. ಈ ಬೇಡಿಕೆಗೆ ನನ್ನಿಂದ ಒಂದು ಸೇವೆ ಸಲ್ಲಿಸುವಂಥ ನಾಲ್ಕು ಮಾತುಗಳನ್ನು ಹೇಳಿದ್ದೇನೆ. ಅಂಥ ಪ್ರಸಂಗ ಬಂದು ಆ ರೀತಿಯಾದರೆ ಅದು ನನ್ನ ಸೇವೆ ಎಂದು ತಿಳಿದುಕೊಂಡಿದ್ದೇವೆ. ಈ ಠರಾವಿಗೆ ತಾವೆಲ್ಲರೂ ಈ ಘನಸಭೆಯ ಒಪ್ಪಿಗೆಯನ್ನು ನೀಡಿ ಸಹಕರಿಸಬೇಕೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri L. B. BIRJE (Khanapur).—(Marathi).

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮಾನ್ ವೀರಭದ್ರಪ್ಪ ಈರಪ್ಪನವರು ಮಂಡಿಸಿರುವ ನಿರ್ಣಯದಲ್ಲಿ ಹೇಳಿರುವ ಹಾಗೆ ಈ ತುರ್ತುಪರಿಸ್ಥಿತಿಯಲ್ಲಿ ನಮ್ಮ ದೇಶದಲ್ಲಿ ಏಕಪಕ್ಷೀಯ ಸರಕಾರವಿರದೆ ಪಾಪ್ಯುಲರ್ ನಾನ್ ಪಾರ್ಟಿ ಸರಕಾರ ಪ್ರಾರಂಭಿಸಬೇಕು ಎಂಬುದನ್ನು ನಾನು ಸಮರ್ಥಿಸುತ್ತೇನೆ. ಎಲ್ಲಾ ಪಕ್ಷಗಳನ್ನೊಳಗೊಂಡ ಸರಕಾರವನ್ನು ಈ ತುರ್ತುಪರಿಸ್ಥಿತಿಯಲ್ಲಿ ಮಾಡಿದರೆ ದೇಶದಲ್ಲಿ ಇರತಕ್ಕಂಥ ಅಸಮಾನತೆ, ಭಿನ್ನಾಭಿಪ್ರಾಯ ಹೋಗಿ ದೇಶಪ್ರೇಮದಿಂದ ಒಗ್ಗಟ್ಟು ಜಾಸ್ತಿಯಾಗುತ್ತದೆ ಎಂಬ ಅಭಿಪ್ರಾಯದ ಮೂಲಕ ಈ ನಿರ್ಣಯವನ್ನು ಅವರು ತಂದಿದ್ದಾರೆ. ದೇಶದಲ್ಲಿ ಇಂದು ಭಿನ್ನಾಭಿಪ್ರಾಯ ಬೆಳೆದಿದೆ. ಸರ್ವ

(ಶ್ರೀ ಕೆ. ಲಕ್ಕಪ್ಪ)

ಸಮಾನತೆ ಬೆಳೆದು ಬರಲಿಲ್ಲ. ಸ್ವಾತಂತ್ರ್ಯ ಹೋರಾಟಕಾಲದಲ್ಲಿ ಇದ್ದಂಥ ಅಭಿಮಾನ, ದೇಶಪ್ರೇಮ, ದೇಶ ಭಕ್ತಿ ಇಂದು ಮಾಯವಾಗಿವೆ. ಇದಕ್ಕೆ ಕಾರಣವೇನೆಂದರೆ ಕಾಂಗ್ರೆಸ್ಸು ಏಕಪಕ್ಷೀಯ ಸರಕಾರ ರಚಿಸಿ, ಸ್ವಾತಂತ್ರ್ಯ ಹೋರಾಟದಲ್ಲಿಯ ದೇಶಪ್ರೇಮ ಮರೆತು ಭಿನ್ನಾಭಿಪ್ರಾಯ ಭಾವನೆ ಉಂಟುಮಾಡಿದೆ. ಇದು ಬಹಳ ವಿಷಾದಕರ. ಈ ತುರ್ತುಪರಿಸ್ಥಿತಿಯಲ್ಲಿ ಜನರ ದೇಶಭಕ್ತಿ ಜಾಗ್ರತಗೊಳಿಸಿ ಸ್ವಾತಂತ್ರ್ಯ ರಕ್ಷಣೆ ಮಾಡಬೇಕಾದುದು ಅತ್ಯಗತ್ಯ. ಭಿನ್ನಾಭಿಪ್ರಾಯವನ್ನು ಬದಿಗೊತ್ತಿ ಇಂದು ಒಗ್ಗಟ್ಟು ಬೆಳೆಯಬೇಕು. ಚೈನಾ ದೇಶದ ಆಕ್ರಮಣದಿಂದ ಇಂದು ಪ್ರಜಾಪ್ರಭುತ್ವಕ್ಕೆ ಧಕ್ಕೆ ಬಂದಿದೆ. ದೇಶ ರಕ್ಷಣೆಗಾಗಿ ಏಕ ಕಂಠದಿಂದ ಬರುವ ಕೂಗು ಕೇಳಬೇಕಾಗಿದೆ. ಸರಕಾರದ ಭ್ರಷ್ಟಾಚಾರದಿಂದ, ಏಕ ಪಕ್ಷೀಯ ಸ್ವೇಚ್ಛಾ ಆಡಳಿತದಿಂದ, ಅಧಿಕಾರದ ಆಶೆಯಿಂದ ನಿಮ್ಮ ದೇಶ ಭಕ್ತಿ ಇಂದು ಕುಂಠಿತವಾಗಿದೆ. ಇಂಥ ಹಲವಾರು ನಿದರ್ಶನ ನೋಡಬಹುದು. ಮಂತ್ರಿಯಾಗಬೇಕೆಂಬ ಅಧಿಕಾರ ದಾಹ ಹೆಚ್ಚಾಗಿದೆ. ಜತ್ತಿಯವರ ಮಂತ್ರಿಮಂಡಳದ ಮೇಲೆ 29 ಆರೋಪಗಳು ಬಂದಿದ್ದವು. ಇಂದು ದೇಶದಲ್ಲಿ ಅಭಿಪ್ರಾಯ ಹೇಗಿದೆ ಎಂದರೆ ಎಲ್ಲಾ ಪಕ್ಷಗಳನ್ನೂ ಸೇರಿಸಿದಂಥ ಸರಕಾರ ಇರಬೇಕು. ದೇಶದಲ್ಲಿ ಒಗ್ಗಟ್ಟು ಮೂಡಿಸತಕ್ಕಂಥ ಮಂತ್ರಿಮಂಡಳ ಇರಬೇಕು ಎಂದಿದೆ. ಈಗಿನ ಸರಕಾರ ಇವತ್ತು ಒಗ್ಗಟ್ಟು ತರಲು ವಿಫಲವಾಗಿದೆ. ನಾವು ರಾಜ್ಯಾಂಗಕ್ಕೆ ವಿರೋಧವಾಗಿ ಹೋಗುವುದಿಲ್ಲ. ಜಾತ್ಯತೀತ ರಾಷ್ಟ್ರ ನಿರ್ಮಾಣ ಮಾಡಬೇಕೆಂದು ಹೇಳಿದೆ. ಆದರೆ ಎಲ್ಲಿ ನೋಡಿದರೂ ಜಾತಿಯ ಆಧಾರದ ಮೇಲೆ ಮಂತ್ರಿಮಂಡಳ ಸಹ ರಚಿಸಿದ್ದೀರಿ. ಸರಕಾರದ ಮೇಲೆ ಎರಡು ಮೂರು ಸಲ ಅವಿಶ್ವಾಸ ನಿರ್ಣಯ ತರಲಾಗಿದೆ. ನಿಮಗೆ ಸುಭದ್ರ ಸರಕಾರ ಸ್ಥಾಪನೆ ಮಾಡಲು ಆಗಿಲ್ಲ. ದೇಶಕ್ಕೆ ಗಂಡಾಂತರ ಬಂದ ಸಮಯದಲ್ಲಿ ಡಿಫೆನ್ಸ್ ಬಗ್ಗೆ ಸರಿಯಾಗಿ ವ್ಯವಸ್ಥೆ ಮಾಡಬೇಕಾಗುತ್ತದೆ. ಉಳಿದ ಕಡೆ ಮಿತವ್ಯಯ ಮಾಡಬೇಕಾಗುತ್ತದೆ. ಮಿತವ್ಯಯ ಕೂಗು ಕೇಳಬರುತ್ತಿದೆ. ಆ ಕೂಗಿನ ಬಗ್ಗೆ ಸರಕಾರ ಏನುಮಾಡಿದ್ದಾರೆ? ಜನತೆಯ ಅಭಿಪ್ರಾಯಕ್ಕೆ ಪ್ರಜಾಪ್ರಭುತ್ವಕ್ಕೆ ಮನ್ನಣೆ ಕೊಟ್ಟಿದ್ದಾರೆಯೇ? ಸ್ವಾಮಿ, ನಮ್ಮ ನೆರೆ ರಾಜ್ಯವಾದ ಮದ್ರಾಸು ವಿಸ್ತಾರದಲ್ಲಿ ಮೈಸೂರಿಗಿಂತ ಸ್ವಲ್ಪ ಕಡಿಮೆಯಾಗಿದ್ದರೂ ಎಂಟುಜನ ಮಂತ್ರಿಗಳು ಆಡಳಿತ ಭದ್ರವಾಗಿ ಮಾಡತಕ್ಕಂಥಾದ್ದನ್ನು ನಾವು ನೋಡುತ್ತೇವೆ?

ಅದೇ ಮೈಸೂರು ಸಂಸ್ಥಾನದಲ್ಲಿ 27 ಜನ ಮಂತ್ರಿಗಳನ್ನು ಇಟ್ಟುಕೊಂಡು ಈ ತುರ್ತು ಪರಿಸ್ಥಿತಿಯಲ್ಲಿ ವಿಪರೀತ ಹಣ ಖರ್ಚು ಮಾಡುತ್ತಾ ಇರತಕ್ಕ ಸರ್ಕಾರವನ್ನು ಈ ದಿವಸ ನೋಡುತ್ತಾ ಇದ್ದೇವೆ. ಈ ವಿಚಾರದಲ್ಲಿ ಜನತೆಯಲ್ಲಿ ಭಿನ್ನಾಭಿಪ್ರಾಯ ಬರುವುದಕ್ಕೆ ಕಾರಣ ಇದೆ. ಏಕೆಂದರೆ ಇವತ್ತಿನ ದಿವಸ ದೇಶದಲ್ಲಿ ಒಗ್ಗಟ್ಟನ್ನು ಮೂಡಿಸಬೇಕು, ಆರ್ಥಿಕ ಭದ್ರತೆಯನ್ನು ಬೆಳೆಸಿಕೊಳ್ಳಬೇಕು, ದೇಶದಲ್ಲಿ ಹಾಕಿರತಕ್ಕ ಎಲ್ಲಾ ಯೋಜನೆಗಳನ್ನೂ ಯಶಸ್ವಿಯಾಗಿ ಮಾಡಬೇಕಾಗಿದೆ. ಮತ್ತು ಎಲ್ಲ ವಿಧದಲ್ಲೂ ನಮ್ಮ ದೇಶದಲ್ಲಿ ದೇಶದ ರಕ್ಷಣೆಗೆ ಮಿತವ್ಯಯ ಜಾಸ್ತಿಯಾಗಬೇಕಾಗಿದೆ. ಹಾಗಿರುವಾಗ ಕಾಂಗ್ರೆಸ್‌ನವರು ಯಾವ ಕಾಮರಾಜ್ ಪ್ಲಾನ್ ಅಂತ ಹೇಳಿ ಏನೊಂದು ಸೂತ್ರವನ್ನು ಹೇಳಿದ್ದರೋ ಅದಕ್ಕೂ ಕೂಡ ಮನ್ನಣೆ ಕೊಡದೇ ಇರತಕ್ಕ ನಿದರ್ಶನಗಳು ಅನೇಕ ಪ್ರದೇಶಗಳಲ್ಲಿ ನಡೆಯುತ್ತಾ ಇವೆ. ಮೈಸೂರು ದೇಶದಲ್ಲೂ ಕೂಡ ಅದಕ್ಕೆ ಮನ್ನಣೆ ಇದೆಯೋ ಇಲ್ಲವೋ ಎಂಬ ಅನುಮಾನ ಪ್ರಜೆಗಳಲ್ಲಿ ಬಂದಿವೆ. ಯಾವ ಮಹಾತ್ಮಾ ಗಾಂಧಿಜಿಯವರು ದೇಶಕ್ಕೆ ಬಲಿದಾನವನ್ನು ಮಾಡಿ ಎಲ್ಲಾ ಜನರನ್ನೂ ಪ್ರತಿಬಿಂಬಿಸತಕ್ಕ ಕಾಂಗ್ರೆಸ್ ಸಂಸ್ಥೆಯನ್ನು ಕಟ್ಟಿ ಸ್ವಾತಂತ್ರ್ಯವನ್ನು ಸಂಪಾದನೆ ಮಾಡಲಿಕ್ಕೆ ಆ ಸಂಸ್ಥೆಯ ಮೂಲಕ ಹೋರಾಟ ಮಾಡಿದರೋ ಆ ಕಾಂಗ್ರೆಸ್‌ಸಂಸ್ಥೆ ಇವತ್ತಿನ ದಿವಸ ಸರ್ಕಾರವನ್ನು ನಡೆಸುತ್ತಿರುವಾಗ ಮಹಾತ್ಮ ಗಾಂಧಿಜಿಯವರು ಸ್ವಾತಂತ್ರ ಬರುವುದಕ್ಕೆ ಮುನ್ನ ಏನು ಹೇಳಿದರು ಎಂಬುದನ್ನು ಮರೆತು ಇವತ್ತಿನ ದಿವಸ ಕಾಂಗ್ರೆಸ್‌ಸಂಸ್ಥೆ ಆಡಳಿತ ಪಕ್ಷವಾಗಿ ಅಥವಾ ರಾಜಕೀಯ ಪಕ್ಷವಾಗಿ ಅಧಿಕಾರ ನಡೆಸುತ್ತಿದೆ. ಮಹಾತ್ಮಾ ಗಾಂಧಿಜಿಯವರು ಏನು ಹೇಳಿದರು ಎಂಬುದನ್ನು ಈ ದಿನ ನಾನು ಅವರ ಗಮನಕ್ಕೆ ತರುವುದಾದರೆ ಕಾಂಗ್ರೆಸ್‌ಸಂಸ್ಥೆ ಆಡಳಿತ ಪಕ್ಷವಾಗಿ ಪರಿವರ್ತನೆಗೊಂಡರೆ ಅದರಿಂದ ದೇಶಕ್ಕೆ ಬಹಳ ಅನ್ಯಾಯವಾಗುತ್ತದೆ. ನಾವು ಸಂಪಾದನೆ ಮಾಡಿದ ಸ್ವಾತಂತ್ರ್ಯದ ಫಲಕ್ಕೂ ಕೂಡ ಚ್ಯುತಿ ಬರುತ್ತದೆ ಎಂದು ಹೇಳಿದ್ದರು. ಆದರೂ ಕೂಡ ಯಾವ ದೇಶದ ಸ್ವಾತಂತ್ರ್ಯಕ್ಕೆ ಪ್ರಾಣತ್ಯಾಗ ಮಾಡಿದರೋ ಅಂತಹ ವ್ಯಕ್ತಿಗಳ ಗೌರವಕ್ಕೂ ಕೂಡ ಚ್ಯುತಿ ತಂದಿರತಕ್ಕ ನಿದರ್ಶನಗಳು ಈ ದಿವಸ ನಮ್ಮ ಮುಂದೆ ಇವೆ. ಟ್ರಿವ್ಯಾಂಗ್ರಂನಲ್ಲಿ ಗಾಂಧಿ ಜಯಂತಿ ಆಚರಣೆ ಮಾಡುತ್ತಿದ್ದಾಗ ಮಹಾತ್ಮಾ ಗಾಂಧಿಜಿಯವರ ಹೆಸರಿನಲ್ಲಿ, ನೆಹರೂರವರ ಹೆಸರಿನಲ್ಲಿ ಚುನಾವಣೆಯ ಕಾಲದಲ್ಲಿ ಓಟು ಪಡೆದ ಒಬ್ಬ ಮಂತ್ರಿಯೂ ಕೂಡ ಅಲ್ಲಿ ಪ್ರವೇಶ ಮಾಡಿರಲಿಲ್ಲ ಎಂಬುದನ್ನು ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದ್ದೇವೆ. ಹೀಗೆ ಏಕ ಪಕ್ಷೀಯ ಸರ್ಕಾರ ಇರುವಾಗಲೂ ಕೂಡ ಅವರವರಲ್ಲೇ ಭಿನ್ನಾಭಿಪ್ರಾಯಗಳು ಹೇಗೆ ಬಂದಿವೆ ಎಂಬುದನ್ನು ಹೇಳುತ್ತ ಇದ್ದೇನೆ. ದೇಶದಲ್ಲಿ ಬಹಳ ಅಗೌರವವನ್ನು ತರುತ್ತಾ ಇರತಕ್ಕ ಸ್ಥಿತಿಯನ್ನು ನಿಜವಾಗಿಯೂ

ಇವತ್ತಿನ ದಿವಸ ನೋಡುತ್ತಾ ಇದ್ದೇವೆ. ತುಮಕೂರಿನಲ್ಲೂ ಕೂಡ ಗಾಂಧಿ ಜಯಂತಿ ನಡೆದಂಥ ವೇಳೆಯಲ್ಲಿ ನಾನೂ ಕೂಡ ಅಲ್ಲಿ ಇದ್ದೆ. ಆದರೆ ನಾನು ಭಾಷಣ ಮಾಡಲಿಲ್ಲ ಅಲ್ಲಿ ನೋಡಿದ್ದರಲ್ಲಿ ಚುನಾವಣೆಯ ಕಾಲದಲ್ಲಿ ಗಾಂಧಿ ಟೋಪಿ ಹಾಕಿಕೊಂಡು ನಾವು ಸ್ವರಾಜ್ಯ ತಂದಿದ್ದೇವೆ, ಸ್ವಾತಂತ್ರ್ಯ ಸಂಪಾದನೆ ಮಾಡಿಕೊಟ್ಟಿದ್ದೇವೆ ಇದು ನಮ್ಮ ಸರ್ಕಾರ ಎಂದು ಓಟು ಹಾಕಿಸಿಕೊಂಡ ಜನ ಒಬ್ಬರೂ ಕೂಡ ಗಾಂಧೀ ಟೋಪಿ ಹಾಕಿಕೊಂಡು ಆ ದಿವಸ ಬಂದಿರಲಿಲ್ಲ. ಈ ದಿವಸ ಜನಗಳಲ್ಲಿ ತಮ್ಮ ಬಗ್ಗೆ ಏಕೆ ಅವಿಶ್ವಾಸ ಬಂದಿದೆ, ದೇಶದಲ್ಲಿ ಜನಗಳು ಏಕೆ ಜ್ಯಾತ್ಯಾತೀತ, ಪಕ್ಷಾತೀತ ಸರ್ಕಾರ ರಚನೆ ಮಾಡಬೇಕೆಂದು ಹೇಳುತ್ತಾರೆ ಎಂದರೆ ಈ ಸರ್ಕಾರ ಜನತೆಯ ಆಶೆ ಆಕಾಂಕ್ಷೆಗಳನ್ನು ಈಡೇರಿಸಲಿಕ್ಕೆ ವಿಫಲವಾಗಿದೆ. ಜನತೆಗೆ ಹೇಳಿದಂಥ ಎಲ್ಲಾ ಸಮಾನತೆಯನ್ನೂ ಇವತ್ತಿನ ದಿವಸ ಜನತೆಗೆ ಈಡೇರಿಸಿ ಕೊಡಲು ನಿಶ್ಶಕ್ತರಾಗಿದ್ದಾರೆ. ಇವತ್ತಿನ ದಿವಸ ಜನತೆಗೆ ಅನ್ನ, ವಸತಿ ಕೊಡುವುದಕ್ಕೆ ವಿಫಲರಾಗಿದ್ದಾರೆ. ದೇಶದಲ್ಲಿ ಇವತ್ತಿನ ದಿವಸ ಆರ್ಥಿಕ ಸಮಾನತೆಯನ್ನು ಸಾಧಿಸಲು ವಿಫಲರಾಗಿದ್ದಾರೆ. ಇವತ್ತಿನ ದಿವಸ ಅನೇಕ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ವಿಫಲರಾಗಿದ್ದಾರೆ. ಇವತ್ತಿನ ದಿವಸ ದೇಶದಲ್ಲಿ ಅತಿ ಮುಖ್ಯವಾಗಿ ಬೇಕಾಗಿರತಕ್ಕಂಥ ಆಹಾರ ಸಾಮಗ್ರಿಗಳನ್ನು ಒದಗಿಸಿ ದೇಶ ರಕ್ಷಣೆ ಮಾಡತಕ್ಕ ಕಾರ್ಯದಲ್ಲಿ ವಿಫಲರಾಗಿದ್ದಾರೆ. ದೇಶದ ಜನರ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತಿಲ್ಲ. ಸಮಾಜವಾದಿ ಮಾದರಿಯ ಸಮಾಜ ನಿರ್ಮಾಣ ಮಾಡುತ್ತೇವೆ ಎಂದು ಹೇಳಿ ಅಧಿಕಾರ ದಾಹವನ್ನು ಇಟ್ಟುಕೊಂಡು ಸರ್ಕಾರ ನಡೆಸುತ್ತಾ ಇದ್ದೀರಿ. ದೇಶದ ತುರ್ತು ಪರಿಸ್ಥಿತಿ ಯಲ್ಲಿ, ಗಂಡಾಂತರ ಪರಿಸ್ಥಿತಿಯಲ್ಲಿ ನಿಮಗೆ ಬುದ್ಧಿ ಬರುವವರೆಗೂ..........

Mr. DEPUTY SPEAKER:—It is better the Hon'ble Member reserves his comments on those points for some other occasion. This resolution pertains to the State Government. Let him come to the point.

ಶ್ರೀ ಕೆ. ಲಕ್ಕಪ್ಪ.—ಈ ಸರ್ಕಾರದವರಿಗೆ ನಿರುದ್ಯೋಗ್ಯ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗಿಲ್ಲ. ತುರ್ತು ಪರಿಸ್ಥಿತಿಯಲ್ಲಿ ಅನೇಕ ಹೊಸ - ಹೊಸ ಕಾನೂನುಗಳನ್ನು ಜಾರಿಗೆ ತಂದಿದ್ದೀರಿ; ಕೇಂದ್ರ ಸರ್ಕಾರದವರು ತಂದಿರುವ ಕಂಪಲ್‌ಸರಿ ಡೆಪಾಜಿಟ್ಸ್ ಸ್ಕೀಂ, ಬಂಗಾರದ ನಿಯಂತ್ರಣದ ಪರಿಣಾಮವಾಗಿ ಉಂಟಾಗಿರತಕ್ಕ ಅಕ್ಕಸಾಲಿಗರ ನಿರುದ್ಯೋಗ ಇವುಗಳೆಲ್ಲಾ ದೇಶದಲ್ಲಿ ಬಹಳ ಭಿನ್ನಾಭಿಪ್ರಾಯಗಳು ಇವೆ. ದೇಶದ ಒಗ್ಗಟ್ಟಿಗೆ ಈ ದಿವಸ ಧಕ್ಕೆ ಬಂದಿದೆ. ಇಂಥಾ ಕಾನೂನುಗಳಿಂದ ಜನತೆಯಲ್ಲಿ ಇವತ್ತಿನ ದಿವಸ ಕ್ಷೋಭೆಯನ್ನುಂಟುಮಾಡಿದ್ದೀರಿ, ಇವತ್ತಿನ ದಿವಸ ನೋಡುತ್ತಾ ಇದ್ದೇವೆ ಜನರು ಅನೇಕ ಸತ್ಯಾಗ್ರಹಗಳನ್ನು ಮಾಡುತ್ತಾ ಇದ್ದಾರೆ. ಚಳುವಳಿಗಳನ್ನು ನಡೆಸುತ್ತಾ ಇದ್ದಾರೆ, ಅಕ್ಕಸಾಲಿಗರ ಅನ್ನ ಸಮಸ್ಯೆಯನ್ನು ಬಗೆಹರಿಸಿಲ್ಲ, ಕಂದಾಯಗಳನ್ನು, ತೆರಿಗೆಗಳನ್ನ ಜಾಸ್ತಿ ಮಾಡುತ್ತಾ ಇದ್ದೀರಿ ಎಂದು ಹೇಳಿ ಈ ದಿವಸ ಚಳುವಳಿ ಮಾಡುತ್ತಾ ಇದ್ದಾರೆ. ಇಂಥಾ ಭಿನ್ನಾಭಿಪ್ರಾಯ ಬರತಕ್ಕ ಅನೇಕ ಸಮಸ್ಯೆಗಳನ್ನು ತಾವು ದೇಶದಲ್ಲಿ ಒಡ್ಡುತ್ತಾ ಇದ್ದೀರಿ. ಈ ತುರ್ತು ಪರಿಸ್ಥಿತಿಯಲ್ಲಿ ನಿಜವಾಗಿಯೂ ಕೂಡ ಈ ಸರ್ಕಾರ ಮುಂದು ವರಿಯುವುದಾದರೆ ದೇಶಕ್ಕೆ ಬಹಳ ಅಪಾಯ ಮತ್ತು ಕ್ಷೋಭೆ. ಚೈನಾ ದೇಶದವರ ಧಾಳಿಯನ್ನು ಇವತ್ತು ಎದುರಿಸಬೇಕಾದರೆ ಎಲ್ಲಾ ಜನರೂ ಕೂಡ ತಮ್ಮ ತಮ್ಮಲ್ಲಿರತಕ್ಕ ಭಿನ್ನಾಭಿಪ್ರಾಯಗಳನ್ನು ಮರೆತು ಒಗ್ಗಟ್ಟಿನಿಂದ ಕೆಲಸ ಮಾಡತಕ್ಕ ಒಂದು ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡಿದರೆ ನಮ್ಮ ದೇಶಕ್ಕೆ ಬಂದಿರತಕ್ಕ ಗಂಡಾಂತರ ಪರಿಸ್ಥಿತಿಯನ್ನು ಖಂಡಿತವಾಗಿಯೂ ಎದುರಿಸಬಹುದು. ಏಕಪಕ್ಷೀಯ ಸರ್ಕಾರವಿದ್ದರೆ, ಒಂದು ಗುಂಪಿಗೆ ಅಥವಾ ಒಂದು ಕೋಮಿಗೆ ಅಥವಾ ತಮ್ಮ ಬೆಂಬಲ ಗರಿಗೆ ಅಥವಾ ತಮ್ಮ ಹಿತರಕ್ಷಣೆ ಕಾಪಾಡತಕ್ಕ ಜನಗಳಿಗೆ ಮಾತ್ರ ಸಹಾಯವಾಗುತ್ತದೆ ಮತ್ತು ಅದರಿಂದ ದೇಶದಲ್ಲಿ ಭಿನ್ನಾಭಿಪ್ರಾಯ ಜಾಸ್ತಿಯಾಗುತ್ತದೆ. ಆದ್ದರಿಂದ ಈ ತುರ್ತು ಪರಿಸ್ಥಿತಿಯಲ್ಲಿ ಪಕ್ಷಾತೀತ ಸರ್ಕಾರ ಅಥವಾ ಎಲ್ಲಾ ಪಕ್ಷಗಳನ್ನೂ ಒಳಗೊಂಡಿರತಕ್ಕ ಒಂದು ಸರ್ಕಾರವನ್ನು ರಚನೆ ಮಾಡಿ ಒಗ್ಗಟ್ಟನ್ನು ಮೂಡಿಸಬೇಕು ಮತ್ತು ಸ್ವಾತಂತ್ರ್ಯ ರಕ್ಷಣೆ ಮಾಡಬೇಕು. ಆ ರೀತಿ ಮಾಡುವುದರಿಂದ ಮಾತ್ರ ಇವತ್ತಿನ ದಿವಸ ಚೈನಾ ದೇಶದವರನ್ನು ಓಡಿಸಿ ದೇಶ ಸಂರಕ್ಷಣೆಯನ್ನು ಮತ್ತು ದೇಶದಲ್ಲಿರತಕ್ಕ ಎಲ್ಲಾ ಸಮಸ್ಯೆಗಳನ್ನೂ, ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಹೇಳುತ್ತೇನೆ.

ಆದುದರಿಂದ ಈ ತುರ್ತು ಪರಿಸ್ಥಿತಿಯಲ್ಲಿ ಏಕಪಕ್ಷೀಯ ಸರ್ಕಾರ ಇರುವುದು ಸರಿಯಲ್ಲ, ಆದುದರಿಂದ ಈಗ ರಾಜ್ಯವಾಳುತ್ತಿರುವ ಕಾಂಗ್ರೆಸ್ ಪಕ್ಷ ಕೂಡಲೆ ರಾಜೀನಾಮೆ ಕೊಟ್ಟು ಈ ತುರ್ತು ಪರಿಸ್ಥಿತಿ ಮುಗಿಯುವವರೆಗೆ ಎಲ್ಲಾ ಪಕ್ಷಗಳಿಂದ ಕೂಡಿರತಕ್ಕ ಒಂದು ಜನತಾ ಸರ್ಕಾರವನ್ನು ಸ್ಥಾಪಿಸಬೇಕೆಂದೂ, ಹೀಗೆ ಮಾಡುವುದು ಒಳ್ಳೆಯದೆಂದೂ ಹೇಳುತ್ತೇನೆ. ಈ ನಿರ್ಣಯವನ್ನು ಸೂಚಕರು ಒಳ್ಳೆಯ ಸಮಯಕ್ಕೆ ಸರಿಯಾಗಿ ತಂದಿದ್ದಾರೆ. ಈ ನಿರ್ಣಯ ಸರ್ಕಾರಕ್ಕೆ ಒಂದು ಒಳ್ಳೆಯ ವಿವೇಕ ಹಾಗೂ ಬುದ್ಧಿಯನ್ನು ಹೇಳತಕ್ಕ ಮಾದರಿಯಲ್ಲಿದೆ.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಮಂತ್ರಿಗಳು).—ಯಾವ ಯಾವ ಪಕ್ಷಕ್ಕೆ ಎಷ್ಟೆಷ್ಟು ಕೋಟಾ ಇರಬೇಕೋ ಅದನ್ನೂ ತಿಳಿಸಿಬಿಡಿ.

ಶ್ರೀ ಕೆ. ಲಕ್ಕಪ್ಪ.—ಇಂತ ವಿಚಾರದಲ್ಲಿ ನಿಮ್ಮ ಪಕ್ಷ ಪ್ರಾವೀಣ್ಯತೆ ಪಡೆದಿದೆ. ದೇಶವನ್ನು ರಕ್ಷಣೆ ಮಾಡಬೇಕೆಂಬ ಅಭಿಪ್ರಾಯವೇ ನಿಮಗಿಲ್ಲ; ಅಂಥ ಅಭಿಮಾನವೂ ಇಲ್ಲ. ಈಗಲಾದರೂ ಆ ಮಹಾತ್ಮ ಗಾಂಧಿಯವರ ತತ್ವವನ್ನು ಅರಿತು ನಡೆಯಲು, ಆ ತತ್ವಗಳನ್ನು ಅನುಷ್ಠಾನಕ್ಕೆ ತರಲು ಈ ನಿರ್ಣಯ ತುಂಬಾ ಸಹಕಾರಿಯಾಗಿದೆ. ಆದುದರಿಂದ ನಾನು ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

† ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಸ್ವಾಮಿ ಇಲ್ಲಿಯವರೆಗೆ ಈ ನಿರ್ಣಯದ ಮೇಲೆ ಭಾಷಣ ಮಾಡಿದ ನನ್ನ ಮಾನ್ಯ ಸ್ನೇಹಿತರುಗಳ ವಿಚಾರದಲ್ಲಿ ನನಗೆ ಪೂರ್ಣ ಗೌರವವಿದೆ. ಆದರೆ ಈಗ ಅವರು ಭಾಷಣ ಮಾಡಿದ್ದನ್ನು ನೋಡಿದರೆ ಈ ಏಕಪಕ್ಷೀಯ ಸರ್ಕಾರ ಹಾಗೂ ಆಡಳಿತವಿರುವುದೇ ಲೇಸೇನೋ ಎಂದು ನನಗೆ ಅನ್ನಿಸುತ್ತಿದೆ. ಏಕೆಂದರೆ ಅವರು ಭಾಷಣ ಮಾಡುತ್ತಿದ್ದ ಕಾಲದಲ್ಲಿ ಅವರ ತತ್ವವನ್ನೇ ಬಿಟ್ಟು ಅವರು ಕೇವಲ ಒಂದು ವ್ಯವಹಾರಿಕ ದೃಷ್ಟಿಯಿಂದ ಮಾತನಾಡಿದ್ದಾರೆ. ಆದರೆ ಅವರು ಭಾಷಣ ಮಾಡುತ್ತ ಈ ದಿವಸ ಏನೋ ಆಗಿಬಿಟ್ಟಿದೆ ಎನ್ನತಕ್ಕ ಧಾಟಿಯಲ್ಲಿ ಮಾತನಾಡಿದ್ದಾರೆ. ಆದರೆ ಈ ದಿವಸ ದೇಶದಲ್ಲಿ ಅಂಥ ದುರ್ಘಟನೆಗಳೇನೂ ನಡೆದಿಲ್ಲ.

ಸ್ವಾಮಿ ನಾನು ಏಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ ಅವರು ಹೇಳುತ್ತಿರುವಂತೆ ಈ ದಿವಸ ಏಕಪಕ್ಷೀಯ ಸರ್ಕಾರ; ತನ್ನ ಆಡಳಿತದಲ್ಲಿ ವಿಫಲಗೊಂಡಿದ್ದರೆ ಮುಂದೇನು ಮಾಡಬೇಕು ಎಂಬುದು ಒಂದು ದೊಡ್ಡ ಪ್ರಶ್ನೆ. ಅವರು ಈ ಒಂದು ಕಾರಣವನ್ನು ನೆಪವಾಗಿಟ್ಟುಕೊಂಡು, ಈ ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿ ಈ ಸರ್ಕಾರಕ್ಕೆ ನೀವು ರಾಜೀನಾಮೆ ಕೊಡಿ, ಹೊಸದಾಗಿ ಜನರು ಯಾರನ್ನು ಆರಿಸುತ್ತಾರೋ ಅಂಥವರು ಮುಂದೆ ರಾಜ್ಯದ ಆಡಳಿತ ನಡೆಸಲಿ ಎಂಬುದನ್ನು ಹೇಳದೆ; ಅದನ್ನು ಕೈಬಿಟ್ಟು, ಈ ಒಂದು ಸಂದರ್ಭವನ್ನು ಇವರು ಉಪಯೋಗಿಸಿಕೊಂಡು ತಾವೂ ಮಂತ್ರಿಗಳಾಗಿ ಬಿಡೋಣ ಎಂಬ ಅಭಿಪ್ರಾಯವನ್ನಿಟ್ಟುಕೊಂಡು ಮಾತನಾಡಿದ್ದಾರೆ.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಅವರದು ಆ ಉದ್ದೇಶವಲ್ಲ. ಈ ಒಂದು ನೆಪದಲ್ಲಾದರೂ ನಿಮ್ಮ ಕಾಂಗ್ರೆಸ್ ಪಕ್ಷದಲ್ಲಿ ಅತೃಪ್ತರಾಗಿರತಕ್ಕವರನ್ನು ಮಂತ್ರಿ ಮಂಡಲಕ್ಕೆ ಸೇರಿಸಿಕೊಳ್ಳಲು ಈ ಒಂದು ಅವಕಾಶ ಬಹಳ ಅನುಕೂಲವಾಗಿದೆ ನಿಮಗೆ ಎಂದು ಅವರು ಹೇಳಿದ್ದು.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಸ್ವಾಮಿ ಹೀಗೆ ಒಂದು ತುರ್ತು ಪರಿಸ್ಥಿತಿ ಇದೆಯೆಂದು ಸರ್ಕಾರವನ್ನು ಟೀಕೆ ಮಾಡುತ್ತಾ ಹೋದರೆ.........

Mr. DEPUTY SPEAKER.—The House will now adjourn and meet at 12-30 P.M. on Monday.

The House adjourned at Thirty-five Minutes past Twelve of the Clock to meet again at Thirty Minutes past Twelve of the Clock on Monday, the 17th October 1963.

WD 1304—GPB—900—21-12-63.

MYSORE LEGISLATIVE ASSEMBLY

SIXTY-EIGHTH DAY.

Monday, 7th October 1963.

The House met in the Assembly Hall, Vidhana Soudha, Bangalore, at Thirty Minutes past Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

ಶ್ರೀ ಎ. ಜೆ. ಡೊಡ್ಡಮೇಟಿ.—ಈ ಪ್ರಶ್ನೆ (685) ಕೇಳುವುದಕ್ಕೆ ಪೂರ್ವದಲ್ಲಿ ಅಧ್ಯಕ್ಷರ ಗಮನವನ್ನು ಒಂದು ಮಾತಿಗೆ ಸೆಳೆಯುವುದೇನೆಂದರೆ, ಪ್ರಶ್ನೆ 19-3-1963ರಲ್ಲಿ ನಾನು ಕಳುಹಿಸಿದ್ದೆ. ಅದಕ್ಕೆ ಉತ್ತರ 4-10-1963ರಲ್ಲಿ ಬಂದಿದೆ. ಈ ಪ್ರಶ್ನೆ ಆದನಂತರ 1 ತಿಂಗಳು ಅಥವಾ ಒಂದೂವರೆ ತಿಂಗಳುವರೆಗೆ ಸೆಷನ್ ಚಾಲೂ ಇತ್ತು. ಹೋದ ತಿಂಗಳು ಬಹಳ ಭಾರಿ ಮಳೆಯಾಗಿ ಕಷ್ಟ ಒದಗಿದ್ದರಿಂದ ಈ ಪ್ರಶ್ನೆ ಕೇಳುವ ಅವಶ್ಯಕತೆ ಹೆಚ್ಚಾಗಿ ಕಾಣಲಿಲ್ಲ.

MR. SPEAKER.—So the Hon'ble Member does not want to put the question because he is complaining of delay. Of course, I have to say that there is some delay in it. I think the next two questions may also be clubbed togther.

ಶ್ರೀ ಎ. ಜೆ. ಡೊಡ್ಡಮೇಟಿ.—ಇನ್ನೊಂದು ಸಾರಿ ಈ ರೀತಿ ಆಗಬಾರದು.

Damages to Cotton and Wheat crops due to untimely heavy rains in the last week of February 1963 in Bijapur and Dharwar Districts.

*Q.—685. Sri A. J. DODDAMETI (Ron).—

Will the Government be pleased to state :—

(a) whether they are aware that there were untimely heavy rains in last week of February 1963 in the Bombay Karnatak areas of Bijapur and Dharwar Districts, resulting in damages to cotton and wheat crops ;

(b) if so, the taluks in which the damage is caused by these heavy rains ;

(c) the measures taken by Government to give relief to the distress-stricken ryots, who were already subject to such calamity at the end of the Hingari and commencement of Mungari crops ?

A.—Sri M. V. KRISHNAPPA (Minister for Revenue).—

(*a*) Yes. Rabi-Jawar and Cotton crops were affected to some extent.

(*b*)—

Dharwar District:	*Bijapur District*:
1 Ron	1 Indi.
2 Nargund	2 Bagewadi
3 Navalgund	3 Bijapur
4 Gadag (part)	4 Bagalkot
5 Kundagol	5 Mudhol
6 Dharwar (part)	6 Bilgi
7 Hubli (part)	7 Jamkhandi.
8 Shirahatti (part)	

(*c*) Relief will be granted according to the requirements of each area.

Damages to Cotton and Wheat crops due to untimely heavy rains in the last week of February 1963 in Dharwar District.

*Q.—686. Sri T. K. KAMBLI (Kundgol).—

Will the Government be pleased to state :—

(*a*) whether they are aware of the heavy loss caused to the ryots due to untimely heavy downpour in the last week of February 1963, resulting in failure of cotton, wheat and jawar crops in Dharwar District;

(*b*) the rainfall in the said district (talukwar information may be furnished);

(*c*) the rainfall in each of the villages of Kundgol Taluk, Dharwar District;

(*d*) whether they have taken any steps to assess the above loss;

(*e*) whether they would provide any relief to the ryots affected thereby?

A.—Sri M. V. KRISHNAPPA (Minister for Revenue).—

(*a*) Yes. Cotton crops were affected to some extent.

(*b*)

	Taluka			*Rainfall in M.M.*
1	Kundgol	...	...	84.0
2	Gadag	...	...	23.1
3	Nargund	...	...	40.4
4	Ron	...	...	28.1
5	Navalgund	...	...	16.5
6	Mundargi	...	...	4.3

7	Haveri	...	...	2.0
8	Dharwar	...	...	...
9	Hubli	...	...	...
10	Shirhatti	...	...	nil
11	Byadgi	...	...	nil
12	Ranibennur	...	...	There was no rainfall
13	Kalghatgi	...	...	
14	Hanagal	...	...	
15	Shiggaon	...	...	
16	Hirekerur	...	...	

(c) The average rainfall in all the North-West corner villages of the Taluk during the last week of February 1963 was more than 80 M.Ms.

(d) Yes.

(e) Relief would be granted according to the requirements of each area.

Damages to Cotton, Wheat and Jawar crops due to untimely heavy rains in the last week of February 1963 in Dharwar, Bijapur and Belgaum Districts.

**Q.*—714. SRI C. B. HULKOTI (Mundargi)

Will the Government be pleased to state:—

(a) whether it has come to the notice of the Government that there has been great damage to cotton, wheat and jawar crops in the Districts of Dharwar, Bijapur and Belgaum, on account of untimely and unwanted heavy rains in the last week of February 1963 ;

(b) whether they have taken any action to ascertain the extent of damage caused to the said crops ?

(c) whether they intend to take steps to relieve the distressed conditions of the poor ryots ?

A.—SRI M. V. KRISHNAPPA (Minister for Revenue).—

(a) Yes. Rabi-Jawar and Cotton crops were affected to some extent in Bijapur and Dharwar Districts respectively.

(b) The extent of damage caused is being ascertained by the Local Officers.

(c) Relief will be granted according to the requirements of each area.

ಶ್ರೀ ಟಿ. ಕೆ. ಕಂಬಳಿ.—ಧಾರವಾಡ ಜಿಲ್ಲೆಯಲ್ಲಿ ಕುಂದಗೋಳ ತಾಲ್ಲೂಕಿನಲ್ಲಿ ಹೆಚ್ಚಾಗಿ ಮಳೆಯಾಗಿರುವುದು. ಅಲ್ಲಿಗೆ ಹೆಚ್ಚಿಗೆ ಸೌಕರ್ಯ ಕೊಟ್ಟಿದ್ದೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ಫೆಬ್ರವರಿ ಕಡೆ ಭಾಗದಲ್ಲಿ ಅಕಾಲಿಕವಾಗಿ ಹೆಚ್ಚಾಗಿ ಮಳೆಯಾಗಿ, ಹತ್ತಿ ಬೆಳೆಗೆ ಮತ್ತು ಕೆಲವು ಭಾಗದಲ್ಲಿ ಜೋಳದ ಬೆಳೆಗೂ ನಷ್ಟವಾಯಿತು. ನಷ್ಟವಾದಮೇಲೆ ಅನೇಕ ತಾಲ್ಲೂಕುಗಳಿಗೆ ಹಾಫ್-ಸಸ್ಪೆನ್ಷನ್, ಕಂಪ್ಲೀಟ್-ಸಸ್ಪೆನ್ಷನ್ ಕಂದಾಯದ ವಿಷಯದಲ್ಲಿ ರಿಯಾಯಿತಿ ಕೊಟ್ಟಿದೆ. ಅದೂ ಅಲ್ಲದೆ ತಕಾವಿ ಲೋನ್ ಕೊಟ್ಟು, ರಿಲೀಫ್ ವರ್ಕ್ಸ್ ಪ್ರಾರಂಭ ಮಾಡಿದೆ.

ಶ್ರೀ ಟಿ. ಕೆ. ಕಂಬಳಿ.—ಹುಬ್ಬಳ್ಳಿ ಮತ್ತು ಶಿರಹಟ್ಟಿ ತಾಲ್ಲೂಕುಗಳಲ್ಲಿ ಮಳೆ ಇಲ್ಲ ಎಂದು ಹೇಳಿದ್ದೀರಿ. ಮಳೆ ಆಗಿಲ್ಲವೋ ಅಥವಾ ಮಾಹಿತಿ ದೊರೆತಿಲ್ಲವೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾಹಿತಿ ದೊರೆತಿದೆ. ಫೆಬ್ರವರಿಯಲ್ಲಿ ಅಲ್ಲಿ ಅಕಾಲಿಕ ಮಳೆ ಆಗಲಿಲ್ಲ. ಅಂಥ ಭಾರಿಮಳೆ ಬಂದಿಲ್ಲ, ಅಂದಮೇಲೆ ಎಲ್ಲೆಲ್ಲಿ ಮಾಹಿತಿ ಕೊಟ್ಟಿಲ್ಲವೋ, ಅಲ್ಲೆಲ್ಲಾ ಬಂದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಧಾರವಾಡ ಜಿಲ್ಲೆಯಲ್ಲಿರತಕ್ಕಂಥ ತಾಲ್ಲೂಕುಗಳಲ್ಲಿ ಕೆಲವುಕಡೆ ಮಳೆ ಹೆಚ್ಚಾಗಿ ಮತ್ತು ಇನ್ನು ಕೆಲವುಕಡೆ ಮಳೆ ಇಲ್ಲದೇನೆ, ಬರಗಾಲದ ಪರಿಸ್ಥಿತಿ ಬಂದಿರುವುದು ತಮ್ಮ ಅವಗಾಹನೆಗೆ ಬಂದಿದೆ. ಆ ಭಾಗದಲ್ಲಿ ಹೆಚ್ಚಿನ ತಕಾವಿ ಲೋನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೊಡುತ್ತಾ ಇದ್ದೇವೆ. ಪರಿಸ್ಥಿತಿಗೆ ಅನುಗುಣವಾಗಿ ಎಷ್ಟೆಷ್ಟು ಕೊಡಬೇಕು ಅನ್ನುವುದನ್ನು ಡೆಪ್ಯುಟಿ ಕಮಿಷನರು, ಡಿವಿಜನಲ್ ಕಮಿಷನರು, ಮತ್ತು ಲೋಕಲ್ ಆಫೀಸರುಗಳು ನಮಗೆ ತಿಳಿಸುತ್ತಾರೆ. ನಾವು ಹೆಚ್ಚಿಗೆ ಹಣ ಕೊಡುತ್ತಾ ಇದ್ದೇವೆ. ರಿಲೀಫ್ ವರ್ಕುಗಳಿಗಾಗಿ 17 ಲಕ್ಷ ರೂಪಾಯಿ ಡಿವಿಜನಲ್ ಕಮಿಷನರಿಗೆ ಕೊಟ್ಟಿದ್ದೇವೆ. ಹೆಚ್ಚು ಕೊಡಬೇಕೆಂದು ಅವರು ಕೇಳಿದ್ದಾರೆ, ಕೊಡುವುದರಲ್ಲಿ ಇದ್ದೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಧಾರವಾಡ ಪ್ರದೇಶದಲ್ಲಿ ಪರಿಹಾರವನ್ನು ಈಗಾಗಲೆ ಕೊಡಲಾಗಿದೆಯೆ ? ಮತ್ತು ಈಗ ಕೊಟ್ಟಿರುವ ಪರಿಹಾರದ ವಿವರವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೊಟ್ಟಿದೆ, ಕೊಡುತ್ತಾ ಇದ್ದೇವೆ, ತಮಗೆ ಗೊತ್ತಿರುವ ಪ್ರಕಾರ ತಮ್ಮ ತಾಲ್ಲೂಕಿನಲ್ಲಿ ಮತ್ತು ಬೇರೆ ಕಡೆ ಹೆಚ್ಚಾಗಿ ಲ್ಯಾಂಡ್ ರೆವಿನ್ಯೂ ರೆಮಿಷನ್ ಕೊಟ್ಟಿದೆ. ಬೇರೆ ತಾಲ್ಲೂಕುಗಳಿಗೂ ಕೊಡುತ್ತಾ ಇದ್ದೇವೆ. ತಕಾವಿ ಲೋನನ್ನು ಕೂಡ ಸಾಲದೆ ಇದ್ದರೆ ಕೇಳುತ್ತಾರೆ, ನಾವು ಕೊಡುತ್ತೇವೆ.

Sri C. S. HULKOTI.—What is the extent of damage caused ?

ಶ್ರೀ ಎಂ. ವಿ. ಕೃಷ್ಣಪ್ಪ.—ಹತ್ತಿ ಬೆಳೆಗೆ ಶೇಕಡ 30, ಗೋಧಿಗೆ ಶೇಕಡ 20—30 ಭಾಗ ನಷ್ಟವಾಗಿದೆ ಎಂದು ಹೇಳಿದ್ದಾರೆ.

Sri C. S. HULKOTI.—What is the amount ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಹೇಳಿದ್ದೇನೆ. 20 per cent of the crop failed. It is impossible to calculate. It is unnecessary also.

ಶ್ರೀ ಟಿ. ಕೆ. ಕಂಬಳಿ.—ಎಲ್ಲ ಗ್ರಾಮಗಳಲ್ಲಿಯೂ ಸರಾಸರಿ 80 ಮಿಲ್ಲಿಮೀಟರ್ ಮಳೆ ಬಿದ್ದಿದೆ ಎಂದು ಹೇಳಿದ್ದೀರಿ. ಎಲ್ಲ ಗ್ರಾಮಗಳು ಎಂದರೆ ಎಷ್ಟು ಗ್ರಾಮಗಳು ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ವಿವರಗಳು ಈಗ ನನ್ನಲ್ಲಿಲ್ಲ.

Houses constructed under Low Income Group Housing Scheme in Hubli-Dharwar Municipal Corporation area

*Q.—767. Sri F. S. TAVARE (Shiggaon).—

Will the Government be pleased to state :—

(a) the number of houses constructed by them under the Low Income Group Housing Scheme in Hubli-Dharwar Municipal Corporation area ;

(b) the amount provided towards this scheme and amount spent in respect of each house together with value of sites ;

(c) whether it is a fact that the Corporation has now decided to sell these houses ; and if so, whether it has got powers to do so ;

(d) whether it has come to the notice that misappropriation on a large scale has taken place in the said dealing ; and if so, whether it is not desirable to constitute a Committee in the interest of public service to go into the question ?

A.—Sri K. PUTTASWAMY (Minister for Municipal Administration).—

(*a*) Hubli ... 54 individual houses
79 tenements in 4 blocks

Dharwar ... 44 individual houses under Low Income Group Housing Scheme.

(*b*) Amount provided for—

Hubli Unit ... Rs. 6,59,900.
Dharwar " ... Rs. 4,54,801.

Amount spent on all buildings—

Hubli Unit ... Rs. 10,29,575.
Dharwar " ... Rs. 4,29,110.

(*c*) Yes.
It is in accordance with the terms and conditions of Low Income Group Housing Scheme.

(*d*) No.

ಶ್ರೀ ಎಫ್. ಎಸ್. ತಾವರೆ.—ಕಟ್ಟಿಸಲಾಗಿರುವ ಈ ಮನೆಗಳಲ್ಲಿ ಎಷ್ಟು ಮನೆಗಳು ಬಿದ್ದಿವೆ ಎಂದು ಸರ್ಕಾರಕ್ಕೆ ರಿಪೋರ್ಟ್ ಬಂದಿದೆ ?

ಶ್ರೀ ಕೆ. ಪುಟ್ಟಸ್ವಾಮಿ.—ಮನೆಗಳು ಬಿದ್ದಿವೆ ಎಂದು ರಿಪೋರ್ಟ್ ಬಂದಿಲ್ಲ.

ಶ್ರೀ ಎಫ್. ಎಸ್. ತಾವರೆ.—ಇವುಗಳಲ್ಲಿ ಏಳೆಂಟು ಕಟ್ಟಡಗಳು ಬೀಳಲಿಕ್ಕೆ ಹತ್ತಿವೆ ಎಂದು ಗೊತ್ತಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಕೆಲವು ರಿಪೇರಿ ಆಗಬೇಕು, ರಿಪೇರಿ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಗಾರೆಯಲ್ಲಿ ಸ್ವಲ್ಪ ಬಿರುಕು ಬಂದಿದೆ ಅದನ್ನು ಸರಿಮಾಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಬೀಳಲಿಕ್ಕೆ ಹತ್ತಿವೆ ಎಂದರೆ ಏನು ಹೇಳಲಿ.

ಶ್ರೀ ಎಫ್. ಎಸ್. ತಾವರೆ.—ಸರ್ಕಾರದವರು ಇವತ್ತಿನ ಮಾರ್ಕೆಟ್ ಬೆಲೆ ಕಟ್ಟಿದರೆ ಅದರ ಅರ್ಧದಷ್ಟು ಬೆಲೆಗೆ ಕೂಡ ಮಾರಾಟವಾಗುವುದಿಲ್ಲ ಎಂದು ಸರ್ಕಾರದ ಲಕ್ಷ್ಯಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಇಲ್ಲ. ಹಿಂದೆ ಕಟ್ಟಿದ ಮನೆಗಳಿಗೆ ಈಗ ಹೆಚ್ಚು ಬೆಲೆ ಬರಬೇಕಾಗುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಮನೆಗಳನ್ನು ಕಟ್ಟಿಸುವುದಕ್ಕೆ ಸರ್ಕಾರದವರು ಎಷ್ಟು ದುಡ್ಡು ಕೊಟ್ಟಿದ್ದಾರೆ ಮತ್ತು ಅದಕ್ಕೆ ಬಡ್ಡಿ ಎಷ್ಟು ಬರುತ್ತಿದೆ ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಹುಬ್ಬಳ್ಳಿಗೆ 5,05,000 ರೂಪಾಯಿಗಳನ್ನು ಕೊಟ್ಟಿದೆ. ಅದರಲ್ಲಿ 4,34,000 ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಧಾರವಾಡದವರು 3,36,000 ರೂಪಾಯಿಗಳ ಪೈಕಿ 2,25,000 ತೆಗೆದುಕೊಂಡಿದ್ದಾರೆ. ಬಡ್ಡಿಯ ವಿಚಾರವನ್ನು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಅವರಿಗೆ ಉಳಿದ ರೊಕ್ಕವನ್ನು ಯಾವಾಗ ಕೊಡುತ್ತೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಅವರು ತಮ್ಮ ಬಂಡವಾಳದಿಂದ ಖರ್ಚು ಮಾಡಿದ್ದಾರೆ.

ಶ್ರೀ ಎಫ್. ಎಸ್. ತಾವರೆ.—ಈಗಲಾದರೂ ಸರ್ಕಾರದವರು ತಜ್ಞರ ಸಮಿತಿಯನ್ನು ನೇಮಿಸಿ ಆ ಕಟ್ಟಡಗಳ ಬೆಲೆಯನ್ನು ನಿಗದಿ ಮಾಡುವ ಯೋಚನೆ ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಹಿಂದೆ ಹೀಗೆ ಅಪಾದನೆ ಬಂದದ್ದರಿಂದ ಒಂದು ಕಮಿಟಿಯನ್ನು ಕಾರ್ಪೊರೇಷನ್ನಿನವರು ನೇಮಕ ಮಾಡಿ, ಆ ಕಮಿಟಿಯವರು ಪರಿಶೀಲನೆ ಮಾಡಿ ಎಲ್ಲ ಸರಿಯಾಗಿದೆ ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ.

ಶ್ರೀ ಎಫ್. ಎಸ್. ತಾವರೆ.—ಅವರು ನೇಮಿಸಿದ್ದುದು ಕಾರ್ಪೊರೇಷನ್ ಸದಸ್ಯರನ್ನು ಒಳಗೊಂಡಂಥ ಸಮಿತಿ. ನಾನು ಕೇಳುವುದು ಇಂಜಿನಿಯರನ್ನೊಳಗೊಂಡ ಒಂದು ತಜ್ಞರ ಸಮಿತಿಯನ್ನು ನೇಮಿಸಿ ಆ ಕಟ್ಟಡಗಳ ಮಾರ್ಕೆಟ್ ಬೆಲೆ ಏನಾಗುತ್ತದೆ ಎನ್ನುವುದನ್ನು ಪರಿಶೀಲನೆ ಮಾಡುತ್ತೀರಾ ಎಂದು ?

ಶ್ರೀ ಕೆ. ಪುಟ್ಟಸ್ವಾಮಿ.—ಪರಿಶೀಲನೆ ಮಾಡೋಣ.

ಶ್ರೀ ಪಿ. ವೆಂಕಟಗಿರಿಯಪ್ಪ.—ಬೇರೆ ಜಿಲ್ಲೆಗಳಿಗೆ ಈ ಯೋಜನೆಯಲ್ಲಿ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಅದಕ್ಕೆ ನೋಟೀಸ್ ಬೇಕು.

Proposal to Reorganise the Taluks in South Kanara District.

*Q.—830. Sri S. D. SAMRAJYA (Brahmavar).—

Will the Government be pleased to state :—

(a) whether the Legislators of South Kanara had put before the Government in 1961 a proposal to reorganise the Taluks and form some new Taluks in South Kanara District ;

(b) if so, the decision they have taken in this behalf ?

A.—Sri M. V. KRISHNAPPA (Minister for Revenue).—

(a) Yes.

(b) The question has been deferred for the present in view of the emergency.

ಶ್ರೀ ಎಸ್. ಡಿ. ಸಾಮ್ರಾಜ್ಯ.—ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ಆ ಜಿಲ್ಲೆಯ ತಾಲ್ಲೂಕುಗಳನ್ನು ಜಾಸ್ತಿ ಮಾಡಬೇಕೆಂದು ಯಾವಾಗ ಸರ್ಕಾರದಲ್ಲಿ ಕೇಳಿಕೊಂಡರು ?

ಶ್ರೀ ಎಂ. ವಿ. ಕೃಷ್ಣಪ್ಪ.—1960 ನೇ ಇಸವಿಯಲ್ಲಿ ಈ ಮಾನ್ಯ ಸಭೆಯ ಕೆಲವು ಸದಸ್ಯರು ಹಿಂದಿನ ರೆವೆನ್ಯೂ ಮಂತ್ರಿಗಳನ್ನು ಕಂಡು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಲ್ಕು ತಾಲ್ಲೂಕುಗಳನ್ನು ಜಾಸ್ತಿ ಮಾಡಿಕೊಡಬೇಕೆಂದು ಮನವಿ ಪತ್ರವನ್ನು ಕೊಟ್ಟಿದ್ದಾರೆ. ಅದರ ಮೇಲೆ ನಾವು ವಿವರಗಳನ್ನು ತರಿಸಿದೆವು. ಹೋದ ವರ್ಷ ನವೆಂಬರ್ ತಿಂಗಳಿನಲ್ಲಿ ಬಂತು. ಈ ಬಗ್ಗೆ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವುದನ್ನು ತುರ್ತು ಪರಿಸ್ಥಿತಿಯ ಕಾಲದಲ್ಲಿ ಮುಂದಕ್ಕೆ ಹಾಕಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ತಾಲ್ಲೂಕುಗಳ ಪುನರ್ವಿಂಗಡಣೆಯಾಗಬೇಕೆಂದು ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ಮನವಿ ಮಾಡಿದ್ದರೆ, ಆ ಜಿಲ್ಲೆಯನ್ನು ಎರಡು ಮಾಡಬೇಕೆಂಬ ಉದ್ದೇಶವೂ ಕೂಡ ಅವರಲ್ಲಿತ್ತು ಎಂದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.— ಅನೇಕ ಜಿಲ್ಲೆಗಳು ಹೊಸದಾಗಿ ಆಗಬೇಕು, ತಾಲ್ಲೂಕುಗಳೂ ಆಗಬೇಕು ಎನ್ನುವ ಬೇಡಿಕೆಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಎರಡು ಮಾಡಬೇಕೆಂದು ಕೆಲವು ಸದಸ್ಯರು ನನ್ನ ಹತ್ತಿರವೂ ಹೇಳಿಕೊಂಡಿದ್ದಾರೆ.

ಶ್ರೀ ಎಸ್. ಡಿ. ಸಾಮ್ರಾಜ್ಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಿರುವ ತಾಲ್ಲೂಕುಗಳು ದೊಡ್ಡದಾಗಿರುವುದರಿಂದ ಅವುಗಳನ್ನು ಸಣ್ಣ ತಾಲ್ಲೂಕುಗಳಾಗಿ ಮಾಡಬೇಕೆಂದು ಸರ್ಕಾರದ ಅಭಿಪ್ರಾಯವಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ ಕೆಲವು ತಾಲ್ಲೂಕುಗಳು ಬಹಳ ದೊಡ್ಡವಾಗಿವೆ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಅದು ದೊಡ್ಡ ಜಿಲ್ಲೆ ಮತ್ತು ತಾಲ್ಲೂಕುಗಳ ಸಂಖ್ಯೆ ಕಡಮೆ. ಆಡಳಿತ ಸೌಕರ್ಯದ ದೃಷ್ಟಿಯಿಂದ ಇನ್ನೂ ಎರಡು ಮೂರು ತಾಲ್ಲೂಕುಗಳು ಆದರೆ ಉತ್ತಮ. ಸೂಳ್ಯ ಒಂದು ತಾಲ್ಲೂಕು ಮಾಡಬೇಕೆಂದು ಎಲ್ಲವೂ ಸಿದ್ಧವಾಗಿತ್ತು. ಆದರೆ ತುರ್ತು ಪರಿಸ್ಥಿತಿಯಿಂದ ಅದನ್ನು ಮುಂದಕ್ಕೆ ಹಾಕಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ರಾಮಚಂದ್ರರಾಯರ ಕಮಿಟಿ ರಿಪೋರ್ಟಿನಲ್ಲಿ ಜಿಲ್ಲೆಗಳ ಮತ್ತು ತಾಲ್ಲೂಕುಗಳ ಸಂಖ್ಯೆಯನ್ನು ಕಡಮೆ ಮಾಡಬೇಕು ಎಂದು ಹೇಳಿದ್ದಾರೆ. ಇವುಗಳನ್ನು ಹೆಚ್ಚು ಮಾಡಬೇಕು ಎನ್ನುವ ವ್ಯವಸ್ಥೆ ಏನಾದರೂ ಸರ್ಕಾರದ ಮುಂದೆ ಇದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ಕಡೆ ಕಡಮೆ ಮಾಡಬೇಕಾದ ಜಿಲ್ಲೆಗಳೂ ಇವೆ, ಕೆಲವು ಜಿಲ್ಲೆಗಳನ್ನು ಇಬ್ಭಾಗ ಮಾಡಬೇಕಾದ ಪರಿಸ್ಥಿತಿಯೂ ಇದೆ. ಕೆಲವು ಜಿಲ್ಲೆಗಳು ಬಹಳ ದೊಡ್ಡವು, ಕೆಲವು ಬಹಳ ಚಿಕ್ಕವು. ಆದುದರಿಂದ ಈ ಎರಡೂ ದೃಷ್ಟಿಯಿಂದ ಈ ಪ್ರಶ್ನೆಯನ್ನು ಇತ್ಯರ್ಥ ಮಾಡಬೇಕಾದ ಪರಿಸ್ಥಿತಿ ಇದೆ. ಆದರೆ ತುರ್ತು ಪರಿಸ್ಥಿತಿಯಿಂದ ಯಾವುದನ್ನೂ ಮಾಡುವ ಹಾಗಿಲ್ಲ.

Sri GANJI VEERAPPA.—At least do Government admit that there is a necessity to reorganise all the Districts and Taluks in the State ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಸೂಕ್ತ ಸಮಯ ಬಂದಾಗ ಮಾಡುವುದು ಉತ್ತಮ. ಸರ್ಕಾರ ಅನುಭವದಿಂದ ಆಡಳಿತ ದೃಷ್ಟಿಯಿಂದ ಕೆಲವು ಜಿಲ್ಲೆಗಳು ಬಹಳ ದೊಡ್ಡವಾಗಿರುವುದರಿಂದ ಅಡಿಷನಲ್ ಡೆಪ್ಯುಟಿ ಕಮಿಷನರು, ಸ್ಪೆಷಲ್ ಡೆಪ್ಯುಟಿ ಕಮಿಷನರು ಇವರುಗಳ ನೇಮಕವನ್ನು ಆಲೋಚನೆ ಮಾಡಬೇಕಾಗಿದೆ. ಕೆಲವು ಜಿಲ್ಲೆಗಳು ಬಹಳ ದೊಡ್ಡವಾಗಿ ಕೆಲಸ ವಿಪರೀತವಾಗಿ ಒಬ್ಬ ಜಿಲ್ಲಾಧಿಕಾರಿ ನಡೆಸಿಕೊಂಡು ಹೋಗುವುದು ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಸೂಕ್ತ ಸಮಯದಲ್ಲಿ ಪುನರ್ವಿಂಗಡಣೆ ಮಾಡಿ viable and administrative convenience ಗೆ ಅನುಕೂಲವಾಗಿರುವಂತೆ ಮಾಡಬೇಕೆನ್ನುವುದು ಸರ್ಕಾರದ ಗಮನದಲ್ಲಿದೆ.

Sri SANJEEVANATH AIKALA.—What is the sum and substance of the decision as far as South Kanara District is concerned—whether Government have decided to have more taluks or not ?

Sri M. V. KRISHNAPPA.—No decision has been taken. The Hon'ble Members of the House saw the Revenue Minister and they have pleaded for four more taluks at Sulya, Mulki in Mangalore, Baindur in Coondapur and Mudabidri. Government have thoroughly examined those cases, but no decision has been taken. Anyhow, there is a case to have some of the places as Taluk Headquarters.

ಶ್ರೀ ಎಸ್. ಡಿ. ಸಾಮ್ರಾಜ್ಯ.—ಈಗ ಸೂಳ್ಯದ ವಿಚಾರ ರಿಪೋರ್ಟ್ ಬಂದಿದೆ ಎಂದು ಹೇಳಿದಿರಿ. ಅದನ್ನು ಪ್ರತ್ಯೇಕ ತಾಲ್ಲೂಕು ಮಾಡುವುದರಿಂದ ಅಲ್ಲಿರುವ ತೊಂದರೆಯನ್ನು ನಿವಾರಣೆ ಮಾಡಿದ ಹಾಗೆ ಆಗುವುದಿಲ್ಲ ಅಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು. ಪ್ರತಿಯೊಬ್ಬರೂ ತಮ್ಮ ತಮ್ಮ ಊರುಗಳನ್ನು ಕೇಂದ್ರವಾಗಿಟ್ಟುಕೊಂಡು ಅದರ ಸುತ್ತಲಿರುವ ನಾಲ್ಕೈದು ಹೋಬಳಿಗಳನ್ನು ಸೇರಿಸಿ ಒಂದು ತಾಲ್ಲೂಕು ಮಾಡಬೇಕೆಂದು ಕೇಳುತ್ತಿದ್ದಾರೆ. ಈ ದೃಷ್ಟಿಯಿಂದಲೂ ಸ್ವಲ್ಪ ನಿಧಾನ ಮಾಡುವುದು ಮೇಲು.

ಶ್ರೀ ಎಸ್. ಗೋಪಾಲ ಸಾಲೆನ್ನ.—ತುರ್ತು ಪರಿಸ್ಥಿತಿ ಎಂದು ಹೇಳುತ್ತಿದ್ದೀರಿ. ತಾಲ್ಲೂಕುಗಳನ್ನು ಪುನರ್ವಿಂಗಡನೆ ಮಾಡಿ ಸ್ವಲ್ಪ ಸವಲತ್ತನ್ನು ಜಾಸ್ತಿ ಮಾಡಿರುವುದರಿಂದ ತುರ್ತು ಪರಿಸ್ಥಿತಿಗೆ ಸಹಾಯಕವಾಗುವುದಿಲ್ಲವೇ ? ಅದರಿಂದ ಏನು ಬಾಧಕ ಬರುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದರಿಂದ ಬಹಳ controversy ಬರುತ್ತದೆ. ಒಂದು ಕಡೆ ಪ್ರಾರಂಭ ಮಾಡಿದೆವು ಎಂದರೆ ಒಬ್ಬೊಬ್ಬರಾಗಿ ಕೇಳುವುದಕ್ಕೆ ಪ್ರಾರಂಭ ಮಾಡುತ್ತಾರೆ. ಅದರ ಜೊತೆಗೆ ತಾಲ್ಲೂಕು ಆಫೀಸುಗಳನ್ನು ಕಟ್ಟಬೇಕಾಗುತ್ತದೆ, ಅದಕ್ಕೆ ಬೇಕಾದ ಸಿಬ್ಬಂದಿಯನ್ನು ನೇಮಕ ಮಾಡಬೇಕಾಗುತ್ತದೆ. ಪ್ರತಿಯೊಂದಕ್ಕೂ ಖರ್ಚಾಗುತ್ತದೆ. ಇದರಿಂದ ಈಗಿನ ಪರಿಸ್ಥಿತಿಯಲ್ಲಿ ಸ್ವಲ್ಪ ನಿಧಾನವಾಗಿದೆ.

Sri GANJI VEERAPPA.—Can we take it that as soon as emergency condition is over, Government intends to take up this general question ?

Sri M. V. KRISHNAPPA.—I think so, Sir. It has to be decided once for all.

ಶ್ರೀ ಎ. ಕೃಷ್ಣ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನಸಾಂದ್ರತೆ ಹೆಚ್ಚಾಗಿ ಇರುವುದರಿಂದ, ಎರಡನೆಯದಾಗಿ ಕರಾವಳಿ ಪ್ರದೇಶದಲ್ಲಿ ಒಂದು ಚದರ ಮೈಲಿಗೆ ಒಂದು ಸಾವಿರಕ್ಕಿಂತ ಜನಸಂಖ್ಯೆ ಹೆಚ್ಚಾಗಿರುವುದರಿಂದ ಅಲ್ಲಿ ಹೆಚ್ಚಿನ ತಾಲ್ಲೂಕುಗಳ ಆವಶ್ಯಕತೆ ಕಾಣುವುದಿಲ್ಲ ಅಲ್ಲವೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೇರೆ ಬೇರೆ ಅಭಿಪ್ರಾಯಗಳಿವೆ. ಒಟ್ಟಿನಲ್ಲಿ ಆಡಳಿತ ದೃಷ್ಟಿಯಿಂದ ಮತ್ತು ಇತರ ಕೆಲವು ಕಾರಣಗಳಿಂದ ಇನ್ನೂ ಒಂದೆರಡು ತಾಲ್ಲೂಕುಗಳು ಅಲ್ಲಿ ಆಗುವುದು ಉತ್ತಮ.

ಶ್ರೀ ಎಸ್. ಡಿ. ಸಾಮ್ರಾಜ್ಯ.—ಕೊಂಡಜ್ಜಿ ಬಸಪ್ಪ ಸಮಿತಿಯು ರಿಪೋರ್ಟಿನಲ್ಲಿ ತಾಲ್ಲೂಕುಗಳು ಸಣ್ಣದಾಗಿದ್ದರೆ ಉತ್ತಮ, ಆ ರೀತಿ ಮಾಡಬೇಕೆಂದು ತಿಳಿಸಿದ್ದಾರೆ. ಎಷ್ಟು ದಿವಸದೊಳಗೆ ಈ ತಾಲ್ಲೂಕು ಮತ್ತು ಜಿಲ್ಲೆಗಳನ್ನು ಜಾಸ್ತಿ ಮಾಡಬಹುದು ಎಂದು ಹೇಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ತುರ್ತು ಪರಿಸ್ಥಿತಿ ಎಷ್ಟು ಬೇಗ ಮುಗಿದರೆ ಅಷ್ಟು ಬೇಗ ಮಾಡುತ್ತೇವೆ.

Construction of Irrigation Wells in Mandya District.

*Q.—845. Sri N. NANJE GOWDA (Krishnarajapet).—

Will the Government be pleased to state—

(a) the number of applications received for the construction of irrigation wells from Mandya District from March 1962 uptil now (talukwise information may be given);

(b) out of them number of wells sanctioned and the number of wells for which the 1st instalment has been paid;

(c) the number of wells for which the 2nd instalment has been paid (detailed information may be given)?

A.—Sri M. V. KRISHNAPPA (Minister for Revenue).—

(a), (b) and (c) The appended statement contains the required information.

STATEMENT

Sl. No.	Taluk	The Number of applications received for the construction of irrigation wells from Mandya District from March 1962 up-till-now.	Out of them: The number of wells sanctioned	Out of them: The number of wells for which the 1st instalment has been paid	The number of wells for which the 2nd instalment has been paid
1	Mandya	14	10	10	1
2	Maddur (Block-1)	80	42	42	27
2A	Maddur (Block-2)	86	34	24*	8
3	Pandavapura	44	44	44	18
4	Srirangapatna	2	2	2	1
5	Nagamangala (Block-1)	98	58	58	25
5A	Bellur (Block-2)	68	65	65	18
6	Krishnarajapet	43	16	16	3
7	Malavalli	41	19	19	11
	Total	476	290	280	112

*(10 wells completed)

ಶ್ರೀ ಎನ್. ನಂಜೇಗೌಡ.—ಸ್ವಾಮಿ, ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ 43 ಅರ್ಜಿಗಳು ಬಂದಿವೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಇವು ಸ್ಯಾಂಕ್ಷನ್ ಆಗದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ದುಡ್ಡು ಎಷ್ಟು ಒದಗಿಸಲಾಗಿತ್ತೊ ಅಷ್ಟು ಕೊಟ್ಟಿದ್ದೇವೆ. ಈಗ ಅಭಾವ ಬಂದಿರುವುದರಿಂದ ಬಾವಿಗೆ ಹಣ ಕೊಡಿ ಎಂದು ಡಿವಿಜನಲ್ ಕಮಿಷನರ್ ಅವರಿಗೆ ಹೇಳಿದೆ.

ಶ್ರೀ ಎನ್. ನಂಜೇಗೌಡ.—ನಾಗಮಂಗಲ ಬ್ಲಾಕ್ ಒಂದಕ್ಕೆ 58, ಬೆಳ್ಳೂರು ಬ್ಲಾಕ್ ಎರಡಕ್ಕೆ 65 ಬಾವಿಗಳನ್ನು ಸ್ಯಾಂಕ್ಷನ್ ಮಾಡಿದ್ದೀರಿ. ಇದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ತಮಗೆ ಇದು ಗೊತ್ತಿದೆ. ನಾಗಮಂಗಲ ಹಿಂದುಳಿದ ಪ್ರದೇಶ. ನೀರಾವರಿ ವಿಚಾರದಲ್ಲಿ ಹಿಂದುಳಿದ ತಾಲ್ಲೂಕು ಎಂದು ಅಲ್ಲಿ ಸ್ವಲ್ಪ ಹೆಚ್ಚಾಗಿ ಕೊಟ್ಟಿದೆ.

ಶ್ರೀ ಟಿ. ಎನ್. ಮಾದಪ್ಪ ಗೌಡ.—ನಾಗಮಂಗಲ ತಾಲ್ಲೂಕಿಗೆ ಇನ್ನೂ ಹೆಚ್ಚಿನ ಸಹಾಯ ಬಾವಿಗೆ ಒದಗಿಸುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—3,000 ರೂ. ಪ್ರಕಾರ ಕೊಡಲಾಗುತ್ತಿದೆ. ಬಾವಿಗಳಿಗೆ ಸ್ವಲ್ಪ ಹೆಚ್ಚಿಗೆ ಕೊಡಿ ಎಂದು ಡಿವಿಜನಲ್ ಕಮಿಷನರ್ ಅವರಿಗೆ ಹೇಳಿದೆ. ಮುಂದೆ ಕೊಡುತ್ತೇವೆ.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಸರ್ಕಾರ ಕೊಡತಕ್ಕಂಥ ಮೂರು ಸಾವಿರ ರೂಪಾಯಿ ಒಂದು ಬಾವಿ ತೆಗೆಯುವುದಕ್ಕೆ ಸಾಲದು ಎಂಬುದು ಸರ್ಕಾರಕ್ಕೆ ಗೊತ್ತಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಗೊತ್ತಿದೆ. ಒಂದು ಬಾವಿಗೆ ನಾಲ್ಕೈದು ಸಾವಿರ ರೂಪಾಯಿ ಖರ್ಚಾಗುತ್ತದೆ. ಮೊದಲು ಒಂದು ಸಾವಿರ ರೂಪಾಯಿ ಕೊಡಲಾಗುತ್ತಿತ್ತು ಅದನ್ನು ಮೂರು ಸಾವಿರ ಮಾಡಿದ್ದೇವೆ. ಇನ್ನೂ ಹೆಚ್ಚು ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಅವರು ಒಪ್ಪಿದರೆ ಒಂದು ಬಾವಿಗೆ 5,000 ರೂಪಾಯಿ ಕೊಡಬೇಕೆಂದು ಇದೆ.

New Hostels started for Scheduled Castes from June 1962 in the State.

*Q.—883. Sri Y. RAMAKRISHNA (Yelahanka).—

Will the Government be pleased to state :—

(a) the number of new hostels started for Scheduled Castes from June 1962 in the State ;

(b) the number of taluks where there are no hostel facilities for the children of Scheduled Castes people both for girls and boys ;

(c) the steps taken by them to establish hostels for Scheduled Castes in those taluks ?

A.—Sri K. PRABHAKAR (Deputy Minister for Social Welfare).—

(a) 16 (14 for boys and girls and 2 general hostels).

(b) 15 (*vide* statement given below).

(c) Every year new hostels are being started by Government and grants are also given as aid to hostels subject to availability of funds and also keeping in view the necessity based on the number of boys and girls studying in and around the Taluk Headquarters.

(SRI K. PRABHAKAR)

STATEMENT

15.—1. Bangalore North Taluk.
2. Koppa Taluk.
3. Sringeri Taluk.
4. Narasimharajapura Taluk.
5. Thirthahalli Taluk.
6. Nallapura Taluk.
7. Yelburga Taluk.
8. Supa Taluk.
9. Yellapur Taluk.
10. Siddapur Taluk.
11. Bhatkal Taluk.
12. Hangal Taluk.
13. Kundagal Taluk.
14. Mundaragi Taluk.
15. Belthangadi Taluk.

ಶ್ರೀ ವೈ. ರಾಮಕೃಷ್ಣ.—ಮುಂದಿನ ವರ್ಷ ಹೆಚ್ಚು ಹಾಸ್ಟೆಲ್ ತೆರೆಯುವುದಕ್ಕೆ ಸರಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಕೆ ಪ್ರಭಾಕರ್.—ಒಂದು ಕ್ರಮ ಇದೆ. ಅದಕ್ಕೆ ಅನುಸಾರವಾಗಿ ತೆರೆಯುತ್ತೇವೆ.

ಶ್ರೀ ಜಿ ವಿ. ಗೌಡ.—ಕ್ರಮ ಏನು ಅನುಸರಿಸುತ್ತೀರಿ ಅದನ್ನು ತಿಳಿಸುತ್ತೀರಾ?

ಶ್ರೀ ಕೆ. ಪ್ರಭಾಕರ್. ಅದರ ವಿವರ ಜಾಸ್ತಿಯಾಗುತ್ತದೆ. ಸ್ಥೂಲವಾಗಿ ಹೇಳುವುದಾದರೆ ಹಾಸ್ಟೆಲ್ ಇಲ್ಲದೇ ಇರತಕ್ಕಂಥ ಸ್ಥಳ, ಓದುವ ಮಕ್ಕಳ ಸಂಖ್ಯೆ ಜಾಸ್ತಿ ಇರತಕ್ಕಂಥಾದ್ದು ಸಾರ್ವಜನಿಕರು ಮುಂದೆ ಬಂದು ಸಂಸ್ಥೆ ನಡೆಸುತ್ತೇವೆ ಹಾಸ್ಟೆಲ್ ಬೇಕು ಎನ್ನುವ ಬೇಡಿಕೆ ಇರತಕ್ಕಂಥಾದ್ದು ಮುಖ್ಯವಾಗಿವೆ.

ಶ್ರೀ ವಿದ್ಯಾಧರ ಗುರೂಜಿ ಸಾಯಣ್ಣ.—ಹಾಸ್ಟೆಲ್ ತೆರೆಯುವ ವಿಚಾರದಲ್ಲಿ ಹಿಂದುಳಿದಿರುವ ನಮ್ಮ ಪ್ರದೇಶ ತುಂಬಾ ನೆಗ್ಲೆಕ್ಟ್ ಮಾಡಿದ್ದೀರಿ. ಹಾಸ್ಟೆಲ್ ತೆರದಿಲ್ಲ. ಈ ಸ್ಕೀಂ ಇಂಪ್ಲಿಮೆಂಟ್ ಮಾಡಿಲ್ಲ. ಈ ವಿಷಯದ ಬಗ್ಗೆ ಎ. ಐ. ಸಿ. ಸಿ. ಜನರಲ್ ಸೆಕ್ರೆಟರಿ ಮತ್ತು ಆ ಪ್ರಾಂತದ ಎಂ. ಪಿ. ಗಳಿಂದ ಏನಾದರೂ ರಿಮೈಂಡರ್ ಕಳಿಸಿದ್ದಾರೆಯೇ ತಮ್ಮ ಡಿಪಾರ್ಟ್‌ಮೆಂಟಿಗೆ?

ಶ್ರೀ ಕೆ. ಪ್ರಭಾಕರ್.—ನೆಗ್ಲೆಕ್ಟ್ ಯಾವುದೂ ಮಾಡಿಲ್ಲ. ಯೋಜನೆಯ ಪ್ರಕಾರ ಹಾಸ್ಟೆಲ್ ತೆರೆಯಲಾಗುತ್ತಿದೆ. ಬೇಡಿಕೆಗಳು ಬಂದಿವೆ. ಅವು ಸರಕಾರದ ಆಲೋಚನೆಯಲ್ಲಿ ಇವೆ.

ಶ್ರೀ ವಿದ್ಯಾಧರ ಗುರೂಜಿ ಸಾಯಣ್ಣ.—10—12ಸಾವಿರ ಜನಸಂಖ್ಯೆ ಇರುವ ಊರುಗಳನ್ನು ಬಿಟ್ಟು 3—4 ಸಾವಿರ ಜನಸಂಖ್ಯೆಯ ಊರಿನಲ್ಲಿ ಈ ಸ್ಕೀಂ ಇಂಪ್ಲಿಮೆಂಟ್ ಮಾಡಿದ್ದೀರಿ. ಇದು ತತ್ವಕ್ಕೆ ವಿರೋಧವಾಗಿದೆ ಅಲ್ಲದೆ ನಿಮ್ಮ ಜನರ ಶಿಫಾರಸ್ ಮೇಲೆ ಪಕ್ಷಪಾತ ಮಾಡಿದ್ದೀರಿ. ಇಲ್ಲದಿದ್ದರೆ ಇದಕ್ಕೆ ಯಾವ ಬೇಸಿಸ್ ಇದೆ?

ಶ್ರೀ ಕೆ. ಪ್ರಭಾಕರ್.—ಪಕ್ಷಪಾತವೂ ಇಲ್ಲ. ವಿರೋಧವೂ ಇಲ್ಲ. ಸಾರ್ವಜನಿಕರಿಗೆ ಎಲ್ಲಿ ಉತ್ಸಾಹ ಜಾಸ್ತಿ ಇರುತ್ತದೆಯೋ ಅಲ್ಲಿ ಹಾಸ್ಟೆಲ್ ಕೇಳುತ್ತಾರೆ. ಪ್ರತಿಯೊಂದು ಭಾಗಕ್ಕೂ ಸಿಕ್ಕುತ್ತದೆ.

ಶ್ರೀ ವೀರಭದ್ರಪ್ಪ ಈರಪ್ಪ.—ಯಾವ ಯಾವ ತಾಲ್ಲೂಕಿನಲ್ಲಿ ಯಾವ ಯಾವ ಕಡೆಯಲ್ಲಿ ಹಾಸ್ಟೆಲ್ ತೆಗೆದಿದ್ದೀರಿ ದಯಯಿಟ್ಟು ತಿಳಿಸಬೇಕು?

ಶ್ರೀ ಕೆ. ಪ್ರಭಾಕರ್.—ಡೀಟೇಲ್ಸ್ ಇಲ್ಲ ಆಮೇಲೆ ವಿವರ ಒದಗಿಸುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ.—ಧಾರವಾಡ ಜಿಲ್ಲೆಯ ಕುಂದಗೋಳ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ಹರಿಜನರು ಗಿರಿಜನರು ಹೆಚ್ಚಾಗಿ ಇದ್ದಾರೆ. ಅಲ್ಲಿ ಒಂದು ಹಾಸ್ಟೆಲ್ ತೆರೆಯದೇ ಇರುವುದಕ್ಕೆ ಕಾರಣವೇನು?

ಶ್ರೀ ಕೆ. ಪ್ರಭಾಕರ್.—ಅನೇಕ ಕಾರಣಗಳಿವೆ. ಸರಕಾರಕ್ಕೆ ಅದು ಗೊತ್ತಿದೆ. ಯೋಚನೆ ಮಾಡುತ್ತೇವೆ.

ಶ್ರೀ ಜಿ. ವಿ. ಗೌಡ.—ಎಷ್ಟು ವಿದ್ಯಾರ್ಥಿ ನಿಲಯ ಪ್ರಾರಂಭಿಸಬೇಕೆಂದು ಯೋಜನೆ ಹಾಕಿ ಕೊಂಡಿದ್ದೀರಿ? ಎಷ್ಟು ಹಾಸ್ಟೆಲ್ ಪ್ರಾರಂಭ ಮಾಡಿದ್ದೀರಿ?

ಶ್ರೀ ಕೆ. ಪ್ರಭಾಕರ್.—80 ಹಾಸ್ಟೆಲ್ ಪ್ರಾರಂಭಿಸಬೇಕೆಂದು ಇದೆ. ಅದರಲ್ಲಿ ಈಗಾಗಲೇ ಗಂಡು ಮಕ್ಕಳಿಗೆ 29 ಮತ್ತು ಹೆಣ್ಣು ಮಕ್ಕಳಿಗೋಸ್ಕರ 18 ಹೀಗೆ 47 ಹಾಸ್ಟೆಲ್ ತೆಗೆದಿದ್ದೇವೆ.

ಶ್ರೀ ಸಂಜೀವನಾಥ ಐಕಳ.—ಬೆಂಗಳೂರು ತಾಲ್ಲೂಕಿನಲ್ಲಿ ತೆರೆಯದೇ ಇರುವುದಕ್ಕೆ ಕಾರಣ ವೇನು?

ಶ್ರೀ ಕೆ. ಪ್ರಭಾಕರ್.—ಕಾರಣ ಮೊದಲೇ ಹೇಳಿದ್ದೇನೆ. ಒಂದು ಕ್ರಮ ಅನುಸರಿಸಿ ಮಾಡ ಲಾಗುತ್ತಿದೆ.

ಶ್ರೀ ಜಿ. ರಾಮೇಗೌಡ.—ಎರಡು ವರ್ಷದಲಾಗಾಯ್ತು ಹಾಸ್ಟೆಲ್‌ಗೋಸ್ಕರ ಏನು ಯೋಜನೆ ಹಾಕಿಕೊಂಡಿಲ್ಲವೇ?

ಶ್ರೀ ಕೆ. ಪ್ರಭಾಕರ್.—ಪಂಚವಾರ್ಷಿಕ ಯೋಜನೆಯಲ್ಲಿ ಈ ಎರಡು ವರ್ಷ ಸೇರಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಎರಡು ವರ್ಷದಿಂದ ಈಚೆಗೆ ಗ್ರಾಮಾಂತರ ಪ್ರದೇಶದಲ್ಲಿ ಓದತಕ್ಕಂಥ ಹರಿಜನ ಮಕ್ಕಳಿಗೆ ಹಾಸ್ಟೆಲ್ ಬಗ್ಗೆ ಏನು ಏರ್ಪಾಡು ಮಾಡಿದ್ದೀರಿ? ಯಾವ ಯೋಜನೆ ಹಾಕಿಕೊಂಡಿದ್ದೀರಿ?

ಶ್ರೀ ಕೆ. ಪ್ರಭಾಕರ್.—ಯೋಜನೆ ಹಾಕಿದ್ದೇವೆ. ಹೈಸ್ಕೂಲು ಎಲ್ಲೆಲ್ಲಿ ಪ್ರಾರಂಭವಾಗುತ್ತವೆಯೋ ಅಲ್ಲಲ್ಲಿ ಹಾಸ್ಟೆಲ್ ಪ್ರಾರಂಭ ಮಾಡಬೇಕು ಎಂದಿದೆ.

Sri G. V. GOWDA.—Has it come to the notice of the Government that during 1963-64, not even a single hostel has been started?

ಶ್ರೀ ಕೆ. ಪ್ರಭಾಕರ್.—ಆ ಇನ್‌ಫರ್‌ಮೇಷನ್ ಇಲ್ಲ.

ಶ್ರೀಮತಿ ಚಂಪಾಬಾಯಿ ಭೋಗಲೆ.—ಬೆಳಗಾಂವ ಜಿಲ್ಲೆಯಲ್ಲಿ ಹಾಸ್ಟೆಲ್ ಪ್ರಾರಂಭಿಸ ಬೇಕೆಂದು ಕಳೆದ ಮೂರು ನಾಲ್ಕು ವರ್ಷಗಳಿಂದ ಅರ್ಜಿ ಮಾಡಿದ್ದರೂ ಕೂಡ ಸರಕಾರ ಯಾಕೆ ಗಮನ ಕೊಟ್ಟಿಲ್ಲ?

ಶ್ರೀ ಕೆ. ಪ್ರಭಾಕರ್.—ಅದು ಪರಿಶೀಲನೆಯಲ್ಲಿ ಇದೆ.

1-00 P.M.

ಶ್ರೀ ಎಸ್. ಗೋಪಾಲಗೌಡ.—ಕೊನೇ ಪಕ್ಷ ಪ್ರತಿಯೊಂದು ತಾಲ್ಲೂಕಿನಲ್ಲೂ ಈ ಹರಿಜನ ಮತ್ತು ಗಿರಿಜನರ ಮಕ್ಕಳು ಶಾಲೆಗೆ ಹೋಗತಕ್ಕವರು ಎಷ್ಟಿದ್ದಾರೆ ಎಂಬ ಲೆಕ್ಕ ಕಂಡು ಹಿಡಿದು ಅಲ್ಲಿರತಕ್ಕವರಿಗೆ ಸಾರ್ವಜನಿಕ ಹಾಸ್ಟೆಲುಗಳಲ್ಲಿ ಸೌಲಭ್ಯ ಕೊಡುವಂತಹ ಏರ್ಪಾಡು ಮಾಡುವುದಕ್ಕೆ ಸರ್ಕಾರದವರಿಗೆ ಸಾಧ್ಯವೇ?

ಶ್ರೀ ಕೆ. ಪ್ರಭಾಕರ್.—ಅದು ಒಂದು ಸಲಹೆ ಸ್ವಾಮಿ?

Number of Jersy Bulls that died last year and their cost.

*Q.—898. Sri C. J. MUCKANNAPPA (Sira).—

Will the Government be pleased to state :—

(a) the number of Jersy Bulls died last year, and their cost;

(b) whether the Department of Animal Husbandry took all precautionery measures to save this animals;

(c) whether they have taken any action on the persons responsible for their death?

4.—**Sri M. V. KRISHNAPPA** (Minister for Revenue).—

(*a*) 9 Bulls died last year. The State Government have not paid any money towards the value of these animals.

(*b*) Yes.

(*c*) Does not arise, in view of reply to (*b*)

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ರೂಪಾಯಿ ಕೊಟ್ಟು ಕೊಂಡಿಲ್ಲ ಎಂದು ಹೇಳಿದ್ದೀರಿ, ಹಾಗಾದರೆ ಇವು ಹೇಗೆ ಬಂದವು?

ಶ್ರೀ ಎಂ. ವಿ. ಕೃಷ್ಣಪ್ಪ.—ಇಂಡಿಯಾ ಸರ್ಕಾರದ ಸ್ಕೀಂ ಪ್ರಕಾರ ಅವರು ಅಮೆರಿಕಾ ದೇಶದಿಂದ ದಾನವಾಗಿ ಪಡೆದಿದ್ದಾರೆ, ಈಫರ್ ಪ್ರಾಜೆಕ್ಟ್ ಅಂಥ ಹೇಳಿ ಫಿಲಡೆಲ್‌ಫಿಯಾದವರು ಅವನ್ನು ಡೊನೇಟ್ ಮಾಡಿದ್ದಾರೆ, ಇಂಡಿಯಾ ಸರ್ಕಾರದವರು ನಮ್ಮ ಫಾರಂನಲ್ಲಿ ಅವುಗಳನ್ನು ಇಟ್ಟಿದ್ದಾರೆ, ನಾವು 155 ಎಕರೆ ಭೂಮಿ ಕೊಟ್ಟಿದ್ದೇವೆ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—9 ಹೋರಿಗಳು ಸತ್ತವಲ್ಲಾ ಅವಕ್ಕೆ ತಗುಲಿದ ಖಾಯಿಲೆ ಏನು ? ಖಾಯಿಲೆ ತಗುಲಿದ ಎಷ್ಟು ದಿವಸದ ಮೇಲೆ ಔಷಧಿ ಕೊಡುವುದಕ್ಕೆ ಸಾಧ್ಯವಾಯಿತು?

ಶ್ರೀ ಎಂ. ವಿ. ಕೃಷ್ಣಪ್ಪ.—ಅವಕ್ಕೆ ಖಾಯಿಲೆ ಬರಲಿಲ್ಲ; ಅಮೆರಿಕಾ ದೇಶದಿಂದ ಏರೋಪ್ಲೇನ್ ನಲ್ಲಿ ನಮ್ಮ ದೇಶಕ್ಕೆ ಒಟ್ಟು 91 ಕರುಗಳು ಬಂದವು. ಆ ಪ್ರಾಣಿಗಳಿಗೆ ಇಲ್ಲಿಗೆ ಬಂದ ಮೇಲೆ ಇಲ್ಲಿ ಬರತಕ್ಕ ರೋಗಗಳು ಬರದಂತೆ ಪ್ರೊಟೆಕ್ಷನ್ ಕೊಡಬೇಕು, ಇಂಜೆಕ್ಷನ್, ಇನಾಕ್ಯುಲೇಷನ್ ಇವನ್ನೆಲ್ಲಾ ಮಾಡಬೇಕಾಗುತ್ತದೆ. ಈ ದೇಶದಲ್ಲಿರುವ ರೋಗ ಅಮೆರಿಕಾ ದೇಶದಲ್ಲಿ ಇಲ್ಲ; ಆದ್ದರಿಂದ ಇಲ್ಲಿ ಬರತಕ್ಕ ರೋಗಗಳಿಗೆ ಪ್ರೊಟೆಕ್ಷನ್ ಕೊಡುವುದಕ್ಕೆ ತಿಂಗಳಿಗೆ ಒಂದರಂತೆ ಇಂಜಕ್ಷನ್, ಇನಾಕ್ಯುಲೇಷನ್, ವ್ಯಾಕ್ಸೀನು ಇವುಗಳನ್ನೆಲ್ಲಾ ಕೊಡುತ್ತಾ ಇದ್ದರು. ನಮ್ಮ ದನಗಳಿಗೆ ಬರತಕ್ಕ ದೊಡ್ಡ ರೋಗ ಬಹಳ ಭಾರೀ ರೋಗ ಅದಕ್ಕೆ ಕೊಡಬೇಕಾದ ವ್ಯಾಕ್ಸೀನ್ ತರಿಸಿಕೊಂಡು ವ್ಯಾಕ್ಸಿನೇಟ್ ಮಾಡಿದರು. ಆ ವ್ಯಾಕ್ಸಿನೇಷನ್ ಇಂದ ಅವು ಸತ್ತಿರಬಹುದು, ಅಮೆರಿಕಾ ದೇಶದ ಆ ಪ್ರಾಣಿಗಳ ಮೇಲೆ ಅದರ ರೀಆಕ್ಷನ್ ಜೋರಾಗಿ 9 ಕರುಗಳು ಸತ್ತುಹೋದವು?

ಶ್ರೀ ಎ. ಕೃಷ್ಣಶೆಟ್ಟಿ.—ಬೆಲೆ ಕೊಡಲಿಲ್ಲ ಎಂದು ಹೇಳಿದಿರಿ. ಈ ಹೋರಿಗಳ ಸಾಗಾಣಿಕೆ ಖರ್ಚು 9 ಸಾವಿರ ರೂಪಾಯಿಗಳವರೆಗೂ ಕೇಂದ್ರ ಸರ್ಕಾರದವರಿಗೆ ಬಿದ್ದಿದೆ ಎಂಬುದು ಗೊತ್ತೇ!

ಶ್ರೀ ಎಂ. ವಿ. ಕೃಷ್ಣಪ್ಪ.—ಏರೋಪ್ಲೇನ್‌ನಲ್ಲಿ ಪ್ರಪಂಚದ ಚರಿತ್ರೆಯಲ್ಲೇ ಈ ಪ್ರಾಣಿಗಳನ್ನು ತಂದದ್ದು ಮೊದಲನೆಯ ಸಾರಿ, ಫಿಲಡೆಲ್‌ಫಿಯಾದಿಂದ ಬಂದವು. ಅವಕ್ಕೆ 4 ಸಾವಿರ ರೂಪಾಯಿ ಖರ್ಚಾಯಿತು, ಅದನ್ನು ಇಂಡಿಯಾ ಸರ್ಕಾರದವರು ಕೊಟ್ಟಿದ್ದಾರೆ.

ಶ್ರೀ ಅಂದಾನಯ್ಯ.—ಅಮೆರಿಕಾ ದೇಶದಿಂದ ನಮ್ಮ ದೇಶಕ್ಕೆ ತರಿಸುವುದಕ್ಕೆ ಖರ್ಚು ಎಷ್ಟು ಬಿತ್ತು?

ಅಧ್ಯಕ್ಷರು.—ಮಂತ್ರಿಗಳು ಆಗಲೇ ಉತ್ತರ ಹೇಳಿದರು.

ಶ್ರೀ ವಿ. ಎಂ. ದೇವ್.—ದೊಡ್ಡ ರೋಗಕ್ಕೆ ಕೊಟ್ಟ ಇನ್‌ಜೆಕ್ಷನ್‌ನ ರೀಆಕ್ಷನ್ ಜಾಸ್ತಿಯಾಗಿ ಸತ್ತುಹೋಯಿತು ಎಂದರೆ ಅದು ಪೂರ್ತಿ ಕಾರಣವಾಗುವುದಿಲ್ಲ ಅಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವುಗಳಿಗೆ ರೋಗ ಬರಲಿಲ್ಲ. ರೋಗ ಬರದೇ ಇರಲಿ ಎಂದು ಪ್ರೊಟೆಕ್ಷನ್‌ಗೆ ವ್ಯಾಕ್ಸೀನ್ ಇಂಜೆಕ್ಷನ್ ಕೊಟ್ಟಿದ್ದರು. ಅಮೆರಿಕಾ ಮತ್ತು ಯೂರೋಪ್ ದೇಶಗಳಲ್ಲಿ ಈ ರೋಗ ಅವುಗಳಿಗೆ ಬರುವುದೇ ಇಲ್ಲ ಮತ್ತು ಇದರ ಹೆಸರನ್ನೇ ಅವರು ಕೇಳಿಲ್ಲ. ಆದ್ದರಿಂದ ಆ ಪ್ರಾಣಿಗಳಿಗೆ ಇಷ್ಟೊಂದು ಇನಾಕ್ಯುಲೇಷನ್ ಇಂಜೆಕ್ಷನ್ ಕೊಟ್ಟಾಗ ಅದನ್ನು ತಡೆದುಕೊಳ್ಳುವ ಶಕ್ತಿ ಇಲ್ಲದೇ ಸತ್ತಿರಬಹುದು. ನಮ್ಮಲ್ಲೂ ಕೂಡ ಅನೇಕ ಹಸುಗಳು ಸಾಯುತ್ತವೆ, ಇದೇನೂ ಹೊಸದಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಈ ಜೆರ್ಸಿ ಬುಲ್‌ಗಳನ್ನು ತಂದನಂತರ ಅವಕ್ಕೆ ರಿಂಡರ್ ಪೆಸ್ಟ್ ಬಂದಿದೆ ಎಂಬುದು ತಿಳಿದು 3—4 ದಿವಸದ ನಂತರ ಟ್ರೀಟ್‌ಮೆಂಟ್ ಕೊಟ್ಟಿದ್ದಕ್ಕೆ ಅವು ಸತ್ತು ಹೋದವು ಎಂಬುದು ಗೊತ್ತೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವಕ್ಕೆ ರೋಗವೇ ಬರಲಿಲ್ಲ. ರೋಗ ಬರದಂತೆ ತಡೆಗಟ್ಟಲು ಇನಾಕ್ಯುಲೇಷನ್ ಕೊಟ್ಟರು. ಆದರ ರೀಆಕ್ಷನ್ ಜಾಸ್ತಿಯಾಗಿ 4-5 ದಿವಸವಾದ ಮೇಲೆ 9 ಕರುಗಳು ಸತ್ತು ಹೋದವೇ ವಿನಹ ಅವಕ್ಕೆ ದೊಡ್ಡ ರೋಗ ಬರಲೇ ಇಲ್ಲ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಈ ರೋಗ ಬರಲಿಲ್ಲ ಎಂದು ಹೇಳಿದಿರಿ. ತಾವು ಇದೇ ಸಭೆಯಲ್ಲಿ ಈ ಹೋರಿಗಳು ಬಂದಾಗ ರೋಗ ತಗುಲಿ ಔಷಧಿ ಕೊಡುವುದು ತಡವಾಗಿ ಅವು ಪ್ರಾಣ ಬಿಟ್ಟವು ಎಂದು ಹೇಳಿದ್ದೀರಿ. ಆದ್ದರಿಂದ ಇವತ್ತು ತಾವು ಹೇಳಿದ್ದು ಸರಿಯೇ ಅಥವಾ ಆವತ್ತು ಹೇಳಿದು ಸರಿಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಿಂದೆ ನಾನು ಆ ರೀತಿ ಹೇಳಲೇ ಇಲ್ಲ ಅಕಸ್ಮಾತ್ತಾಗಿ ಹೇಳಿದ್ದರೆ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಶ್ರೀ ವಿ. ಎಂ. ದೇವ್.—ಈ ರೀತಿ ನಮ್ಮ ದೇಶದಲ್ಲಿ ಬೇರೆ ಕಡೆ ಇಟ್ಟಿರುವ ಪ್ರಾಣಿಗಳು ಸತ್ತು ಹೋದ ನಿದರ್ಶನ ಇದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಂತಹ ಕ್ಯಾಟಲ್ ಬ್ರೀಡಿಂಗ್ ಫಾರಂಗಳು ಎರಡು ಇವೆ; ಒಂದು ಹಿಮಾಚಲ ಪ್ರದೇಶದಲ್ಲಿ ಇನ್ನೊಂದು ಮೈಸೂರಿನಲ್ಲಿ. ಹಿಮಾಚಲ ಪ್ರದೇಶದಲ್ಲಿ 100 ಕರುಗಳನ್ನು ಇಟ್ಟಿದ್ದರು ಅಲ್ಲೂ ಕೂಡ ಕೆಲವು ಸತ್ತು ಹೋಗಿವೆ. ಆ ಸಮಾಚಾರ ತರಿಸಿಲ್ಲ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಪ್ರೊಟೆಕ್ಷನ್‌ಗೋಸ್ಕರ ಔಷಧಿ ಕೊಡಲಾಯಿತು ಎಂದು ಹೇಳಿದಿರಿ. ಇದನ್ನು ಉಪಯೋಗಿಸಿದಂತಹ ಅಧಿಕಾರಿ ಯಾವ ಇನ್‌ಸ್ಟ್ರುಮೆಂಟ್ ಉಪಯೋಗಿಸಬೇಕಾಗಿತ್ತೋ ಅದನ್ನು ಉಪಯೋಗಿಸದೇ ಎಂದರೆ ತುಕ್ಕು ಹಿಡಿದ ಸಿರಿಂಜನ್ನು ಉಪಯೋಗಿಸಿ ಎನ್‌ಕ್ವೈರಿ ಮಾಡಿದ ಮೇಲೆ ಎನ್‌ಕ್ವೈರಿ ರಿಪೋರ್ಟ್‌ನಲ್ಲಿ ಯಾವ ಅಧಿಕಾರಿ ಔಷಧಿ ಉಪಯೋಗಿಸಿದ್ದನೋ ಅವನ ನೆಗ್ಲೆಕ್ಟು ಎಂದು ಸರ್ಕಾರದವರಿಗೆ ವರದಿ ಬಂದಿಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂಥಾದ್ದೇನೂ ಇಲ್ಲ, ಅಲ್ಲಿಯ ಆಫೀಸರುಗಳಲ್ಲಿ ಜಗಳ ಇದೆ, ಆದ್ದರಿಂದ ಸುಮ್ಮನೆ ಅವರು ಆ ರೀತಿ ಅಪಪ್ರಚಾರ ಮಾಡಿರಬಹುದು.

Discussion between the State Government and the Centre regarding the Utilisation of Krishna and Godavari Waters.

*Q.—905. Sri GANJI VEERAPPA (Harihar).—

Will the Government be pleased to state :—

(*a*) whether there has been any further talks or discussion between the State Government and the Centre regarding the Utilisation of Krishna and Godavari waters after the last pronouncement of the Central Government in this regard and if so, the nature of such talks and the result, if any ;

(*b*) whether they are aware of the recent speeches of the Chief Minister and the Minister for Irrigation of the Government of Andhra Pradesh, claiming that the "Award" of the Central Government has given them a green signal for the completion of Srisailam and Pochampad Projects ;

(*c*) whether the State Government has either protested or has sought for clarification regarding the starting of the construction of Srisailam Project ;

(*d*) whether they are insisting for the modification of the original Srisailam Project in the light of the last pronouncement of the Central Government ?

A.—Sri S. NIJALINGAPPA (Chief Minister).—

(*a*) There have been talks and they are still going on.

(*b*) Yes.

(*c*) State Government has sought for clarification.

(*d*) Yes.

Sri GANJI VEERAPPA.—In reply to (a) it has been stated that the talks are going on. May I know whether the Central Government has admitted that there is need for revision of the original award that they had given ?

† Sri S. NIJALINGAPPA.—They had not said so in so many words categorically. They feel that there is need.

Sri GANJI VEERAPPA.—If the Srisailam Project as it is allowed, is the Government aware that they have made provision for the utilisation of 625 t.m.c. ft. of water ?

Sri S. NIJALINGAPPA.—The only amount of water available is 188 t.m.c. ft. and they have made is clear that it shall not be used for irrigation purpose.

Sri GANJI VEERAPPA.—May I take it that the diversion of water to Pennar river and utilising it for irrigation purpose...all this is realised by the Central Government ?

Sri S. NIJALINGAPPA.—That is what I feel by looking at the matter.

Sri G. V. GOWDA.—Should not our Government insist that the matter should be reopened ?

Sri S. NIJALINGAPPA.—We have already been insisting that we have got much, less than what we have to get ; we have been insisting upon it ; we have been asking for certain clarifications.

Sri S. M KRISHNA.—Has it come to the notice of Government that Andhra Pradesh has started the work of the Srisailam Project according to their original plans and estimates ?

Sri S. NIJALINGAPPA.—I am not aware of that. I know that they are going with the project.

Sri G. V. GOWDA.—It is not a fact that recently the Members of Parliament from Mysore had an interview with the Prime Minister, in which the Prime Minister is said to have said that the last word is not said on the sharing of waters and he is prepared to reconsider the whole matter ?

Sri S. NIJALINGAPPA.—That is perfectly true ; that is said by every Minister in the Centre.

Sri D. M. SIDDIAH.—Since Srisailam and Nagarjuna Projects have been started, does it not come in the way of our reconsideration of the allocation of waters ?

Sri S. NIJALINGAPPA.—It does not come in the way of our reconsideration. We have been pressing what we have to get. We have nothing to reconsider except to press to get more water.

Sri K. S. SURYANARAYANA RAO.—Is it not true that the idea of reallocation or re-opening this issue is on the basis of availability of more water, that is the assumption on which this re-allocation is sought to be made ?

Sri S. NIJALINGAPPA.—To some extent that is true.

---

†Indicates that the remarks or speeches have not been revised by the member concerned.

Sri SANJEEVANATH AIKALA.—May I know whether in the recent summit meeting on Tirupathi Hills, the Chief Minister has had any talk with the Chief Minister of Andhra Pradesh, any informal discussions over this matter ?

Sri S. NIJALINGAPPA.—No.

Sri S. M. KRISHNA.—Is it not in the best interests of Mysore State that the State Government should press upon the urgency of the matter n getting certain clarifications with particular reference to Srisailam Project ?

Sri S. NIJALINGAPPA.—That is just what we have been pressing and we have got certain replies which I have already referred to.

ಶ್ರೀ ಎಸ್. ಗೋಪಾಲ ಗೌಡ.—ಶ್ರೀಶೈಲಂ ಮತ್ತು ಪೋಚಂಪಾಡ್ ಪ್ರಾಜೆಕ್ಟುಗಳನ್ನು ಕಟ್ಟಲು ಪ್ರಾರಂಭ ಮಾಡಿದ್ದು ಯಾವಾಗ ?

ಶ್ರೀ ಎಸ್. ನಿಜಲಿಂಗಪ್ಪ.—ನನ್ನ ಹತ್ತಿರ ಆ ಮಾಹಿತಿ ಇಲ್ಲ.

Sri G. V. GOWDA.—Sir, if this Srisailam and Ponchampad design are not modified, will it not affect the 600 T.M.C. tentatively given to us ?

Sri S. NIJALINGAPPA.—It does not. Whatever we are entitled to, we have to get.

Sri G. V. GOWDA.—It is a fact that the Prime Minister has agreed to lay the foundation of the Upper Krishna project ?

Mr. SPEAKER.—Very useful information but it is outside the ambit of this question.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಮಾನ್ಯ ಸಭೆಯ ಮುಂದೆ ಶ್ರೀಶೈಲಂ ಮತ್ತು ಪೋಚಂಪಾಡ್ ಈ ಪ್ರಾಜೆಕ್ಟುಗಳಿಗೆ ಆ ಕೃಷ್ಣಾ ಗೋದಾವರಿ ನೀರು ಇಷ್ಟಿಷ್ಟೇ ಉಪಯೋಗಿಸಬೇಕೆಂದು ಹೇಳಿರುವಾಗ, ಹಾಗೆ ಹೇಳುವುದಕ್ಕೆ ಮುಂಚೆ ಹೇಗೆ ಅವರು ಕಟ್ಟಡ ಕಟ್ಟಲು ಪ್ರಯತ್ನ ಮಾಡಿದರು ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಯಾವಾಗ ಕಟ್ಟಡವನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದರು ಎಂಬುದನ್ನು ನಾನು ಈಗ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಅವರು ಯಾವಾಗ ಕಟ್ಟುವುದಕ್ಕೆ ಪ್ರಾರಂಭ ಮಾಡಿದರು ಎಂಬ ವಿಚಾರ ಗೊತ್ತಿಲ್ಲವೆಂದು ಈಗ ತಾನೆ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದರು. ಅವರು ಅದರ ಪ್ರಾರಂಭೋತ್ಸವಕ್ಕೆ ಹೋಗಿರಲಿಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಹೋಗಿದ್ದರೆ ಗೊತ್ತಾಗೇ ಆಗುತ್ತಿತ್ತು.

Sri S. M. KRISHNA.—Sir, does the State Government think that it is even not late to press for an arbitration with regard to this sharing of inter-state waters ?

Sri S. NIJALINGAPPA.—I am not inclined to think that it is good for us for pressing for it. We shall see what others do.

Promotion to the post of Taluk Sheristedars.

Q.*—909. **Sri B. P. KADAM (Karwar).—

Will the Government be pleased to state:—

(*a*) whether it is a fact that the promotions to the post of Taluk Sheristedars are to be made strictly according to seniority-*cum*-efficiency from among the qualified I Division Clerks according to Rule 4 (3) (*b*) of Mysore Civil Services General Recruitment Rules, 1957 ;

(SRI B. P. KADAM)

(b) whether it is a fact that the Deputy Commissioner, North Kanara, Karwar, recently, on 15-5-1963 ordered the promotions of some four junior officials as Taluk Sheristedars though there are senior qualified and exempted persons available for promotion;

(c) whether the promotion of these officials is in conformity with the Cadre and Recruitment Rules and the Circular instruction issued by the Divisional Commissioner, Belgaum, in 1960 and also in March, 1963;

(d) whether it is a fact that the aggrieved persons have sent representations and filed appeals, etc., against the promotions of these four officials;

(e) if so, the action taken on these representations?

A.—SRI M. V. KRISHNAPPA (Minister for Revenue).—

(a) Yes.

(b) Yes.

(c) No.

(d) Yes.

(e) The order of promotion of the officials made by the Deputy Commissioner, Karwar is found to be irregular and therefore the order promoting them is set aside by the Divisional Commissioner, Belgaum on hearing the appeals.

SRI B. P. KADAM.—May I know when the Divisional Commissioner passed orders setting aside the order of promotion made by the Deputy Commissioner?

SRI M. V. KRISHNAPPA.—On 15th May this year the Deputy Commissioner of Karwar promoted four people and on appeal the Divisional Commissioner set aside these promotions. The exact date is not known. But the decision of the Divisional Commissioner we have received that he has set aside these promotions which are not in order.

Separation of Majare Villages from the Principal Village in Gadag and Mundargi Taluks.

**Q.*—942. SRI C. S. HULKOTI (Mundargi).—

Will the Government be pleased to state:—

(a) in how many cases of Majare villages in Gadag and Mundargi Taluks steps have been taken to separate them from the principal villages;

(b) which are those villages;

(c) since how long the work of separation of each Majare village in the said two taluks is pending; and at what stage each case is pending;

(d) the reasons for the delay in this behalf;

(*e*) whether there is any case of a village panchayet not being formed in Mundargi Taluk on account of long delay caused in the separation of Majare village from the principal one and if so, which is that village ;

(*f*) what steps have been taken up to expedite the work separation of that particular village ?

A.—SRI M. V. KRISHNAPPA (Minister for Revenue).—

(*a*) Nil.

(*b*), (*c*) and (*d*) Do not arise in view of the reply to clause (*a*).

(*e*) No such case.

(*f*) Does not arise in view of the replies given to clauses (*a*) and (*e*).

ಶ್ರೀ ಸಿ. ಎಸ್. ಹುಲ್ಕೋಟಿ.—ಈ ವಿಳಂಬದಿಂದ ಗ್ರಾಮ ಪಂಚಾಯಿತಿ ರಚಿಸಲು ತೊಂದರೆಯಾಗಿವೆ ಎಂದು ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿದ ಮೇಲೆ ಸರ್ಕಾರದವರು ಕೈಗೊಂಡ ಕಾರ್ಯ ಕ್ರಮಗಳೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ತುರ್ತು ಪರಿಸ್ಥಿಯಿಂದ ಇದನ್ನು ಸ್ವಲ್ಪ ಮುಂದಕ್ಕೆ ಹಾಕಲಾಗಿದೆ. ಈ ವಿಚಾರದಲ್ಲಿ ಯಾವ ತೀರ್ಮಾನವನ್ನೂ ಕೈಗೊಂಡಿಲ್ಲ.

ಶ್ರೀ ಸಿ. ಎಸ್. ಹುಲ್ಕೋಟಿ.—ಹಾಗಿದ್ದರೆ ಇಲ್ಲಿ ಅಂಥ ಸಂದರ್ಭಗಳ್ಯಾವುವೂ ಇಲ್ಲ ಎಂದು ಉತ್ತರ ಕೊಟ್ಟಿರುವುದು ಸರಿಯೇ ?

SRI M. V. KRISHNAPPA.—Nothing has happened. No panchayet formation has been stopped because the revenue village has not been separated from the main village.

ಶ್ರೀ ಟಿ. ಕೆ. ಕಂಬಳಿ.—ಈ ಗ್ರಾಮಗಳನ್ನು ಬೇರ್ಪಡಿಸುವ ವಿಚಾರದಲ್ಲಿ ಅಲ್ಲಿಯ ಜನ ಸಂಖ್ಯೆ, ಉತ್ಪತ್ತಿ ಹಾಗೂ ಆ ಊರುಗಳ ವಿಸ್ತೀರ್ಣ ಇವುಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಳ್ಳಲಾಗುತ್ತದೆಯೆ !

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು ಇವುಗಳನ್ನೆಲ್ಲಾ ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಅಲ್ಲಿ ಒಂದು ಹೊಸ ಹಳ್ಳಿಯನ್ನೇ ತಂದಿಟ್ಟ ಹಾಗೆ ಆಗುತ್ತದೆ. ಸರ್ವೆ ಆಗಬೇಕು. ಇದಕ್ಕೆಲ್ಲ ಕಾಲಬೇಕು. ಆದುದರಿಂದ ಈಗಿನ ತುರ್ತು ಪರಿಸ್ಥಿತಿಯಲ್ಲಿ ಇದನ್ನು ಮುಂದಕ್ಕೆ ಹಾಕಲಾಗಿದೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಈ ಕಾರ್ಯ ಇಷ್ಟು ತಡವಾಗಲು ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನಾಗಲೇ ಹೇಳಿದೆನಲ್ಲ ಅವೇ ಕಾರಣಗಳು.

ಶ್ರೀ ಟಿ. ಕೆ. ಕಂಬಳಿ.—ತಾವು ಈ ವಿಚಾರದಲ್ಲಿ ಇನ್ನು ಸರ್ವೆ ನಡೆಸದಿದ್ದರೆ ಯಾವಾಗ ಇದನ್ನು ಪೂರೈಸುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮ ಮಾನ್ಯುಯಲ್‌ನಲ್ಲಿ ಮೇಜರ್ ಅಂಡ್ ಮೈನರ್ ಪಾಪ್ಯುಲೇಷನ್ ಗ್ರಾಮಗಳು ಎಂದು ಇವೆ. ಅದರ ಪ್ರಕಾರ ಮಾಡಲಾಗುತ್ತದೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಇನ್ನೆಷ್ಟು ದಿವಸಗಳಲ್ಲಿ ಮುಗಿಸುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೇಗ ಮುಗಿಸಿದಾಗ್ಯೂ ಈಗ ಅದರ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

Number of Officials of the Revenue Department that are awaiting Promotions to the post of Tahsildars after reaching their Maximum Scale.

*Q.—341. SRI V. S. LAKSHMIKANTHAPPA (Sagar).—

Will the Government be pleased to state :—

(*a*) the number of officials of the Revenue Department in the State that are awaiting promotions to the post of Tahsildars, after reaching their maximum scale (Divisionwise information to be furnished) ;

(*b*) the procedure followed in filling up such vacancies of Tahsildars in the State ?

A.—Sri M. V. KRISHNAPPA (Minister for Revenue).—

(*a*) Bangalore	—	Nil
Mysore	—	3 (Stenos)
Gulbarga	—	9
Belgaum	—	Nil

(*b*) The procedure as prescribed in the Mysore Administrative Services (Recruitment) Rules, 1957 is followed in filling up such vacancies.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ರೆವಿನ್ಯೂ ಇಲಾಖೆಯಲ್ಲಿ ಪ್ರೊಬೇಷನರಿ ರೆವಿನ್ಯೂ ಇನ್‌ಸ್ಪೆಕ್ಟರುಗಳಾಗಿ ಕೆಲಸಕ್ಕೆ ಸೇರಿರತಕ್ಕ ಪದವೀಧರರಾದ ಹಾಗೂ ಅವರ ಪರಮಾವಧಿ ದರ್ಜೆಗೇರಿದ್ದು ಮುಂದೆ ಭಡತಿ ಸಿಕ್ಕದೆ ಕಾದಿರತಕ್ಕ ಜನಗಳ ಸಂಖ್ಯೆ ಎಷ್ಟು ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಬಗ್ಗೆ ತಾವು ಒಂದು ಪ್ರತ್ಯೇಕ ಪ್ರಶ್ನೆ ಕಳುಹಿಸಿದರೆ ಉತ್ತರವನ್ನು ಒದಗಿಸಲಾಗುತ್ತದೆ. ಆದರೆ ಈಗ ತಾವು ಏನು ಪ್ರಶ್ನೆ ಕೇಳಿದ್ದಿರೋ ಅದಕ್ಕೆ ತಕ್ಕ ಉತ್ತರವನ್ನು ಈಗ ಒದಗಿಸಲಾಗಿದೆ. ಗುಲ್ಬರ್ಗ ಡಿವಿಜನ್ ಒಂದನ್ನು ಬಿಟ್ಟರೆ ಇನ್ನುಳಿದ ಎಲ್ಲ ಡಿವಿಜನ್‌ಗಳಲ್ಲಿಯೂ ಪ್ರಮೋಷನ್ ಸಿಕ್ಕಿವೆ. ಎಲ್ಲಿಯೂ ಯಾವ ಜಾಗವೂ ಖಾಲಿ ಇಲ್ಲ. ಈ ನೌಕರಿಗಳಲ್ಲಿ ಶೇಕಡ 50ರಷ್ಟನ್ನು ಡೈರೆಕ್ಟ್ ರೆಕ್ರೂಟ್‌ಮೆಂಟ್ ಮೂಲಕ ಭರ್ತಿ ಮಾಡಲಾಗುತ್ತದೆ. ಇನ್ನು 30 ಪರ್ಸೆಂಟ್ ಇರತಕ್ಕ ಪ್ರಮೋಷನ್‌ನಲ್ಲಿ 2 ಪರ್ಸೆಂಟನ್ನು ಶೀಘ್ರಲಿಪಿಗಾರರಿಗೆ ಮೀಸಲಾಗಿಡಲಾಗಿದೆ. ಇನ್ನುಳಿದ 20 ಪರ್ಸೆಂಟಿನಲ್ಲಿ ಎಲ್ಲವನ್ನೂ ಪಿ. ಎಸ್. ಸಿ. ಅವರು ಭರ್ತಿಮಾಡುತ್ತಾರೆ. ಇದು ನಮ್ಮಲ್ಲಿರತಕ್ಕ ರೆಕ್ರೂಟ್‌ಮೆಂಟ್ ಸಿಸ್ಟಂ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಈ ಇಲಾಖೆಯಲ್ಲಿ ತಮಗೆ ಅನ್ಯಾಯವಾಗಿದೆ ಎಂದು ಕೋರ್ಟುಗಳಿಗೆ ಎಷ್ಟು ಜನ ರಿಟ್ ಹಾಕಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಈ ವಿಚಾರವನ್ನು ಈಗಲಾದರೂ ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರಿಗಿಂತ ಮೇಲೆ ಪದವೀಧರರಿರುವಾಗ ನಾವು ರೂಲ್ಸಿಗೆ ವಿರೋಧವಾಗಿ ಏನು ಮಾಡುವುದಕ್ಕೂ ಆಗುವುದಿಲ್ಲ. ಅವರವರ ಸೀನಿಯಾರಿಟಿ ಪ್ರಕಾರವೇ ಆಗಬೇಕು.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮೈಸೂರು ಡಿವಿಜನ್ನಿನಲ್ಲಿ ಮೂರು ಜನ ಸ್ಟೆನೋಗ್ರಾಫರುಗಳನ್ನು ತಹಶೀಲುದಾರರುಗಳಾಗಿ ಪ್ರಮೋಷನ್ನು ಮಾಡಬೇಕೆಂದು ಆಲೋಚನೆ ಮಾಡಿದ್ದಾರೆಂದು ತಿಳಿದುಬರುತ್ತದೆ. ಹಾಗೆ ಸ್ಟೆನೋಗ್ರಾಫರುಗಳನ್ನು ನೇಮಿಸಿಕೊಂಡರೆ ಈ ತಹಶೀಲುದಾರಿ ಹುದ್ದೆಗೆ ಧಕ್ಕೆ ಬರುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂತಹುದೇನೂ ಇಲ್ಲ. ಅವರಿಗೆ ಟ್ರೈನಿಂಗು ಕೊಡಲಾಗುತ್ತದೆ. ಅಲ್ಲದೆ ಸ್ಟೆನೋಗ್ರಾಫರುಗಳು ನಮಗಿಂತಲೂ ಬುದ್ಧಿವಂತರು, ಅಮಲ್ದಾರರುಗಳಾಗಲು ಲಾಯಕ್ಕಾದವರು ಅನೇಕರು ಇದ್ದಾರೆ, ಅವರು ಅದೇ ವೃತ್ತಿಯಲ್ಲಿರಬೇಕೆಂದೇನೂ ಇಲ್ಲ.

Tibetan Refugees settled in the State

* *Q.*—679. Sri S. GOPALA GOWDA (Thirthahalli).—

Will the Government be pleased to state :—

(*a*) the total number of Tibetan Refugees settled in the State and the places where they are settled (details to be given as to the number of men, women and children) ;

(*b*) the details of facilities like, housing, drinking water, schools, entertainments, etc., afforded by the State in the colonies where Tibetan Refugees are settled together with the amount spent on each item ?

A.—Sri S. NIJALINGAPPA (Chief Minister).—

(*a*) 3,200 refugees consisting of 1,541 men, 1,164 women and 495 children have been settled in the following villages, *viz.*, Gollarahosahalli, Kailaspur, Arlikumari Gulledahalla in Periyapatna Taluk, Mysore District.

(*b*) *Vide* annexure regarding details of facilities afforded to the refugees and also expenditure incurred thereon for the period from October 1960 to February 1960 to 1963.

ANNEXURE

Showing the Details of Facilities provided for the Tibetan Refugees settled in the Land Settlement.

Facilities provided	Expenditure incurred from October 1960 to February 1963.
1	2
	Rs.
1. *Transit Camp.*—On arrival in the camp the refugees are housed in the transit camps, where they are provided free food for a period of seven days to enable them to adjust to camp life before they are employed in the Colony.	84,000
2. *Feeding and Maintenance.*—The Refugees and employed on daily wages at Rs. 2 per head and are provided with work in forest clearance, P. W. D. works and Agricultural Operations, etc.	5,20,000
3. *Housing.*—Each family of Tibetan Refugees of average strength of five members has been provided with one type house of size 20′ x 20′ in the colony area.	6;60,000
4. *Approach Roads.*—All the colonies have been connected with each other and with the main road by means of pucca metal roads with suitable cross drainage works wherever necessary.	82,000
5. *Water Supply.*—Protected drinking water supply has been provided for each colony by means of bore-wells fitted with pump sets connecting storage tanks. Five bore-wells have been provided so far.	65,000

(SRI S. NIJALINGAPPA)

1	2
	Rs.
6. *Health and Sanitation*.—The Refugees are looked after by a Special Medical Staff consisting of one Medical Officer, two compounders, one Midwife and one auxiliary nurse midewife and one Health Inspector in the dispensaries located at suitable places in the Colony. Medicines supplied as gifts by voluntary agencies are also distributed.	61,000
7. *Education*.—The Tibetan Refugee children are being taught Tibetan Hindi and English in three Primary Schools, at the rate of one school for two colonies upto 5th Standard. Adults classes in Hindi and English are also being conducted.	25,000
8. *Recreation*.—Two community Radio receiving sets have been provided so as to enable refugees to hear broadcasts in Tibetan and Indian languages. Equipment for indoor and outdoor games such as Carrom Board, Volley ball, etc., have also been provided, several magazines and publications in the Tibetan language published by the Government of India are supplied free to the refugees.	--
9. *Religion*.—25 Tibetan Buddhist lamas (montks) look after the religious needs of the Tibetans.	

ಶ್ರೀ ಎಸ್. ಗೋಪಾಲ ಗೌಡ.—3,200 ಜನ ನಿರಾಶ್ರಿತರು ನಮ್ಮ ರಾಜ್ಯಕ್ಕೆ ಯಾವ ಯಾವ ತಾರೀಖುಗಳಲ್ಲಿ ಬಂದರು ಎನ್ನುವುದನ್ನು ತಿಳಿಸುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ನಿಜಲಿಂಗಪ್ಪ.—ತಿಳಿಸುವುದಕ್ಕೆ ಸಾಧ್ಯವಿದೆ. 1960ನೇ ಡಿಸೆಂಬರಿನಲ್ಲಿ 624 ಜನ ಬಂದರು. 1961ನೇ ಜನವರಿಯಲ್ಲಿ 586 ಜನ ಬಂದರು. 1961ನೇ ಏಪ್ರಿಲ್ ತಿಂಗಳಿನಲ್ಲಿ 248 ಜನ ಬಂದರು, 1961ನೇ ಜೂನಿನಲ್ಲಿ 637 ಜನ ಬಂದರು. 1961ನೇ ಆಗಸ್ಟು ತಿಂಗಳಿನಲ್ಲಿ 87 ಜನ ಬಂದರು, 1963ನೇ ಜನವರಿ ತಿಂಗಳಿನಲ್ಲಿ 801 ಜನ ಬಂದರು.

† ಶ್ರೀ ಎಸ್. ಗೋಪಾಲ ಗೌಡ.—ಈ ನಿರಾಶ್ರಿತರುಗಳಿಗಾಗಿ ಎಷ್ಟು ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಆರು ಕಾಲೊನಿಗಳನ್ನು ಮಾಡಿ ಈಗಾಗಲೇ 300 ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ.

ಶ್ರೀ ಎಸ್. ಗೋಪಾಲ ಗೌಡ.—ನಿರಾಶ್ರಿತರುಗಳಿಗಾಗಿ ಎರಡು ರೂಪಾಯಿಗಳಷ್ಟು ದಿನಗೂಲಿಯನ್ನು ಕೊಟ್ಟು ಕೆಲಸ ಮಾಡಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಪ್ರತಿ ದಿವಸವೂ ಇವರುಗಳಿಗೆ ಕಡ್ಡಾಯವಾಗಿ ಕೆಲಸಗಳನ್ನು ಕೊಡುತ್ತಿದ್ದಾರೆಯೇ ಅಥವಾ ಯಾವುದಾದರೂ ಕೆಲವು ದಿನಗಳಲ್ಲಿ ಕೆಲಸ ಕೊಟ್ಟು ಉಳಿಕೆಯಾದ ದಿನಗಳಲ್ಲಿ ರಸ್ತೆಗಳಲ್ಲಿ ಅಲೆದಾಡಲು ಬಿಡುತ್ತಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅಲೆದಾಡುವುದಕ್ಕೆ ಬಿಡುತ್ತಿಲ್ಲ. ಅವರುಗಳಿಗೆ ಕೆಲಸವನ್ನು ಕೊಡುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವರುಗಳಿಗೆ ಎಷ್ಟು ಜಮೀನು ಕೊಟ್ಟಿದ್ದೀರಿ ? ಜಮೀನು ಕೊಟ್ಟ ಮೇಲೆ ವ್ಯವಸಾಯ ಮಾಡಲು ರಾಜ್ಯ ಸರಕಾರದಿಂದ ಏನೇನು ಸವಲತ್ತುಗಳನ್ನು ಒದಗಿಸಿ ಕೊಟ್ಟಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಕೇಂದ್ರ ಸರಕಾರದಿಂದ ರಾಜ್ಯ ಸರಕಾರ ಹಣ ತೆಗೆದುಕೊಂಡು 3,500 ಎಕರೆಯಷ್ಟು ಭೂಮಿಯನ್ನು 3,000 ಜನಗಳಿಗಾಗಿ ಹಂಚಿದ್ದೇವೆ. ಅವರಿಗೆ ಎತ್ತುಗಳನ್ನು ಕೊಡುತ್ತೇವೆ, ಬಾಕೀ ವ್ಯವಸಾಯಕ್ಕೆ ಬೇಕಾದ ಮುಟ್ಟುಗಳನ್ನು ಕೊಟ್ಟು ದಿನಕ್ಕೆ ಎರಡು ರೂಪಾಯಿಗಳಷ್ಟು ಕೂಲಿಯನ್ನೂ ಕೊಟ್ಟು ಅನುಕೂಲ ಮಾಡಿಕೊಡಲಾಗಿದೆ ಮತ್ತು ಕೆಲಸಗಳೂ ನಡೆಯುತ್ತಿವೆ.

ಶ್ರೀ ಎಸ್. ಗೋಪಾಲ ಗೌಡ.—ಈ ವಸಾಹತಿಗಾಗಿ ಖರ್ಚುಮಾಡತಕ್ಕ ಹಣ ಕೇಂದ್ರದಿಂದ ಬರುತ್ತದೆ ಎಂದು ಇದೆ. ಹಾಗೆ ಬಂದ ಹಣವನ್ನು ಖರ್ಚು ಮಾಡತಕ್ಕ ಏಜೆನ್ಸಿ ಯಾವುದು ? ಅದನ್ನು ತಿಳಿಸುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲಾ ಹಣವನ್ನೂ ಕೇಂದ್ರದವರೇ ಕೊಟ್ಟು ಸಹಾಯ ಮಾಡುತ್ತಾರೆ. ಅದನ್ನು ರಾಜ್ಯ ಸರಕಾರವೇ ತೆಗೆದುಕೊಂಡು ನೋಡಿಕೊಳ್ಳಲಾಗುತ್ತದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಇವರುಗಳಿಗೆ ನಾನಾ ರೀತಿಯ ಸವಲತ್ತುಗಳನ್ನು ಕೊಡುವಾಗ ಯಾವ ನೀತಿಯನ್ನು ಅನುಸರಿಸುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ. —ಇದರಲ್ಲಿ ನೀತಿಯ ಅವಶ್ಯಕತೆ ಏನಿದೆ ?

ಶ್ರೀ ಜಿ. ವಿ. ಗೌಡ.—ನಮ್ಮ ಸರಕಾರ ಈ ಜನಗಳಿಗಾಗಿ ಸುಮಾರು ಮೂರುವರೆ ಸಾವಿರ ಎಕರೆಯಷ್ಟು ಅರಣ್ಯ ಪ್ರದೇಶ ಕೊಟ್ಟಿದ್ದಾರೆ. ಈ ಪ್ರದೇಶದಲ್ಲಿ ಇವರುಗಳು ಬರುವುದಕ್ಕೆ ಮುಂಚೆ ಸರಕಾರಕ್ಕೆ ಎಷ್ಟು ಉತ್ಪತ್ತಿ ಬರುತ್ತಿತ್ತು ಮತ್ತು ಈ ಜನಗಳು ಬಂದ ಮೇಲೆ ಎಷ್ಟು ಲಾಭವಾಗಿದೆ ಎನ್ನುವುದನ್ನು ತಿಳಿಸುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಪ್ರಶ್ನೆಯೊಳಗೆ ಇದು ಬರುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಲ್ಲಿನ ಜನಗಳ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಿಂದಿ ಮತ್ತು ಇಂಗ್ಲಿಷುಗಳನ್ನು ಮಾತ್ರ ಹೇಳಿಕೊಡಲಾಗುತ್ತಿದೆ ಎಂದು ಇದರಲ್ಲಿ ಹೇಳಿದ್ದಾರೆ. ಇವರಿಗೆ ಕನ್ನಡವನ್ನೂ ಏಕೆ ಹೇಳಿಕೊಡುವ ಪ್ರಯತ್ನ ಮಾಡಲಿಲ್ಲ ?

ಶ್ರೀ ಎಸ್. ನಿಜಲಿಂಗಪ್ಪ.—ಏನೋ ಅವರು ಕೇಳಲಿಲ್ಲ. ಅವರಿಗೆ ಬಂದಿರತಕ್ಕ ಒಂದು ಭಾಷೆ ಮತ್ತು ಅದರೊಡನೆ ಹಿಂದಿ ಮತ್ತು ಇಂಗ್ಲಿಷನ್ನು ಕಲಿಸಲಾಗುತ್ತಿದೆ.

ಶ್ರೀ ಎಸ್. ಗೋಪಾಲ ಗೌಡ.—ಇಲ್ಲಿ ಎಷ್ಟು ಡಿಸ್‌ಪೆನ್‌ಸರಿಗಳಿವೆ ? ಒಂದೇ ಡಿಸ್‌ಪೆನ್‌ಸರಿ ಇದೆಯೋ ಅಥವಾ ಬೇರೆ ಬೇರೆ ಡಿಸ್‌ಪೆನ್‌ಸರಿಗಳಿವೆಯೋ ?

ಶ್ರೀ ಎಸ್. ನಿಜಲಿಂಗಪ್ಪ.—ಎಷ್ಟು ಡಿಸ್‌ಪೆನ್‌ಸರಿಗಳು ಇವೆ ಎನ್ನುವುದರ ವಿವರ ಈಗ ನನ್ನಲ್ಲಿಲ್ಲ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಇಲ್ಲಿಗೆ ಬಂದಿರುವ ಜನರು ಸ್ವತಃ ತಮ್ಮ ಜೀವನವನ್ನು ನಿರ್ವಹಿಸಲು ಈಗಾಗಲೇ ತಯಾರಾಗಿದ್ದಾರೆಯೇ ? ಇಲ್ಲವೇ ಇನ್ನೆಷ್ಟು ದಿನಗಳಲ್ಲಿ ಹಾಗಾಗಬಹುದು?

ಶ್ರೀ ಎಸ್. ನಿಜಲಿಂಗಪ್ಪ.—ತಯಾರಾಗುತ್ತಿದ್ದಾರೆ, ಬಹುಶಃ ಇನ್ನೆರಡು ವರ್ಷಗಳಲ್ಲಿ ತಯಾರಾಗಬಹುದು ಎಂದೆನ್ನಿಸುತ್ತದೆ.

Sri SANJEEVANATH AIKALA.—Out of the 14 lakhs spent so far, May I know what portion is met by the Central Government ?

Sri S. NIJALINGAPPA.—Every pie is borne by the Central Government.

ಶ್ರೀ ಎಸ್. ಗೋಪಾಲ ಗೌಡ.—ಇಲ್ಲಿ ನಿರಾಶ್ರಿತರಾಗಿ ಬಂದಿರತಕ್ಕ ಜನ ಅವರಿಗೆ ಸಿಗುವ ಆಹಾರ ಸರಿಯಾಗಿಲ್ಲ, ಹವಾ ಸರಿಹೋಗುವುದಿಲ್ಲ, ನಮ್ಮ ಆರೋಗ್ಯ ಕೆಟ್ಟಿದೆ, ಅಥವಾ ಕೆಡುವುದಕ್ಕೆ ಕಾರಣವಾಗುತ್ತದೆ ಎನ್ನುವಂತಹ ದೂರುಗಳು ಸರಕಾರಕ್ಕೇನಾದರೂ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಬಂದಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಹಿಂದೆ ಇಲ್ಲಿಗೆ ದಲಾಯಿಲಾಮಾರವರು ಬಂದಿದ್ದಾಗ ಅವರೂ ಈ ಶಿಬಿರಕ್ಕೆ ಭೇಟಿ ಕೊಟ್ಟಿದ್ದರೇ ?

ಶ್ರೀ ಎಸ್. ನಿಜಲಿಂಗಪ್ಪ.—ಹೌದು ಕೊಟ್ಟಿದ್ದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೇಂದ್ರ ಸರಕಾರ ಕೊಟ್ಟ ಹಣವನ್ನು ರಾಜ್ಯ ಸರಕಾರ ತೆಗೆದುಕೊಂಡು ಖರ್ಚು ಮಾಡುವುದರಿಂದ ಭಾರತ ಭೂಮಿಗೆ ಆದಂತಹ ಲಾಭವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಭಾರತ ದೇಶದ ಜನ ಯಾವಾಗಲೂ ಇತರರ ಬಗ್ಗೆ ಕರುಣೆ ಇರತಕ್ಕವರು

ಶ್ರೀ ಎಸ್. ಗೋಪಾಲ ಗೌಡ.—ನಿರಾಶ್ರಿತರು ಇಲ್ಲಿಯೇ ಶಾಶ್ವತವಾಗಿ ನೆಲಸಬೇಕೆನ್ನುವ ಅಭಿಪ್ರಾಯ ಹೊಂದಿದ್ದಾರೋ ಅಥವಾ ಸಮಯ ಬಂದರೆ ವಾಪಸು ಹೋಗುವ ಉದ್ದೇಶದಿಂದಿದ್ದಾರೋ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಹೇಳುವುದು ಕಷ್ಟ.

Sri VIDYADHAR GURUJI SAYANNA.—(Hindi)

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಭೂಮಿಯನ್ನು ಮಾರಿಕೊಂಡು ಹೋದರೆ ಆಗ ಸರಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತದೆ ಎಂದು ಅವರು ಕೇಳಿದರು?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಮಾರುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ನಿರಾಶ್ರಿತರನ್ನು ನೋಡಿಕೊಳ್ಳಲು ಕೇಂದ್ರ ಸರಕಾರ ಸಿಬ್ಬಂದಿಯನ್ನೇನಾದರೂ ಕೊಟ್ಟಿದ್ದಾರೆಯೇ ಅಥವಾ ರಾಜ್ಯ ಸರಕಾರದ ಸಿಬ್ಬಂದಿಯೇ ಇದನ್ನು ನೋಡಿಕೊಳ್ಳುತ್ತದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ನಮ್ಮ ಅಧಿಕಾರಿಗಳೇ ನೋಡಿಕೊಳ್ಳುತ್ತಾರೆ, ಅದರ ಖರ್ಚನ್ನೆಲ್ಲಾ ಅವರು ಕೊಡುತ್ತಾರೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ನಿರಾಶ್ರಿತರುಗಳಿಗಾಗಿ ಕೃಷಿಗೆ ಭೂಮಿಯನ್ನು ಕೊಡುವಾಗ ಅದಕ್ಕನುಕೂಲವಾಗುವಂತೆ ನೀರಾವರಿ ಕಟ್ಟೆ ಅಥವಾ ಅಣೆಕಟ್ಟುಗಳನ್ನು ಕಟ್ಟಿ ಸೌಕರ್ಯ ಮಾಡುತ್ತಿದ್ದಾರೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಹತ್ತಿರದಲ್ಲಿರುವ ಕೆರೆಗಳಿಗೆ ಕಟ್ಟೆಯನ್ನು ಕಟ್ಟಿರುವ ನಿದರ್ಶನಗಳಿವೆ.

Sri SANJEEVANATH AIKALA.—What is the workload here in terms of workload and man-hours?

Sri S. NIJALINGAPPA.—It is difficult to say what man-hours are put.

Sri B. P. KADAM.—Are they wearing Khadder clothes?

Sri S. NIJALINGAPPA.—No, Sir.

Mr. SPEAKER.—Question hour is over.

QUESTIONS FOR ANSWERS ON THE DAY.

(but not taken up)

Paucity of Food and Fodder due to failure of rains in Hosadurga Taluk.

*Q.—926. Sri G. T RANGAPPA (Hosadurga).—

Will the Government be pleased to state :—

(a) whether it has come to their notice that there is paucity of food and fodder due to failure of rains in Hosadurga Taluk this year;

(b) the steps they intend to take in this behalf?

A.—Sri M. V. KRISHNAPPA (Minister for Revenue).—

(a) No.

(b) Does not arise.

Measures adopted to arrest the soaring prices of essential commodities.

*Q.—945. Sri S. RAJAGOPAL (K.G.F.).—

Will the Government be pleased to state :—

what measures are being adopted and with what result to arrest the soaring prices of essential commodities and to hold the prices line ?

A.—Sri M. V. KRISHNAPPA (Minister for Revenue).—

1. Fair Price shops for sale of wheat and sugar have been opened.

2. The following measures are being implemented :—

(i) The Rice (Southern Zone) Movement Control Order, 1957 ;
(ii) The Imported Foodgrains (Prohibition of Unauthorised Sale) Order, 1958 ;
(iii) The Southern Rice Zone (Restrictions on Rail Bookings) Order, 1958 ;
(iv) The Rice Milling Industry (Regulation) Act, 1958 (21 of 1958) ;
(v) The Rice Milling Industry (Regulation) and Licensing Rules, 1959 ;
(vi) The Essential Articles (Display of Prices) Order, 1962 and Amendment Order 1962 ;
(vii) The Essential Articles (Price Control) Order, 1963 ;
(viii) The Mysore Sugar Dealers Licensing Order, 1962 ;
(ix) The Mysore Foodgrains Dealers Licensing Order, 1963 ;
(x) The Sugar Control Order, 1963.

3. The following further steps have been taken :—

(i) Building up buffer stock of rice for consumption during the lean periods of the year by encouraging the well managed Co-operatives in the State to purchase paddy.

(ii) Two Centrally sponsored Schemes, one for organisation of Consumers' Co-operative Societies in urban areas with a population of 50,000 and above and another for distribution of consumers articles in rural areas through Co-operative Marketing Societies are under implementation.

The implementation of above measures has had the desired effect of holding the price line.

SIXTEENTH REPORT OF BUSINESS OF ADVISORY COMMITTEE.—

Presentation.

Mr. SPEAKER.—I prsent the 16th Report of the Business Advisory Committee.

Sri A. R. PANCHAGAVI.—I beg to move:

"That the House agrees with the 16th Report of the Business Advisory Committee"

Mr. SPEAKER.—The question is:

"That the House agrees with the 16th Report of the Business Advisory Committee."

The motion was adopted.

MOTION OF NO-CONFIDENCE IN THE COUNCIL OF MINISTERS.

Sri C. J. MUCKANNAPPA.—Before the Leader of the Opposition begins, with your permission, I want to ask till what date we will be sitting. According to the Report of the Business Advisory Committee, 26 hours of work have been allotted, which means 8 days. I want to know of this because the Leader of the House is present.

Mr. SPEAKER.—I will tell the Member later.

Sri G. V. GOWDA.—For the Municipalities Bill the time given is inadeqaute, in my opinion.

Mr. SPEAKER.—There is a story of Rip Van Winkle (*laughter*). We will proceed with the next item.

Sri S. SIVAPPA.—I beg to move:

"That this House has no confidence in the Council of Ministers of the State of Mysore."

Mr. SPEAKER.—Motion moved:

"That this House has no confidence in the Council of Ministers of the State of Mysore."

1-30 P.M.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಗಳೆ, ನಾನು ಈ ನಿರ್ಣಯವನ್ನು ಮಂಡಿಸುತ್ತೇನೆ:

"That this House has no confidence in the Council of Ministers of the State of Mysore."

ಮೈಸೂರು ಸಂಸ್ಥಾನದ ಮಂತ್ರಿಮಂಡಲದಲ್ಲಿ ಈ ಸಭೆಯ ವಿಶ್ವಾಸವಿಲ್ಲ ಎಂಬ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸುತ್ತಾ ಇರತಕ್ಕಂಥಾ ಈ ಮಹಾ ಪುಣ್ಯ ಈ ವರ್ಷ ನಮ್ಮ ಶಾಸನ ಸಭೆಯಲ್ಲಿ ಇದು ಎರಡನೇ ಬಾರಿ. ಈಗ್ಗೆ ಸುಮಾರು 12 ತಿಂಗಳ ಹಿಂದೆ ಇದೇ ಸಭೆಯಲ್ಲಿ, ಇದೇ ಮಂತ್ರಿ ಮಂಡಲದ ಮೇಲೆ--ಆಗ ಬಹುಶಃ ಕೆಲವರು ಈಗಿರತಕ್ಕಂಥ ಮಂತ್ರಿಗಳು ಇರಲಿಲ್ಲವೇನೊ, ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದೆವು. ಅವತ್ತಿನ ದಿವಸ ಕೆಲವು ವಿಷಯಗಳನ್ನು ಸ್ಪಷ್ಟೀಕರಿಸಿ ಅವಿಶ್ವಾಸ ನಿರ್ಣಯದಲ್ಲಿ ಕಾಣಿಸಿದ್ದೆವು. ಇವತ್ತಿನ ದಿವಸ ಯಾವುದೇ ಸ್ಪಷ್ಟೀಕರಣ ಮಾಡಿಲ್ಲ. ಅವತ್ತು ಇಂಥದೇ ವಿಷಯ ಅಂಥ ಹೇಳಿದ್ದೆವು, ಅದು ಇವತ್ತು ಬೇಕಾಗಿಲ್ಲ. ಏತಕ್ಕೆಂದರೆ? ಆ ದಿವಸ ಕೆಲವು ವಿಷಯಗಳನ್ನು ನಾವು ಉದಾಹರಣೆಗಾಗಿ ಈ ಸಭೆಯ ಮುಂದೆ ಅವಿಶ್ವಾಸ ನಿರ್ಣಯದ ಮುಖಾಂತರ ಮಂಡನೆ ಮಾಡಿದ್ದೆವು. ಆ ದಿವಸ ಸರಕಾರದವರು ಕೊಟ್ಟಂಥ ಜವಾಬು ಮತ್ತು ಅದರಿಂದ ಈಚೆಗೆ ನಡೆದ ಘಟನಾವಳಿಗಳನ್ನು ನೋಡಿದರೆ, ಇವತ್ತು ಸರ್ಕಾರದ ಎಲ್ಲ ಕಾರ್ಯ ಚಟುವಟಿಕೆಗಳಲ್ಲಿಯೂ ಕೂಡ ನಮಗೆ ನಂಬಿಕೆ ಇಲ್ಲದಂತಾಗಿದೆ.

Mr. SPEAKER.—May I know whether the Hon'ble Member is enumerating any specific points with regard to this resolution indicating that the House has no confidence in the Council of Ministers, so that I may regulate the debate properly ?

ಶ್ರೀ ಎಸ್. ಶಿವಪ್ಪ.—ಈ ಸಭೆಯು ವಿಶ್ವಾಸವನ್ನು ಈ ಮಂತ್ರಿಮಂಡಲ ಏತಕ್ಕೋಸ್ಕರ ಕಳೆದುಕೊಂಡಿದೆ ಅನ್ನುವುದನ್ನು ಸಭೆಯ ಮುಂದೆ ಈಗ ತಿಳಿಸುತ್ತೇನೆ.

ಹೋದ ಸಭೆಯಲ್ಲಿ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದ ಮೇಲೆ ಈ ದೇಶದಲ್ಲಿ ಒಂದು ಮಹತ್ವಪೂರಿತವಾದ ಘಟನೆ ನಡೆಯಿತು. ಅದು ತುರ್ತು ಪರಿಸ್ಥಿತಿ (ನ್ಯಾಷನಲ್ ಎಮರ್ಜನ್ಸಿ) ದೇಶದಲ್ಲಿ ಬಂದಿದೆ. ಸರಕಾರದ ಮೇಲೆ, ಸರಕಾರದ ಅನ್ಯಾಯದ ವಿರುದ್ಧ ಎಷ್ಟೇ ಹೋರಾಟ ಮಾಡುತ್ತಾ ಇದ್ದರೂ ಕೂಡ, ತುರ್ತು ಪರಿಸ್ಥಿತಿಯಿಂದಾಗಿ, ನಮ್ಮೆಲ್ಲರ ಸಹಾಯವನ್ನೂ ಕೂಡ, ಸಹಕಾರವನ್ನೂ ಕೂಡ ಸರಕಾರಕ್ಕೆ ಕೊಡಬೇಕೆಂದು ಏನು ಒಂದು ಭಾವನೆ ಇಟ್ಟುಕೊಂಡಿದ್ದೆವೋ, ಆ ಭಾವನೆಯನ್ನು ಹಿಂತೆಗೆದು ಈ ನಿರ್ಣಯದ ಮುಖಾಂತರ ನಿಮ್ಮಲ್ಲಿ ಅವಿಶ್ವಾಸವನ್ನು ವ್ಯಕ್ತ ಪಡಿಸುತ್ತಿದ್ದೇವೆ. ಈ ತುರ್ತು ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದಲ್ಲಿ ಮೈಸೂರು ಸರಕಾರ ತನ್ನ ಕರ್ತವ್ಯವನ್ನು ಎಷ್ಟರಮಟ್ಟಿಗೆ ನೆರವೇರಿಸಿದೆ ಅನ್ನತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ತುರ್ತು ಪರಿಸ್ಥಿತಿಯಲ್ಲಿ ನಮ್ಮ ಇಡೀ ರಾಜ್ಯದ 2 ಕೋಟಿ 40 ಲಕ್ಷ ಜನ ಸರಕಾರಕ್ಕೆ ತನ್ನ ಬೆಂಬಲ ವನ್ನು ನೀಡಿತು ಮತ್ತು ಸರ್ಕಾರಕ್ಕೆ 3 ಕೋಟಿ ರೂಪಾಯಿಗಳನ್ನು ಕೂಡ ಹಣದ ರೂಪದಲ್ಲಿ ಕೊಟ್ಟಿತು. ದೇಶದಲ್ಲಿ ಹುಟ್ಟಿದ ಹುಮ್ಮಸ್ಸನ್ನು ಹೊರಹೊಮ್ಮಿದ ಹುಮ್ಮಸ್ಸನ್ನು ಎಷ್ಟರಮಟ್ಟಿಗೆ ಉಪಯೋಗಿಸಿಕೊಂಡಿರಿ ? ಅದರ ಮೇಲೆ ನಿಮ್ಮ ಚೈತನ್ಯವನ್ನು, ಶಕ್ತಿಯನ್ನೂ ಅಳೆಯಬೇಕು. ದೇಶದಲ್ಲಿ ಹೊಳೆಯ ರೀತಿಯಲ್ಲಿ ಹುಟ್ಟಿದಂಥ ಹುಮ್ಮಸ್ಸಿಗೆ ಈಗಿನ ಸರಕಾರ ದಬ್ಬಾಳಿಕೆ ಎಂಬ ಹುಳಿಯನ್ನು ಹಿಂಡಿದರು. ತುರ್ತು ಪರಿಸ್ಥಿತಿಯಿಂದಾಗಿ ಜನತೆಯಲ್ಲಿ ಹೊರಹೊಮ್ಮಿದ ಹುಮ್ಮಸ್ಸಿಗೆ, ಹಣವನ್ನು ಶೇಖರಿಸುವ ಜವಾಬ್ದಾರಿಯನ್ನು ಹೊರಿಸಿದ ನಿಮ್ಮ ಸಣ್ಣ ಪುಟ್ಟ ಅಧಿಕಾರಿಗಳು ದರ್ಪ ವೆಂಬ ವಿಷವನ್ನು ಹಾಕಿ, ಅದರಿಂದ ಏನೇನು ಅನ್ಯಾಯವಾಗಿದೆ ಅನ್ನುವುದನ್ನು ನಿಮ್ಮ ಗಮನಕ್ಕೆ ತಂದಿದೆ. ನಿಮ್ಮ ಅಧಿಕಾರಿಗಳು ಜನತೆಯ ಮೇಲೆ ಒತ್ತಾಯವನ್ನು ಹೊರಿಸಹೋಗಿ ಇದರಿಂದ ಪರಿಣಾಮವೇನಾಗಿದೆ ? ಉದಾಹರಣೆ ಹೇಳುವುದಾದರೆ, ಬಿಜಾಪುರದಲ್ಲಿ ಒತ್ತಾಯ ಹಾಕಿ ವಸೂಲು ಮಾಡಿದ ವಿಷಯವನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಇನ್ನೂ ಈ ತರಹ ಅನೇಕ ಅಧಿಕಾರಿ ಗಳು ಯಾವ ರೀತಿಯಲ್ಲಿ ತಮ್ಮ ದರ್ಪವನ್ನು ತುರ್ತು ಪರಿಸ್ಥಿತಿಗೆ ಹಣ ಸಂಗ್ರಹ ಮಾಡಲು ದರ್ಪ ಉಪಯೋಗಿಸಿದ್ದಾರೆ—ನೀವು ಎಷ್ಟೇ ನಿರಾಕರಿಸಿ, ಅನ್ನುವ ವಿಷಯ ಇದೆ ; ನಿಜಾಂಶವಿದೆ ಹೀಗೆ ಒತ್ತಾಯವೆಂಬ ಹುಳಿಯನ್ನು ಜನತೆಯ ಹುಮ್ಮಸ್ಸಿನಲ್ಲಿ ಹಿಂಡಿದಮೇಲೂ, ಸರಕಾರ ತನ್ನ ಜವಾಬ್ದಾರಿಯನ್ನು ಸರಿಯಾಗಿ ನೆರವೇರಿಸಿಲ್ಲ ಅನ್ನುವುದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಯಾವಾಗ ಒಂದು ಸ್ಫೂರ್ತಿದಾಯಕವಾದ ಹುಮ್ಮಸ್ಸು ಬಂದಿತೋ, ಅದನ್ನು ಯಾವ ರೀತಿ ಉಪಯೋಗಿಸಿಕೊಂಡರು ಎಂದರೆ ಮಾನ್ಯ ಮುಖ್ಯ ಮಂತ್ರಿಗಳು ರಾಷ್ಟ್ರೀಯ ರಕ್ಷಣಾ ನಿಧಿಯ ಖರ್ಚು ವೆಚ್ಚ ಏನು ಅನ್ನತಕ್ಕಂಥಾದ್ದನ್ನು ಈ ಸಭೆಗೆ ಒಪ್ಪಿಸಲಿಲ್ಲ. ಇದನ್ನು ಜನತೆ ಕೇಳುತ್ತಾರೆ. ಬಿಜಾಪುರದ ಹೆಣ್ಣು ಮಕ್ಕಳು ತ್ಯಾಗಮನೋಭಾವದಿಂದ, ಕರ್ತವ್ಯ ದೃಷ್ಟಿಯಿಂದ, ದೇಶದಲ್ಲಿ ತುರ್ತು ಪರಿಸ್ಥಿತಿ ಬಂದಿದೆಯೆಂದು ತಮ್ಮ ಕೈಲಿದ್ದ ಬಳೆಗಳನ್ನೂ, ಮೂಗಿನ ಮೂಗುಬಟ್ಟುಗಳನ್ನೂ, ಚಿನ್ನವನ್ನೂ, ಚೀಣದೈತ್ಯನನ್ನು ಓಡಿಸಬೇಕು, ಆಕ್ರಮಣವನ್ನು ಎದುರಿಸಬೇಕು ಎಂಬ ಮಹತ್ವಾ ಕಾಂಕ್ಷೆಯಿಂದ, ವೀರಯೋಧರ ಸಹಾಯಕ್ಕೆ ಕೊಟ್ಟರು. ತಮ್ಮ ಒಡವೆಗಳನ್ನು, ತಮ್ಮ ಸರ್ವಸ್ವ ವನ್ನೂ ರಾಷ್ಟ್ರಕ್ಕೆ ಕೊಡುವುದು ಕರ್ತವ್ಯವೆಂದು ಕೊಟ್ಟರು, ಚಿನ್ನವನ್ನು ನಿಮ್ಮ ತುಲಾಭಾರವನ್ನು ಮಾಡಲಿ ಎಂದು ಕೊಟ್ಟರೆ ? ಅವರು ಅದಕ್ಕೆ ಕೊಡಲಿಲ್ಲ. ತುಲಾಭಾರಕ್ಕಾಗಿ ಎಷ್ಟು ಖರ್ಚಾಯಿತು ಅಂತ ಲೆಕ್ಕವನ್ನು ತಾವು ಕೊಡಿ ಅಂತ ಹೇಳಿದರೆ, ಲೆಕ್ಕವನ್ನು ಸರಕಾರ ಕೊಟ್ಟಿಲ್ಲ. ನ್ಯಾಶನಲ್ ಡಿಫೆನ್ಸ್‌ನಂಥ ಒಂದು ಹಣವನ್ನು ಖರ್ಚು ಮಾಡುವಾಗ ಲೆಕ್ಕ ಒಪ್ಪಿಸಬೇಡವೆ ? ನಿಮ್ಮನ್ನು ತೂಕ ಮಾಡುವುದಕ್ಕೆ, ನಿಮ್ಮ ಭೋಗಕ್ಕೆ, ಪ್ರೊಸೆಶನ್ನಿಗೆ, 20 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಎಂಬ ಅಂಶ ನಮ್ಮ ಗಮನಕ್ಕೆ ಬಂದಿದೆ. 20 ಸಾವಿರ ರೂಪಾಯಿ 'ಸಿನಿಮಾ' ಏಕೆ ಬೇಕು ? ತುರ್ತು ಪರಿಸ್ಥಿತಿ, ಆದ್ದರಿಂದ ಹಣವನ್ನು ಮಿತವ್ಯಯದಿಂದ ಪ್ರತಿಯೊಬ್ಬರೂ ಖರ್ಚು ಮಾಡಬೇಕೆಂದು ಹೇಳುವ ಕಾಲದಲ್ಲಿ ನಾನು ತಮಗೆ ಒಂದು ಪ್ರಶ್ನೆಯನ್ನು ಹಾಕುತ್ತೇನೆ. ಈ ತುರ್ತು ಪರಿಸ್ಥಿತಿಯಲ್ಲಿ ಹಣದ ಮಿತವ್ಯಯಕ್ಕಾಗಿ ತಾವು ಏನು ಕಾರ್ಯಕ್ರಮವನ್ನು ಹಾಕಿಕೊಂಡಿ ದ್ದೀರ ? ನಿಮ್ಮ ಸರಕಾರದ ಪ್ರತಿಯೊಬ್ಬ ಮಂತ್ರಿಗಳೂ ಮಿತವ್ಯಯದ ಏನು ಕಾರ್ಯಕ್ರಮ ಹಾಕಿ ಕೊಂಡಿದ್ದಾರೆಂದು ತಾವು ಹೇಳುತ್ತೀರ ? ವೈಯಕ್ತಿಕವಾಗಿ ನಿಮ್ಮಲ್ಲಿ ಒಬ್ಬೊಬ್ಬರಲ್ಲಿಯೂ ಕೂಡ ಗೌರವವಿದೆ, ಸ್ನೇಹವಿದೆ. ಸರಕಾರ ಏನು ಮಿತವ್ಯಯ ಮಾಡಿದೆ ಎಂಬ ಜನತೆಯ ಕೂಗನ್ನು ತಮ್ಮ

(ಶ್ರೀ ಎಸ್. ಶಿವಪ್ಪ)

ಮುಂದೆ ಇಡುತ್ತೇನೆ. ದೇಶ ಇದನ್ನು ಕೇಳುತ್ತಾ ಇದೆ. ತುರ್ತು ಪರಿಸ್ಥಿತಿಯಲ್ಲಿ ಮಂತ್ರಿವರ್ಗ ಮಿತವ್ಯಯವನ್ನು ಎಷ್ಟು ಮಾಡಿದೆ, ಮಾಡುತ್ತಿದೆ, ತಮಗೆ ಸಂಬಂಧಪಟ್ಟ ಹಾಗೆ ಮಂತ್ರಿಗಳು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ಜನತೆ ಕೇಳುತ್ತಿದೆ. ಆ ಸವಾಲನ್ನು ಜನತೆ ತಮ್ಮ ಮುಂದೆ ಇಡುತ್ತಿರುವಾಗ ಏನು ಉತ್ತರ ಕೊಟ್ಟಿದ್ದೀರಿ, ಕೊಡುತ್ತೀರಿ ? ತುರ್ತು ಪರಿಸ್ಥಿತಿ ಬಂದ ಮೇಲೆ ನಿಮ್ಮ ಮಂತ್ರಿಮಂಡಲದಲ್ಲಿ 25 ಜನರಿದ್ದುದನ್ನು 27 ಮಾಡಿದಿರಿ. ಅದೂ ಯಾವಾಗ ? ಅದನ್ನು ತುರ್ತು ಪರಿಸ್ಥಿತಿ ಅವಧಿಯಲ್ಲಿ ಮಾಡಿದ್ದೀರಿ. ಇದನ್ನು ನೋಡಿದರೆ, ನಿಮಗೆ ತುರ್ತು ಪರಿಸ್ಥಿತಿಯನ್ನು ಎದುರಿಸಬೇಕೆಂಬ ಒಂದು ಆಕಾಂಕ್ಷೆ ಇದೆಯೆ ಎಂಬ ಅನುಮಾನ ನಿಜವಾಗಿ ಬಂದಿದೆ. ನಿಮ್ಮ ಒಂದು ಪಂಗಡದ ಮುಂದುವರಿಕೆಗಾಗಿ, ಪಕ್ಷದ ಮುಂದುವರಿಕೆಗಾಗಿ, ನಿಮ್ಮ ಅಧಿಕಾರವನ್ನು ಶಾಶ್ವತವಾಗಿ ಉಳಿಸಿಕೊಂಡು ಹೋಗುವುದಕ್ಕಾಗಿ, ನಿಮ್ಮ ಕಡೆಯ ಜನಗಳಿಗೆ ಅಧಿಕಾರವನ್ನು ಕೊಟ್ಟು ಅವರ ಸಹಾಯವನ್ನು ತೆಗೆದುಕೊಂಡು ನಿಮ್ಮ ಮಂತ್ರಿಮಂಡಲವನ್ನು ಮುಂದುವರಿಸಿಕೊಂಡು ಹೋಗುವುದೇ ನಿಮ್ಮ ಮುಖ್ಯ ಉದ್ದೇಶ. ನೀವು ಯಾವ ರೀತಿ ಮಾಡಿದ್ದೀರೊ ಅದು ಖಂಡಿತವಾಗಿ ಮಿತವ್ಯಯವಲ್ಲ, ತುರ್ತು ಪರಿಸ್ಥಿತಿಯಲ್ಲಿ ಮಾಡಬೇಕಾದಂಥ ಕಾರ್ಯ ಇದು ಅಲ್ಲ ಎಂದು ಹೇಳುವ ಜನತೆಯ ವಾಣಿಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ದೇಶದಲ್ಲಿ ನಿಮ್ಮ ಪಕ್ಷದ ಕಾರ್ಯಕ್ರಮ ಏನೇ ಇರಲಿ, ಅದರ ಬಗ್ಗೆ ಹೇಳುವುದಿಲ್ಲ ; ಕಾಮರಾಜ ಸೂತ್ರ ನಮಗೆ ಸಂಬಂಧಪಟ್ಟದ್ದಲ್ಲ ; ಅದು ತಮಗೆ ಸಂಬಂಧಪಟ್ಟ ವಿಚಾರ, ನಿಮ್ಮ ಪಕ್ಷಕ್ಕೆ ಸಂಬಂಧಪಟ್ಟ ವಿಚಾರ. ಈ ವಿಚಾರವನ್ನು ನಮ್ಮ ವಿರೋಧ ಪಕ್ಷದ ಎಲ್ಲ ಸದಸ್ಯರೂ ಈ ಶಾಸನ ಸಭೆಯಲ್ಲಿ ಆಗಿಂದಾಗ್ಗೆ ಹೇಳುತ್ತಲೇ ಬಂದಿದ್ದಾರೆ. ಮಿತವ್ಯಯ ಮಾಡಿ, ಇಷ್ಟು ದೊಡ್ಡ ಮಂತ್ರಿ ಮಂಡಲ ಬೇಡ ಎಂದು. ಈ ರಾಜ್ಯದ ಆಡಳಿತ ನಡೆಸಲು ಕೇವಲ 8-10 ಜನ ಇರತಕ್ಕಂಥ ಮಂತ್ರಿ ಮಂಡಲ ಸಾಕು ಅಂತ ಆಗಿಂದಾಗ್ಗೆ ಅನೇಕ ವೇಳೆ ಇಲ್ಲಿ ಮತ್ತು ಬೇರೆ ವೇದಿಕೆಗಳ ಮೇಲೆ ಸಾರಿಸಾರಿ ಹೇಳುತ್ತಾ ಬಂದಿದ್ದೇವೆ. ಈ ಮಿತವ್ಯಯದ ವಿಚಾರದಲ್ಲಿ ಮಂತ್ರಿ ಮಂಡಲ ಮೇಲ್ಪಂಕ್ತಿ ಹಾಕತಕ್ಕಂಥ ಕಾರ್ಯ ಏನೂ ಮಾಡಲಿಲ್ಲ. ತುರ್ತು ಪರಿಸ್ಥಿತಿಯಿಂದ ಮಿತವ್ಯಯ ಮಾಡಬೇಕೆಂದು ಎಲ್ಲ ಜನಗಳಿಗೂ ಒತ್ತಾಯ ಮಾಡುತ್ತಿರುವಾಗ, ಆ ಪೆಡಂಭೂತವನ್ನು ನಿಮ್ಮ ಮೇಲೆ ಏಕೆ ಹಾಕಿಕೊಳ್ಳಲಿಲ್ಲ ಎಂದು ಜನತೆ ಕೇಳುತ್ತಾರೆ. ಹೀಗಾಗಿ ಅವರಿಗೆ ನಿಮ್ಮ ಮೇಲೆ ನಂಬಿಕೆ ಹೋಗಿದೆ. ಇನ್ನೊಬ್ಬರ ಮೇಲೆ ಹೊರಿಸುವ ಕರ್ತವ್ಯಪರಿಪಾಲನೆ ಜವಾಬ್ದಾರಿಯನ್ನು ಸರಕಾರಕ್ಕೇ ಅನುಸರಿಸುವ ಶಕ್ತಿ ಇಲ್ಲದೆ ಇರುವುದರಿಂದ, ಈ ಸರಕಾರಕ್ಕೆ ಆಳುವ ಹಕ್ಕು ಎಲ್ಲಿದೆ, ಅದನ್ನು ಕಳೆದುಕೊಂಡಿದೆ. ದಯೆಯಿಟ್ಟು ರಾಜೀನಾಮೆ ಕೊಡಬೇಕು ಎಂದು ದೇಶ ತಮಗೆ ಇವತ್ತಿನ ದಿವಸ ಕೇಳುತ್ತಾ ಇದೆ.

ಇವತ್ತಿನ ದಿವಸ ಸರ್ಕಾರ ಏನೇನು ಮಾಡಿದೆ ಎನ್ನುವುದನ್ನು ಕೆಲವು ಉದಾಹರಣೆಗಳಿಂದ ಸಭಾಪತಿಗಳ ಮೂಲಕ ಈ ಸಭೆಯ ಮುಂದೆ ಮಂಡಿಸುತ್ತೇನೆ. ಇವತ್ತು ಈ ಸಭೆಯಲ್ಲಿ ಅನೇಕವಾದ ವಸ್ತುಗಳನ್ನು ತಾವಾಗಿಯೇ ಕೊಟ್ಟಿದ್ದಾರೆಂದರೆ ಎಷ್ಟರ ಮಟ್ಟಿಗೆ ಈ ಸರ್ಕಾರ ಆಳತಕ್ಕ ನಂಬಿಕೆಯನ್ನು ಕಳೆದುಕೊಂಡಿದ್ದಾರೆ ಎಂದು ಅರ್ಥವಾಗುತ್ತದೆ. ನೀವಾಗಿಯೇ ಕೊಟ್ಟ ಅಂಕಿ ಅಂಶಗಳ ಪ್ರಕಾರವಾಗಿಯೇ ಖಂಡಿತವಾಗಿ ಮಂತ್ರಿಮಂಡಲದಲ್ಲಿರುವುದಕ್ಕೆ ಯೋಗ್ಯರಲ್ಲ ಎನ್ನುವಂಥದ್ದನ್ನು ಉದಹರಿಸಬಲ್ಲೆ.

ಮೊದಲನೆಯದಾಗಿ ಖಾದಿ ಬೋರ್ಡ್ ವ್ಯವಹಾರ ನಮ್ಮ ದೇಶದಲ್ಲಿ ಯಾವ ರೀತಿ ನಡೆಯುತ್ತಿದೆ ಎಂದು ನೋಡಿದರೆ, ಮಹಾತ್ಮಾಜಿಯವರು ಜೀವಂತವಾಗಿ ಇದ್ದರೆ ಅವರು ಸತ್ಯಾಗ್ರಹವನ್ನು ಮೈಸೂರಿನಲ್ಲಿ ಈ ಮಂತ್ರಿಮಂಡಲದ ಮೇಲೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿದೆ. ಮಹಾತ್ಮ ಗಾಂಧೀಜಿಯವರಿಗೆ ಅಚ್ಚುಮೆಚ್ಚಾದ ಖಾದಿಗೆ ಸಂಬಂಧಪಟ್ಟ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ಈ ದೇಶದಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳು ಖರ್ಚಾಗುತ್ತಿವೆ. ಈ ಮಂಡಳಿಯಲ್ಲಿ ಲೆಕ್ಕಪತ್ರಗಳ ವ್ಯವಹಾರ ಖರ್ಚಿನ ವ್ಯವಹಾರ ಯಾವ ರೀತಿ ನಡೆಯುತ್ತಿದೆ ಎನ್ನತಕ್ಕದ್ದನ್ನು ನಾನು ಹೇಳಬೇಕಾಗಿಲ್ಲ. ಆ ಮಂಡಳಿಯ ಅಧ್ಯಕ್ಷರು ಒಂದು ದೀರ್ಘವಾದ ಹೇಳಿಕೆಯನ್ನು ಕೊಟ್ಟು ಅದರ ಮುಖಾಂತರ ತಿಳಿಸಿದ್ದಾರೆ. ಅವರು ಹೇಳಿರುವಂತೆ ಆ ಮಂಡಳಿಯಲ್ಲಿ ಸುಮಾರು ಆರು ಲಕ್ಷ ರೂಪಾಯಿಗಳು ದುರ್ವ್ಯಯವಾಗಿವೆ. ಆಗಿಂದಾಗ್ಗೆ ಸರ್ಕಾರಕ್ಕೆ ಈ ಸಂಸ್ಥೆಯ ಲೆಕ್ಕಗಳನ್ನು ಆಡಿಟ್ ಮಾಡಲು ಅಲ್ಲಿಗೆ ಸರಿಯಾದವರನ್ನು ಕಳಿಸಿ ಎಂದು 1960ನೆಯ ಇಸವಿಯಿಂದಲೂ ಏಕಪ್ರಕಾರವಾಗಿ ಬರೆಯುತ್ತಿದ್ದೆ. ನಮಗೆ ಸರಿಯಾದ ಲೆಕ್ಕಾಚಾರ ಮಾಡತಕ್ಕ ಅಧಿಕಾರಿಗಳಿಲ್ಲ ಅವರನ್ನು ಕಳಿಸಿ, ಲೆಕ್ಕಪತ್ರಗಳ ಆಡಿಟ್ ಆಗಿಲ್ಲ ಎನ್ನತಕ್ಕ ಅಂಶವನ್ನು ಸರ್ಕಾರದ ಮುಂದೆ ಆಗಿಂದಾಗ್ಗೆ ಇಟ್ಟಿದ್ದೇನೆ ಎಂದು. ಆದರೂ ಕೂಡ ಸರ್ಕಾರ ಕಣ್ಣುಮುಚ್ಚಿ ನಿದ್ರೆ ಮಾಡುತ್ತಿತ್ತು ಎಂದು ಕಾಣುತ್ತದೆ ಏನು ಬೇಕಾದರೂ ನಡೆದುಕೊಂಡು ಹೋಗಲಿ, ಯಾರು ಬೇಕಾದರೂ

ದುಡ್ಡು ಹೊಡೆಯಲಿ, ಯಾರು ತಿಂದರೆ ತಾನೆ ಏನು ಎಂಬುದಾಗಿ. ಮಹಾತ್ಮ ಗಾಂಧೀಜಿಯವರು ಖಾದಿ ಗ್ರಾಮೋದ್ಯೋಗದ ಮೇಲೆ ನಮ್ಮ ಭವಿಷ್ಯವಿದೆ ಎಂದು ಹೇಳಿದ್ದರು. ಖಾದಿ ಪವಿತ್ರವಾದ ವಸ್ತು. ನಿಮ್ಮ ಮೈಮೇಲೆ ಇರುವುದೆಲ್ಲ ಖಾದಿ. ಆದರೆ ಖಾದಿ ಗ್ರಾಮೋದ್ಯೋಗ ಮಂಡಲಿಯಲ್ಲಿರುವ ಅವ್ಯವಸ್ಥೆಯನ್ನು ನೋಡಿದರೆ, ಭ್ರಷ್ಟಾಚಾರವನ್ನು ನೋಡಿದರೆ—ಖಾದಿಯನ್ನು ಹಾಕಿಕೊಂಡವರೆಲ್ಲರೂ ಅದೇ ರೀತಿ ಹೋಗುತ್ತಾರೆನ್ನುವ ಭಾವನೆ ಬರುತ್ತದೆ. ಇಂಥ ಅನಾಚಾರ ಮಾಡಿರುವವರು ಯಾರೇ ಇರಲಿ ಇವರು ಮಂತ್ರಿಗಳಾಗಿರುವುದಕ್ಕೆ ಯೋಗ್ಯರೇ ಎಂದು ಕೇಳುತ್ತೇನೆ. ಖಾದಿ ಗ್ರಾಮೋದ್ಯೋಗ ಮಂಡಳಿಯ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಈ ಸಭೆಯಲ್ಲಿ ಮಾಡಿದ್ದಾರೆ. ಅದರಲ್ಲಿ ಅವರು ನಮಗೆ ಸಂಬಂಧವಿಲ್ಲವೆಂದು ಜಾರಿ ಬಿಟ್ಟಿದ್ದಾರೆ. ಖಾದಿ ಗ್ರಾಮೋದ್ಯೋಗ ಮಂಡಲಿಯವರು ನಮ್ಮಲ್ಲಿ ಅನೇಕ ಲೋಪದೋಷಗಳಿವೆ, ಅನೇಕ ಜನ ಹಣವನ್ನು ಅಪವ್ಯಯ ಮಾಡಿದ್ದಾರೆ, ಲೆಕ್ಕಗಳನ್ನು ಪರೀಕ್ಷೆ ಮಾಡುವುದಕ್ಕೆ ಮತ್ತು ತನಿಖೆ ಮಾಡುವುದಕ್ಕೆ ಆಡಿಟರನ್ನು ಕಳಿಸಿ, ಲಂಚನಿರೋಧಶಾಖೆಯ ಸಹಾಯವನ್ನು ಕೊಡಿ ಎಂದು ಕೇಳಿದ್ದಾರೆ. ಅದಕ್ಕೆ ನಮ್ಮ ಮಂತ್ರಿಗಳು ಶಾಸನ ಸಭೆಯಲ್ಲಿ ಹೇಳಿಕೆ ಕೊಡುವುದರ ಮೂಲಕ ತಮ್ಮ ಜವಾಬ್ದಾರಿಯನ್ನು ಆ ಮಂಡಲಿಯ ಮೇಲೆಯೇ ಹೊರಿಸಿದ್ದಾರೆ. ಅಲ್ಲಿ ಲಕ್ಷಾಂತರ ರೂಪಾಯಿಗಳ ಅಪವ್ಯಯವಾಗಿದ್ದರೂ ಕೂಡ ನಮ್ಮ ಜವಾಬ್ದಾರಿ ಇಲ್ಲ ಎಂದರೆ ಇದಕ್ಕಿಂತ ಬೇಜವಾಬ್ದಾರಿಯುತವಾದುದು ಏನಿದೆ ಎಂದು ಕೇಳುತ್ತೇನೆ. ಇಷ್ಟಾದರೂ ಕೂಡ ಇವರು ಮಂತ್ರಿಗಳಾಗಿ ಉಳಿಯುವುದಕ್ಕೆ ಸಾಧ್ಯವೇ ಎಂದು ನಿಮ್ಮ ಆತ್ಮಪರೀಕ್ಷೆ ಮಾಡಿಕೊಳ್ಳಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಎಲೆಕ್ಟ್ರಿಸಿಟಿ ಬೋರ್ಡ್ ವಿಚಾರದಲ್ಲಿ ಈ ಸಭೆಯಲ್ಲಿ ಮೊನ್ನೆ ನಡೆದಂಥ ಚರ್ಚೆಗಳಮೇಲೆ ತಾವು ಸಭೆಯ ಅಭಿಪ್ರಾಯವನ್ನು ಕ್ರೋಢೀಕರಿಸಬಹುದು. ನಾನು ಅವತ್ತಿನ ದಿವಸ ಹೇಳಿದ ಲೆಕ್ಕದ ಪ್ರಕಾರವಾಗಿ 207 ಲಕ್ಷ ರೂಪಾಯಿಗಳಿಗೆ ಲೆಕ್ಕವಿಲ್ಲ, ಅದಕ್ಕೆ ಯಾರು ಜವಾಬ್ದಾರರು ಎಂದು ಕೇಳಿದೆ. ಉತ್ತರ ಕೊಟ್ಟ ಮಂತ್ರಿಗಳಾಗಲೀ ಯಾರೇ ಆಗಲೀ ಅದರ ಜವಾಬ್ದಾರಿ ಯಾರದು ಎಂದು ಲೆಕ್ಕದ ಮುಖಾಂತರ ತೋರಿಸಲಿಲ್ಲ. ಇವತ್ತು ಕೂಡ ಆ 207 ಲಕ್ಷ ರೂಪಾಯಿಗಳಿಗೆ ಲೆಕ್ಕವೇ ಇಲ್ಲ ಇದಕ್ಕೆ ಜವಾಬ್ದಾರರು ಯಾರು ? ದೇಶದ ಹಣವನ್ನು ಈ ರೀತಿ ಮಾಡಿದರೆ ಇದಕ್ಕಿಂತ ಬೇಜವಾಬ್ದಾರಿಯಾದ ಕೆಲಸ ಯಾವುದು ? ಯಾರಮೇಲೆ ಈ ಹೊಣೆಗಾರಿಕೆಯನ್ನು ಹೊರಿಸುತೀರಿ, ಇದನ್ನು ರೈಟ್ ಆಫ್ ಮಾಡಬೇಕೇ, ಬೇಡವೇ ಎಂದು ಯೋಚನೆ ಮಾಡುತ್ತಿದ್ದೀರಾ ? ಈ ಎಲೆಕ್ಟ್ರಿಸಿಟಿ ಬೋರ್ಡಿನ ವ್ಯವಹಾರದಲ್ಲಿ ಸರ್ಕಾರ ಪಕ್ಷಪಾತ ಮನೋಭಾವವನ್ನು ಹೊಂದಿದೆ ಎನ್ನುವ ಅಂಶವನ್ನು ನಾವು ತೋರಿಸಿಕೊಡುತ್ತೇವೆ. ಈ ಬೋರ್ಡಿಗೆ ನಾಮಕರಣ ಮಾಡಿರತಕ್ಕ ಇಬ್ಬರು ಸದಸ್ಯರೂ ಬೋರ್ಡಿಗೆ ಸಂಬಂಧಪಟ್ಟ ಹಣವನ್ನು ಇನ್‌ವೆಸ್ಟ್ ಮಾಡಬೇಕಾದರೆ ಪಕ್ಷಪಾತ ಮನೋಭಾವದಿಂದ ತಮಗೆ ಬೇಕಾದಂಥ ಬ್ಯಾಂಕುಗಳಲ್ಲಿ ಹಣದ ವ್ಯವಹಾರವನ್ನು ನಡೆಸಿದ್ದಾರೆ. ಇದರಿಂದಾಗಿ ಈ ಮೆಂಬರುಗಳು ತಮ್ಮ ವೈಯಕ್ತಿಕ ಪ್ರಭಾವದಿಂದ ತಮಗೆ ಆಸಕ್ತಿ ಇರುವ ಬ್ಯಾಂಕುಗಳಲ್ಲಿ ವ್ಯವಹಾರವನ್ನು ಮುಂದುವರೆಸುವುದಕ್ಕೆ ಸಹಾಯಕರಾಗಿದ್ದಾರೆ. ಇದನ್ನು ಹೀಗೆ ನಡೆಯುವುದಕ್ಕೆ ಬಿಟ್ಟಿರುವುದನ್ನು ನೋಡಿದರೆ ಮಂತ್ರಿಗಳು ತಮ್ಮ ಕರ್ತವ್ಯಲೋಪ ಮಾಡಿದ್ದಾರೆ. ಇದಕ್ಕೆ ಅವರೇ ಹೊಣೆಗಾರರು. ಇದನ್ನು ಯಾರೂ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ ಮತ್ತೊಂದು ವಿಚಾರವಿದೆ. ಅದನ್ನು ಅನೇಕ ಸಾರಿ ಒತ್ತಿ ಒತ್ತಿ ಹೇಳಿದ್ದೇವೆ. ಅದು ಶರಾವತಿ ಪ್ರಾಜೆಕ್ಟ್ ವಿಷಯ. ಶರಾವತಿ ಪ್ರಾಜೆಕ್ಟ್ ವಿಚಾರದಲ್ಲಿ ಬಹಳವಾಗಿ ಹಿಂದೆ ಅವಿಶ್ವಾಸ ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸಿದ್ದಾಗ ದೀರ್ಘವಾಗಿ ಹೇಳಿದ್ದೇನೆ. ಹಳೆಯ ವಿಷಯ ಬೇಡ. ಹೊಸದಾಗಿ ಇನ್ನು ಕೆಲವು ವಿಷಯಗಳು ಇದರ ವಿಚಾರವಾಗಿ ಇವೆ. ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ಅವತ್ತು ಒಂದು ಆಶ್ವಾಸನೆಯನ್ನು ಕೊಟ್ಟರು: ನಾನು ಖುದ್ದಾಗಿ ಶರಾವತಿಗೆ ಸಂಬಂಧಪಟ್ಟ ಫೈಲುಗಳನ್ನು ಪರಿಶೀಲಿಸಿ ಏನಾದರೂ ಅನ್ಯಾಯ ಕಂಡುಬಂದರೆ ಏನು ಕ್ರಮ ತೆಗೆದುಕೊಳ್ಳಬಹುದೋ ಅದನ್ನು ತೆಗೆದುಕೊಳ್ಳುತ್ತೇನೆ ಎಂದು. ಆ ವಿಷಯದಲ್ಲಿ ಪರಿಣಾಮವೇನಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗಿದೆ. ಅವರು ಹೇಳಿದರು ಶರಾವತಿಗೆ ಸಂಬಂಧಪಟ್ಟ ಕೆಲವು ಫೈಲುಗಳು ಮಾಯವಾಗಿದ್ದು ಈಗ ಸಿಕ್ಕಿವೆ, ಅವುಗಳನ್ನು ನೋಡುತ್ತೇನೆ ಎಂದು. 100 ಕೋಟಿ ರೂಪಾಯಿಗಳಿಗೆ ಸಂಬಂಧಪಟ್ಟಂಥ ದೊಡ್ಡ ಪ್ರಾಜೆಕ್ಟಿನ ಫೈಲುಗಳನ್ನು ಕಾಪಾಡತಕ್ಕ ಶಕ್ತಿ ಇಲ್ಲದೆ ಇರುವ ಸರ್ಕಾರ ಇಂಥ ಕೆಲಸವನ್ನು ಎಷ್ಟರ ಮಟ್ಟಿಗೆ ಜವಾಬ್ದಾರಿಯಿಂದ ನಡೆಸುತ್ತಾರೆ ಎಂದು ಕೇಳುತ್ತೇನೆ. ಫೈಲುಗಳು ಮಾಯವಾಗಿವೆ ಎಂದರೆ ಅದಕ್ಕೆ ಯಾರು ಜವಾಬ್ದಾರರು, ಆಡಳಿತ ಸೂತ್ರವನ್ನು ಹಿಡಿದಿರುವ ಸರ್ಕಾರ ಯಾವ ರೀತಿ ಕೆಲಸಮಾಡಬೇಕೆಂಬುದನ್ನು ಯೋಚನೆ ಮಾಡಬೇಕು. ಫೈಲುಗಳನ್ನು ಕಾಪಾಡತಕ್ಕ ಶಕ್ತಿ ಇಲ್ಲದೆ ಹೋದರೆ ನೂರು ಕೋಟಿ ರೂಪಾಯಿ ಕೆಲಸ ಏನಾಗಿರಬಹುದು ಎಂದೂ ಯೋಚನೆ ಮಾಡಬೇಕು.

(ಶ್ರೀ ಎಸ್. ಶಿವಪ್ಪ).

ಹಿಂದೆ ಕೆಲವು ಕಂಟ್ರಾಕ್ಟರುಗಳಿಗೆ 60 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಲಾಗಿದೆ. ಅದಾದಮೇಲೆ ಈ ಖಾತೆಯ ಅಧಿಕಾರವನ್ನು ವಹಿಸಿಕೊಂಡಮೇಲೆ ಮುಖ್ಯಮಂತ್ರಿಗಳ ನೇರ ಅಧಿಕಾರಾವಧಿಯಲ್ಲಿ ಆದಂಥ ವಿಚಾರವನ್ನು ಹೇಳುತ್ತೇನೆ. ಇದು ತಾರಾಪೂರೆ ಅಂಡ್ ಕಂಪೆನಿಗೆ ಮೇಸನರಿ ಡ್ಯಾಂ ಬಗ್ಗೆ ನವಂಬರ್ 1962ರಲ್ಲಿ ಹೆಚ್ಚು ದರಗಳನ್ನು ಕೊಟ್ಟದ್ದಕ್ಕೆ ಸಂಬಂಧಪಟ್ಟ ವಿಷಯ. ವಿಧಾನ ಪರಿಷತ್ತಿನಲ್ಲಿ ಉತ್ತರ ಕೊಟ್ಟಿರುವುದರಮೇಲೆ ಹೇಳುತ್ತಿದ್ದೇನೆ. ಆ ಉತ್ತರದ ಪ್ರಕಾರವಾಗಿ ಲಿಂಗನಮಕ್ಕಿ ಅಣೆಕಟ್ಟಿನಲ್ಲಿ ತಾರಾಪೂರೆ ಕಂಪೆನಿಗೆ ಅದರ ಕಟ್ಟಡದ ಕೆಲಸವನ್ನು ವಹಿಸಿದಿರಿ. ಆ ಕೆಲಸವನ್ನು ವಹಿಸಿದಾಗ 1960ನೆ ಇಸವಿಯಲ್ಲಿ ಅವರಿಗೂ ಸರ್ಕಾರಕ್ಕೂ ಒಂದು ಒಪ್ಪಂದವಾಗಿದೆ. ಆ ಒಪ್ಪಂದದ ಪ್ರಕಾರವಾಗಿ ಲಿಂಗನಮಕ್ಕಿ ಅಣೆಕಟ್ಟಿನ ಕೆಲಸವನ್ನು ಮಾಡಲು ಆ ಕಂಪೆನಿಯವರು ಯಾವ ದರದಲ್ಲಿ ಒಪ್ಪಿಗೆಯನ್ನು ಕೊಟ್ಟಿದ್ದಾರೋ ಅದರ ಪ್ರಕಾರವಾಗಿ ಅವರು ಕೆಲಸವನ್ನು ನಿರ್ವಹಿಸಲೇ ಬೇಕಾಗಿದೆ. ಇವತ್ತಿನ ದಿವಸ ಲಿಂಗನಮಕ್ಕಿಯಲ್ಲಿನ ಕೆಲಸಕ್ಕೆ ಏನು ದರವನ್ನು ಒಪ್ಪಿದ್ದೀರಿ ಅದನ್ನು ಷೆಡ್ಯೂಲಿನಲ್ಲಿ ನಮೂದು ಮಾಡಿದ್ದೀರಿ. ಅದಕ್ಕೆ ಅವತ್ತು 60 ರೂಪಾಯಿ, 70 ರೂಪಾಯಿ, 75 ರೂಪಾಯಿ ಹೀಗೆ ಇತ್ತು. ರಾಕ್ ಫಿಲಿಂಗ್ ಕೆಲಸವೇನಿದೆ ಅದಕ್ಕೆ ಒಂದು ದರವನ್ನು ಕೊಟ್ಟಿದ್ದಾರೆ. ಅದು 1960ನೆ ಇಸವಿಯಲ್ಲಿ ಆದಂಥ ಒಂದು ಅಗ್ರಿಮೆಂಟಿನಲ್ಲಿ ಷೆಡ್ಯೂಲಿನಲ್ಲಿ ಬರುತ್ತದೆ. ಈ ಒಪ್ಪಂದದ ಪ್ರಕಾರ ಕೆಲಸ ಪೂರ್ಣವಾಗಿ ನೆರವೇರುವವರೆಗೂ ಅದೇ ರೇಟುಗಳೇ ಮುಂದುವರಿಯತಕ್ಕದ್ದು ಎಂದು ಇದೆ. ಆದರೆ ಇವತ್ತಿನ ದಿವಸ 1962ನೆ ನವಂಬರ್ ತಿಂಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿರತಕ್ಕ ಕೆಲಸವನ್ನು ಅವರಿಗೆ ಯಾವ ರೇಟ್ ಪ್ರಕಾರ ಕೊಟ್ಟಿರುತ್ತೀರಿ, ಅವರಿಗೆ enhanced rate ಕೊಟ್ಟಿದ್ದೀರಿ. ಕೆಲವು ಕಡೆ 100 ರೂಪಾಯಿ, 110 ರೂಪಾಯಿ, 104 ರೂಪಾಯಿ ಈ ಪ್ರಕಾರವಾಗಿ ಕೊಟ್ಟಿದ್ದೀರಿ. ಆದರೆ ಒಪ್ಪಿಕೊಂಡಿರತಕ್ಕದ್ದು 60 ರೂಪಾಯಿ, 70 ರೂಪಾಯಿ ಮತ್ತು 75 ರೂಪಾಯಿ. ಈ ದರಗಳಲ್ಲಿ ಕೆಲಸಮಾಡುವುದಾಗಿ ಕಂಟ್ರಾಕ್ಟುದಾರರು ಅಗ್ರಿಮೆಂಟನ್ನು ಬರೆದುಕೊಟ್ಟಿದ್ದಾರೆ. ಹೀಗಿದ್ದರೂ ಕೂಡ ಅದೇ ಕೆಲಸಕ್ಕೆ 100 ರೂಪಾಯಿ, 110 ರೂಪಾಯಿ ಮತ್ತು 104 ರೂಪಾಯಿಗಳ ಪ್ರಕಾರ ಕೊಟ್ಟಿರುವುದಕ್ಕೆ ಸಮಜಾಯಿಷಿ ಏನು ಹೇಳುತ್ತಾರೆಂದರೆ ಇದು ಬೇರೆ ಕೆಲಸ, ಅದಕ್ಕೆ ಈ ದರಗಳನ್ನು ಕೊಟ್ಟಿದ್ದೇವೆ. ಇದೇ ತರಹ ಕೆಲಸಕ್ಕೆ ಬೇರೆಯವರಿಗೆ ಏನು ದರಗಳನ್ನು ಕೊಡುತ್ತೇವೆಯೋ ಅದೇ ದರಗಳನ್ನು ಇವರಿಗೂ ಕೊಡುತ್ತೇವೆ ಎಂದು. ಈ ಒಂದು ವಿಷಯದಲ್ಲಿ ಅವರಿಗೆ ಕೊಡಬೇಕಾದ ಹಣಕ್ಕಿಂತ, ಅವರು ಒಪ್ಪಿಕೊಂಡಿರುವ ದರದಲ್ಲಿ ಆಗುವ ಹಣಕ್ಕಿಂತ 30 ಲಕ್ಷ ರೂಪಾಯಿಗಳನ್ನು ಜಾಸ್ತಿಯಾಗಿ ಕೊಟ್ಟಿದ್ದಾರೆ.

ಈ 30 ಲಕ್ಷ ರೂಪಾಯಿಗಳಿಗೆ ಯಾರು ಜವಾಬ್ದಾರರು ಎಂದು ನಾನು ಕೇಳುತ್ತೇನೆ. ಸರಕಾರ ಖಜಾನೆಯಿಂದ ಒಬ್ಬ ಕಂಟ್ರಾಕ್ಟುದಾರನಿಗೆ ಈ ಹಣ ಕೊಡುವುದಕ್ಕೆ ಏನು ಜವಾಬ್ದಾರಿ ಇದೆ ? ರಾಕ್ ಫಿಲ್ಲಿಂಗ್ ವಿಚಾರದ ಬಗ್ಗೆ ಈ ಶಾಸನ ಸಭೆಯಲ್ಲಿ ಈ ಮೊದಲು ಚರ್ಚೆಯಾಗಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಒಂದೂವರೆ ಕೋಟಿ ರೂಪಾಯಿ ಲುಕ್ಸಾನ ಆಗಿದೆ. ಇವತ್ತಿನ ದಿವಸ ಸರಕಾರ ಕಂಡೂ ಕಂಡೂ ಬಾವಿಗೆ ಬೀಳುತ್ತಿದ್ದೀರಿ. ಇದು ಯಾವ ನೀತಿ ? ಇದಕ್ಕೆ ಮುಖ್ಯಮಂತ್ರಿಗಳು ನೇರವಾಗಿ ಉತ್ತರ ಕೊಡಬೇಕೆಂದು ಅವರನ್ನು ಕೇಳುತ್ತೇನೆ. ಮಂತ್ರಿಮಂಡಳ ಶಾಸನ ಸಭೆಗೆ ಜವಾಬ್ದಾರಿಯಾಗಿದೆ. ಆದ್ದರಿಂದ ಶರಾವತಿ ಬಗ್ಗೆ ಉತ್ತರ ಕೊಡಲೇಬೇಕೆಂದು ಒತ್ತಾಯಪೂರ್ವಕವಾಗಿ ಈ ಸಭೆಯಲ್ಲಿ ಈ ಸಂದರ್ಭದಲ್ಲಿ ಕೇಳುತ್ತೇನೆ. ಶರಾವತಿ ಬಗ್ಗೆ ಮೇಲಿಂದ ಮೇಲೆ ಹೇಳುವುದಕ್ಕೆ ಸಂಕೋಚವಾಗುತ್ತಿದೆ. ಇದು ಒಂದು ದೊಡ್ಡ ಪ್ರಾಜೆಕ್ಟು. ಹತ್ತಾರು ಕೋಟಿ ರೂಪಾಯಿ ನೆರವು ಅಮೇರಿಕಾ ದೇಶದಿಂದ ಬಂದಿದೆ. ಇಂಥ ದೊಡ್ಡ ಯೋಜನೆಯಲ್ಲಿ ಸಂಶಯ ಉಂಟಾಗಬಾರದು, ಸರಿಯಾಗಿ ಹಣ ಖರ್ಚು ಮಾಡುತ್ತಿದ್ದೇವೆ ಎಂಬ ನಂಬಿಕೆ ಬರಬೇಕು. ಒಂದು ವೇಳೆ ಏನಾದರೂ ಅನುಮಾನ ಸಂಶಯ ಉಂಟಾದರೆ ಭಾರತ ದೇಶದ ಮೇಲಿನ ನಂಬಿಕೆ ಹೊರಟುಹೋಗುತ್ತದೆ. ಆದರಿಂದ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಆದರೆ ಈ ಯೋಜನೆ ಕೆಲಸ ಕಾರ್ಯಗಳಲ್ಲಿ ಸತತ ಅನ್ಯಾಯವಾಗಿದೆ. ಇಂದು ಪ್ರಪಂಚದಲ್ಲಿ ನಾವು ತಲೆ ಎತ್ತಿ ತಿರುಗಾಡದ ಹಾಗೆ ಆಗಿದೆ. ಆದುದರಿಂದ್ಲ ನಾನು ಮುಖ್ಯಮಂತ್ರಿಗಳಿಗೆ ಒಂದು ಮನವಿ ಕೊಟ್ಟಿದ್ದೇನೆ. ಆದಷ್ಟು ಜಾಗ್ರತೆ ಒಂದು ನ್ಯಾಯಾಂಗ ವಿಚಾರಣೆ ಮಾಡಬೇಕು. ಯೋಜನೆ ಮಾಡುತ್ತಿದ್ದೇವೆಂದು ಮುಖ್ಯಮಂತ್ರಿಗಳು ಹೇಳಿದರು. ಇಂಥ ಡೋಲಾಯಮಾನ ನೀತಿ ಏಕೆ ಅನುಸರಿಸುತ್ತೀರಿ ? ನೀವು ಮಂದಗಾಮಿ ಆಗಿ ನಡೆಯುತ್ತಿರುವುದು ನೋಡಿದರೆ ನಮಗೆ ಬಹಳ ಅನುಮಾನವಾಗಿದೆ. ಈ ವಿಷಯದಲ್ಲಿ ಜ್ಯುಡಿಷಿಯಲ್ ಇಂಕ್ವಾಯರಿ ಮಾಡಬೇಕು, ಇದರಲ್ಲಿ ಅನೇಕ ಅಂಶಗಳಿವೆ. ನಾನು ಉದಾಹರಣೆಗೆ ಒಂದೆರಡು ವಿಷಯ ಸಭೆಯ ಮುಂದೆ ಇಟ್ಟಿದ್ದೇನೆ. ಆದರೆ ಇದರಲ್ಲಿ ಇನ್ನೂ ಅನೇಕ ವಿಷಯಗಳು ಇರಬಹುದು. ಈ ಶರಾವತಿ

ಪ್ರಾಜೆಕ್ಟಿನಲ್ಲಿ ಸಿಮೆಂಟು ಕಬ್ಬಿಣ ಸರಿಯಾಗಿ ಉಪಯೋಗಿಸಿಲ್ಲ ಲೀಕೇಜ ಇದೆಯೆಂದು ನಮಗೆ ರಿಪೋರ್ಟು ಬಂದಿದೆ. ಆದುದರಿಂದ ಇದಕ್ಕೆ ತೀವ್ರ ಗಮನ ಕೊಟ್ಟು ಪರಿಶೀಲನೆ ಮಾಡಿ ನ್ಯಾಯಾಂಗ ವಿಚಾರಣೆ ಮಾಡಬೇಕು. ಇಂಥ ಕೆಲಸ ಕಾರ್ಯಗಳಲ್ಲಿ ಮಂತ್ರಿಮಂಡಳ ಜವಾಬ್ದಾರಿಯಿಂದ ಮುಂದುವರಿಯಬೇಕು ಇಲ್ಲದಿದ್ದರೆ ಇಂಥ ಸಂದರ್ಭದಲ್ಲಿ ಅವರು ರಾಜೀನಾಮೆ ಕೊಡಬೇಕೆಂದು ಈ ನಿರ್ಣಯ ನಾವು ತಂದಿದ್ದೇವೆ. ರಾಜೀನಾಮೆ ಕೊಡುವುದರಿಂದ ಈ ನಿರ್ಣಯಕ್ಕೆ ಉತ್ತರ ಕೊಟ್ಟಂತೆ ಆಗುತ್ತದೆ.

ಇನ್ನು ವಿದ್ಯಾಭ್ಯಾಸದ ವಿಚಾರ : ಇದೊಂದು ಮಹಾಭಾರತ ಆಗಿದೆ. ವಿದ್ಯಾಭ್ಯಾಸದ ವಿಚಾರ ಕೆಣಕಿ ಹಾಳು ಮಾಡಿದ್ದಾರೆ. ಎಷ್ಟು ಉಗ್ರ ಟೀಕೆ ಮಾಡಿದರೂ ಸಾಲದು. ಟೆಕ್ನಿಕಲ್ ಎಜುಕೇಷನ್ ಕಮಿಟಿ ಎಂದು ಮಾಡಿ ಎಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳ ಪ್ರವೇಶದ ಬಗ್ಗೆ ಬಹಳ ಅನ್ಯಾಯ ಮಾಡಿದ್ದಾರೆ. ಮೊದಲು ಒಂದು ಆಜ್ಞೆ ಮಾಡಿದರು. ಆಮೇಲೆ ಅದಕ್ಕೆ ವಿರೋಧವಾಗಿ ಆರ್ಡರ್ ಮಾಡಿದರು. ಮೈಸೂರು ಯೂನಿವರ್ಸಿಟಿ ಕರ್ನಾಟಕ ಯೂನಿವರ್ಸಿಟಿ ಎಂದು ಭೇದಭಾವ ಮಾಡಿ ಒಡಕು ತಂದು ಇಟ್ಟಿದ್ದಾರೆ. ಕರ್ಣಾಟಕ ವಿಶ್ವವಿದ್ಯಾನಿಲಯಕ್ಕೆ ಒಂದು ತರಹ ಅರ್ಹತೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಂದು ತರಹ ಅರ್ಹತೆ ಹೀಗೆ ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣ ಎಂಬಂತೆ ಆಗಿದೆ. ಇದು ಬಹಳ ಕೆಟ್ಟ ಪರಿಣಾಮ ಉಂಟು ಮಾಡಿದೆ. ಕರ್ಣಾಟಕ ವಿಶ್ವವಿದ್ಯಾನಿಲಯದ ಅರ್ಜಿಗಳ ಪೈಕಿ 1.9 ಅಪ್ಲಿಕೇಶನ್ನಿಗೆ ಒಂದು ಸೀಟು ಮೆಡಿಕಲ್ ಕಾಲೇಜಿನಲ್ಲಿ ಸಿಕ್ಕಿದೆ. ಮೈಸೂರಿನಲ್ಲಿ ನಾಲ್ಕೂವರೆಗೆ ಒಂದು ಸೀಟು ಸಿಕ್ಕಿದೆ ಅಂದರೆ 5 ಜನ ಅರ್ಜಿದಾರರಲ್ಲಿ ಒಂದು ಸೀಟು ಮೈಸೂರು ಪ್ರದೇಶದವರಿಗೆ ಸಿಕ್ಕಿದೆ. ಆದರೆ ಕರ್ಣಾಟಕ ಯೂನಿವರ್ಸಿಟಿಯಲ್ಲಿ 2 ಅರ್ಜಿದಾರರಿಗೆ 1 ಸೀಟು ಸಿಕ್ಕಿದೆ. ಇಂಥ ಭೇದಭಾವನೆ ಹೋಗಬೇಕು. ಇದು ಅರ್ಥರಹಿತವಾದುದು. ಒಬ್ಬರಿಗೊಂದು ಒಬ್ಬರಿಗೊಂದು ಮಾಡುವ ಭೇದಭಾವನೆ ಸರಿಯಲ್ಲ. ಇದರ ಬಗ್ಗೆ ಒಬ್ಬ ಸಾಮಾನ್ಯ ಅಧಿಕಾರಿ ಹೇಳಿಕೆ ಕೊಡುವುದು ತಪ್ಪು. ವಿದ್ಯಾ ಮಂತ್ರಿಗಳು ಇಂಥ ಹೇಳಿಕೆ ಕೊಟ್ಟು ವಿವರಣೆ ಕೊಡಬೇಕು. ಇಲಾಖೆಯ ಡೈರೆಕ್ಟರು ಸರ್ವಾಧಿಕಾರಿಗಳೇ ? ನಿಜವಾಗಿಯೂ ಇದು ಭಾವೈಕ್ಯಕ್ಕೆ ವಿಘ್ನ ತಂದಿದೆ. ಅಲ್ಲದೆ ಇದು ಅಪಮಾನಕರ ಎಂದು ನಾನು ಹೇಳುತ್ತೇನೆ. ಇಂಥ ಅವಮಾನಕರ ಪರಿಸ್ಥಿತಿ ಉಂಟು ಮಾಡಿರುವುದಕ್ಕೆ ಮಂತ್ರಿಗಳು ಜವಾಬ್ದಾರರಾಗಿದ್ದಾರೆ.

ಇದಲ್ಲದೆ ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ಬಹಳ ಅನ್ಯಾಯ ಮಾಡಿದ್ದಾರೆ. ಕಡ್ಡಾಯ ಶಿಕ್ಷಣ ಜಾರಿಗೆ ತಂದಿದ್ದಾರೆ; ಆದರೆ ಉಪಾಧ್ಯಾಯರು ಇಲ್ಲ, ಶಾಲಾ ಕಟ್ಟಡ ಇಲ್ಲ. ಇಂದು 6,000 ಉಪಾಧ್ಯಾಯರು ಬೇಕಾಗಿರುತ್ತಾರೆ. ಆದರೆ ರಿಕ್ರೂಟ್‌ಮೆಂಟ್ ಮಾಡಿದ್ದು 1,000 ಮಾತ್ರ. ಇನ್ನೂ 5,000 ಉಪಾಧ್ಯಾಯರುಗಳ ಕೊರತೆ ಇದೆ. ರಾಜ್ಯಾಂಗದಲ್ಲಿ ಕೊಟ್ಟಿರುವ ಹಕ್ಕನ್ನು ಸರಿಯಾಗಿ ಒದಗಿಸುತ್ತಿಲ್ಲ. ರಾಜ್ಯಾಂಗಕ್ಕೆ ಅಪಮಾನ ಮಾಡಲಾಗುತ್ತಿದೆ ಎನ್ನುವ ರೀತಿಯಲ್ಲಿ ಮಾಡುತ್ತಿದ್ದೇವೆ. ಆದ್ದರಿಂದ ವಿದ್ಯಾಮಂತ್ರಿಗಳಿಗೆ ನಾನು ಹೇಳುತ್ತೇನೆ ದಯವಿಟ್ಟು ರಾಜೀನಾಮೆ ಕೊಡಿ, ನಿಮಗೆ ಸಾಕಷ್ಟು ಅನುಭವವಿಲ್ಲ, ನಮ್ಮ ರಾಜ್ಯದಲ್ಲಿ ಇಂದು ವಿದ್ಯಾಭ್ಯಾಸ ನಿಮ್ಮ ಕೈಯಲ್ಲಿ ಅಪಘಾತಕ್ಕೆ ಈಡಾಗಿದೆ. ಆದುದರಿಂದ ವಿದ್ಯಾ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಈ ಸಭೆಯಲ್ಲಿ ಹೇಳುತ್ತೇನೆ.

ಇನ್ನು ಸಹಕಾರ ಸಂಘಗಳ ಬಗ್ಗೆ ಹೇಳುವುದಾದರೆ ಅದರ ಬಗ್ಗೆ ತಾವೇ ಹೇಳಿದ್ದೀರಿ. ಮೈಸೂರು ಸಭೆಯಲ್ಲಿ ಕೈಗಾರಿಕಾ ಸಚಿವರು ನಿಜವಾಗಿಯೂ ಒಂದು ಮಾತು ಹೇಳಿದರು. ಈ ಕೋ-ಆಪರೇಟಿವ್ ಸೊಸೈಟಿಗಳು ಗೂಳಿಗಳಿಗೆ ಹುಲ್ಲುಗಾವಲನಂತೆ ಆಗಿವೆ ಎಂದು ಅವರೇ ಹೇಳಿದ್ದಾರೆ. ಈ ಗೂಳಿಗಳು ಯಾರು ಎಂಬುದು ಹೆಚ್ಚಿನ ಸಂಗತಿ ತಮಗೇ ಗೊತ್ತಿದೆ. ಸಹಕಾರ ಸಚಿವರಿಗೆ ಅದು ಗೊತ್ತಿದೆ. ಈ ಸಹಕಾರ ಸಂಘಗಳಿಗೆ ತಮ್ಮ ತಮ್ಮ ಜನರನ್ನೇ ನಾಮಕರಣ ಮಾಡಿ ಇವರನ್ನು ಪೋಷಣೆ ಮಾಡುತ್ತಿದ್ದೀರಿ. ಹುಲ್ಲುಗಾವಲ ಕೊಟ್ಟು ಗೂಳಿ ಬೆಳೆಯುವುದಕ್ಕೆ ಕಾನೂನು ಏರ್ಪಾಡು ಮಾಡುತಿದ್ದೀರಿ.

2-00 P.M:

ನಿಮ್ಮ ಹೇಳಿಕೆಯನ್ನು ನೀವೇ ಸಮರ್ಥನೆ ಮಾಡಿಕೊಳ್ಳಬೇಕೆಂಬ ಪಕ್ಷದಲ್ಲಿ ಇವತ್ತು ಆತ್ಮನಿಷ್ಠೆ ಇದ್ದರೆ ನೀವು ರಾಜೀನಾಮೆ ಕೊಡಬೇಕು. ಮಾತಿನಲ್ಲಿ ಆಡುವುದು ಒಂದು ಕಾರ್ಯದಲ್ಲಿ ಮಾಡುವುದು ಒಂದು. ಈ ರೀತಿಯಾಗಿ ಸರ್ಕಾರದ ಆಡಳಿತದಲ್ಲಿ ಇರತಕ್ಕ ಸಂಸ್ಥೆಗಳಲ್ಲಿ ಗೂಳಿಗಳಿಗೆ ಅವಕಾಶ ಕೊಟ್ಟಿದ್ದೀರಿ ಎಂದರೆ ನೀವೇ ನಿಮ್ಮ ಆತ್ಮವನ್ನು ನಿಷ್ಠೆಯಿಂದ ಪರೀಕ್ಷೆ ಮಾಡಿಕೊಂಡು ರಾಜೀನಾಮೆ ಕೊಡುವುದರಿಂದ ಈಗಾಗಲೇ ಮಾಡಿರತಕ್ಕ ಒಂದು ಲೋಪವನ್ನು ಸರಿಪಡಿಸಿಕೊಂಡಂತಾಗುತ್ತದೆ ಎಂದು ನಾನು ತಮಗೆ ಹೇಳಬೇಕಾಗಿದೆ.

(ಶ್ರೀ ಎಸ್. ಶಿವಪ್ಪ

ಆಹಾರ ಪದಾರ್ಥಗಳ ಬೆಲೆ ಗಗನಕ್ಕೆ ವಿಷ ಏರಿದ ಹಾಗೆ ಏರುತ್ತಾ ಇದೆ. ಉಗ್ರವಾದ ಕಾರ್ಯಕ್ರಮವನ್ನು ಕೈಕೊಂಡು ಇದನ್ನು ತಡೆಗಟ್ಟಬೇಕೆಂದು ಸರ್ಕಾರದವರಿಗೆ ನಾವು ಹೇಳುತ್ತಿರುವಾಗ ನೀವು ಏನು ಮಾಡುತ್ತಿದ್ದೀರಿ ಎಂದು ವರ್ತಕ ಸಂಘದವರನ್ನು ಹಿಡಿದು ಬಿಕ್ಷೆ ಬೇಡಿದ ಹಾಗೆ ಬೇಡುತ್ತಿದ್ದೀರಿ, ಧರ್ಮದಿಂದ ನಡೆಯಬೇಕು, ದಾನಿಗಳಾಗಬೇಕು, ಆಹಾರದ ಬೆಲೆ ಕಡಿಮೆ ಮಾಡಬೇಕು ಎಂದು ಅವರನ್ನು ಕೇಳಿಕೊಂಡು ಅವರ ಮುಂದೆ ಯಾಚನೆ ಮಾಡಿದರೆ ಆಹಾರದ ಬೆಲೆ ಕಡಿಮೆ ಮಾಡಿದ ಹಾಗಾಯಿತೇ ಎಂದು ನಾನು ತಮ್ಮನ್ನು ಕೇಳುತ್ತೇನೆ. ಈ ರೀತಿ ಬಂಡವಾಳ ಶಾಹಿಗಳನ್ನು ದಾರಿಗೆ ತರುವುದಕ್ಕೆ ಸಾಧ್ಯವೇ, ಚೇಂಬರ್ ಅಫ್ ಕಾಮರ್ಸ್ ಅವರ ಮುಂದೆ ಮುಖ್ಯಮಂತ್ರಿಗಳು ನಿಂತು ಬೆಲೆ ಕಡಿಮೆ ಮಾಡಿ ಎಂದು ದೈನ್ಯ ರೂಪದಿಂದ ಕೇಳಿದರೆ ನಿಮ್ಮ ಗುರಿ ಸಾಧನೆಯಾಗುತ್ತದೆಯೇ ? ಖಂಡಿತವಾಗಿಯೂ ಇಲ್ಲ. ನಿಮಗೆ ಕಾನೂನು ರೀತ್ಯಾ ಕಾನೂನು ಬೆಂಬಲ ಇದೆ, ಚೇಂಬರ್ ಆಫ್ ಕಾಮರ್ಸ್ ಅವರನ್ನು ಯಾಚನೆ ಮಾಡಬೇಕಾದ ಅಗತ್ಯವಿಲ್ಲ, ತಮಗೆ ಅಧಿಕಾರ ದಂಡ ಇರುವಾಗ ತಾವು ಆಹಾರ ಪದಾರ್ಥಗಳ ಬೆಲೆ ಏರಿಕೆ ಎಂದು ತಾವೇ ಒಪ್ಪಿಕೊಂಡಮೇಲೆ ಅದನ್ನು ಕಡಿಮೆ ಮಾಡತಕ್ಕ ಕಾರ್ಯದಲ್ಲಿ ಆ ಕಾನೂನನ್ನು ಜಾರಿಗೆ ತರಲೇಬೇಕು. ಈ ರೀತಿ ಮಾಡದಿದ್ದರೆ ತಮ್ಮ ಅಧಿಕಾರವನ್ನು ತಾವು ಎಷ್ಟರಮಟ್ಟಿಗೆ ನೆರವೇರಿಸಿದ ಹಾಗಾಯಿತು ? ಆದ್ದರಿಂದ ತಾವು ಅಧಿಕಾರ ತ್ಯಾಗ ಮಾಡಲೇಬೇಕಾಗುತ್ತದೆ. ಅಧಿಕಾರದಲ್ಲಿರಬೇಕಾದರೆ ದಂಡದಿಂದಲೇ, ಕಾನೂನು ರೂಪದಿಂದಲೇ ಬಗೆಹರಿಸಬೇಕು. ಈಗಾಗಲೇ ಮೂರು ದಿವಸ ಆಹಾರ ಪರಿಸ್ಥಿತಿಯ ಮೇಲೆ ಚರ್ಚೆ ಮಾಡಿದೆವು ಈ ದೇಶದಲ್ಲಿ ದುರ್ಭಿಕ್ಷ ಪರಿಸ್ಥಿತಿ ಇರುವ ಈ ಕಾಲದಲ್ಲಿ ಸಚಿವರೂ ಕೂಡ ಬಹಳ ಕ್ಷಾಮ ಇದೆ ಅದನ್ನು ಪರಿಹಾರ ಮಾಡಬೇಕು ಎಂದು ದೊಡ್ಡದಾಗಿ ಭಾಷಣ ಮಾಡಿದರು ಇದರಿಂದ ಏನು ಅನ್ನಿಸುತ್ತದೆ ಎಂದರೆ ನಮ್ಮ ದೇಶದಲ್ಲಿ ಇವತ್ತು ಹೊಸದಾಗಿ ಈ ದುರ್ಭಿಕ್ಷ ಬಂದ ಪರಿಸ್ಥಿತಿ ಇಲ್ಲ, ನಮ್ಮ ದೇಶದಲ್ಲಿ ನಿತ್ಯ ಕ್ಷಾಮ ಇದೆ. ನೀವು ಕ್ಷಾಮ ದೇವತೆಗಳ ರೂಪದಲ್ಲಿ ಈ ದೇಶಕ್ಕೆ ಬಂದಿದ್ದೀರಿ. ಕ್ಷಾಮ ದೇವತೆಗಳಾಗಿ ನೀವು ಅವತಾರ ಮಾಡಿದ್ದೀರಿ. ಮೊನ್ನೆ ಪಾರ್ಲಿಮೆಂಟಿನಲ್ಲಿ ಶ್ರೀಮಾನ್ ರಾಮ ಮನೋಹರ ಲೋಹಿಯಾರವರು ಹೇಳಿದಹಾಗೆ 27 ಕೋಟಿ ಜನರು ಶೇಕಡಾ 3 ಆಣೆ ವರಮಾನದಿಂದ ಜೀವನ ಮಾಡುತ್ತಾ ಇದ್ದಾರೆ. ಅವರು 3 ಆಣೆ ಎಂದು ಹೇಳಿದರೆ ಅಲ್ಲಿನ ಮಂತ್ರಿಗಳಾದ ನಂದಾರವರು 6 ಆಣೆ ಎಂದು ಹೇಳಿದರು 3 ಆಣೆಯಾಗಲೀ 6 ಆಣೆಯಾಗಲಿ ಹಸಿವಿನ ಹೋರಾಟ ಇದು ಎಂಬುದನ್ನು ಮರೆಯಬಾರದು. 27 ಕೋಟಿ ಜನರು ಭಾರತ ದೇಶದ ಬೇರೆ ಭಾಗದಲ್ಲಿಲ್ಲ ನಮ್ಮ ಮೈಸೂರು ದೇಶದಲ್ಲೂ ಕೂಡ 3 ಆಣೆ 4 ಆಣೆ ಅಥವಾ 6 ಆಣೆ ವರಮಾನ ಬರತಕ್ಕ ಬೇಕಾದಷ್ಟು ಜನ ಇದ್ದಾರೆ. ಈ ಹಸಿವನ್ನು ನೀಗಬೇಕಾಗಿದ್ದರೆ ನೀವು ಯಾವ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನೂ ಕೈಕೊಂಡಿಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಏಕೆಂದರೆ ಮೊನ್ನೆ ನಡೆದ ಪ್ರಶ್ನಾವಳಿಯಲ್ಲಿ ಕಾರ್ಮಿಕ ಸಚಿವರು ನಮ್ಮ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ ಎಷ್ಟು ಎಂದರೆ ನಮ್ಮ ಹತ್ತಿರ ಅಂಕಿ ಅಂಶ ಇಲ್ಲ ಎಂದು ಅವರೇ ಕಣ್ಣು ಕಣ್ಣು ಬಿಟ್ಟರು. ಎಂದರೆ ತಾವು ಈ ದೇಶದಲ್ಲಿ ಹಸಿವು ಎಷ್ಟಿದೆ ಎಂಬುದನ್ನು ಅಳತೆ ಮಾಡುವುದಕ್ಕೆ ನಿರುದ್ಯೋಗ ಎಷ್ಟಿದೆ ಎಂಬುದನ್ನು ಅಳತೆ ಮಾಡುವುದಕ್ಕೆ ಕೂಡ ಶಕ್ತರಾಗಿಲ್ಲ ಎಂದರೆ ಇನ್ನೇನನ್ನು ತಾನೇ ಮಾಡುವುದಕ್ಕೆ ನಿಮ್ಮಿಂದ ಸಾಧ್ಯವಿದೆ ಎಂದು ನಾನು ತಮ್ಮನ್ನು ಪ್ರಶ್ನೆ ಮಾಡುತ್ತೇನೆ. ಒಂದು ಬೃಹತ್ ಯೋಜನೆ ಮಾಡಿದ್ದೇವೆ 40 ಕೋಟಿ ರೂಪಾಯಿಯ ಮಾಸ್ಟರ್ ಪ್ಲಾನ್ ಅದು ಎಂದು ಹೇಳುತ್ತಾ ಹೋದರೆ ಅದರಿಂದ ಅನ್ನ ಉತ್ಪಾದನೆಯಾಗುವುದಿಲ್ಲ ಎಂಬ ಮಾತನ್ನು ಅನೇಕ ವರ್ಷಗಳಿಂದ ಕೇಳುತ್ತಾ ಇದ್ದೀರಿ, ಹೇಳಿದ್ದೇ ಹೇಳೋ ಕಿಸುಬಾಯಿದಾಸ ಅನ್ನುವ ಹಾಗೆ ನೀವು ಹೇಳಿದ್ದೇ ಹೇಳುತ್ತಾ ಇದ್ದೀರಿ, ನೀವು ಮಾಡಿದ ದೊಡ್ಡ ಯೋಜನೆಯಿಂದ ಅನ್ನ ಸಿಕ್ಕೀತೇನು ?! ಎಷ್ಟುಮಟ್ಟಿಗೆ ಸಿಕ್ಕಿದೆ ಎಂಬುದು ಮುಖ್ಯವೇ ಹೊರತು ಕೇವಲ ಹೇಳಿಕೆಯಿಂದಲ್ಲ ಅಥವಾ ಕೈಕೊಂಡ ಯೋಜನೆಗಳಿಂದಲ್ಲ. ಅನ್ನದೇವತೆಯನ್ನು ಸಾಕ್ಷಾತ್ಕಾರ ಮಾಡಿಕೊಂಡು ಕ್ಷಾಮ ದೇವತೆಯನ್ನು ಹೊರದೂಡಿದ್ದೀರಾ ಎಂಬುದನ್ನು ತಾವು ಯೋಚನೆ ಮಾಡಬೇಕು. ಅನ್ನ ಕ್ಷಾಮದಿಂದ ಹೆಣಗುತ್ತಾ ಇರತಕ್ಕ ಈ ದೇಶದಲ್ಲಿ ತಾವು ಆಹಾರ ಮಂತ್ರಿಗಳಾಗಿರುವುದು ನಿಜವಾಗಿಯೂ ಕೂಡ ಯೋಗ್ಯವಲ್ಲ, ನೀವು ಅದಕ್ಕೆ ಯೋಗ್ಯರೇ ಎಂಬುದನ್ನು ನಿಮ್ಮ ಆತ್ಮ ಪರೀಕ್ಷೆ ಮಾಡಿ ನೀವೇ ಹೇಳಬೇಕು ದೇಶದಲ್ಲಿ ಕಾನೂನಿನ ಭಯವಿಲ್ಲದೇ ಆಹಾರ ಬೆಲೆಗಳು ವಿಪರೀತವಾಗಿ ಏರಿಹೋಗಿವೆ. ಉದಾಹರಣೆಗೆ ಪಾನನಿರೋಧವನ್ನು ತೆಗೆದುಕೊಳ್ಳಿ, ದೇಶಾದ್ಯಂತ ಅದನ್ನು ಜಾರಿಗೆ ತಂದಿದ್ದೀರಿ. ಅದು ಒಂದು ವಿಚಿತ್ರವಾದ ಕಾನೂನು. ಬೆಂಗಳೂರು ವಿಧಾನಸೌಧದ ಮುಂದೆ ಯಾವನಾದರೂ ಸಾರಾಯಿ ಹೆಂಡ ಏನು ಬೇಕಾದರೂ ಕುಡಿಯಬಹುದು. 25 ಮೈಲಿ ಆಚೆಗೆ ಹೆಂಡ ಸಾರಾಯಿ ಕುಡಿದರೆ ಖೈದಿ ಆಗುತ್ತಾನೆ, ಅವನಿಗೆ ದಂಡ ಹಾಕುತ್ತೀರಿ, ಜೈಲಿಗೆ ಹಾಕುತ್ತೀರಿ. ಇದರಿಂದ ನಿಮ್ಮ

ಪಾನನಿರೋಧ ಮಾಡಿದ ಉದ್ದೇಶ ಯಶಸ್ವಿಯಾಗುವುದಕ್ಕೆ ಸಾಧ್ಯವಾಗಿಲ್ಲ. ಅದೇ ರೀತಿ ಮೈಸೂರು ದೇಶದಲ್ಲಿರತಕ್ಕ ಲಂಚವನ್ನು ಹೊಡೆಯತಕ್ಕ ಪೋಲೀಸ್‌ನವರಿಂದ ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವೇ ಎಂದು ನಾನು ನಿಮ್ಮನ್ನು ಪ್ರಶ್ನೆ ಮಾಡಬೇಕಾಗಿದೆ. ಇವತ್ತಿನ ದಿವಸ ದೇಶದಲ್ಲಿರತಕ್ಕ ಕುಡಿಯುತಕ್ಕ ಜನರನ್ನೆಲ್ಲಾ ಖೈದಿಗಳನ್ನಾಗಿ ಮಾಡಿ. ಹಿಂದೆ ಒಂದು ಸಾರಿ ಹೇಳಿದೆ ಈ ದೇಶದಲ್ಲಿ ಬಹುಶಃ ಇನ್ನು ಹತ್ತು ವರ್ಷದಲ್ಲಿ ಪ್ರತಿಯೊಬ್ಬರೂ ಎಕ್ಸ್‌ಕಾನ್‌ವಿಕ್ಟ್ಸ್ ಆಗುತ್ತಾರೆ. 5—10 ರೂಪಾಯಿ ಹಾಕುತ್ತೀರಿ ಜೈಲಿಗೆ ಹಾಕುತ್ತೀರಿ ಕಾನ್‌ವಿಕ್ಟ್ಸ್ ಆಗುತ್ತಾರೆ. ತಮಗೆ ಇದನ್ನು ಯಶಸ್ವಿಯಾಗಿ ಆಚರಣೆಗೆ ತರತಕ್ಕ ಶಕ್ತಿ ಇಲ್ಲ ಮತ್ತು ಇದರಲ್ಲಿ ತಮಗೆ ನಂಬಿಕೆಯೂ ಸಹ ಇಲ್ಲ. ತಮ್ಮ ನೀತಿಯನ್ನು ಆಚರಣೆಗೆ ತರುತ್ತೇವೆ ಎಂದು ಕಟ್ಟುನಿಟ್ಟಾಗಿ ಬಾಯಿಮಾತಿನಲ್ಲಿ ಹೇಳುತ್ತೀರೇ ಹೊರತು ಕಾರ್ಯತಃ ಮಾಡುತ್ತಿಲ್ಲ, ಈ ರೀತಿ ಮಾತಿನಲ್ಲಿ ಒಂದು ಕೃತಿಯಲ್ಲಿ ಒಂದು ಮಾಡುತ್ತಾ ಹೋದರೆ ತಾವು ಗಾಂಧೀವಾದಿಗಳಾಗಿ ನಿಮ್ಮ ಆತ್ಮಸಾಕ್ಷಿಯಾಗಿ ನೀವು ಮಾಡುತ್ತಿರುವುದು ಸರಿಯೇ ಎಂದು ಕೇಳುತ್ತೇನೆ ಉತ್ತರ ಹೇಳಬೇಕು. ಟೇಕ್ ಚಂದ್ ಕಮಿಟಿಯವರು ದೇಶದಲ್ಲಿ ಲಿಕ್ಕರ್ ಉಪಯೋಗ ಮಾಡುತ್ತಿರುವುದು ಹೆಚ್ಚುತ್ತಾ ಇದೆ ಎಂದು ಹೇಳಿದ್ದಾರೆ, ಇಲ್ಲಿಸಿಟ್ ಲಿಕ್ಕರ್ ಇಂಡಸ್ಟ್ರಿ ಬಹಳ ಹೆಚ್ಚಾಗಿ ಅದನ್ನು ಉಪಯೋಗಿಸುವವರ ಸಂಖ್ಯೆ ಹೆಚ್ಚುತ್ತಾ ಇದೆ ಎಂದು ಅವರು ಹೇಳುತ್ತಾ ಇದ್ದಾರೆ. ಇದರಿಂದ ಪಾನನಿರೋಧ ಎನ್ನುವುದು ಎಷ್ಟು ಅಣಕುಮಾತ್ರವಾಗಿದೆ ಎಂಬುದನ್ನು ಹೇಳುತ್ತಾ ಇದ್ದೇನೆ. ಹೀಗೆ ಕಾನೂನುಭಂಗ ಮಾಡತಕ್ಕ ಒಂದು ಕೆಲಸ ದಿನಂಪ್ರತಿ 24 ಗಂಟೆಗಳ ಕಾಲವೂ ಕೂಡ ಮೈಸೂರು ಸಂಸ್ಥಾನದ 19 ಜಿಲ್ಲೆಗಳಲ್ಲೂ ಏಕಪ್ರಕಾರವಾಗಿ ಸತತವಾಗಿ ನಡೆಯುತ್ತಾ ಇದೆ. ಇಂಥಾ ಒಂದು ಕಾನೂನನ್ನು ಆದರಣೆಯಲ್ಲಿ ತರತಕ್ಕ ಒಂದು ಶಕ್ತಿಯುತವಾದ ಧೃಡತೆ ಇಲ್ಲದೇ ಹೋದರೆ ಏನು ಪ್ರಯೋಜನ ? ಇದನ್ನು ಯಾವ ಮಂತ್ರಿಗಳೇ ಆಗಲೀ ಅವರ ಆತ್ಮನಿಷ್ಠೆಯಿಂದ ಪ್ರಶ್ನೆ ಮಾಡಿಕೊಂಡು ಆ ಕೆಲಸವನ್ನು ಮಾಡತಕ್ಕ ಕಾರ್ಯದಲ್ಲಿ ಅವರು ಫಲಕಾರಿಯಾಗಿಲ್ಲದೇಯಿರುವುದರಿಂದ ರಾಜೀನಾಮೆ ಕೊಡುವುದು ಅವರ ಆದ್ಯಕರ್ತವ್ಯ ಎಂದು ಹೇಳಿ ನಾನು ಮಂತ್ರಿಮಂಡಲದವರಿಗೆ ಹೇಳುತ್ತಾ ಇದ್ದೇನೆ.

ನಾವು ಇದೇ ಸಭೆಯ ಮುಂದೆ ಈ ರಾಷ್ಟ್ರೀಕರಣ ವಿಚಾರದಲ್ಲಿ ಎಷ್ಟೆಷ್ಟು ಅನ್ಯಾಯಗಳು ನಡೆಯುತ್ತಿವೆ ಎಂಬುದನ್ನು ಪದೇ ಪದೇ ಹೇಳುತ್ತಲೇ ಬಂದಿದ್ದೇವೆ. ಈ ರಾಷ್ಟ್ರೀಕರಣ ನೀತಿಯಿಂದ ಸರ್ಕಾರ ನಮ್ಮ ದೇಶಕ್ಕೆ ಬಹಳ ಅನ್ಯಾಯವನ್ನು ಮಾಡಿದೆ ಎಂದು ನಾನು ಹೇಳದೆ ವಿಧಿಯಿಲ್ಲ. ಈ ರಾಷ್ಟ್ರೀಕರಣ ಪದ್ಧತಿಯನ್ನು ಜಾರಿಗೆ ತಂದ ಮೇಲೆ ಈ ಸರ್ಕಾರ ನಮ್ಮ ಖಜಾನೆಗೆ ಎಷ್ಟು ಹಣವನ್ನು ತುಂಬಿದೆ ? ಇಲ್ಲಿ ಎಷ್ಟು ಜನರಿಗೆ ಈ ಮೂಲಕ ಕೆಲಸಗಳನ್ನು ಒದಗಿಸಿದ್ದೀರಿ; ಈ ಇಲಾಖೆಯಿಂದ ಈ ದಿವಸ ಏನಾದರೂ ಸಹಾಯವಾಗಿದ್ದರೆ ಅದು ಈ ಆಡಳಿತ ವರ್ಗದವರ ಹಿಂಬಾಲಕರಿಗೆ. ಹೀಗಾಗಿ ಈ ದಿವಸ ಆ ಸಾರಿಗೆ ಸಂಸ್ಥೆ ಒಂದು ಅವಹೇಳನಕ್ಕೆ ಗುರಿಯಾಗಿದೆ. ಅಷ್ಟು ವಿನಾ ಈ ಇಲಾಖೆಯಿಂದ ದೇಶಕ್ಕೇನೂ ಉಪಕಾರವಾಗಿಲ್ಲ. ಈ ರಾಷ್ಟ್ರೀಕರಣ ವಿಚಾರದಲ್ಲಂತೂ ಲಂಚ ರುಷುವತ್ತುಗಳು ತಾಂಡವವಾಡುತ್ತಿವೆ. ಈ ರಾಷ್ಟ್ರೀಕರಣದ ಸೋಗಿನಲ್ಲಿ ಏನೇನು ಅನ್ಯಾಯಗಳು ನಡೆಯುತ್ತಿವೆ ಎಂಬ ಬಗ್ಗೆ ಚಿತ್ರದುರ್ಗ ಮತ್ತು ಮೈಸೂರು ಈ ಎರಡು ಸ್ಥಳಗಳಲ್ಲಿ ಅನೇಕ ವಿಚಿತ್ರಗಳು ನಡೆದಿರತಕ್ಕ ನಿದರ್ಶನಗಳು ನನಗೆ ಗೊತ್ತಿವೆ. ಈ ಎರಡು ಜಿಲ್ಲೆಗಳಲ್ಲಿ ಕಾಂಗ್ರೆಸ್ ಸ್ನೇಹಿತರಿಗೆ ಸಹಾಯಮಾಡಲು ದೊಡ್ಡ ದೊಡ್ಡ ಬಸ್ ಲೈನುಗಳನ್ನು ರಾಷ್ಟ್ರೀಕರಣ ಮಾಡದೆ ಹಾಗೇ ಅವುಗಳನ್ನು ಮೀಸಲಾಗಿಟ್ಟಿದ್ದರು. ಹೀಗೆ ಈ ರಾಷ್ಟ್ರೀಕರಣದ ಸೋಗಿನಲ್ಲಿ ಕಾಂಗ್ರೆಸ್ಸಿನವರ ಒಂದು ಜೀವನೋಪಾಯ ನಡೆಯಬೇಕಾಗಿದೆ. ಹೀಗೆ ಈ ಬಾಬಿನಲ್ಲಿ ಜನರಿಗೆ ಈ ಮಂತ್ರಿಮಂಡಲ ಒಂದು ಪಕ್ಷಪಾತಭಾವನೆಯಿಂದ ವರ್ತಿಸಿದೆ. ಹೀಗೆ ರಾಷ್ಟ್ರೀಕರಣ ನೆಪದಲ್ಲಿ ರಾಜ್ಯಕ್ಕೆ ಅನ್ಯಾಯ ಮಾಡತಕ್ಕ ಮಂತ್ರಿಮಂಡಲ ಅಧಿಕಾರದಲ್ಲಿರುವುದು ಲಾಯಕ್ಕಲ್ಲ. ಆದುದರಿಂದ ಈ ಮಂತ್ರಿಮಂಡಲ ಕೂಡಲೇ ರಾಜೀನಾಮೆ ಕೊಡಬೇಕೆಂದು ಹೇಳುತ್ತೇನೆ.

ನಾನು ಹೋದ ಅಧಿವೇಶನದ ಕಾಲದಲ್ಲಿ ಇಂಥದೇ ಒಂದು ಅವಿಶ್ವಾಸ ನಿರ್ಣಯವನ್ನು ತಂದಿದ್ದಾಗ ಈ ನಾಮಕರಣ ವಿಚಾರದಲ್ಲಿ ಎಷ್ಟೆಷ್ಟು ಅನ್ಯಾಯಗಳು ನಡೆದಿರುತ್ತವೆ ಏನೆಂಬುದನ್ನು ತಿಳಿಸಿದ್ದೆನು. ನಮ್ಮ ಮುಖ್ಯಮಂತ್ರಿಗಳೇ ಮೊದಲದನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಇದಕ್ಕೆ ಈ ದಿವಸ ನಮ್ಮಲ್ಲಿ ಮತ್ತೊಂದು ನಿದರ್ಶನವೆಂದರೆ ಈಗ ನಮ್ಮ ವಿಧಾನ ಪರಿಷತ್ತಿನ ಛೇರ್ಮನರದು, ಅವರು ಈ ಸರ್ಕಾರ ತಮ್ಮ ಒಂದು ಪಕ್ಷದವರಿಗೆ ಉಪಕಾರ ಮಾಡಲು ರಾಜ್ಯಾಂಗವನ್ನೇ ಉಲ್ಲಂಘನೆ ಮಾಡಿ ಪ್ರಜಾಪ್ರಭುತ್ವ ತತ್ವಗಳಿಗೆ ತಿಲಾಂಜಲಿಯನ್ನಿತ್ತಿದ್ದಾರೆ.

Mr. SPEAKER.—Let me understand. I want no debate about the Chairmanship of the Leglslative Council on this floor of the House.

ಶ್ರೀ ಎಸ್. ಶಿವಪ್ಪ.—ಈ ವಿಚಾರದಲ್ಲಿ ಸರ್ಕಾರದವರು ಒಂದು ದೊಡ್ಡ ಲೋಪದೋಷವನ್ನು ಮಾಡಿದ್ದಾರೆಂದು ಹೇಳದೆ ವಿಧಿಯಿಲ್ಲ. ಯಾವ ದೇಶವನ್ನೇ ಆಗಲಿ ವ್ಯಕ್ತಿ ರಾಜ್ಯಾಂಗಕ್ಕೇ ಅಧೀನವಾಗಿದ್ದಾನೆಯೇ ಹೊರತು, ವ್ಯಕ್ತಿಗೆ ರಾಜ್ಯಾಂಗ ಎಲ್ಲಿಯೂ ಅಧೀನವಾಗಿಲ್ಲ. ಇಂಥ ಅಕ್ರಮ ಮಾರ್ಗದಲ್ಲಿ ನಡೆಯುತಕ್ಕ ಸರ್ಕಾರವಿದ್ದರೆ ಇದರಿಂದ ದೇಶಕ್ಕೆ ಖಂಡಿತ ಉಪಕಾರವಾಗುವುದಿಲ್ಲ. ಇದರಿಂದ ದೇಶಕ್ಕೆ ಒಂದು ದೊಡ್ಡ ಅಪಾಯ. ಇಂಥ ಆಡಳಿತವಿದ್ದರೆ ಸಾಮಾನ್ಯ ಪ್ರಜೆಗಳಿಗೆ ತುಂಬಾ ಅನ್ಯಾಯಗಳಾಗುತ್ತವೆ.

ಈ ದಿವಸ ಈ ಆಡಳಿತ ಪಕ್ಷ ಬಂಡವಾಳಶಾಹಿಗಳ ಹಿಂಬಾಲಕ ಪಕ್ಷ ಆಗಿದೆ. ಯಾವತ್ತೂ ಈ ಸರ್ಕಾರಕ್ಕೆ ಇವರ ನೆರವು ಬೇಕಾಗಿದೆ. ಮೊನ್ನೆ ತಾನೆ ನಮ್ಮ ಹಣಕಾಸಿನ ಸಚಿವರು ಛೇಂಬರ್ ಆಫ್ ಕಾಮರ್ಸಿನಲ್ಲಿ ನಡೆದ ಒಂದು ಸಭೆಯಲ್ಲಿ ಆ ಬಂಡವಾಳಶಾಹಿಗಳನ್ನುದ್ದೇಶಿಸಿ ಮಾತನಾಡುತ್ತ ನೀವೆಲ್ಲರೂ ಸರ್ಕಾರಕ್ಕೆ ಸರಿಯಾಗಿ ತೆರಿಗೆಗಳನ್ನು ಕೊಡಬೇಕೆಂದು ಅವರಲ್ಲಿ ಅಪೀಲು ಮಾಡಿಕೊಂಡರೆಂಬುದಾಗಿ ತಿಳಿದುಬಂತು ಇವರಲ್ಲಿ ಇಷ್ಟೊಂದು ಕಾನೂನಿನ ಬಲವಿರುವಾಗ ಇವರೇಕೆ ಅವರಲ್ಲಿ ಹಾಗೆ ಅಪೀಲು ಮಾಡಬೇಕಾಗಿತ್ತು? ಕಾನೂನಿನ ಬಲದ ಮೇಲೆ ಅದನ್ನು ವಸೂಲು ಮಾಡುವುದಕ್ಕೆ ಆಗುತ್ತಿರಲಿಲ್ಲವೇನು! ಆ ಒಂದು ಸತ್ಕಾರ ಕೂಟದಲ್ಲಿ ಇವರು ಹೀಗೆ ಹೇಳಿಲ್ಲವೋ? ಇಂಥ ಬಂಡವಾಳವಿಲ್ಲದ ಅಣಕು ಸಮಾಜವಾದ ಖಂಡಿತ ನಮಗೆ ಬೇಡ. ಇಂಥ ಒಂದು ಅಣಕು ಸಮಾಜವಾದ ನಮಗೆ ಬೇಡ. ಇಂಥ ಒಂದು ಅಣಕು ಸಮಾಜವಾದ ತತ್ವವನ್ನಿಟ್ಟುಕೊಂಡಿರತಕ್ಕ ಸರ್ಕಾರದಿಂದ ದೇಶಕ್ಕಾಗಲೀ ಅಥವಾ ರೈತರಿಗಾಗಲೀ ಯಾವ ಪ್ರಯೋಜನವೂ ಇರುವುದಿಲ್ಲ. ಇಂಥ ಸರ್ಕಾರ ಇರುವತನಕ ಇಲ್ಲಿ ಯಾವ ಯೋಜನೆಗಳೂ ಯಶಸ್ವಿಯಾಗುವುದಿಲ್ಲ. ಆದುದರಿಂದ ಈ ಸರ್ಕಾರ ಅಧಿಕಾರದಲ್ಲಿರಲು ಅವಕಾಶವಿಲ್ಲ ಎಂದು ಹೇಳುತ್ತೇನೆ. ಈ ಸರ್ಕಾರಕ್ಕೆ ಸಮಾಜವಾದದ ನಿಜವಾದ ಅರ್ಥವೇ ಗೊತ್ತಿಲ್ಲ. ಇದು ಹೀಗಾಗಿರುವಾಗ ಇನ್ನು ಆ ಭೂಸುಧಾರಣೆ ವಿಚಾರ ತೆಗೆದುಕೊಂಡರೆ ಅದನ್ನು ಜಾರಿಗೆ ತರುವ ವಿಚಾರದಲ್ಲಿ ಇವರಿಗೆ ತುಂಬಾ ಅರೆಮನಸ್ಸು. ಇದನ್ನು ಜಾರಿಗೆ ತರುತ್ತೇವೆಂದು ರೈತರಲ್ಲಿ ಸುಳ್ಳು ಹೇಳಿಕೊಂಡು ಅವರಿಗೆ ಇದರ ನಿಜಾಂಶವನ್ನು ಮರೆಮಾಚಿ ಜನರಿಗೆ ಮೋಸ ಮಾಡುತ್ತಿದ್ದಾರೆ. ಹೀಗಾದರೆ ಸಮಾಜ ಎಂದಿಗೆ ಉದ್ಧಾರವಾಗುವುದು! ಇಂಥ ಅರೆಮನಸ್ಸಿನ ಸರ್ಕಾರಕ್ಕೆ ಜನತೆಗೆ ಅಗತ್ಯವಾಗಿ ಬೇಕಾದ ಒಂದು ಸುಗಮವಾದ ಜೀವನೋಪಾಯ ಮಾರ್ಗವನ್ನು ಕಲ್ಪಿಸಲು ಖಂಡಿತ ಸಾಧ್ಯವಿಲ್ಲ ಎಂದು ನಾನು ಹೇಳದೆ ವಿಧಿಯಿಲ್ಲ. ಮೇಲಾಗಿ ದೇಶದಲ್ಲಿ ದಿನದಿನಕ್ಕೂ ನಿರುದ್ಯೋಗ ಸಮಸ್ಯೆ ಬೃಹದಾಕಾರ ತಾಳುತ್ತಿದೆ. 1959ರಲ್ಲಿ ಭರತ ಖಂಡದಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ 3.8 ಇತ್ತು, ಅಂದರೆ ಸುಮಾರು ನಾಲ್ಕು ಲಕ್ಷವಿತ್ತು. ಈ ದಿವಸ ಅದು 7 ಲಕ್ಷಕ್ಕೇರಿದೆ. ದೇಶದಲ್ಲಿ ಇಲ್ಲಿಗಾಗಲೇ 2–3 ಯೋಜನೆಗಳು ಕಳೆಯುತ್ತಾ ಬಂದರೂ ಈ ಸಮಸ್ಯೆ ಇನ್ನೂ ದ್ವಿಗುಣ, ತ್ರಿಗುಣವಾಗುತ್ತಿದೆ. ಇಂಥ ಸಮತಾವಾದ ಸಮಾಜ ನಮಗೆ ಖಂಡಿತ ಬೇಡ. ಈ ಒಂದು ಧೋರಣೆಯಲ್ಲಿ ಬಂಡವಾಳಶಾಹಿಗಳಿಗೆ ಮಾತ್ರ ಅನುಕೂಲ. ಬಡವರು ಇನ್ನೂ ಬಡವರಾಗುತ್ತಿದ್ದಾರೆ. ದೇಶದ ಎಲ್ಲೆಲ್ಲಿಯೂ ಅಶಾಂತಿ ಮೂಡುತ್ತಿದೆ. ಇದನ್ನು ತಡೆಗಟ್ಟದೇ ಹೋದರೆ ಸರ್ಕಾರ ತನ್ನ ಕರ್ತವ್ಯವನ್ನು ಪಾಲಿಸಿದಂತಾಗಲಿಲ್ಲ. ಈ ದಿವಸ ಈ ಸರಕಾರದಲ್ಲಿ ಯಾವ ಒಂದು ಕೆಲಸ ಆಗಬೇಕಾಗಿದ್ದರೂ ಕೋರ್ಟಿಗೆ ರಿಟ್ ಹೋಗಬೇಕು. ಈ ದಿವಸ ನಮ್ಮ ಮೈಸೂರು ಹೈಕೋರ್ಟಿನ ಮುಂದೆ ಸಾವಿರಾರು ಸರ್ವೀಸಿನ ರಿಟ್ ಕೇಸುಗಳು ಬಿದ್ದಿರುತ್ತದೆ. ಇದು ನಮ್ಮ ಸರ್ಕಾರದ ಅದಕ್ಷತೆಯನ್ನು ತೋರಿಸುತ್ತಿದೆ. ಇದನ್ನು ನೋಡಿದರೆ ನಾವು ನಮ್ಮ ಪ್ರತಿಯೊಂದು ಶಿಕ್ಷಣ, ರಕ್ಷಣೆ, ಉದ್ಯೋಗಗಳ ಬಗ್ಗೆ ಕೋರ್ಟಿನ ಮುಂದೆ ಹೋಗಿ ಅಲ್ಲಿ ಈ ಅನುಕೂಲತೆಗಳನ್ನು ಪಡೆಯುತ್ತಿದೆಯೋ ಏನೋ ಎನ್ನುವಂತೆ ನನಗೆ ಭಾಸವಾಗುತ್ತಿದೆ. ಕಾನೂನನ್ನು ಉಲ್ಲಂಘನೆ ಮಾಡಿ ಕಾಂಗ್ರೆಸ್ಸಿನವರಿಗೆ ಸಹಾಯ ಮಾಡಿರತಕ್ಕ ನಿದರ್ಶನಗಳು ಅನೇಕವಾಗಿವೆ. ಈ ಕಾಂಗ್ರೆಸ್ ಸಹಕಾರ ಸಂಘವಲ್ಲಿ ದೊಡ್ಡ ದೊಡ್ಡ ತಿಮಿಂಗಿಲಗಳನ್ನು ಬೆಳೆಸುತ್ತಿದೆ. ನಮ್ಮ ಮೈಸೂರು ದೇಶದಲ್ಲಿ ಇಲ್ಲಿಯವರೆಗೆ ಯಾವ ಕೈಗಾರಿಕೆ ಅಭಿವೃದ್ಧಿಗೆ ಬಂದಿದೆ? ಯಾವ ಯೋಜನೆಗಳು ಯಶಸ್ವಿಯಾಗಿವೆ? ಹೇಳಲಿ ನೋಡೋಣ. ಈ ದಿವಸ ಆ ಸ್ಟೈಯಿನ್‌ಲೆಸ್ ಸ್ಟೀಲಿನ ಕೋಟವನ್ನು ಯಾರಿಗೆ ಶಕ್ತಿಯಿದೆಯೋ ಅವರಿಗೆ ಕೊಟ್ಟಿಲ್ಲ, ಯಾರು ಡಿಫೆನ್ಸಿಗೆ ಉಪಯುಕ್ತವಾದ ಸಾಮಾನುಗಳನ್ನು ತಯಾರಿಸಿ ಕೊಡುತ್ತೇವೆಂದು ಕೇಳಿದರೋ ಅಂಥವರಿಗಿಲ್ಲ. ಆ ವಸ್ತುವನ್ನು ಈ ದಿನ ಈ ಸರ್ಕಾರ ತನ್ನ ಹಿಂಬಾಲಕರು ಯಾರಿದ್ದಾರೋ ಅವರಿಗೆ ಕೊಡಲಾಗಿದೆ. ಈ ಸರ್ಕಾರ ಈ ದಿವಸ ಇಂಥ ವಸ್ತುಗಳನ್ನೆಲ್ಲ ಕೇವಲ ಯಾರು ದಕ್ಷತೆಯಿಂದ ಬ್ಲಾಕ್ ಮಾರ್ಕೆಟ್ ಮಾಡುತ್ತಿದ್ದಾರೋ ಅಂಥವರಿಗೇ ಆರಿಸಿ ಕೊಡುತ್ತಿದೆ. ಅಂಥವರಿಗೇ ರಕ್ಷಣೆ. ಅವರು ಆ ಬ್ಲಾಕ್ ಮಾರ್ಕೆಟ್ಟಿನಲ್ಲಿ 5-10 ಸಾವಿರ ದುಡಿದುಕೊಳ್ಳಲು ಅಂಥವರಿಗೆ ಈ ಸರ್ಕಾರ ರಕ್ಷಣೆಯನ್ನು ಕೊಡುತ್ತಿದೆ. ಹೀಗೆ ಈ ದಿವಸ ಈ ಕೈಗಾರಿಕೆಯ ಇಲಾಖೆಯಲ್ಲಿ ಹಡಗನ್ನು ನುಂಗತಕ್ಕಂಥ ತಿಮಿಂಗಿಲವನ್ನು ಇವರು ಬೆಳೆಸುತ್ತಿದ್ದಾರೆ. ಇಂಥ ಸರ್ಕಾರಕ್ಕೆ ದೇಶವನ್ನು ಕಟ್ಟತಕ್ಕ ಶಕ್ತಿಯಿಲ್ಲ ಎಂದು ಹೇಳದೆ ವಿಧಿಯಿಲ್ಲ. ಈ

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಇಷ್ಟು ದಿನಗಳಾದರೂ ದೇಶಕ್ಕೇನು ಉಪಕಾರವಾಗಿದೆ ಎಂದು ಕೇಳುತ್ತೇನೆ? ಇದೇ ಕೈಗಾರಿಕೆಗಳು ಆ ಮದ್ರಾಸ್ ಮತ್ತು ಪಂಜಾಬುಗಳಲ್ಲಿ ನೋಡಿ ಹೇಗೆ ಅಭಿವೃದ್ಧಿಗೆ ಬಂದಿವೆ. ನಮ್ಮಲ್ಲಿ ಏಕೆ ಆಗಲಿಲ್ಲ? ಯಾವನಾದರೂ ಲಂಚಕೋರ ಬಂದರೆ ಅವನಿಗೆ ಸರ್ವವಿಧವಾದ ಸಹಕಾರಗಳೂ ದೊರೆಯುತ್ತವೆ. ಖಂಡಿತ ಈ ರೀತಿ ಮಾಡುವುದು ತಪ್ಪು ಮತ್ತು ನಮ್ಮ ದೇಶಕ್ಕೆ ಅಪಾರವಾದ ತಪ್ಪು ಮಾಡಿದಂತಾಗುತ್ತದೆ.

ಮತ್ತೆ ರೈಲ್ವೆ ವಿಚಾರ ತೆಗೆದುಕೊಂಡರೆ, ಈ ಸರ್ಕಾರ ಆಡಳಿತ ವಹಿಸಿಕೊಂಡು 16 ವರ್ಷಗಳಾದರೂ ಕೂಡ ನಮ್ಮ ಮೈಸೂರು ದೇಶದಲ್ಲಿ ಒಂದು ಅಂಗುಲದಷ್ಟು ರೈಲ್ವೆ ಲೈನು ಬರುವಂತೆ ಮಾಡಲು ನಿಮ್ಮ ಕೈಯಲ್ಲಿ ಆಗಲಿಲ್ಲ. ನಿಮಗೆ ಮಾತಿನಲ್ಲಿ ರೈಲು ಹೊಡೆಯಲು ಬರುತ್ತದೆ. ಭಾಷಣದಲ್ಲಿ ರೈಲು ಬಿಡುವುದಕ್ಕೆ ನಿಮಗೆ ಬರುತ್ತದೆ. ಈ ದೇಶಕ್ಕೆ ಒಂದು ಅಂಗುಲದಷ್ಟು ರೈಲನ್ನು ಬರುವ ಹಾಗೆ ಮಾಡಲು ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರಿ ಮಾಡಲಾಗಲಿಲ್ಲ. ಇದರ ಜೊತೆಯಲ್ಲಿಯೇ ಮಂಗಳೂರು ಬಂದರು ಎನ್ನುವ ದೊಡ್ಡ ಬಂದರನ್ನು ಮಾಡಬೇಕೆಂದು ಅನೇಕ ವರ್ಷಗಳಿಂದಲೂ ಹೇಳುತ್ತಲೇ ಇರುತ್ತಾರೆ. ಆದರೂ ಕೂಡ ಇನ್ನೂ ಏನೂ ಕೆಲಸವಾಗಿಲ್ಲ ಎನ್ನುವುದನ್ನು ನೋಡಬಹುದು. ಸುಮ್ಮನೆ ಹೇಳುತ್ತಾರೆಯೇ ಹೊರತು ಯಾವುದೂ ಕಾರ್ಯಗತವಾಗುತ್ತಿಲ್ಲ ಎನ್ನುವುದು ನೀವು ಮಾಡುತ್ತಿರುವ ಕೆಲಸಗಳಿಂದಲೇ ಭಾಸವಾಗುತ್ತದೆ. ಈ ರೀತಿಯಾದರೆ ನಿಮ್ಮಿಂದ ಯಾವ ಕೆಲಸವನ್ನೂ ಮಾಡುವುದಕ್ಕೆ ಖಂಡಿತ ಸಾಧ್ಯವಿಲ್ಲ. ಇಂತಹ ಕಾರಣಗಳಿಂದಾಗಿ ನಮ್ಮ ಜನಗಳಲ್ಲಿರುವ ವಿಶ್ವಾಸವನ್ನು ನೀವು ಮಾಡತಕ್ಕ ಕೆಲಸಗಳಿಂದ ಕಳೆದುಕೊಂಡಿದ್ದೀರಿ. ಈ ರೀತಿ ಕೆಲಸಗಳನ್ನು ಮಾಡುವುದು ಸೂಕ್ತವಲ್ಲ ಎಂದು ಹೇಳಲು ಬಹಳ ವ್ಯಸನವಾಗುತ್ತದೆ. ಕೊನೆಯದಾಗಿ ಇಷ್ಟು ಮಾತ್ರ ಹೇಳುತ್ತೇನೆ. ಈಚೆಗೆ ನಮ್ಮ ದೇಶದ ಮುಖ್ಯಮಂತ್ರಿಗಳು ಹೌಸಿಂಗು ಬೋರ್ಡಿನ ಮೀಟಿಂಗೊಂದರಲ್ಲಿ ಹೋಗಿ ಭಾಷಣ ಮಾಡಿದಾಗ, ಹೌಸಿಂಗು ಬೋರ್ಡಿನವರು ಮನೆ ಕಟ್ಟಲು ಉಪಯೋಗಿಸುವ ಮರಗಳು ಚೆನ್ನಾಗಿಲ್ಲ ಮತ್ತು ಅಲ್ಲಿ ಉಪಯೋಗಿಸಿರುವ ಕಬ್ಬಿಣ ಚೆನ್ನಾಗಿಲ್ಲ ಎಂದು ಹೇಳಿದರು. ಒಂದು ಕಡೆಯಲ್ಲಿ ಮಾನ್ಯ ಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು, ಇಲಾಖೆಯಲ್ಲಿ ಕೆಲಸ ಮಾಡುವವರೆಲ್ಲಾ ಲಂಚಕೋರರಾಗಿರುತ್ತಾರೆ. ಇಂತಹವರಿಂದ ಏನು ಸೇವೆಯಾಗುತ್ತದೆ ಎಂದು ಹೇಳಿದರು. ಶ್ರೀಮಾನ್ ಮಲ್ಲಪ್ಪನವರು ಸಹಕಾರ ಇಲಾಖೆಯಲ್ಲಿ ಗೂಳಿಗಳು ಸೇರಿರುತ್ತವೆ. ಈ ಗೂಳಿಗಳಿಂದ ಸಹಕಾರ ಕ್ಷೇತ್ರಕ್ಕೆ ಧಕ್ಕೆ ತಗಲಿದೆ ಎನ್ನುವ ಹೇಳಿಕೆ ಕೊಡುತ್ತಿದ್ದಾರೆ. ಹೀಗಾದರೆ ಕೆಲಸಗಳಲ್ಲಿ ದಕ್ಷತೆಯಿರುತ್ತದೆಯೇ? ನಮ್ಮ ದೇಶದ ಮುಖ್ಯ ಮಂತ್ರಿಗಳು ಹೌಸಿಂಗ್ ಬೋರ್ಡಿನ ಮೂಲಕ ಕಟ್ಟಿರುವ ಮನೆಗಳ ಕೆಲಸ ಚೆನ್ನಾಗಿಲ್ಲ, ಸರಿಯಾಗಿಲ್ಲ ಎಂದು ಸರ್ಕಾರದ ಅಧಿಕಾರಿಗಳೇ ಮಾಡಿದ ಕೆಲಸವನ್ನು ಹೀಗೆ ದೂರುವಾಗ ಇವತ್ತಿನ ದಿವಸ ಈ ದೇಶದ ಮುಖ್ಯ ಮಂತ್ರಿಗಳಾಗುವುದಕ್ಕೆ ಇವರಿಗೆ ಯೋಗ್ಯತೆ ಇದೆಯೇ ಎಂದು ನಾನು ಇಲ್ಲಿ ಸವಾಲು ಹಾಕುತ್ತೇನೆ. ಸರ್ಕಾರದಲ್ಲಿಯೇ ಇಂತಹ ತಪ್ಪುಗಳಾಗುತ್ತಿದ್ದರೂ ಕೂಡ ಇದನ್ನು ಕಂಡೂ ಕಾಣದ ಹಾಗೆ ಇರುವುದು ಸರಿಯೇ? ನಮ್ಮ ಸಹಕಾರ ಕ್ಷೇತ್ರದಲ್ಲಿ ಗೂಳಿಗಳು ಸೇರಿವೆ ಎನ್ನುವುದು ನಮ್ಮ ಸರ್ಕಾರದ ಅವ್ಯವಸ್ಥೆ ಎಷ್ಟರಮಟ್ಟಿಗೆ ಇದೆ ಎನ್ನುವುದನ್ನು ತೋರಿಸುತ್ತದೆ. ಇದರಿಂದ ಈ ಸರ್ಕಾರದಲ್ಲಿ ಸತ್ಯ ಇದೆಯೇ, ನಿಷ್ಠೆ ಇದೆಯೇ ಎಂದು ನಾನು ಕೇಳಬೇಕಾಗಿದೆ. ನಮಗೆ ಇಂದು ಬೇಕಾಗಿರುವುದು We want a Clean and Honest Government here. ಈ ದೇಶದಲ್ಲಿ ನಿಮ್ಮ ಅಗ್ನಿಪರೀಕ್ಷೆ ಮಾಡಬೇಕಾಗಿದೆ. ಈ ಅಗ್ನಿಪರೀಕ್ಷೆಯಲ್ಲಿ ನಿಮ್ಮ ತಪ್ಪುಗಳು ಹೇರಳವಾಗಿದೆ ಎನ್ನುವುದು ಕಾಣಬರುತ್ತಿರುವುದರಿಂದ ತಾವು ನ್ಯಾಯವಾಗಿ ರಾಜಿನಾಮೆ ಕೊಡುವುದು ಒಳ್ಳೆಯದು. ಒಳ್ಳೆಯ ಮಾತಿನಿಂದ ಕೊಡಿ. ಇವೊತ್ತು ರಾಜೀನಾಮೆ ಕೊಟ್ಟು ಜನತೆಯ ಹತ್ತಿರ ಹೋಗಿ ನಾವು ಮಾಡಿದುದು ತಪ್ಪು ಎಂದು ಹೇಳಿ. ನೀವು ಮಾಡಿರುವ ಕೆಲಸಗಳೆಲ್ಲಾ ತಪ್ಪು ಎಂದ ನಮ್ಮ ದೇಶದ ಎರಡು ಕೋಟಿ ನಲವತ್ತು ಲಕ್ಷದಷ್ಟು ಜನರು ಹೇಳುತ್ತಿರುವುದನ್ನು ಅಂಗೀಕರಿಸಿ ಅವರ ವಿಶ್ವಾಸವನ್ನು ಪಡೆಯಲು ಯತ್ನಿಸುವುದು ಒಳ್ಳೆಯದು. ಇದರಿಂದ ನಿಮ್ಮ ಸಾಹಸದ ಕೀರ್ತಿ ಹೆಚ್ಚುತ್ತದೆ, ಹಾಗಿಲ್ಲದೆ ನಿಮ್ಮ ನಿಶ್ಶಕ್ತಿಯನ್ನು ತೋರಿಸಲು ಅವಕಾಶ ಕೊಡಬೇಡಿ. ಇಲ್ಲಿ 27 ಜನ ಸೇರಿಕೊಂಡು ಏನು ಮಂತ್ರಿಮಂಡಲ ಮಾಡುತ್ತಿದ್ದೀರಿ ಅದರಿಂದ ಸಮಾಜವಾದದ ಕ್ಷೇತ್ರಗಳ ಉನ್ನತಿ ಖಂಡಿತ ಇದರಿಂದಾಗಲು ಸಾಧ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳೇ ಸರ್ಕಾರದ ಮೂಲಕ ನಡೆಸಿದ ಕೆಲಸ ಹೌಸಿಂಗ್ ಬೋರ್ಡಿಂಗಿನ ಮೀಟಿಂಗಿನಲ್ಲಿ ಅವರ ನೇತೃತ್ವದಲ್ಲಿಯೇ ಸಹ ನಡೆದಿದ್ದರೂ ಕೂಡ ಚೆನ್ನಾಗಿಲ್ಲ ಎಂದರೆ ಇದಕ್ಕಿಂತ ಬೇರೆ ಉದಾಹರಣೆ ಬೇಕೇ? ಇನ್ನು ಶರಾವತಿಯ ಬಗ್ಗೆ ಹೇಳುವುದಾದರೆ ಇಲ್ಲಿ ಕೆಲಸಗಳು ಸರಿಯಾಗಿ ನಡೆದಿಲ್ಲ. ಅದನ್ನು ವಿಚಾರಣೆ ಮಾಡಲು ಒಬ್ಬರು ನ್ಯಾಯಾಧೀಶರನ್ನು ನೇಮಕ ಮಾಡಲು ಇನ್ನೂ ಮೀನಾಮೇಷ ನೋಡುತ್ತಿದ್ದಾರೆ. ಇದರಿಂದ ಜನತೆಯಲ್ಲಿ ನಂಬಿಕೆ ಬರುತ್ತದೆಯೇ? ಅವರು ನಂಬಿಕೆ ಕೊಡುತ್ತಾರೆಯೇ? ಆದರಿಂದ ನಾನು ವಿನಯದಿಂದ

(ಶ್ರೀ ಎಸ್. ಶಿವಪ್ಪ)

ಜನತೆಯ ವಿನಯವನ್ನೂ ಪಡೆದು ಈ ಸಭೆಯ ಮುಂದೆ ಇಡುತ್ತಿದ್ದೇನೆ, ತಾವು ಈ ಕೂಡಲೇ ರಾಜಿನಾಮೆ ಕೊಡಿ. ಜನತೆಯೂ ಕೂಡ ಎಲ್ಲರೂ ನಮ್ಮ ದೇಶದಲ್ಲಿ ನಿಜವಾದ ಪ್ರಜಾಪ್ರಭುತ್ವವಿಲ್ಲ ಎಂದು ಹೇಳುತ್ತಿದ್ದಾರೆ. ಅಲ್ಲದೆ ಈಚೆಗೆ ಒಂದು ಸಂದರ್ಭದಲ್ಲಿ ನಮ್ಮ ರಾಷ್ಟ್ರಾಧ್ಯಕ್ಷರಾದ ಶ್ರೀಮಾನ್ ರಾಧಾಕೃಷ್ಣನ್‌ರಂತಹವರೇ ಭಾಷಣ ಮಾಡುವಾಗ ನಮ್ಮ ದೇಶದಲ್ಲಿ ನಿಜವಾದ ಪ್ರಜಾಪ್ರಭುತ್ವವಿಲ್ಲ ಎಂದು ಹೇಳಿದ್ದಾರೆ,

"It is a phoney democracy, it is not a real democracy" ಎಂದು ಅವರೇ ಇಲ್ಲಿಗೆ ನಾಳೆ ನಾಡಿದ್ದರಲ್ಲಿ ಬರುವವರಾಗಿದ್ದಾರೆ, ತಾವು ಅವರು ಬರುವುದರೊಳಗಾಗಿ "ರಾಜೀನಾಮೆ ಕೊಡಿ, ಒಂದು ಮೂರು ಮೂರು ತಿಂಗಳುಗಳ ಕಾಲ ಅಧ್ಯಕ್ಷರ ಆಳ್ವಿಕೆ ಇರಲಿ." ಅನಂತರ ಜನಗಳಿಗೆ ನಂಬಿಕೆ ಇರುವವರು ನಿಷ್ಠೆಯಿಂದ ರಾಜ್ಯವಾಳಲಿ. ನಮ್ಮ ದೇಶದ ಜನರ ಮೇಲೆ ತೆರಿಗೆಯ ಹೊರೆಯೇ ಹೆಚ್ಚಾಗಿರುವಾಗ ಅವರ ಮೇಲೆ ಬಲ ಪ್ರದರ್ಶನ ಮಾಡಿ ಪುಂಡುಗಂದಾಯವನ್ನು ಪೋಲೀಸಿನವರು ಹಾಕಬಹುದು ಜನ ಎನ್ನುವ ಕಾನೂನನ್ನು ಈ ಶಾಸನ ಸಭೆಯ ಮೂಲಕ ಪಾಸು ಮಾಡಿಸಿದ್ದೀರಿ. ಈ ದೇಶ ಸ್ವಾತಂತ್ರವಾದ ಮೇಲೆ ಜನಗಳ ಸೌಕರ್ಯಕ್ಕೋಸ್ಕರ ಸಾಮ್ರಾಜ್ಯವಾದಿಗಳಂತೆ ಈ ದೇಶದ ಜನತೆಯ ಮೇಲೆ ಪುಂಡುಗಂದಾಯವನ್ನು ಹಾಕಿ ನಿಮ್ಮ ಹಕ್ಕನ್ನು ಕಾನೂನಿನ ಮೂಲಕ ಹೇರುತ್ತಿದ್ದೀರಿ. ಕಾಂಗ್ರೆಸ್ಸಿನವರಿಗಾಗಿ ಎಂದು ವೋಟು ಕೊಟ್ಟ ಜನತೆಯ ಮೇಲೆ ಇಂತಹ ಪುಂಡುಗಂದಾಯವನ್ನು ಹಾಕುವುದರಿಂದ ನ್ಯಾಯ ನಿಯಮಗಳು ಉಳಿಯುತ್ತವೆಯೇ ?

ಶ್ರೀ ಗಾಂಜಿ ವೀರಪ್ಪ.—ಪುಂಡುಗಂದಾಯ ಎನ್ನುವುದು ಪಾರ್ಲಿಮೆಂಟರಿಯೇ ?

Mr. SPEAKER.—He is entitled to have a wrong opinion.

ಶ್ರೀ ಎಸ್. ಶಿವಪ್ಪ.—ನಾನು ಮೊದಲೇ ಹೇಳಿದ ಹಾಗೆ ಅಧಿಕಾರ ವರ್ಗದವರು ಅನೇಕ ಕಡೆಗಳಲ್ಲಿ ತಮಗೆ ಕೊಟ್ಟಿರುವ ಅಧಿಕಾರವನ್ನು ದುರುಪಯೋಗ ಮಾಡುತ್ತಿರುವುದನ್ನು ನೋಡಿಯೂ ನೋಡದಂತೆ ಇರುವ ಸಂದರ್ಭಗಳು ಅನೇಕ ಇವೆ. ಇದರಿಂದ ಜನಕ್ಕೆ ಅನುಕೂಲವಾಗುತ್ತದೆಯೇ? ನಾಳೆ ನಾಡಿದ್ದರಲ್ಲಿ ನಮ್ಮ ರಾಷ್ಟ್ರಪತಿಯವರು ಇಲ್ಲಿಗೆ ಬಂದಾಗ ಈ ಸಭೆಯಲ್ಲಿ ಮಹಾತ್ಮ ಗಾಂಧೀಜಿಯವರ ಚಿತ್ರವನ್ನು ಅನಾವರಣ ಮಾಡಲು ಬರುವವರಾಗಿದ್ದಾರೆ. ಆ ಚಿತ್ರ ಅನಾವರಣ ಮಾಡುವ ಸಂಧರ್ಭದಲ್ಲಿಯಾದರೂ ನಿಮ್ಮ ಕಾರ್ಯಸಾಧನೆ ಎಷ್ಟು ? ಅದರಿಂದ ನೀವು ಜನಕ್ಕೆ ಏನು ಅನುಕೂಲಗಳನ್ನು ಮಾಡಿಕೊಟ್ಟಿದ್ದೀರಿ ಅವನ್ನೆಲ್ಲಾ ತಿಳಿಯಬೇಕು ಎಂದು ಜನಗಳ ಆಶೋತ್ತರವಾಗಿದೆ. ಅಲ್ಲದೆ ಜನಗಳ ಆಶೋತ್ತರಗಳನ್ನು ಈ ಕಾಂಗ್ರೆಸ್ಸಿನ ಮಂತ್ರಿಮಂಡಲವು ಈಡೇರಿಸುವುದರಲ್ಲಿ ವಿಫಲವಾಗಿದೆ. ಆದುದರಿಂದ ತಾವು ರಾಜೀನಾಮೆ ಕೊಡಲೇ ಬೇಕು ಎಂದು ಹೇಳಿ ನಾನು ಸಭೆಯ ಮುಂದೆ ತಂದಿರುವ ಅವಿಶ್ವಾಸ ನಿರ್ಣಯವನ್ನು ಈ ಸಭೆಯ ಒಪ್ಪಿಗೆಗಾಗಿ ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

Mr. SPEAKER.—Before I call upon the Members to participate in the Debate, I would like to mention one or two small things!

On the last occasion, when leave was granted to the Hon'ble the Leader of the Opposition to move this resolution by this House, it was mentioned that the Leader of the Opposition and the Leader of the House might meet and settle the details. I am happy to say that both the Leaders met and in conjunction with others arrived at a settlement, and the time allotted for the Debate of this resolution is twelve hours. The apportionment of the time between the Ruling Party and the Opposition, all parties including Independents put together, is 50 : 50, *i.e.*, six hours and six hours. Naturally, there will be very many Members, who would like to participate. It is not possible for anybody to accede to the request of every member. Therefore, I had expressed the desire that the usual channels might operate and the Whips of parties might meet together and try to help me in this direction, and they have agreed to it and I trust that it

will be carried out. On an occasion like this elsewhere, from practical experience, this is the situation that was found:

> "MR. SPEAKER.—In calling on the right hon. Gentleman the Member for Aldershot (Mr. Oliver Littelton) to move the Motion on the Order Paper (Censure on Policy of His Majesty's Government), I thought I had better inform the House that I am afraid a great many Hon'ble Members will be disappointed. I have worked out a list of about 30 names covering, I hope, most interests and, geographically, most areas, but that leaves something over 70 who will be disappointed. Naturally, in these circumstances, I have had to disregard, to a great extent, the claims of maiden speeches, and I am sorry to say, too, that I have had to disregard many old Members who have not spoken yet in this Parliament, but I really could not work them in under the scheme that I have adopted. I am sorry that 70 old Members will be disappointed, but I simply cannot help it."

2-30 P.M.

> "With regard to the usual channels functioning I would only say this much, that the Members may try to co-operate with each other and also through the whips. Government and the Opposition are carried on alike by agreement. The minority agrees that the majority must govern, and the majority agrees that the minority should criticise. The process of parliamentary procedure are the discussions 'behind the Speaker's Chair' or 'through the usual channels'. The Prime Minister meets the convenience of the Leader of the Opposition and the Leader of the Opposition meets the convenience of the Government. The respective whips, in consultation with the respective leaders, settle the subjects to be debated, the time to be allowed and sometimes, the information to be provided and, the line of attack. The Government agrees that a vote of censure be moved on Monday provided that a Bill be given a second reading on Tuesday. The Opposition assents to its inevitable defeat at 6-30 P.M. in order that it may move a resolution for the rest of the evening and suffer its inevitable at 10 P.M."

I may also mention for the purpose of enabling the Members to help, not to try to get up in their seats in order to catch my eye. I will certainly take into consideration every request which is sent through the usual channels and also try to see if it is possible for me to avoid hardship. But it certainly does not mean that it will be possible for me to give a chance to everybody. In that light, I am requesting the House to tell me whether I should fix a time-limit for speeches.

SRI C. J. MUCKANNAPPA.—You have thrown the responsibility on the shoulders of the whips.

MR. SPEAKER.—But if the whips do not function immediately, I cannot allow confusion to prevail. The whips have not indicated anything as yet. So far as the time is cocerned, I repeat that out of the 12 hours allotted for this subject, the Hon'ble Leader of the Opposition has already taken one hour. The lists may be drawn up keeping this in mind. Even if it is desired that a particular Member should be given more time, the whips may make suitable adjustment out of the time available to each Party and indicate the break up, so that the break up and the total should tally. It is in that light I ask if it is desirable for me to fix a time limit.

SRI B. D. JATTI (Minister for Finance).—The limit should be there, Sir.

SRI D. PARAMESWARAPPA (Honnali).—Twenty minutes, Sir.

MR. SPEAKER.—I have got one list which I will pass on to the Leader of the House so that it may be passed on to Whips, and they may agree to it amongst themselves.

SRI V. M. DEO (Gubbi).—I have accepted the Leader of the Opposition, Sir.

MR. SPEAKER.—Then he will be bound by his whip. Sri Ganji Veerappa may now speak and conclude within 20 minutes, unless the concerned whip says that he is willing to delete some member's name and give him that time.

SRI GANJI VEERAPPA (Harihar).—I may require half-an-hour, Sir. Our Whip has been pleased to say that I may take half-an-hour, Sir.

[MR. DEPUTY SPEAKER in the Chair.]

† ಶ್ರೀ ಗಂಜಿ ವೀರಪ್ಪ.—ಮಾನ್ಯ ಸಭಾಪತಿಗಳೆ, ಈ ದಿವಸ ನಮ್ಮ ವಿರೋಧ ಪಕ್ಷದ ನಾಯಕರು ಮಂಡಿಸಿರತಕ್ಕಂಥ ನಿರ್ಣಯವನ್ನು ವಿರೋಧ ಮಾಡಬೇಕಾಗಿದೆ. ಕಳೆದ ಅಧಿವೇಶನದಲ್ಲಿ ಎವೇ ತರಹ ಒಂದು ನಿರ್ಣಯ ಬಂದಿತ್ತು. ಆ ಸಮಯದಲ್ಲಿ ದೀರ್ಘವಾಗಿ ಈಗ ಹೇಳಿರತಕ್ಕಂಥ ಎಷ್ಟು ಭಾಗದ ಆಕ್ಷೇಪಣೆಗಳನ್ನು ವಿರೋಧ ಪಕ್ಷದವರು ಹೇಳಿದ್ದಾರೆ. ಅದಕ್ಕೆ ಸಮಜಾಯಿಶಿಯನ್ನು ಸರ್ಕಾರದವರು ಕೊಟ್ಟಿದ್ದಾರೆ; ಆ ನಿರ್ಣಯಕ್ಕೆ ಏನು ಪರಿಣಾಮವಾಯಿತು ಎಂದು ಎಲ್ಲರಿಗೂ ಗೊತ್ತಿದೆ. ಅದಾದನಂತರ ಈಚೆಗೆ ಸಹ ಪ್ರಶ್ನಾವಳಿಗಳ ಕಾಲದಲ್ಲಿ ಮತ್ತು ಇತರೆ ವಿಚಾರಗಳನ್ನು ಚರ್ಚೆಮಾಡತಕ್ಕಂಥ ಸಮಯದಲ್ಲಿ ಈ ಎಲ್ಲ ಆಕ್ಷೇಪಣೆಗಳನ್ನೂ ಒಂದೂ ಬಿಡದ ಹಾಗೆ ಅವರು ಹೇಳಿದ್ದಾರೆ. ಅವಕ್ಕೆಲ್ಲಾ ಈ ಸಭೆಯಲ್ಲಿ ಸಾಕಾದಷ್ಟು ಸಮಜಾಯಿಶಿ ಬಂದಿದೆ. ಹಿಂದೆ ಹೇಳಿದ್ದನ್ನೆಲ್ಲಾ ಕ್ರೋಢೀಕರಿಸಿ ಒಂದೇ ಒಂದು ಭಾಷಣದಲ್ಲಿ ಈಗ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು ಎಂದರೆ ತಪ್ಪಾಗಲಾರದು.

ಸ್ವಾಮಿ, ಇನ್ನೊಂದು ವಿಚಾರ. ಈ ಪ್ರಜಾಪ್ರಭುತ್ವ ಎಲ್ಲೆಲ್ಲಿ ಕೆಲಸ ಮಾಡುತ್ತಿದೆಯೋ, ಅಲ್ಲೆಲ್ಲಾ ಅವಿಶ್ವಾಸ ನಿರ್ಣಯವನ್ನು ಎಂತಹ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರು ತರುತ್ತಾರೆ ಎಂದು ನೋಡಿದರೆ, ಸರಕಾರದವರು ತಮ್ಮ ಕರ್ತವ್ಯವನ್ನು ಬಹುಮಟ್ಟಿಗೆ ಮಾಡದೆ, ಪ್ರಜಾಪ್ರಭುತ್ವ ತತ್ವದ ಮೇಲೆ ವಿರೋಧಪಕ್ಷ ಆಡಳಿತ ನಡೆಸುವ ಪರಿಸ್ಥಿತಿಯಲ್ಲಿದ್ದರೆ ಮಾತ್ರ ತರುತ್ತಾರೆ. ಈ ಅವಿಶ್ವಾಸ ನಿರ್ಣಯದಲ್ಲಿ ಸೆನ್ಸಾರ್ ಮೋಶನ್ನನ್ನು ನಮ್ಮ ವಿರೋಧಪಕ್ಷದ ನಾಯಕರು ಕೇವಲ ಸಣ್ಣ ಪುಟ್ಟ ಕಾರಣಗಳಿಗಾಗಿ ತಂದಿರುವುದು ಬಹಳ ಹಾಸ್ಯಾಸ್ಪದ ಎಂದು ಹೇಳಿದರೆ, ಅವರು ತಪ್ಪಾಗಿ ತಿಳಿದುಕೊಳ್ಳುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಒಂದು ಸಂಸಾರದಲ್ಲಿ ಹೆಂಡತಿ ಗಂಡ ಹೇಳಿದ್ದನ್ನೆಲ್ಲಾ ಕೇಳುವುದಿಲ್ಲ ಎಂದು ಅವಳನ್ನು ಡೈವೋರ್ಸ್ ಮಾಡು ಎಂದು ಹೇಳುವುದಕ್ಕಾಗುತ್ತದೆಯೇ; ಡೈವೋರ್ಸ್ ಮಾಡಬೇಕಾದರೆ ಬಹಳ ಮಹತ್ತರವಾದ ಕಾರಣಗಳನ್ನು ಕೊಡದೆ, ಕೇವಲ ಕ್ಷುಲ್ಲಕ ಕಾರಣಗಳ ಮೇಲೆ ಡೈವೋರ್ಸ್ ಕೇಳಿದರೆ ಯಾವರೀತಿ ಹಾಸ್ಯಾಸ್ಪದ

ವಾಗುತ್ತದೆಯೋ, ಇದೂ ಅದೇ ರೀತಿ ಇದೆ. ಸರಕಾರಕ್ಕೆ ರಾಜೀನಾಮೆ ಕೊಡಿ ಎಂದು ಹೇಳಬೇಕಾದರೆ, ಬಹಳ ಜವಾಬ್ದಾರಿಯಿಂದ ಹೇಳಬೇಕಾಗಿದೆ.

ಶ್ರೀ ಎಸ್. ಎಂ ಕೃಷ್ಣ (ಮದ್ದೂರು).—ಇದು ಅಡಲ್ಟರಿ.

ಶ್ರೀ ಗೂಂಜಿ ವೀರಪ್ಪ.—ಸರಕಾರದ ಮೇಲೆ ನಿರಾಧಾರವಾದ ಅಪಾದನೆಗಳನ್ನು ಮಾಡುತ್ತಿದ್ದರೆ ಅದು ಅಡಲ್ಟರಿ ಅಲ್ಲವೋ? ನ್ಯಾಯವಾದ ರೀತಿಯಲ್ಲಿ ಸರ್ಕಾರ ಆಡಳಿತ ನಡೆಸುತ್ತಾ ಇರುವಾಗ ಯಾರು ಅಡಲ್ಟರಿ ಮಾಡಿದ್ದಾರೆಂಬುದನ್ನು ಶ್ರೀಮಾನ್ ಕೃಷ್ಣರವರೇ ಆಲೋಚನೆ ಮಾಡಬೇಕು ಈಗ 17 ವರ್ಷಗಳು ಬಹಳ ಜವಾಬ್ದಾರಿ ಹೊತ್ತು ಕಾಂಗ್ರೆಸ್ ಪಕ್ಷ, ಈ ರಾಜ್ಯದಲ್ಲಿ ಹಾಗೂ ಇತರ ಪ್ರಾಂತ್ಯಗಳಲ್ಲಿ, ಮತ್ತು ಕೇಂದ್ರದಲ್ಲಿ ಬಹಳ ಯಶಸ್ವಿಯಾಗಿ ರಾಜ್ಯಭಾರವನ್ನು ನಡೆಸಿಕೊಂಡು ಬಂದಿದೆ. ದೇಶದ ನಾನಾಮುಖದ ಅಭಿವೃದ್ಧಿಗೆ ಅನೇಕ ಕೆಲಸಗಳನ್ನು ಮಾಡಿ ಜನಗಳ ವಿಶ್ವಾಸವನ್ನು ಕಾಂಗ್ರೆಸ್ ಸರಕಾರ ಸಂಪಾದಿಸಿದೆ. ಚುನಾವಣೆ ಕಾಲದಲ್ಲಿ ಪಕ್ಷಗಳ ವಿಚಾರದಲ್ಲಿ ಜನಗಳು ಒಂದು ನಿರ್ಣಯವನ್ನು ಮಾಡಿದ್ದಾರೆ. ಯಾವ ಪಕ್ಷಕ್ಕೆ ಮತವನ್ನು ನೀಡಿದರೆ, ಜವಾಬ್ದಾರಿಯಿಂದ ಸಮರ್ಪಕವಾಗಿ ರಾಜ್ಯಭಾರವನ್ನು ನಡೆಸುತ್ತದೆಂದು ಅರಿತುಕೊಂಡು, ಈ ಆಡಳಿತ ಪಕ್ಷಕ್ಕೆ ಬಹುಮತ ನೀಡಿ, ನಿರ್ಣಯಮಾಡಿ, ಆಡಳಿತ ನಡೆಸಲು ಕಳುಹಿಸಿದ್ದಾರೆ. ಇಂತಹುದರಲ್ಲಿ ಶ್ರೀಮಾನ್ ಶಿವಪ್ಪನವರು ತಾವು ಸರ್ಕಾರದ ಬಗ್ಗೆ 2½ ಕೋಟಿ ಜನಗಳ ಅಭಿಪ್ರಾಯವನ್ನು ಸರ್ಕಾರದ ಮುಂದೆ ಇಡುತ್ತಿದ್ದೇನೆಂದು ಹೇಳುವುದು ಸರಿಯಲ್ಲ. ಅವರು ಅವರ ಪಕ್ಷದ ಪರವಾಗಿ, ಪಕ್ಷದ ಅಭಿಪ್ರಾಯವನ್ನು ಹೇಳುತ್ತಿದ್ದೇನೆ ಎಂದು ಹೇಳಬಹುದೇ ವಿನ, ದೇಶದ ಪರವಾಗಿ ಹೇಳುತ್ತಿದ್ದೇನೆಂದರೆ ಎಷ್ಟು ಹಾಸ್ಯಾಸ್ಪದ. ಈ ಸಭೆಗೆ ಮೆಜಾರಿಟಿಯಿಂದ ಬಂದಿರುವ ಕಾಂಗ್ರೆಸ್ ಪಕ್ಷವಲ್ಲದೇ ದೇಶವನ್ನು ಪ್ರತಿನಿಧಿಸುವುದು ಬಹುಮತದಲ್ಲಿ ಚುನಾಯಿತವಾಗಿ ಬಂದಿರುವ ಕಾಂಗ್ರೆಸ್ಸಿನ ಸದಸ್ಯರು ಪ್ರಜೆಗಳ ಪ್ರತಿನಿಧಿಗಳು, ಅವರು ಪ್ರಜೆಗಳ ಅಭಿಪ್ರಾಯವನ್ನು ಕ್ರೋಢೀಕರಿಸಿ ಇಲ್ಲಿ ಹೇಳುತ್ತಿದ್ದಾರೆಂದರೆ ನ್ಯಾಯಸಮ್ಮತವೇ ವಿನ, ಮೈನಾರಿಟಿ ಪಾರ್ಟಿಯವರು ದೇಶವನ್ನು ಪ್ರತಿನಿಧಿಸುತ್ತೇನೆ, ಜನಗಳ ಪರವಾಗಿ ಹೇಳುತ್ತೇನೆ ಎಂದು ಹೇಳಿದರೆ, ಅದು ತಪ್ಪಾಗುತ್ತದೆ. ಅವರು ತಮ್ಮ ಪಕ್ಷದ ಪರವಾಗಿ ಹೇಳುತ್ತಿದ್ದೇನೆಂದು ಹೇಳಿದರೆ ಯಾವ ತಪ್ಪೂ ಇಲ್ಲ. ಶ್ರೀ ಶಿವಪ್ಪನವರು ಬಹಳ ಟಾಲ್ ಕ್ಲೇಮ್ ಮಾಡುತ್ತಾರೆ; ಈ ರೀತಿ ಅವರು ದೇಶದ ಪರವಾಗಿ ಕ್ಲೇಮ್ ಮಾಡುವುದು ನ್ಯಾಯವಲ್ಲ. ಸಣ್ಣ ಪುಟ್ಟ ಕಾರಣಗಳಿಗಾಗಿ ಈ ಬ್ರಹ್ಮಾಸ್ತ್ರದ ಮಾತು ಎತ್ತಿದರೆ, ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಜನಗಳು ಬಹಳ ಎಚ್ಚೆತ್ತಿದ್ದಾರೆ.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಕೊರಟಗೆರೆ ಚುನಾವಣೆಯಲ್ಲಿ ಏನಾಯಿತು?

ಶ್ರೀ ಸಂಜೀವನಾಥ ಐಕಳ (ಸೂರತ್ಕಲ್).—ಬೈ-ಎಲೆಕ್ಷನ್ನಿನಲ್ಲಿ ಸೋತರೆ ರೂಲಿಂಗ್ ಪಾರ್ಟಿ ರಿಸೈನ್ ಮಾಡಬೇಕು.

Mr. DEPUTY SPEAKER.—The Hon'ble Member may resume his seat.

ಶ್ರೀಮಾನ್ ಗೂಂಜಿ ವೀರಪ್ಪ.—ನಾನು ಈಲ್ಡ್ ಆಗುವುದಿಲ್ಲ. ಸ್ವಾಮಿ, ಚುನಾವಣೆಯಲ್ಲಿ ಆಗತಕ್ಕಂಥಾದ್ದನ್ನು ನಾವೂ ನೋಡಿದ್ದೇವೆ. ಮುಂದಿನ ಚುನಾವಣೆ ಬರಲಿ, ಜನಗಳನ್ನು ಒಪ್ಪಿಸಲಿ, ನೋಡೋಣ. ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ಮಾತನಾಡಬೇಕು. ಚುನಾವಣೆ ಆಗಿ ಹೋಗಿದೆ. ಇವರು ಹೇಳುವ ಸ್ಲೋಗನ್ನುಗಳು ಇದ್ದೇ ಇವೆ. ಆದರೆ ಜನಗಳು ಬಹಳ ಬುದ್ಧಿವಂತರಾಗಿದ್ದಾರೆ, ಬಹಳ ಜವಾಬ್ದಾರಿಯುತರಾಗಿದ್ದಾರೆ. ಜನಗಳು ನಮ್ಮನ್ನು ಪರೀಕ್ಷೆಮಾಡಿ, ಮತ ನೀಡಿ ಕಳುಹಿಸಿದ್ದಾರೆ. ಯಾರು ಆಡಳಿತ ಚೆನ್ನಾಗಿ ಮಾಡಬಲ್ಲರು, ಯಾರು ಅಸಮರ್ಥರು, ಯಾರು ಸಮರ್ಥರು ಎಂದು ಸರಿಯಾಗಿ ಆಲೋಚನೆಮಾಡಿ ಆಡಳಿತದ ಜವಾಬ್ದಾರಿಯನ್ನು ವಹಿಸಿದ್ದಾರೆ. ಕಾನ್‌ಸ್ಟಿಟ್ಯೂಷನ್ ಹೋಣೆ ತಿಳಿದುಕೊಳ್ಳದೆ, ರಾಜೀನಾಮೆ ಕೊಡಿ, ರಾಜೀನಾಮೆ ಕೊಡಿ, ರಾಜೀನಾಮೆ ಕೊಡಿ ಎಂದು ಪದೇ ಪದೇ ಅವರು ಹೇಳುವುದು ನೋಡಿದರೆ, ಹಾಸ್ಯಾಸ್ಪದವಲ್ಲದೆ ಮತ್ತೆ ಏನು?

ಸ್ವಾಮಿ ಒಂದು ವಿಚಾರ. ಮಾನ್ಯ ವಿರೋಧ ಪಕ್ಷದವರು ಕೆಲವು ಆಕ್ಷೇಪಣೆಗಳನ್ನೆತ್ತಿದ್ದಾರೆ. ಆಕ್ಷೇಪಣೆಗಳನ್ನು ಎತ್ತಿರುವುದು ಬಹುಶಃ ಸರ್ಕಾರದಲ್ಲಿರುವ ಲೋಪದೋಷಗಳನ್ನು ತೋರಿಸಿಕೊಡಲು ಎಂದು ಕಾಣುತ್ತದೆ. ಯಾವ ಸರ್ಕಾರವಾದರೂ ಕೂಡ ಎಲ್ಲ ಸಂಪೂರ್ಣತೆಯಿಂದ ಕೂಡಿರುವುದಿಲ್ಲ. ಆದರೆ ಅಲ್ಪಸ್ವಲ್ಪವೇನಾದರೂ ಲೋಪದೋಷಗಳನ್ನು ತೋರಿಸಿಕೊಟ್ಟಲ್ಲಿ ಸರ್ಕಾರವೇನಾದರೂ ತಪ್ಪು ಮಾಡಿದ್ದರೆ ಅದನ್ನು ತಿದ್ದಿಕೊಳ್ಳಬಹುದು. ಆಡಳಿತದಲ್ಲಿರುವ ತಪ್ಪುಗಳನ್ನು ಸರಿಪಡಿಸಬೇಕೆಂಬ ಇಚ್ಛೆ ವಿರೋಧಪಕ್ಷದವರಿಗೆ ಎಷ್ಟಿದೆಯೋ ಅದಕ್ಕಿಂತ ಹೆಚ್ಚಾಗಿ ನಮಗೆ ಇದೆ ಎಂದರೆ ತಪ್ಪಾಗಲಾರದು. ಆಡಳಿತವನ್ನು ನಡೆಸತಕ್ಕ ಜವಾಬ್ದಾರಿಯನ್ನು ಹೊತ್ತಿರುವ ನಮಗೆ ಅವರಿಗಿಂತ ಜವಾಬ್ದಾರಿ ಹೆಚ್ಚಾಗಿದೆ.

(ಶ್ರೀ ಗಾಂಜಿ ವೀರಪ್ಪ)

ತುಲಾಭಾರಕ್ಕೆ 20 ಸಾವಿರ ರೂಪಾಯಿ ಖರ್ಚು ಮಾಡಿದರು. ಆದುದರಿಂದಾಗಿ ರಾಜಿನಾಮೆ ಕೊಡಬೇಕೆಂದು ಹೇಳಿದರು. ಜನರು ಅವರೇ ಅಪೇಕ್ಷೆಪಟ್ಟು ಅವರವರೇ ಹಣ ಖರ್ಚುಮಾಡಿ ಒಂದು ಸಮಾರಂಭವನ್ನು ಮಾಡಿದರು. ದೇಶದ ರಕ್ಷಣಾ ದೃಷ್ಟಿಯಿಂದ ಜನರಲ್ಲಿ ನವಚೇತನವನ್ನು ಮೂಡಿಸಲು ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡರು. ಅದು ಸರ್ಕಾರದ ತಪ್ಪೇ? ಸರ್ಕಾರದವರೇ ತುಲಾಭಾರವನ್ನು ಏರ್ಪಡಿಸಲಿಲ್ಲ. ಬಿಜಾಪುರ ಜಿಲ್ಲೆಯ ಜನರು ಉತ್ಸಾಹದಿಂದ ಮುಂದೆ ಬಂದು ಒಂದು ಸಮಾರಂಭವನ್ನು ಏರ್ಪಾಡು ಮಾಡಿ ಮುಖ್ಯ ಮಂತ್ರಿಗಳನ್ನೂ ಮತ್ತು ಇನ್ನೂ ಬೇಕುಬೇಕಾದವರನ್ನು ಕರೆದರೆ ಇದು ಸರ್ಕಾರದ ಮೇಲೆ ಮಾಡುವ ಆರೋಪವಲ್ಲ. ಇದು ಸರಿಯಾದ ಕಾರಣವಲ್ಲ. ಈ ಕಾರಣಕ್ಕಾಗಿ ರಾಜಿನಾಮೆ ಕೊಡಬೇಕೆ?

ಖಾದಿ ಬೋರ್ಡ್ Statutory body ಸಂಬಧಪಟ್ಟ ಮಂತ್ರಿಗಳು ಇದೇ ಸಭೆಯಲ್ಲಿ ಹೇಳಿದ್ದಾರೆ. ಅದಕ್ಕೆ ಅಟಾನಮಿ ಇದೆ. ಅದರ ಆಡಳಿತದ ಆಕ್ಟ್ ಇದೆ, ಎಂದೆಲ್ಲ ಹೇಳಿದ್ದಾರೆ. ಅದನ್ನು ಓದಿದ್ದರೆ ಬಹುಶಃ ವಿರೋಧಪಕ್ಷದ ನಾಯಕರು ಖಾದಿಬೋರ್ಡಿನ ಜವಾಬ್ದಾರಿ ಸರ್ಕಾರದ್ದು ಎಂದು ಹೇಳುತ್ತಿದ್ದರೋ ಇಲ್ಲವೇ. ಅದರ ಸಂಪೂರ್ಣವಾದ ಆಡಳಿತ ಜವಾಬ್ದಾರಿ ಖಾದಿಬೋರ್ಡಿಗೇ ಇದೆ. ಸರ್ಕಾರದವರು ಒಬ್ಬ ಅಕೌಂಟ್ಸ್ ಆಫೀಸರನ್ನು ನೇಮಕ ಮಾಡಿದ್ದಾರೆ. ಅದಕ್ಕಿಂತ ಹೆಚ್ಚಿನ ಜವಾಬ್ದಾರಿ ಸರ್ಕಾರಕ್ಕಿಲ್ಲ. ಹಣ ದುರುಪಯೋಗವಾಗಿದ್ದರೆ, ಲೆಕ್ಕ ಸರಿಯಾಗಿ ಇಡದೆ ಇದ್ದರೆ ಅಕೌಂಟ್ಸ್ ಆಫೀಸರು ಸರಿಯಾಗಿದೆಯೇ ಇಲ್ಲವೇ ಎಂದು ಹೇಳುತ್ತಾರೆ. ಲೆಕ್ಕಗಳ ತನಿಖೆಯಾದ ಮೇಲೆ ಯಾರ ಮೇಲೆ ಆ ಜವಾಬ್ದಾರಿ ಬೀಳುತ್ತದೆಯೋ ಅವರ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಆದುದರಿಂದ ಈ ಖಾದಿ ಬೋರ್ಡ್ ವಿಚಾರಕೋಸ್ಕರ ರಾಜೀನಾಮೆ ಕೊಡಬೇಕಾದ್ದಿಲ್ಲ.

ಅದೇ ರೀತಿಯಾಗಿ ಎಲೆಕ್ಟ್ರಿಸಿಟಿ ಬೋರ್ಡಿನ ವಿಷಯವೂ ಇದೆ. ಅಲ್ಲಿ ಹಣದುರುಪಯೋಗವಾಗಿಲ್ಲ ಬ್ಯಾಂಕಿನಲ್ಲಿ ಹಣವನ್ನಿಟ್ಟಿದ್ದಾರೆ. ಅದು ಸರಿಯಲ್ಲವೆಂದರೆ ಬದಲಾಯಿಸಿಕೊಳ್ಳಬಹುದು. ಇದೂ Statutory body ಆದುದರಿಂದ ನೇರವಾದ ಜವಾಬ್ದಾರಿ ಸರ್ಕಾರದ ಮೇಲಿಲ್ಲ. ಸರ್ಕಾರ ಇದರಲ್ಲಿ ಅಸಮರ್ಥತೆಯನ್ನು ತೋರಿಸಿರುವುದರಿಂದ ರಾಜೀನಾಮೆ ಕೊಡಬೇಕೆಂದು ಹೇಳುವುದು ಸಕಾರಣವಲ್ಲ.

ಶರಾವತಿ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದು ವಿರೋಧ ಪಕ್ಷದವರ trump card ಜುಡಿಷಿಯಲ್ ಎನ್‌ಕ್ವೈರಿ ಆಗಬೇಕೆಂದು ಕೇಳುತ್ತಾರೆ. ಜುಡಿಷಿಯಲ್ ಎನ್‌ಕ್ವೈರಿ ಯಾವ ಸಂಧರ್ಭದಲ್ಲಿ ಆಗಬೇಕೆಂದು ಯೋಚನೆ ಮಾಡಬೇಕು. ಶರಾವತಿ ವಿಷಯದಲ್ಲಿ ಕಳೆದಸಾರಿ ಈ ಸಭೆಯಲ್ಲಿ ಆಕ್ಷೇಪಣೆ ಬಂದಾಗ ವಿರೋಧಪಕ್ಷದವರ ಟೀಕೆಗಳಲ್ಲಿ ಸತ್ಯಾಂಶವಿರಬಹುದೇ ಎಂದು ಎಂದು ನಾನು ಎಲ್ಲ ವಿಷಯಗಳನ್ನು ತಿಳಿದುಕೊಳ್ಳಲು ಪ್ರಯತ್ನಪಟ್ಟೆ. ಅದು ಬಹಳ ದೊಡ್ಡ ಕೆಲಸ. ನೂರಾರು ಕೋಟಿ ರೂಪಾಯಿಗಳು ಖರ್ಚಾಗಿ ಆದಷ್ಟು ಜಾಗ್ರತೆ ಈ ಕೆಲಸವನ್ನು ಪೂರೈಸಿದರೆ ದೇಶದ ಹಿತ ದೃಷ್ಟಿಯಿಂದ ಬೇಕಾದಂಥ ವಿದ್ಯುಚ್ಛಕ್ತಿ ಬಹಳ ಬೇಗ ಸಿಕ್ಕಬಹುದು. ವಿದ್ಯುಚ್ಛಕ್ತಿ ನಮಗೆ ಬರುವುದು ಒಂದು ವರ್ಷ ತಡವಾದರೆ ಒಂದಕ್ಕೆ ಹತ್ತರಷ್ಟು ನಷ್ಟವಾಗುತ್ತದೆ. Defence purpose ಗಾಗಲಿ, ಕೈಗಾರಿಕೆಗಾಗಲಿ, ವಿದ್ಯುಚ್ಛಕ್ತಿ ತಡವಾಗಿ ಬಂದರೆ ಎಷ್ಟು ಕಷ್ಟವಾಗುತ್ತದೆ ಎನ್ನುವುದನ್ನು ಲೆಕ್ಕ ಹಾಕಿದರೆ, ಶರಾವತಿ ಯೋಜನೆ ಜಾಗ್ರತೆ ಪೂರೈಸುವ ವಿಚಾರದಲ್ಲಿ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು ಎನ್ನುವುದು ನಿರ್ವಿವಾದವಾದವಿಚಾರ. ಈ ಕೆಲಸವನ್ನು ಜಾಗ್ರತೆ ಪೂರೈಸಬೇಕೆನ್ನುವ ದೃಷ್ಟಿಯಿಂದ ಅದನ್ನು ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಕೊಡಲೇ ಬೇಕಾಗುತ್ತದೆ. ಈ ಮಂತ್ರಿ ಮಂಡಲ ಬರುವುದಕ್ಕೆ ಮೊದಲೇ ಆಗಿನ ಸರ್ಕಾರದವರು policy decision ತೆಗೆದು ಕೊಂಡಿದ್ದರು. ಅಲ್ಲಿನ ಕೆಲಸಕ್ಕೆ ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಂದ ಟೆಂಡರ್ ಕರೆದು ಯಾರು ಕಡಮೆ ಟೆಂಡರು ಹಾಕುತ್ತಾರೆಯೋ ಅವರಿಗೆ ಕೊಡಬೇಕೆಂದು ಟೆಂಡರ್ ಪದ್ಧತಿ ಪ್ರಕಾರ ಕೊಡುತ್ತಾ ಬಂದಿದ್ದಾರೆ. That is an accepted principle ಯಾವ ದೃಷ್ಟಿಯಿಂದಲೂ ಅದನ್ನು ಪ್ರಶ್ನೆ ಮಾಡುವುದಕ್ಕಾಗುವುದಿಲ್ಲ. ಅಲ್ಲಿಯ ಕೆಲಸ ಕಾರ್ಯಗಳ ಬಗ್ಗೆ ತಜ್ಞರಿರತಕ್ಕ ಸಮಿತಿಯೊಂದು ಸಲಹೆಯನ್ನು ನೀಡುತ್ತದೆ. ಇದಲ್ಲದೆ ಪ್ಲಾನಿಂಗ್ ಕಮಿಷನ್ C.W.P.C. ಮತ್ತು ಕೇಂದ್ರ ಸರ್ಕಾರದಲ್ಲಿ ಪರಿಶೀಲನೆಯಾದನಂತರ ಕೆಲಸ ಪ್ರಾರಂಭವಾಗಿದೆ.

ಇದರಲ್ಲಿ ಒಂದು ವಿಚಾರವನ್ನು ವಿರೋಧಪಕ್ಷದ ನಾಯಕರು ಹೇಳುತ್ತಿದ್ದಾರೆ. ಒಬ್ಬ ಕಂಟ್ರಾಕ್ಟರಿಗೆ ಅವರು ಒಪ್ಪಿಕೊಂಡಿದ್ದ 70-80 ರೇಟಿಗೆ ಬದಲಾಗಿ 104 ರೂಪಾಯಿ ಪ್ರಕಾರ ಕೊಟ್ಟಿದ್ದಾರೆ ಇಷ್ಟು ಜಾಸ್ತಿ ಏಕೆ ಕೊಟ್ಟಿರಿ ಎಂದು ಕೇಳಿದರು. ಈ ವಿಚಾರವನ್ನು ನಾನು ಕೇಳಿ ತಿಳಿದುಕೊಂಡೆ. ಏನಾಗಿದೆ ಎಂದರೆ ಆ ಕಂಟ್ರಾಕ್ಟರು ಒಂದು ಭಾಗವನ್ನು ಮಾತ್ರ ಎಂದರೆ rock filling ಕೆಲಸ ಒಂದು ಕಡೆ ಮಾತ್ರ ಮಾಡತಕ್ಕ ಜವಾಬ್ದಾರಿ ಇತ್ತು. ಬೇರೆ ಕೆಲಸವನ್ನೆಲ್ಲಾ ಮಾಡಬೇಕೆಂದು ಕೇಳಿ

ದಾಗ ನಾವು ಮಾಡುವುದಕ್ಕಾಗುವುದಿಲ್ಲ. ನಾವು ಹೇಳುವ ರೇಟ್ ಕೊಟ್ಟರೆ ಮಾಡುತ್ತೇವೆ ಇಲ್ಲದಿದ್ದರೆ ಇಲ್ಲ ಎಂದು ಹೇಳಿದಮೇಲೆ ಸರ್ಕಾರದವರು ಟೆಂಡರ್ ಕರೆಯಬೇಕಾದ ಪ್ರಸಂಗ ಬಂತು ಆರೇಳು ಜನ ಟೆಂಡರ್ ಹಾಕಿದಾಗ...........

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಮಾನ್ಯ ಸದಸ್ಯರು ಹೇಳಿದರು, ಈ ಕಡೆಯವರಿಗೆ ಶರಾವತಿ ಒಂದು trump card ಎಂದು. ಮಾಜಿ ಸಚಿವರೊಬ್ಬರು ಅದರ ವಿಷಯದಲ್ಲಿ ಏನೋ ನಡೆದು ಹೋಗಿದೆ ಅನಾಹುತವಾಗಿದೆ ಎಂದು ಗುಲ್ಲೆಬ್ಬಿಸಿದರು—ಅವರು ಆ ಕಡೆಯವರೋ ಈ ಕಡೆಯವರೋ? Disgruntled Congressman, ಮಾಜಿ ಮಂತ್ರಿಗಳು ತಮ್ಮ ಕಡೆಯವರು ಹೇಳಿದ್ದಾರೆ. ಇದಕ್ಕೆ ತಮ್ಮ ಅಭಿಪ್ರಾಯವೇನು? ಈ ಕಡೆಯವರ trump card ಎಂದು ಹೇಳಿದರಲ್ಲ. ಆ ಕಡೆಯವರು ಎಬ್ಬಿಸಿರುವ ಗುಲ್ಲು. ಅದಕ್ಕೆ ಏನು ಹೇಳುತ್ತಾರೆ?

ಶ್ರೀ ಗಾಂಜಿ ವೀರಪ್ಪ.—ಈಗ ಈ ವಿಚಾರದಲ್ಲಿ ಮಾಜಿ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿರಲಿ ಅಥವಾ ವಿರೋಧ ಪಕ್ಷದ ನಾಯಕರು ಹೇಳಿರಲಿ, facts ಇವೆ. Facts ಇರುವುದರಿಂದ, ಅಂಕಿ ಅಂಶಗಳು ಸರ್ಕಾರದ ಮುಂದೆ ಇರುವುದರಿಂದ ನಾನು ತಿಳಿದುಕೊಂಡ ಮಟ್ಟಿಗೆ ಹೇಳುತ್ತಿದ್ದೇನೆ. ಇನ್ನೂ ವಿಶದವಾಗಿ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಹೇಳುತ್ತಾರೆ. ಮಾಜಿ ಮಂತ್ರಿಗಳು ಹೇಳಿದ್ದರೂ factsಗೆ ವಿರೋಧವಾಗಿ ಹೇಳಿದ್ದರೆ ಅದು ತಪ್ಪು, ಅದು ಖಂಡನೀಯವಾದುದು, ಯಾರು ಅಂಕಿ ಅಂಶಗಳಿಗೆ ವಿರೋಧವಾಗಿ ಹೇಳಿದರು ಅದು ಖಂಡನಾರ್ಹವಾದುದು. ಈ ವಿಚಾರವನ್ನು ಎಲ್ಲರೂ ಕೂಲಂಕಷವಾಗಿ ತಿಳಿದು ಕೊಳ್ಳಬೇಕೆಂದು ನನ್ನ ಬಿನ್ನಹ. ಇದನ್ನು ಏತಕ್ಕೆ ಹೇಳುತ್ತೇನೆಂದರೆ ಕೇಂದ್ರ ಸರಕಾರ ಹಣ ಕೊಡುವುದರಿಂದ ಇಂಥ ದೊಡ್ಡ ಪ್ರಾಜೆಕ್ಟುಗಳು ಆಗುತ್ತಿವೆ. ಇದರಲ್ಲೇ ಏನೋ ಅನಾಹುತ ನಡೆದಿದೆ ಎಂದು ವಿರೋಧ ಪಕ್ಷದವರು ಟೀಕೆ ಮಾಡಿದರೆ ಅದರ ಪರಿಣಾಮ ಏನಾಗುತ್ತದೆ ಅಖಿಲ ಭಾರತದಲ್ಲಿ ನಮ್ಮ ಅಂತಸ್ತು ಎಲ್ಲಿ ಹೋಗುತ್ತದೆ ಎಂಬುದನ್ನು ವಿಚಾರ ಮಾಡಬೇಕು. ಇದು ಎಲ್ಲರಿಗೂ ಅನ್ವಯಿಸುತ್ತದೆ. ತಪ್ಪು ತಿಳುವಳಿಕೆ ಮೂಲಕ ಟೀಕೆ ಮಾಡುವ ಉದ್ದೇಶ ಇಟ್ಟುಕೊಂಡು ಇಂಥ ವಿಚಾರದ ಬಗ್ಗೆ ಕೋಲಾಹಲ ಎಬ್ಬಿಸುವ ರೀತಿಯಲ್ಲಿ ಆಗಬಾರದಾಗಿತ್ತು. ವಿರೋಧಪಕ್ಷದ ಸದಸ್ಯರಿಗೂ ಸಹ ಸರಕಾರಿ ರಿಕಾರ್ಡು ನೋಡಿ ವಿಷಯ ಸರಿಯಾಗಿ ತಿಳಿದುಕೊಳ್ಳಲಿಕ್ಕೆ ಅಧಿಕಾರವಿದೆ. ಸ್ಥಳಕ್ಕೆ ಹೋಗಿ ಕಣ್ಣಿನಿಂದ ನೋಡಿಕೊಂಡು ಅಜಮಾಯಿಸುವುದಕ್ಕೆ ಸೌಲಭ್ಯಗಳಿವೆ. ದೊಡ್ಡ ಸಮಸ್ಯೆ ಇದೇನೂ ಅಲ್ಲ. ವಿಷಯ ತಿಳಿದುಕೊಂಡರೆ ಅವರ ಮನಸ್ಸಿಗೆ ಸಮಾಧಾನವಾಗುತ್ತದೆ. ತಪ್ಪು ಅಭಿಪ್ರಾಯವಿದ್ದರೆ ಅದನ್ನು ಸರಿಪಡಿಸಿಕೊಳ್ಳಬಹುದು. ಆದರೆ ಸರಿಯಾದ ಅಭಿಪ್ರಾಯ ಇಟ್ಟುಕೊಳ್ಳುವುದಕ್ಕೆ ಮನಸ್ಸು ಇಲ್ಲದಿದ್ದರೆ ಇದರಿಂದ ಏನೂ ಪ್ರಯೋಜನ ಇಲ್ಲ. ಯಾಕೆಂದರೆ ನಿಜವಾಗಿ ಮಲಗಿದ್ದವರನ್ನು ನಾವು ಎಬ್ಬಿಸಬಹುದು. ಆದರೆ ಮಲಗಿದ್ದು ನಟನೆ ಮಾಡತಕ್ಕಂಥವರನ್ನು ಎಬ್ಬಿಸಲಿಕ್ಕೆ ಸಾಧ್ಯವಿಲ್ಲ. ಈ ಕೆಲಸದ ಬಗ್ಗೆ ಕಡಮೆ ರೇಟು ಕಂಟ್ರಾಕ್ಟರ ಕೊಟ್ಟಿದ್ದರು. 6–7 ಟೆಂಡರ್ ಹಾಕಿದ್ದರು. ಐದಾರು ಜನ ಎಂಜನಿಯರುಗಳು ಕೂಡಿ ಪರಿಶೀಲನೆ ಮಾಡಿ ವರ್ಕಬಲ್ ರೇಟ್ಸ್ ಗೊತ್ತು ಮಾಡಿದರು. ಈ ಕೆಲಸ ನಿರ್ವಹಿಸುವುದರಲ್ಲಿ ಟೈಂ ಫ್ಯಾಕ್ಟರ್ ಒಂದಿದೆ. ಬಹಳ ಕಡಮೆ ಕಾಲದಲ್ಲಿ ಈ ಕೆಲಸ ಆಗಬೇಕಾಗಿದೆ. ಒಬ್ಬನಿಗೆ ಎಲ್ಲಾ ಕೆಲಸ ಮಾಡಲು ಆಗುವುದಿಲ್ಲ. ಸರಕಾರ ಈ ದೃಷ್ಟಿಯನ್ನು ಇಟ್ಟುಕೊಂಡು ಟೆಂಡರ್ ಕರೆದು ಯಾರು ಕೆಲಸ ಮಾಡುತ್ತಾರೆ ಎಂಬುದನ್ನು ಯೋಚನೆ ಮಾಡಿ ಮೂರು ಜನರಿಗೆ ಈ ಕೆಲಸ ಕೊಟ್ಟರೆ ಕೆಲಸ ಜಾಗ್ರತೆಯಾಗುತ್ತೆಂದು 3 ಜನಕ್ಕೆ ಹಂಚಿ ಕೊಟ್ಟಿದ್ದಾರೆ. ಇದರಲ್ಲಿ ಅಚಾತುರ್ಯ ಏನೇನೂ ಇಲ್ಲ. ಅನುಮಾನವಾಗತಕ್ಕಂಥದ್ದು ನಡೆದಿಲ್ಲ. ಪ್ರತಿಯೊಂದಕ್ಕೂ ಸರಕಾರ ರಾಜೀನಾಮೆ ಕೊಡಿ ಎಂದು ಹೇಳುವುದು ಕ್ಷುಲ್ಲಕ ಕಾರಣ ಕೋಸ್ಕರ ಆಕ್ಷೇಪಣೆ ಮಾಡುವುದು ಬಹಳ ವಿಷಾದಕರ ಎಂದು ನಮ್ರತೆಯಿಂದ ಹೇಳುತ್ತೇನೆ. ಶರಾವತಿಯ ಒಂದೇ ವಿಚಾರ ಅವರು ಹೇಳಿದರು. ಅದಷ್ಟು ಜಾಗ್ರತೆ ಕೆಲಸ ಮಾಡಬೇಕಾಗಿದೆ. ಇದು ಸಾಮಾನ್ಯ ಕೆಲಸವಲ್ಲ. ಈಗಾಗಲೇ ಫಸ್ಟ್ ಸ್ಟೇಜ್ ಕಂಪ್ಲೀಟ್ ಆಗುವುದರಲ್ಲಿದೆ. ಆದ್ದರಿಂದ ವಿದ್ಯುತ್ ಶಕ್ತಿ ಉತ್ಪಾದನೆಯಾಗಿ ದೇಶದಲ್ಲಿ ಎಷ್ಟು ಉಪಯೋಗವಾಗುತ್ತದೆ. ಈ ದೃಷ್ಟಿಯಿಂದ ವಿಚಾರ ಮಾಡುವುದಾದರೆ ಈ ವಿಷಯದ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವೈಯರಿ ಮಾಡಬೇಕಾದ ಅಗತ್ಯವಿಲ್ಲ. ಸರಕಾರ ಇದನ್ನು ಪುನಃ ಪರಿಶೀಲನೆಮಾಡಿ ಇದರಲ್ಲಿ ಏನಾದರೂ ದೋಷವಿದ್ದರೆ ಅದನ್ನು ಸರಿಪಡಿಸಲಾಗುತ್ತದೆ. ಯಾಕೆಂದರೆ ಇದರಲ್ಲಿ ಅಂಥಾದ್ದೇನೂ ನಡೆದಿಲ್ಲ. ಆರ್ಬಿಟ್ರೇಷನ್ ತೆಗೆದುಕೊಳ್ಳುವ ಬಗ್ಗೆ ಅಗ್ರಿಮೆಂಟಿನಲ್ಲಿ ಇದೆ. ಶರತ್ ಪ್ರಕಾರ ಸರಕಾರ ನಡೆದುಕೊಂಡಿದೆ. ಇದಕ್ಕಾಗಿ ಸರಕಾರ ರಾಜೀನಾಮೇ ಕೊಡತಕ್ಕಂಥ ಸಂದರ್ಭ ಏನೂ ಇಲ್ಲ ಎಂದು ಸ್ಪಷ್ಟವಾಗಿ ಸೂಚನೆ ಮಾಡಬೇಕಾಗುತ್ತದೆ.

ಆ ಮೇಲೆ ವಿದ್ಯಾಭ್ಯಾಸ ಇಲಾಖೆ ವಿಚಾರ ಹೇಳಿದರು. ಅದರಲ್ಲಿಯೂ ಟೆಕ್ನಿಕಲ್ ಕಾಲೇಜುಗಳ ಅಡ್ಮಿಷನ್ ವಿಚಾರ ಪ್ರಸ್ತಾಪ ಮಾಡಿದರು. ಟೀಕೆ ಮಾಡುತ್ತಾ ವಿರೋಧ ಪಕ್ಷದ ನಾಯಕರು ಕರ್ನಾಟಕ ವಿಶ್ವವಿದ್ಯಾನಿಲಯ ಮೈಸೂರು ವಿಶ್ವವಿದ್ಯಾನಿಲಯ, ಈ ಆಧಾರದಮೇಲೆ ಸೀಟು ಹಂಚಿರುವುದು ಸರಿಯಲ್ಲ ಎಂದು ಹೇಳಿದರು. ಬಹುಶಃ ಈ ವಿಚಾರ ಹೈಕೋರ್ಟಿಗೆ ಹೋಗಿತ್ತು. ಹೈಕೋರ್ಟು

(ಶ್ರೀ ಗಾಂಜಿ ವೀರಪ್ಪ)

ಸರಕಾರದ ಆರ್ಡರ್ ಸ್ಕ್ವಾಶ್ ಮಾಡಿಲ್ಲ. ಯೂನಿವರ್ಸಿಟಿ ಆಧಾರದ ಮೇಲೆ ಸೀಟು ಹಂಚಿರುವುದನ್ನು ಹೈಕೋರ್ಟು ಸ್ಕ್ವಾಶ್ ಮಾಡಿಲ್ಲ. ಈ ಮಾತನ್ನು ನಾನು ಹೈಕೋರ್ಟು ಜಡ್ಜಮೆಂಟ್ ಓದಿ ಹೇಳುತ್ತಿದ್ದೇನೆ. ಬೇಜವಾಬ್ದಾರಿಯಿಂದ ಹೇಳುತ್ತಿಲ್ಲ.

Sri C. J. MUCKANNAPPA.—As a member he has opposed the resolution that the Government resolution is not justified.

ಶ್ರೀ ಗಾಂಜಿ ವೀರಪ್ಪ.—ಈ ದೇಶದಲ್ಲಿ ಈ ರೀತಿ ಆಗಿರುವುದು ನಮ್ಮ ದುರಾದೃಷ್ಟ. ಪ್ರತಿ ವರ್ಷ ಸರಕಾರ ಒಂದು ಆರ್ಡರ್ ಮಾಡಿದರೆ ಅದರ ಬಗ್ಗೆ ಹೈಕೋರ್ಟಿನಲ್ಲಿ ಹೋಗುತ್ತದೆ. ಸರಕಾರದ ಆರ್ಡರ್ ಸರ್ವ ಸಮ್ಮತವಾಗಿರಲು ಸಾಧ್ಯವಿಲ್ಲ. ಕೇರಳ ಮದ್ರಾಸ ರಾಜ್ಯಗಳಲ್ಲಿ ಕೂಡ ಇದೇ ರೀತಿ ಆಗಿದೆ. ಮೈಸೂರು ರಾಜ್ಯದಲ್ಲಿ ಅಷ್ಟೇ ಅಂಥ ವಿಚಿತ್ರ ಆರ್ಡರ್ ಏನೂ ಮಾಡಿಲ್ಲ. ಈ ಸಭೆಯ ಅಭಿಪ್ರಾಯ ಜನಗಳ ಅಭಿಪ್ರಾಯ ಜನರ ಪ್ರತಿಕ್ರಿಯೆ ನೋಡಿಕೊಂಡು ಸರಕಾರ ಆರ್ಡರ್ ಮಾಡುತ್ತದೆಯೇ ವಿನಾ ಹೈಕೋರ್ಟಿನಲ್ಲಿ ಸ್ಕ್ವಾಶ್ ಆಗದೇ ಇರತಕ್ಕಂಥಾ ಆರ್ಡರ್ ಮಾಡುವುದಕ್ಕಾಗುವುದಿಲ್ಲ.

Sri S. M. KRISHNA.—About the allocation of seats between the Mysore University and Kaurnatak University, was not that position conceded by the Advocate-General appearing on behalf of the Government?

ಶ್ರೀ ಗಾಂಜಿ ವೀರಪ್ಪ.—ನಾನು ಆರ್ಡರ್ ಓದಿದ್ದೇನೆ. ಒಂದು ವೇಳೆ ಸರಕಾರದ ಆರ್ಡರ್ ರದ್ದು ಪಡಿಸಿದ್ದರೆ ಈಗಾಗಲೇ ಅಡ್ಮಿಟ್ ಆದಂಥ ಹುಡುಗರ ಗತಿ ಏನು ಎಂಬುದನ್ನು ಪರಿಶೀಲನೆ ಮಾಡಿ ನೋಡಬೇಕಾಗುತ್ತದೆ. ಎಲ್ಲರಿಗೂ ಸರ್ವಸಮ್ಮತವಾಗುವಂತೆ ಜನರು ಮನ್ನಣೆ ಕೊಡುವಹಾಗೆ ಎಲ್ಲರಿಗೂ ಒಳ್ಳೆಯದಾಗಲಿ ಎಂದು ಸರಕಾರ ಆ ರೀತಿ ಮಾಡಿದ್ದಾರೆ. ಇಂಥಾದ್ದನ್ನು ಟೀಕೆ ಮಾಡುವುದು ಒಳ್ಳೆಯದಲ್ಲ. ಇನ್ನೂ ಸ್ಥಳ ಸಿಕ್ಕದೆ ಇರತಕ್ಕಂಥ 106 ವಿದ್ಯಾರ್ಥಿಗಳಿಗೆ ಸೀಟು ಕೊಡಬೇಕೆಂಬುದಕ್ಕೆ ಸರಕಾರ ಒಪ್ಪಿಕೊಂಡಿದೆ. ಏನಾದರೂ ಅನ್ಯಾಯವಾಗಿದ್ದರೆ, ಅದನ್ನು ಸರಿಪಡಿಸುವ ಮನೋಭಾವ ಸರಕಾರಕ್ಕೆ ಇದೆ. ಆರ್ಡರ್ ಮಾಡಿದ್ದೇವೆ ಅದಕ್ಕೆ ಅಂಟಿಕೊಳ್ಳಬೇಕೆಂಬ ಹಟ ಸರಕಾರಕ್ಕೆ ಇಲ್ಲ ಎಂಬುದು ಈ ನಿವರ್ತನದಿಂದ ಗೊತ್ತಾಗುತ್ತದೆ. ಆದುದರಿಂದ ಸರಕಾರದ ಆರ್ಡರ್ ಬಗ್ಗೆ ಬರೀ ಟೀಕೆ ಮಾಡುವುದು ಸರಿಯಲ್ಲ. ಏನಾದರೂ ಲೋಪದೋಷಗಳು ಇದ್ದರೆ ಅವುಗಳನ್ನು ತೋರಿಸಬಹುದು. ಅನುಭವದಿಂದ ಸರಿಪಡಿಸಿಕೊಳ್ಳಬಹುದು. ಸರ್ವ ಸಮರ್ಪಕವಾಗುವ ಹಾಗೆ ಸರಕಾರ ಪ್ರಯತ್ನ ಪಡುತ್ತದೆ. ಕೇವಲ ಎಮೋಷನಲ್ ಆಗಿ ಟೀಕೆ ಮಾಡುವುದು ಒಳ್ಳೆಯದಲ್ಲ. ಟೀಕೆ ಮಾಡುತ್ತಾ ಇಂಥ ಕಾರಣಕ್ಕಾಗಿ ಸರಕಾರ ರಾಜೀನಾಮೆ ಕೊಡಬೇಕೆಂದು ಹೇಳುವುದು ಇದು ಹೇಳತಕ್ಕಂಥ ಮಾತಲ್ಲ ಎಂದು ಬಹು ವಿನಯದಿಂದ ಹೇಳುತ್ತೇನೆ.

High Court is ruling the State ಎಂದು ಹೇಳಿದರು, ರಾಜ್ಯಾಂಗ ಜಾರಿಗೆ ಬಂದಮೇಲೆ ಯಾವ ಹೈಕೋರ್ಟಿನಲ್ಲೇ ಆಗಲಿ ರಿಟ್ ಪಿಟಿಷನ್ಸ್ ಇದ್ದೇ ಇರುತ್ತವೆ. Awakening of law ಮತ್ತು ಹಕ್ಕು ಬಾಧ್ಯತೆಗಳನ್ನು ಕಾಪಾಡಿಕೊಳ್ಳತಕ್ಕ ಮನೋಭಾವ ತಿಳಿವಳಿಕೆ ಜನರಲ್ಲಿ ಉಂಟಾಗಿ ಹೈಕೋರ್ಟಿಗೆ ಹೋಗುತ್ತಾ ಇದ್ದಾರೆಯೇ ಹೊರತು ಹೈಕೋರ್ಟೇ ರಾಜ್ಯಭಾರ ಮಾಡುತ್ತಾ ಇದೆ ಎಂದರೆ ಹೈಕೋರ್ಟಿನ ಮೇಲೆ ವಿನಾ ಕಾರಣ ಆಪಾದನೆ ಮಾಡಿದ ಹಾಗಾಗುತ್ತದೆ. ಒಟ್ಟಿನಲ್ಲಿ ಒಂದು ವಿಚಾರವನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು ಅವರ ಬಾಯಲ್ಲಿ ಒಂದಾದರೂ ಇಷ್ಟೆಲ್ಲಾ ಕೆಲಸ ಕಾರ್ಯಗಳನ್ನು ಮಾಡುತ್ತಾ ಇದ್ದಾರಲ್ಲ ಎಂದು ಒಳ್ಳೆಯ ಮಾತು ಅವರಿಂದ ಬರಲಿಲ್ಲ ಮುಕ್ಕಣಪ್ಪನವರು ಹೇಳುತ್ತಾರೆಯೋ ಏನೋ ನೋಡೋಣ. (ನಗು.) ಸರ್ಕಾರದ ಆಡಳಿತ ಮಾಡಬೇಕಾದರೆ ಎಷ್ಟು ಕಷ್ಟ ಇದೆ ಎಷ್ಟು ಜವಾಬ್ದಾರಿಯಿಂದ ಮಾಡಬೇಕು ಎಂಬುದನ್ನು ನಾವುಗಳು ಅರಿತುಕೊಳ್ಳಬೇಕು'? ಈ ಸಭೆಗೆ ತೃಪ್ತಿಕರವಾದ ರೀತಿಯಲ್ಲಿ ಆಡಳಿತ ಮಾಡಬೇಕಾದರೆ, ಸಾರ್ವಜನಿಕರಿಗೆ ತೃಪ್ತಿಕರವಾದ ರೀತಿಯಲ್ಲಿ ಆಡಳಿತ ಮಾಡಬೇಕಾದರೆ ಜವಾಬ್ದಾರಿ ಹೊತ್ತುಕೊಂಡಿರತಕ್ಕವರು ಮಾಡತಕ್ಕ ಕೆಲಸದಲ್ಲಿ ಸ್ವಲ್ಪ ಕುಂಠಿತವಾದರೆ ಅದನ್ನು ಸರಿಪಡಿಸಿಕೊಳ್ಳಬೇಕೆಂದು ಹೇಳುವುದಕ್ಕೆ ಸಾಧ್ಯವಿದೆ. ಆ ರೀತಿ ಹೇಳೋದು ಬಿಟ್ಟು ಅವಿಶ್ವಾಸದ ಠರಾವನ್ನು ತರುವುದು ಸರಿಯಾದುದಲ್ಲ. ಅದನ್ನು ಮುಕ್ಕಣ್ಣಪ್ಪನವರೂ ಕೂಡ ಒಪ್ಪುತ್ತಾರೆ ಎಂದು ಭಾವಿಸಿದ್ದೇನೆ. ಆದ್ದರಿಂದ ಈ ಅವಿಶ್ವಾಸದ ಠರಾವನ್ನು ನೋಡಿದರೆ ಖಂಡಿತವಾಗಿಯೂ ನಗಬೇಕೋ ಅಥವ ವಿಷಾದ ಪಡಬೇಕೋ ನನಗೆ ಗೊತ್ತಾಗುತ್ತಿಲ್ಲ.

3-00 P.M.

ಇನ್ನೂ ಅನೇಕ ವಿಷಯಗಳನ್ನು ಹೇಳಿದ್ದಾರೆ. ಕಾಂಗ್ರೆಸ್‌ನವರಿಗೆ ಬಸ್ ಲೈನ್ ಕೊಡುವುದಕ್ಕೋಸ್ಕರ ದೊಡ್ಡ ದೊಡ್ಡ ಲೈನ್‌ಗಳನ್ನು ರಾಷ್ಟ್ರೀಕರಣ ಮಾಡಿಲ್ಲ ಎಂದು ಹೇಳಿದರು. ಇದು ಬಹಳ ನಿರಾಧಾರವಾದುದು. ಏಕೆಂದರೆ ಬಸ್ ಲೈನ್ ಕೊಡಬೇಕಾದರೆ ಅದಕ್ಕೆ ನಿಯಮಿತರಾದ ಅಧಿಕಾರಿಗಳು ಇದ್ದಾರೆ. ಆರ್. ಟಿ. ಎಸ್. ಆಫೀಸರು ಇದ್ದಾರೆ. ಎಸ್. ಟಿ. ಎ. ಆಫೀಸರು ಇದ್ದಾರೆ, ಲೈನ್ ಕೊಡಬೇಕಾದರೆ ಮಂತ್ರಿಗಳು ಕೊಡುವುದಿಲ್ಲ. ಆದ್ದರಿಂದ ಅವರು ಮಾಡಿದ ಆಪಾದನೆ ಸತ್ಯಕ್ಕೆ ದೂರವಾದುದು ಎಂದು ನಾನು ಮತ್ತೆ ಹೇಳಬೇಕಾಗಿಲ್ಲ. ಅಷ್ಟೇ ಅಲ್ಲದೆ ಆ ಅಧಿಕಾರಿಗಳು ಮಾಡಿದ ಆಜ್ಞೆಯ ಮೇಲೆ ಅಪಲೇಟ್ ಅಥಾರಿಟಿ ಟ್ರಿಬ್ಯೂನಲ್ ಇದೆ. ಕೊನೆಗೆ ಹೈಕೋರ್ಟಿಗೂ ಕೂಡ ಹೋಗುತ್ತಾ ಇದ್ದಾರೆ. ಆದ್ದರಿಂದ ಯಾರಿಗೇ ಆಗಲಿ ಫೇವರ್ ಮಾಡುವ ಉದ್ದೇಶ ಇಲ್ಲ, ತುರ್ತು ಪರಿಸ್ಥಿತಿ ಇದೆ, ಹಣ ಇಲ್ಲ, ಸಿಬ್ಬಂದಿ ಹೆಚ್ಚು ಮಾಡಬೇಕು ಈ ಎಲ್ಲಾ ಕಾರಣಗಳಿಂದ ಇವುಗಳನ್ನೆಲ್ಲಾ ಸರಿಪಡಿಸಿಕೊಂಡು ಮುಂದುವರಿಯಬೇಕೆಂಬ ದೃಷ್ಟಿಯಿಂದ ಕೆಲಸ ಕಾರ್ಯಗಳನ್ನು ಮಾಡುತ್ತಾ ಇದ್ದಾರೆಯೇ ವಿನಹ ಫೇವರ್ ಮಾಡುವುದಕ್ಕೆ ರಾಷ್ಟ್ರೀಕರಣ ಮಾಡುವುದನ್ನು ಮುಂದೂಡುತ್ತಾ ಇದ್ದಾರೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು. ಇದು ಸರಿಯಾದ ವಾದವಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಇದೇ ರೀತಿ ಗಗನಕ್ಕೇರುತ್ತಿರುವ ಆಹಾರ ಪದಾರ್ಥಗಳ ಬೆಲೆಯನ್ನು ಹತೋಟಿಗೆ ತರಬೇಕೆಂದು ಸರ್ಕಾರದವರು ಮಂತ್ರಿಮಂಡಲದವರು ಸತತವಾಗಿ ಪ್ರಯತ್ನಮಾಡುತ್ತಾ ಇದ್ದಾರೆ. ಅವುಗಳೆಲ್ಲಾ ಒಂದು ಹತೋಟಿಗೆ ಮೀರಿದ ಪರಿಸ್ಥಿತಿ ಇರುವಾಗ ಅದನ್ನೇ ಒಂದು ದೊಡ್ಡ ಕಾರಣವನ್ನಾಗಿ ಮಾಡಿ ಥಿಯರಿಟಿಕಲ್ ಆಗಿ ಹೇಳಬಹುದೇ ಹೊರತು ನಿಜವಾಗಿ ಭಾಷಣ ಮಾಡಿದವರು ಹೇಳಿದಷ್ಟು ಜಾಸ್ತಿಯಾಗುತ್ತಾ ಇಲ್ಲ. ಇದು ಬರೀ 15 ಜನ ಮಂತ್ರಿಗಳಿಂದ ಸಾಧನೆ ಮಾಡಲು ಆಗುವಂತಹ ಕೆಲಸವಲ್ಲ. ತುರ್ತು ಪರಿಸ್ಥಿತಿ ಇದೆ ಮತ್ತು ಜನಗಳು ಯಾವ ರೀತಿ ಸಹಕಾರ ಮಾಡುತ್ತಾರೆ ಮತ್ತು ಹಾಕಿರತಕ್ಕ ಯೋಜನೆಗಳು ಯಾವ ರೀತಿ ಫಲಪ್ರದವಾಗುತ್ತವೆ ಎಂಬುದನ್ನೆಲ್ಲಾ ನಾವು ಯೋಚನೆ ಮಾಡಿ ಆಹಾರದ ಬೆಲೆ ಯಾವ ರೀತಿ ಕಡಿಮೆ ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಹೇಳಬೇಕೇ ಹೊರತು ನಿಜಲಿಂಗಪ್ಪನವರ ಸರ್ಕಾರ ಬೆಲೆಗಳನ್ನು ಕಡಿಮೆ ಮಾಡಲಿಲ್ಲ. ಆದ್ದರಿಂದ ಅವರು ರಾಜೀನಾಮೆ ಕೊಡಬೇಕು ಎಂದರೆ ಅದು ಸರಿಯಾಗುವುದಿಲ್ಲ. ಇಡೀ ಭಾರತದಲ್ಲಿರತಕ್ಕ ಒಂದು ಪರಿಸ್ಥಿತಿಯನ್ನು ನಾವು ನೋಡಬೇಕಾಗುತ್ತದೆ.

ಸಹಕಾರ ಸಂಘಗಳಲ್ಲಿ ಖರ್ಚಾಗತಕ್ಕ ಹಣ ದುರುಪಯೋಗವಾಗುತ್ತಿದೆ ಎಂದು ಹೇಳಿದರು. ಸಹಕಾರ ಸಂಘಗಳಲ್ಲಿ ಬರೀ ಕಾಂಗ್ರೆಸ್‌ನವರೇ ಇಲ್ಲ, ವಿರೋಧೀ ಪಕ್ಷದವರೂ ಸಹ ಇದ್ದಾರೆ; ಯಾರು ಇದ್ದಾರೆ ಯಾರು ಇಲ್ಲ ಎಂಬ ಪ್ರಶ್ನೆ ಮುಖ್ಯವಲ್ಲ. ಯಾವ ರೀತಿ ಸಹಕಾರೀ ಸಂಘಗಳನ್ನು ನಡೆಸಬೇಕೆನ್ನುವ ತತ್ವ ನೋಡಬೇಕೇ ಹೊರತು ಅದನ್ನು ಅಲ್ಲಗಳೆಯಬಾರದು. ಯಾವುದಾದರೂ ಕೆಲವು ಸಂಸ್ಥೆಗಳು ಸರಿಯಾಗಿ ಕೆಲಸ ಮಾಡದಿದ್ದರೆ ಅವುಗಳಮೇಲೆ ಕ್ರಮ ಜರುಗಿಸೋಣ. ಹಣ ದುರುಪಯೋಗ ಮಾಡಿದರೆ ಕಾನೂನು ಪ್ರಕಾರ ಸೊಸೈಟಿಗಳನ್ನು ಡಿಸಾಲ್ವ್ ಮಾಡುತ್ತಾ ಇದ್ದಾರೆ, ಸೂಪರ್‌ಸೀಡ್ ಮಾಡುತ್ತಾ ಇದ್ದಾರೆ. ಯಾವುದೋ ಒಂದೆರಡು ಸೊಸೈಟಿಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ ಎಂದ ಮಾತ್ರಕ್ಕೆ ರಾಜೀನಾಮೆ ಕೊಡಬೇಕೆನ್ನುವ ಧೋರಣೆ ಸರಿಯಲ್ಲ. ಆದ್ದರಿಂದ ನಾನು ವಿನಯಪೂರ್ವಕವಾಗಿ ನಮ್ಮ ಸ್ನೇಹಿತರನ್ನು ಕೇಳಿಕೊಳ್ಳುವುದೇನೆಂದರೆ ಇದು ಬೇಡ ಈ ತರಹ ಜನಗಳಲ್ಲಿ ಒಂದು ವಾತಾವರಣವನ್ನು ಕಲ್ಪನೆ ಮಾಡಿ ನಾವೆಲ್ಲ ಮೂರು ವರ್ಷದ ನಂತರ ಅಧಿಕಾರಕ್ಕೆ ಬರಬೇಕು ಎಂಬ ದೃಷ್ಟಿಯಿಂದ ಈಗಿನಿಂದಲೇ ಇದೆಲ್ಲಾ ಮಾಡುತ್ತಾ ಹೋಗುವುದು ಸರಿಯಲ್ಲ, ನಮಗೂ ಗೊತ್ತಿದೆ ಜನಗಳಲ್ಲಿ ಅಪಪ್ರಚಾರವನ್ನು ಮಾಡಿ ಸರ್ಕಾರದ ಮೇಲೆ ಆರೋಪವನ್ನು ಹೊರಿಸಿ ಕಾಂಗ್ರೆಸ್ ಸರ್ಕಾರ ಕೆಟ್ಟದ್ದು ಎಂದು ಹೇಳುವುದರಿಂದ ಏನೂ ಪ್ರಯೋಜನವಿಲ್ಲ. ಸಾರ್ವಜನಿಕರು ಬುದ್ಧಿವಂತರಾಗಿದ್ದಾರೆ ಅವರಿಗೆ ಸರಿಯಾದ ರೀತಿಯಲ್ಲಿ ದಾರಿ ತೋರಿಬೇಕು ಎಂದು ಹೇಳಿ ಅವರು ಮಂಡಿಸಿರತಕ್ಕ ಈ ಅವಿಶ್ವಾಸದ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ

†Sri V. S. PATIL (Belgaum-I).—Sir, it really pains me either to move or to support the resolution of no-confidence in the Government, which is elected on a democratic principle. At the same time, when we see, the great deriliction of duty on the part of Government, even though it is elected on democratic principles, we have no other go but either to move such a resolution or to support it. Mr. Ganji Veerappa,

(SRI V. S. PATIL)

has tried to support his Government on various grounds but I must say that the vehemence with which he usually addresses the House on other subjects was woefully lacking on this occassion and there is not even a shadow of it in his speech. He was faltering, he was taking back some words, he was conceding some things and ultimately I must say that he has failed in his attempt to support the case of the Government on this issue. He has referred to some subjects mentioned by the Opposion Leader. At the same time he has conceded that there are so many shabby mistakes committed by the Government that had to be corrected by the High Court. I should like to ask him why the people in this State have to approach the High Court in Writ Petitions in their thousands. If the Government were active and functioning according to the law, the rules and procedure, if there had been no nepotism, then certainly no one would have approached the Court for rectifying or annulling orders of Government. Our Government stands condemned in the whole of India, perhaps in the whole of the world, so far as Writ Petitions and cancellation of their orders are concerned. We have practically broken the record of the world so far as getting orders of Government quashed, annulled, cancelled or challenged in the judiciary. This is an unique State Government in the whole world which go to show that their orders are illegal and are carried out by some other means, not by law or by rules. This is a very sad state of affairs so far as our Government is concerned, and the worst thing is that they are not taking steps to improve, but they are continuing in the same way. They are not at all inclined to correct themselves and follow the rules and the law. That is the worst thing that is happening in the present administration and that is why we support this no-confidence motion.

All our big Leaders of the Congress as well as others say that the morality of the people is going down. To increase the morality, we have to teach the pupils in the schools about morality as it is necessary. Why that has happened ? There is an old saying that the King or the Government is the cause of all the things that happen in a country. We know, for the last 15 or 16 years, how our Government are working right from Delhi to Bangalore or even in a village. You will find that that there is absolutely no rule of law, but merely nepotism and corruption are ruling the whole country from top to the bottom. If this is the state of affairs, then how can morality be expected from the people ? Only those who are corrupt, who have got some influence and who can do and undo things with the help of money, are flourished. The last speaker said "that the welfare of the people has been carried out by the Government and we the Congress people, are also part and parcel of the Nation." Of course, national income has increased. Even though we do not agree with the actual figure, still the national income has increased. Even Pandit Jawaharlal does not know whether the income has gone up. He is now thinking of setting up a Committee to examine

this. If we can see, we must admit that the Congress people are also part and parcel of the country. The conditions of a section of people really have improved. Whose condition is improved ? The conditions of the people who wear Khaddar and who pose themselves as followers of Mahatma Gandhi, are improved. The conditions of those people might have been improved, but not of the general public. That is why the the people are suspicious and have lost all faith in the administration of the Government. It is not we people in Bangalore are saying this, but it was said in Parliament, in Maharashtra and all other States. Just take the instance that our country was attacked by the Chinese at the end of the last year. How did they attack ? Have anybody thought it over ? My assumption is that it is because of our inefficiency, because we had this self-complacency and the state of nepotism and indiscipline not only in the Military or the Police or in the services, but also amongst the people. All these factors have contributed and these causes were perhapas the main things why Chinese attacked. When we said that every man in India is prepared to defend the soil, then they had to withdraw. That condition is it remaining to day ? Has the Government done anything to see that the one ness of India is kept up ? Nothing at all. These Congress people think that Nehru will do the rest and his policies are the best, because they can do legal as well as illegal things and they can be self-sufficient and can enjoy the life. These are the things the Government is doing. Let me ask what they have done for the defence of the country. The Emergency is there. Why they are creating all this trouble ? They have created the big trouble of Godavari and Krishna waters. Your Government is responsible for all this chaos and you are creating dissensions between this State and that State, that border and this borders. All these points have been created and thrown before the people. Why ? This Government as well as the Congress Government at the Centre want to divert and divide people so that they should not be united and attack the policy of the Congress. That is why they have created all these troubles. The Congress Government knows to create troubles, but never solve them. There is not a single problem that has been solved by the Congress, either at the Centre or at the State. They will throw these problems before the people.

SRI GANJI VEERAPPA.—Who is creating trouble ?

SRI V. S. PATIL.—You are cereating troubles, *i. e.*, the Congress Government is creating all this trouble. That is whv I say that in order to have or continue the oneness of our country, we must see that the present administration is changed. We have tried and have waited sufficiently long for their actions being improved, but we must say definitely that there is absolutely no hope so long as the present Ministry is at the helm of the affairs. Just yesterday, we had seen about a dozen House Surgeons from Hubli. They have struck their work. What is the reason ? They have struck work because they are not paid as their counterpart in Mysore or Maharastra or Delhi are paid. They are not paid at all. That is why they had to resort to a 'Strike'. According to their information, in the Medical College at Hubli, for

(SRI V. S. PATIL)

50 students there are not even two professors. On the contrary, according to the Indian Medical Council, there must be one teacher including a professor for every three boys. In our Colleges, there are not even two teachers for 50 boys. How can they teach? That is why all this chaos is coming up, not because there is want of hands, there is want of intelligence, but it is because of the inefficiency of the persons who are holding this charriot. Therefore, there is no alternative for us, but to charge this Government with inefficiency, nepotism and corruption and that is why we have moved this resolution. Of course, if the Members on the other side, *i.e.*, the Congress side, are given a free choice to vote, then definitely they will vote along with us, but there is the Whip, there is the party discipline. So far as discipline is concerned, this discipline is not working for the benefit of the nation, but it is benefiting only a few hands which are holding the portfolios. Therefore, I suggest that a free choice must be there in a democracy to vote. If this free choice is given I feel, we will have a decent, small and compact Ministry to run this Government.

Sometime back, when a question was put about the nominations to the various Boards and other posts nominated by the Government, our Hon'ble Minister for Law said that those are political jobs and that they are entitled to give to any person whom they choose. This is really a sad state of affairs.

Regarding nomination and the working of the Electricity Board as well as the Khadi Board, these two Boards—many things have been said in respect of them on the floor of this House. It is very difficult, within this small space of time that is given to me to elaborate on this. But these things must put to shame any man of conscience; that such a thing should happen under his own nose or under his Control! that three or four years' accounts have not been written, what is this! It is public money. We are taxing the people top-heavily and people are being crushed with top-heavy taxation both at the Centre and in the States. We are squeezing out every drop of blood from the people and filling the treasury of the State—and from that, huge amounts are handed over to these people—it is really shameful to say that no accounts have been maintained; If this thing had happened in other countries where there is real democracy, like England, the Minister in charge would have resigned without being asked. But here, even though the Ministers are driven out, they will not resign. That is the pitiable condition that is being perpetuated in this country. That is why, I should like to submit that the way in which we look at things must change. We must have some moral courage to do things. That is lacking and that is why the whole adminstration is going to dogs; and our country is suffering. Whenever I think over this matter deeply, I feel where our country is going and what is going to happen to our country. If there is really the soul of Mahatma Gandhi hovering over our country, he would not have kept quiet, but he would have taken revenge. What havoc has been caused

in the name of Mahatma Gandhi ; At the time of getting votes, my friend said just now—people are intelligent, they have examined our deeds and voted us to power. I say, they have not voted you to power. They have voted for Mahatma Gandhi—not for you, not for any of the congressmen. And about this form of democracy, our worthy President has said I think last week, that this is not real democracy, but a phoney democracy. That is a very severe remark we have received a at the hands of the most intelligent and most revered man of this country. It must really put us to shame to get that kind of remark from the highest dignitary in the land. But our congressmen have become such thick-skinned people that they will not care for any thing, for anybody or for any remark. That is the worst of it. What is the method to get it changed ? Sir there are peaceful methods—that is asking them to resign by bringing such resolutions and bringing home their acts of omission and commission as Cabinet Ministers. If in spite of it, if they do not resign, ultimately there is no other go, people will have to resort to violence, get rid of such a Government. We do not want that to happen. That is why, we request peacefully, you must examine. You ask your own self and conscience whether the administration is being run for the benefit of the country. Keep aside your own party-men, your own henchmen, your own supporters. In what way you have increased the income ? Have you increased the income of the agriculturist ?

Mr. DEPUTY SPEAKER.—The time is up.

Sri V. S. PATIL.—You ask any villager, whether his income has increased. He will definitely say that his income has not at all increased. All these things are there. That is why I support the motion that has been moved by my Hon'ble friend and I ask this Government to resign and get out of office and give a choice to some of those who are above nepotism or corruption.

There is one thing so far as corruption is concerned. We have got an Anti-Corruption Department. We are paying from our treasury huge amounts as their salaries, and allowances. What is the outturn and what have they found out ? Have any of these officers found out any corrupt man who belongs to the Ruling Community ? I challenge on the floor of this House, has the Anti-Corruption Department ever taken steps against the ruling community ? You will not find a single instance of that sort. Why Sir, in my place, I tell you.....

Sri B. V. MAGAVI (Haveri).—I want a clarification. What does the Hon'ble Member mean by saying 'ruling community'.

Sri V. S. PATIL.—My friend knows what it is. Why shoud I express this here ? The desire of the people outside this House is—people must have faith in the administration and people must have faith in the Government, that the Government is impartial and is doing its job well. That must be the understanding and conviction. On the contrary if you go and ask them about it, they will say Anti-Corruption is meant for a particular community, to hang persons of a particular community.

(SRI V. S. PATIL)

That is very bad. This goes to the root of the efficiency of the administration.

Sir, in one case to which I was referring, one officer was there, whose papers were attached, by this Department and some statements were recorded and with immediate effect, he was transferred from that place. The person concerned was an A.C. He came Sir, and what was the result. The Commissioner was transferred and that man was kept there only. What will be the effect of the administration. This is the way in which administration is being run and this Anti-Corruption Department is flouted by these persons who are occupying the front benches on the other side. It is really shameful. It is illegal, not only illegal, but it is ruining the administration that has come down to us from the British. It is really ruining. It has ruined already. To quote one instance, why these people should have an Anti-Corruption to protect a particular community and to smash another community ?

This is the way in which our administration is being run and even if these instances are brought to the notice our friends on the other side, they will say 'Oh, these are ordinary things ; they will go on. Why do you worry about it.'' This is the way in which the present administration is being run. That is why I say that the present administration or the present Council of Ministers are the most incompetent and most corrupt and that is why they do not deserve to hold the charge of protfolios or the Cabinet and there is one more chance to clear out by means of what is Kamaraj Plan. If that is applied, they will get out without any trouble, without any blemish on their part and they will be elevated to a supreme command of the nation. That is why I should like to suggest that in view of the emergency, it is better that the present number if curtailed and I may say about five Ministers will be sufficient to run the administration efficiently rather than having this large number without anybody's co-operation, this integration, etc. That is why I should like to support the move taken by my friend Sri Sivappa and I request the Hononrable Minister to vacate the office as early as possible.

3-30 P.M.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ಮಾನ್ಯ ಸಭಾಪತಿಗಳೆ, ಮಾನ್ಯ ಸೋದರರಾದಂಥ ವಿರೋಧಪಕ್ಷದ ನಾಯಕರು ಮಾತನಾಡುತ್ತಾ, ಇದು ಒಂದು ಪುಣ್ಯದಿವಸ ಅಂತ ಹೇಳಿದರು, ನಾನಾದರೂ ಹೇಳುತ್ತೇನೆ, ಇದು ದೇಶಕ್ಕೆ ದುರ್ದೈವದ ದಿನ ; ಶಾಂತಿ ವಾತಾವರಣವನ್ನು ಕಲಕಿ, ದೇಶದಲ್ಲಿ ಅಶಾಂತಿ ಮೂಡಿಸುವಂಥ ಒಂದು ಅಪಾದನೆಯ ಅಪವಿತ್ರ ದಿನ ಎಂದು ನಾನು ಹೇಳಲು ಇಚ್ಛಿಸುತ್ತೇನೆ.

ನನ್ನ ಮಾನ್ಯ ಸೋದರರಾದಂಥ ವಿರೋಧಪಕ್ಷದ ನಾಯಕರು ಒಂದೆರಡು ಶಬ್ದಗಳನು ಉಪಯೋಗಿಸಿದರು. ಪುಂಡರು, ಮಧಾಂಧರು ಎಂಬ ಶಬ್ದಗಳನ್ನು ಉಪಯೋಗಿಸಿದರು. ಆದರೆ ಇಂಥ ಶಬ್ದಗಳು ವಿರೋಧಪಕ್ಷದ ನಾಯಕರ ಬಾಯಿನಿಂದ ಬಂತಲ್ಲ ಎಂದು ವಿಷಾದವಾಗುತ್ತದೆ.

ಇನ್ನು ಈ ಕಾಂಗ್ರೆಸ್ ಸರ್ಕಾರಗಳು ಏನೆಲ್ಲವೆಯೋ, ಅಲ್ಲೆಲ್ಲಾ ವಿರೋಧಪಕ್ಷಗಳು ಅವಿಶ್ವಾಸ ನಿರ್ಣಯ ಮಂಡನೆಯನ್ನು ಅಖಿಲ ಭಾರತ ಪ್ರಶ್ನೆಯನ್ನಾಗಿ ಮಾಡಿಕೊಂಡಿದ್ದಾರೆ.

ಆದರಂತೆ ಇಲ್ಲಿಯೂ ಕೂಡ ಈ ನಿರ್ಣಯವನ್ನು ತಂದಿರುವುದಕ್ಕಾಗಿ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ. ಏಕೆಂದರೆ ಇತರೇ ಕಡೆ ಅವಿಶ್ವಾಸ ನಿರ್ಣಯಗಳಿಗೆ ಯಾವ ಗತಿಯಾಯಿತೋ, ಅದೇ ಗತಿ ಇಲ್ಲಿಯೂ ಆಗುತ್ತದೆ ಎಂಬುದು ಗೊತ್ತಿದ್ದರೂ ಕೂಡ, ನಮ್ಮ ಸಹೋದರರು ನಾವೇಕೆ ಹಿಂದುಳಿಯಬೇಕೆಂದು, ಇಲ್ಲಿನ ವಿರೋಧಪಕ್ಷಗಳೂ ಸಹ ಬಹಳ ಶಕ್ತಿವಂತರು ಎಂಬುದಾಗಿ ತೋರಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ಈ ಒಂದು ನಿರ್ಣಯವನ್ನು ತಂದಿದ್ದಾರೆಂದು ನಾನು ಭಾವಿಸಿದ್ದೇನೆ.

ಈ ನಿರ್ಣಯವನ್ನು ತಂದಿರುವುದನ್ನು ನೋಡಿದರೆ ನನಗೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಕೆಲವರು ಮದ್ದು ಇಡುವುದನ್ನು ಕಲಿತಿರುತ್ತಾರೆ. ಮೂರು ತಿಂಗಳಿಗೊಮ್ಮೆ, ಆರು ತಿಂಗಳಿಗೊಮ್ಮೆ ಯಾರಿಗಾದರೂ ಆ ಮದ್ದನ್ನು ಇಡಲೇಬೇಕಂತೆ. ಹಾಗೆ ಇಡದೆ ಹೋದರೆ, ಅದು ರಾತ್ರಿ ಕನಸಿನಲ್ಲಿ, "ಏಕೆ ಯಾರಿಗೂ ಇಡಲಿಲ್ಲ. ನೀನೇ ತಿನ್ನು, ಇಲ್ಲ, ನಿಮ್ಮವರಿಗೆ ಮದ್ದು ಇಡು" ಎಂದು ಎದೆಯ ಮೇಲೆ ಕೂತು ಪೀಡಿಸುತ್ತದಂತೆ. ಆಗ ಯತ್ನವಿಲ್ಲದೆ ಆ ಮದ್ದನ್ನು ಬೇರೆಯವರಿಗೆ ಇಡುತ್ತಾರಂತೆ. ಆದರಂತೆ ವಿರೋಧಪಕ್ಷಗಳು ಕೂಡ ಸರ್ಕಾರವನ್ನು ದ್ವೇಷಿಸುವ ಒಂದು ಮದ್ದು ಕಲಿತಿದ್ದಾರೆ. ಅದನ್ನು ಯಾರೂ ದೊರೆಯದಿದ್ದಾಗ, ಯಾವ ಒಂದು ವಿಷಯವೂ ಸಿಗದಿದ್ದಾಗ, ಸರ್ಕಾರದವರಿಗೆ ಇಡುತ್ತಾ ಇದ್ದಾರೆ. ಹೀಗೆ ಇಡದೆ ಇದ್ದರೆ ಮದ್ದಿನ ದೇವತೆ ಕೇಳುವುದಿಲ್ಲ. ಅಂತೆಯೇ ಸರ್ಕಾರದವರನ್ನು ಟೀಕಿಸುವುದು, ಸಭಾತ್ಯಾಗ ಮಾಡುವುದು, ಅವಿಶ್ವಾಸ ನಿರ್ಣಯ ತರುವುದು, ಹೀಗೆಲ್ಲಾ ಮಾಡದಿದ್ದರೆ, "ನೀವು ಏಕೆ ಮಾಡಲಿಲ್ಲ, ನೀವು ಈ ಸಭೆಯಲ್ಲಿ ಏನು ಮಾಡಿದಿರಿ" ಎಂದು ಯಾರು ಕೇಳುತ್ತಾರೋ ಎಂಬಂಥ ಈ ಒಂದು ಕಾರಣಕ್ಕಾಗಿ ಈ ನಿರ್ಣಯವನ್ನು ನಮ್ಮ ಮಾನ್ಯ ವಿರೋಧಪಕ್ಷದ ಸದಸ್ಯರು ತಂದಿದ್ದಾರೆಂದು ನಾನು ಭಾವಿಸಲೇ ಬೇಕಾಗಿದೆ.

ಕಾಂಗ್ರೆಸ್ ಸರ್ಕಾರವಲ್ಲದೆ ಬೇರೆ ಯಾವ ಸರಕಾರ ಇದ್ದರೂ ಕೂಡ, ಈ ವಿರೋಧಪಕ್ಷಗಳನ್ನೆಲ್ಲಾ ಮಟ್ಟ ಹಾಕಿ ಸರ್ವಾಧಿಕಾರಿಗಳಾಗುತ್ತಿದ್ದರು. ಕಾಂಗ್ರೆಸ್ ಸರ್ಕಾರ ಪ್ರಜಾಸತ್ತಾತ್ಮಕ ಸರಕಾರ; ಇದು ಸಹಜ ಸಿದ್ಧವಾದ ರಾಜಕೀಯ ಹಕ್ಕು ಬಾಧ್ಯತೆಗಳ ರಕ್ಷಣೆಗೆ ಮಹತ್ವ ಕೊಟ್ಟಿದೆ. ರಾಜಕೀಯ ಸ್ವಾತಂತ್ರ್ಯಕ್ಕೆ ಕೂಡ ಇದು ಬೆಲೆ ಕೊಟ್ಟಿದೆ. ಅಂತೆಯೇ ಹೇಳುವುದನ್ನೆಲ್ಲಾ ಹೇಳಲಿ ನಾವು ಕೇಳೋಣ. ಅವರು ಮಾಡುವುದನ್ನೆಲ್ಲಾ ಮಾಡಲಿ, ಮಾಡಿದ್ದುಣ್ಣೋ ಮಹಾರಾಯ ಎಂದು ಸುಮ್ಮನೆ ಕುಳಿತುಕೊಂಡರೆ ಆಯಿತು ಎಂದು ಅಪ್ಪಟ ಪ್ರಜಾಸತ್ತಾತ್ಮಕ ರೀತಿಯಲ್ಲಿ ಸರ್ಕಾರದವರು ಹೋಗುತ್ತಿದ್ದಾರೆ. ಸರಕಾರದ ಪ್ರಜಾಸತ್ತಾತ್ಮಕ ನೀತಿಯನ್ನು ಇನ್ನೂ ಹೆಚ್ಚಿಗೆ ಪ್ರಕಾಶಕ್ಕೆ ತರಬೇಕೆಂದು ಈ ನಿರ್ಣಯವನ್ನು ತಂದವರ ಅಭಿಲಾಷೆ ಇದೆ; ಒಳ್ಳೆಯದು; ಚರ್ಚೆ ಮಾಡಲಿ, ಸರ್ಕಾರದ ಪ್ರತಿಭೆಯನ್ನು ಇನ್ನಷ್ಟು ಹೀಗೇ ಬೆಳಗಲೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮ ರಾಷ್ಟ್ರದ ಹಿಂದಿನ ಪರಿಸ್ಥಿತಿ ಮತ್ತು ಇಂದಿನ ಪರಿಸ್ಥಿತಿಯ ಎಲ್ಲಾ ಕ್ಷೇತ್ರಗಳ ಆಗು ಹೋಗುಗಳನ್ನೂ ವಿಚಾರ ಮಾಡಿದರೆ, ಈ ವಿಶಾಲ ರಾಜಕೀಯ ಇತಿಹಾಸವನ್ನು ನೋಡಿ, ನ್ಯಾಯಾತ್ಮಕ ದೃಷ್ಟಿಯಿಂದ ವಿಮರ್ಶಿಸಿದ್ದೇ ಆದರೆ, ನಿಜವಾಗಿಯೂ ಕೂಡ ಈ ನಿರ್ಣಯವನ್ನು ವಿರೋಧಪಕ್ಷಗಳು ತರುತ್ತಾ ಇರಲಿಲ್ಲವೆಂದು ನಾನು ಭಾವಿಸಿದ್ದೇನೆ. ನೂರಾರು ಜಾತಿಗಳು, ನೂರಾರು ಸಂಸ್ಕೃತಿ, ನೂರಾರು ಭಾಷೆ, ನೂರಾರು ಪ್ರಾಂತ್ಯಗಳಿದ್ದಂಥ ಈ ಒಂದು ಭರತಖಂಡವನ್ನು ಸ್ವಾತಂತ್ರ್ಯ ಬಂದ ಮೇಲೆ, ಈ 16 ವರ್ಷಗಳಲ್ಲಿ ಒಂದು ಬಲಿಷ್ಠ ರಾಷ್ಟ್ರದ ಶ್ರೇಣಿಗೆ ಒಯ್ದ ಶ್ರೇಯಸ್ಸು ಕಾಂಗ್ರೆಸ್ ಸರ್ಕಾರಕ್ಕೆ ಮಾತ್ರ ಸಲ್ಲುತ್ತದೆ. ಕಾರಣವಿಷ್ಟೆ: ಈ ಪಕ್ಷದ ಒಂದು ಶಿಸ್ತು, ಸಂಯಮ, ದಕ್ಷತೆಯಿಂದ ಕೂಡಿದ ಹಿಮಾಲಯದಂತೆ ಬೆಳೆದು ನಿಂತಿರುವ ಕಾಂಗ್ರೆಸ್ ಸಂಸ್ಥೆಯನ್ನು ಯಾವ ಜನತೆ ಕೂಡ ಏನೂ ಮಾಡಲಾರದು, ಯಾವ ಪಕ್ಷವೂ ಕೂಡ ಏನೂ ಮಾಡಲಾರದು. ಇಂಥ ಒಂದು ಅದ್ಭುತ ಕಾರ್ಯವನ್ನು ಮಾಡುವಂಥ ಶಕ್ತಿಯನ್ನು ಕಾಂಗ್ರೆಸ್ ಗಳಿಸಿದೆ. ಈಗ ರಾಷ್ಟ್ರ ಮುಖಂಡರ ನೇತೃತ್ವದಲ್ಲಿ ದಕ್ಷ ಸರಕಾರಗಳು ರಚಿಸಲ್ಪಟ್ಟು ಅನೇಕ ವಿಚಿತ್ರ ಸನ್ನಿವೇಶಗಳಿಂದ ಕೂಡಿದ್ದಂಥ ನಮ್ಮ ರಾಷ್ಟ್ರವನ್ನು ಮುಂದುವರಿದ ಉನ್ನತ ರಾಷ್ಟ್ರಗಳ ಮಟ್ಟಕ್ಕೆ ನಿಲ್ಲಿಸಿದಂಥ ಕೀರ್ತಿ ಕಾಂಗ್ರೆಸ್ ಸರಕಾರಕ್ಕೆ ಸೇರಿದೆ ಎಂಬುದನ್ನು ಬಲ್ಲವರು ಒಪ್ಪುತ್ತಾರೆ.

[MR. SPEAKER in the Chair.]

ಸ್ವಾತಂತ್ರ್ಯ ಪಡೆದ ಬೇರೆ ರಾಷ್ಟ್ರಗಳು ಉನ್ನತಿಯನ್ನು ಸಾಧಿಸಲು ಶತಮಾನ ಪರ್ಯಂತರ ಪ್ರಯತ್ನಿಸಿವೆ. ನಮಲ್ಲಿ 16 ಶತಮಾನಗಳಲ್ಲಿ ಆಗತಕ್ಕ ಪ್ರಗತಿಯನ್ನು 16 ವರ್ಷಗಳಲ್ಲೇ ಸಾಧಿಸಿರುವುದು ಕಾಂಗ್ರೆಸ್ ಸರ್ಕಾರದ ಒಂದು ಪವಾಡವೆಂದೇ ಹೇಳಬೇಕಾಗಿದೆ. ಪಂಚವಾರ್ಷಿಕ ಯೋಜನೆಗಳ ಮೂಲಕ ಅನೇಕ ಕಾರ್ಯಗಳನ್ನೂ ಸಾಧಿಸಿದೆ. ನಮಗೆ ಸ್ವಾತಂತ್ರ್ಯ ಬಂದಾಗ ಇದ್ದ ವಿಚಿತ್ರ ಪರಿಸ್ಥಿತಿಯಲ್ಲಿ ಬೇರೆ ಯಾವ ಪಕ್ಷವೂ ಸರ್ಕಾರ ರಚಿಸಿದ್ದರೂ ಗಳಿಸಿದ ಸ್ವಾತಂತ್ರ್ಯವನ್ನು

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ಉಳಿಸಿಕೊಳ್ಳಲು ಆಗುತ್ತಿರಲಿಲ್ಲ. ರಾಷ್ಟ್ರ ಅಲ್ಲೋಲಕಲ್ಲೋಲವಾಗಿ, ಹರಿದು ಹಂಚಿ ಹೋಗಿ ಅಧಃಪಾತಾಳಕ್ಕಿಳಿಯುತ್ತಿತ್ತು... ಈ ವಿಚಾರ ಅವಿಶ್ವಾಸ ನಿರ್ಣಯ ತಂದ ನಮ್ಮ ಮಾನ್ಯ ಸದಸ್ಯ ಸೋದರಿಯರಿಗೂ ಗೊತ್ತಿದೆ. ಬರೀ ಗೊತ್ತಿರುವುದಷ್ಟೇ ಅಲ್ಲ, ಅಕ್ಷರಶಃ ಗೊತ್ತುಂಟು. ಆದರೂ ನಿರ್ಣಯ ಮಂಡಿಸಿರುವುದುಂಟು. ಇದಕ್ಕೆ ಕಾರಣವೇನುಂಟು ಎಂದು ಯೋಚಿಸಿದರೆ "ಏನಕೇನ ಪ್ರಕಾರೇಣ ಪ್ರಸಿದ್ಧೋ ಪುರುಷೋಭವ" ಎಂಬಂತೆ ಹೇಗಾದರೂ ಆಗಲಿ ವಿರೋಧಪಕ್ಷ ಮುಂದೆ ಬರಬೇಕು. ಪ್ರಚಾರವಾಗಬೇಕು ಎಂಬ ದೃಷ್ಟಿಯಿಂದ ತಂದಿದ್ದಾರೆಂದು ಇವತ್ತಿನ ದಿವಸ ಸಂಶಯವಿಲ್ಲದೆ ನಾವೆಲ್ಲ ಹೇಳಲಿಕ್ಕುಂಟು. ಇಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಶಿವರಾಯ ಎಂಬಾತನಿಗೆ ಒಬ್ಬ ಪತ್ನಿ ಇದ್ದಳು. ಆಕೆಗೆ 'ಸ' ಕಾರ ಉಚ್ಚಾರ ಮಾಡಲು ಬರುತ್ತಿರಲಿಲ್ಲ. ಆತ ಇದೇ ಕಾರಣದಿಂದ ಇನ್ನೊಂದು ಮದುವೆ ಮಾಡಿಕೊಂಡ. ಆಕೆಗೆ 'ಡ' ಕಾರ ಉಚ್ಚಾರ ಮಾಡಲು ಬರುತ್ತಿರಲಿಲ್ಲ. ಬೇಸತ್ತು ಆತ ಮೂರನೆಯ ಲಗ್ನವಾದ. ಆಕೆಗೆ 'ಸ' ಕಾರ, 'ಡ' ಕಾರ, 'ರ' ಕಾರ ಮೂರೂ ಉಚ್ಚಾರ ಮಾಡಲಿಕ್ಕೆ ಬರುತ್ತಿರಲಿಲ್ಲ............

Sri D. PARAMESWARPPA.—Point of Order, Sir. I should like to know whether during the course of discussion stories could be cited ?

Mr. SPEAKER.—I would only mention this much. 20 minutes have been given to every Member; if they confine themselves to that time limit and tell stories I cannot prevent. (laughter.)

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಒಮ್ಮೆ ಒಬ್ಬ ದೊಡ್ಡ ಮನುಷ್ಯರು ಅವರ ಮನೆಗೆ ಊಟಕ್ಕೆ ಬಂದರು. ಅವರು ಊಟ ಮಾಡಿ ಹೋಗುವವರೆಗೂ ಯಾರೂ ಮಾತನಾಡಬೇಡಿ ಎಂದು ಪತ್ನಿಯರಿಗೆ ಶಿವರಾಯ ಆಜ್ಞೆ ಮಾಡಿದ್ದ. ಎಲ್ಲರೂ ಊಟಕ್ಕೆ ಕುಳಿತುಕೊಂಡರು. ಅಡಿಗೆಯವನು ಊಟಕ್ಕೆ ಬಡಿಸುತ್ತಿದ್ದ. ಮೊದಲು ಪಾಯಸ ಬಡಿಸಿದ. ಅದರ ರುಚಿ ನೋಡಿ ಗಂಡ ಮಾತನಾಡಬೇಡವೆಂದು ಹೇಳಿದ್ದನ್ನು ಮರೆತು ಬಿಟ್ಟು ಆಕೆ 'ಚಾವಿಗೆ ಚಪ್ಪೆ, ಚಕ್ಕರೆ ಚಾಲದು' ಎಂದು ಬಿಟ್ಟಳು. ಅವಳು ಮಾತನಾಡಿದ್ದನ್ನು ನೋಡಿ ಎರಡನೆಯವಳು ಮಾತಾಡಬೇಡ ಎನ್ನುವುದಕ್ಕೆ 'ಮಾತಾಯ ಬೇಯ' ಎಂದಳು. ಇವರಿಬ್ಬರನ್ನು ನೋಡಿ ಮೂರನೆಯವಳ ಸುಮ್ಮನಿರುತ್ತಾಳೆಯೇ ? ಯಾರು ಮಾತಾಡಿದರೂ ನಾನು ಮಾತಾಡೆ ಎನ್ನುವುದಕ್ಕೆ 'ಯಾಯು ಮಾತಾಯೆ ನಾನೂ ತಾಯೆ' ಎಂದು ಬಿಟ್ಟಳು. ಇವರ ಮಾತುಗಳನ್ನು ಕೇಳಿ ದೊಡ್ಡ ಮನುಷ್ಯರಿಗೆ ಆಶ್ಚರ್ಯವಾಗಿ ಇವರು ಏನು ಮಾತನಾಡುತ್ತಿದ್ದಾರೆ, ಇವರ ಭಾಷೆ ಯಾವುದು ಎಂದು ಕೇಳಿದರು. ಅವರು ಹಾಗೆಯೇ ಬೇರೆಯವರು ಯಾರಾದರೂ ಮನೆಗೆ ಬಂದಾಗ ಅವರು ಒಗಟಿನ ಮಾತು ಆಡುತ್ತಾರೆ. ಅದರ ಅರ್ಥ ಅವರಿಗೇ ಗೊತ್ತು ನಮಗೆ ಅರ್ಥವಾಗುವುದಿಲ್ಲ ಎಂದು ಗಂಡ ಹೇಳಿದ. ಇದರಂತೆಯೇ ಅವಿಶ್ವಾಸ ತಂದಿರುವಂಥ ಮಾನ್ಯ ಸೋದರರಿಗೆ ಅವಿಶ್ವಾಸ ನಿರ್ಣಯದ ಅರ್ಥ ಅವರಿಗೇ ಗೊತಾಗಬೇಕು...........

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಲ್ಲಿ ಯಾರು, ಹೆಂಡತಿ, ಯಾರನ್ನು ಮದುವೆ ಮಾಡಿಕೊಂಡರು (ದೀರ್ಘ ನಗು).

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಸ್ವಾಮಿ, ನನ್ನ ವೇಳೆ ಹೋಯಿತು. ಶ್ರೀಮಾನ್ ಮುಕ್ಕಣ್ಣಪ್ಪನವರ ವೇಳೆಯಲ್ಲಿ ನನಗೆ ಐದು ನಿಮಿಷ ಕೊಡಬೇಕು.

ಅವಿಶ್ವಾಸ ನಿರ್ಣಯದ ಶೈಲಿ, ಅರ್ಥ, ಅಪಾದನೆ, ಮುಂತಾದ್ದೆಲ್ಲ ಬೇರೆಯವರಿಗೆ ಒಗ್ಗಟಾಗಿ ಕಾಣುತ್ತದೆ. ತಂದವರಿಗೆ ಮಾತ್ರ ಅದು ಅರ್ಥವಾಗುತ್ತದೆಯೇ ಹೊರತು ನಮಗೆ ಅರ್ಥವಾಗುವುದೂ ಇಲ್ಲ. ಅವಿಶ್ವಾಸ ನಿರ್ಣಯ ಭಸ್ಮಾಸುರನ ಉರಿಹಸ್ತ ಇದ್ದಂತೆ. ವಿಶೇಷ ಪರಿಸ್ಥಿತಿಯಲ್ಲಿ, ಆಡಳಿತ ಅಲ್ಲೋಲಕಲ್ಲೋಲವಿದ್ದಂಥ ಪರಿಸ್ಥಿತಿಯಲ್ಲಿ ಮಾತ್ರ ಅದನ್ನು ಬಳಸಬೇಕಾಗುತ್ತದೆ. ಭಸ್ಮಾಸುರನಂತೆ, ವರ ಕೊಟ್ಟವ್ದ ಶಂಕರನ ತಲೆಯ ಮೇಲೆಯೇ ಪರೀಕ್ಷಿಸುವ ತಮಾಷೆ ಮಾಡುತ್ತೇನೆಂದು ಹಸ್ತವನ್ನು ಇಡ ಹೋದರೆ ಮೋಹಿನಿ ಭಸ್ಮಾಸುರನಂತೆ ಸ್ವನಾಶ ಮಾಡಿಕೊಂಡಂತಾಗುತ್ತದೆ. "ಉರಿ ಹಸ್ತವಿದೆ, ಸುಟ್ಟು ಬಿಟ್ಟೇನು," ಎಂಬಂತೆ ಅವಿಶ್ವಾಸ ಠರಾವಿದೆ, ಉರುಳಿಸಿ ಬಿಟ್ಟೇನು ಎಂದಂತಾಗುತ್ತದೆ. ಕಾರಣ ಅವಿಶ್ವಾಸದ ಉರಿ ಹಸ್ತದಿಂದ ಸರ್ಕಾರಕ್ಕೇನೂ ಕಷ್ಟವಾಗುವುದಿಲ್ಲ. ತಂದವರಿಗೆ ಮಾತ್ರ ನಷ್ಟವುಂಟಾಗುತ್ತದೆ ಎಂದು ಹೇಳ ಬಯಸುತ್ತೇನೆ. ಏನು ನಷ್ಟ ಎಂದು ಕೇಳಬಹುದು. ಜನತೆಯ ವಿಶ್ವಾಸ ನಷ್ಟವಾಗಲು ಅವಕಾಶವುಂಟು ಎಂದು ಹೇಳಬೇಕಾಗುತ್ತದೆ.

ಈ ನಿರ್ಣಯ ತರಲು ಕೊಟ್ಟಿರುವ ಕಾರಣಗಳಾದರೂ ಏನು ? ಖಾದಿಬೋರ್ಡ್, ಎಲೆಕ್ಟ್ರಿಸಿಟಿ ಬೋರ್ಡ್, ಶರಾವತಿ ಹೊಳೆಯಲ್ಲಿ ಲೂಟಿಯಾಗಿದೆ, ದುಂದು ಖರ್ಚಿದೆ, ಲಂಚ ಜಾಸ್ತಿಯಾಗಿದೆ, ಎನ್ನುವ ಸಾಮಾನ್ಯ ವ್ಯವಹಾರಿಕ ವಿಚಾರಗಳು. ಈ ವಿಚಾರಗಳು ನಮ್ಮಲ್ಲಿ ಮಾತ್ರ ಇರದೆ ಎಲ್ಲೆಲ್ಲಿಯೂ ಇವೆ. ಪರದೇಶಗಳಲ್ಲಿ ಕೂಡ ಇವೆ. ಅಂದ ಮೇಲೆ ಜಗತ್ತಿನ ಎಲ್ಲ ಸರ್ಕಾರಗಳ ಮೇಲೂ ಅವಿಶ್ವಾಸ ಮಂಡಿಸಬೇಕಾಗುತ್ತದೆ. ಆಕಾಶಕ್ಕೆ ಏಣಿ ಹಾಕುವಂಥ ಕೆಲಸವನ್ನು ಮಾಡಬೇಡಿ ಎಂದು ನಮ್ಮ ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಂತಹ ಆಗದ ಕೆಲಸಕ್ಕೆ ಅವಿಶ್ವಾಸ ನಿರ್ಣಯದ ಮೂಲಕ ಕೈ ಹಾಕಬಹುದೇ ? ಇಂತಹ ಅರಳು ಮರಳು ಬುದ್ಧಿ ಮಾನ್ಯ ಸೋದರರಿಗೆ ಏಕೆ ಬಂತು ಎಂದು ನನಗೆ ಯೋಚನೆಯಾಗಿದೆ. ಆಡಳಿತದಲ್ಲಿ ಅಕ್ರಮಗಳಿದ್ದರೆ, ತಿದ್ದಲು ಬೇರೆ ದಾರಿಗಳಿವೆ. ಅವಿಶ್ವಾಸ ನಿರ್ಣಯದ ಮೂಲಕ ತಿದ್ದಲು ಪ್ರಯತ್ನಪಡಬಾರದು. ಇವರ ಪ್ರಯತ್ನವನ್ನು ನೋಡಿದರೆ ನಮ್ಮ ಮಾನ್ಯ ಸದಸ್ಯರು ಮಾಡಿರುವಂಥಾ ಪ್ರಯತ್ನವನ್ನು ನೋಡಿದರೆ, ನನಗೆ ಒಂದು ಸಣ್ಣ ಕಥೆ ಜ್ಞಾಪಕಕ್ಕೆ ಬರುತ್ತದೆ ಸ್ವಾಮಿ.

ಒಬ್ಬಾಕೆಗೆ ಇಬ್ಬರು ಹೆಣ್ಣು ಮಕ್ಕಳಿದ್ದರು. ಅಕ್ಕಪಕ್ಕದ ಊರುಗಳಿಗೆ ಕೊಟ್ಟು ಲಗ್ನ ಮಾಡಿದ್ದರು. ಇಬ್ಬರೂ ಹುಟ್ಟು ಸೋಮಾರಿಗಳು ಸುದೈವದಿಂದ ಶ್ರೀಮಂತರ ಮನೆ ಸೇರಿದ್ದರು. ಒಮ್ಮೆ ಚಿಕ್ಕವಳು ತನ್ನ ಗಂಡನೊಂದಿಗೆ ಪಾರ್ಕಿನಲ್ಲಿ ಪಾರಿಜಾತದ ಗಿಡದ ಕೆಳಗೆ ಕುಳಿತುಕೊಂಡಿದ್ದಳು. ಗಾಳಿ ಬಂದು ಪಾರಿಜಾತದ ಹೂಗಳು ರಪರಪ ಎಂದು ಆಕೆಯ ಮೇಲೆ ಬಿದ್ದುವು. ಅದನ್ನು ನೋಡಿ ಆಕೆಯ ಗಂಡ ತಮಾಷೆಯಿಂದ ನಕ್ಕುಬಿಟ್ಟ. ಅವಳಿಗೆ ಸಿಟ್ಟು ಬಂದು, ಏನಿದು ರಪರಪ ಮೈಮೇಲೆ ಹೂವು ಬಿದ್ದರೂ ನೋವಾಯಿತೆ ಎಂದು ಕೇಳದೆ ನಿಮ್ಮ ಪ್ರೇಮ ಎಂಥಹುದು ? ನಿಮ್ಮೊಂದಿಗೆ ಬಾಳ್ವೆ ಮಾಡಲಾರೆ, ತೌರು ಮನೆಗೆ ಹೋಗುತ್ತೇನೆಂದು ಹೇಳಿ ಹೊರಟು ಹೋದಳು. ಹೋಗುವ ದಾರಿಯಲ್ಲಿಯೇ ಅಕ್ಕನ ಊರು ಇದ್ದುದರಿಂದ ಅಕ್ಕನಿಗೂ ವಿಚಾರ ತಿಳಿಸಿ ಹೋಗೋಣವೆಂದು ಹೋದಳು. ಅಕ್ಕ ಏನು ಬಂದೆ ಎಂದು ಕೇಳಿದ್ದಕ್ಕೆ ನಡೆದುದನ್ನೆಲ್ಲ ತಿಳಿಸಿದಳು. ಅದನ್ನು ಕೇಳಿ ಅವರ ಅಕ್ಕ ಅಯ್ಯೋ ನಿನ್ನದು ಎಷ್ಟೋ ಉತ್ತಮ ನನ್ನ ಗಂಡನ ವಿಚಾರ ಏನು ಹೇಳಲಿ ? ಮೊನ್ನೆ ರೊಟ್ಟಿ ಮಾಡು ಎಂದು ಹೇಳಿದರು. ಮೂರು ರೊಟ್ಟಿ ಮಾಡಿದೆ. ಹೇಗಿದೆಯೋ ನೋಡೋಣ ಎಂದು ಒಂದು ರೊಟ್ಟಿ ತಿಂದೆ. ರುಚಿಯಾಗಿದ್ದುದರಿಂದ ಮತ್ತೊಂದನ್ನೂ ತಿಂದು ಒಂದು ಗಂಡನಿಗೆಂದು ತೆಗೆದಿಟ್ಟೆ. ಆತ ಎಷ್ಟು ಹೊತ್ತಾದರೂ ಬಾರದ್ದರಿಂದ ಹೊಟ್ಟೆ ಹಸಿಯಿತು. ಅದನ್ನು ತಿಂದು ಬಿಟ್ಟೆ. ಅವರು ಬಂದು ರೊಟ್ಟಿ ಮಾಡಿದೆಯಾ ಎಂದು ಕೇಳಿದರು ನಡೆದ ವಿಚಾರ ಹೇಳಿದೆ. ಅದಕ್ಕೆ ಇಷ್ಟೇನೆ ತಿಂದರೇನಾಯ್ತು ಎಂದು ಬಿಡುವುದೇ ? ಮೂರು ರೊಟ್ಟಿ ತಿಂದಿದ್ದಿ, ಹೊಟ್ಟೆ ನೋಯುವುದಿಲ್ಲವೇ ಎಂದು ಕೇಳಲಿಲ್ಲ ನನ್ನ ಕಟುಕ ಗಂಡ. ಇಂತಹವರೊಂದಿಗೆ ನಾನೂ ಇರಲಾರೆ ನಡಿ ಎಂದು ತಂಗಿಯೊಂದಿಗೆ ತೌರುಮನೆಗೆ ಹೋದರು. ಅವರ ತಾಯಿಯ ಹತ್ತಿರ ಇದ್ದನ್ನೆಲ್ಲ ಹೇಳಿದರು. ಆಗ ತಾಯಿಯು ಅಯ್ಯೋ ನನ್ನ ಮಕ್ಕಳಿರಾ ನಿಮ್ಮ ಕಷ್ಟ ಎಷ್ಟೋ ಉತ್ತಮ, ನನ್ನ ಕಷ್ಟ ಏನು ಹೇಳಲಿ ಮೊನ್ನೆ ನಿಮ್ಮಪ್ಪ ಊಟಕ್ಕೆ ಕುಳಿತಾಗ ನೀರಿಲ್ಲ ಬಾವಿಯಿಂದ ನೀರು ಸೇದಿಕೊಂಡು ಬಾ ಎಂದರು. ನೀರು ಸೇದಿ ತಂದೆ. ಭೇಷ್, ಕೆಲಸದಲ್ಲಿ ತುಂಬ ಜಾಣೆ ಎಂದು ತೋಟದ ಕಡೆಗೆ ಹೋಗಿಬಿಟ್ಟರು. ನೀರು ಸೇದಿದೆಯಲ್ಲ, ಕೈ ನೋವಾಗಲಿಲ್ಲವೇ ಎಂದು ಒಂದು ಮಾತನ್ನೂ ಅನ್ನಲಿಲ್ಲವಮ್ಮ. ನಿಮ್ಮಪ್ಪ ಕಟುಕ, ನನಗೂ ಬಾಳ್ವೆ ಸಾಕಾಗಿದೆ. ನಡೆಯಿರಿ ಹೋಗಿ ಹೊಳೆಗೆ ಹಾರಿಕೊಳ್ಳೋಣ ಎಂದು ಮೂವರೂ ಹೋಗಿ ನದಿಯಲ್ಲಿ ಬಿದ್ದು ಪ್ರಾಣ ಕಳೆದುಕೊಂಡರು. ಯಮಧರ್ಮರಾಯನಲ್ಲಿ ವಿಚಾರಣೆಯಾಗಿ ಕ್ಷುಲ್ಲಕವಾದ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಂಡಿದ್ದೀರಿ. ನೀವು ತಿಗಣೆಗಳಾಗಿ ಹುಟ್ಟಿ ಮನುಷ್ಯರ ರಕ್ತ ಹೀರಿ ಜೀವಿಸಿ ಎಂದು ಶಾಪ ಕೊಟ್ಟ. ಅವರ ವಂಶವೇ ಈಗ ನಮ್ಮ ಮನೆಗಳಲ್ಲಿರುವ ತಿಗಣೆಗಳು. ಇದರಂತೆ ಇಲ್ಲದ ಸಲ್ಲದ ಸಣ್ಣ ವಿಚಾರಗಳಿಗೆ ಅವಿಶ್ವಾಸ ನಿರ್ಣಯವನ್ನು ಮಂಡಿಸುವುದು ಯುಕ್ತವಲ್ಲವೆಂದು ಮಾನ್ಯ ಸೋದರರಿಗೆ ಬಹಳ ವಿನಯದಿಂದ ತಿಳಿಸಬಯಸುತ್ತೇನೆ. ಕಾರಣ ಅವಿಶ್ವಾಸ ಸೂಚಕರು ಇದನ್ನು ಹೇಗೆ ಮಂಡಿಸಿದರೋ ಹಾಗೆಯೇ ವಾಪಸು ತೆಗೆದುಕೊಳ್ಳುವುದು ಬುದ್ಧಿವಂತಿಕೆಯ ಲಕ್ಷಣವೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ಕೊನೆಯದಾಗಿ ''ಎಲ್ಲ ಬಲ್ಲವರಿಲ್ಲ ! ಬಲ್ಲವರು ಬಹಳಿಲ್ಲ ! ಬಲ್ಲಿದ್ದರಿದ್ದೂ ಬಲವಿಲ್ಲ ‖ ಅಡಳಿತ ಎಲ್ಲರಿಗೂ ಇಲ್ಲ ಸರ್ವಜ್ಞ'' ಎಂದು ಸರ್ವಜ್ಞ ಹೇಳಿದ್ದಾನೆ. ಆದುದರಿಂದ ಅವಿಶ್ವಾಸ ನಿರ್ಣಯ ಯಶಸ್ವಿಯಾಗಬೇಕಾದರೆ, ತರುವವರು ಶಿಸ್ತು ಸಂಘಟನೆಯಲ್ಲಿ ಬಲ್ಲಿದರಾಗಬೇಕು, ಪಕ್ಷ ಬಲಯುತವಾಗಿರಬೇಕು, ಅದಕ್ಕೆ ತ್ಯಾಗ, ಸೇವೆಗಳ ತಳಹದಿ ಇರಬೇಕು. ಇಷ್ಟೆಲ್ಲ ಆದರೆ, ನಿಮ್ಮ ಇಷ್ಟಾರ್ಥ ತಾನೇ ನೆರವೇರುತ್ತದೆ. ಕಾರಣ ಅಂತಹ ರೀತಿನೀತಿಗಳಿಲ್ಲ. ನುರಿತು ಯಶಸ್ವಿಗಳಾಗಿ ಅವಿಶ್ವಾಸ ನಿರ್ಣಯ ತರುವುದಾದರೆ ತನ್ನಿರಿ ಎಂದು ನಿರ್ಣಯ ಮಂಡನಕಾರರಿಗೆ ವಿನಂತಿಸಿ ಈ ಠರಾವನ್ನು ನಿರ್ದಾಕ್ಷಿಣ್ಯವಾಗಿ, ಹೃತ್ಪೂರ್ವಕವಾಗಿ ವಿರೋಧಿಸುತ್ತೇನೆ.

†ಶ್ರೀ ಗೋಪಾಲ ಸಾಲೆನ್ಸ (ಮೂಡಬಿದ್ರಿ).—ಸನ್ಮಾನ್ಯ ಅಧ್ಯಕ್ಷರೇ, ಈ ಅವಿಶ್ವಾಸ ನಿರ್ಣಯದ ಬಗ್ಗೆ ವಿವರಗಳನ್ನು ವಿರೋಧ ಪಕ್ಷದ ನಾಯಕರು ಸವಿಸ್ತಾರವಾಗಿ ಸಭೆಯ ಮುಂದೆ ಇಟ್ಟಿದ್ದಾರೆ. ಅಧಿಕಾರದಲ್ಲಿರತಕ್ಕ ಪಕ್ಷದ ಸದಸ್ಯರು ಮಾತನಾಡಿ ಇದನ್ನು ಪ್ರತಿಭಟಿಸಿದ್ದಾರೆ. ವಿರೋಧ ಪಕ್ಷದವರು ಪ್ರಚಾರಕ್ಕಾಗಿ ಈ ಅವಿಶ್ವಾಸ ನಿರ್ಣಯ ತಂದಿದ್ದಾರೆಂದು ಅವರು ಹೇಳಿದರು. ಆದರೆ ಅಂಥ ಉದ್ದೇಶ ಇಲ್ಲ. ಯಾವದೇ ಪಕ್ಷ ಅಧಿಕಾರದಲ್ಲಿ ಬಂದ ಮೇಲೆ ರಾಜ್ಯದ ಐಶ್ವರ್ಯ ಅವರ ಕೈಯಲ್ಲಿ ಬರುತ್ತದೆ. ಅವರು ದೇಶದ ಆಸ್ತಿ ಪಾಸ್ತಿಗಳ ಟ್ರಸ್ಟಿಯಾಗಿರುತ್ತಾರೆ. ಅಂಥ ಕಾಲದಲ್ಲಿ ರಾಜ್ಯದ ಹಣ ನಾಶವಾಗುತ್ತದರೆ ಜನರಿಗೆ ತೊಂದರೆಯಾದರೆ ಹಣ ಸೂರೆಯಾಗುತ್ತಾ ಇದ್ದರೆ ಅಂಥ ಸಮಯದಲ್ಲಿ ಸರಿಯಾದ ರೀತಿಯಲ್ಲಿ ಜನತೆಯ ತಿಳಿವಳಿಕೆಗೆ ತರಬೇಕಾದುದು ಅಗತ್ಯವಾಗಿದೆ ಎಂದು ಪ್ರಜಾಪ್ರಭುತ್ವದಲ್ಲಿ ಇದು ನ್ಯಾಯವಾಗಿದೆ ಎಂದು ಈ ದೃಷ್ಟಿಯಿಂದ ಈ ಅವಿಶ್ವಾಸ ಠರಾವು ತಂದಿದ್ದೇವೆ. ಇದನ್ನು ಸಮರ್ಥಿಸುತ್ತೇವೆ. ಪರ ರಾಷ್ಟ್ರದಲ್ಲಿ ಕೂಡ ಸರಕಾರ ತಪ್ಪು ಮಾಡುವುದನ್ನು ಎಲ್ಲರೂ ಕಂಡಿದ್ದೇವೆ. ಇದು ಏನೂ ಹೊಸದಲ್ಲ. ಇತ್ತೀಚೆಗೆ ಇಂಗ್ಲೆಂಡ್ ದೇಶದಲ್ಲಿ ಒಂದು ಸ್ತ್ರೀ ವಿಷಯದ ಮೂಲಕ ಅಂದರೆ ಕೀಲರ್ ಪ್ರಕರಣದಿಂದಾಗಿ ಮಂತ್ರಿಮಂಡಲ ಅಲ್ಲಾಡಿ, ರಾಜ್ಯದಲ್ಲಿ ಅಲ್ಲೋಲಕಲ್ಲೋಲವಾಯಿತು ಎಂದು ಕೇಳಿದ್ದೇವೆ. ಹಾಗೆಯೇ ನಮ್ಮ ದೇಶದಲ್ಲಿ ಸಂಭವಿಸಿದ ಕೆಲವು ಘಟನೆಗಳ ಮೂಲಕ ಜನರ ವತಿಯಿಂದ ಸಾಕಷ್ಟು ರಕ್ಷಣೆ ಪಡೆಯಲು ಜವಾಬ್ದಾರಿಯಿಂದ ಈ ಅವಿಶ್ವಾಸ ನಿರ್ಣಯ ಮಂಡಿಸಿದ್ದೇವೆ ವಿನಾ ಬೇರೆ ಯಾವ ಉದ್ದೇಶವಿಲ್ಲ. ಅಷ್ಟು ಮಾತ್ರವಲ್ಲದೆ ಈ ಸರಕಾರ ಕೈಕೊಂಡಿರುವ ಯೋಜನೆಗಳ ಬಗ್ಗೆ ಚರ್ಚೆ ಮಾಡಲಾಗಿದೆ. ನಾಲ್ಕನೇ ಯೋಜನೆ ತಯಾರಾಗುವುದರಲ್ಲಿದೆ. ಆದರೂ ಕೂಡ ಜನತೆಯ ಉತ್ಪಾದನಾ ಶಕ್ತಿ ಅಷ್ಟು ಮುಂದೆ ಹೋಗಿಲ್ಲ. ಅಲ್ಲದೆ ಜೀವನಾವಶ್ಯಕವಾದ ಪದಾರ್ಥಗಳ ಬೆಲೆ ಮಿತಿ ಮೀರಿ ಏರುತ್ತಾ ಇದೆ. ಇದರಿಂದ ಸರಕಾರ ಏನು ಪ್ರಗತಿ ಮಾಡುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ. ಜನರ ಉತ್ಪಾದನಾ ಶಕ್ತಿ ಕುಂದಿಸಿದೆ. ಸರಕಾರದ ಯೋಜನೆಗಳು ಪರಿಣಾಮಕಾರಿಯಾಗಿಲ್ಲ. ದೇಶದಲ್ಲಿ ಇಂದು ನಿರುದ್ಯೋಗ ಬೆಳೆಯುತ್ತಿದೆ. ಸಮಾಧಾನ ಶಾಂತಿ ಬೆಳೆದಿಲ್ಲ. ಜನರಿಗೆ ಬೇಕಾಗುವ ನಿತ್ಯ ಜೀವನ ಸಾಮಗ್ರಿ ಬೆಲೆಗಳು ಮಿತಿಮೀರಿ ಏರುತ್ತಿವೆ. ಇದನ್ನು ನೋಡುವಾಗ ಸರಕಾರದ ಯಾವ ಯೋಜನೆಗಳೂ ಪರಿಣಾಮಕಾರಿಯಾಗಿಲ್ಲ, ಇದರಿಂದ ಬಂಡವಾಳ ಶಾಹಿ ಬೆಳೆಯುತ್ತಿದೆ. ಇದಲ್ಲದೆ ಕಳ್ಳಭಟ್ಟಿ, ಕಾಳಸಂತೆ, ಸರಕಾರಿ ಕಂಟ್ರಾಕ್ಟು ಮತ್ತು ಲಂಚಕೋರತನ ವೆಂಬ ಒಂದು ಹೊಸ ರೀತಿಯ ಬಂಡವಾಳ ಶಾಹಿಯೂ ಬೆಳೆಯುತ್ತಿದೆ ಮತ್ತು ದೇಶದ ಹಣ ಸೂರೆ ಮಾಡುತ್ತಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಬಡವರು ಹೆಚ್ಚು ಬಡವರೇ ಆಗುತ್ತಾ ಹೋಗುತ್ತಿದ್ದಾರೆ. ಐಶ್ವರ್ಯವಂತರು ಹೆಚ್ಚಾಗಿ ಇನ್ನಷ್ಟು ಬೆಳೆಯುವ ಸಂಭವ ಕಾಣುತ್ತದೆ. ಬಹು ಸಂಖ್ಯೆ ಜನರು ಅಪಘಾತಕ್ಕೆ ತುತ್ತಾಗಿ ನರಳಬೇಕಾದ ಪರಿಸ್ಥಿತಿ ಬಂದಿದೆ. ಇದನ್ನು ನಿವಾರಿಸುವುದಕ್ಕೆ ಸರಕಾರ ಏನು ಮಾಡಿದೆ? ಎಲ್ಲದಕ್ಕೂ ತುರ್ತು ಪರಿಸ್ಥಿತಿ ಎಂದು ಗಟ್ಟಿಯಾಗಿ ಹೇಳುತ್ತಾರೆ. ಇಂಥ ಗಂಡಾಂತರ ಪರಿಸ್ಥಿತಿಯಲ್ಲಿ ತ್ಯಾಗ ಮಾಡಬೇಕಾಗುತ್ತದೆ. ಅದಕ್ಕೆ ಎಷ್ಟು ಜನ ಮುಂದೆ ಬಂದಿದ್ದಾರೆ? ಮಂತ್ರಿಮಂಡಳ ಸಂಪುಟವನ್ನು ಕಡಿಮೆ ಮಾಡುವ ವಿಷಯ ಏನಾಯಿತು ? ಮಂತ್ರಿಗಳ ಸಂಖ್ಯೆ ಕಡಿಮೆ ಮಾಡಿ, ಮಂತ್ರಿಗಳಿಗೆ ದೊರೆಯುವ ಸವಲತ್ತುಗಳನ್ನು ತ್ಯಾಗ ಮಾಡಿ ಆದರ್ಶವನ್ನು ಇಂದು ನೀವು ಜನತೆಗೆ ತಿಳಿಸಬೇಕಾಗಿತ್ತು. ಎಷ್ಟು ಮಂತ್ರಿಗಳು, ಎಷ್ಟು ಜನ ಉಪಮಂತ್ರಿಗಳು ಮತ್ತು ಎಷ್ಟು ಮಂದಿ ಪಾರ್ಲಿಮೆಂಟರಿ ಸೆಕ್ರೆಟರಿಗಳು ? ಇವರಿಗೆ ಯಾವ ಯಾವ ಇಲಾಖೆ ಹಂಚಿದ್ದೀರಿ ? ಎಷ್ಟೆಷ್ಟು ಫೈಲುಗಳನ್ನು ಪ್ರತಿಯೊಬ್ಬರೂ ನೋಡುತ್ತಾರೆ ? ಇದಕ್ಕಾಗಿ ಒಂದು ಸ್ಟೇಟ್‌ಮೆಂಟ್ ಕೊಟ್ಟು ವಿವರ ತಿಳಿಸಬೇಕು. ಇಷ್ಟು ಜನ ಮಂತ್ರಿಗಳು ಏತಕ್ಕೆ ಬೇಕು ? ಮದ್ರಾಸಿನಲ್ಲಿ 9 ಜನ ಮಂತ್ರಿಗಳು ಇರುವುದನ್ನು 8 ಜನಕ್ಕೆ ಇಳಿಸಿದ್ದಾರೆ. ಅಲ್ಲಿ ಅವರು ಬಹಳ ಸುಗಮವಾಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಯಾವ ಗಂಡಾಂತರವಿಲ್ಲ. ಅವರಲ್ಲಿ ಇಬ್ಬರು ಪರಿಶಿಷ್ಟ ವರ್ಗದ ಮಂತ್ರಿಗಳು ಸಹ ಇದ್ದಾರೆ. ಅಲ್ಲಿ 8 ಜನ ಮಂತ್ರಿಗಳು ಸುಗಮವಾಗಿ ಕೆಲಸ ಮಾಡುತ್ತಿರುವಾಗ್ಗೆ ಇಲ್ಲಿ ನಮ್ಮ ರಾಜ್ಯದಲ್ಲಿ ಇಷ್ಟು ಬಹು ಸಂಖ್ಯೆಯಲ್ಲಿ 27 ಮಂತ್ರಿಗಳು ಏತಕ್ಕೆ ಬೇಕು ? ಮಂತ್ರಿಗಳಿಗೆ ಬೇರೆ ಸವಲತ್ತು ಕೊಟ್ಟು ವೆಚ್ಚ ಮಾಡುವುದರಿಂದ ಪ್ರಯೋಜನವೇನು ? ಅನೇಕ ಸಲ ಕೆಲಸ ಜಾಸ್ತಿಯಾಗಿದೆ ಎಂದು ಸರಕಾರಿ ಪಕ್ಷದವರು ಹೇಳುವುದನ್ನು ಕೇಳಿದ್ದೇವೆ. ಇಷ್ಟು ಜನ ಮಂತ್ರಿಗಳಲ್ಲಿ ಯಾರಾದರೂ ಪ್ರಯಾಣಕ್ಕೆ ಹೋದಾಗ್ಗೆ ಹರಿಜನ ಗಿರಿಜನ ಕೇರಿಗಳಿಗೆ ಅಥವಾ ಮಜೂರು ವಸತಿ ಕೇಂದ್ರಗಳಿಗೆ ಹೋಗಿ ಸಂದರ್ಶನ ಕೊಟ್ಟು ಅವರ ಕಷ್ಟ ಸುಖ ವಿಚಾರ ಮಾಡಿದ್ದಾರೆಯೇ ಸರಕಾರದ ವಾಹನ ಸಿಬ್ಬಂದಿ ಇವುಗಳನ್ನು ಕಾಂಗ್ರೆಸ್ ಪಕ್ಷದ ಹಿತಕ್ಕಾಗಿ ಹೋದಲ್ಲೆಲ್ಲಾ ಉಪಯೋಗಿಸಿಕೊಳ್ಳುತ್ತೀರಿ. ಈ ರೀತಿ ಮಾಡುತ್ತಿರುವುದು ಅಧಿಕಾರದಲ್ಲಿರುವ ಪಕ್ಷದವರು ಹೊರತು ವಿರೋಧ ಪಕ್ಷದವರು ಅಲ್ಲ. ಇದನ್ನು ತಡೆಗಟ್ಟಲೇ ಬೇಕು. ಅಧಿಕಾರಕ್ಕೆ ಬಂದ ಮೇಲೆ ರಾಜ್ಯದ ಹಿತ ದೃಷ್ಟಿ ಇರಬೇಕು. ಮಂತ್ರಿಗಳು ಕೂಡ ರಾಜ್ಯದ ಹಿತದೃಷ್ಟಿಯಿಂದ ಜವಾಬ್ದಾರಿ ವಹಿಸಿಕೊಂಡು ಕೆಲಸ ಮಾಡಬೇಕು. ನಿಮ್ಮನ್ನು

ಸುತ್ತುವರಿದು ಕೊಂಡಂಥ ಜನರ ಗುಂಪಿಗೆ ಮಾತ್ರ ಸಕಲ ಸೌಲಭ್ಯ ದೊರೆಯುತ್ತವೆ, ಅಲ್ಲಿ ಸಾಮಾನ್ಯ ಇತರ ಮನುಷ್ಯನಿಗೆ ನಿಮ್ಮನ್ನು ಕಾಣುವ ಅವಕಾಶ ಕೂಡಾ ಸಿಕ್ಕುತ್ತಾ ಇಲ್ಲ. ಇದನ್ನು ನೀವೇ ವಿಚಾರಿಸಿಕೊಳ್ಳಿ. ಹಣಕಾಸಿನ ಖರ್ಚನ್ನು ಕಡಿಮೆ ಮಾಡಿ ಉಳಿತಾಯ ಮಾಡಿದರೆ ಈ ತುರ್ತು ಪರಿಸ್ಥಿತಿಯಲ್ಲಿ ದೇಶಕ್ಕೆ ಸಹಾಯವಾಗುತ್ತದೆ.

ನಿಮ್ಮ ಆಡಳಿತದಲ್ಲಿ ಯಾರಿಗಾದರೂ ಸಮಾಧಾನವಿದೆಯೇ ಎಂದರೆ ಜವಾನನಿಂದ ಹಿಡಿದು ನಾನ್‌ಗೆಜೆಟೆಡ್ ಆಫೀಸರು, ಗೆಜೆಟೆಡ್ ಆಫೀಸರುಗಳವರೆಗೆ ಯಾರಿಗೂ ಸಮಾಧಾನವಿಲ್ಲ. ಒಂದು ಕಡೆ ಸೀನಿಯಾರಿಟಿ ಲಿಸ್ಟ್ ಆಗಲಿಲ್ಲ ಎಂದು ಹೇಳುತ್ತಾರೆ, ಇನ್ನೊಂದು ಕಡೆ ನಮಗಿಂತ ಜೂನಿಯರ್ಸ್‌ಗೆ ಪ್ರಮೋಷನ್ ಕೊಟ್ಟಿದ್ದೀರಿ ನಮಗೆ ಪ್ರಮೋಷನ್ ಕೊಡಲಿಲ್ಲ ಎಂದು ಹೇಳುತ್ತಾರೆ, ಇನ್ನೊಂದು ಕಡೆ ವೇಕೆನ್ಸಿ ಉಂಟು ಆದರೂ ಕೂಡ ನಮ್ಮನ್ನು ನೇಮಕ ಮಾಡಲಿಲ್ಲ ಎನ್ನುತ್ತಾರೆ, ಇನ್ನೊಂದು ಕಡೆ ಟೂರ್ ಮಾಡುತ್ತೇವೆ ವರ್ಷಾನುಗಟ್ಟಲೆ ಭತ್ಯ ಕೊಡುವುದಿಲ್ಲ. ನಾವೇಕೆ ಟೂರ್ ಹೋಗಬೇಕು ಎನ್ನುತ್ತಾರೆ, ಹೀಗೆ ರಾಜ್ಯದಲ್ಲಿ ಯಾರಿಗಾದರೂ ನಿಮ್ಮ ಸರ್ಕಾರ ನಡೆಸುತ್ತಿರುವಂತಹ ಕೆಲಸಗಾರರಾಗಿರುವಂತಹ ತಮ್ಮ ಸಿಬ್ಬಂದಿಯಲ್ಲಿ ತೃಪ್ತಿ ಇದೆಯೇ ? ಎಲ್ಲಕ್ಕಿಂತ ಹೆಚ್ಚಾಗಿ ಇನ್ನೊಂದು ಕಡೆ 3-4 ತಿಂಗಳು ಸಂಬಳ ಸಿಕ್ಕಿಲ್ಲ. ಕುಟುಂಬ ಜೀವನಕ್ಕೆ ಸಾಕಷ್ಟು ಸಾಲದಿರುವ ಸಂಬಳವೇ ತಿಂಗಳ ಬಾಕಿ ಆದರೆ ಅಧ್ಯಾಪಕರು ಪಾಪ ಯಾವ ರೀತಿ ಜೀವನ ಮಾಡಬೇಕು ? ಮಂಗಳೂರಿನಿಂದ ಇಲ್ಲಿಗೆ ಅವರ ಪ್ರತಿನಿಧಿ ಬರಬೇಕು, ಸಂಬಳ ಕೊಡಿ ಎಂದು ಮಂತ್ರಿಗಳಲ್ಲಿ ಡೆಪ್ಯೂಟೇಷನ್ ಹೋಗಬೇಕು. ಹೀಗಾದರೆ ಯಾವ ರೀತಿ ಅವರಿಗೆ ನಿಮ್ಮಲ್ಲಿ ವಿಶ್ವಾಸ ಉಳಿಯುತ್ತದೆ ? ಎಂದು ಕೇಳುತ್ತೇನೆ.

4-00 P.M.

ಇನ್ನು ಎಲೆಕ್ಟ್ರಿಸಿಟಿ ಬೋರ್ಡುಗಳಲ್ಲಿ ಅಪಾರ ಹಣ ದುರುಪಯೋಗ ಖಾದಿ ಬೋರ್ಡು ಇತ್ಯಾದಿ ವಿಚಾರಗಳನ್ನು ಆಗಲೇ ನಮ್ಮ ಮಿತ್ರರು ಹೇಳಿದರು. ಎಲೆಕ್ಟ್ರಿಸಿಟಿ ಬೋರ್ಡಿನ ವಿಚಾರದಲ್ಲಿ ವಿರೋಧ ಪಕ್ಷದವರು ಆಗುತ್ತಾ ಇರತಕ್ಕ ಲೋಪದೋಷಗಳನ್ನು ಎತ್ತಿಹಿಡಿದರೆ ನಿಮ್ಮ ಕೈಕೆಳಗಿರತಕ್ಕ ವ್ಯಕ್ತಿಗಳ ಸ್ಪಷ್ಟ ಚಿತ್ರವನ್ನು ಹೊರಗಿಡದೆ, ನೀವೇ ಅದರ ಸತ್ಯಾಂಶವನ್ನು ಬಹಿರಂಗಪಡಿಸದೇ ಸುಮ್ಮನೆ ಇರುತ್ತೀರಿ ಎಂದಮೇಲೆ ಎರಡು ಕೋಟಿ ಚಿಲ್ಲರೆ ರೂಪಾಯಿಗಳ ವ್ಯವಹಾರ ಸಣ್ಣ ವಿಚಾರವೇ ಎಂದು ನಾನು ಕೇಳಬೇಕಾಗಿದೆ. ಇದರಂತೆಯೇ ಇನ್ನೂ ಎಷ್ಟೋ ಬೋರ್ಡುಗಳು ಇವೆ. ಅವುಗಳ ಲೆಕ್ಕಾಚಾರ ಇನ್ನೂ ಸಿಕ್ಕಿಲಿಲ್ಲ, ಸಿಕ್ಕುವ ಹಾಗೂ ಇಲ್ಲ.

[MR. DEPUTY SPEAKER in the Chair.]

ಇನ್ನು ಪಾನನಿರೋಧ ಯಶಸ್ವಿಯಾಗಿದೆ ಎಂದು ಹೇಳುತ್ತಾ ಇದ್ದೀರಿ, ಪ್ರಜೆಗಳಿಗೆ ಅದರಿಂದ ಪ್ರಯೋಜನವಾಗಿದೆ ಎಂದು ಹೇಳುತ್ತೀರಿ, ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿದೆಯೋ ನಮಗಂತೂ ಅನುಮಾನವಾಗಿದೆ.

ದೇಶದಲ್ಲಿ ಗೌರವಯುತವಾದ ಜೀವನ ನಡೆಸುವುದಕ್ಕೆ ದಾರಿ ಇಲ್ಲದಂತೆ ಮಾಡಿದ್ದೀರಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇದರಿಂದ ಏನು ಅಪಾಯವಾಗುತ್ತದೆ ಎಂಬುದನ್ನು ತಾವು ನೋಡುತ್ತಿಲ್ಲ. ಪಾನನಿರೋಧದ ನೀತಿಯಿಂದ ಎಷ್ಟೋ ಜನ ನಿರುದ್ಯೋಗಿಗಳಾಗಿದ್ದಾರೆ. ಅಂತಹ ಸಾವಿರಾರು ಜನರಿಗೆ ನೀವು ಇನ್ನೂ ಉದ್ಯೋಗವನ್ನು ಕಲ್ಪಿಸಿಕೊಟ್ಟಿಲ್ಲ. ಅವರು ಯಾವ ರೀತಿ ಜೀವನ ಮಾಡಬೇಕೆಂದು ಹೇಳಿ ದಾರಿ ಮಾಡಿಕೊಟ್ಟಿದ್ದೀರಿ ಎಂದು ನಾನು ಕೇಳಬೇಕಾಗಿದೆ. ಚಿಲ್ಲರೆ ಮಾರಲಿಕ್ಕೆ ಸೊಸೈಟಿಗಳು ಉಂಟು, ನೀರಾ ಪಾನಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ ಎಂದು ಹೇಳುತ್ತೀರಿ, ನಮ್ಮಲ್ಲಿ ಒಂದು ಬೆಲ್ಲದ ಸೊಸೈಟಿ ಇದೆ, ಇವತ್ತಿಗೂ ಕೂಡ ಆ ಸೊಸೈಟಿ ಗೋಡೌನ್ ಕಟ್ಟಲಿಕ್ಕೆ ತೆಗೆದುಕೊಂಡ ಸಾಲ ಏನಾಯಿತು ಎಂಬುದು ಗೊತ್ತಿಲ್ಲ. ಹೀಗಾದರೆ ಏನು ಕೆಲಸ ಮುಂದುವರಿಸಲಿಕ್ಕೆ ಸಾಧ್ಯ ಉಂಟು ಎಂಬುದನ್ನು ನೋಡಬೇಕು. ಪ್ರೊಹಿಬಿಷನ್ ವಿಚಾರಣಾ ಕಮಿಟಿಯವರು ಬಂದಾಗ ಅಲ್ಲಿನ ಪ್ರಮುಖರು ಸ್ಪಷ್ಟವಾಗಿ ಹೇಳಿದ್ದಾರೆ. ಪುತ್ತೂರು ತಾಲ್ಲೂಕಿನ ಬೆಲ್ಲದ ಸೊಸೈಟಿಯಲ್ಲಿ ಒಂದು ಆಣೆ ಕಮಿಷನ್ ಕೊಟ್ಟರೆ ಅದು ಮಾತ್ರ ಲೆಕ್ಕದಲ್ಲಿ ಇರುತ್ತದೆಯೇ ಹೊರತು ಅಲ್ಲಿಗೆ ಬೆಲ್ಲ ಬರಲಿಕ್ಕೂ ಇಲ್ಲ, ಅಲ್ಲಿ ಬೆಲ್ಲ ಮಾರಲಿಕ್ಕೂ ಇಲ್ಲ, ಈ ರೀತಿ ಲೆಕ್ಕಾಚಾರ ಇರುತ್ತದೆ ಎಂದು ಪುತ್ತೂರಿನ ಬಾರ್ ಎಸೋಸಿಯೇಶನಿನ ಅಧ್ಯಕ್ಷರೇ ಹೇಳಿಕೆ ಕೊಟ್ಟಿದ್ದಾರೆ. ನಾನೂ ಸಹ ಒಬ್ಬ ಡೈರೆಕ್ಟರನಾಗಿದ್ದೆ. ನನಗೆ ಇದರವ್ಯವಹಾರ ತಿಳಿದಿದೆ. ಡೆಪ್ಯೂಟಿ ಕಮಿಷನರೇ ಸ್ವತಃ ಹೋಗಿ ಒಂದು ನೀರಾ ಕೇಂದ್ರವನ್ನು ಬಂದುಮಾಡಿಸಿ ಕಳ್ಳಮಾರಾಟದವರ ಮೇಲೆ ನಡೆಸಿದ ಕೇಸು ಇದೆ, ಇದರ ಪರಿಣಾಮ ಏನಾಯಿತು ? ಈ ಅಧಿಕಾರಿಗಳನ್ನು ಬೇರೆಕಡೆಗೆ ಬದಲಾಯಿಸಿದ್ದು ಉಂಟು. ಹೀಗಿರುವಾಗ ಯಾವ

(ಶ್ರೀ ಗೋಪಾಲ ಸಾಲೆನ್ನ)

ರೀತಿ ನಿಮ್ಮ ಪಾನನಿರೋಧ ಯಶಸ್ವಿಯಾಗುತ್ತದೆ ಎಂದು ಕೇಳುತ್ತೇನೆ. ಕಳ್ಳಭಟ್ಟಿ ಸಾರಾಯಿ ಮಾಡಿಕೊಂಡು ನಿಮಗೆ ಬರುವ ಆದಾಯವನ್ನೂ ಕೂಡ ಅವರು ಅಪಹರಿಸುವುದಕ್ಕೆ ಅವಕಾಶ ಕೊಡುವುದರ ಬದಲು ನ್ಯಾಯವಾದ ರೀತಿಯಲ್ಲಿ ಅವರಿಗೆ ಒಂದು ದಾರಿ ಮಾಡಿಕೊಡಬಹುದಲ್ಲಾ—ಲಿಕ್ಕರ್, ಬ್ರಾಂದಿ ಮುಂತಾದುವುಗಳಿಗೆ ಬೇಕಾದರೆ ನೀವು ಇದನ್ನು ಇಟ್ಟುಕೊಳ್ಳಿ. ಶೇಂದಿಗಾದರೂ ಪ್ರೊಹಿಬಿಶನ್ ವಿನಾಯಿತಿಗೊಳಿಸಿ ನಿರುದ್ಯೋಗಿಗಳಾಗಿರತಕ್ಕವರು ಕಳ್ಳತನದಿಂದ ಜೀವನ ಮಾಡುವುದಕ್ಕೆ ಬದಲಾಗಿ ನ್ಯಾಯವಾದ ರೀತಿಯಲ್ಲಿ ಜೀವನ ಮಾಡಲು ಅವಕಾಶ ಮಾಡಿಕೊಡಿ ಎಂದು ಹೇಳುತ್ತೇನೆ.

ನೀರಾವರಿ ಪಂಪ್‌ಸೆಟ್ಟುಗಳನ್ನು ಬೇರೆಬೇರೆ ಇಲಾಖೆಗಳ ಮೂಲಕ ಬೇರೆ ಬೇರೆ ಏಜೆನ್ಸಿಗಳ ಮೂಲಕ ಹಂಚುತ್ತಾ ಇದ್ದೀರಿ. ಅದರಿಂದಾಗಿ ನ್ಯಾಯವಾಗಿ ಸಿಕ್ಕಬೇಕಾದ ಅವಶ್ಯವು ಜನರಿಗೆ ಸಿಕ್ಕುತ್ತಾ ಇಲ್ಲ. ನಾನು ಹಿಂದೆ ಒಂದು ಸಾರಿ ಹೇಳಿದಂತೆ ಇದನ್ನು ಯಾವುದಾದರೂ ಒಂದೇ ಏಜೆನ್ಸಿಗೆ ವಹಿಸಿ ನ್ಯಾಯವಾದ ರೀತಿಯಲ್ಲಿ ಸಿಕ್ಕುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ದೊಡ್ಡದೊಡ್ಡ ಕಾಲುವೆಗಳನ್ನು ಮಾಡುವ ಕಡೆ ಸಣ್ಣಸಣ್ಣ ಕಾಲುವೆಗಳಿಗೆ ಹೆಚ್ಚು ಗಮನ ಕೊಟ್ಟು ಸಣ್ಣ ಕಾಲುವೆಗಳ ಕಡೆ ಗಮನ ಕೊಡದೆ ಸಾವಿರಾರು ಎಕರೆ ಬಂಜರು ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನಾನುಕೂಲವಾಗಿ ಇದರಿಂದ ಜನಗಳಿಗೆ ಯೋಗ್ಯರೀತಿಯಲ್ಲಿ ಫಲದಾಯಕವಾಗಿಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಇನ್ನು ಅಕ್ಕಿ ವಿಚಾರ, ಹ್ಯಾಂಡ್ ಪೌಂಡ್ ರೈಸ್ ಕೈಯಲ್ಲಿ ಕುಟ್ಟಿದ ಅಕ್ಕಿ ಯಾರು ಮಾಡುತ್ತಾ ಇದ್ದಾರೆ ಅವರಿಗೆಲ್ಲಾ ಸಾಲ ಸಿಕ್ಕಿದೆ. ಗ್ರ್ಯಾಂಟ್ ಸಿಕ್ಕಿದೆ. ಅದನ್ನು ಉಪಯೋಗಿಸಿಕೊಂಡು ಕೆಲವು ಕಡೆಗಳಲ್ಲಿ ಮಿಲ್ಲುಗಳನ್ನು ತೆಗೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಕೆಲವು ಕಡೆ ಅಕ್ಕಿ ಯೋಚಿಸಿದಂತೆ ಮಾಡುತ್ತಲೇ ಇಲ್ಲ, ಇದೇ ರೀತಿ ಎಣ್ಣೆ ತೆಗೆಯುವ ಗಾಣ ಇದೆ, ಚರ್ಮ ಹದ ಮಾಡುವುದಿದೆ, ಕೈ ತಯಾರಿಕೆ ಕಾಗದ ಮಿಲ್ ಇದೆ. ಸರಕಾರದ ಹಣ ಪಡೆದಿದ್ದಾರೆ, ಆದರೆ ಚರ್ಮ ಇಲ್ಲ, ಕಾಗದ ಇಲ್ಲ, ಎಣ್ಣೆ ತೆಗೆಯುವುದೇ ಇಲ್ಲ.

ಇಷ್ಟುಮಾತ್ರವೇ ಅಲ್ಲದೆ ಅಲ್ಲಲ್ಲಿ ಒಂದೊಂದು ಚರ್ಮ ಸುಲಿಯುವ ಕೇಂದ್ರವಿದೆ. ಅದನ್ನು ಸರ್ಕಾರದವರೆ ಧನದಿಂದಲೇ ಸ್ಥಾಪನೆ ಮಾಡಿದ್ದಾರೆ. ಅದು ನನ್ನ ಕ್ಷೇತ್ರದಲ್ಲೇ ಒಂದೆರಡು ಇವೆ. ಆದರೆ ಬರಿ ಬೋರ್ಡು ಮಾತ್ರ ಇದೆಯೇ ಹೊರತು ಅಲ್ಲಿ ಕೆಲಸವೇನೂ ನಡೆಯುತ್ತಿಲ್ಲ. ಇನ್ನು ಹರಿಜನರ ಗಿರಿಜನರ ಉದ್ಧಾರಕ್ಕಾಗಿ ಒಂದು ಇಲಾಖೆಯೇ ಇದೆ. ಕೇವಲ ಗಾಂಧಿಭಕ್ತನಾಗಿ, ಅವರ ಜೊತೆಯಲ್ಲೇ ಕೆಲಸ ಮಾಡಿ, ಅವರ ಜೊತೆಯಲ್ಲೇ ಜೈಲಿನಲ್ಲಿದ್ದು, ಸತ್ಯಾಗ್ರಹಕ್ಕಾಗಿ ತನ್ನ ವ್ಯಾಸಂಗವನ್ನು ತೊರೆದು ಕೆಲಸ ಮಾಡಿದಂಥ ಒಬ್ಬ ಹರಿಜನ ವ್ಯಕ್ತಿ ಈ ದಿವಸ ಬೀದಿಯಲ್ಲಿ ಅಲೆಯುತ್ತಿದ್ದಾನೆ. ಹುಚ್ಚನಂತೆ ತಿರುಗಾಡುತ್ತಿದ್ದಾನೆ. ಒಂದುಕಡೆ ಹಾಗಿದ್ದರೆ ಇನ್ನೊಂದು ಕಡೆ ಇತರ ಜಾತಿಗಳವರು ಗಂಡ, ಹೆಂಡತಿ ಇಬ್ಬರೂ ಸರ್ಕಾರದಲ್ಲಿ ಮಂತ್ರಿಗಳಾಗಿದ್ದಾರೆ ಇಲ್ಲವೇ ದೊಡ್ಡ ಸರಕಾರದ ಮಂಡಳಿಗಳಲ್ಲಿ ಅಧ್ಯಕ್ಷರಾಗಿದ್ದಾರೆ. ಇದಕ್ಕೆಲ್ಲ ಏನು ಹೇಳೋಣ? ನಮ್ಮ ಕಾರ್ಕಳದಲ್ಲಿ ಒಂದು ಹರಿಜನರ ವ್ಯವಸಾಯದ ಕಾಲೋನಿ ಇದೆ ಮತ್ತು ನಮ್ಮ ಜಿಲ್ಲೆಯಲ್ಲಿ ಒಂದೆರಡು ಗಿರಿಜನ ವ್ಯವಸಾಯ ಕಾಲೋನಿಗಳಿವೆ.

Mr. DEPUTY SPEAKER.—The time is up.

Sri C. J. MUCKANNAPPA.—Sir, the Speaker has been pleased to say that time is divided between the Opposition and the Ruling Party in the proportion of 50 : 50. There is normally a limit of 20 minutes. But if any Hon'ble Member takes more time that time may be deducted and set off against the total time given to this side of the House.

ಶ್ರೀ ಗೋಪಾಲ ಸಾಲೆನ್ನ.—ನಮ್ಮ ಅಧ್ಯಕ್ಷರ ಕ್ಷೇತ್ರದಲ್ಲಿ ಇಂಥ ಕಾಲೋನಿಗಳು ಎರಡು ಇವೆ ಆದರೆ ಇವುಗಳಿಗೆ ಎಷ್ಟು ಹಣ ಒದಗಿಸಿದ್ದಾರೆ, ಅಲ್ಲಿ ಎಷ್ಟು ಕುಟುಂಬಗಳಿವೆ ಎಂದು ಕೇಳಿದರೆ ಅಲ್ಲಿ ಒಂದೂ ಇಲ್ಲ. ಹೀಗೆ ಪುತ್ತೂರಿನಲ್ಲಿ ಒಂದು ಷೆಡ್ಯೂಲ್ ಟ್ರೈಬಿನ ಕಾಲೊನಿ ಇದೆ. ಅಲ್ಲಿಗೆ 20 ಕೋಣಗಳನ್ನು ಕೊಟ್ಟಿದ್ದರು. ಅವು ಈಗ ಒಂದೂ ಇಲ್ಲ. ಎಲ್ಲವೂ ಸತ್ತುಹೋಗಿವೆ. ಅವರನ್ನು ಇಂದು ಕೇಳತಕ್ಕವರೇ ಇಲ್ಲ. ರಾಜ್ಯದ ಸೋಷಿಯಲ್ ವೆಲ್‌ಫೇರ್ ಬೋರ್ಡಿನ ಸದಸ್ಯರೆಲ್ಲರೂ ಅವರು ಪಾಸ್‌ಮಾಡಿದ ನಿರ್ಣಯಗಳಿಗೊಂದಕ್ಕೂ ಸರ್ಕಾರ ಬೆಲೆ ಕೊಡದೆ ಇದ್ದುದರಿಂದ ಅವರೆಲ್ಲರೂ

ಸರಕಾರದ ವರ್ತನೆಯನ್ನು ಪ್ರತಿಭಟಿಸಿ ಅವರ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಹಾಗೂ ಅವರು ಈ ಸರ್ಕಾರದ ಧೋರಣೆ ಬಗ್ಗೆ ತಮ್ಮ ಪಶ್ಚಾತ್ತಾಪವನ್ನು ಸೂಚಿಸಿದ್ದಾರೆ. ಆದರೆ ಈ ಹರಿಜನರ ಉದ್ಧಾರಕ್ಕಾಗಿ ಘಟನಾತ್ಮಕದಲ್ಲಿ ಹೇಳಿರುವ ಪ್ರಕಾರ ಈ ಸೋಷಿಯಲ್ ವೆಲ್‌ಫೇರ್ ಬೋರ್ಡು ಸ್ಥಾಪಿತವಾಯಿತು. ಹಾಗಿದ್ದರೂ ಇದನ್ನು ಏನೋ ಕೇವಲ ಇದೂ ಸಹಾ ಒಂದು ಸಾಮಾನ್ಯ ಚಿಕ್ಕ ಇಲಾಖೆಯೆಂದು ತಿಳಿದುಕೊಳ್ಳುವುದು ಶುದ್ಧ ತಪ್ಪು ಮತ್ತು ಹಾಗೂ ದೇಶಕ್ಕೆ ದ್ರೋಹ ಮಾಡಿದ ಹಾಗೆ ಆಗುತ್ತದೆ. ಕಾರಣ, ಹರಿಜನ, ಗಿರಿಜನ ಮತ್ತು ಹಿಂದುಳಿದ ಜನರ ಸುಧಾರಣೆ ಘಟನಾಬದ್ಧವೆಂಬುದನ್ನು ಯಾರೂ ಮರೆಯಬಾರದು.

ಇನ್ನು ಆಸ್ಪತ್ರೆಗಳ ವಿಚಾರಕ್ಕೆ ಬಂದರೆ, ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ. ಕೆಲವು ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲ. ಕೆಲವು ಆಸ್ಪತ್ರೆಗಳಲ್ಲಿ ಮಿಡ್‌ವೈಫುಗಳಿಲ್ಲ. ಇಂಥ ಆಸ್ಪತ್ರೆಗಳಿದ್ದರೆ ಏನು ಪ್ರಯೋಜನ? ಇವನ್ನಾದರೂ ಏರ್ಪಡಿಸಿದ ಇಂಥ ಸರ್ಕಾರ ಇದ್ದರೇನು ಪ್ರಯೋಜನ? ಜನತೆ ಕಂಗೆಟ್ಟಿದೆ, ಭವಿಷ್ಯದ ಕುರಿತು ಅನುಮಾನದಲ್ಲಿದೆ, ಆದುದರಿಂದ ಈ ಸರ್ಕಾರ ಕೂಡಲೇ ರಾಜೀನಾಮೆ ಕೊಡುವುದು ಉತ್ತಮ. ನಾಳೆ ನಾವೇನೂ ಇವರನ್ನು ಚುನಾವಣೆಗಳಲ್ಲಿ ಡಿಫೀಟ್ ಮಾಡುವುದಿಲ್ಲ. ಅವರೇ ಪುನಃ ಜನತೆಯ ವಿಶ್ವಾಸಗಳಿಸಿ ಬರಲಿ. ಇದು ಪ್ರಜಾಪ್ರಭುತ್ವ. ಇಷ್ಟು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†SRI M. SRINIVASA NAIK (Mangalore-I).—Sir, rise to oppose the no-confidence motion moved by the Members of the Opposition against the Government and against the Council of Ministers.

Sir, I have heard with rapt attention to the speech made by the Leader of the Opposition for nearly one hour. I do not think that he has made out any case. What he has been saying to-day were stated on the floor of this House by him and his colleagues six months ago and he knows very well that all the points that he raised on that occasion were replied to by the Government and the Chief Minister and the motion moved by them was thrown out. Now again, they have tried to bring up this motion. I dont know with what object. I could see that the only objective that may be possibly there, is that this session is carried on till the 14th. For whatever reason, I do not know. I cannot attribute any reason to that. I could also say that they have wasted about 3,200 of the rate-payers' money which otherwise could have been usefully used to see that certain Bills that are before this House...

SRI K. LAKKAPPA.—I rise to a point of order. Is it in order for the Hon'ble Member to say that we have wasted the money and will the Hon'ble withdraw that word?

SRI M. SRINIVASA NAIK.—I am entitled to say what I feel about it.

SRI K. LAKKAPPA.—The word 'wasted' that was used may kindly be ordered to bee xpunged.

SRI. G. V. GOWDA.—We have a constitutional guarantee: if supposing the members feel that they have no confidence in the Government, it is a constitutional right to move a vote of no confidence.

SRI C. J. MUCKANNAPPA.—He says, money is wasted. It is a constitutional guarantee to the Members.

SRI G. V. GOWDA.—My Hon'ble friend wants to make out that the Hon'ble Members of the Opposition are wasting the money to the extent of Rs. 3,200 by moving this sort of a motion. Is it proper on his part to make such an allegation when there is a constitutional guarantee given to us.

Mr. DEPUTY SPEAKER.—One thing I wish to tell the Hon'ble Members is that all the discussions in this House are taken to be serious and that no Hon'ble Member, as such, tries to waste the time of this House. If that is the view that the Members take it is wrong. But he is entitled to take the view that no confidence motion will be of no avail. It is his opinion, but so far as to say that the money is wasted, if something is discussed here in this House, is not proper.

Sri M. SRINIVASA NAIK.—What I wanted to say is that last time when the Opposition Members moved a no confidence motion against the Government they had a catalogue of points 10 or 12. This time there is bankruptcy of any points to be raised, because no points have been raised. It only says that this House has no confidence against the Council of Ministers; I do not know why this time they have not enumerated any points, most probably they did it in a hurry or they had no time to indicate on what points they attack the Government. I have heard the Leader of the Opposition. He has talked about Sharavathi. What is the difficulty about Sharavathi. (Interruption from Sri Revanasiddappa). I would request you to see that I am allowed to speak without any interruption, because we have allowed them to speak uninterruptedly.

Sri C. J. MUCKANNAPPA.—He is compelling me to raise a point of order. It is the power of the Chair whether to allow any member to speak uninterruptedly or not. He says that they have allowed us to speak uninterruptedly. He takes away the powers of the Chair. It is the Chair that has allowed us to transact business without any disturbance. Let him appeal to the Chair not to be interrupted.

Mr. DEPUTY SPEAKER.—The Hon'ble Member heard wrong words. He was requesting the Chair to allow him to speak uninterruptedly. There is no point of order.

Sri M. SRINIVASA NAIK.—The Opposition seems to take the responsibility upon themselves to represent the people of the State, but I should say that the people of this State has already given their verdict that they have confidence in the Congress Party and the Congress Party.

Sri S. GOPALA GOWDA.—May I know the percentage of votes obtained by them?

Sri M. SRINIVASA NAIK.—There is no substance to support their claim. I think members are losing their temper and they want to disturb me because I want to show to the people of the State that the Congress Party do mean business and that they do represent the will of the people and that the pledge given to them at the time of election when we are sent to office we have been duly discharging in their interests. The Opposition have tried to raise a point. If I say out of ignorance they might raise an objection; I should say that they have not tried to get correct information or they do not like to get correct statistics before they raise any point in attacking the Government. Speaking about Sharavathi, some files have gone to the Advocate General; some files are in the court; some files in the Law Department. They are collected before any enquiry could be held, before the Chief

Minister can decide on the matter. When the Chief Minister has convincingly said......

Sri C. J. MUCKANNAPPA.—It is the Chief Minister's statement that the files are missing.

Sri M. SRINIVASA NAIK.—My regret is not because they have moved a no confidence motion but because they have not taken care to study the matter fully well. If the people of the State are wise enough to judge what the Opposition has been trying to say–because tomorrow morning it will all come in the papers–they will know what they have said about Government; they have said nothing. About Sharavathi, the same old repetition; it is only repetition of the old stunt played by the Opposition and most probably.....

Sri K. LAKKAPPA.—On a point of order. He is using the word 'stunt'; I want to know whether it is parliamentary or unparliamentary.

Mr. DEPUTY SPEAKER.—'Stunt' is not an unparliamentary word.

Sri M. SRINIVASA NAIK.—When the Opposition move a no confidence motion elsewhere they may be sufficient cause for them, but I should say that there is no such cause for a motion of no confidence to be moved against the Council of Ministers of this Government because this Government has been discharging its duties very ably and I should say that the points made out by the Opposition are not based on any statistics or facts and it is only a repetition of the old thing that was said when they moved the first no confidence motion against the Government, which has been thrown out by this House.

The Leader of the Opposition has referred to 'Tulabhara'. What is wrong in setting a target? The Sponsors of 'Tulabhara' said "We want to weigh the Chief Minister with gold. Please see that sufficient quantity of gold is collected. It speaks of the popularity of the Chief Minister. It is necessary that the sponsors should have a target. They cannot say that he weighs 10 maunds of gold. It should be against a target. What the sponsors have done, is they have set a target. They said "The Chief Minister who is a very popular figure in the whole of the State, especially in those parts, is going to be weighed against gold. Please see that sufficient quantity of gold is made available." We cannot attach much importance to the incidental expenditure that might have been incurred in collecting this gold which has been very necessary and vital for the defence of our country.

To-day, every one of us are committed to the defence of our country. Those who have given gold are fully aware of the donations that they have made will be for the defence of our country and we shall not question the integrity or their desire to give gold for the defence of the nation against Chinese aggression.

4-30 P.M.

Then, reference was made to the Electricity Board. What has the Electricity Board done? They have floated a big loan to purchase certain materials from overseas. The money had to remain idle until

(SRI M. SRINIVASA NAIK)

the goods are received in India. So, they have invested the money in the bank. And, which are the banks in which they have invested? They have invested the money with the banks which have given them money. Sir, is it not fair to invest the money in the banks which have given them loan? We must understand the position before accusing the bank or the Board. I would say that a little painstaking on the part of the Members on the opposition will prove that the Board has taken a very wise decision. Because the money could not be kept in the bank idle, it is invested only as a short deposit. It is not permanently kept in the bank. It is only for some time only till goods are received and the bills will have to be paid. Sir, the two Members of the Board to whom the Leader of the Opposition referred to are people with vast experience and influence and their service is required by the Board. So, we shall not question their appointment as members. It would be sufficient to say that the Electricity Board has not committed any mistake. If the Hon'ble Members on the opposition have a little patience to see and go through the matter and consult the Deputy Minister concerned, they will find out that there is no substance absolutely about the charges levelled against the Government as far as the Electricity Board is concerned.

Sir, my friends on the opposite have used the name of Mahatma Gandhi on more than one occasion. The Leader of the Opposition used it for one dozen times and Sri Gopal Salenna used it half-a-dozen times. I think that by using the name of Mahatma Gandhi they could arouse the sympathy of the public. But, people are wise enough to distinguish what is good and bad and because they have used the name of Mahatma Gandhi, it cannot be taken that everything they have said is correct and gospel truth.

(*Interruption.*)

Sir, they are disturbing me and I may be given some more time if my time is taken away by this.

Sir, the Leader of the Opposition was trying to attack the Education Department. I do not know what wrong has been done by the Education Ministry. They have given freeships in the secondary schools for students whose parents' income is below Rs. 2,400 per year. Sir, we are committed only to give primary education. This Government, our Government, Mysore Government, for the first time in the whole country has given this concession to the students of the secondary schools. That shows, at least 98 per cent of the children in this State are to-day getting freeship in the secondary schools. So, to that extent we have made a big progress. Not only this, we have given the triple benefit to the teachers which no other State has given. This is certainly a matter to congratulate the Education Ministry of this State for having done such a laudable deed.

Sir, my friends on the opposite had something to say about the Finance Minister. He has been most judicial and he has done his job

freely. We know that in these times of stress and strain how onerous it isto hold the financial port-folio. It is the ability of the Finance Minister that has helped him and given him strength to discharge the onerous duty that is entrusted to him. When taxes are to be collected, it has to be collected with sympathy and those who pay should not be made to feel that they are made to pay through their nose. They should be made to feel that they are paying through-will and freely. That is why, the Finance Minister, whenever he goes on tour, is good enough to contact all Business House and Chambers of Commerce and try to explain to them the policy of the Government in regard to taxes. At the higher level also the Prime Minister has accepted to address the Chambers of Commerce of India and it is not a new thing that our Finance Minister has done for the first time in this country.

About food prices, Sir, our friends on the opposite had tosay something. If I use the word 'ignorance' they may object; so, I would not use that word. Sir, now, rice is being sold at a lower rate than what it was at this time last year. The production in the country is going up. The farmers are happy and pleased because the crops this year is plentiful. The Agricultural Department has done its best to give the farmers proper advise to see that proper crops are raised. I have seen many agriculturists and they say that they were saying all these years that crops were bad but this year due to the various help given by Government, the crops are very good this time. The Agricultural Ministry has to be congratulated for the very good work turned out in the development of agriculture in the State.

My friend Sri Salenna referred to the shortage of doctors in the State. Perhaps he has forgotten the short-notice question which was discussed here on the other day. To his satisfaction the Minister for Health informed him that the Government have called for applications and appointments are going to be made through the Public Service Commission. Things have moved so far that by this time, they might have been appointed. Anyway, it is wrong on his part to raise that issue at this time, when a no-confidence motion is under discussion. To raise that point is so irrelevant, and it is absolutely wrong and has no bearing on the present issue before Government. The points to be made out in a discussion of this kind should be such that the Goverment should have nothing to say against them. They must bow down and say "Thank you for bringing such good points to our notice". What does it matter to the Opposition if this set of Ministers quit office. Again some Congress Ministers will adorn the treasury benches. How far would it help the Opposition. It will not help them to be installed on this side. We Congressmen are a well-knit body, disciplined body and whoever adorns the treasury benches will have our full backing.

My friend the Leader of the Opposition referred to the size of the ministry. What does it matter if the ministry is 27 or even 30. It is the intention of the Government to see that the work of the Government is carried on smoothly and efficiently. If the Chief Minister as the Leader of the House feels that he requires 27 ministers to discharge his

(SRI M. SRINIVASA NAIK)

duties in Government, it is his look out. We are not here to say: 'you carry on the Government with 8 Ministers'. We on this side or the Members on the other side are concerned with the efficient working of the Government. It is the execution of the plans and good work by Government that would benefit the people. If the Chief Minister feels that he should have 27 Members in the Council of Ministers to discharge their duties efficiently and expeditiously, to see that the promises given to the voters are fulfilled before we go to the polls in 1967, it is his look-out. There is nothing for us to say. Tomorrow, if the size of the cabinet is reduced, the Opposition Members would say that there is lethargy in the Government, each Minister is saddled with half-a-dozen portfolio and that files do not move. After all, if the Opposition wants to give a bad name, they would do it in any way. Any stick is good enough to beat. Before we criticise the Government we should know whether we should do it and by doing it any purpose would be served and any benefit would accrue to the people. By having brought a no-confidence motion of this type, they are not serving the cause of the people. I should say, as I said earlier, we should not do anything which would result in waste of public funds. I would have appreciated the no-confidence motion moved by my friend if Members of the Opposition had said 'We are not going to receive our D A. for to day and to-morrow'. I would have said that they have done it in public interest but now I have a right to say that they are wasting public funds. No useful purpose had been served by sending a motion of this type because no case has been made out against the Government or against any department of Government. I wanted to reply to every point raised by the Leader of the Opposition but...

Mr. DEPUTY SPEAKER.—The Hon'ble Member cannot possibly reply to all points within the time at his disposal. Already his time is up. He must close now.

Sri M. SRINIVASA NAIK.—I will sit down, Sir, with a happy heart

ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಟೀಕೆಗಿಂತ ವಿಮರ್ಶಾತ್ಮಕವಾದ ಸಲಹೆಗಳಿಗೆ ಪ್ರಾಮುಖ್ಯತೆ ಕೊಟ್ಟು ಮಾತನಾಡಬೇಕೆಂದಿದ್ದೇನೆ. ಈ ಅವಿಶ್ವಾಸ ನಿರ್ಣಯ ಎಂದರೆ ಈ ಸಲದ್ದು ಈಗ ಏತಕ್ಕೆ ಬಂದಿದೆ? ಇದಕ್ಕೂ ಹಿಂದಿನದಕ್ಕೂ ಏನಾದರೂ ಸಂಬಂಧವಿದೆಯೇ? ಇದರ ಹಿನ್ನೆಲೆ ಏನು? ಎಂದು ಇಷ್ಟಕ್ಕೆ ಉತ್ತರವನ್ನು ಒದಗಿಸಿದರೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ.

ಹಿಂದಿನ ಸಲಕ್ಕಿಂತ ಈಸಲ ಒಂದು ವಿಚಾರ ಗೊತ್ತಾಗುತ್ತದೆ. ನಮ್ಮ ಟೀಕೆ ಟಿಪ್ಪಣಿಗಳನ್ನೆಲ್ಲ ಪೂರ್ತಿ ಅಲಕ್ಷ್ಯ ಮಾಡಿದ್ದಾರೆ. ನೆಹರೂರವರು ಮಾತಿನಲ್ಲಿ ಹೇಳುವುದಾದರೆ ಈ ಸರ್ಕಾರ ವುಡನ್ ಸರ್ಕಾರವಾಗಿದೆ. ಅದಕ್ಕೋಸ್ಕರವೇ ಬ್ರಿಟಿಷರು ನಮ್ಮ ದೇಶದಿಂದ ಆಚೆಗೆ ಹೋಗಬೇಕು ಎಂದು ನೆಹರೂ ಅವರು ಹೇಳುತ್ತಿದ್ದರು. ಈ ದೃಷ್ಟಿಯಿಂದ ಸರ್ಕಾರದ ರೀತಿ ಇನ್ನೂ ಹದಗೆಟ್ಟಿರುವುದು ಗಮನಾರ್ಹ. ಅಂದರೆ ಟೀಕೆಗೆ ಗಮನ ಕೊಟ್ಟಿಲ್ಲ.

ಎರಡನೇಯದಾಗಿ ನಮ್ಮ ವಿರೋಧ ಪಕ್ಷದಲ್ಲಿ ನೋಡಿದರೆ ಅವಿಶ್ವಾಸ ನಿರ್ಣಯಕ್ಕೆ ಪರವಾಗಿ ನಿಂತಿರುವವರ ಸಂಖ್ಯೆ ಜಾಸ್ತಿ ಆಗಿದೆ. ಇನ್ನೊಂದು ಏನೆಂದರೆ ಕಾಂಗ್ರೆಸ್ಸಿನವರೇ ಒಪ್ಪಿಕೊಂಡಿದ್ದಾರೆ. ಏನೆಂದರೆ ಆರ್ಥಿಕವಾಗಿ ನಮ್ಮ ದೇಶ ಮುಂದುವರೆದಿಲ್ಲ, ಎಲ್ಲೆಲ್ಲಿ ನೋಡಿದರೂ ಭ್ರಷ್ಟಾಚಾರ

ವಾಗಿದೆ, ಆರ್ಥಿಕ ಬೆಳವಣಿಗೆಯ ವಿಫಲತೆಯಿಂದ ಅವನತಿಯುಂಟಾಗಿದೆ. ಆ ದೃಷ್ಟಿಯಿಂದ ಕಾಮರಾಜ್ ಪ್ಲಾನ್ ಏನಿದೆ ಅದನ್ನು ಒಪ್ಪಿಕೊಂಡಿದ್ದಾರೆ. ಯಾವ ಸ್ಟೇಟಿನಲ್ಲಾಗಲೀ ಹೀಗೆ ಸುಮ್ಮನೆ ವಿಳಂಬ ಮಾಡಿ ಕಾಲ ತಳ್ಳಬೇಕು ಎನ್ನುವಂತಿಲ್ಲ. ಆ ಪ್ರತಿಭಾವಂತ ಮುಂದಾಳತ್ವ ಈ ಸರ್ಕಾರಕ್ಕೆ ಇಲ್ಲ. ಈ ಮಂತ್ರಿ ಮಂಡಲ ನಿಜವಾಗಿಯೂ ಸಾಯದೆ ಇರುವ ಸತ್ತ ಮಂತ್ರಿಮಂಡಲವೇ ಹೊರತು ನಿಜವಾದ ಪ್ರತಿಭೆ ತೇಜಸ್ಸು ಒಂದೂ ಈ ಸರ್ಕಾರಕ್ಕೆ ಇಲ್ಲ. ಕಾರಣವೇನು ? ಮಂತ್ರಿ ಮಂಡಲ ಎಂದರೆ ಏನು ಎನ್ನುವುದು ಮುಖ್ಯವಾದ ಪ್ರಶ್ನೆ. ಇದಕ್ಕೆ ಶಕ್ತಿ ಎಲ್ಲಿಂದ ಬರುತ್ತದೆ ! ನಿಜವಾಗಿ ಸರ್ಕಾರ ಎಂದರೆ ಶಕ್ತಿ ಕೇಂದ್ರ, ಶಕ್ತಿ ಕೇಂದ್ರ ಹೇಗೆ ಬರುತ್ತದೆ ಎನ್ನುವುದು ಮುಖ್ಯವಾದ ವಿಷಯ ಇದರಲ್ಲಿ. ಒಂದು ಮಾತನ್ನು Resources and Econome Committey ವರದಿಯಲ್ಲಿ ಹೇಳಿದ್ದಾರೆ. ಈ ಮಂತ್ರಿಗಳು ಮಂತ್ರಿತ್ವವನ್ನು ಮಾಡುವುದಕ್ಕೆ ಬಾರದೆ ಸುಮ್ಮನೆ ಕುಳಿತಿದ್ದಾವೆ ಎಂದು. Policy Matter ಅನ್ವಯವಾಗಿದೆಯೇ, ಇಲ್ಲವೇ ಎನ್ನುವುದನ್ನು ನೋಡುವುದಕ್ಕೆ ಬದಲಾಗಿ I.C.S. ಆಫೀಸರುಗಳಿಗೆ ಆಡಳಿತ ಏನು ಬರುತ್ತದೆ ಎಂದು ಆಡಳಿತದಲ್ಲಿಯೂ ಕೈ ಹಾಕುವುದಕ್ಕೆ ಹೋಗುತ್ತಾರೆ....

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಮಂತ್ರಿಗಳು ನಪುಂಸಕ ಲಿಂಗದಲ್ಲಿ ಕುಳಿತಿದ್ದಾವೆ ಎಂದು ಹೇಳುತ್ತಾರೆ.

Mr. DEPUTY SPEAKER.—Hon'ble Member on this side or on the other side have to be respected and such terms should not be used while referring to Members.

Sri V. M. DEO.—I would like to correct myself if the Chair could point out the word to which objection is taken.

Mr. DEPUTY SPEAKER.—ಕೂತಿದ್ದಾವೆ does not look nice. It is not the proper word to refer to any member, either on this or the other side. The Hon'ble Member should use terms of respect whenever he speaks of individuals or groups of individuals.

ಶ್ರೀ ವಿ. ಎಂ. ದೇವ್.—ಮುಖ್ಯವಾಗಿ ಇದರ ಹಿನ್ನೆಲೆ ಏನು ? ಎಂಬುದನ್ನು ಹೇಳಬೇಕಾಗಿದೆ. ನಾನು ಹೇಳುವುದರಲ್ಲಿ ಏನಾದರೂ ತಪ್ಪು ಆಗಿದ್ದರೆ ಅದಕ್ಕೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ.

ನಿಜವಾಗಿಯೂ ಮಂತ್ರಿ ಮಂಡಳ ಒಂದು ಶಕ್ತಿ ಕೇಂದ್ರ. ಧ್ಯೇಯದ ಪಾಲಿಸಿಗೆ ಅನುಗುಣವಾಗಿ ಅಡ್ಮಿನಿಸ್ಟ್ರೇಶನ್ ಮಾಡುವಾಗ್ಗೆ ಮಂತ್ರಿ ಮಂಡಳ ಇರುತ್ತದೆ. ಆದರೆ ಈಗ ಅದು ಏನಾಗಿದೆ ಎಂದರೆ ಧ್ಯೇಯದ ಅರಿವಿಲ್ಲದೆ Administration ಸರ್ವಸ್ವ ಎಂದು ತಿಳಿದಿರುವುದರಿಂದ ಸಾಯದಂತೆ ಇರೋ ಸತ್ತ ಮಂತ್ರಿ ಮಂಡಳ ಇದು ಆಗಿದೆ ಎಂದು ಹೇಳಬಹುದು. ಪಂಚವಾರ್ಷಿಕ ಯೋಜನೆ ಕಾರ್ಯಗತ ಮಾಡಲು ಮುಂದೆ ಇಟ್ಟುಕೊಂಡಿದೆ. ಸರಕಾರದ ಪಾಲಿಸಿ ಚರ್ಚೆ ಮಾಡುತ್ತೇವೆ. ಪಂಚವಾರ್ಷಿಕ ಯೋಜನೆ ಎಂದರೆ ಏನು ಎಂಬುದು ತಿಳಿದಿರುವವರು ಮಂತ್ರಿ ಮಂಡಳದಲ್ಲಿ ತೀರ ಕಡಿಮೆ ಇದ್ದಾರೆ. ಮಂತ್ರಿ ಮಂಡಳ ರಚನೆ ಮಾಡುವುದಕ್ಕೆ ಅನ್‌ಚಾರಿಟೆಬಲ್ ಇಲ್ಲ. ಆದರೆ ಇರತಕ್ಕಂಥ ಅತಿ ಹೆಚ್ಚು ಸಂಖ್ಯೆ ಮಂತ್ರಿಗಳು ತತ್ವ ಬಾಹಿರರಾಗಿದ್ದಾರೆ. ಕೈಗಾರಿಕಾ ಮಂತ್ರಿಗಳು ಕೊಡಗಿನಲ್ಲಿ 19-3-1962ರಲ್ಲಿ ಒಂದು ಮಾತು ಹೇಳಿದ್ದರು. "ನಾನು ಮಂತ್ರಿ ಮಂಡಲದಲ್ಲಿರುವುದು ದೊಡ್ಡ ನೀರಾವರಿ ಯೋಜನೆಗೆ ಅಡ್ಡಿ ಮಾಡಲು ಮತ್ತು ಸಾರ್ವಜನಿಕ ಕೈಗಾರಿಕೆ ಅವನತಿಗೊಳಿಸಲು ಎಂದು." ಇಂಥವರು ಮಂತ್ರಿ ಮಂಡಲದಲ್ಲಿರುವುದು ಅಂಥವರನ್ನು ಮಂತ್ರಿಯಾಗಿ ತೆಗೆದುಕೊಂಡಿರುವುದು ತಾತ್ವಿಕ ವ್ಯಭಿಚಾರವಾಗುವುದಿಲ್ಲವೇ ಎಂದು ನಾನು ಕೇಳುತ್ತೇನೆ. ಇನ್ನು ಮಾನ್ಯ ಮಂತ್ರಿಗಳಾದ ಶ್ರೀ ರಾಮರಾಯರನ್ನು ತೆಗೆದುಕೊಳ್ಳಿ. ಅವರಲ್ಲಿ ಜನತೆಯಿಂದ ದೂರವಿರುವ ಮಡಿವಂತಿಕೆ ಇದೆ. ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಕ ವಿಚಾರದಲ್ಲಿ, ನನಗೆ ಗೊತ್ತಿರುವ ಹಾಗೆ ಕಮ್ಯುನಲ್ ಆಂಗಲ್ ಮೇಲೆ ಮಾಡಿದ್ದಾರೆ. ಜಾತ್ಯಾತೀತ ರಾಷ್ಟ್ರದಲ್ಲಿ ಹೀಗೆ ಮಾಡುವುದಕ್ಕೆ ಕಾರಣವೇನು ? ಈ ಬಗ್ಗೆ ಸರಕಾರದ ಪಾಲಿಸಿ ಸರಿಯಾಗಿಲ್ಲ. ಇದರಿಂದ ಏನಾಗುತ್ತದೆ ಎಂದರೆ ಶಕ್ತಿ ಕೇಂದ್ರ ನಾಶವಾಗುತ್ತದೆ. ತತ್ವ ಬಿಟ್ಟು ನಡೆದುಕೊಂಡ ಹಾಗೆ ಆಗುತ್ತದೆ. ತತ್ವಜ್ಞಾನ ಮಾತ್ರ ಹೇಳುತ್ತೀರಿ. ಆದರೆ ಅದಕ್ಕೆ ಸರಿಯಾಗಿ ಕಾರ್ಯಾಚರಣೆ ಇಲ್ಲ. ನಿಮಗೆ ಏನಾಗಿದೆ ಎಂದರೆ ಓದಿ ಓದಿ ಕಟ್ಟ ಕೂಚು ಭಟ್ಟ ಎಂಬಂತೆ ಆಗಿದೆ. ಹಾಗೆಯೇ ಗೃಹಮಂತ್ರಿಗಳು ರಾಷ್ಟ್ರಪಿತನಿಗೆ ಅಪಚಾರ ಮಾಡುವ ಕಾಯಿದೆಯೆಂದು ಹೇಳಿದರೂ ಕೇಳಲಿಲ್ಲ. ಮಂತ್ರಿಗಳಾಗಿರಬೇಕಾದ ವ್ಯಕ್ತಿತ್ವ ಇಂದು ನಿಮಗೆ ಇಲ್ಲ. ಎಲ್ಲ ರೀತಿಯಿಂದಲೂ ಜನತೆಯನ್ನು ಬಂಧನ ಮಾಡಲು ಪ್ರಯತ್ನ ಮಾಡಿ ಬಿಟ್ಟು ಕೊಡುತ್ತಿದ್ದೀರಿ. ನಿಮ್ಮ ಪ್ರಯತ್ನಗಳು ಹದಗೆಟ್ಟಿವೆ. ಯಾವ ಕೆಲಸ ಕಾರ್ಯಗಳನ್ನು ನೋಡಿದರೂ ಕೂಡ ವ್ಯಭಿಚಾರ ನಡೆದಿದೆ. ಇದು ಸರಿಯಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವ್ಯಭಿಚಾರ ಆ ಕಡೆ ಇದೆಯೋ ಈ ಕಡೆ ಇದಿಯೋ ?

ಶ್ರೀ ವಿ. ಎಂ. ದೇವ್.—ಇನ್ನೊಂದು ವಿಷಯ ಏನೆಂದರೆ ಇದರೊಳಗೆ ಕೆಲವರು ಇದ್ದಾರೆ. ನನಗೆ ಅನಿಸುತ್ತದೆ ಕೆಲವರು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದಾರೆ. ಪಂಚವಾರ್ಷಿಕ ಯೋಜನೆ ಬಗ್ಗೆ ನಮ್ಮ ಅರಸು ಅವರು ಬಹಳ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದಾರೆ.

Mr. DEPUTY SPEAKER.—While Sri Deo was speaking of the word 'ವ್ಯಭಿಚಾರ' he referred to it in a general way in the country. But, Sri Muckannappa is not right in trying to apply it either to this Side or to that Side. He should not try to apply those words to any section of this House. He is entirely wrong, and he must withdraw.

Sri C. J. MUCKANNAPPA.—Sir, I have not mentioned anything when I heard the word 'ವ್ಯಭಿಚಾರ'. I was under the impression that he was referring to something else. Without any intention, without any motive, I interrupted.

Mr. DEPUTY SPEAKER.—In that case, it is allright.

Sri V. S. PATIL.—I just heard 'ವ್ಯಭಿಚಾರ'. Is it a parliamentary word?

Mr. DEPUTY SPEAKER.—If Sri Patil says that prostitution has increased, there is nothing unparliamentary, but if that word is used with a bad motive, it is unparliamentary.

ಶ್ರೀ ವಿ. ಎಂ. ದೇವ್.—ನನಗೆ ಶ್ರೀಮಾನ್ ಕೃಷ್ಣಪ್ಪನವರಲ್ಲಿ ಬಹಳ ಸ್ನೇಹ ಇದೆ. ಅವರಲ್ಲಿ ಹಿರಿದಾದ ಸಂಸ್ಕೃತಿ ಇದೆ. ಆದರೆ ಅವರು ಅಡ್ಡ ದಾರಿ ಹಿಡಿದಿದ್ದಾರೆ. ಅವರಿಗೆ ಸರಿಯಾದ ಪೆಟ್ಟು ಬೀಳಬೇಕಾಗಿದೆ. ಅವರು ಬೇಕಾದಷ್ಟು ಹೇಳಿಕೆಗಳನ್ನು ಕೊಡುತ್ತಾರೆ. ಶ್ರೀಮಂತರು ಕೆರೆ ಅಂಗಳದಲ್ಲಿ ಹುಲ್ಲು ಬೆಳೆಯುತ್ತಾರೆಂದು ಅವರು ಹೇಳಿದರು. ಆದರೆ ನನಗೆ ರಿಲಾಯಬಲ್ ಸೋರ್ಸ್‌ದಿಂದ ಇನ್‌ಫರ್‌ಮೇಶನ್ ಗೊತ್ತು ಇರುವ ಹಾಗೆ ಅವರು ತಮ್ಮ ಅಧಿಕಾರ ಉಪಯೋಗಿಸಿಕೊಂಡು ತಮಗೆ ಬೇಕಾದವರಿಗೆ 25 ಎಕರೆ ಜಮೀನು ಕೊಟ್ಟು ಬಿಟ್ಟಿದ್ದಾರೆ. ಇದರಿಂದ ಅವರು ಬಹಳ ದುಡ್ಡು ಮಾಡಿದ್ದಾರೆಂದು ನಾನು ಕೇಳಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಅವರ ಎಕ್ಸ್‌ಪ್ಲನೇಷನ್ ಕೇಳಬೇಕು ಎಂದು ಹೇಳುತ್ತೇನೆ. ಮತ್ತು ಇಂಥ ಅನ್ಯಾಯದ ದೃಷ್ಟಿಯಿಂದ ಮಾಡಿರತಕ್ಕ ಕೆಲಸದ ಬಗ್ಗೆ ಹೃತ್ಪೂರ್ವಕ ಅಪಾಲಜಿ ಕೊಡುತ್ತಾರೆಂದು ನಾನು ಭಾವಿಸುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ತೀರಾ ಸುಳ್ಳು. ಇಂಥ ಗಾಳಿ ಸಮಾಚಾರಕ್ಕೆ ಕಿವಿ ಕೊಡಬೇಡಿ. ಇಂಥ ಗಾಳಿ ಸಮಾಚಾರ ಬಿಟ್ಟು ಬಿಡಿ.

Sri V. S. PATIL.—On a point of order, Sir. When there are three or four cabinet ministers present in this House, is it proper for them to leave their proper place and sit anywhere and speak? The whole front bench is vacant. Is it due to the fact that they are afraid of the Kamaraj Plan or of the attack from this side?

5-00 P.M.

Mr. DEPUTY SPEAKER.—There is no point of order.

ಶ್ರೀ ವಿ. ಎಂ. ದೇವ್.—ನಿಜವಾಗಿಯೂ ನನಗೆ ಅನಿಸುತ್ತದೆ ಮಂತ್ರಿ ಮಂಡಲ ಹೇಗಿರಬೇಕೆಂದರೆ ಶ್ರೀಮಾನ್ ಅರಸ್ ಅವರು ಈಗಲಾದರೂ ಅರಿವಿಗೆ ಪ್ರಯತ್ನ ಪಡುತ್ತಾ ಇದ್ದಾರೆ. ಪಂಚವಾರ್ಷಿಕ ಯೋಜನೆಯ ಕೆಲಸ ಕಾರ್ಯಗಳನ್ನು ಕಾರ್ಯಗತ ಮಾಡುವುದಕ್ಕೆ ಹೊರಟಿದ್ದಾರೆ ಎರಡನೆಯದಾಗಿ ಇನ್ನು ಎರಡು ಮೂರು ಜನರನ್ನು ಬಿಟ್ಟರೆ ಶ್ರೀಮಾನ್ ರಾಚಯ್ಯನವರ ಹೆಸರನ್ನು ಹೇಳಿದೆ. ಅವರು ಈ ವಿಷಯದಲ್ಲಿ ಆಸಕ್ತಿ ಹೊಂದದೇ ಇರುವುದೇ ಇಲ್ಲ ಅವರಿಗೆ ಸ್ವಲ್ಪ ಐಡಿಯಾಸ್ ಇವೆ. ಅದೇ ರೀತಿ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ರಾಮಚಂದ್ರ ಅವರು ಅವರ ಜೊತೆಯಲ್ಲಿ ಗೋಪಾಲ ಗೌಡರು: ಭೂಸುಧಾರಣೆಯ ವಿಷಯದಲ್ಲಿ ಹರಿಜನರಿಗೆ ಶೇಕಡ 60 ಸ್ಥಾನಗಳನ್ನು

ಮೀಸಲು ಇಡಬೇಕೆಂದು ಒತ್ತಾಯ ಮಾಡುತ್ತಾ ಇರುವುದರಿಂದ ಮಂತ್ರಿ ಮಂಡಲದಲ್ಲಿ ಅವರೂ ಇರಬೇಕಾಗುತ್ತದೆ.

[MR. SPEAKER in the Chair.]

ಮಂತ್ರಿ ಮಂಡಲ ಎಂದರೆ ಅದರಲ್ಲಿ ಸುಮ್ಮನೆ ಐ ಸಿ ಎಸ್, ಐ ಎ ಎಸ್ ಅಧಿಕಾರಿಗಳು ಕೆಲಸ ಮಾಡುವುದಿಲ್ಲ, ಅವರು ಮಾಡುವ ಕೆಲಸ ನಿಜವಾಗಿಯೂ ಸಾಮೂಹಿಕ ಸೌಕರ್ಯವನ್ನು ಏರ್ಪಡಿಸುತ್ತದೆಯೇ ಮತ್ತು ಜನತೆಯ ಆರ್ಥಿಕ ಬೆಳವಣಿಗೆಯಾಗುತ್ತಿದೆಯೇ, ಇಲ್ಲವೇ ಎಂಬುದನ್ನು ನೋಡಿಕೊಳ್ಳತಕ್ಕ ಆಡಳಿತ ರಂಗ. ಇಂತಹ ದೃಷ್ಟಿಯಿಂದ ನೋಡಿಕೊಳ್ಳಬೇಕಾದರೆ ತಾತ್ವಿಕವಾದ ತಿಳಿವಳಿಕೆ ಇರಬೇಕಾಗುತ್ತದೆ. ಆ ದೃಷ್ಟಿಯಿಂದ ಕೆಲಸ ಮಾಡಿದರೆ ಬಹಳ ಜಯಪ್ರದವಾಗಿ ಮುಂದೆ ಹೋಗಬಹುದು.

ಭೂ ಸುಧಾರಣೆಯ ವಿಷಯದಲ್ಲಿ ಹೇಳುವುದಾದರೆ ಪ್ರತಿಯೊಂದು ಸಾರಿಯೂ ತಪ್ಪು ಮಾಡಿದ್ದಾರೆ ಎಂದು ತಿಳಿದುಕೊಳ್ಳುತ್ತೇನೆ. ಪ್ಲಾನಿಂಗ್ ಕಮಿಷನ್‌ನವರು ಈ ಪ್ರಶ್ನೆಯನ್ನು ಆಗಿಂದಾಗ್ಯೆ ಸೂಕ್ತ ಕಂಡ ರೀತಿಯಲ್ಲಿ ಬಗೆಹರಿಸಲು ಸಲಹೆ ಕೊಡುತ್ತಾ ಬಂದಿದ್ದಾರೆ. ರಿ ಸೋರ್ಸ್ಸ್ ಅಂಡ್ ಎಕಾನಮಿ ಕಮಿಟಿಯವರೂ ಕೂಡ ಹೇಳಿದ್ದಾರೆ. ಇದರಲ್ಲಿ ಬಹಳ ವ್ಯಾಪಕವಾದ ಬದಲಾವಣೆ ಮಾಡಬೇಕಾಗಿದೆ. ಆದರೂ Let us not change horses in the midstream ಎಂದು ಹೇಳಿದ್ದಾರೆ. ಇದು ಅಪಾಯಕಾರಿ ತ್ಯಾಜ್ಯ. ಇದನ್ನು ಏಕೆ ಹೇಳುತ್ತಾ ಇದ್ದೇನೆ ಎಂದರೆ ನಮಗೆ ಈಗ ಒಂದು ಗಂಡಾಂತರ ಕಾಲ ಬಂದಿದೆ. ಒಂದು ಕಡೆ ರಾಷ್ಟ್ರ ವಿಭಜನಾ ಶಕ್ತಿಗಳು ಮದರಾಸ್‌ನಲ್ಲಿ ಬೆಳೆಯುತ್ತಾ ಇವೆ. ಇನ್ನೊಂದು ಕಡೆ ಚೈನಾದವರು ನಮ್ಮ ಮೇಲೆ ಬೀಳುತ್ತಾ ಇದ್ದಾರೆ ಮತ್ತೊಂದು ಕಡೆ ಪಾಕೀಸ್ಥಾನದವರು ಹೆದರಿಸುತ್ತಾ ಇದ್ದಾರೆ ಇದಕ್ಕೆ ಪರಿಹಾರವೇನು ? ಆ ದೃಷ್ಟಿಯಿಂದ ನಾವು ಇವತ್ತು ಯೋಚನೆ ಮಾಡಬೇಕಾಗಿದೆ. ಗಂಡಾಂತರದ ಕಡೆಗೆ ಗಮನ ಕೊಡಲೇಬೇಕು. ಗಂಡಾಂತರ ಜೈಸುವ ನಾಯಕತ್ವ ಮೂಲಭೂತವಾದ ತಾತ್ವಿಕವಾದ ಬದಲಾವಣೆಗಳನ್ನು ಅನುಷ್ಠಾನಕ್ಕೆ ಚ್ಯುತಿಯಾಗದಂತೆ ಜನತೆಗೆ ಕಲ್ಯಾಣವಾಗುವಂತೆ ಕೆಲಸ ಮಾಡಬೇಕಾದರೆ ಮುಂದೆಯೇ ಹೇಳಿದ ಆಡಳಿತ ಬದಲಾವಣೆಯಲ್ಲಿ ಕಮ್ಯೂನಿಟಿ ಡೆವಲಪ್‌ಮೆಂಟ್ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದ ಕೆಲಸ ಮಾಡಲೇಬೇಕಾಗುತ್ತದೆ. ಕೊನೆಯದಾಗಿ ಸಾರ್ವಜನಿಕ ಬಾವಿಗಳನ್ನು ಮಾಡಿಸಿದರೆ ಒಳ್ಳೆಯದಾಗುತ್ತದೆ. ನೀವು ಮುಂದುವರಿಯಬೇಕಾದರೆ ಯಾವಾಗಲೂ ಜನತೆಗೆ ಅದರಿಂದ ಸಾಮೂಹಿಕ ಕಾರ್ಯಾಚರಣೆಗೆ ಅನುಕೂಲವಾಗಬೇಕು. ಇನ್ನೊಂದು ವಿಷಯವೇನೆಂದರೆ ನಮ್ಮ ಶಾಸನ ಸಭೆಯವರು ಇಲ್ಲಿ ಏನು ಮಾಡುತ್ತಾ ಇದ್ದಾರೆ, ಇಲ್ಲಿ ಏನು ಕೆಲಸ ಆಗುತ್ತಾ ಇದೆ ಎಂಬ ಈ ಸಭೆಯ ನಡೆವಳಿಕೆಗಳನ್ನು ತಿಳಿಸುವುದಕ್ಕೆ ಒಂದು ಪತ್ರಿಕೆಯನ್ನು ನಾವಿಲ್ಲಿ ಎಷ್ಟು ದಿವಸ ಸೇರುತ್ತೇವೆಯೋ ಅಷ್ಟು ದಿವಸ ಹೊರಡಿಸುವುದಕ್ಕೆ ಏರ್ಪಾಡು ಮಾಡಿದರೆ ಅಧ್ಯಕ್ಷರು ಅದರ ವಿಚಾರದಲ್ಲಿ ಕಾರ್ಯಕ್ರಮ ತೆಗೆದುಕೊಂಡರೆ ಒಳ್ಳೆಯದು ಎಂದು ಹೇಳುತ್ತೇನೆ.

Mr. SPEAKER.—Example is better than precept.

ಶ್ರೀ ವಿ. ಎಂ. ದೇವ್.—ಇದು ಒಂದು ತಾತ್ವಿಕವಾದ ಭಾವನೆ ಏನೆಂದರೆ ಹೇಪರ್‌ನಲ್ಲಿ ಎಲ್ಲಾ ಸತ್ಯಸಂಗತಿ ಬರಬೇಕು ಎಂದು ಜನ ಅಪೇಕ್ಷೆಪಡುತ್ತಾರೆ. ಆದರೆ ಪತ್ರಿಕೆಗಳು ಖಾಸಗಿ ಜನರಿಗೆ ಸೇರದಿರುವುದರಿಂದ ಅವರ ಹಿತಾಸಕ್ತಿಗನುಗುಣವಾದುದನ್ನು ಮಾತ್ರ ವರದಿ ಮಾಡುವುದು ಸಹಜ. ಉದಾಹರಣೆಗೆ ಬೊಂಬಾಯಿಯಲ್ಲಿ ನೆಹರು, ಮೆನನ್‌ರ ಹೇಳಿಕೆಗಳು ಬರದಾಗ ಜನತೆ ಹಲ್ಲೆ ಮಾಡಿದ್ದು ಸರಿಯೇ ? ಅದೇ ರೀತಿ ಆಗುತ್ತದೆ. ವರ್ಕಿಂಗ್ ಜರ್ನಲಿಸ್ಟ್ಸ್ ಅಧೋಗತಿಗೆ ಇಳಿಯಬೇಕಾಗುತ್ತದೆ. ದೊಡ್ಡ ಮನುಷ್ಯರು ಒಂದು ಮಾತು ಹೇಳುತ್ತಾರೆ : It is leading to the prostitution of the pen ಎಂದು. ಆ ದೃಷ್ಟಿಯಿಂದ ಪ್ರೈವೇಟ್ ಮತ್ತು ಪಬ್ಲಿಕ್ ಸೆಕ್ಟರ್ ಎರಡರಲ್ಲೂ ನಾವು ಆ ರೀತಿ ಮಾಡುವುದರಿಂದ ಒಳ್ಳೆಯದಾಗುತ್ತದೆ ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುವುದು. ಇಷ್ಟೇ. ಇಲ್ಲದಿದ್ದರೆ ಜನತಾದೃಷ್ಟಿ ಮತ್ತು ನ್ಯಾಯದೃಷ್ಟಿ ಲೇಖಕನ ಕೆಟ್ಟ ಪಾಡನ್ನು ಊಹಿಸಿಕೊಳ್ಳಬಹುದು.

Mr. SPEAKER.—The Hon'ble Member is developing a good point, but not relevant to the debate now.

ಶ್ರೀ ವಿ. ಎಂ. ದೇವ್.—ಹಿತಾಸಕ್ತಿಯ ವಿಷಯದಲ್ಲಿ ಜನಗಳಿಗೆ ತಿಳಿವಳಿಕೆ ಕೊಡುತ್ತೇವೆಯೇ ಹೊರತು ಇನ್ನೇನೂ ಅಲ್ಲ. ಆ ವಿಷಯದಲ್ಲಿ ನಾವೇನು ಮಾಡಿದ್ದೇವೆ ? ಇಲ್ಲಿನ ಕಾರ್ಯಕಲಾಪಗಳ ಸತ್ಯ ಸಂಗತಿ ಜನತೆಗೆ ತಿಳಿಯಲೆಂದು ಈ ಸಭೆ ಇದೆ.

Mr. SPEAKER.—It is a very appreciable point. But how does it come under the no-confidence motion which is now before the House ?

ಶ್ರೀ ವಿ. ಎಂ. ದೇವ್.—ವಿಶ್ವಾಸ ಬೆಳೆಯಬೇಕು ಎನ್ನುವ ದೃಷ್ಟಿಯಿಂದ ಮಾತನಾಡುತ್ತಾ ಇದ್ದೆ. ಭೂಸುಧಾರಣೆ ಇದುವರೆಗೂ ಆಗದೇ ಇರುವುದು ನಮ್ಮ ದುರ್ದೈವ. ಅದು ಬಹಳ ಕೆಟ್ಟ ಪರಿಣಾಮವನ್ನು ಎಲ್ಲೆಲ್ಲೂ ಮಾಡಿದೆ, ಭೂಸುಧಾರಣೆ ಎಂದರೆ ಏನು ? ಸೆಕ್ಯೂರಿಟಿ ಆಫ್ ಟೆನ್ಯೂರ್ ಎಲ್ಲಕ್ಕಿಂತ ಮುಖ್ಯವಾದುದು. ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಮತ್ತು ಅವುಗಳ ಫಲಿತಾಂಶ, ಹೆಚ್ಚು ಆಹಾರೋತ್ಪನ್ನವಾಗುತ್ತದೆ. ಪಶ್ಚಿಮ ಘಟ್ಟಗಳಲ್ಲಿ ಕಾಫಿ ಎಸ್ಟೇಟುಗಳನ್ನು ನೋಡಿ ಕಾಫಿ ಎಸ್ಟೇಟುಗಳೆಲ್ಲಾ ಪಾಪರ್ ಆಗುತ್ತಾ ಇವೆ. ಅದಕ್ಕೆ ಕಾರಣವೇನೆಂದರೆ ಈಗಿನ ಕಾಲದಲ್ಲಿ ತಜ್ಞರು ಅದಕ್ಕೆ ಸರಿಯಾದ ಮೇಲ್ವಿಚಾರಣೆ ಮಾಡಬೇಕು ಇಲ್ಲದೇ ಇದ್ದರೆ ಅವುಗಳೆಲ್ಲಾ ನಶಿಸಿ ಹೋಗುತ್ತವೆ.

ಇನ್ನು ಆಡಳಿತ ಹೇಗೆ ಜೋಡಿಸಿಕೊಳ್ಳಬೇಕೆನ್ನುವ ವಿಷಯವನ್ನು ಹೇಳುತ್ತೇನೆ ಪಂಚಾಯ್ತಿ, ತಾಲ್ಲೂಕು ಬೋರ್ಡು, ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರು ಇವುಗಳನ್ನೆಲ್ಲಾ ಮಾಡಿದ್ದೀರಿ, ಇವುಗಳಿಂದ ಜನಸಾಮಾನ್ಯರಿಗೆ ಯಾವ ರೀತಿಯಲ್ಲಿ ಅನುಕೂಲವಾಗುತ್ತದೆ ಎಂಬುದನ್ನು ನೋಡಬೇಕೇ ಹೊರತು ಒಬ್ಬರ ಹಿತಾಸಕ್ತಿಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಾ ಹೋದರೆ ಅದರಿಂದ ಎಂದಿಗೂ ಪ್ರಯೋಜನವಾಗುವುದಿಲ್ಲ. ನಿಜ, ಚಿಟ್ಟ ಜೇನಿನಿಂದ ಕಮಲದಲ್ಲಿ ಮಧುವನ್ನು ಶೇಕರಿಸುವುದಕ್ಕಾಗುವುದಿಲ್ಲ. ಅದಕ್ಕೆ ಹೆಜ್ಜೇನೇ ಬೇಕು. ಏಕೆಂದರೆ ಆ ಜೇನಿನ ಮುಳ್ಳು ದೊಡ್ಡದಾಗಿರುತ್ತದೆ. ಅದೇ ರೀತಿಯಲ್ಲಿ ತಾತ್ವಿಕವಾಗಿ ಯಾವುದು ಪ್ರಾಮುಖ್ಯವಾದುದು ಎಂಬುದನ್ನು ನೀವು ತಿಳಿದುಕೊಂಡು ವ್ಯಕ್ತಿತ್ವವನ್ನು ಬೆಳೆಸಿಕೊಂಡು ಕೆಲಸ ಮಾಡಿದರೆ ಆಗ ನಮ್ಮ ದೇಶಕ್ಕೆ ಒಳ್ಳೆಯದಾಗುತ್ತದೆ. ಇಲ್ಲದೇ ಹೋದರೆ ನಾನು ಆಗಲೇ ಹೇಳಿದ ಹಾಗೆ ಜನಜೀವನದಲ್ಲಿ ಬಡತನದ ಒಂದು ಭಯಂಕರವಾದ ದಾರುಣವಾದ ವಾತಾವರಣವನ್ನು ನೋಡುತ್ತಾ ಇದ್ದೇವೆ. ತಾತ್ವಿಕವಾಗಿ ತಾವು ಕುಳಿತುಕೊಂಡು ರಾಜ್ಯಭಾರ ಮಾಡುತ್ತಾ ಇಲ್ಲದೇ ಇರುವಾಗ ನಿಜವಾಗಿಯೂ ಇಂತಹ ಅವಿಶ್ವಾಸ ನಿರ್ಣಯಗಳನ್ನು ನಾವು ಪದೇ ಪದೇ ತರದೇ ಇದ್ದ ಪಕ್ಷದಲ್ಲಿ ನಾವು ನಮ್ಮ ಕರ್ತವ್ಯಲೋಪ ಮಾಡಿದ ಹಾಗಾಗುತ್ತದೆ.

ಕೊನೆಯದಾಗಿ ನಾನು ಹೇಳುವುದಿಷ್ಟೆ. ನೀವು ನಿಮ್ಮ ಕರ್ತವ್ಯ ಲೋಪ ಮಾಡಿದ ಹಾಗೆ ಆಗುವುದಲ್ಲದೆ ನಿಮಗೂ ಮತ್ತು ನಿಮ್ಮ ಪಕ್ಷದವರೂ ಅಧಿಕಾರಕ್ಕೆ ಬರಲು ಒಂದು ಆಬ್ಜೆಕ್ಟೀವ್ ಕಂಡೀಷನ್ನೇ ಇಲ್ಲದಂತೆ ಮಾಯವಾಗುತ್ತದೆ. ಈ ದಿವಸ ಈ ಮಂತ್ರಿ ಮಂಡಲದಲ್ಲಿ ಮುಖ್ಯಮಂತ್ರಿಗಳೊಬ್ಬರ ಬೆಂಬಲದಿಂದ ಒಂದು ಸರಿಯಾದ ಆಳುತನವಿಲ್ಲದೆ ಮಾತ್ರ ಆಳು ಎನ್ನಿಸಿಕೊಂಡವರಿದ್ದಾರೆ. ಏಕೆ? ಎಂದರೆ ಆ ಮುಖ್ಯ ಮಂತ್ರಿಗಳೊಬ್ಬರಿಂದ ಇವರೂ ಅಲ್ಲಿ ಕುಳಿತುಕೊಳ್ಳಲು ಒಂದು ಅವಕಾಶ ಉಂಟಾಯಿತೇ ವಿನಾ ಇಲ್ಲದಿದ್ದರೆ ಅವರಿಗೆ ಅಲ್ಲಿ ಕುಳಿತುಕೊಳ್ಳಲು ಖಂಡಿತ ಸಾಧ್ಯವಾಗುತ್ತಿರಲಿಲ್ಲ ನೀವು ನಾಳೆ ಪಬ್ಲಿಕ್ಕನ್ನು ಎದುರಿಸತಕ್ಕಂಥ ಒಂದು ಸರ್ಕಾರವನ್ನು ಮುಂದಕ್ಕೆ ತರಬೇಕು ಎಂತ ಇಷ್ಟು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri P. F. D'MELLOW (Nominated).—Mr. Speaker, Sir, before touching on the Motion before the House, I feel it my duty to correct the unfortunate reference made to the military by one of the Hon'ble speakers. His reference to the causes that led to the Chinese aggression and coupling the Indian army with indiscipline, I feel, was unfortunate and perhaps a slip of the tongue. I merely mention this because it would be unfortunate if our gallant soldiers who are not here were thought to be anything but among the best of soldiers all over the world.

Sir, when leave of this House was sought to move this Motion of no confidence in the Council of Ministers of the State of Mysore, I was perhaps among the very few sitting on this side of the House, sitting on the opposition benches, who was unable to rise in support of the motion, and that, not because I am in any way happy or less concerned about the situation that we all know is developing both within and outside this House. Representing as I do a small minority community, I must confess sharing the views of a very large number of people at the confusion–I use the word 'confusion' deliberately-settling down round us both inside and outside the State. Living today is becoming a burden which few can carry with any sense of relish. Cost of Living and heavy

taxation on the score of the emergency, I feel, are gradually crushing the very spirit out of our people.

Mr. Speaker, our children are being tempted with schemes and grandiose promises of a happier future, to inherit a land flowing with milk and honey; but today all that I can say is that we are in fact not preparing them for their future to the extent that is their right, because of a policy that fails to extend to education all that it requires. We talk of educational concessions. We even claim some success in the application of such schemes, but to my part I must confess to a sense of deep frustration because of the neglect of a very large section of poor children who are as deserving as any other children but who unfortunately do not attend Government schools. I talk of the poor children who for reasons historic and otherwise, continue to attend English medium schools conducted by private managements. In mentioning this, I must in fairness acknowledge my debt of gratitude to the Chief Minister, the Minister for Education and in fact I owe it to all the Ministers because they have been kind and considerate; but my grievance lie not at the door of the individual Ministers so much as at the Department of Education, which I may be forgiven if I describe as the most unimaginative, the most unhelpful and the most unsympathetic department that I can find anywhere in this world. The Department of Education has failed to implement a single promise, a single assurance which was so kindly given by the Government Ministers. To that extent I wonder where the fault lies, where the set up breaks down. Of course, we have had not only the promises and assurances of the Ministers but we have had even the statement of the then Director of Public Instruction who confessed when accepting my submissions that the situation lay not in the demands that I made but in coming so very late in asking for various things. Sir, I am sure that when we look at the growth of the *per capita* income in our State as compared to others and we think of the collossal amount of money we are investing in our three plans, we wonder not merely on the ground of cold statistics but we wonder from other sources how is it that this State should continue to rank among the lowest in *per capita* income and we are then naturally inclined to ask why our State Government is not more forceable in driving home this point to the Central planners who seem to be under the illusion that Mysore is already possessed of sufficient industries, even to the point of saturation.

Sir, before leaving this subject, I should like once again to request the Government to assert their authority on the Department of Education more forceably if necessary. I have before me the pleadings of children and the statements of heads of schools. I find that despite all promises made to these children and their parents, in spite of the assurances given by the Department of Education, nothing material has so far come about.

I now come to the second and perhaps the more important reason for my participating in this debate. I ask my colleagues on this side to bear with me, not to misunderstand my motives.

(SRI P. F. D'MELLOW)

Mr. Speaker, I now come to the second and perhaps the more important reason for my participating in this debate. Sir, as I understand it a Vote of Censure, at least in terms of British Parliamentary practice is an occasion when the Government of the day immediately accedes to a demand from the Leader of the Opposition to give an early opportunity to him to come out and challenge the strength of the Government. We understand that this convention in the British House of Commons arises from the fact that it is due to the recognised and responsible position of the Leaders of the Opposition, as a potential alternate Government, a position which guarantees the seriousness of such an interruption of the normal course of business.

Sir, if I have not misunderstood the Hon'ble Chair, when dealing with the admissibility of the present motion, you were pleased to emphasise that the position in our Parliamentary set up was not on all fours with the British practice, and that you were anxious that we should develop healthy conventions of our own. With this in my mind I now seek to use the occasion to widen the scope of discussion.

Mr. Speaker, as one who does not owe allegiance to any political party, I can claim a truly independent approach to the problems that confront us as well as the remedies offered by the ruling party. I claim that my motive in participating in this debate is to set our thinking back along the lines recommended and envisaged by the makers of the Constitution, for unless we do so, and convince the ruling party of such need, we shall have only added to the hastening or evolution of a system, a pattern of Government for this country which in truth can bear little or no resemblance to what the fathers of the Constitution had in mind.

Sir, Sri K. M. Munshi in his brilliant essay on Parliamentary Democracy in India claims for the President of India certain *supra* ministerial powers which *inter alia*, allow for the dismissal of a Ministry which has lost the confidence of Parliament. For my part, I am not sure whether such powers can be claimed by the Governor of the State. But it is here that we come up against the first problem that must be faced, should motions of no confidence become increasingly common in our Parliamentary life? Sir, whilst such a contingency exists, the interests of those minorities which I am privileged to represent in this Hon'ble House, makes me oppose the motion of no confidence. The prime necessity of the hour is to ensure that nothing is allowed to interfere with the smooth and efficient working of the administrative machinery of Government as a result of changes in the Ministry. The alternative where public confidence in a particular Ministry comes to be shaken on each and every occasion when we on this side of the house seek to rid ourselves of frustration by bringing forward motions of no confidence is something that I cannot contemplate.

Mr. Speaker, referring again to Sri Munshi's essay, I am also indebted for the further information that when presenting the report of

Union Committee to the Constituent Assembly the late Sardar Vallabhai Patel said :

> "They came to the conclusion that it would suit the conditions of this country better to adopt the Parliamentary system of the Constitution, the British type of Constitution, with which we are familiar."

At the same time, in dealing with this report, we have the opinion of a learned jurist Dr. Alladi Krishnaswamy who in supporting the view of Sardar Patel added in the Constituent Assembly, that "An infant democracy cannot afford to take the risk of a perpetual cleavage, feud or conflict or threatened conflict between the Legislative and the executive.

Sri A. P. APPANNA.—Is the Hon'ble Member supporting the resolution or opposing it ?

Mr. SPEAKER.—The Hon'ble Member is entited to go on his own way without being disturbed by anybody.

Sri P. F. D'MELLOW —Sir, I cannot, on constitutional grounds, support the resolution of this nature, and have already said so. Sir, again to quote Sri K. M. Munshi, we have a system, which he remarks has resulted in considerable twisting of Parliamentary democracy out of shape in terms of the West-minister model which the fathers of the Constitution had set us as our goal. It therefore follows to my way of thinking that the overriding duty of members who sit on the opposition benches is to avoid the temptation to give vent to our feelings of frustration by pushing matters to the extreme where the power of the ruling party in terms of its voting strength will tend to manifest itself by a complete disregard of our views. Sir, the British Parliament is a forum of deliberation between well organised parties resulting in generally acceptable decisions.

On the other hand, in our legislatures there is a growing tendency to treat them as a forum for registering one party decisions taken outside the legislature and providing only for a general discussions on measures brought before the House. Whereas in the U.K. views expressed by different parties and even individuals have a fair chance of being adjusted under the pressure of Parliamentary discussion. Here, we find that in our own legislatures, except a polite hearing of the views of the opposition parties, there is very little that is done. Herein lies the danger to the growth of Parliamentary life if the role of the opposition evolves into pressures exerted by such actions as walk-outs, as it is unfortunately happening now.

Mr. Speaker, as I remarked earlier, and if I am not mistaken, the position adopted by the Hon'ble Chair when discussing the admissibility of this motion was that seeing that our practice was not on all fours with that of West-minister, discussion should commence on the matter of no confidence between, not the Government as such, but the Leader of the House and the Leader of Opposition. Sir, to my mind,

(SRI P. F. D'MELLOW):

and I say with all humility and respect that this is a slight departure from what the framers of the Constitution had in mind.

Mr. Speaker, this motion provides me also with an occasion to represent what I feel the uppermost in the minds of the linguistic minorities throughot the country and also in the State. Sir, we are deeply conscious that in the final analysis the best and the only real safeguard is to have sympathy and understanding by the majority towards the minority, be it in the legislature or outside. This attitude, so far as the legislature goes, I understand, derives from the belief that in the last resort the acquiesence of the minority should be obtained to what is being done by the majority in any democratic legislature. This attitude towards minority opinion stems from hatred of cruelty and persecution and a sense of justice and fair play towards the feeling and pleadings of the minority groups in the House.

However small a community, which I have the honour to represent, however feeble their voice in determining the course of legislation, because of the non-exisetnce of voting strength, I say it with all emphasis at my command that we are nevertheless anxious to feel that we truly belong to a great nation to which we are born and that true to the tradition of toleration and understanding, gathered over centuries, this motherland of ours holds it the duty of the ruling party to fulfill all the guarantees provided in the Constitution to its lesser and weaker children, so that their voice, however feeble, will be heard and given due consideration and not allowed a sense of frustration to continue.

5-30 P.M.

In concluding, I appeal through you to the Government of the State to make this possible, to be truly kindly and generous and more so to the weaker sections of the society, to our children. When I say this, I mean the children of all communities. For, they are the future citizens. On them we must truly build. I ask the Government to afford the linguistic minorities, who seek to make known their feelings and their aspirations, opportunities not merely to speak though the medium of the language that they may choose but what is even greater, to understand what is being said and debated around them. I appeal for consideration, because I believe that it will help the creation of an atmosphere of oneness, both inside and outside the Legislature, especially now that we have put away all questions as to what is the official language of our State. Now that we have arrived at a firm policy on this matter, I ask whether we should not think along the lines of introducing some system which would bring back in this house an atmosphere where bothsides, those representing the minorities and those representing the ruling party, feel, as we should, to be members of one family. Thank you.

MR. SPEAKER.—Before I call upon any other Member, I would like to know how we should arrange our work. The time allowed for this debate is 12 hours. We have spent about 4 hours and a few minutes to-day. Shall we sit till 7 P.M. to-day ?

Sri S. NIJALINGAPPA (Chief Minister).—We may sit till 7 P.M. to-day and to-morrow.

Sri S. SIVAPPA.—We shall sit till 6-30 P.M. to-day. To-morrow we can sit for 6 hours, that is, 5 hours to-day and 7 hours to-morrow.

Mr. SPEAKER.—That means we should dispend with the question-hour. Is that the understanding between the two Leaders ?

Sri S. NIJALINGAPPA.—I think we may drop the question hour.

Mr. SPEAKER.—Yes, that is agreed to. Supposing we sit to-morrow morning and evening, we could accommodate another half-an-hour or so, if necessary. I do not want even a tinge of dis-satisfaction. But anyway it is clearly accepted that the debate must close tomorrow at any cost. There is no question of extending it beyond to-morrow.

Sri S. NIJALINGAPPA.—We may sit from 9 A.M to 12 NOON and again from 2 P.M. to 6 P.M.

Sri N. NANJE GOWDA.—I suggest that we should sit from 3 P.M. to 7 P.M.

Sri S. NIJALINGAPPA.—I agree.

Mr. SPEAKER.—Therefore we will sit till 6-30 P.M. to-day. We will meet to-morrow at 9 A.M. and carry on till 12-00 NOON and there would be no question-hour. In the afternoon we will sit from 3 P.M. to 7 P.M. We can definitely finish the debate tomorrow.

HON'BLE MEMBERS.—Yes.

Mr. SPEAKER.—The Revenue Minister will intervene.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆ ಮಂತ್ರಿಗಳು):—ಮಾನ್ಯ ಅಧ್ಯಕ್ಷರೆ, ನಾಳೆಯ ದಿವಸ ಮಂತ್ರಿಮಂಡಲದ ಕೆಲವು ಮುಖ್ಯವಾದಂಥ ಆಪಾದನೆಗಳಿಗೆ ಉತ್ತರ ಕೊಡುವ ಮಂತ್ರಿಗಳಿರುವುದರಿಂದ, ಇವತ್ತಿನ ದಿವಸ ನನಗೆ ಕೊಟ್ಟಿರುವ 20 ನಿಮಿಷಗಳಲ್ಲಿ ಉತ್ತರ ಕೊಡುವುದಕ್ಕೆ ಪ್ರಯತ್ನಪಡುತ್ತೇನೆ.

ಸ್ವಾಮಿ, ಈಗ ಪ್ರಜಾಪ್ರಭುತ್ವದಲ್ಲಿ ಈ ಅವಿಶ್ವಾಸ ಠರಾವು ಅನ್ನುವುದು ಬಹಳ ಬಲಯುತವಾದ ಅಸ್ತ್ರ; ಹಿಂದೆ ಹೇಳುತ್ತಿದ್ದಂತೆ ಇದು ಬ್ರಹ್ಮಾಸ್ತ್ರ. ಈ ಬ್ರಹ್ಮಾಸ್ತ್ರವನ್ನು ಉಪಯೋಗಿಸುವವರು ಕೂಡ ಸಾಮಾನ್ಯ ಜನಗಳಲ್ಲ; ಅವರಿಗೆ ಆಶಕ್ತಿ ಇಲ್ಲ. ಎಲ್ಲರಿಗೂ ಆ ಶಸ್ತ್ರವನ್ನು ಕಂಡು ಹಿಡಿಯುವುದಕ್ಕಾಗುವುದಿಲ್ಲ. ಯಾರು ಶಕ್ತಿವಂತರೋ, ಯಾರಿಗೆ ಅದನ್ನು ಉಪಯೋಗಿಸುವುದಕ್ಕೆ ಬಲವಿದೆಯೋ, ಅಂಥವರ ಕೈಲಿ ಅದನ್ನು ಕೊಟ್ಟಿದ್ದಾರೆ. ಈ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದವರು ಟೀಕೆ ಮಾಡಬೇಕಾಗಿದೆ, ಆಡಳಿತ ಪಕ್ಷದವರು, ಮಾನ್ಯ ಅಧ್ಯಕ್ಷರು ಪ್ರಾರಂಭದಲ್ಲಿಯೇ ಹೇಳಿದ ಹಾಗೆ, ಅದನ್ನು ಕೇಳಬೇಕಾದ್ದು ಅವರ ಕರ್ತವ್ಯ. ಆದರೆ ಈ ಮಹತ್ತರವಾದಂಥ ಪ್ರಜಾಪ್ರಭುತ್ವ ನಡೆಸುವುದಕ್ಕೆ ಉಪಯುಕ್ತವಾದ 4-5 ಅಸ್ತ್ರಗಳಿವೆ. ಬೇರೆ ಅಸ್ತ್ರಗಳು ಯಾವು ಉಳಿದಿವೆ ಅಂದರೆ, ಕೊಶ್ಚನ್ ಹವರ್ ಒಂದು ಅಸ್ತ್ರ; ಅದಾದ ಮೇಲೆ ಕಾಲ್ ಅಟೆನ್‌ಷನ್ ನೋಟೀಸ್ ಒಂದು ಅಸ್ತ್ರವೇ; ಡಿಬೇಟಿನಲ್ಲಿ, ಜನರಲ್ ಡಿಬೇಟ್ ಮತ್ತು ಗವರ್ನರ್ಸ್ ಅಡ್ರೆಸ್ ಮೇಲೆ ಡಿಬೇಟ್ ಇವು ಅಸ್ತ್ರಗಳು. ಈ ನಾಲ್ಕು ಸಮಯಗಳಲ್ಲಿ ಸರಕಾರ ಮಾಡುವ ತಪ್ಪುಗಳನ್ನು ಜನತೆಯ ಗಮನಕ್ಕೆ ತರುವುದಕ್ಕೆ ಅನೇಕ ಅವಕಾಶಗಳಿವೆ. ಅದೆಲ್ಲಕ್ಕಿಂತಲೂ ಮೀರಿದ ಬ್ರಹ್ಮಾಸ್ತ್ರವನ್ನು ಅವಿಶ್ವಾಸದ ಠರಾವನ್ನು ಬತ್ತಳಿಕೆಯಲ್ಲಿ ಇಟ್ಟಿದ್ದಾರೆ. ಈಗ ಮಾನ್ಯ ವಿರೋಧ ಪಕ್ಷದ ಸದಸ್ಯರು ಈ ಶಸ್ತ್ರವನ್ನು ನ್ಯಾಯವಾಗಿ ಉಪಯೋಗಿಸಿಲ್ಲ. ಅದನ್ನು ಅವರು ಉಪಯೋಗಿಸುವುದೂ ಅಲ್ಲ. ಆ ತಿಳಿಗೇಡಿತನಕ್ಕೆ ಹೋಗಿ ಜನಗಳಲ್ಲಿ ಬ್ರಹ್ಮಾಸ್ತ್ರದ ಬಗ್ಗೆ ಒಂದು ಲಘುವಾದ ಭಾವನೆಯನ್ನು ಕಲ್ಪನೆ ಮಾಡಬಾರದು. ದೇಶದಲ್ಲಿ ವಿರೋಧ ಪಕ್ಷ ಟೀಕೆಮಾಡುವುದು ಹೊಸದಲ್ಲ. ಎಲೆಕ್ಷನ್ನಿಗೆ ನಿಂತಾಗಲೇ ಶುರು ಮಾಡುತ್ತೇವೆ. ಪಿ. ಎಸ್. ಪಿ., ಸ್ವತಂತ್ರ, ಮುಂತಾದ ಅಪೋಸಿಶನ್ ಪಕ್ಷಗಳು ನಮ್ಮ ಮೇಲೆ ಆಪಾದನೆ ಮಾಡುತ್ತವೆ, ನಾವು ಅದಕ್ಕೆ ಉತ್ತರ ಕೊಡುತ್ತೇವೆ. ಒಟ್ಟಿನಲ್ಲಿ 1½ ವರ್ಷ ಸಮುದ್ರ ಮಥನವಾಗಿ, ವಿಷದಲ್ಲಿ ಅಮೃತ ಬರುತ್ತದೆ; ಅದರಿಂದ ಉದ್ಭವವಾಗುವುದೇ

(ಶ್ರೀ ಎಂ. ವಿ. ಕೃಷ್ಣಪ್ಪ,

ಸರ್ಕಾರವೆಂಬ ಅಮೃತ. ಇವತ್ತು ನಮ್ಮ ಪಕ್ಷ ಅಧಿಕಾರಕ್ಕೆ ಬಂದಿದೆ; ನಾಳೆ ನಿಮ್ಮ ಸರ್ಕಾರ ಬರಬಹುದು. ಒಂದೂವರೆ, ಎರಡು ತಿಂಗಳು ಚುನಾವಣೆ ನಡೆಯಿತು. ಆಗ ಏನೇನೋ ಮಾತನಾಡಬಹುದು. ಆದರೆ ಅದೇ ರೀತಿ ಇಲ್ಲಿ ಮಾತನಾಡುವುದಕ್ಕಾಗುವುದಿಲ್ಲ. ವ್ಯಕ್ತಿಗಳಿಗೂ, ದೇಶಕ್ಕೂ ಬಹಳ ವ್ಯತ್ಯಾಸವಿದೆ. ಪಾರ್ಟಿಗಳಿಗೂ ವ್ಯಕ್ತಿಗಳಿಗೂ ವ್ಯತ್ಯಾಸವಿದೆ. ನಮ್ಮ ಭಾವನೆಗಳು ಬೇರೆ ಇರಬಹುದು. ವ್ಯಕ್ತಿಗೆ ಸಂಬಂಧಪಟ್ಟಂಥ ಅನೇಕ ವಿಷಯಗಳಿರುತ್ತವೆ ಆದರೆ ಅದನ್ನು ತಂದು ಈ ಸಭೆಯಲ್ಲಿ ವ್ಯಕ್ತಿಗಳ ರೀತಿಯಲ್ಲಿ ಮಾತನಾಡುವುದಕ್ಕಾಗುವುದಿಲ್ಲ. ಕೃಶ್ಚೇವ್, ಕೆನೆಡಿ, ನೆಹರೂ, ಅವರು ದೇಶದ ಪ್ರತಿನಿಧಿಗಳು. ಅವರು ಆಡುವ ಮಾತುಗಳು ದೇಶದ ಮೇಲೆ ಪ್ರಭಾವ ಬೀರುತ್ತವೆ. ಅದರಿಂದ ಲಾಭ ನಷ್ಟಗಳಾಗುತ್ತವೆ. ವಿರೋಧ ಪಕ್ಷದ ನಾಯಕರಾಗಿರುವವರು ತಾವು ಹೇಳುವ ವಿಷಯವನ್ನೂ, ಆಡುವ ಒಂದೊಂದು ಪದವನ್ನೂ ಒಂದೊಂದು ಮಾತನ್ನೂ, ಕರ್ತವ್ಯ ಪರಿಪಾಲನೆಗಾಗಿ ಇಲ್ಲಿ ಮಾಡುವ ಪ್ರತಿಯೊಂದು ಕೆಲಸವನ್ನೂ ಚೆನ್ನಾಗಿ ಆಲೋಚನೆಮಾಡಿ ಮಾಡಬೇಕೆನ್ನುದು ಪ್ರಜಾಪ್ರಭುತ್ವದಲ್ಲಿ ಧರ್ಮ. ಇಲ್ಲದೆ ಇದ್ದರೆ ದೇಶದಲ್ಲಿ ಎಲ್ಲರಿಗೂ ಅನರ್ಥವಾಗುತ್ತಿದೆ. ಪ್ರಜಾಪ್ರಭುತ್ವದಲ್ಲಿ ಅವಿಶ್ವಾಸ ನಿರ್ಣಯದ ಮಂಡನೆ ಮಹತ್ತರವಾದ ಅಸ್ತ್ರ. ಅಂಥ ಅಸ್ತ್ರವನ್ನು ಬಹಳ ಸುಲಭವಾಗಿ ಉಪಯೋಗಿಸಿದರೆ ಅದಕ್ಕೆ ಬೆಲೆ ಇಲ್ಲದಂತಾಗುತ್ತದೆ. ಮಹತ್ತರ ಅಸ್ತ್ರಗಳನ್ನು ಸಾಮಾನ್ಯವಾಗಿ ಉಪಯೋಗಿಸಬಾರದು ಎನ್ನುವುದನ್ನು ಪೂರ್ವದಿಂದಲೂ ಹೇಳಿದ್ದಾರೆ.

(SRI M. SRINIVASA NAIK (Chairman) in the Chair.)

ಆಗಿಂದಾಗ್ಗೆ ಇದನ್ನು ಬಳಸುತ್ತ ಹೋದರೆ ಕುರುಬ ಮತ್ತು ಹುಲಿ ಕಥೆಯಂತಾಗುತ್ತದೆ. ದೇಶದಲ್ಲಿ ನಿಜವಾಗಿಯೂ ಅನ್ಯಾಯ ನಡೆದಾಗ, ಸಾರ್ವಜನಿಕರು ವಿರೋಧಪಕ್ಷದವರ ಕೂಗನ್ನು ಕೇಳದೆ ಇರಬಹುದು. ಆಗಾಗ ಮನಸ್ಸಿಗೆ ಬಂದಂತೆ ಹೇಳುತ್ತಾರೆನ್ನುವ ಭಾವನೆ ಜನಗಳಲ್ಲಿ ಬಂದು ನಿಜವಾಗಿಯೂ ಅನ್ಯಾಯವಾದಾಗ, ಅವರು ಅದಕ್ಕೆ ಕಿವಿಗೊಡದೆ ಹೋಗಬಹುದು.

ಈ ಸಲ ಸಭೆ ಪ್ರಾರಂಭವಾದಾಗಲೇ ಅವರು ಈ ನಿರ್ಣಯವನ್ನು ತರಬಹುದಾಗಿತ್ತು. ಪಾರ್ಲಿಮೆಂಟಿನಲ್ಲಿ ಅವಿಶ್ವಾಸನಿರ್ಣಯವನ್ನು ತಂದು ಅವರು ಬೇಸ್ತುಬಿದ್ದರು. ಪತ್ರಿಕೆಗಳವರೆಲ್ಲ ಟೀಕೆ ಮಾಡಿದರು. ವಿರೋಧಪಕ್ಷದವರು ಏನೋ ದೊಡ್ಡದು ಮಾಡುವುದಕ್ಕೆ ಹೋಗಿ ಕಡೆಗೆ ಬೇಸ್ತು ಬಿದ್ದರು ಎಂದು. ಕಾಂಗ್ರೆಸ್ ಪಕ್ಷದವರಾದ ನಾವು ಹೇಳುವುದಿರಲಿ ಪತ್ರಿಕೆಗಳು ಆ ರೀತಿ ಹೇಳಿವೆ. ಪತ್ರಿಕೆಗಳು ಜನಾಭಿಪ್ರಾಯವನ್ನು ಪ್ರತಿಬಿಂಬಿಸುತ್ತವೆ. ಮೈಸೂರಿನಲ್ಲಿಯೂ ವಿಧಾನಸಭೆ ಪ್ರಾರಂಭವಾದಾಗ ನಮ್ಮ ಮಾನ್ಯ ಮಿತ್ರರು ಅವಿಶ್ವಾಸ ನಿರ್ಣಯವನ್ನು ತರಬಹುದೆಂದು ಯೋಚಿಸಿದ್ದೆವು. ಮೊನ್ನೆ ಇಲ್ಲಿ ತಂದಿದ್ದು ಪುನಃ ತಂದರೆ ಅದಕ್ಕೆ ಬೆಲೆ ಇಲ್ಲದೆ ಹೋಗುತ್ತದೆಂದು ಅರ್ಥಮಾಡಿಕೊಂಡು ತಂದಿಲ್ಲವೆಂದು ನಾವು ತಿಳಿದೆವು. ಇವರು ಅವಿಶ್ವಾಸ ನಿರ್ಣಯವನ್ನು ತರುವ ವಿಷಯ ಪತ್ರಿಕೆಗಳವರಿಗೆ ಸಹ ಗೊತ್ತಿರಲಿಲ್ಲ. ಆ ತರಹ ಊಹಾಪೋಹಗಳೂ ಇರಲಿಲ್ಲ. ಶುಕ್ರವಾರ ಈ ಸಭೆಯಲ್ಲಿ ಅವರು ಪ್ರಸ್ತಾಪಮಾಡಿದಾಗಲೇ ನಮಗೆ ಗೊತ್ತಾದದ್ದು ಅವಿಶ್ವಾಸ ಠರಾವನ್ನು ತಂದಿದ್ದಾರೆ, ಅದನ್ನು ಮಂಡಿಸುವುದಕ್ಕೆ ಅಧ್ಯಕ್ಷರು ಅನುಮತಿ ಕೊಟ್ಟಿಲ್ಲವೆಂದು. ಇದರಿಂದ ಏನು ಅರ್ಥವಾಗುತ್ತದೆಂದರೆ ಸ್ವಲ್ಪವಾದರೂ ಯೋಚನೆಮಾಡಿ ಇದನ್ನು ತಂದಿಲ್ಲ ಎಂದು. ಮಾನ್ಯ ಶಿವಪ್ಪನವರು ಕೆಲವು ಒತ್ತಡಗಳಿಂದ ಇದನ್ನು ಯೋಚನೆಮಾಡದೆ, ಪತ್ರಿಕೆಗಳವರಿಗೂ ತಿಳಿಯದೆ, ಅಕಸ್ಮಾತ್ ತಂದಿದ್ದಾರೆಂದು ಅರ್ಥವಾಗುತ್ತದೆ. ಒಳ್ಳೆಯದು, ಅವಿಶ್ವಾಸ ಠರಾವನ್ನು ತಂದರು. ಆದರೆ ಏನಾದರೂ ಹೊಸ ವಿಷಯಗಳನ್ನು ಹೇಳಿದ್ದಾರೆಯೇ ಎಂದರೆ ಏನೂ ಇಲ್ಲ. ಶರಾವತಿ ವಿಷಯವನ್ನು ಅನೇಕ ಸಲ ಹೇಳುತ್ತಿದ್ದಾರೆ. ಅನೇಕರು ಹೇಳಿದ್ದಾರೆ. ಮುಖ್ಯಮಂತ್ರಿಗಳು ಅದರ ಚಾರ್ಜಿನಲ್ಲಿದ್ದಾರೆ. ಅವರು ಹೇಳಿದ್ದಾರೆ: ಅಲ್ಲಿ ಏನೂ ನಡೆದಿಲ್ಲ, ತನಿಖೆ ಮಾಡುತ್ತಿದ್ದೇನೆ, ಅಂಥದ್ದು ಏನಾದರೂ ಆಗಿರುವುದು ಕಂಡುಬಂದರೆ ನ್ಯಾಯವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ ಎಂದು. ಆ ವಿಷಯವನ್ನು ಇದೇ ಸಭೆಯಲ್ಲಿ ಪದೇ ಪದೇ ಹೇಳಿದ್ದಾರೆ. ಹೊಸದೇನೂ ಇಲ್ಲ. ನಾನು ನಮ್ರತೆಯಿಂದ ಎದುರು ಪಕ್ಷದವರಲ್ಲಿ ಪ್ರಾರ್ಥನೆಮಾಡುವುದೇನೆಂದರೆ, ನಾನೂ ಆ ಕಡೆ 12 ವರ್ಷ ಕುಳಿತಿದ್ದೆ. 20 ವರ್ಷಗಳ ಪಾರ್ಲಿಮೆಂಟರಿ ಜೀವನದಲ್ಲಿ 12 ವರ್ಷ ವಿರೋಧ ಪಕ್ಷದ ಬೆಂಚುಗಳಲ್ಲಿ ಕುಳಿತಿದ್ದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರ ದಿವಾಳಿ ಎದ್ದಿದೆ, ರಾಜಿನಾಮೆ ಕೊಟ್ಟು ಹೋಗಿ ಎಂದು ಟಿ. ಸಿ. ಎಂ. ರಾಯನ್ ಅವರಿಗೆ ಹೇಳಿದ್ದರು. ಈ ಸರ್ಕಾರಕ್ಕೆ ನಾವು ಹೇಳುವಂತೆ ಆಗಿನ ಸರ್ಕಾರಕ್ಕೆ ಇವರು ಹೇಳಿದ್ದರು.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಮುಕ್ಕಣ್ಣಪ್ಪನವರು ಆಗಾಗ ನನ್ನ ಜೊತೆಯಲ್ಲಿದ್ದರು. In the general election he just lost by one vote. Otherwise he would have been with us. We were the youngest members at that time. Poor man he lost by only one vote. Otherwise he would have joined with me to say the same thing either to Dewan Madhava Rao or Mr. Royan. ನಮಗೆ ವಿರೋಧ ಪಕ್ಷ ಎನ್ನುವುದು ಹೊಸದೇನೂ ಅಲ್ಲ. ಮೊದಲು ಅಲ್ಲಿ ಕುಳಿತಿದ್ದು ಅಲ್ಲಿಂದಲೇ ಇಲ್ಲಿಗೆ ಬಂದಿದ್ದೇವೆ. ಸರ್ಕಾರ ಸರಿಯಾಗಿ ನಡೆಯಬೇಕಾದರೆ ಸರಿಯಾದ ವಿರೋಧ ಪಕ್ಷವಿರಬೇಕು. ಈ ಸಲ ಸಾರ್ವತ್ರಿಕ ಚುನಾವಣೆಗಳಾದ ಮೇಲೆ ನನಗೆ ಸಂತೋಷ ವಾಯಿತು. ನಮ್ಮ ಜೊತೆಯಲ್ಲಿ ಓದಿದವರು, ಕಾಲೇಜುಗಳಲ್ಲಿ ಹಾಸ್ಟಲುಗಳಲ್ಲಿ ನಮ್ಮ ಜೊತೆ ಇದ್ದವರು ಯುವಕರೂ ವಿರೋಧ ಪಕ್ಷದಲ್ಲಿ ಆರಿಸಿ ಬಂದಿದ್ದಾರೆಂದು ಸಂತೋಷವಾಯಿತು. ಪೇಟ ಗಳನ್ನು ಧರಿಸಿರುವವರು, 'ರಾವ್‌ಬಹದ್ದೂರ್', ರಾಯ್‌'ಸಾಹೇಬ್' ಬಿರುದುಗಳನ್ನು ಪಡೆದವರು ಸರ್ಕಾರದ ಸಹಾಯದಿಂದ ಆರಿಸಿ ಬಂದು ವಿರೋಧ ಪಕ್ಷದಲ್ಲಿ ಹಿಂದಿನ ಕಾಲದಲ್ಲಿ ಕುಳಿತುಕೊಳ್ಳು ತ್ತಿದ್ದರು. ಈ ಸಲ ಹಾಗಿಲ್ಲ, ಒಳ್ಳೆಯ ಯುವಕರೂ, ವಿದ್ಯಾವಂತರೂ, ದೇಶ ಸೇವೆಗೆ ಬಹಳ ಹುಮ್ಮಸ್ಸಿನಿಂದ ಇರುವವರೂ ಮುಂದೆ ಕುಳಿತಿದ್ದೀರಿ. ಆದರೆ ನಿಮ್ಮ ಉತ್ಸಾಹದಲ್ಲಿ ಬಹಳ ಆತುರ ಪಡುತ್ತಿದ್ದೀರಿ, ಏನೋ ಮಾಡಬೇಕೆನ್ನುವ ಉತ್ಸಾಹದಲ್ಲಿ ಸರ್ಕಾರವನ್ನು ಟೀಕೆಮಾಡುತ್ತಿದ್ದೀರಿ. ಈ ಸರ್ಕಾರ ಗಾಳಿಯಲ್ಲಿ ಹೋಗುವಂಥದ್ದಲ್ಲ. ಮೊನ್ನೆ ಅರ್ಧ ಗಂಟೆಯ ಚರ್ಚೆಯನ್ನು ಪ್ರಾರಂಭ ಮಾಡಿದರು. ಯಾವುದೋ ಒಂದು ಸೊಸೈಟಿಯ ಬಗ್ಗೆ ಕಳಿಸಬೇಕಾದ ಅರ್ಧಗಂಟೆ ಚರ್ಚೆ ವಿಷಯ ವನ್ನು ಬೇರೆ ಯಾವುದೋ ಸೊಸೈಟಿಯ ವಿಷಯದಲ್ಲಿ ಕಳಿಸಿದ್ದರು. ಅದು ಈ ಸಭೆಯ ಮುಂದೆ ಬಂದಾಗ we heard it is some other society. We were under some mastake. Somebody said something ಎಂದು ಹೇಳಿ ಬೇಸ್ತು ಬಿದ್ದರು. ಇದು ಮೂರು ಕರೀಕಾಗೆ ವಾಂತಿಮಾಡಿದ ಕಥೆಯ ಹಾಗಾಯಿತು......

Sri V. S. PATIL.—On a Point of Order. We are discussing now the 'No-confidence' motion. On this side, some Members may criticize, support or reject. The only subject before this Assembly is the 'No-confidence' motion. The Congress or the Government may criticize our speeches. But, is it in order to refer to a 'Half-an-hour' discussion which had already taken place ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪದ್ಮಾವತಮ್ಮನ ಸೊಸೈಟಿ ಕಥೆ ಅದು. ಮೂರು ಲಕ್ಷ ರೂಪಾಯಿ ತೆಗೆದುಕೊಂಡು ಬರೀ ಬತ್ತದ ಕಣಜ ತೋರಿಸಿದ ವಿಷಯವನ್ನು ಹೇಳುತ್ತಿದ್ದರು. ಅದು ಸುಳ್ಳೇ ?

Sri S. M. KRISHNA.—The Hon'ble Minister is very cleverly side-tracking the issues. The issues of the 'No-confidence' motion are not 'half-an-hour' discussion that we raised the other day. We have raised the issues of Sharavathi, Electricity Board, Khadi Board, Handloom Weavers' Co-operative Society, the inefficiency in the Government and the incompetence of the Ministers and so on and so forth. Even the seasoned parliamentarian, Sri Ajit Prasad Jain, whom Sri M. V. Krishnappa helped in getting elected in the Tumkur Constituency, is a former Union Minister.

Mr. CHAIRMAN.—The Hon'ble Member has raised a Point of Order. I do not find any substance in that. So, the Hon'ble Minister will continue.

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ಸರ್ಕಾರದ ಮೇಲೆ ಅಪವಾದಗಳನ್ನು ಹೊರಿಸಬೇಕಾದರೆ ನ್ಯಾಯವಾದ ವಿಚಾರಗಳನ್ನು ತಿಳಿದುಕೊಂಡು, ಅದನ್ನು substantiate ಮಾಡಿ fact and figures ಏನಿದೆ ಅದನ್ನು ಒಂದಲ್ಲ ಎರಡು ಸಲ ವಿಚಾರಿಸಿ, ಏನು ನಡೆದಿದೆ ಅದು ಪೂರ್ತಿಯಾಗಿ

(ಶ್ರೀ ಎಂ. ವಿ. ಕೃಷ್ಣಪ್ಪ)

ನಿಮ್ಮ ಮನಸ್ಸಿಗೆ ನಿಜ ಎಂದು ತಿಳಿದ ಮೇಲೆ ಅದನ್ನು ಈ ಮಾನ್ಯ ಸಭೆಯಲ್ಲಿ ಬಂದು ಹೇಳಬೇಕು. ಯಾರೋ ಏನೋ ಹೇಳಿದರು ಎಂದು ಮಾತನಾಡಿದರೆ ಈ ಸಭೆಯು ಮುಂದೆ ಬಂದ ಪೊಸ್ಟೈಟ ಸಂಬಂಧದ ಅರ್ಥಗಂಟೆ ಚರ್ಚೆಯಂತೆ ಆಗುತ್ತದೆ.

ಮಾನ್ಯ ಸದಸ್ಯರು ಉತ್ಸಾಹದ ಭರದಲ್ಲಿ ಸರಕಾರದ ಮೇಲೆ ಟೀಕೆ ಮಾಡಬೇಕೆಂದು ಈ ರೀತಿ ಹೇಳಬಾರದು. ನ್ಯಾಯವಾದ ವಿಷಯ ಆಗಿದೆಯೇ ಎಂಬುದನ್ನು ಇತ್ಯರ್ಥ ಮಾಡಿಕೊಳ್ಳದೆ ಮಾತನಾಡಲು ಪ್ರಯತ್ನಪಡಬಾರದು. ಅದಕ್ಕಾಗಿ ಈ ಉದಾಹರಣೆ ಹೇಳಿದೆ. ಯಾರೋ ಹೇಳಿದರು ಎಂದು ಕಿವಿ ಮಾತಿಗೆ, ಗಾಳಿ ಮಾತಿಗೆ ಬಹಳ ಪ್ರಾಧಾನ್ಯ ಕೊಟ್ಟು ಈ ಮಾನ್ಯ ಸಭೆಯಲ್ಲಿ ಇಂಥ ವಿಷಯ ತರಬಾರದು. ಮಾನ್ಯ ಶ್ರೀ ಶಿವಪ್ಪನವರು ಯಾವ ಹೊಸ ವಿಷಯ ಹೇಳಲಿಲ್ಲ. ನೋ-ಕಾನ್‌ಫಿಡೆನ್ಸ್ ಮೋಷನ್‌ನಲ್ಲಿ ಕಾರಣ ತಿಳಿಸಿಲ್ಲ. ಹಿಂದೆ ಹೇಳಿದ ವಿಷಯ ಮತ್ತೆ ಹೇಳಿದರು. ಶರಾವತಿ ಯೋಜನೆ ಬಗ್ಗೆ ಮಾತನಾಡುವಾಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕು ಎಂದು ನಾನು ಅವರಿಗೆ ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ನಮ್ರತೆಯಿಂದ ಬೇಡಿಕೊಳ್ಳುತ್ತೇನೆ. ಯಾಕೆಂದರೆ ಶರಾವತಿ ಯೋಜನೆ ಕನ್ನಡ ದೇಶದ ಭವಿಷ್ಯ ರೂಪಿಸುತ್ತಿದೆ. ಇದು ಒಂದು ಭಾರಿ ದೊಡ್ಡ ಪ್ರಮಾಣದ ಯೋಜನೆ. ನಮ್ಮ ಕನ್ನಡ ದೇಶದಲ್ಲಿ ಒಂದೇ ಒಂದು ದೊಡ್ಡ ಯೋಜನೆ ಶರಾವತಿ. ಎರಡು ಲಕ್ಷ ಕಿಲೊವ್ಯಾಟ್ ವಿದ್ಯುತ್ ಶಕ್ತಿ ಉತ್ಪತ್ತಿಯಿಂದ ಅನೇಕ ಕೈಗಾರಿಕೆಗಳು ನಡೆಯುತ್ತಿವೆ. ಇನ್ನೂ 10 ಲಕ್ಷ ಕಿಲೊವ್ಯಾಟ್ ಶರಾವತಿ ಯೋಜನೆಯಿಂದ ಉತ್ಪತ್ತಿಯಾಗುತ್ತದೆ. ಬೆಂಗಳೂರು, ಭದ್ರಾವತಿ, ಕೋಲಾರದ ಚಿನ್ನದ ಗಣಿಗಳಿಗೆ ಮೈಸೂರು ರಾಜ್ಯದ ಎಲ್ಲಾ ಪ್ರದೇಶಕ್ಕೂ ವಿದ್ಯುತ್ ಶಕ್ತಿ ಪೂರೈಸಲಾಗುವುದು. ಈ ಶರಾವತಿ ಯೋಜನೆಗೆ ಸುಮಾರು ಒಂದು ನೂರು ಕೋಟಿ ರೂಪಾಯಿ ಖರ್ಚು ಆಗಬಹುದೆಂಬ ಅಂದಾಜಿದೆ. ಇಂಥ ಭಾರಿ ಪ್ರಮಾಣದ ಯೋಜನೆಗಳಲ್ಲಿ ಎಷ್ಟೋ ತೊಂದರೆಗಳು ಇರುತ್ತವೆ. ಅಧಿಕಾರ ಸ್ಥಾನದಲ್ಲಿರುವವರಿಗೆ ಅದು ಅರ್ಥವಾಗುತ್ತದೆ. ಅಧಿಕಾರ ಮಾಡದೇ ಇರುವವರಿಗೆ ಅದು ಗೊತ್ತಾಗುವುದಿಲ್ಲ. ನಾವು ತಪ್ಪು ಮಾಡುತ್ತಾ ಇಲ್ಲ ಎಂದು ಹೇಳುವುದಿಲ್ಲ ಎಂದು ನಮ್ಮ ಪ್ರೈಮ್ ಮಿನಿಸ್ಟರವರು ಅನೇಕ ಸಾರಿ ಹೇಳಿದ್ದಾರೆ. ಈಗ ನಾವೆಲ್ಲರೂ ಹೊಸಬರು, ಅಧಿಕಾರಿಗಳು, ಎಂಜನಿಯರುಗಳು ಎಲ್ಲರೂ ಹೊಸಬರು. ಪ್ರಜಾಪ್ರಭುತ್ವ ರಾಜ್ಯ ಪದ್ಧತಿಯು ನಮ್ಮ ದೇಶಕ್ಕೆ ಹೊಸದು. ಇಂದು ನಾವು ದೇಶ ಕಟ್ಟುತ್ತಾ ಇದ್ದೇವೆ. ದೇಶದ ಅಭಿವೃದ್ಧಿಗಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಅನೇಕ ವಿಷಯಗಳಲ್ಲಿ ತಿದ್ದಿಕೊಳ್ಳಬೇಕಾಗುತ್ತದೆ. ಕೂತುಕೊಂಡವನು ಎಂದಿಗೂ ಎಡವುದಿಲ್ಲ. ಮುಂದೆ ಓಡುತ್ತಿರುವವನೇ ಯಾವಾಗಲೂ ಎಡವುತ್ತಾನೆ. ಅದರಂತೆ ಕೆಲಸ ಮಾಡದೇ ಇರುವ ಮಂತ್ರಿ ಬಗ್ಗೆ ಟೀಕೆ ಬರುವುದಿಲ್ಲ. ಹೆಚ್ಚು ಕೆಲಸ ಮಾಡತಕ್ಕಂಥ ಮಂತ್ರಿ ಬಗ್ಗೆ ಯಾವಾಗಲೂ ಟೀಕೆ ಬರುತ್ತದೆ. ದೊಡ್ಡ ಕೆಲಸ ಮಾಡುವ ಕಾಲದಲ್ಲಿ ದೇಶ ಕಟ್ಟುವ ಕಾಲದಲ್ಲಿ ಟೀಕೆ ಬರುತ್ತದೆ.

The bigger the job they do, the bigger the criticism they have to face. They have to take burden of criticism and proceed further.

ಇದನ್ನು ಪ್ರೈಮ್ ಮಿನಿಸ್ಟರವರು ಅನೇಕ ಸಲ ದೇಶದ ಮುಂದೆ ಇಟ್ಟಿದ್ದಾರೆ. ಟೀಕೆ ಮಾಡಬೇಡಿ ಎಂದು ನಾವು ಹೇಳುವುದಿಲ್ಲ. ಶರಾವತಿ ಯೋಜನೆಗೆ ಕೇಂದ್ರ ಸರಕಾರ ಹಣ ಕೊಡುತ್ತಾ ಇದೆ. ಇಷ್ಟು ದೊಡ್ಡ ಪ್ರಾಜೆಕ್ಟಿಗೆ ಹಣ ಖರ್ಚಾಗುತ್ತಿದೆ. ಮಂತ್ರಿಗಳು ಹಣ ಖರ್ಚು ಮಾಡತಕ್ಕ ವಿಷಯ ಇದು ಅಲ್ಲ. ಮಹಾ ಪ್ರಯತ್ನ ಮಾಡತಕ್ಕಂಥ ಎಂಜನಿಯರುಗಳು ಇದ್ದಾರೆ, ಆಡಿಟ್ ಸೆಕ್ಷನ್ ಇದೆ, ಎಸ್ಟಿಮೇಟ್ಸ್ ಕಮಿಟಿ ಇದೆ, ಪ್ರಜಾಪ್ರಭುತ್ವ ಸರಕಾರ ಇದೆ, ಕಂಟ್ರೋಲ್ ಮಾಡತಕ್ಕ ಅಕೌಂಟ್ಸ್ ಕಮಿಟಿ ಇದೆ, ಹೀಗೆ ಎಲ್ಲಾ ಇರುವಾಗ್ಗೆ ಕೋಟ್ಯಾಂತರ ರೂಪಾಯಿ ಅನ್ಯಾಯವಾಗಿದೆ ಎಂದು ಹೇಳುವುದಕ್ಕೆ ಏನಾದರೂ ಆಧಾರ ಇರಬೇಕು. ಈ ರೀತಿ ಹೇಳುವುದಾದರೆ ಕೇಂದ್ರ ಸರಕಾರ ಕೊಡುವ ಸಹಾಯ ದೊರೆಯದೇ ಹೋಗಬಹುದು, ಇದರಿಂದ ಕನ್ನಡ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಕೇಂದ್ರ ಸರಕಾರ ಕೊಡುವ ಸಹಾಯದಿಂದ ಕನ್ನಡ ದೇಶಕ್ಕೆ ಒಳ್ಳೆಯದಾಗುತ್ತದೆ ಎಂಬುದು ಮುಖ್ಯ ಮಂತ್ರಿಗಳಿಗೆ ಗೊತ್ತಿದೆ. ಆದುದರಿಂದ ಇಂಥ ವಿಷಯಗಳನ್ನು ಲಘುವಾಗಿ ಭಾವಿಸಿ ಟೀಕೆ ಮಾಡಬಾರದು. ಇಂಥ ಟೀಕೆ ದಪ್ಪ ಅಕ್ಷರಗಳಲ್ಲಿ ಪೇಪರಿನಲ್ಲಿ ಬಂದು ಬರಿ ಪಬ್ಲಿಸಿಟಿಯಾಗುತ್ತದೆ. ಮುಂದೆ ಬರುವ ಸಹಾಯ ಕಡಿಮೆಯಾಗುವುದಕ್ಕೆ ಕಾರಣವಾಗುತ್ತದೆ. ಆದ್ದರಿಂದ ಬಹಳ ಜವಾಬ್ದಾರಿಯಿಂದ ಹೇಳಬೇಕಾಗುತ್ತದೆ. ಬೇಜವಾಬ್ದಾರಿಯಿಂದ ಮಾತನಾಡುವುದು ಸರಿಯಲ್ಲ. ಇಂಥ ದೊಡ್ಡ ಮಹತ್ತರವಾದ ಪ್ರಾಜೆಕ್ಟಿನ ಬಗ್ಗೆ ಟೀಕೆ ಮಾಡುವುದರಿಂದ ಬರೀ ಪಬ್ಲಿಸಿಟಿಯಾಗಿ

ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬರುತ್ತದೆ. ಇದರಿಂದ ಏನೂ ಪ್ರಯೋಜನ ಇಲ್ಲ. ಇಂಥ ಮಹತ್ತರ ವಿಷಯಗಳ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಜೊತೆಗೆ ಕುಳಿತುಕೊಂಡು ವಿಷಯ ತಿಳಿದುಕೊಂಡು ಚರ್ಚೆಮಾಡಿ ಸಮಾಧಾನಪಟ್ಟುಕೊಳ್ಳಬೇಕು. ಅದರಲ್ಲಿ ಏನಾದರೂ ಕಂಡು ಬಂದು ಅದಕ್ಕೆ ಬೇರೆ ಮಾರ್ಗವಿಲ್ಲದಿದ್ದರೆ ಮಾತ್ರ ಅಂಥಾದ್ದನ್ನು ಹೊರಗಡೆ ತರಬಹುದು. ಅಂಥಾದ್ದನ್ನು ಮಾಡದೇ ವಿಷಯ ತಿಳಿದುಕೊಳ್ಳದೆ ಬೇಜವಾಬ್ದಾರಿಯಿಂದ ಹೇಳುವುದು ಸರಿಯಲ್ಲ, ದೇಶಕ್ಕೆ ಒಳ್ಳೆಯದಲ್ಲ. ಇನ್ನೂ ಅನೇಕ ಕಡೆ ಇರುವ ಯೋಜನೆಗಳಿಗೆ ಕೇಂದ್ರ ಹಣ ಕೊಡಬೇಕಾಗಿದೆ. ಮೇಕೆದಾಟು ಯೋಜನೆ, ಕಾಳೀ ನದಿ ಯೋಜನೆ, ಕೃಷ್ಣಾ ಯೋಜನೆ ಆಗಬೇಕಾಗಿವೆ. ಕನ್ನಡ ದೇಶ ಪ್ರಕೃತಿ ಸೌಂದರ್ಯದಿಂದ ಕೂಡಿದ ದೇಶವಾಗಿದೆ. ಪ್ರಕೃತಿ ಸಂಪತ್ತು ಹೇರಳವಾಗಿದೆ. ಪ್ರಕೃತಿಯಿಂದ ದೊರೆತ ಆಸ್ತಿಯನ್ನು ರೂಢಿಸಿಕೊಳ್ಳಬೇಕಾಗಿದೆ. ಅದಕ್ಕೆ ಪವರ್ ಬೇಕಾಗಿದೆ. ಇನ್ನೂ ನೂರಾರು ಬೇರೆ ಯೋಜನೆಗಳಿವೆ. ಆದ್ದರಿಂದ ಇಂಥ ವಿಷಯ ಲಘುವಾಗಿ ಮಾತನಾಡುವುದನ್ನು ಬಿಟ್ಟು ಬಿಡಬೇಕು. ಮೈಸೂರು ದೇಶಕ್ಕೆ ಒಬ್ಬ ಶಿಲ್ಪಿ ದೊರೆತಿದ್ದಾನೆ. ಇದುವರೆಗೆ ಭದ್ರ ಸರಕಾರ ಇರಲಿಲ್ಲ ಎಂದು ಹೇಳುವುದಿಲ್ಲ. ಹಳೇ ಮೈಸೂರು ಸಂಸ್ಥಾನದಲ್ಲಿ ಭದ್ರ ಸರಕಾರ ಇರಲಿಲ್ಲ. ಕನ್ನಡ ದೇಶದ ಶಿಲ್ಪಿ ಮಾನ್ಯ ನಿಜಲಿಂಗಪ್ಪನವರು ಆಗಿದ್ದಾರೆ. ಅವರು ಮುಖ್ಯ ಮಂತ್ರಿಯಾಗಿರಲಿ, ಹೊರಗಡೆ ಇರಲಿ, ಅವರ ಕನ್ನಡ ದೇಶದ ಶಿಲ್ಪಿ. ಕನ್ನಡ ದೇಶ ಮುಂದುವರಿಯಬೇಕಾಗಿದೆ. ಮದ್ರಾಸ್ ರಾಜ್ಯಕ್ಕೆ ಕಾಮರಾಜ ನಾಡರ್ ಇರುವ ಹಾಗೆ, ಬಂಗಾಳಕ್ಕೆ ಬಿ. ಸಿ. ರಾಯ್ ಇದ್ದ ಹಾಗೆ, ಮಹಾರಾಷ್ಟ್ರಕ್ಕೆ ಚವ್ಹಾಣ್ ಇದ್ದಹಾಗೆ ನಮ್ಮ ಕನ್ನಡ ರಾಜ್ಯಕ್ಕೆ ನಿಜಲಿಂಗಪ್ಪನವರು ನಾಯಕರಾಗಿದ್ದಾರೆ. ನಮ್ಮ ಜನತೆಯ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದ ನಮ್ಮ ನಾಯಕರ ಕೈಯಲ್ಲಿ ಅಧಿಕಾರ ಸೂತ್ರ ಕೊಟ್ಟಿದ್ದೇವೆ. ಇದಕ್ಕೆ ಯಾವದೇ ಭಿನ್ನಾಭಿಪ್ರಾಯವಿಲ್ಲ. ಇದು ನಮ್ಮ ನಿಮ್ಮ ವಿಷಯವಲ್ಲ. ಭಾರತ ದೇಶ ಬೆಳೆಸಬೇಕಾಗಿದೆ. ಅಂಥ ನಾಯಕಮಣಿಗಳ ಕೈಯಲ್ಲಿ ಅಧಿಕಾರ ಇರುವಾಗ ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ, ಹಾಗೆ ಆಗಿದೆ ಹೀಗೆ ಆಗಿದೆ ಎಂದು ಹೇಳುವುದರ ಬದಲು ಅವರ ಹತ್ತಿರ ಹೋಗಿ ಕೂತುಕೊಂಡು ವಿಷಯ ಇತ್ಯರ್ಥ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಶರಾವತಿ ಯೋಜನೆಯಂಥ ವಿಷಯ ಒಂದೇ ಒಂದು ವಿಷಯ ಇರುತ್ತದೆ.

ಎರಡನೆಯದಾಗಿ ಖಾದಿ ಬೋರ್ಡ್ ವಿಷಯ ಹೇಳಿದರು. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಾರೆ. ಆ ವಿಷಯ ಇತ್ಯರ್ಥವಾಗಲಿದೆ. ಅದು ಸ್ಟಾಚ್ಯುಟರಿ ಬೋರ್ಡ್ ಆಗಿದೆ. ಮೈಸೂರು ಸರಕಾರ ಹಣ ಕೊಟ್ಟಿಲ್ಲ. ಅದನ್ನು ದೊಡ್ಡದು ಮಾಡಿ ಮಂತ್ರಿಗಳು ಒಪ್ಪಿಕೊಂಡಿದ್ದಾರೆ ಹಾಗೆ ಹೀಗೆ ಎಂದು ಈ ಮಾನ್ಯ ಸಭೆಯಲ್ಲಿ ಅವಿಶ್ವಾಸ ಠರಾವು ತಂದು ಜನತೆಗೆ ಹೇಳುವ ಪ್ರಮೇಯವೇ ಇರಲಿಲ್ಲ. ಆಹಾರ ಪರಿಸ್ಥಿತಿ, ಭೂ ಸುಧಾರಣೆ ಬಗ್ಗೆ ಹೇಳಬೇಕಾಗಿರಲಿಲ್ಲ. ಆಹಾರ ಪದಾರ್ಥಗಳ ಬೆಲೆಗಳು ಗಗನಕ್ಕೆ ಏರುತ್ತಿವೆ, ಆಹಾರದ ಬೆಲೆಗಳು ಗಗನಕ್ಕೆ ಏರುತ್ತಿವೆ ಎಂದು ದೊಡ್ಡ ಧ್ವನಿ ತೆಗೆದು ಹೇಳುವುದರಲ್ಲಿ ಏನು ಅರ್ಥ ಇದೆ ? ಆಹಾರ ಪದಾರ್ಥಗಳ ಬೆಲೆ ಎಲ್ಲಿ ಏರಿಲ್ಲ ಎಂಬುದನ್ನು ತೋರಿಸಬೇಕು ಮಾನ್ಯ ಶಿವಪ್ಪನವರೇ ? ನಾನು 11 ವರ್ಷ ಕೇಂದ್ರ ಸರಕಾರದಲ್ಲಿ ಮಂತ್ರಿಯಾಗಿದ್ದೆನು. ಪ್ರಪಂಚವನ್ನೆಲ್ಲಾ ಮೂರು ಸಲ ಸುತ್ತಿಕೊಂಡು ಬಂದಿದ್ದೇನೆ. ಕಮ್ಯುನಿಸ್ಟ್ ರಷಿಯಾ ಮೂರು ಸಲ ಸುತ್ತಿಕೊಂಡು ಬಂದಿದ್ದೇನೆ. ಚೈನಾ, ಅಮೇರಿಕಾ ಕೆನಡಾ ಆಸ್ಟ್ರೇಲಿಯಾ ಮುಂತಾದ ಪ್ರಪಂಚದಲ್ಲಿಯ ನಾನಾ ದೇಶ ಸುತ್ತಿಕೊಂಡು ಎಲ್ಲಾ ದೇಶ ನೋಡಿಕೊಂಡು ಬಂದಿದ್ದೇನೆ.

I have visited all the satellite countries of the Communist block, America, Canada, Australia, New Zealand, South America. No where the prices compare with the wage level.

ಬೆಲೆಗಳು ಎಲ್ಲಿಯೂ ಕಡಮೆ ಇಲ್ಲ. ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಕೊಟ್ಟು ಹೇಳಿದರೆ ಅದನ್ನು ಒಪ್ಪಿಕೊಳ್ಳುತ್ತೇನೆ. ವೇಜ್ ಲೆವೆಲ್ ಪ್ರೈಸ್ ಲೆವೆಲ್ ಗಗನಕ್ಕೆ ಎಲ್ಲಿ ಏರಿಲ್ಲ ? ಐದಾರು ತಿಂಗಳುಗಳ ಹಿಂದೆ ಭತ್ತದ ಬೆಲೆ ಕಡಿಮೆಯಾಗುತ್ತಾ ಇದೆ, ರೈತರಿಗೆ ಅನ್ಯಾಯವಾಗುತ್ತದೆ ಎಂದು ಅವರೇ ಹೇಳಿದರು. ಆಗ್ಗೆ ನಾವು ಭತ್ತ ಕೊಂಡು ಸ್ಟಾಕ್ ಮಾಡಿದೆವು. ಈ ನಾಲ್ಕೈದು ತಿಂಗಳುಗಳಲ್ಲಿ ಬೆಲೆಯಲ್ಲಿ ಏನೂ ವ್ಯತ್ಯಾಸವಾಗಿಲ್ಲ. ಹೋದ ವರ್ಷ ಒಂದು ಪಲ್ಲಾಕ್ಕೆ 65 ರೂಪಾಯಿ ಇದ್ದಿತು. ಹೋದ ವರ್ಷ ಇದ್ದಷ್ಟೇ ಇಂದೂ ಸಹ ಬೆಲೆ ಇದೆ. ಏನು ಹೆಚ್ಚು ಕಡಿಮೆಯಾಗಿದೆ ಎಂಬುದನ್ನು ಅಂಕಿ ಸಂಖ್ಯೆಯಿಂದ ತೋರಿಸಿಕೊಟ್ಟರೆ ನಾನು ಖಂಡಿತವಾಗಿ ಒಪ್ಪುತ್ತೇನೆ. ಅಕ್ಕಿ ಜೋಳ ನಮ್ಮ ಜನರ ಮುಖ್ಯ ಆಹಾರ. ಅವುಗಳ ಬೆಲೆ ಹೋದ ವರ್ಷ ಇದ್ದಷ್ಟೇ ಇಂದು ಇವೆ. ರಾಗಿ ಬೆಲೆ 34-35 ರೂಪಾಯಿ ಇದೆ. ಇವುಗಳ ಬೆಲೆ ಇದಕ್ಕೂ ಕಡಿಮೆಯಾದರೆ ರೈತರು ಬದುಕುವುದಾಕ್ಕಾಗು

(ಶ್ರೀ ಎಂ. ವಿ. ಕೃಷ್ಣಪ್ಪ)

ವುದಿಲ್ಲ ಎಂಬುದ ಸರಕಾರಕ್ಕೆ ಗೊತ್ತಿದೆ. ಬೆಲೆ ಏರಿರುವುದಕ್ಕೆ ನಾವು ಅಂದರೆ ರಾಜ ಸರಕಾರ ಕಾರಣವಲ್ಲ. ಅದು ಕೇಂದ್ರ ಸರಕಾರದ ಪಾಲಿಸಿ ಮೇಲೆ ಅವಲಂಬಿಸಿದೆ. ಆದುದರಿಂದ ಅದನ್ನು ಹೇಳುವುದು ಸರಿಯಲ್ಲ ಹೇಳಬಾರದಾಗಿತ್ತು.

All your agricultural plans have completely failed since 15 years.

ಎಂದು ಬಹು ಅರ್ಭಟ ಮಾಡಿ ಭಾಷಣ ಮಾಡಿದರು. ಅಗ್ರಿಕಲ್ಚರ್ ಪಾಲಿಸಿ ವಿಷಯದಲ್ಲಿ ಹೇಳುವುದಾದರೆ ರಷ್ಯಾ ದೇಶವು 250 ಕೋಟಿ ರೂಪಾಯಿ ಬೆಲೆ ಬಾಳುವ ಗೋಧಿಯನ್ನು ಕೆನಡಾ ಆಸ್ಟ್ರೇಲಿಯಾ ದೇಶದಿಂದ ಕೊಂಡುಕೊಂಡಿದೆ.

People who have reached the Moon have failed on earth. They are not able to give their people two loaves of bread. They have to purchase foodstuffs from other countries. Does it mean weakness in the economy ?

When I was Minister in the Centre or when India got Independence, we were growing 50 million tons of food-stuffs. Today, we are growing 80 million tons.

ರಷ್ಯಾ ದೇಶದವರು ಚಂದ್ರ ಲೋಕವನ್ನು ಮುಟ್ಟಿದರು ಎಂದ ಮಾತ್ರಕ್ಕೆ ಅವರ ಅಗ್ರಿಕಲ್ಚರಲ್ ಎಕನಾಮಿ ಎಲ್ರ್ಯಾ-ಫೇಲ್ಯೂರ್ ಆಗುತ್ತದೆ ಎಂದು ಹೇಳುವುದಕ್ಕೆ ಆಗುತ್ತದೆಯೇ, ಮಹಾ ಮಹಾ ದೊಡ್ಡ ದೊಡ್ಡ ದೇಶಗಳೂ ಕೂಡ ಇವತ್ತಿಗೂ ಮಳೆಯ ಆಧಾರದ ಮೇಲೆ ಅವಲಂಬಿಸಿವೆ, ಮಳೆ ಹೆಚ್ಚು ಕಮ್ಮಿ ಆದಾಗ ಭೂಮಿಯ ವಿಷಯದಲ್ಲಿ ಬೆಳೆಗಳೂ ಕೂಡ ಕಡಿಮೆ ಆಗುತ್ತವೆ ಸ್ವರಾಜ್ಯ ಬಂದಾಗ 50 ಕೋಟಿ ಪಲ್ಲ ಆಹಾರ ಧಾನ್ಯಗಳನ್ನು ಬೆಳೆಯುತ್ತಾ ಇದ್ದೆವು

To-day it is 80 million. I am giving the correct figures. When India became free, India was growing 50 million tons. Now it is 80 million tons.

6-00 P.M.

ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 100 ಮಿಲಿಯನ್ ಟನ್ ಬೆಳೆಯಬೇಕೆಂಬ ಟಾರ್ಜೆಟ್ ಇದೆ. 30 ಕೋಟಿ ಪಲ್ಲ ಜಾಸ್ತಿ ಬೆಳೆದಿದ್ದೇವೆ ಎಂದ ಮೇಲೆ ನಾವು ಈ ವಿಷಯದಲ್ಲಿ ತಾತ್ಸಾರ ಮಾಡಿದ್ದೇವೆಯೇ ಎಂಬುದನ್ನು ತಾವೇ ಯೋಚನೆ ಮಾಡಿ ನೋಡಿ. ನಾವು ಏನೂ ಬೆಳೆಯಲೇ ಇಲ್ಲ ಎಂದು ಇಟ್ಟುಕೊಳ್ಳಿ ಒಂದಾದರೂ ಕೂಡ ನಿಜ ಇದೆ. ಅದೇನೆಂದರೆ ಬ್ರಿಟಿಷರು ನಮ್ಮ ದೇಶ ಬಿಟ್ಟು ಹೋಗುವಾಗ ನಮ್ಮ ದೇಶದ ಜನಸಂಖ್ಯೆ 33 ಕೋಟಿ ಇತ್ತು, 15 ವರ್ಷ ಆದ ಮೇಲೆ 44 ಕೋಟಿ ಜನ ಇವತ್ತು ಇದ್ದೇವೆ. ಎಂದರೆ 11 ಕೋಟಿ ಜನರನ್ನು ಇಂಗ್ಲೀಷರು ನಮ್ಮ ದೇಶ ಬಿಟ್ಟು ಹೋದ ಮೇಲೆ ನಾವು ಜಾಸ್ತಿ ಮಾಡಿದ್ದೇವೆ, 11 ಕೋಟಿ ಜನ ಬೆಳೆದ ಆಹಾರವನ್ನು ತಿಂದು ಹಾಕುತ್ತಾ ಇದ್ದಾರೆ, ಏನೂ ಬೆಳೆಯಲೇ ಇಲ್ಲ ಎಂದು ಹೇಳುವುದಾದರೆ 11 ಕೋಟಿ ಜನ ಜಾಸ್ತಿಯಾಗಿರುವುದೂ ಸುಳ್ಳು ಎಂದಾಗುತ್ತದೆ. ಆದ್ದರಿಂದ ಆ ರೀತಿ ಹೇಳುವುದಕ್ಕೆ ಬರುವುದಿಲ್ಲ. 11 ಕೋಟಿ ಜನ ಎಂದರೆ ಪಾಕೀಸ್ತಾನಕ್ಕಿಂತಲೂ ಹೆಚ್ಚು ಜನ ಆಯಿತು. ಆಹಾರ ಧಾನ್ಯವನ್ನು ಬೆಳೆಯುವವರು ನಾವು ನೀವಲ್ಲ ರೈತರು. ಅವರಿಗೆ ಬೇಕಾದ ಅನುಕೂಲಗಳನ್ನು ಮಾಡುತ್ತ ಇದ್ದೇವೆ, ಭಾರಿ ಭಾರಿ ಜಲಾಶಯಗಳನ್ನು ಕಟ್ಟಿದ್ದೇವೆ. ನಮ್ಮ ಮೈಸೂರು ದೇಶದಲ್ಲಿ ಕನ್ನಂಬಾಡಿ ಒಂದು ಇದ್ದರೆ ಅದರ 60ರಷ್ಟು ಇರತಕ್ಕ ಭಾಕ್ರಾ ನಂಗಲ್ ಪ್ರಾಜೆಕ್ಟು ಇದೆ. 300 ಕೋಟಿ ರೂಪಾಯಿ ಖರ್ಚುಮಾಡಿ ಕಟ್ಟಿದ್ದೇವೆ. ಕನ್ನಂಬಾಡಿಗೆ ಒಂದು ಲಕ್ಷ ರೂಪಾಯಿ ಖರ್ಚು ಆಗಿದೆ. ಕನ್ನಂಬಾಡಿಯಲ್ಲಿ 40 ಸಾವಿರ ಎಕರೆ ಸಾಗುವಳಿಯಾಗುತ್ತಾ ಇದ್ದರೆ ಅಲ್ಲಿ ಇದಕ್ಕೆ 35ರಷ್ಟು ಹೆಚ್ಚು ವಿಸ್ತೀರ್ಣ ಸಾಗುವಳಿಗೆ ಬರುತ್ತದೆ.

ಶ್ರೀ ಎಸ್. ಶಿವಪ್ಪ.—ಮೈಸೂರಿನ ವಿಷಯ ಹೇಳಿ.

ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮಲ್ಲಿ ತುಂಗಭದ್ರಾ ಪ್ರಾಜೆಕ್ಟು ಇದೆ, 16 ಲಕ್ಷ ಎಕರೆಗೆ ನೀರಾಗುತ್ತದೆ, ತುಂಗಭದ್ರಾ ಪ್ರಾಜೆಕ್ಟಿಗೆ ನೂರು ಕೋಟಿ ರೂಪಾಯಿ ಖರ್ಚಾಗಿದೆ. ಇದು ಸ್ವರಾಜ್ಯ ಬಂದ ಮೇಲೆ ಕಟ್ಟಿದ್ದು. ಇಂಡಿಯಾ ದೇಶದ ಸ್ಕೀಮುಗಳೆಲ್ಲಾ ನಿಷ್ಫಲ ಎಂದು ಪ್ರಯೋಜನವೇನು? 35 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಭದ್ರಾ ಅಣೆಕಟ್ಟನ್ನು ಕಟ್ಟಿ ಮುಗಿಸಿ ಚನ್ನಗಿರಿ, ಹರಿಹರ, ಹೊನ್ನಾಳಿ, ಭದ್ರಾವತಿ ತಾಲ್ಲೂಕುಗಳಿಗೆ ಸಹಾಯವಾಗುವಂತೆ ಮೂರುವರೆ ಲಕ್ಷ ಎಕರೆ ಫಲವತ್ತಾದ ಭೂಮಿ ಸಾಗಿಗೆ ಬರುತ್ತದೆ, ಘಟಪ್ರಭಾ ಮುಗಿಯುತ್ತಾ ಇದೆ. ನುಗು ಪ್ರಾಜೆಕ್ಟು, ಭದ್ರಾ ಚಾನಲ್ ಇವೆ, ಈ ರೀತಿ ನೂರಾರು ಮೀಡಿಯಂ ಪ್ರಾಜೆಕ್ಟುಗಳನ್ನು ಒಂದು-ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿರುವುದಾಗಿದೆ.

Series of projects which were 10, to 20 times bigger than Kannambadi which was the only big project once in this country.

ಡಿ. ವಿ. ಸಿ. ಪ್ರಾಜೆಕ್ಟು, ಮಹಾತ್ಮಾ ಗಾಂಧಿ ಪ್ರಾಜೆಕ್ಟು, ಗೋವಿಂದ ಸಾಗರ, ಹೀರಾಕುಡ್ ರೀಹಂಡ್ ಪ್ರಾಜೆಕ್ಟು, ಲೋಯರ್ ಭವಾನಿ ಈ ರೀತಿ ಅನೇಕ ಪ್ರಾಜೆಕ್ಟುಗಳನ್ನು ಮಾಡಿರುವುದರಿಂದ ಸ್ವರಾಜ್ಯ ಬರುವುದಕ್ಕೆ ಮುಂಚೆ ಈ ದೇಶದಲ್ಲಿ 5 ಕೋಟಿ ಎಕರೆಗಳಷ್ಟು ಭೂಮಿಗೆ ನೀರಾವರಿ ಸೌಕರ್ಯ ಇದ್ದದ್ದು ಈಗ 9 ಕೋಟಿ ಎಕರೆ ಆಗಿದೆ. ಸ್ವ ರಾ ಜ್ಯ ಬಂದ ಮೇಲೆ

In the course of the short period of 15 years, our able Statesmen by their proper plans were able to add 4 crores to 5 crores and they made it 9 crores of acres.

ಶ್ರೀ ಎಂ. ವಿ. ಕೃಷ್ಣಪ್ಪ.—ಮೈಸೂರು ದೇಶದಲ್ಲಿ ಇಂಡಿಯಾ ದೇಶದ ಜನರಲ್ಲಿ ಆವರೇಜ್ ತೆಗೆದುಕೊಂಡರೆ ಇರಿಗೇಟೆಡ್ ಏರಿಯಾ ಇಳಿಯುತ್ತಾ ಇದೆ. ಇದಕ್ಕೆ ಯಾರು ಕಾರಣ ಕರ್ತರು ನಾವೇ, ನೀವೇ, ನಿಮ್ಮ ತಾತಂದಿರೇ?

Sri S. SIVAPPA.—Is it not a fact that you have not been able to use Tungabhadra waters for the last five years?

Sri M. V. KRISHNAPPA.—Tungabhrdra project is in Mysore which is going to irrigate 14 lakhs of acres, out of which 6 lakhs acres are already irrigated and the rest will be irrigated. ಶಿವಪ್ಪನವರು ತುಂಗಭದ್ರಾ ನೀರನ್ನು ಏಕೆ ಉಪಯೋಗಿಸಿಲ್ಲ ಎಂದು ಕೇಳಿದರು. ಅದನ್ನು ಉಪಯೋಗಿಸುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆ, ಅದು ಬೇರೆ ಮಾತು. ಆದರೆ ಒಂದು ಅಂಶವನ್ನು ಮಾತ್ರ ಅವರ ಗಮನಕ್ಕೆ ತರುತ್ತೇನೆ.

Kannambadi was completed in 1932. Even after 30 years, do you know that the tail end is still not irrigated. It has taken 30 years to irrigate one lakh acres in Mysore. We are prepared to make every effort to see that every little drop of water is made use of in this country as early as possible, because the country requires it.
ಕಾವೇರಿ ಡ್ಯಾಂ ಕಟ್ಟಿ ಮೂವತ್ತು ವರ್ಷಗಳಾದ ನಂತರ ಅದರ ಕೆಳಗಿನ ಅಚ್ಚುಕಟ್ಟು ಈಗೀಗ ಕಲ್ಟಿವೇಷನ್‌ಗೆ ಬರುತ್ತಿದೆ. ಈ ವಿಚಾರದಲ್ಲಿ ಅಂಥ ಒಂದು ಪರಿಸ್ಥಿತಿಯಿರುವಾಗ, ತಾವು ಈ ತುಂಗಭದ್ರಾ ಡ್ಯಾಮಿನ ವಿಚಾರದಲ್ಲೂ ಸ್ವಲ್ಪ ಆಲೋಚನೆ ಮಾಡಬೇಕು.

But you must know, in no project they are able to make use of the water as early as it is made use in Tungabhadra.

Sri GOPALA SALENNA—How long it takes to complete the atchkat?

ಶ್ರೀ ಎಂ. ವಿ. ಕೃಷ್ಣಪ್ಪ.—ತುಂಗಭದ್ರಾ ಡ್ಯಾಮಿನ ಕೆಳಗಿರತಕ್ಕ ಅಚ್ಚುಕಟ್ಟೆಲ್ಲ ಸಂಪೂರ್ಣವಾಗಿ ಡೆವಲಪ್ ಆಗಬೇಕಾಗಿದ್ದರೆ ಇನ್ನೂ 7-8 ವರ್ಷಗಳು ಬೇಕು. ಅಲ್ಲಿರತಕ್ಕ ಲೋಕಲ್ ಕಂಡೀಷನ್, ಸಾಯಿಲ್, ಜನರ ಅನುಭವ, ಅಲ್ಲಿಯ ಬೆಳೆ ಇವುಗಳನ್ನೆಲ್ಲ ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ಆದುದರಿಂದ ನೀವುಗಳ್ಯಾರೂ ಅಷ್ಟು ನಿರುತ್ಸಾಹಪಡಬೇಕಾಗಿಲ್ಲ ಎಂದು ಹೇಳುತ್ತೇನೆ.

(ಶ್ರೀ ಎಂ. ವಿ. ಕೃಷ್ಣಪ್ಪ)

Development of a project always takes time. But, whatever is the reason, we are not going to wait and we must see that as early as possible we make use of it. But, this is not a charge on the Government that they are not using the water.

ಈ ಹಿಂದೆ ಆ ತುಂಗಭದ್ರಾ ಡ್ಯಾಂಗೆ ತಳಪಾಯ ಹಾಕುವಾಗ ನಾನೂ ಸಹಾ ಅಲ್ಲೇ ಇದ್ದೆ. ಆಗ ನಾನು ಕೇಂದ್ರದ ಮಂತ್ರಿಯಾಗಿದ್ದೆ. ಅಲ್ಲಿ ತಳಪಾಯ ಹಾಕಿದ್ದು 1953 ನೇ ಜುಲೈ ಹತ್ತರಲ್ಲಿ. ನಾವೂ ಸಹಾ ಇಲ್ಲಿ ಒಂದು ಡ್ರಾಪ್ ನೀರನ್ನೂ ಸಹಾ ವೇಸ್ಟ್ ಮಾಡದಂತೆ ಉಪಯೋಗಿಸುತ್ತೇವೆ. ಒಂದೊಂದು ಸ್ಥಳದಲ್ಲಿ ಒಂದೊಂದು ರೀತಿಯ ತೊಂದರೆಗಳು ಇರುತ್ತವೆ. ಆ ಪ್ರದೇಶದಲ್ಲಿರತಕ್ಕ ರೈತರಿಗೆ ತರಿ ವ್ಯವಸಾಯದ ಅಭ್ಯಾಸವಿಲ್ಲ. ಈ ಬಗ್ಗೆ ಈಗಾಗಲೆ ಐದಾರು ಜನ ಮಂತ್ರಿಗಳು ಸಭೆ ಸೇರಿ ಅಲ್ಲಿ ಏನೇನು ಮಾಡಬೇಕೆಂಬುದನ್ನು ಚರ್ಚೆಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಅಲ್ಲಿ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂಬುದನ್ನೆಲ್ಲಾ ಈಗಾಗಲೇ ತೀರ್ಮಾನ ಮಾಡಿದ್ದೇವೆ. ಆದರೆ, ಭದ್ರಾ ಡ್ಯಾಂನ ಬಗ್ಗೆ ನಮಗೆ ಈ ಕಷ್ಟಗಳಿಲ್ಲ. ಏಕೆಂದರೆ ಅಲ್ಲಿಯ ರೈತರಿಗೆ ತರಿ ವ್ಯವಸಾಯ ಚೆನ್ನಾಗಿ ಗೊತ್ತಿದೆ. ಆದರೆ, ಶ್ರೀ ಎಸ್. ಗೋಪಾಲ ಗೌಡರು ಕನ್ನಡನಾಡಿನಲ್ಲಿ ತರಿ ಬೆಳೆ ಬಹಳ ಕಡಮೆ ಎಂತ ಹೇಳಿದರು.

It is a black cotton soil; it is a dry area. They are not used to wet cultivation. You will have to bring people from outside and settle them there. As I said, Kannambadi has taken 30 years to develop the atchkat.

So, it takes time. But, let it not come as an arguement against our own demand. Most of the paddy area in Karnataka is by nature. Areas of South Canara and North Canara and Malnad are irrigated by nature. This advantage is not there in other places. Let this not go into the Press because it would be against our argument. Either Madras or Bengal has this natural advantage. But we are fighting for every drop of water that we must and should get from our rivers and we are going to succeed.

ಇದರಲ್ಲೇನೂ ಅನುಮಾನವೇ ಇಲ್ಲ. ಇದರಿಂದ ಮುಂದೆ ನಮಗೆ ಹೆಚ್ಚಿನ ಅನುಕೂಲವಿದೆ, ನಮ್ಮ ಅದೃಷ್ಟ ಒಳ್ಳೆಯದಿದೆ. ಆದುದರಿಂದ ಈ ವಿಚಾರದಲ್ಲಿ ನೀವೂ ನಾವೂ ಎಲ್ಲರೂ ಒಟ್ಟಿಗೆ ಸೇರಿ ಆ ಘಟಪ್ರಭ, ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಇವುಗಳನ್ನೆಲ್ಲಾ ಯಶಸ್ವಿಗೊಳಿಸೋಣ. ನಾವು ನಮ್ಮ ಮುಂದಿನ ಮಕ್ಕಳಿಗಾದರೂ ಒಳ್ಳೆಯ ಸೌಕರ್ಯಗಳನ್ನು ಕಲ್ಪಿಸೋಣ. ಇಂಥ ಒಂದು ಮಾರ್ಗವನ್ನು ಬಿಟ್ಟು ಸುಮ್ಮನೆ ಟೊಳ್ಳು ಮಾತುಗಳನ್ನು ಕೂಗಬಾರದು, ಇದರಿಂದೇನೂ ಅಂಥ ಒಳ್ಳೆಯದನ್ನು ಸಾಧಿಸಿದಂತಾಗಲಿಲ್ಲ ಅನ್ನುವ ಉದ್ದೇಶಕ್ಕಾಗಿ ನಾನೀಗ ಇಷ್ಟೆಲ್ಲವನ್ನೂ ಹೇಳಬೇಕಾಯಿತು.

ಇನ್ನು ಆಹಾರದ ಬೆಲೆಗಳ ವಿಚಾರಕ್ಕೆ ಬಂದರೆ—ಅದು ನಮ್ಮ ಕೈಲಿಲ್ಲ. ಅದರ ಬಗ್ಗೆ ಕೇಂದ್ರ ಸರ್ಕಾರ ಎಲ್ಲ ಪ್ರಯತ್ನಗಳನ್ನೂ ನಡೆಸುತ್ತಿದೆ. ಆಹಾರ ಸಾಮಗ್ರಿಗಳ ಬೆಲೆ ನಾನಾ ವಿಚಾರಗಳನ್ನು ಅವಲಂಬಿಸಿದೆ. ದೇಶದಲ್ಲಿ 4-5 ಟ್ಯಾಕ್ಸುಗಳನ್ನು ಹಾಕಿಬಿಟ್ಟರೆ ಇಲ್ಲಿ ಬೆಲೆಗಳು ಏರುತ್ತವೆ. ಈ ಬೆಲೆಗಳು ಹೇಗೆ ಏರುತ್ತವೆ ಎಂಬುದಕ್ಕೆ ನಾನೀಗ ತಮಗೆ ಒಂದು ಉದಾಹರಣೆ ಹೇಳುತ್ತೇನೆ: ಇಂಡಿಯಾ ದೇಶದಲ್ಲಿ ಬೆಳೆಯತಕ್ಕ ಆಹಾರಧಾನ್ಯಗಳನ್ನು ನಾವು ಹೊರ ರಾಷ್ಟ್ರಗಳಿಗೆ ರಫ್ತ್ ಮಾಡಿ ಸುಮಾರು 750 ಕೋಟಿ ರೂಪಾಯಿಗಳ ಫಾರಿನ್ ಡಾಲರುಗಳನ್ನು ಸಂಪಾದನೆ ಮಾಡುತ್ತಿದ್ದೇವೆ. ನಮ್ಮಲ್ಲಿ ಭತ್ತ ಬೆಳೆಯುವುದಕ್ಕೆ ಬದಲಾಗಿ ಸೆಣಬನ್ನು ಬೆಳೆಯುತ್ತಿರುವುದರಿಂದ ನಾವು ಈ ಸೆಣಬು ಒಂದರಿಂದಲೇ ಸುಮಾರು 130-140 ಕೋಟಿ ರೂಪಾಯಿಗಳ ಫಾರಿನ್ ಎಕ್ಸ್‌ಛೇಂಜ್ ಗಳಿಸುತ್ತಿದ್ದೇವೆ. ಹೀಗೆ ಸಕ್ಕರೆಯನ್ನೂ ಕೂಡ ನಾವು ಹೊರಗಡೆಗೆ ರವಾನೆ ಮಾಡುತ್ತಿದೇವೆ. ಆದರಿಂದ ಇಲ್ಲಿ ಸಕ್ಕರೆ ಬೆಲೆ ಸ್ವಲ್ಪ ಜಾಸ್ತಿಯಾಗಿದೆ. ಬೆಲ್ಲದ ಬೆಲೆಯೂ ಏರಿದೆ. ಸುಮಾರು 40 ಕೋಟಿ ರೂಪಾಯಿಗಳಷ್ಟು ಬೆಲ್ಲವನ್ನು ನಾವು ಬೇರೆ ರಾಜ್ಯಗಳಿಗೆ ರವಾನೆ ಮಾಡುತ್ತಿದ್ದೇವೆ. ಹೀಗೆ ಟೀ, ರಬ್ಬರ್, ಕಾಫಿ ಇವುಗಳನ್ನೂ ನಾವು ಹೊರಗಡೆಗೆ ರವಾನೆ ಮಾಡುತ್ತಿದ್ದೇವೆ. ಬರಿ ಆಯಿಲ್ ಸೀಡ್ಸ್‌ನಿಂದ ಈ ಸಾರ್ತಿ 60 ಕೋಟಿ ರೂಪಾಯಿಗಳನ್ನು ಪರರಾಷ್ಟ್ರಗಳಿಂದ ಸಂಪಾದನೆ ಮಾಡಿದ್ದೇವೆ. ನೆಲಗಡಲೆಯಿಂದ 60 ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡಿದ್ದೇವೆ. ಹೀಗೆ ನಾವು ಇನ್ನೂ ಈರುಳ್ಳಿ,

ಮೆಣಸಿನಕಾಯಿ, ಆಲೂಗಡ್ಡೆ, ಜೋಳ, ಸೇಂಗಾ ಇತ್ಯಾದಿ ಆಹಾರ ಸಾಮಗ್ರಿಗಳನ್ನು ಪರದೇಶಕ್ಕೆ ಇಲ್ಲಿಂದ ರವಾನೆ ಮಾಡುತ್ತಿದ್ದೇವೆ. ಈ ದಿವಸ ಇವುಗಳಿಂದ ನಮಗೆ ಉಪಕಾರವಾಗದಿದ್ದರೂ ನಮ್ಮ ಮಕ್ಕಳು, ಮೊಮ್ಮಕ್ಕಳಿಗಾದರೂ ಮುಂದೆ ಅನುಕೂಲವಾಗಲೀ ಎಂದು ನಾವು ಹೊರಗಡೆಯಿಂದ ದೊಡ್ಡ ದೊಡ್ಡ ಯಂತ್ರಸಾಮಗ್ರಿಗಳನ್ನು ತರಿಸಿಕೊಂಡು ಇಲ್ಲಿ ಹೈಡರ್ ಪ್ರಾಜೆಕ್ಟ್ಸ್, ದೊಡ್ಡದೊಡ್ಡ ರಿಜರ್ವಾಯರ್ಸ್‌ಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಈ ನಾನಾ ಕಾರಣಗಳಿಂದ ಇಲ್ಲಿ ಆಹಾರ ಧಾನ್ಯಗಳ ಬೆಲೆ ಸ್ವಲ್ಪ ಜಾಸ್ತಿ ಇದೆ. ಈಗ ಹೊರಗಡೆಗೆ ರವಾನೆ ಮಾಡತಕ್ಕದ್ದನ್ನು ನಿಲ್ಲಿಸಿಬಿಟ್ಟರೆ ನಾಳೇ ದಿವಸವೇ ಈ ಆಹಾರಧಾನ್ಯಗಳ ಬೆಲೆ ಬಿದ್ದುಹೋಗುತ್ತದೆ. ನಮಗೆ ಹೊರಗಡೆಯಿಂದ ಬರ ತ್ತಿರುವ ಆದಾಯವೂ ನಿಂತುಹೋಗುತ್ತದೆ.

The prices in a country depends on various factors, not only the foodgrains. India earns a foreign exchange of 750 crores. 70 per cent of it is from agricultural products. First is from jute. It is grown an alternative crop for paddy. Similarly, sugar is grown where paddy was grown.

ಈ ಧಾನ್ಯವಾಸಿಗಳ ಬೆಲೆ ಏರುವುದಕ್ಕೆ ಮೈಸೂರು ಮಂತ್ರಿಮಂಡಲ ಕಾರಣವೆಂದೂ, ಅದ ಕ್ಕಾಗಿ ಈ ಮಂತ್ರಿಮಂಡಲ ರಾಜಿನಾಮೆ ಕೊಡಬೇಕೆಂದು ಹೇಳುತ್ತಿರುವುದು ಸತ್ಯಕ್ಕೆ ದೂರವಾದ ವಿಚಾರ ಎಂದು ಅಷ್ಟು ಮಾತ್ರ ಹೇಳುತ್ತೇನೆ. ಆದುದರಿಂದ ಇನ್ನು ಮುಂದಕ್ಕೆ ದಯವಿಟ್ಟು ಯಾರೂ ಈ ಆಹಾರಧಾನ್ಯಗಳ ಬೆಲೆಯನ್ನು ಪ್ರಸ್ತಾಪಿಸಬಾರದೆಂದು ಕೇಳಿಕೊಳ್ಳುತ್ತೇನೆ. ಇದನ್ನು ಆದಷ್ಟು ಹತೋಟಿಯಲ್ಲಿಡಲು ಸರ್ವ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ.

ಇನ್ನು ಭೂಸುಧಾರಣೆ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಅದು ನಮ್ಮ ಕೈಲಿಲ್ಲ. ಈಗ ಸುಪ್ರೀಂ ಕೋರ್ಟಿನವರು ಕೊಟ್ಟಿರುವ ತೀರ್ಮಾನದ ಪ್ರಕಾರ ನಮ್ಮ ರಾಜ್ಯಾಂಗ ದಲ್ಲಿರತಕ್ಕ ಆರ್ಟಿಕಲ್ 31 (ಎ) ಅಮೆಂಡಾಗುವತನಕ ನಾವೂ ಏನೂ ಮಾಡುವ ಹಾಗಿಲ್ಲ. ಅದಕ್ಕೆ ಆ ತಿದ್ದುಪಡಿಯನ್ನು ಆದಷ್ಟು ಬೇಗ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಈಗಾಗಲೇ ಜನಗಳು ಭೂಮಿಯನ್ನು ಹಂಚಿಬಿಟ್ಟಿದ್ದಾರೆ. ಎಲ್ಲಿ ಹೋದರು ಬಡವರಿಗೆ ಹೆಚ್ಚಾಗಿ ತೊಂದರೆಯಾಗಬಹುದು ಎಂದು ಅವರಾಗಲೇ ಭೂಮಿಯನ್ನು ಮಾರಿದ್ದಾರೆ. ಅದರಿಂದ ನಮ್ಮ ಕೈಗೆ ಭೂಮಿ ಸಿಗುವುದು ಅಷ್ಟರಲ್ಲೇ ಇದೆ. ಇದನ್ನು ಕಿತ್ತುಕೊಳ್ಳಕೂಡದು ಎನ್ನುವ ವಾದವೂ ಇದೆ. ಇದಕ್ಕಾಗಿ ನಾವೂ ಕೂಡ ಭೂಸುಧಾರಣೆಯನ್ನು ಎಷ್ಟುಬೇಗ ಸಾಧ್ಯವೋ ಅಷ್ಟುಬೇಗ ತರಲು ಪ್ರಯತ್ನಮಾಡುತ್ತಿದ್ದೇವೆ.

ಮಾನ್ಯ ದೇವ್‌ರವರು ಮಾತನಾಡುವಾಗ ಏನೇನೋ ಮಾತನಾಡಿಬಿಡುತ್ತಾರೆ. ನಾನು ಹೇಳು ವುದು ಅವರು ಹೇಳಿದಂತೆ ದೇಶದಲ್ಲಿ ರೆವಿನ್ಯೂ ಮಂತ್ರಿಗಳಾಗಿ ಕೆಲಸಮಾಡುವುದು ಬಹಳ ಕಷ್ಟದ ಕೆಲಸ. ನೂರಾರು ಜನ ಜಮೀನಿಗಾಗಿ ಬೇಕೆಂದು ಅರ್ಜಿ ಹಾಕುತ್ತಿರುತ್ತಾರೆ. ನಾವು ಅದಕ್ಕೆ ತಕ್ಕಂತೆ ಆ ಕಾಗದಗಳಿಗೆಲ್ಲಾ ರುಜು ಮಾಡಬೇಕಾಗಿರುತ್ತೆ. ಅಮಲ್ದಾರರೇ ಜಮೀನನ್ನು ಹಂಚುವುದು ಅಲ್ಲದೆ ಲ್ಯಾಂಡು ಗ್ರಾಂಟು ರೂಲ್ಸ್‌ಪ್ರಕಾರ ಭೂಮಿಯನ್ನು ಅನೇಕರು ಹಂಚುತ್ತಾರೆ. ಏನಾದರೂ ತಕರಾರುಗಳಿದ್ದರೆ ಅಂತಹ ತಗಾದೆಗಳು ಮಾತ್ರ ಮಂತ್ರಿಗಳ ಬಳಿಗೆ ಬರುತ್ತವೆ. ಅಲ್ಲದೆ ರೆವೆನ್ಯೂ ಮಂತ್ರಿಗಳಿಗೆ ಪ್ರತಿದಿನವೂ ಸುಮಾರು 450 ರೂಪಾಯಿಗಳಷ್ಟು ಸ್ಟಾಂಪು ಹಚ್ಚಿದ ಅರ್ಜಿಗಳು (ಅರ್ಜಿ ಯೊಂದಕ್ಕೆ ಎರಡು ರೂಪಾಯಿಗಳ ಸ್ಟಾಂಪು ಹಚ್ಚದೇ ಮಂತ್ರಿಗಳ ಬಳಿಗೆ ಬರುವಂತಿಲ್ಲ) (ಸಭೆಗೆ ನೂರಾರು ಅರ್ಜಿಗಳನ್ನು ಮಂತ್ರಿಗಳು ತೋರಿಸಿದರು) ರೆವೆನ್ಯೂ ಮಂತ್ರಿಗಳ ಬಳಿಗೆ ಭೂಮಿಗಾಗಿ ಬರುತ್ತವೆ. ಅಲ್ಲದೇ ಇತರ ಮಂತ್ರಿಗಳು ಪ್ರವಾಸ ಹೋದಾಗ ಅವರ ಮುಖೇನ ಕೂಡ ರೆವೆನ್ಯೂ ಮಂತ್ರಿಗಳಿಗೆ ಭೂಮಿಗಾಗಿ ಅರ್ಜಿಗಳು ಸುಮಾರು 400-500 ರೂಪಾಯಿಗಳಷ್ಟು ಸ್ಟಾಂಪು ಹಚ್ಚಿದ ಅರ್ಜಿಗಳು ಬರುತ್ತಲೇ ಇರುತ್ತವೆ. ಅವೆಲ್ಲವನ್ನೂ ನೋಡಿ ನಾನು ಸೈನು ಹಾಕಬೇಕಾಗು ತ್ತದೆ. ನಾನು ಮನೆಗೆ ಹೋದಮೇಲೆ ನನ್ನ ಟೇಬಲ್ಲಿನಮೇಲೆ 20-30 filesಗಳು ಸೈನ್‌ಗಾಗಿ ಕಾದಿರುತ್ತವೆ. ಅದರಲ್ಲಿ ಮಲೆನಾಡಿನ ಕಾಫೀ ತೋಟಕ್ಕಾಗಿ ಭೂಮಿ ಬೇಕೆಂದು ಶಿಫಾರಸಾಗಿ ಬಂದಿದೆ. ಅವೆಲ್ಲಾ ಕಾನೂನು ಪ್ರಕಾರ ಬರುತ್ತವೆ. ಹಾಗೇ ಕಳಿಸಿದ ಒಂದು ಜಮೀನಿನ ರಿಕಾರ್ಡು ನನ್ನ ಮುಂದೆ ಬಂದಿದೆ. ಇದರಲ್ಲಿ ಯಾರು ಯಾರಿಗೆ ಕೊಡಬಹುದು, ಯಾರಿಗೆ ಇಲ್ಲ ಎನ್ನುವುದನ್ನು ನ್ಯಾಯವಾಗಿ ನೋಡಿದ ಮೇಲೆ Files are delayed unnecessarily ಎಂದು ಇದನ್ನು ರಿಜೆಕ್ಟು ಮಾಡಲಾಯಿತು. ಕೆಲವುವೇಳೆ ಸರಿಯಾಗಿ ನೋಡದೇ ಒಂದು ಫೈಲು ಹದಿನೈದು ದಿವಸದವರೆಗೆ ಇಟ್ಟುಕೊಳ್ಳಬೇಕಾಗುತ್ತದೆ ಹೀಗೆ ಸುಮಾರು 300-400 ಫೈಲುಗಳು ಹೆಚ್ಚು ಕಡಿಮೆ ನನ್ನಬಳಿ ಬರುವಾಗ ನಾವೂ ಅಧಿಕಾರಿಗಳಲ್ಲಿ ನಂಬಿಕೆಯಿಟ್ಟು ಸೈನು ಮಾಡಬೇಕಾಗುತ್ತದೆ. ಇದರಲ್ಲಿ ಕೆಲವು ವೇಳೆ ದುರ್ವಿನಿಯೋಗವಾಗಬಹುದು, ಕೆಲವು ವೇಳೆ ಸದ್ವಿನಿಯೋಗವಾಗಬಹುದು.

(ಶ್ರೀ ಎಂ. ವಿ. ಕೃಷ್ಣಪ್ಪ)

ನೂರು ಎಕರೆಯಷ್ಟು ಭೂಮಿಯನ್ನು ಮಂತ್ರಿಗಳು ಹಂಚಿದರು ಎಂದು ಬೆಂಗಳೂರಿನ ಸೌತ್ ತಾಲ್ಲೂಕಿನ ಬಗ್ಗೆ ಪ್ರಸ್ತಾಪ ಬಂತು. ಇದು ಆಚಾರ್ಯ ಪಾಠಶಾಲೆಯವರು ಅವರ ಸಂಸ್ಥೆಗಾಗಿ ಏಳು ಎಕರೆಗಳಷ್ಟು ಭೂಮಿ ಮಾತ್ರ ಕೇಳಿದರು. ನಾನು ಅವರಿಗೆ 45 ಎಕರೆಯಷ್ಟು ಜಮೀನು ಕೊಟ್ಟು ಬಂದೆ. ಅಲ್ಲಿ ಅವರು ಒಳ್ಳೆಯ ಹೈಸ್ಕೂಲು ಕಟ್ಟಿದ್ದಾರೆ. ಒಳ್ಳೆಯ ಒಂದು ಟೆಕ್ನಿಕಲ್ ಇನ್ಸ್ಟಿಟ್ಯೂಟು ಕಟ್ಟಿದ್ದಾರೆ. ಒಂದು ಹಾಸ್ಟಲ್ ಕಟ್ಟಿದ್ದಾರೆ. ಇಲ್ಲಿ ಒಂದು ಪಾಲಿಟೆಕ್ನಿಕಲ್ ಇನ್ಸಿಟಿಟ್ಯೂಟು ಆದುದರಿಂದ ಅಲ್ಲಿನ ಸುತ್ತಮುತ್ತಲಿನ ರೈತರಿಗೆ ಅನುಕೂಲವಾಗುತ್ತದೆ. ಅದೇ ರೀತಿ ಹೈಸ್ಕೂಲಿಗಾಗಿ ಹೆಚ್.ಎಂ.ಟಿ.ಯ ಬಳಿ ಸಹ ಜಮೀನನ್ನು ಅವರಿಗೂ ಕೊಡಲಾಗಿದೆ. ಹಾಗೇ Dairymenಗಾಗಿ ಕೃಷಿಗಾಗಿ ಭೂಮಿ ಕೊಡಲಾಗಿದೆ. ಜನರು ನನ್ನನ್ನು ಹುಲ್ಲು ಬೇಕಾದ ಹಾಗೆ ಬೆಳೆದು ಬೆಂಗಳೂರಿನಲ್ಲಿ Dairy ಮಾಡುತ್ತಾರೆಂದು ಹೇಳುತ್ತಿದ್ದರು. ಡೈರಿ ಏನೋ ಆಗುತ್ತಿದೆ. ಒಂದೂವರೆ ಕೋಟಿಯಷ್ಟು ಮಾಡಿ ಬಹಳ ಒಳ್ಳೆಯ ಕೆಲಸವಾಡುತ್ತಿದ್ದೇವೆ. ಇನ್ನೆರಡು ತಿಂಗಳಿನಲ್ಲಿ ಇದರ ಕೆಲಸ ಮುಗಿದು ಬೆಂಗಳೂರಿನಲ್ಲಿ ಆರಂಭವಾಗುತ್ತದೆ. ಇದು ಪ್ರಾರಂಭವಾಗುವುದರಿಂದ ಎಷ್ಟೋ ಜನರು "ಡೈರಿಮೆನ್"ರವರು ಹೊರಗಡೆ ಹೋಗಬೇಕಾಗುತ್ತದೆ, ಎಂದು ಇಂತಹ ಕೆಲವರ ಹೆಸರನ್ನು ಮನಸ್ಸಿನಲ್ಲಿಟ್ಟುಕೊಂಡು they are at present having 10-15 and some have 20-25 cattle.

ಇಂತಹವರು ಕೆಲಸವಿಲ್ಲದೆ ತೊಂದರೆಗೆ ಸಿಗುತ್ತಾರೆಂದು ನಾನೇ Dairymenಗಾಗಿ ಸ್ಪೆಷಲ್ ಆಗಿ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಇವರಿಗೆ 2-3 ಎಕರೆಯಷ್ಟು ಭೂಮಿ ಕೊಡಬಹುದು ಎಂದು ಆರ್ಡರು ಪಾಸುಮಾಡಿದ್ದೇನೆ. ಅದರಂತೆ ಈಗಾಗಲೇ 7-8 ಜನಕ್ಕೆ ಜಮೀನನ್ನು ಕೊಟ್ಟಿದೆ. ಈ ಜಮೀನಿಗಾಗಿ ಎಷ್ಟೋ ದೊಡ್ಡ ದೊಡ್ಡ ಮಹನೀಯರು ಅರ್ಜಿಗಳನ್ನು ಕೊಟ್ಟಿರುವುದೂ ಇದೆ. ಅವರಿಗೆ ಸಿಗಲಿಲ್ಲ ಎನ್ನುವ ಹೊಟ್ಟೆಯುರಿಯಿಂದ ಕೆಲವರು ನೂರಾರು ಎಕರೆಯನ್ನು ಯಾರ್ಯಾರಿಗೋ ಕೊಟ್ಟರೆಂದು ಹೇಳಿರಬಹುದು, ದೇವರ ಸಾಕ್ಷಿಯಾಗಿ ನಾನು ಹೇಳುತ್ತಿದ್ದೇನೆ ; ಬೆಂಗಳೂರಿನ ಸುತ್ತಮುತ್ತಲಿನಲ್ಲಿ 5-6 ಜನಕ್ಕೆ ಎಂದು ಈಗ ಒಂದು-ಒಂದೂವರೆ ಎಕರೆಯಷ್ಟು ಜಮೀನನ್ನು cattle feed industry ಬೆಳೆಯಬೇಕು ಎಂದು ಕೊಡಲಾಗಿದೆ ದೊಡ್ಡ ಡೈರಿ ಬೇಳೆದರೆ, ಅದಕ್ಕೆ ಸರಿಯಾಗಿ ಕ್ಯಾಟಲ್ ಫೀಡ್ ಆಗಬೇಕು.

ದೊಡ್ಡ ದೊಡ್ಡ ಇಂಡಸ್ಟ್ರೀಗಳು ಇಂದು ಪ್ರಪಂಚದಲ್ಲೆಲ್ಲಾ ಬೆಳೆಯುತ್ತಿವೆ. ಅದರಂತೆ ನಮ್ಮ ಬೆಂಗಳೂರಿನಲ್ಲೂ ಕ್ಯಾಟಲ್ ಫೀಡ್ ಇಂಡಸ್ಟ್ರಿ ಮುಂದೆ ಬರಬೇಕೆಂದು ನಾನೇ ಬೆಂಗಳೂರಿನ ಹತ್ತಿರ out of the way ಹೋಗಿ ಈ ಜನಕ್ಕೆ ಭೂಮಿ ಕೊಟ್ಟು cattle feed industryಗೆ ಅನುಕೂಲವಾಗಲೀ ಎಂದು ಕೊಟ್ಟಿದೆಯೇ ಹೊರತು ಬೇರೆ ಏನೂ ಅನುಮಾನವೂ ಇದರಲ್ಲಿಲ್ಲ. ಬೇರೆ ಜಮೀನಿಗಾಗಿ 20-30 ಜನ ಅರ್ಜಿ ಹಾಕಿದ್ದರು. ಅವರಿಗೆ ಕೊಡಲಿಲ್ಲ ಎಂದು ರೆವೆನ್ಯೂ ಮಂತ್ರಿಗಳು ಸಾವಿರಾರು ಎಕರೆಯಷ್ಟು ಜಮೀನು ಕೊಟ್ಟರು ಎಂದು ಹೇಳುವುದು ಸರಿಯಾಗುವುದಿಲ್ಲ. ಸಾವಿರಾರು ಎಕರೆಯಷ್ಟು ಭೂಮಿ ಹಂಚಲಾಗಿ ಒಂದೆರಡು ತಪ್ಪುಗಳಾಗಿರಬಹುದು ಇಲ್ಲ ಎಂದು ಹೇಳುವುದಿಲ್ಲ. ಅಂತಹುದು ಏನಾದರೂ ಇದ್ದು ಅದನ್ನು ನನ್ನ ಗಮನಕ್ಕೆ ತಂದರೆ ನಾಳೇನೇ ನಾನು ಅದನ್ನು ಕ್ಯಾನ್ಸಲ್ ಮಾಡುತ್ತೇನೆ. ಅಂತಹ ಭೂಮಿಯನ್ನು ಯಾರೂ ಪಡೆಯುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರಲ್ಲಿ ಮತ್ತೊಮ್ಮೆ ನಾನು ಕೇಳಿಕೊಳ್ಳುವುದು ಇಂತಹ ಅವಿಶ್ವಾಸದ ಠರಾವನ್ನು ತರುವುದು ಇದೇ ಕೊನೆಯಾಗಿಟ್ಟುಕೊಂಡು ಇನ್ನು ಮುಂದೆ ತರಬೇಡಿ. ಇದಕ್ಕಾಗಿ ರಾಜೀನಾಮೆ ಕೊಡಿ ಎಂದರೆ ಎಷ್ಟು ಆಭಾಸವಾಗಿ ಕಾಣುತ್ತದೆ ಎನ್ನುವುದನ್ನು ತಾವೇ ಯೋಚಿಸಬಹುದು. ಇವೆಲ್ಲಾ ಸಾಮಾನ್ಯವಾದಂತಹವುಗಳು. ಆದಕಾರಣ ಮಾನ್ಯ ಸದಸ್ಯರಾದ ಶಿವಪ್ಪನವರು ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಇಷ್ಟು ಮಾತ್ರ ಹೇಳುತ್ತೇನೆ.

†ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮೀ, ಇಷ್ಟು ಹೊತ್ತಿನವರೆಗೂ ನಮ್ಮ ರೆವೆನ್ಯೂ ಸಚಿವರು ಮಾತನಾಡಿದುದನ್ನು ಕೇಳಿದರೆ "ಗಾಣಿಗಿತ್ತಿ ಅಯ್ಯೋ ಅಂದರೆ ಕೂಸಿನ ನೆತ್ತಿ ತಣ್ಣಗಾದೀತೇ" ಎನ್ನುವಂತೆ ಅಂತೂ ಬಹಳ ವಿಧದಲ್ಲಿ ಜನಗಳಿಗೆ ನಾನಾ ಕಥೆಗಳನ್ನು ಹೇಳಿ ನಮ್ಮನ್ನೂ ನಗಿಸಿ, ನಮ್ಮ ಮಾನ್ಯ ಶಿವಪ್ಪನವರು ತಂದಿರುವ ನಿರ್ಣಯದ ಮೇಲೆ ಒಂದು ದೊಡ್ಡ ಪರಿಣಾಮವನ್ನುಂಟುಮಾಡಿದರು ಎಂದು ತಿಳಿದುಕೊಂಡರೂ, ಈವರೆಗಿನ ವಿರೋಧಪಕ್ಷದಿಂದ ಮಾತನಾಡಿದ ನನ್ನ ಎಲ್ಲ ಸ್ನೇಹಿತರೂ ಹೇಳಿದ ವಿಚಾರಗಳನ್ನು ಬಿಟ್ಟು ಇನ್ನು ಕೆಲವು ವಿಚಾರಗಳಿಂದ ಈ ಸರಕಾರದಲ್ಲಿ ಬಹುಮಟ್ಟಿಗೆ ನಂಬಿಕೆಯನ್ನು ಹೇಗೆ ನೀವು ಕಳೆದುಕೊಳ್ಳುತ್ತಿದ್ದೀರಿ ಎನ್ನತಕ್ಕದ್ದನ್ನು

ನಾವು ಹೇಗೆ ಯೋಚನೆ ಮಾಡಿದ್ದೇವೆ, ನಮ್ಮ ಎದುರುಪಕ್ಷದ ಸದಸ್ಯರೂ ಆ ರೀತಿ ಯೋಚನೆ ಮಾಡುವುದಾದರೆ ಇವೊತ್ತಿನ ಆಡಳಿತದಲ್ಲಿ ಇರತಕ್ಕ ಲೋಪದೋಷಗಳು ಒಂದಲ್ಲ, ಎರಡಲ್ಲ, ಹೇಳುತ್ತ ಹೋದರೆ ಸಾವಿರಾರು ಇವೆ. ಇದು ನಮಗೆ ಎಷ್ಟುಮಟ್ಟಿಗೆ ಗೊತ್ತೋ ಅವರಿಗೂ ಅಷ್ಟು ಮಟ್ಟಿಗೇ ಗೊತ್ತು. ಇಲ್ಲಿ ಕುಳಿತುಕೊಂಡು ವಾದಮಾಡತಕ್ಕ ಒಂದು ಪಕ್ಷದ ಸರಕಾರ ಆದ್ದರಿಂದ ಅವರ ಪರವಾಗಿ ವಾದವನ್ನು ಮಾಡುತ್ತಿದ್ದಾರೆ. ಹೋಗಲಿ ಇದನ್ನು ಹೆಚ್ಚಾಗಿ ಬೆಳೆಸುವುದಕ್ಕೆ ಇಷ್ಟಪಡುವುದಿಲ್ಲ.

Mr. CHAIRMAN.—The House will now rise and meet again at 9 A.M. on Tuesday, the 8th October 1963.

The House adjourned at Thirty Minutes past Six of the Clock to meet again at Nine of the Clock on Tuesday, the 8th October 1963.

V-2 32 N63
N63-3-66-70
(B) 4798

WD 1309—GPB—900—27-12-63

MYSORE LEGISLATIVE ASSEMBLY

SIXTY-NINTH DAY.

Tuesday, 8th October 1963.

The House met in the Assembly Hall, Vidhana Soudha, Bangalore, at Nine of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

PAPERS LAID ON THE TABLE.

Sri R. M. PATIL (Minister for Home).—Sir, I beg to lay Notification No. HD 111 TMR 63, dated 27th September, 1963 (amendments to the Mysore Motor Vehicles Rules, 1963), as required under sub-section (3) of section 133 of the Motor Vehicles Act, 1939 (Central Act 4 of 1939).

MOTION OF NO-CONFIDENCE IN THE COUNCIL OF MINISTERS.

(*Debate continued*)

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ, ನಿನ್ನೆ ನಾನು ಮಾತನಾಡುತ್ತ ಶ್ರೀಮಾನ್ ಕೃಷ್ಣಪ್ಪನವರು ಆಡಿದ ಕೆಲವು ವಿಚಾರಗಳನ್ನು ಮತ್ತೆ ಎತ್ತಿದೆ ಎಂದರೆ ಶರಾವತಿ ವಗೈರೆ ವಿಚಾರಗಳು. ಈ ಸಣ್ಣಪುಟ್ಟ ದೋಷಗಳನ್ನು ಸರ್ಕಾರ ಅಲಕ್ಷ್ಯ ಮಾಡುವಹಾಗೆ ಇಲ್ಲ. 1947ರ ಹಿಂದೆ ಇದ್ದಂಥ ಪರಿಸ್ಥಿತಿಗೂ ಸ್ವಾತಂತ್ರ್ಯಾನಂತರ, ಈ 16 ವರ್ಷಗಳ ನಂತರ ಇರತಕ್ಕ ಪರಿಸ್ಥಿತಿಗೂ ಎಳ್ಳಷ್ಟೂ ವ್ಯತ್ಯಾಸ, ಬದಲಾವಣೆ ಆಡಳಿತದಲ್ಲಿ ಆಗಿಲ್ಲ ಎಂಬತಕ್ಕದ್ದು ನನ್ನ ಹಾಗೆ ಈ ಸಭೆಯ ಇತರ ಮಾನ್ಯ ಸದಸ್ಯರಿಗೂ ಚೆನ್ನಾಗಿ ಮನದಟ್ಟಾಗಿರಬಹುದು ಎಂದು ನಾನಾದರೂ ಭಾವಿಸಿದ್ದೇನೆ. ರೈತ ಸಣ್ಣಪುಟ್ಟ ಕೆಲಸಕಾರ್ಯಗಳಿಗೆ ಅಧಿಕಾರಿಗಳ ಬಳಿಗೆ ಹೋಗ ಬೇಕಾದ ಸಂದರ್ಭದಲ್ಲಿ ಅವನಿಗೆ ಆಗತಕ್ಕ ಕಿರುಕುಳ, ಅವರ ಮುಂದೆ ಬರತಕ್ಕ ಅರ್ಜಿಗಳನ್ನು ವಿಮರ್ಶೆಮಾಡಿ ತೀರ್ಮಾನ ಮಾಡುವುದರಲ್ಲಿ ಆಗತಕ್ಕ ವಿಳಂಬ ಇವು ಹೇಳಿಕೊಳ್ಳುವುದಕ್ಕೆ ಬಹಳ ಕಷ್ಟವಾದಂಥ ಪರಿಸ್ಥಿತಿಗಳಾಗಿವೆ. ಉದಾಹರಣೆಗೆ ಟೆನೆನ್ಸಿ ಕಾನೂನು ಏನಿದೆ ಅದರಲ್ಲಿ ಆಗತಕ್ಕ ತೊಂದರೆಯ ನಿದರ್ಶನವನ್ನು ಕೊಟ್ಟರೆ ಸರಿ ಎಂದು ನಾನು ತಿಳಿದುಕೊಂಡಿದ್ದೇನೆ ಸ್ವಾಮಿ. ಈ ಟೆನೆನ್ಸಿ ಕಾನೂನು ವಿಷಯ ತಿಳಿಯದೆ ಇರತಕ್ಕ ಅಮಲ್ದಾರರು ಈ ಕೇಸುಗಳನ್ನು ತೀರ್ಮಾನ ಮಾಡಬೇಕು ಎಂದು ಹೇಳಿದ್ದಾರೆ. ಅದರ ಮೇಲೆ ಇನ್ನು ಯಾರಿಗೂ ಅಪೀಲು ಹೋಗುವುದಕ್ಕಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳು ಮೊದಲೇ ಒಂದು ಉದ್ದೇಶವನ್ನಿಟ್ಟುಕೊಂಡು ಕೆಲಸಮಾಡುವಾಗ ಅಪೀಲಿಗೆ ಅವಕಾಶವಿಲ್ಲದೆ ಹೋದರೆ ಬಹಳ ಕಷ್ಟವಾಗುತ್ತದೆ, ಬೇರೆ ಕೋರ್ಟುಗಳಿಗೆ ಅಪೀಲು ಹೋಗುವುದಕ್ಕೂ ಅವಕಾಶವಿಲ್ಲ. ಯಾರು ಕಾನೂನಿನಿಂದ ಪರಿಹಾರ ಪಡೆಯಬೇಕು ಎಂದು ಪ್ರಯತ್ನಿಸುತ್ತಾರೆಯೋ ಅವರು ಪರಿಹಾರ ಪಡೆಯಲು ಹತ್ತಾರು ವರ್ಷ ಎಳೆದು ಅದು ಮುಗಿಯುವ ಹೊತ್ತಿಗೆ, ಹೈಕೋರ್ಟ್ ಹತ್ತಿ ಬರುವ ವೇಳೆಗೆ ಅವರು ಇರುತ್ತಾರೆಯೋ ಹೋಗಿರುತ್ತಾರೆಯೊ ಎಂದು ಹೇಳುವುದಕ್ಕೆ ಸಾಧ್ಯವಾಗದಂಥ ಪರಿಸ್ಥಿತಿ ಇವತ್ತು ಇದೆ.

(ಶ್ರೀ ಟಿ. ಎಚ್. ಮಾದಪ್ಪ ಗೌಡ)

ಲಂಚರುಷುವತ್ತು ಏನಿದೆ ಅದು ಹಿಂದಿಗಿಂತ ಇವತ್ತು ಹತ್ತು ಪಟ್ಟು, ನೂರು ಪಟ್ಟು ಜಾಸ್ತಿಯಾಗಿರತಕ್ಕದ್ದು ನಮ್ಮ ಅನುಭವದ ಮಾತು. ಒಬ್ಬ ದರಖಾಸ್ತು ಗುಮಾಸ್ತನಿಂದ ಹಿಡಿದು— ದರಖಾಸ್ತು ಗುಮಾಸ್ತ ಏಕೆ ತಾಲ್ಲೂಕಾಫೀಸಿನಲ್ಲಿ ನಿಂತಿರತಕ್ಕ ಜವಾನ ಮೊದಲ್ಗೊಂಡು ಬಹಳ ಉನ್ನತ ಹುದ್ದೆಯಲ್ಲಿರುವವರ ವರೆಗೂ ಇದು ನಾನಾ ರೂಪದಲ್ಲಿ ಹರಡಿರತಕ್ಕದ್ದಾಗಿದೆ. ರಿಪೋರ್ಟ್‌ಗಳು ಬಂದ ನಂತರ, ಬೇಕು ಮಾಡಿಕೊಂಡಿರತಕ್ಕ ಕೆಲವು ಜನರ ಶಿಫಾರಸು ಇದ್ದರೆ ಏನು ಬೇಕಾದರೂ ಆಗಬಹುದು. ಇಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ರಿಪೋರ್ಟಿನಲ್ಲಿ ಹೇಳುವಂಥ ಅನೇಕ ವಿದ್ಯಮಾನಗಳನ್ನು ಸರ್ಕಾರದವರ ಗಮನಕ್ಕೆ ತಂದರೂ ಏನೂ ಪ್ರಯೋಜನವಿಲ್ಲವಾಗಿದೆ. ಅದಕ್ಕೆ ಒಂದು ನಿದರ್ಶನವನ್ನು ಇಲ್ಲಿ ಹೇಳುತ್ತೇನೆ. ಅದು ಒಬ್ಬ ಪೋಲೀಸ್ ಸೂಪರಿಟೆಂಡೆಂಟರಿಗೆ ಸಂಬಂಧಪಟ್ಟದ್ದು. ಹಿಂದೆ ಇದ್ದಂಥ ಗೃಹ ಮಂತ್ರಿಗಳು ಅವರ ಕಾಲದಲ್ಲಿ ನೂರಾರು ಅಪಾದನೆಗಳನ್ನು ಮಾಡಿ ಅವನ್ನು ತಪ್ಪಿಸಿಕೊಳ್ಳುವುದಕ್ಕೆ ಆಗದೆ ಇರತಕ್ಕ ಸನ್ನಿವೇಶಗಳು ಇದ್ದಂಥ ಪರಿಸ್ಥಿತಿ ಈ ಸರ್ಕಾರದ ಮುಂದೆ ಬಂದಾಗ, ಎರಡು ಮೂರು ವರ್ಷ ಕೆಲಸದಲ್ಲಿ ಇಲ್ಲದೆ ಇದ್ದವರನ್ನು ಆ ಕಾಲದ ಪರಿಹಾರವನ್ನು ಸಹ ಕೊಟ್ಟು ಮತ್ತೆ ಕೆಲಸಕ್ಕೆ ತೆಗೆದುಕೊಂಡಿದ್ದಾರೆಂದು ಹೇಳಿದರೆ ಲಂಚ ತೆಗೆದುಕೊಳ್ಳತಕ್ಕ ಜನಗಳಿಗೆ ಒಂದು ವಿಧವಾದ ಪ್ರೋತ್ಸಾಹ ಕೊಟ್ಟಂತಾಗುವುದಿಲ್ಲವೆ? ಈ ರೀತಿಯ ಪರಿಸ್ಥಿತಿ ದೇಶದಲ್ಲಿ ಇದ್ದರೆ ಆಡಳಿತದಲ್ಲಿ ಬಿಗಿಯಾದರೂ ಹೇಗೆ ಬರುತ್ತದೆ ಎನ್ನುವುದನ್ನು ಬಹಳ ಆಳವಾಗಿ ಆಳುವ ಸರ್ಕಾರದವರು ಯೋಚನೆ ಮಾಡಬೇಕಾಗಿದೆ ಸ್ವಾಮಿ.

1956ರಲ್ಲಿ ನಮ್ಮ ರಾಜ್ಯದ ಪುನರ್ವಿಂಗಡಣೆಯಾದ ಸಂದರ್ಭದಲ್ಲಿ ಹಳೆಯ ಮೈಸೂರಿನ ನೌಕರರಿಗೆ ಆಗಿರತಕ್ಕ ಒಂದು ಅನ್ಯಾಯವನ್ನು ಈ ಸರ್ಕಾರ ಸರಿಪಡಿಸುವುದಕ್ಕೆ ಸಾಧ್ಯವಾಗಿಲ್ಲ. ಅದು ಹೇಗಾಯಿತು ಎನ್ನುವುದನ್ನು ಒಂದೆರಡು ಮಾತಿನಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆ ಸಮಯದಲ್ಲಿ ಯಾವುದೇ ಅಧಿಕಾರಿಗೆ ಬಡ್ತಿ ವಗೈರೆ ಕೊಡಕೂಡದೆಂದು ಒಂದು ಆದೇಶವಿತ್ತು. ಆದರೂ ಕೂಡ ಹೈದರಾಬಾದು, ಬೊಂಬಾಯಿ ಮತ್ತು ಕೊಡಗು ಈ ಪ್ರದೇಶದಿಂದ ನಮ್ಮ ದೇಶಕ್ಕೆ ಸೇರಿಕೊಂಡಂಥ ಕಾಲದಲ್ಲಿ ಅವರೆಲ್ಲ ಹೊರಗೆ ಹೋಗುವುದಕ್ಕೆ ಒಂದೆರಡು ದಿವಸ ಮುಂಚೆ ಕೆಲಸ ಕೊಟ್ಟು ಖಾಯಂ ಮಾಡಿ ಇಂಕ್ರಿಮೆಂಟ್ ಕೊಟ್ಟು ಕಳಿಸಿದರು. ಆದರೆ ಆ ಹೊತ್ತು ನಮ್ಮ ಸರ್ಕಾರದವರು ಇದನ್ನು ಯೋಚನೆ ಮಾಡದೆ ಕಾನೂನು ಬದ್ಧವಾಗಿ ನಮ್ಮವರನ್ನು ಕೈಬಿಟ್ಟಿದ್ದರ ದೆಸೆಯಿಂದ ಇವೊತ್ತು ಅವರಿಗೆ ನ್ಯಾಯ ದೊರೆತಿಲ್ಲ. ಅವರೆಲ್ಲ ಅತೃಪ್ತರಾಗಿದ್ದಾರೆ. ಸರ್ಕಾರದ ಕೆಲಸವನ್ನು ಮಾಡುವಾಗ ಉತ್ಸಾಹವಿಲ್ಲದೆ ಹೋದರೆ, ಅವರಿಗೆ ದೊರೆಯಬೇಕಾದ ನ್ಯಾಯ ದೊರೆಯದೆ ಹೋದರೆ ಕೆಲಸ ಹೇಗೆ ಮಾಡುತ್ತಾರೆ ಎನ್ನುವುದನ್ನು ಯೋಚನೆ ಮಾಡಬೇಕು. ಈಗಲಾದರೂ ಕೂಡ ಈ ಸರ್ಕಾರ 1956ರ ಹಿಂದೆ ಹೊರಗಿನಿಂದ ಬಂದಿರತಕ್ಕ ಅಧಿಕಾರಿಗಳು ಯಾವ ಯಾವ ಜಾಗದಲ್ಲಿ ಯಾವತ್ತು ಯಾವತ್ತು ಇದ್ದರು, ಅವರಿಗೆ ನ್ಯಾಯವಾಗಿ ದೊರೆಯಬೇಕಾದ್ದೇನು ಎಂಬುದನ್ನೆಲ್ಲಾ ವಿಮರ್ಶೆ ಮಾಡಿ ಆದಷ್ಟು ಬೇಗ ಹಳೆಯ ಮೈಸೂರಿನ ಭಾಗದ ಅಧಿಕಾರಿಗಳಿಗೆ ನ್ಯಾಯ ದೊರಕಿಸಿ ಅನುಕೂಲ ಮಾಡುವುದರಲ್ಲಿ ಈ ಸರ್ಕಾರ ವಿಫಲವಾಗಿದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ವಿರೋಧ ಪಕ್ಷದವರು ಸಣ್ಣ ಪುಟ್ಟ ಕಾರಣಕ್ಕಾಗಿ ಸರಕಾರದ ಮೇಲೆ ಅವಿಶ್ವಾಸ ನಿರ್ಣಯ ತರತಕ್ಕದ್ದು ಸರಿಯಲ್ಲ, ಇದು ಒಂದು ಬ್ರಹ್ಮಾಸ್ತ್ರ, ಇದನ್ನು ಉಪಯೋಗಿಸ ತಕ್ಕಂಥ ಸನ್ನಿವೇಶ ಬಹಳ ಅಪರೂಪವಾಗಿ ಬರುತ್ತದೆ ಎಂದು ಮುಂಚಿತವಾಗಿ ಮಾನ್ಯ ಕಂದಾಯ ಮಂತ್ರಿಗಳು ಹೇಳಿದರು. ನಾನು ಈ ಮಾತನ್ನು ಒಪ್ಪುತ್ತೇನೆ. ಸರಕಾರದಲ್ಲಿ ಇರತಕ್ಕಂಥ ನ್ಯೂನತೆಗಳನ್ನು ತೋರಿಸುವುದಕ್ಕೆ ಒಂದು ಅವಕಾಶ ನಮಗೆ ಸಿಕ್ಕ ಬೇಕು. ಈಗ ಏನಾಗಿದೆ ಎಂದರೆ ನೀವು ಹೇಳಿದ್ದನ್ನು ಹೇಳುತ್ತಾ ಇರಿ, ನಾವು ಮಾಡಿದ್ದನ್ನು ಮಾಡುತ್ತಾ ಇರುತ್ತೇವೆ, ಎಂಬ ರೂಢಿ ನಿಮ್ಮ ಪಕ್ಷದಲ್ಲಿ ಬಂದಿದೆ. ನಿಮ್ಮ ಪಕ್ಷದಲ್ಲಿ ನೀವು 138 ಜನ ಸದಸ್ಯರು ಇದ್ದೀರಿ. ಇತ್ತ ಕಡೆ 70 ಜನ ಇದ್ದಾರೆ. ನೀವು ಏನು ತಂದರೂ ಬಹು ಮತದ ಬಲದಿಂದ ಅದು ಪಾಸಾಗುತ್ತದೆ ಎಂಬ ಭಾವನೆ ಬೇರೂರಿದೆ. ಆದರೆ ಒಟ್ಟಿಗೆ ಕುಳಿತು ಮಾತನಾಡಿ ಪರಿಶೀಲನೆ ಮಾಡತಕ್ಕಂಥ ಬುದ್ಧಿ ಅವರಿಗೆ ಬರುವುದಿಲ್ಲ. ರಾಮಾಯಣದಲ್ಲಿಯ ಒಂದು ನಿದರ್ಶನ ಹೇಳಬೇಕೆಂದು ಆಶೆ ಇದೆ. ಶ್ರೀ ರಾಮಚಂದ್ರನು ಸೀತೆಯು ಮಹಾ ಪತಿವ್ರತೆ ರಾಮಚಂದ್ರನ ವಿನಹ ಯಾರನ್ನೂ ಅಪೇಕ್ಷೆ ಮಾಡಿದವಳಲ್ಲ ಎಂಬುದನ್ನು ತಿಳಿದುಕೊಂಡಿದ್ದರೂ ಕೂಡ ಯಾರೋ ಒಬ್ಬ ಮಲಿನ ವಸ್ತ್ರ ಬೆಳ್ಳಗೆ ಮಾಡತಕ್ಕಂಥ ರಜಕ ಏನೋ ಹೇಳಿದನೆಂದು ಅವಳು ಗರ್ಭಿಣಿಯಾಗಿದ್ದರೂ ಕೂಡ ಸೀತೆಯನ್ನು ಕಾಡಿಗೆ ಕಳಿಸಿದನು. ಅದು ನ್ಯಾಯವೋ ಅನ್ಯಾಯವೋ ಎಂಬುದನ್ನು ನಾನು ವಿಮರ್ಶೆ ಮಾಡುವುದಿಲ್ಲ. ಆದರೆ ಇದರಿಂದ ಒಂದು ಮಾತು ಸ್ಪಷ್ಟವಾಗುತ್ತದೆ. ಶ್ರೀ ರಾಮಚಂದ್ರನು ಒಬ್ಬ ಸಾಮಾನ್ಯ ಪ್ರಜೆ ಹೇಳಿದ್ದನ್ನು ಕೇಳಿ ತನ್ನ ಹೆಂಡತಿಯನ್ನು ಬಿಟ್ಟನು. ತತ್ವ ಪರಿಪಾಲಿಸಲು ಇಂಥ ಏಕನಿಷ್ಠೆ ಇರಬೇಕು. ಪ್ರಜಾಪ್ರಭುತ್ವದಲ್ಲಿ ಕೂಡ

ತತ್ವ ಚೆನ್ನಾಗಿ ತಿಳಿದುಕೊಂಡು ಸರಕಾರ ನಡೆಯಬೇಕು. ವಿರೋಧ ಪಕ್ಷದವರು ಏನು ಹೇಳುತ್ತಾರೆ ಅದಕ್ಕೆ ಬೆಲೆ ಕೊಡಬೇಕು. ನ್ಯೂನತೆಗಳನ್ನು ಎತ್ತಿ ತೋರಿಸಿದರೆ ಅವುಗಳನ್ನು ಸರಿಪಡಿಸಲು ಪ್ರಯತ್ನ ಪಡಬೇಕು. ಶರಾವತಿ ಇಲೆಕ್ಟ್ರಿಸಿಟಿ ಬೋರ್ಡ್ ಮುಂತಾದ ಗೊತ್ತಿರುವ ವಿಚಾರ ಹೇಳುತ್ತೇವೆ. ಅಪವಾದ ಇದೆ ಎಂದು ಗೊತ್ತಾದರೆ ಅದನ್ನು ಪರಿಹರಿಸಲು ಜನತೆ ಮುಂದೆ ವಿಷಯ ತರಬೇಕು ವಿವರ ಕೊಡಬೇಕು. ಆದರೆ ಹೀಗೆ ಮಾಡಲು ಸರಕಾರಕ್ಕೆ ಏಕೆ ಮನಸ್ಸು ಬರುವುದಿಲ್ಲ?

ಇನ್ನೊಂದು ವಿಷಯ. ಆಡಳಿತದಲ್ಲಿ ಮಿತವ್ಯಯ ಪಾಲಿಸಬೇಕು ಎಂದಿದೆ. ಹೆಚ್ಚಾಗಿ ಜನ ಮಂತ್ರಿಮಂಡಳದಲ್ಲಿ ಇರತಕ್ಕದ್ದು ಸರಿಯಲ್ಲ, ಸ್ವಲ್ಪ ಜನ ಮಂತ್ರಿಗಳು ಇದ್ದುಕೊಂಡು ದಕ್ಷತೆಯಿಂದ ರಾಜ್ಯದಾಡಳಿತ ನಡೆಸಲು ಸಾಧ್ಯವಿದೆ ಎಂದು ಎಲ್ಲರೂ ಹೇಳುತ್ತಾರೆ. ಶ್ರೀಮಾನ್ ನಿಜಲಿಂಗಪ್ಪನವರ ಬಗ್ಗೆ ಕೃಷ್ಣಪ್ಪನವರಿಗೂ ಇನ್ನೂ ಅನೇಕರಿಗೂ ಬಹು ಪೂಜ್ಯ ಭಾವನೆ ಇದೆ. ಇವರು ಯಾವುದೇ ವಿಧವಾದ ಅಂಜಿಕೆಯಿಲ್ಲದೆ ದೇಶದ ನಾಯಕರು ಆಗಿದ್ದಾರೆ. ಹಾಗಾದರೆ ಮಂತ್ರಿಮಂಡಲ ಕಡಿಮೆ ಮಾಡಲು ಏತಕ್ಕೆ ಹೆದರುತ್ತಾರೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಹಿಂದಕ್ಕೆ ದೊಡ್ಡ ಮಹಾರಾಜರ ಕಾಲದಲ್ಲಿ ಒಂದು ಕೋಟಿ ಪ್ರಜಾಸಂಖ್ಯೆ ಇದ್ದಾಗ 3 ಜನ ಮಂತ್ರಿಗಳು ಬಹು ಸೊಗಸಾಗಿ ವಿಚಕ್ಷಣೆಯಿಂದ ರಾಜ್ಯಭಾರ ಮಾಡುತ್ತಿದ್ದರು. ಈ ನಮ್ಮ ರಾಜ್ಯದ ಜನಸಂಖ್ಯೆ ಎರಡುಕೋಟಿ ಇದೆ. ಅಂದರೆ ಎರಡರಷ್ಟಾಗಿದೆ. ಆದುದರಿಂದ ಮೂರು - ಎರಡರೇ ಆರು ಜನ ಮಂತ್ರಿಗಳು ಈ ದೇಶಕ್ಕೆ ಸಾಕಾಗುತ್ತಾರೆ. ಆದುದರಿಂದ ಈಗ ಮಂತ್ರಿಮಂಡಳ ಗಾತ್ರ ಕಡಿಮೆ ಮಾಡುವ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಬಹು ಬೇಗ ಒಂದು ತೀರ್ಮಾನಕ್ಕೆ ಬಂದರೆ ದೇಶದ ಜನಗಳಲ್ಲಿ ಇರತಕ್ಕಂಥ ಅನುಮಾನ ಹೊರಟು ಹೋಗುತ್ತದೆ. ದುರಾಶೆಯಿಂದ ಅಧಿಕಾರಕ್ಕೆ ಅಂಟಿಕೊಂಡಿರುವ ಭಾವನೆ ನಿಮಗೆ ಇದೆ ಎಂಬುದು ದೂರವಾಗುತ್ತದೆ ಎಂದು ಹೇಳುತ್ತೇನೆ. ಶ್ರೀಮಾನ್ ಕೃಷ್ಣಪ್ಪನವರು ಭಾಕ್ರಾ ತುಂಗಭದ್ರಾ ಅಣೆಕಟ್ಟು ಕಟ್ಟಿದ್ದೇವೆ ಎಂದು ಏನೇನೋ ಹೇಳಿದರು. ಆದರೆ ತಾರತಮ್ಯ ದೃಷ್ಟಿಯಿಂದ ನೋಡಿದರೆ ರೈತನನ್ನು ಯಾವ ಮಟ್ಟಕ್ಕೆ ಮೇಲಕ್ಕೆ ಎತ್ತಿದ್ದೀರಿ ಎಂಬುದನ್ನು ಹೇಳಲಿಲ್ಲ. ದೇಶದ ಬೆನ್ನು ಮೂಳೆಯಾಗಿರತಕ್ಕಂಥ ರೈತನು ಇಂದು ಕಣ್ಣು ಕಣ್ಣು ಬಿಟ್ಟು ನರಳುತ್ತಿದ್ದಾನೆ. ರೈತನ ಬಗ್ಗೆ ಹೇಳುವವರು ಕೇಳುವವರು ಯಾರೂ ಇಲ್ಲ. ಬಂಡವಾಳ ಹಾಕತಕ್ಕಂಥ ಶ್ರೀಮಂತರ ಬಗ್ಗೆ ಎಲ್ಲ ಅನುಕೂಲತೆ ಮಾಡಲು ಪ್ರಯತ್ನ ನಡೆಯುತ್ತಿದೆ. ರೈತನ ಬಗ್ಗೆ ಸರಕಾರ ಏನೇನೂ ಮಾಡುತ್ತಿಲ್ಲ ಎಂದು ಹೇಳಲು ಬಹಳ ವಿಷಾದವಾಗುತ್ತದೆ.

ರೈತನಿಗೆ ಒಂದು ಕೋಟಿ ರೂಪಾಯಿ ಸಾಲ ಕೊಟ್ಟಿದೆ ಎಂದು ಹೇಳುತ್ತೀರಿ. ಹತ್ತು ಕೋಟಿ ಸಾಲ ಕೊಡುತ್ತೀರಿ. ಸಾಲ ಜಾಸ್ತಿ ಮಾಡಿದರೆ ರೈತನನ್ನು ಮೇಲಕ್ಕೆ ಎತ್ತಿದ ಹಾಗೆ ಆಯಿತೇ? ಸಾಲ ಇಲ್ಲದೆ ಸ್ವಂತ ಶಕ್ತಿಯಿಂದ ಸಂಸಾರ ನಿರ್ವಹಣೆ ಮಾಡುವಂತೆ ಉತ್ತಮ ರೀತಿಯಲ್ಲಿ ಬಾಳುವ ಹಾಗೆ ರೈತನನ್ನು ಮೇಲಕ್ಕೆ ತಂದಿದ್ದೇವೆಂದು ಧೈರ್ಯವಾಗಿ ಹೇಳತಕ್ಕಂಥ ಶಕ್ತಿ ನಿಮಗೆ ಇದೆಯೇ ಎಂದು ನಾನು ಕೇಳುತ್ತೇನೆ.

ಇನ್ನು ಸೋಷಿಯಾಲಿಸ್ಟಿಕ್ ಪಾಟರ್ನ್ ಆಫ್ ಸೊಸೈಟಿ ಕಟ್ಟುತ್ತೇವೆಂದು ಹೇಳುತ್ತೀರಿ. ನೀವು ಹೇಳುವ ಮಾತನ್ನು ಕೇಳಿದರೆ ಸಂತೋಷಪಡುತ್ತೇವೆ ಆದರೆ ನೀವು ಇಂದು ಹೊರಟಂಥ ದಾರಿ ಹಿಡಿದ ಮಾರ್ಗ ಸರಿಯಾದದ್ದಲ್ಲ. ನೀವು ಅನುಸರಿಸುತ್ತಿರುವ ನೀತಿಯಿಂದ ಇಂದು ದುಡ್ಡು ಇದ್ದವರು ದೊಡ್ಡವರಾಗುತ್ತಿದ್ದಾರೆ, ಬಡವನು ಇನ್ನೂ ಹೆಚ್ಚು ಬಡವನಾಗಿಯೇ ಹೋಗತಕ್ಕಂಥಾದ್ದನ್ನು ಬಹು ಅಚ್ಚುಕಟ್ಟಾಗಿ ಮಾಡುತ್ತಿದ್ದೀರಿ. ಸಾಲ ಕೊಟ್ಟು ಸಾಲ ಹೆಚ್ಚು ಮಾಡುವುದು ಒಳ್ಳೆಯದಲ್ಲ. ರೈತ ಸಾಲದಿಂದ ಋಣ ಮುಕ್ತನಾಗಬೇಕು. ಅನೇಕ ದೊಡ್ಡ ದೊಡ್ಡ ಯೋಜನೆಗಳನ್ನು ಮಾಡುತ್ತಿದ್ದೀರಿ. ತುಂಗಭದ್ರ, ಭದ್ರಾ, ನಾಂಗಲ್ ಕನ್ನಂಬಾಡಿ, ನೂಗು ಮುಂತಾದ ಅನೇಕ ಯೋಜನೆಗಳಿವೆ. ಆದರೆ ನನ್ನ ತಾಲ್ಲೂಕ ವಿಚಾರ ಹೇಳುವುದಾದರೆ ನಮ್ಮ ಬಡತನ ಇದರಿಂದ ಹಿಂಗಿಸಲು ಸಾಧ್ಯವಿದೆಯೇ? ಆದುದರಿಂದ ಸುಮ್ಮನೆ ವಾದ ಮಾಡಿ ಸತ್ಯ ಸಂಗತಿಗಳನ್ನು ಮುಚ್ಚುವದರಿಂದ ಏನೂ ಪ್ರಯೋಜನವಿಲ್ಲ. ವ್ಯಾಮೋಹಕ್ಕೆ ಒಳಗಾಗಿ ವಾದ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ನೀವು ಹೋಗತಕ್ಕಂಥ ದಾರಿಯಿಂದ ಬಡವನಿಗೆ ಸುತರಾಂ ಒಳ್ಳೆಯದಾಗುತ್ತಾ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

MR. SPEAKER.—Yesterday the Hon'ble Member, I am told, took two minutes. He should finish therefore his speech within 2 minutes.

ಶ್ರೀ ಟಿ. ಎನ್. ಮಾದಪ್ಪಗೌಡ.—ಅಧ್ಯಕ್ಷರು ಗಂಟೆ ಬಾರಿಸುತ್ತಿದ್ದಾರೆ. ಮಾತನಾಡಲು ಕಾಲಾವಕಾಶ ಮುಗಿದಿದೆ. ಹೇಳತಕ್ಕಂಥ ವಿಚಾರ ಬಹಳವಾಗಿದೆ. ಎಲ್ಲ ವಿಚಾರ ಹೇಳಲು ಕಷ್ಟವಾಗುತ್ತದೆ. ಬಹು ಸೂಕ್ಷ್ಮವಾದ ಬುದ್ಧಿ ಇರತಕ್ಕಂಥವರಿಗೆ ಸ್ವಲ್ಪದರಲ್ಲಿ ಹೇಳಿದರೂ ಕೂಡ ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ. ಇನ್ನು ಒಂದೇ ವಿಷಯ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಹೇಳಬೇಕೆಂದಿದ್ದೇನೆ. ಸರಕಾರದ ವಿದ್ಯಾಭ್ಯಾಸದ ಪದ್ಧತಿ ಏನು ಇದೆಯೋ ಅದರಿಂದ ದೇಶಕ್ಕೆ ಮಾನ ತರುವುದಿಲ್ಲ. ನಮ್ಮ ಮಕ್ಕಳಿಗೆ ಒಳ್ಳೆಯದಾಗುವುದಿಲ್ಲ. ಸುತರಾಂ ತರಬೇತಿ ದೊರೆಯುವುದಿಲ್ಲ. ಮುಂದಿನ ಪೀಳಿಗೆ ಇದೆಲ್ಲಾ ನಿರರ್ಥಕವೆಂದು ಭಾವಿಸುತ್ತಾರೆಂದು ನನಗೆ ಅನಿಸುತ್ತದೆ. ಯಾವ ಒಂದು ಮಟ್ಟ ವಿದ್ಯಾಭ್ಯಾಸದಲ್ಲಿ ಇರಬೇಕೋ ಅದು ಸುತರಾಂ ಇಲ್ಲ. ಇಂದು ಒಂದು ಆಜ್ಞೆ, ನಾಳೆ ಒಂದು ಆಜ್ಞೆ, ನಾಡದ್ದು ಬೆಳಿಗ್ಗೆ ಮತ್ತೊಂದು ಆಜ್ಞೆ ಈ ರೀತಿ ಕೆಲಸ ಮಾಡತಕ್ಕಂಥಾದ್ದು ಸರಿಯಲ್ಲ. ರಿಕ್ರೂಟಮೆಂಟ ಮಾಡತಕಂಥಾದ್ದರಲ್ಲಿ ಯಾವ ಪದ್ಧತಿ ಅನುಸರಿಸುತ್ತಿದ್ದೀರೋ ಅದು ಜಾತೀಯವಾದದಲ್ಲಿ ಹೋಗುತ್ತಿದೆ. ಪಟ್ಟಭದ್ರ ಹಿತರಕ್ಷಣೆ ಮಾಡುತ್ತಿದ್ದೀರಿ. ಮಾತನಾಡುವುದರಲ್ಲಿ ಜಾತೀಯತೆ ಮೇಲೆ ಕೊಡುವುದಿಲ್ಲ ಅರ್ಹತೆ ಮೇಲೆ ಕೊಡುತ್ತೇವೆಂದು ಹೇಳುತ್ತೀರಿ. ಆದರೆ ಹೇಳುವುದು ಒಂದು ಮಾಡುವುದು ಮತ್ತೊಂದು. ಎಲ್ಲದರಲ್ಲಿಯೂ ಜಾತಿಯತಭಾವನೆ ಇದೆ. ಮಠಾಧಿಪತಿಗಳ ಹಾಗೆ ಸರಕಾರ ಮಾಡುತ್ತಿದೆ. ರಾಜ್ಯದಾಡಳಿತೆಯಲ್ಲಿ ಎಲ್ಲ ಪ್ರಜೆಗಳಿಗೂ ಸಮವಾಗಿ ಹಕ್ಕು ಕೊಟ್ಟು, ಯೋಗ್ಯತೆ ಮೇಲೆ ಕೆಲಸ ಮಾಡತಕ್ಕಂಥ ಪರಿಸ್ಥಿತಿ ಉಂಟು ಮಾಡುವುದಕ್ಕೆ ಸರಕಾರದ ಪ್ರಯತ್ನ ಇದೆಯೇ ಎಂದು ಸರಕಾರಕ್ಕೆ ಕೇಳುತ್ತೇನೆ.

ಈ ಮಾತನ್ನು ಹೇಳುವಾಗ ಮನಸ್ಸಿಗೆ ಬಹಳ ಯಾತನೆಯಾಗುತ್ತದೆ. ಮೈಸೂರಿನಲ್ಲಿ ಮರಿಮಲ್ಲಪ್ಪಾ ಹೈಸ್ಕೂಲು ಎಂಬುದು ಇದೆ ಅದನ್ನು ಈಗ ಸರ್ಕಾರದವರೇ ನಡೆಸುತ್ತಾ ಇದ್ದಾರೆ ಅದನ್ನೂ ಸಹಿತ ಮಠಕ್ಕೆ ಕೊಡಬೇಕೆಂಬ ಏರ್ಪಾಡು ನಡೆಯಿತು ಎಂದು ಕಂಡಿದ್ದೇನೆ. ವರ್ಷದ ಕೊನೆಯಲ್ಲಿ ಬೇರೆ ವರ್ಷ ಬರುತ್ತದೆ ಎನ್ನುವಾಗ ಲಕ್ಷಾಂತರ ರೂಪಾಯಿಗಳನ್ನು ಅಂತಹ ಮಠಗಳಿಗೆ ಕೊಟ್ಟುಬಿಡುವುದರಿಂದ ಆಗತಕ್ಕ ಪರಿಣಾಮ ಏನೆಂಬುದನ್ನು ನೆನಸಿಕೊಂಡರೆ ನಮಗೆ ಭಯವಾಗುತ್ತದೆ. ಒಂದು ಜಾತಿಯ ವಿನಹ ಬಾಕಿ ಜಾತಿಯವರು ನೆಮ್ಮದಿಯಿಂದ ಈ ದೇಶದಲ್ಲಿ ಬಾಳುವುದಕ್ಕೆ ಸಾಧ್ಯವಿಲ್ಲವೇನೋ ಎಂದು ನನಗೆ ಅನಿಸುತ್ತದೆ. ಆದ್ದರಿಂದ ಅಂತಹ ಒಂದು ಅವಕಾಶವನ್ನು ತಾವು ಅವರಿಗೆ ಮಾಡಿಕೊಡಬಾರದು. ಸಣ್ಣಪುಟ್ಟ ಲೋಪ ದೋಷಗಳು ಬೇಕಾದಷ್ಟು ಇವೆ. ನಾವು ಹೇಳಿದ ಮಾತು ನಡೆಯುತ್ತದೆ, ನಮಗೆ ಹೇಳುವವರು ಯಾರು ನಮ್ಮದೇ ಗುಂಪು ಇದೆ ಎಂದು ತಾವು ಭಾವಿಸಬಾರದು. ನನಗೂ ಅನುಭವ ಇದೆ ನಾನೂ ನಿಮ್ಮಲ್ಲಿ 30 ವರ್ಷ ಇದ್ದವನೇ, ಯಾವ ಮಹಾತ್ಮರ ಹೆಸರನ್ನು ಹೇಳಿ ಯಾವ ತತ್ವದ ಮೇಲೆ ನಡೆಯುತ್ತೇವೆ ಎಂದು ಕಂಕಣ ಬದ್ಧರಾಗಿದ್ದೀರೋ ಅವನ್ನು ಇವತ್ತು ಪರಿಪಾಲಿಸುತ್ತಿದ್ದೀರಾ ಸ್ವಾಮಿ ? ಯಾರೋ ಒಬ್ಬರು ಹೇಳುತ್ತಾರೆ ಎಂದು ಅದನ್ನು ಡೆಪ್ಯೂಟಿ ಕಮಿಷನರು, ಚೀಫ್ ಮಿನಿಸ್ಟರು ಎಲ್ಲರೂ ಕೇಳಿಕೊಂಡು ಅವರ ಮಾತಿನಂತೆ ಸರ್ಕಾರದ ಆಡಳಿತ ನಡೆಸುವುದಾದರೆ ಇಲ್ಲಿ ನಾವು ಹೇಳಿದ್ದನ್ನು ಕೇಳಿದಂತಾಯಿತೇ ? ಆದ್ದರಿಂದ ನ್ಯಾಯವಾಗಿ ವಿಮರ್ಶೆ ಮಾಡಿ ಸರಿಯಾದ ರೀತಿಯಲ್ಲಿ ಸರ್ಕಾರ ನಡೆಸತಕ್ಕ ಒಂದು ಏರ್ಪಾಡು ಮಾಡಿ ಇಲ್ಲದೇ ಹೋದರೆ ರಾಜೀನಾಮೆಕೊಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—In the apportionment of the time limit for the party, I could not countenance those that do not belong to any party at all. In the meanwhile, the Hon'ble Members will kindly see how it is to be allocated.

†ಶ್ರೀ ಟಿ. ಮಾದಯ್ಯ ಗೌಡ (ರಾಮನಗರಂ).—ಮಾನ್ಯ ಸಭಾಪತಿಗಳೇ, ಈದಿನ ನಮ್ಮ ಮುಂದೆ ಇರತಕ್ಕ ಈ ವಿಚಾರವನ್ನು ನಾನಾದರೂ ಬಹಳ ವ್ಯಸನದಿಂದ ವಿರೋಧಿಸಬೇಕಾಗಿದೆ. ನಮ್ಮ ವಿರೋಧ ಪಕ್ಷದ ಜನ ಯಾವ ಒಂದು ಮಟ್ಟದಲ್ಲಿ ತಮ್ಮ ಗುರುತರವಾದ ಕಾರ್ಯವನ್ನು ನಡೆಸಬೇಕಾಗಿತ್ತೋ ಅದನ್ನು ನಡೆಸದೇ ಹೀಗೆ ಅನುಚಿತ, ಅಪ್ರಯುಕ್ತವಾದಂತಹ ವಾದ ಹೇಳುವುದರಲ್ಲಿ ನಿರತರಾದರಲ್ಲಾ ಎಂದು ನಾನಾದರೂ ವ್ಯಸನ-ಪಡುತ್ತೇನೆ. ಇದು ಕೇವಲ ನಿಷ್ಪ್ರಯೋಜನವಾದಂತ ವಿಚಾರ. ವಿರೋಧ ಪಕ್ಷ ಇರುವುದು ಸಾರ್ವಜನಿಕರ ಆದೇಶವನ್ನು ಈ ಸರ್ಕಾರ ಸರಿಯಾಗಿ ಈಡೇರಿಸಲಿಲ್ಲ ಆದ್ದರಿಂದ ಅದನ್ನು ಸರಿಯಾಗಿ ಈಡೇರಿಸುವಂತೆ ಮಾಡುವುದಕ್ಕೆ ಇರಬೇಕಾದ್ದು ಸೂಕ್ತವೇ ಆದರೂ ಅಂತಹ ಕಾರ್ಯವೂ ಇಲ್ಲ ಮತ್ತು ಈಗ ಅಂತಹ ಪರಿಸ್ಥಿತಿಯೂ ಇಲ್ಲ, ಕೇವಲ ಒಂದು ವಾದಕ್ಕೆ ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂಬ ಒಂದು ದೃಷ್ಟಿಯಿಂದ ಮಾತ್ರವೇ ಅವರು ಈ ಅಸ್ತ್ರವನ್ನು ಉಪಯೋಗಮಾಡುತ್ತ ಇರುವುದು ಸಾಧುವಲ್ಲ. ನನ್ನ ಹಿಂದೆ ಮಾತನಾಡಿದ ಶ್ರೀ ಮಾನ್ ಟಿ. ಎನ್. ಮಾದಪ್ಪ ಗೌಡರು ಒಂದು ಸತ್ಯವನ್ನು ಆಡಿದರು ಅದೇನೆಂದರೆ ಅವಿಶ್ವಾಸ ನಿರ್ಣಯ ಏಕೆ ತರುತ್ತೀರಿ ಇದು ಒಂದು ದೊಡ್ಡ ಅಸ್ತ್ರ, ಬ್ರಹ್ಮಾಸ್ತ್ರವನ್ನು ಗುಬ್ಬಿ ಮೇಲೆ

ಪ್ರಯೋಗ ಮಾಡುತ್ತೀರಿ ಎಂದು ನೀವು ಕೇಳುತ್ತೀರಿ ನಮಗೆ ವಿಚಾರಗಳನ್ನು ತಿಳಿಸುವುದಕ್ಕೆ ಇದು ಒಂದೇ ಅವಕಾಶ ಈ ಅವಕಾಶವನ್ನು ನಾವು ಕಲ್ಪಿಸಿಕೊಂಡರೆ ಅದಕ್ಕೆ ತಾವೇಕೆ ನಮ್ಮನ್ನು ಟೀಕೆ ಮಾಡುತ್ತೀರಿ ಎಂದು ಹೇಳಿದ ಮಾತು ಅವರು ಸತ್ಯವನ್ನೇ ಹೇಳಿದರು ಎಂದು ನಾನಾದರೂ ಭಾವಿಸುತ್ತೇನೆ. ಆದರೆ ನಾನು ಕೇಳುತ್ತೇನೆ ತಾವು ವಿಚಾರಗಳನ್ನು ಕೇಳುವುದಕ್ಕೆ ಸರ್ಕಾರದ ಮೇಲೆ ಟೀಕೆ ಟಿಪ್ಪಣಿಗಳನ್ನು ಮಾಡುವುದಕ್ಕೆ ತಮಗೆ ಬೇಕಾದಷ್ಟು ಅವಕಾಶಗಳಿವೆ—ನಮಗಿಂತಲೂ ಎಂದರೆ ಕಾಂಗ್ರೆಸ್ ಪಕ್ಷದವರಿಗೆ ಇರತಕ್ಕ ಅವಕಾಶಕ್ಕಿಂತಲೂ ತಮಗೆ ಹೆಚ್ಚು ಅವಕಾಶವಿದೆ. ಈ ಅವಕಾಶವನ್ನು ಕಲ್ಪಿಸಿಕೊಳ್ಳುವುದಕ್ಕೆ ಈ ಅಧಿವೇಶನದಲ್ಲೂ ಕೂಡ ಇನ್ನು ಮುಂದೆ ಬರತಕ್ಕ ಸಪ್ಲಿಮೆಂಟರಿ ಬಡ್ಜೆಟ್ಟು ಇತ್ಯಾದಿ ಅವಕಾಶಗಳಿರುವಾಗ ಈಗ ಹೇಳುವುದನ್ನೇ ಆಗ ಹೇಳಬಹುದಾಗಿತ್ತು. ಸಣ್ಣ ಪುಟ್ಟ ವಿಚಾರಗಳನ್ನು ಕುರಿತು ಟೀಕೆ ಟಿಪ್ಪಣಿ ಮಾಡುವುದಕ್ಕೆ ಈ ದಿನ ಈ ಅವಿಶ್ವಾಸ ನಿರ್ಣಯವನ್ನು ತಂದು ಸಭೆಯ ಮುಂದೆ ಇಡಬೇಕಾದ ಅಗತ್ಯವೇನಿತ್ತು ? ಇದರ ಉದ್ದೇಶ ತಮಗೆ ಏನಿದೆ ಎಂಬುದು ಚೆನ್ನಾಗಿ ಅರ್ಥವಾಗುತ್ತದೆ. ತಾವೇ ಹೇಳುತ್ತೀರಿ ಈ ಅವಿಶ್ವಾಸ ನಿರ್ಣಯದಲ್ಲಿ ನಾವೇನೂ ಗೆಲ್ಲುವುದಿಲ್ಲ ಎಂದು, ಹಿಂದೆ ಆದ ಪರಿಣಾಮವೇ ಈಗಲೂ ಆಗುತ್ತದೆ ಎಂದು ತಾವೂ ತಿಳಿದುಕೊಂಡಿದ್ದೀರಿ. ನಮ್ಮ ಮಿತ್ರರು ವಿರೋಧ ಪಕ್ಷದ ಜನ ಏನು ತಿಳಿದುಕೊಂಡಿದ್ದಾರೆ ಎಂದರೆ ಅವರು ಇರುವುದೇ ಟೀಕೆ ಟಿಪ್ಪಣಿಗಳನ್ನು ಮಾಡುವುದಕ್ಕೆ ಎಂದು ತಿಳಿದುಕೊಂಡಿದ್ದಾರೆ? ನಾನಾದರೂ ವಿರೋಧ ಪಕ್ಷದ ಜನರ ಕರ್ತವ್ಯ ಟೀಕೆ ಟಿಪ್ಪಣಿಗಳನ್ನು ಮಾಡುವುದು ಮಾತ್ರವೇ ಅಲ್ಲ ಅವುಗಳನ್ನು ಮಾಡುವಾಗ – ಕಾಂಗ್ರೆಸ್ ಪಕ್ಷದಲ್ಲಿರತಕ್ಕ ಜನ ಟೀಕೆ ಟಿಪ್ಪಣಿಗಳನ್ನು ಮಾಡುವುದರಲ್ಲಿ ಅವರಿಗಿಂತಲೂ ಕಡಿಮೆ ಏನೂ ಅಲ್ಲ ಎಂಬುದು ಅನೇಕ ಸಂದರ್ಭಗಳಲ್ಲಿ ಅವರಿಗೂ ಗೊತ್ತು ಅವರಿಗಿಂತಲೂ ಕಟುತರವಾದ ಟೀಕೆಗಳನ್ನು ಮಾಡುತ್ತೇವೆ ಅನೇಕ ಕಟುತರವಾದ ಪ್ರಶ್ನೆಗಳನ್ನು ಕೇಳುತ್ತೇವೆ ಆದ್ದರಿಂದ ಕೇವಲ ಟೀಕೆ ಟಿಪ್ಪಣಿಗೆ ವಿರೋಧಪಕ್ಷ ಇದೆ ಎಂದರೆ ಅವರು ತಮ್ಮ ಗುರುತರವಾದ ಕರ್ತವ್ಯ ಏನು ಎಂಬುದನ್ನು ಚೆನ್ನಾಗಿ ಮನದಟ್ಟು ಮಾಡಿಕೊಳ್ಳಲಿಲ್ಲವಲ್ಲ ಎಂದು ನಾನು ಹೇಳಬೇಕಾಗುತ್ತದೆ. ಈಗ ದೇಶದಲ್ಲಿ ಒಂದು ತೀವ್ರ ಪರಿಸ್ಥಿತಿ ಇದೆ, ಶತ್ರುಗಳು ನಮ್ಮ ದೇಶದ ಹೊಸಲಿನಲ್ಲಿ ಕಾದಿದ್ದಾರೆ ಇಂತಹ ಒಂದು ಸಂದರ್ಭದಲ್ಲಿ ಸಮಸ್ತರೂ ದೇಶ ದೇಶವೇ ಒಂದು ಎಂಬ ದೃಷ್ಟಿಯಿಂದ ಶತ್ರುವನ್ನು ತಡೆಗಟ್ಟುವುದಕ್ಕೆ ಸಕಲ ಪ್ರಯತ್ನಗಳನ್ನೂ ಮಾಡುತ್ತಾ ಇರತಕ್ಕ ಕಾಲದಲ್ಲಿ ಈ ಸಭೆ ಈಗ ಅದಕ್ಕೆ ಬೇಕಾದಂತಹ ಕಾರ್ಯಗಳನ್ನು ಏನು ಮಾಡಬೇಕು, ದೇಶವನ್ನು ಬಲಗೊಳಿಸುವುದಕ್ಕೆ ಏನು ಮಾಡಬೇಕು ಇತ್ಯಾದಿ ವಿಚಾರಗಳನ್ನು ವಿಚಾರ ಮಾಡದೇ ಅದಕ್ಕೆ ಬೇಕಾದ ಸಲಹೆಗಳನ್ನು ಕೊಡದೇ ಇಂಥಹ ಟೀಕೆ ಟಿಪ್ಪಣಿಗಳಿಗೆ ಅವಕಾಶ ಮಾಡಿಕೊಂಡು ಇದರಲ್ಲಿ ಜನ ಲೋಲುಪ್ತರಾಗಿದ್ದಾರೆ. ಎಂದರೆ ನಮಗೆ ಒಳ್ಳೆಯ ಹೆಸರು ಬರುವುದಿಲ್ಲ ಇದನ್ನು ನಮ್ಮ ವಿರೋಧ ಪಕ್ಷದ ಜನ ಕೂಲಂಕಷವಾಗಿ ವಿಚಾರಮಾಡಬೇಕು. ನಾನು ಅಂದುಕೊಂಡಿದ್ದೆ ಏನು ಎಲ್ಲಾ ಬಿಟ್ಟು ವಿರೋಧ ಪಕ್ಷದ ಜನಗಳಿಗೆ ಟೀಕೆ ಟಿಪ್ಪಣಿ ಮಾಡುವುದಕ್ಕೆ ಎಷ್ಟು ಅವಕಾಶವಿದೆ ಈ ಅವಕಾಶವನ್ನು ಕಲ್ಪಿಸಿಕೊಳ್ಳುತ್ತಾ ಇರುವುದು ಸರಿಯೇ ಎಂದು. ಇದು ಕಟ್ಟಕಡೆಯ ಅಸ್ತ್ರ, ಇದನ್ನು ಪ್ರಯೋಗ ಮಾಡಬೇಕಾದರೆ ಏನೋ ಇರಬೇಕು ಅವರ ಹಣ್ಣಿನ ಬುಟ್ಟಿಯಲ್ಲಿ ಎಂದು ಕಡೆಯದಾಗಿ ಬುಟ್ಟಿ ತೆಗೆದರೆ ಯಥಾಸ್ಥಿತಿ ಮೊದಲಿನ ಆಟವೇ ಹೊಸದೇನೂ ಕಂಡುಬರಲಿಲ್ಲ, ಯಾವುದಾದರೂ ಒಂದು ಹೊಸ ಅಂಶ ಹೇಳುತ್ತಾರೆಯೇ ಎಂದರೆ ಯಾವುದೂ ಇಲ್ಲ. ಎಲ್ಲಾ ಬರೀ ಗೊಂಬೆ ಆಟ ಹಾವಾಡಿಗರ ಆಟ, ದೇಶಕ್ಕೆ ಇದರಿಂದ ಆಗತಕ್ಕ ಪ್ರಯೋಜನವಾದರೂ ಏನು ? ದೇಶದ ಜನತೆ ಇವರ ಆಟಗಳನ್ನು ಒಪ್ಪಿಕೊಳ್ಳಲಾರರು; ನೀವು ಇಲ್ಲಿ ಬಂದು ಸರ್ಕಾರ ಏನೂ ಮಾಡಲಿಲ್ಲ ಹೊರಟು ಹೋಗಿ ಎಂದರೆ ಜನ ನಂಬುತ್ತಾರೆ ಎಂದು ಅವರು ತಿಳಿದುಕೊಂಡಂತೆ ಕಾಣುತ್ತದೆ.

9-30 A.M.

ಆದರೆ ವಿಚಾರಪರರಾದ ಜನರು ಏನು ತಿಳಿದುಕೊಳ್ಳಬೇಕೋ ಅದನ್ನೇ ತಿಳಿದುಕೊಳ್ಳುತ್ತಾರೆ. ಹಾಗಿರುವಾಗ ವಿರೋಧಪಕ್ಷದವರು ನೀವು ಮಂತ್ರಿಮಂಡಲವನ್ನು ಬಿಟ್ಟು ಕೆಳಗಿಳಿಯಬೇಕು ಈ ಸರ್ಕಾರ ಕೂಡಲೇ ಹೊರಟುಹೋಗಬೇಕು ಎಂದರೆ ಅದರಿಂದ ಏನಾಯಿತು ? ಸರ್ಕಾರ ಬದಲಾಯಿತೇನು ? ನೆನ್ನೆ ತಾನೆ ಶ್ರೀಮಾನ್ ಕೃಷ್ಣಪ್ಪನವರು ಹೇಳಿದಹಾಗೆ ಯಾರೋ ಹಲ್ವಾ ಹಲ್ವಾ ಎಂತ ಸಾವಿರಾರು ಸಾರ್ತಿ ಕೂಗಿದರೆ ಅದರಿಂದ ಜನರ ಬಾಯಿ ಸೀ ಆಯಿತೇ ಎಂತ. ಹೀಗೆ ಸುಮ್ಮನೆ ಕೂಗಿದ್ದನ್ನೇ ಕೂಗಿದರೆ ಜನಗಳ್ಯಾರೂ ಇದನ್ನೂ ನಂಬುವುದಿಲ್ಲ. ಇದರಿಂದ ಮುಂದೆ ಏನಾಗುತ್ತದೆ ಎಂದರೆ ಇವರು ಯಾವಾಗಲೂ ಹೀಗೇ ಕೂಗುವುದು ಇವರಿಗೆ ಅಭ್ಯಾಸವಾಗಿ ಬಿಟ್ಟಿದೆ, ಅವರು ಹಾಗೇ ಕೂಗಿಕೊಳ್ಳಲಿ ನಾವು ಹೀಗೇ ಆಡಳಿತ ನಡೆಸಿಕೊಂಡು ಹೋಗೋಣ ಎಂಬ ಭಾವನೆ ಬರುತ್ತದೆ. ಈ ದಿವಸ ವಿರೋಧಪಕ್ಷದ ಜನರು ಏನೇನು ಟೀಕೆಗಳನ್ನು ಇದುವರೆಗೂ ಮಾಡಿದ್ದಾರೋ ಅದೇ ಟೀಕೆಗಳನ್ನೇ ಈ ಹಿಂದಿನ ಬಡ್ಜೆಟ್ ಅಧಿವೇಶನದಲ್ಲೂ ಮಾಡಿದ್ದಾರೆ. ಅದನ್ನು ಬಿಟ್ಟು ಈ ದಿವಸ ಇವರು

(ಶ್ರೀ ಟಿ. ಮಾದಯ್ಯ ಗೌಡ)

ಬೇರೆ ಏನು ಹೇಳಿದ್ದಾರೆ ? ಹಾಗೆ ಹಿಂದೆ ಒಮ್ಮೆ ಹೇಳಿದ್ದನ್ನೇ ಹೇಳುವುದಕ್ಕೆ ಹೀಗೆ ಒಂದು ಅವಿಶ್ವಾಸ ನಿರ್ಣಯವನ್ನು ತರತಕ್ಕ ಅವಶ್ಯಕತೆಯಾದರೂ ಏನಿತ್ತು ? ಇವರು ಇಲ್ಲಿಯವರೆಗೂ ಹೇಳಿರತಕ್ಕ ವಿಚಾರವನ್ನು ನೋಡಿದರೆ ಮನಸ್ಸಿಗೆ ತುಂಬಾ ಬೇಜಾರಾಗುತ್ತದೆ. ಅವಿಶ್ವಾಸ ನಿರ್ಣಯದಲ್ಲಿ ತರತಕ್ಕ ವಿಚಾರವಲ್ಲ ಇವು. ಒಬ್ಬ ಸ್ಕೂಲ್ ಮಾಸ್ಟರಿಗೆ ಸರಿಯಾಗಿ ಸಂಬಳ ದೊರೆಯಲಿಲ್ಲ, ರಸ್ತೆಗಳ ನ್ಯಾಷನಲೈಸೇಷನ್ ಸರಿಯಾಗಿಲ್ಲ. ಇವು ಅವಿಶ್ವಾಸಕ್ಕೆ ದಾರಿ ನೀಡುವಂಥ ವಿಚಾರಗಳೇನು ? ಈ ಹಿಂದೆ ಇದೇ ವಿಚಾರವನ್ನು ಇವರು ಎಷ್ಟು ಸಾರ್ತಿ ಹೇಳಿಲ್ಲ ? ಈ ದೊಡ್ಡ ಆಡಳಿತ ನಡೆಯುವ ಕಡೆ ಅಲ್ಲೊಂದು ಇಲ್ಲೊಂದು ಲೋಪದೋಷಗಳಿರಬಹುದು. ನೆನ್ನೆತಾನೆ ಶ್ರೀ ಕೃಷ್ಣಪ್ಪನವರು ಹೇಳಿದಹಾಗೆ ನಡೆಯತಕ್ಕ ಕಾಲು ಎಡವೇ ಎಡುವುತ್ತದೆ ಸರ್ಕಾರದ ಆಡಳಿತದಲ್ಲಿ ಎಲ್ಲಿ ಯಾದರೂ ಅಂಥ ಲೋಪದೋಷಗಳಿದ್ದರೆ ಅದನ್ನು ತಿದ್ದುವುದಕ್ಕಾಗಿ ಇಲ್ಲಿ ನಾವೂ ನೀವೂ ಇದ್ದೇವೆ. ಇಷ್ಟಕ್ಕೇನೆ ನೀವು ಸರ್ಕಾರವನ್ನು ಬಿಟ್ಟು ಹೋಗಿ ಎಂದರೆ ಏನು ಅರ್ಥ? ಇಂಥ ಜುಜುಬಿ ವಿಚಾರಗಳಿಗಾಗಿ ಸರ್ಕಾರ ವನ್ನು ಬಿಟ್ಟು ಬಿಡಿ, ನೀವು ಮಂತ್ರಿ ಪದವಿಯಿಂದ ಕೆಳಗೆ ಇಳಿದು ಬಿಡಿ ಎಂದು ಹೇಳಿದರೆ ಅಲ್ಲಿಗೆ ವಿರೋಧ ಪಕ್ಷ ತನ್ನ ಕರ್ತವ್ಯವನ್ನೆಲ್ಲ ತಾನು ಮಾಡಿದಂತೆ ಆಗಲಿಲ್ಲ. ಅದರ ಜವಾಬ್ದಾರಿ ಇನ್ನೂ ಬಹಳ ಅಮೂಲ್ಯವಾದದ್ದು. ಎಲ್ಲಕ್ಕಿಂತಲೂ ವಿರೋಧ ಪಕ್ಷದ ಮೇಲೆ ಇರತಕ್ಕ ಒಂದು ಅದರ ದೊಡ್ಡ ಜವಾಬ್ದಾರಿ ಏನಂದರೆ ಅದು ಸರ್ಕಾರದೊಂದಿಗೆ ಸಹಕರಿಸಿ, ಸರ್ಕಾರಕ್ಕೆ ಎಲ್ಲಾ ವಿಚಾರಗಳಲ್ಲೂ ರಚನಾತ್ಮಕ ಸಲಹೆಗಳನ್ನಿತ್ತು ಸರ್ಕಾರವನ್ನು ಸುಗಮವಾಗಿ ನಡೆಯುವಂತೆ ಮಾಡಬೇಕಾದ್ದು ವಿರೋಧಪಕ್ಷದ ಜವಾಬ್ದಾರಿ. ಇಲ್ಲಿಯವರೆಗೆ ವಿರೋಧ ಪಕ್ಷದವರು ಅಂಥ ರಚನಾತ್ಮಕವಾದ ಸಲಹೆ ಗಳನ್ನು ಎಷ್ಟು ಕೊಟ್ಟಿದ್ದಾರೆ ? ವಿರೋಧ ಪಕ್ಷದ ನಾಯಕರು ಶರಾವತಿವ್ಯಾಲಿ, ಹಾಗು ಖಾದೀ ಬೋರ್ಡಿನ ವಿಚಾರ ಪ್ರಸ್ತಾಪ ಮಾಡಿ ಹಿಂದೆ ಮಾಡಿದ್ದ ಕೆಲವು ಟೀಕೆ ಗಳನ್ನೇ ಮತ್ತೆ ಮಾಡಿದರು. ಆ ಬಗ್ಗೆ ಸರ್ಕಾರ ಹಾಗೆ ಮಾಡಲಿಲ್ಲ? ಹೀಗೆ ಮಾಡಲಿಲ್ಲ ಎಂದು ಹೇಳಿಬಿಟ್ಟರು. ಇಷ್ಟು ಹೇಳಿಬಿಟ್ಟರೆ ದೇಶಕ್ಕೆ ಏನು ಒಳ್ಳೆಯದಾಯಿತು ? ದೇಶದಲ್ಲಿರತಕ್ಕ ಜನಗಳು ಯಶಸ್ವಿಯಾಗಿ ಬಾಳುವುದಕ್ಕಾಗಿ ಏನು ಸಲಹೆ ಮಾಡಿದ್ದಾರೆ? ಹೀಗೆ ಬರಿ ಟೀಕೆ ಮಾಡಿಬಿಟ್ಟರೆ ಅಲ್ಲಿಗೆ ವಿರೋಧಪಕ್ಷದವರು ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಿಸಿದಹಾಗೆ ಆಯಿತೆ? ಈ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಕ್ಕೆ ಒಂದು ದೊಡ್ಡ ಸ್ಥಾನವಿದೆ. ಅದಕ್ಕೆ ನಾವು ವಿಶೇಷ ಬೆಲೆಯನ್ನು ಕೊಡುತ್ತೇವೆ. ಅದು ಇದ್ದೇ ತೀರಬೇಕೆಂದು ನಾವು ಅಂದುಕೊಂಡಿದ್ದೇವೆ. ಆಡಳಿತ ಪಕ್ಷದಲ್ಲಿರತಕ್ಕ ಲೋಪ ದೋಷಗಳನ್ನು ತೋರಿಸುವುದಕ್ಕಾಗೇ ವಿರೋಧ ಪಕ್ಷ ಇರಬೇಕು ಎಂಬುದು. ಆದರೆ ಈ ದಿವಸ ಇರತಕ್ಕ ವಿರೋಧ ಪಕ್ಷವೇನಿದೆ ಅದಕ್ಕೆ ತನ್ನ ಕರ್ತವ್ಯವೇನೆಂಬುದೇ ಗೊತ್ತಿಲ್ಲ. ಅದು ತನ್ನ ಜವಾಬ್ದಾರಿ ಏನೆಂಬುದನ್ನು ಸರಿಯಾಗಿ ಇನ್ನೂ ಮುಂದಟ್ಟು ಮಾಡಿಕೊಂಡಿಲ್ಲ, ಹಾಗೆ ಎಲ್ಲಿಯವರೆಗೆ ಈ ವಿರೋಧಪಕ್ಷ ತನ್ನ ಒಂದು ಜವಾಬ್ದಾರಿಯನ್ನು ಸರಿಯಾಗಿ ಅರಿತುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಈ ಡೆಮಾಕ್ರಸಿ ಯಲ್ಲಿ ಕೆಲಸಕಾರ್ಯಗಳು ಯಶಸ್ವಿಯಾಗಿ ನಡೆಯುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಆದುದರಿಂದಲೇ ಈ ದಿವಸ ಎಲ್ಲೆಲ್ಲಿ ಡೆಮಾಕ್ರೆಟಿಕ್ ತತ್ವಗಳಮೇಲೆ ಆಡಳಿತ ನಡೆಯುತ್ತಿದೆಯೋ ಅಲ್ಲೆಲ್ಲ ವಿರೋಧ ಪಕ್ಷಗಳು ಇದ್ದೇ ಇರುತ್ತವೆ. ಆ ಬ್ರಿಟಿಷ್ ಪಾರ್ಲಿಯಮೆಂಟಿನ ವಿಚಾರವನ್ನು ತಾವೆಲ್ಲರೂ ಕೇಳಿದ್ದೀರಿ. ಅಲ್ಲಿ ಇಂಥ ಒಂದು ಮಹಾ ಅಸ್ತ್ರವನ್ನು ಯಾವಾಗ ತರುತ್ತಾರೆ ? ಇಲ್ಲಿ ನೀವು ಒಂದು ಮಹಾಸ್ತ್ರವನ್ನು ಇಂಥ ಚಿಕ್ಕ ಪುಟ್ಟ ವಿಚಾರಗಳಿಗೆ ಉಪಯೋಗಿಸಿ ಬಿಟ್ಟರೆ ಮುಂದೆ ಅಗತ್ಯಬಿದ್ದಾಗ ಏನು ಮಾಡುತ್ತೀರಿ? ಮಾತೆತ್ತಿದರೆ ವಾಕೌಟ್‌ಗಳು. ಅಂಥ ವಾಕೌಟುಗಳಿಂದ ಏನು ಪ್ರಯೋಜನ ! ಇಂಥ ಒಂದು ಸಣ್ಣ ಪುಟ್ಟ ವಿಚಾರಕ್ಕೆಲ್ಲ ಅವಿಶ್ವಾಸ ನಿರ್ಣಯ, ವಾಕೌಟುಗಳನ್ನು ಮಾಡಿದರೆ ಇದರಿಂದ ಇವರು ಏನು ಸಾಧನೆ ಮಾಡಿದಂತಾಯಿತು ಎಂದು ಕೇಳು ತ್ತೇನೆ ! ಇವುಗಳ ಬೆಲೆ ಇವರಿಗೆ ತಿಳಿಯಲಿಲ್ಲ ಎಂತ ಹೇಳಬೇಕಾಗಿದೆ.

ಶ್ರೀ ಸಂಜೀವನಾಥ ಐಕಳ (ಸೂರತ್ಕಲ್).—ಅದಕ್ಕೇ ನೀವು 3-4 ಬಿಲ್ಲುಗಳನ್ನು ಒಂದೇ ಘಳಿಗೆ ಯಲ್ಲಿ ಪಾಸ್ ಮಾಡಿಕೊಳ್ಳಲು ಅವಕಾಶವಾದದ್ದು.

ಶ್ರೀ ಟಿ. ಮಾದಯ್ಯಗೌಡ.—ಇವರು ಇವರ ಕರ್ತವ್ಯವೇನೆಂಬುದನ್ನೇ ತಿಳಿದುಕೊಳ್ಳದೆ ಸುಮ್ಮನೆ ವಾಕೌಟ್ ಮಾಡಿದರೆ ಅದರಿಂದ ಪ್ರಯೋಜನವೇನೂ ಇಲ್ಲ. ಆದರೆ ಅವರ ಭಾವನೆಯಲ್ಲಿ ಅವರು ಹೀಗೆ ವಾಕೌಟ್ ಮಾಡಿಬಿಟ್ಟರೆ ಇವರ ಹೆಸರುಗಳೆಲ್ಲ ಪೇಪರುಗಳಲ್ಲಿ ದಪ್ಪ ದಪ್ಪ ಅಕ್ಷರಗಳಲ್ಲಿ ಬಂದು ಜನರೆಲ್ಲ ಇವರನ್ನು ಹೊಗಳುತ್ತಾರೆಂತ ಇವರು ಭಾವಿಸಿರಬಹುದು. ಆದರೆ ಆ ಭಾವನೆ ಅಷ್ಟು ಸರಿಯಾದ್ದಲ್ಲ ಎಂದು ಹೇಳುತ್ತೇನೆ. ಏಕೆಂದರೆ ಈ ಕಾಲದಲ್ಲಿ ಯಾರೂ ಹಾಗೆ ದಪ್ಪ ಅಕ್ಷರದಲ್ಲಿ ಬರೆಯುವುದಕ್ಕೂ ಹೋಗುವುದಿಲ್ಲ, ಜನರೂ ಇದನ್ನು ನೋಡುವುದಿಲ್ಲ ಜನರಾದರೂ ಇದೇನು ವಿರೋಧ ಪಕ್ಷದವರು ಇಂಥ ಸಣ್ಣಪುಟ್ಟದಕ್ಕೆಲ್ಲ ಹೀಗೇಕೆ ವಾಕೌಟ್ ಮಾಡುತ್ತಿದ್ದಾರೆ ಎಂದು ಆಡಿಕೊಳ್ಳುತ್ತಾರೇ ವಿನಾ ಬೇರೇನೂ

ಇಲ್ಲ. ಈ ಅವಿಶ್ವಾಸ ನಿರ್ಣಯ ಎಂಬುದು ಒಂದು ದೊಡ್ಡ ಬ್ರಂಹಾಸ್ತ್ರವಿದ್ದ ಹಾಗೆ, ಇದನ್ನು ಇಂಥ ಸಣ್ಣಪುಟ್ಟ ವಿಚಾರಗಳಿಗೆಲ್ಲ ಉಪಯೋಗಿಸಿ ಬಿಟ್ಟರೆ ಮುಂದೆ ಇದು ಮೊಂಡಾಗಿ ಹೋಗಿ ಕಾಲ ಬಂದಾಗ ಸರ್ಕಾರವನ್ನು ಹೊಡೆದೋಡಿಸಲು ಅಗತ್ಯ ಕಂಡುಬಂದಾಗ ಇವರೇನು ಮಾಡುತ್ತಾರೆ ? ಈ ನೆಪದಲ್ಲಿ ಇವರು ಅಂಥ ಹೊಸ ವಿಷಯಗಳನ್ನು ಏನು ಹೇಳಿದ್ದಾರೆ ? ಇವರು ಯಾವತ್ತೂ ಹೇಳತಕ್ಕ ವಿಚಾರ ವನ್ನೇ ಈಗಲೂ ಹೇಳಿದ್ದಾರೆ. ಮಂತ್ರಿಗಳು ಸರ್ಕಾರವನ್ನು ಬಿಟ್ಟು ಹೋಗಬೇಕು ಎಂಬುದು ಇವರಲ್ಲಿ ಅಂಥ ಒಂದು ಹೊಸ ವಿಚಾರವೇನಲ್ಲ. ಹೇಳಿದ್ದನ್ನೇ ಹೇಳಿದ್ದಾರೆ. ಹೀಗೆ ಹೇಳಿದ್ದನ್ನೇ ಹೇಳಿ ಯಾರು ಕಿಸುಬಾಯಿದಾಸ ಆಗಿದ್ದಾರೆ ಎಂಬುದನ್ನು ಅವರೇ ಹೇಳಲಿ. ಇವರು ಈ ಹಿಂದೆ ಖಾದಿ ಬೋರ್ಡಿನ ವಿಚಾರ ಎತ್ತಿದ್ದರು. ಅದಕ್ಕೆ ಸರ್ಕಾರ ಆಗಲೆ ಉತ್ತರವನ್ನು ಕೊಟ್ಟಾಗಿದೆ. ಇಷ್ಟನ್ನಾದರೂ ಇವರು ವಿವೇಚಿಸಿ ನೋಡುವುದು ಬೇಡವೇ ?

ಹೀಗೆ ಆ ಎಲೆಕ್ಟ್ರಿಸಿಟಿ ಬೋರ್ಡಿನ ವಿಚಾರ ಸಹಾ ಎತ್ತಿದ್ದಾರೆ. ಇವರಿಗೆ ಮೊದಲು ಈ ವಿಚಾರವೇ ಗೊತ್ತಿರಲಿಲ್ಲ. ಮೊದಲು ನಮ್ಮ ಪಕ್ಷದವರೇ ಈ ವಿಚಾರದಲ್ಲಿ ಇನ್‌ವೆಸ್ಟ್‌ಮೆಂಟಿನಬಗ್ಗೆ ಸ್ವಲ್ಪ ತೊಂದರೆ ಉಂಟಾಗಿದೆ, ಇದನ್ನು ಕೂಡಲೆ ಸರಿಪಡಿಸಬೇಕು ಎಂದು ಹೇಳಿದ್ದೇವೆ. ಅಷ್ಟು ಹೊರತು ನಾವು ಆ ಹಣ ದುರುಪಯೋಗವಾಗಿದೆ, ಅದನ್ನು ಯಾರೋ ಎತ್ತಿಕೊಂಡು ಹೋಗಿದ್ದಾರೆ. ಎಂತ ಏನೂ ಹೇಳಿಲ್ಲ. ಇದರಬಗ್ಗೆ ಸರ್ಕಾರದವರೂ ಸೂಕ್ತ ಉತ್ತರಕೊಟ್ಟಿದ್ದಾರೆ. ಈ ವಿಚಾರ ವನ್ನು ಅವಿಶ್ವಾಸ ನಿರ್ಣಯದಲ್ಲಿ ತರುವುದಕ್ಕೆ ಇದು ಅಂಥ ಒಂದು ದೊಡ್ಡ ವಿಷಯವೇ ?

ಹೀಗೆ ವಿದ್ಯಾ ಇಲಾಖೆಯ ವಿಚಾರದಲ್ಲೂ ಕೆಲವು ಮಾತುಗಳನ್ನು ಹೇಳಿದ್ದಾರೆ. ಅದರಲ್ಲಿ ಕೆಲವು ನ್ಯೂನತೆಗಳಿವೆ ಎಂದು ನಾವೂ ಸಹಾ ಹೇಳಿದ್ದೇವೆ. ಕೆಲವು ಕಡೆ ಸ್ಕೂಲುಗಳಿಗೆ ಅಭಾವ ಇರ ಬಹುದು, ಕೆಲವು ಸ್ಕೂಲುಗಳಲ್ಲಿ ಉಪಾಧ್ಯಯರು ಇಲ್ಲದಿರಬಹುದು. ಅದಕ್ಕೆ ಸರ್ಕಾರದವರು ಹಣದ ಅಭಾವದಿಂದ ಹಾಗಾಗಿದೆ, ಅದನ್ನು ಆದಷ್ಟು ಬೇಗ ಸರಿಪಡಿಸುತ್ತೇವೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರಕ್ಕೆ ಹೆಚ್ಚು ಹಣ ಬೇಕೆಂದು ಒತ್ತಾಯ ಹಾಕಿದ್ದಾರೆ. ಇಂದಲ್ಲ ನಾಳೆ ಅದನ್ನು ಸರಿ ಪಡಿಸಲಾಗುತ್ತದೆ. ಆದರ ಆ ಒಂದು ಕಟ್ಟಡಗಳ ವಿಚಾರ ಶಿಕ್ಷಣದ ವಿಚಾರ ಇವು ಸರಿಯಾಗಿಲ್ಲ ಎಂದು ಹೇಳುವುದು ಈ ಸಂದರ್ಭದಲ್ಲಿ ಸರಿಯೇ ಎಂದು ಕೇಳುತ್ತೇನೆ.

ಕಡ್ಡಾಯ ಶಿಕ್ಷಣಕ್ಕಾಗಿ ಉಪಾಧ್ಯಾಯರುಗಳನ್ನು ಒದಗಿಸುವ ವಿಚಾರದಲ್ಲಿ ಏನು ಮಾಡಿದ್ದಾರೆ ನ್ನುವುದನ್ನು ಪರೀಕ್ಷೆ ಮಾಡಿದ್ದೀರಾ ? ಏನನ್ನೂ ವಿಚಾರ ಮಾಡಿಲ್ಲ. ಹಾಗೇ ಈಗ ಶರಾವತಿ ವಿಚಾರದ ಲ್ಲಿಯೂ ಹೇಳಿದರು ನಾವು ಹೇಳಿದುದೊಂದನ್ನೂ ಅವರು ತೀವ್ರವಾಗಿ ಗಮನಿಸಿಲ್ಲ ಎಂದು. ತೀವ್ರವಾದ ಮತ್ತು ಒಂದು ದೊಡ್ಡ ಅಗಾಧವಾದ ವಿಚಾರವನ್ನು ಮಾಡಲು ಮತ್ತು ಅದರಲ್ಲಿ ನಷ್ಟವಾಗಿದೆಯೇ ಇಲ್ಲವೇ ಎನ್ನುವ ವಿಚಾರವನ್ನು ನೋಡಲು ಅದಕ್ಕೆ ಬೇಕಾದ ರಿಕಾರ್ಡುಗಳೊಂದನ್ನೂ ಜವಾಬುದಾರಿ ಯುಳ್ಳಂತಹ ಮನುಷ್ಯರು ನೋಡಿ ಯಾವ ವಿಧವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ನೀವು ಹೇಳುವ ಊಹಾಪೋಹಗಳು ಸರಿಯೇ ಅಲ್ಲವೇ ಎನ್ನುವುದನ್ನು ವಿಮರ್ಶಿಸಬೇಡವೇ ? ಇನ್ನು ಹಾಗೇ ಲಂಚದ ವಿಚಾರವಾಗಿ ತಾವು ಹೇಳಿದಿರಿ. ನಿಮ್ಮಲ್ಲಿರುವ ಎಲ್ಲರಿಗೂ ನನಗೆ ತುಂಬಾ ಗೌರವವಿದೆ, ನೀವೆಲ್ಲಾ ನನ್ನ ಸ್ನೇಹಿತರು. ಈ ದೇಶದಲ್ಲಿ ಬೇಕಾದಷ್ಟು ಲಂಚವಿದೆ ಎಂದು ಹೇಳುತ್ತಾರೆ ತಾವು ಯಾರಾದರೂ ಅಂತಹ ಒಬ್ಬ ಲಂಚಕೋರರನ್ನು ಇದುವರೆಗೆ ಹಿಡಿದುಕೊಟ್ಟಿದ್ದೀರಾ ? ಹಾಗೆ ನಾನಾ ವಿಚಾರಗಳಿವೆ, ಎಲ್ಲವೂ ಪ್ರಯೋಜನವಿಲ್ಲದವುಗಳು.

(ಇಂಟರಪ್‌ಷನ್)

ಈ ರೀತಿಯಾಗಿ ಗಲಾಟೆ ಮಾಡಿ ಇಂಟರುಫಿಯರು ಮಾಡುವುದರಿಂದ ಏನೂ ಪ್ರಯೋಜನವಾಗು ವುದಿಲ್ಲ. ತಾವು ಯಾವ ವಾದವನ್ನು ಮಾಡಬೇಕಾದರೂ ಅದಕ್ಕೆ ತಕ್ಕಂತಹ ಅಂಕಿ ಅಂಶಗಳ ಆಧಾರದ ಮೇಲೆ ವಿಮರ್ಶಿಸಬೇಕೇ ಹೊರತು ಈ ರೀತಿಯಾಗಿ ಹೋಗುವುದು ತಪ್ಪು. ಈ ಎಲ್ಲಾ ಕಾರಣಗಳಿಂದ ಇಂತಹ ನಿರ್ಣಯವನ್ನು ತರುವುದು ನ್ಯಾಯವಲ್ಲ ಎಂದು ಹೇಳಿ ಈ ನಿರ್ಣಯವನ್ನು ವಿರೋಧಿಸುತ್ತೇನೆ.

† ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸ್ವಾಮೀ, ಒಂದು ವರ್ಷದ ಕೆಳಗೆ ಈ ಸರಕಾರದ ಮೇಲೆ ನಮಗೆ ವಿಶ್ವಾಸವಿಲ್ಲ ಎನ್ನತಕ್ಕ ನಿರ್ಣಯವನ್ನು ನಾವು ಮಂಡಿಸಿದ್ದೆವು. ಈಗ ಮತ್ತೆ ನಾವು ಬಹಳ ಸಂಕಟದಿಂದ ಎರಡನೇ ಬಾರಿಗೆ ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿ ನಮಗೆ ವಿಶ್ವಾಸವಿಲ್ಲ ಎಂಬುದನ್ನು ಮತ್ತೆ ನಾವು ಮಂಡಿಸುವ ಅವಶ್ಯಕತೆ ಬಂದುದಕ್ಕಾಗಿ ನಾವು ವಿಷಾದಿಸುತ್ತೇವೆ.

ನಿನ್ನೆಯ ದಿವಸ ಕಂದಾಯ ಮಂತ್ರಿಗಳು ಮಧ್ಯೆ ಪ್ರವೇಶಿಸಿ ನಮ್ಮ ನಿರ್ಣಯವನ್ನು ಅಲ್ಲಗಳೆ ದರು. ನನಗಾದರೂ ಅವರ ಭಾಷಣವನ್ನು ಕೇಳಿದಾಗ ಅನಿಸಿತು, ಅವರ ವಾದ ಸರಣಿ, ಹಳ್ಳಿಯ ಭಾಷೆಯಲ್ಲಿ ಹೇಳಬೇಕಾದರೆ ಶೆಟ್ಟರ ಅಂಗಡಿಗೆ ಹೋಗಿ ಹೆಸರು ಬೇಳೆ ಕೊಡಿ ಎಂದು ಕೇಳಿದರೆ ಹೆಸರು ಬೇಳೆ ಇಲ್ಲ ಕಡಲೇ ಬೇಳೆ ತೆಗೆದುಕೊಳ್ಳಿ ಎನ್ನುವ ರೀತಿಯಲ್ಲಿತ್ತು. ನಾವು ಈ ಅವಿಶ್ವಾಸ

(ಶ್ರೀ ಎಸ್. ಎಂ. ಕೃಷ್ಣ)

ನಿರ್ಣಯವನ್ನು ಮಂಡಿಸಿರತಕ್ಕದ್ದು ಬಹಳ ಜವಾಬ್ದಾರಿಯುತವಾಗಿ, ಬಹುಮಟ್ಟಿಗೆ ಸುದೀರ್ಘವಾಗಿ ಯೋಚನೆ ಮಾಡಿ ಮಂಡಿಸಿದ್ದೇವೆ. ತಮಗೆಲ್ಲರಿಗೂ ತಿಳಿದಿರುವ ಹಾಗೆ ಪಕ್ಕದ ಪ್ರಾಂತಗಳಲ್ಲಿ, ಲೋಕ ಸಭೆಯಲ್ಲಿ, ಇಂತಹ ಅವಿಶ್ವಾಸ ನಿರ್ಣಯಗಳು ಮಂಡಿತವಾಗಿದ್ದವು. ಶಾಸನ ಸಭೆ ಸೇರಿದ ಕೂಡಲೇ ಪಂಜಾಬಿನಲ್ಲಿ, ಮಹಾರಾಷ್ಟ್ರದಲ್ಲಿ ಮತ್ತು ಇನ್ನೂ ಕೆಲವು ಕಡೆಗಳಲ್ಲಿ ಸರಕಾರದ ಮೇಲೆ ಅವಿಶ್ವಾಸ ನಿರ್ಣಯವನ್ನು ವಿರೋಧ ಪಕ್ಷದವರು ಮಂಡಿಸಿದ್ದರು. ಆದರೆ ಮೈಸೂರು ಶಾಸನ ಸಭೆಯಲ್ಲಿ ಜವಾಬ್ದಾರಿಯುತವಾದ ವಿರೋಧ ಪಕ್ಷಗಳವರು ಏಕೆಂದರೆ ಸರಕಾರದ ಮೇಲೆ ಅವಿಶ್ವಾಸದ ಗೊತ್ತುವಳಿಯನ್ನು ಮಂಡಿಸಲು ಇಚ್ಛೆಪಡಲಿಲ್ಲ. ಕಾರಣವಾದರೂ ಸರಕಾರಕ್ಕೆ ಸಾಕಾದಷ್ಟು ಕಾಲಾವಕಾಶವನ್ನು ಕೊಡಬೇಕೆಂದು; ಕಳೆದ ಒಂದು ತಿಂಗಳಿನಲ್ಲಿ ಮೇಲಿಂದ ಮೇಲೆ ಒಂದಲ್ಲ ಒಂದು ವಿಚಾರವಾಗಿ ಈ ಸರಕಾರದ ಮೇಲೆ ನಾವು ಕಟುತರವಾದ ಟೀಕೆಗಳನ್ನು, ಭ್ರಷ್ಟಾಚಾರದ ಆರೋಪಣೆಗಳನ್ನು ಮತ್ತು ಇನ್ನಿತರ ಅರೋಪಣೆಗಳನ್ನೂ ಮಾಡಿದ್ದೆವು. ಎನ್ನುವುದು ಎಲ್ಲರಿಗೂ ತಿಳಿವ ವಿಷಯಗಳಾಗಿದ್ದುವು. ನಮ್ಮ ಕಾಂಗ್ರೆಸ್ಸು ಪಕ್ಷದ ಸ್ನೇಹಿತರುಗಳು ಅದರಲ್ಲೂ ಮುಖ್ಯವಾಗಿ ಹಿರಿಯರಾದ ಶ್ರೀಮಾನ್ ಮಾಯಣ್ಣ ಗೌಡರು ಇವೊತ್ತು ಕಾಂಗ್ರೆಸ್ಸು ಸಂಸ್ಥೆಯನ್ನು ಬೆಂಬಲಿಸಿದ್ದಾರೆ, ನಾನಾದರೂ ಅವರನ್ನು ವಿಶ್ವಾಸಪೂರ್ವಕವಾಗಿ ಕೇಳುತ್ತೇನೆ, ನಾವು ಇದೂವರೆಗೂ ಏನೇನು ಆರೋಪಣೆಗಳನ್ನು ಮಾಡಿದ್ದೇವೆ, ಅಂತಹ ಆರೋಪಣೆಗಳನ್ನು ತುಲನ ಮಾಡಿ ಆ ಆರೋಪಣೆಗಳಲ್ಲಿ ಎಷ್ಟು ಸತ್ಯವಿದೆ, ಎಷ್ಟು ಮಿಥ್ಯವಿದೆ ಎನ್ನುವುದನ್ನು ಯಾರಾದರೂ ತೆಗೆದು ಅಳತೆ ಮಾಡಿದ್ದೀರಾ ಅಥವಾ ಯಾರ ಕೈಯಲ್ಲಾದರೂ ಅಳತೆ ಮಾಡುವ ಪ್ರಸಂಗಕ್ಕೇನಾದರೂ ಹೋಗಿದ್ದಾರೆಯೇ? ಇವೊತ್ತು ಬಹುಮುಖ್ಯವಾದ ಶರಾವತಿ ಪ್ರಸಂಗವನ್ನು ಕಂದಾಯ ಮಂತ್ರಿಗಳ ಗಮನಕ್ಕೆ ಸೆಳೆದಾಗ ನಿಮ್ಮ ಪ್ರಾರ್ಥನೆಯನ್ನು ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ, ಚರ್ಚೆಮಾಡಿ ಯಾವುದಾದರೂ ಒಂದು ನಂಬಿಕೆಗೆ ಬನ್ನಿ ಎಂದು ಹೇಳಿದರು. ವಿರೋಧ ಪಕ್ಷದವರಾದ ನಾವು ಶರಾವತಿಯ ಕೆಲಸ ಪೂರ್ತಿ ಯಾಗಬೇಕು, ಶರಾವತಿಯ ಬೆಳಕು ನಮ್ಮ ಮೈಸೂರು ದೇಶದ ಎಲ್ಲೆಡೆಗೂ ಪ್ರಸರಿಸಿ ದೇಶದ ಜನತೆಗೆ ಕಲ್ಯಾಣವಾಗಬೇಕು ಎಂದು ಎರಡನೇ ಯೋಜನೆಯಲ್ಲೆ ಶರಾವತಿಯನ್ನು ಮುಗಿಸಬೇಕು. ನಮ್ಮ ಸಂಸ್ಥಾನದ ಅಭಿವೃದ್ಧಿಯಾಗಬೇಕು ಎಂದಿದ್ದರೂ ಅಲ್ಲಿ ನಡೆಯುತ್ತಿರುವ ವ್ಯವಹಾರಗಳ, ನೀತಿಗೂ ಬೆಲೆ ಇಲ್ಲದ ಹಣಕಾಸಿನ ವ್ಯವಹಾರಗಳಿಂದ ಯಾವ ಸರಕಾರಕ್ಕೆ ತಾನೇ ಬೆಲೆ ಬಂದೀತು? ಯಾವ ಸರಕಾರಕ್ಕೆ ತಾನೇ ನಿಲ್ಲುವ ಶಕ್ತಿ ಬಂದೀತು ಎಂದು ನಾನು ಕೇಳುತ್ತೇನೆ. ಶ್ರೀಮಾನ್ ನಿಜಲಿಂಗಪ್ಪನವರು ಅವಶ್ಯಕ ಬಂದಾಗ ಇದನ್ನು ನೋಡಿ ಏನು ಮಾಡಬೇಕೋ ಅದನ್ನು ಮಾಡಬೇಕಾಗಿ ಬರುತ್ತದೆ ಎಂದು ಹೇಳುವುದನ್ನು ಜನ ಇವೊತ್ತು ಎಲ್ಲೆಲ್ಲಿಯೂ ಈ ಪ್ರಶ್ನೆಯನ್ನು ಕೇಳುತ್ತಿರುವುದರಿಂದ ನಾವೆಲ್ಲರೂ ಇಂದು ತಲೆ ತಗ್ಗಿಸಬೇಕಾಗುತ್ತದೆ. ಕಳೆದ ಅಧಿವೇಶನದಲ್ಲಿ ಶರಾವತಿಯ ವಿಚಾರವಾಗಿ ಆರೋಪಣೆಗಳನ್ನು ಮಂಡಿಸಿದಾಗ ಒಂದು ರೀತಿ ಹೇಳಿದರು. ಪಕ್ಕದ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಕಾಮರಾಜ ನಾಡರರ ಸೂತ್ರ ಎಂದರೆ ಅವರನ್ನು ಜನ ಅರ್ಜಿಕೊಟ್ಟು ಏನನ್ನಾದರೂ ಕೇಳಿದಾಗ ಅವರು 'ಪಾರ್ಕಲಾಂ' ಎಂದು ಹೇಳುತ್ತಿದ್ದಂತೆ ನಮ್ಮ ಮೈಸೂರಿನ ಮುಖ್ಯ ಮಂತ್ರಿಗಳು 'ಎಲ್ಲವನ್ನೂ ನನಗೇ ಬಿಡಿ' ಎನ್ನತಕ್ಕ ಧೋರಣೆಯನ್ನು ನಾನು ನೋಡುತ್ತೇನೆ 'ನನಗೇ ಬಿಡಿ' ಎನ್ನುವುದರಿಂದ ಏನು ಉಪಯೋಗವಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಅಳತೆ ಮಾಡಿ ನೋಡಬೇಕಾಗಿದೆ. ಮೇಲಿಂದ ಮೇಲೆ ಕೃಷ್ಣಾ ಗೋದಾವರಿ ವಿಚಾರದಲ್ಲಾಗಲೀ, ಶರಾವತಿ ವಿಚಾರದಲ್ಲಾಗಲೀ, ನಮ್ಮ ಸಂಸ್ಥಾನದಲ್ಲಿ ಹೊಸ ಕಾನೂನುಗಳನ್ನು ತರುವ ದೃಷ್ಟಿಯಾಲ್ಲಾಗಲೀ ಯಾವ ವಿಚಾರದಲ್ಲಿ ಯಾದರೂ ಕೂಡ ಮೈಸೂರು ಸಂಸ್ಥಾನದ ಸರಕಾರವು ಯಾವುದಾದರೂ ಪರಿಣಾಮಕರವಾದ ರೀತಿಯಲ್ಲಿ ಯಾವ ರೀತಿಯಾದ ನಡೆವಳಿಕೆಗಳನ್ನು ಇಲ್ಲಿಯವರೆಗೂ ನಡೆಸಿಕೊಂಡು ಬಂದಿಲ್ಲ ಎಂಬುದನ್ನು ಘಂಟಾಘೋಷವಾಗಿ ಹೇಳಬೇಕಾಗಿದೆ. ಇವೊತ್ತಿನ ದಿನ ಸಂಸ್ಥಾನದ ಸರಕಾರ ಬಂಡವಾಳಷಾಹಿಗಳ ಕೈ ಕೂಸು ಆಗಿ ಯಾವ ಸರಕಾರ ಸಮತಾವಾದದ ಸಮಾಜ ಸಾಧನೆಯನ್ನು ಮಾಡುವುದಕ್ಕೋಸ್ಕರ ಎಂದಿತ್ತೋ ಅದನ್ನು ಮಾಡುವುದಕ್ಕಾಗದೇ ಕಾರ್ಯಾಚರಣೆಯಲ್ಲಿ ಬಂಡವಾಳಷಾಹಿಗಳಿಗೆ ಶರಣು ಹೊಡೆದರೆ ಅಂತಹ ಸರಕಾರವನ್ನು ಸಮಾಜವಾದದ ಸರಕಾರ ಎಂದು ಕರೆಯುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಇಂತಹ ಸರಕಾರದಿಂದ ಸಮಾಜ ವಾದದ ಧ್ಯೇಯಗಳನ್ನು ಸಾಧನೆ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ನಾವು ಇವೊತ್ತು ಆಲೋಚನೆ ಮಾಡಬೇಕಾಗಿದೆ.

ಮಾನ್ಯ ಕಂದಾಯ ಮಂತ್ರಿಗಳಾದ ಕೃಷ್ಣಪ್ಪನವರು ನಿನ್ನೆ ಕಳಕಳಿಯಿಂದ ಬಿನ್ನಹ ಮಾಡಿಕೊಂಡರು. ಇವತ್ತಿನ ದಿವಸ ಅದೇ ಕಳಕಳಿಯಿಂದ ರಾಜ್ಯ ಸರ್ಕಾರದಲ್ಲಿ ಅದರಲ್ಲಿಯೂ ಮುಖ್ಯವಾಗಿ ನಾಯಕರಾದ ಶ್ರೀ ನಿಜಲಿಂಗಪ್ಪನವರಲ್ಲಿ ಪ್ರಾರ್ಥನೆ ಮಾಡುತ್ತೇನೆ: ಶರಾವತಿಗೆ ಬಹಳ ಕಲಂಕ

ತಟ್ಟಿದೆ. ಶರಾವತಿಯ ಈ ಒಂದು ಕರ್ಮಕಾಂಡದಲ್ಲಿ ಯಾರ್ಯಾರ ಪಾತ್ರ ಎಷ್ಟೆಷ್ಟು ಎಂದು ಜನ ಬೇಕಾಬಿಟ್ಟಿ ಮಾತನಾಡುತ್ತಾ ಇದ್ದಾರೆ. ಕೇಂದ್ರ ಸರಕಾರದವರೂ ಕೂಡ ಈ ಶರಾವತಿ ಬಗ್ಗೆ ಸಾಕಷ್ಟು ಆಳವಾಗಿ ಯೋಚನೆ ಮಾಡುವ ಕಾಲ ಬಂದಿದೆ. ಯೋಜನೆಗೆ ಈವರೆಗೆ ಶೇಕಡ 10ರಷ್ಟು ಖರ್ಚು ಮಾಡಿದ್ದೇವೆಂದು ಮುಖ್ಯ ಮಂತ್ರಿಗಳು ಕಳೆದ ಅಧಿವೇಶನದಲ್ಲಿ ಹೇಳಿದರು. ಸುಮಾರು 100 ಕೋಟಿ ರೂಪಾಯಿಗಳನ್ನು ಶರಾವತಿಗೆ ಖರ್ಚುಮಾಡಬೇಕಾಗುತ್ತದೆ, ಆದ್ದರಿಂದ ಜನಕ್ಕೆ ಒಳ್ಳೆಯದಾಗುತ್ತದೆ ಎಂದು ಹೇಳಿದರು. ನಮ್ಮ ಟೀಕೆಗಳಿಗೆಲ್ಲಾ ನ್ಯಾಯಾಂಗ ವಿಚಾರಣೆಯೇ ಒಳ್ಳೆಯದು. ಏಕೆಂದರೆ ಇದುವರೆಗೆ ವಿನಾ ಕಾರಣ ತಮಗೆ ಬೇಕಾದಂಥ ಕಂಟ್ರಾಕ್ಟರು ದಾರರುಗಳಿಗೆ ಉತ್ತೇಜನ ಕೊಡುವ ದೃಷ್ಟಿಯಿಂದ, ಉತ್ತರೋತ್ತರ ಅವರಿಂದ ತಮ್ಮ ಸಂಸ್ಥೆಗಾಗಲಿ ತಮಗಾಗಲಿ ಯಾವುದಾದರೂ ಉಪಕಾರ ಪಡೆಯಬೇಕು ಎಂಬ ದೃಷ್ಟಿಯಿಂದ ಎಲ್ಲ ನ್ಯಾಯ ಸೂತ್ರ ಗಳನ್ನೂ ತೆಗೆದಿಟ್ಟು, ಏನು ಹಣವನ್ನು ಒಂದೇ ಸಮನೆ ಖರ್ಚುಮಾಡಿದ್ದಾರೆ, ಅದರ ಬಗ್ಗೆ ವಿಚಾರಣೆ ಯಾಗಬೇಕು; ಅದರ ಬಗ್ಗೆ ಈ ಸರಕಾರ ಕಳಂಕರಹಿತವಾಗಿದೆ ಎಂಬುದನ್ನು ಜನಗಳಿಗೆ ತೋರಿಸಿ ಕೊಡುವುದು ಅತಿಮುಖ್ಯ. ಈ ಬಗ್ಗೆ ಕಳೆದಸಾರಿ ಅಸೆಂಬ್ಲಿ ಅಧಿವೇಶನದಲ್ಲಿ ನಿಜಲಿಂಗಪ್ಪನವರ ಮೊಟ್ಟ ಮೊದಲನೆ ಮಂತ್ರಿ ಮಂಡಲದಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ವೀರಣ್ಣ ಗೌಡರ ಒಂದು ಭಾಷಣದ ಒಂದು ಭಾಗವನ್ನು ಈ ಸಭೆಗೆ ಅರಿಕೆ ಮಾಡಲು ಇಚ್ಛಿಸುತ್ತೇನೆ.

Mr. SPEAKER.—The hon'ble member may not read it, but let him give the substance.

ಶ್ರೀ ಎಸ್. ಎಂ. ಕೃಷ್ಣ.—ವಿಧಾನಸೌಧ ವಿಚಾರಣೆ ಸಮಿತಿ ಪ್ರಸ್ತಾಪ ಬಂದಾಗ ನೀವುಗಳೆಲ್ಲಾ ಏನೋ ಒಂದು ಹುಮ್ಮಸ್ಸಿನಿಂದ, ಒಂದು ಉತ್ತೇಜನದಿಂದ ವಿಧಾನಸೌಧದ ವಿಚಾರಣೆಯನ್ನು ಮಾಡಿದಿರಿ. ಇವತ್ತು ಅದನ್ನೇ ನಿಮಗೆ ಕನ್ನಡಿಯಂತೆ ಹಿಡಿಯುತ್ತಾ ಇದ್ದೇವೆ.

ಗಾಂಧಿಜಿಯವರು 20 ವರ್ಷಗಳ ಹಿಂದೆ, ಸಾಯುವುದಕ್ಕೆ ಮುಂಚೆ ಮೈಸೂರಿನವರಿಗೆ ಒಂದು ಸಂದೇಶ ಕೊಡಿ ಎಂದು ಕೋರಿದಾಗ, ಅವರು ಈ ರೀತಿ ಅಪ್ಪಣೆ ಕೊಡಿಸಿದರು :—

> ''ಕಾಂಗ್ರೆಸಿನವರಿಗೆ ಅಧಿಕಾರ ಬರುತ್ತದೆ. ಕೋಟ್ಯಾಂತರ ರೂಪಾಯಿ ಆಡಳಿತ ನಡೆಸು ವಾಗ ಒಂದೊಂದು ಕಾಸನ್ನೂ, ಒಂದೊಂದು ರೂಪಾಯಿಯನ್ನು ಲೆಕ್ಕ ಹಾಕಿ. ಖರ್ಚು ಮಾಡಿದ್ದೆ ಆದರೆ ನಿಮ್ಮ ಕರ್ತವ್ಯ ನೆರವೇರೀತು ಅನ್ನುವುದೆ ಮೈಸೂರಿಗೆ ನನ್ನ ಸಂದೇಶ.''

ಈಗ ನಿಮ್ಮ ಎಲ್ಲ ವಹಿವಾಟುಗಳನ್ನೂ ಕೂಡ ಗಾಂಧಿಜಿಯವರ ಈ ಹಿತವಚನವನ್ನು ಹಿಂಬದಿಯಲ್ಲಿ ಇಟ್ಟುಕೊಂಡು ನಾವು ಆಲೋಚನೆ ಮಾಡಬೇಕಾಗಿದೆ. ಶರಾವತಿಯ ಬಗ್ಗೆ ನಾವು ಸಾಕಾದಷ್ಟು ಹೇಳಿದ್ದೇವೆ. ಒಂದು ವರ್ಷದಿಂದಲೂ ಕೂಡ ಒಂದೇ ಸಮನೆ ಮುಖ್ಯ ಮಂತ್ರಿಗಳೂ ಹೇಳುತ್ತಿದ್ದಾರೆ ಫೈಲುಗಳನ್ನು ತರಿಸಿಕೊಂಡು ನೋಡುತ್ತೇನೆ, ಎಲ್ಲಾ ಫೈಲುಗಳೂ ಬಂದಿವೆ ಎಂದು ಹಿಂದೆ ಹೇಳಿದ್ದನ್ನೇ ಹೇಳುತ್ತಿದ್ದಾರೆಯೇ ವಿನ ಕರಾರುವಾಕ್ಕಾಗಿ ನಾವು ಮಾಡಿರತಕ್ಕಂಥ ಆರೋಪಣೆಗಳಿಗೆ ಅವರು ಉತ್ತರವನ್ನೇ ಕೊಟ್ಟಿಲ್ಲ. ನೋಡುತ್ತಾ ಇದ್ದೇನೆ ಎಂದು ಸುಮ್ಮನೆ ಹೇಳುವುದರ ಬದಲು ಯಾವುದಾದರೂ ಕಠಿಣವಾದ, ಕರಾರುವಾಕ್ಕಾದ, ಪರಿಣಾಮಕಾರಿಯಾದ ರೀತಿಯಲ್ಲಿ ಸಮಸ್ಯೆ ಯನ್ನು ಎದುರಿಸುವುದರಲ್ಲಿ ಬುದ್ಧಿವಂತಿಕೆ ಇದೆ, ರಾಜನೀತಿ ಇದೆ, ಅಥವ ದೂರದರ್ಶಿತ್ವ ಇದೆ. ಅವೆಲ್ಲವನ್ನೂ ಬಿಟ್ಟು ಮುಂದೂಡುತ್ತಾ ಹೋದರೆ, ನಾವು ಹೇಳಿದ್ದನ್ನೇ ಹೇಳಬೇಕಾಗುತ್ತದೆ. ಈ ಶರಾವತಿಯಿಂದ ಯಾರ ತಲೆಯನ್ನೊ ತೆಗೆದುಕೊಳ್ಳಲು ಪ್ರಯತ್ನ ಮಾಡುವುದಕ್ಕೆ ನಾವು ಇಲ್ಲಿ ಬಂದು ಕೂತಿಲ್ಲ. ಶರಾವತಿಯ ಬಗ್ಗೆ ವಿರೋಧ ಪಕ್ಷದವರು ಮಾತನಾಡಿದ್ದನ್ನೇ ಮಾತನಾಡಲಿ ನಾವು ಕೇಳುತ್ತೇವೆ ಎಂದು ಮಾನ್ಯ ಕೃಷ್ಣಪ್ಪನವರು ಹೇಳಿದರು. ನಾನು ಕೇಳುತ್ತೇನೆ, ಯಾವಾಗಲಾದರೂ ಒಂದು ಸಾರಿಯಾದರೂ ಮುಖ್ಯ ಮಂತ್ರಿಗಳೇ ಆಗಲಿ, ಅಥವ ಲೋಕೋಪಯೋಗಿ ಶಾಖೆ ಸಚಿವರೇ ಆಗಲಿ, ವಿರೋಧ ಪಕ್ಷದವರನ್ನು ಕರೆದು ಶರಾವತಿ ವಹಿವಾಟಿನ ಬಗ್ಗೆ ಒಟ್ಟಿಗೆ ಕೂತು ವಿಮರ್ಶಿಸೋಣ ಎಂದು ಹೇಳಿದ್ದಾರೆಯೇ ? ಈ ಶರಾವತಿಗೆ ಏನು ಕಳಂಕ ತಟ್ಟಿದೆ, ಈ ಸಂಸ್ಥಾನದ ಗೌರವಕ್ಕೆ ಧಕ್ಕೆ ಬಂದಿದೆ, ನೇರವಿಲ್ಲದ ವ್ಯವಹಾರಗಳ ಬಗ್ಗೆ ಕಾಲ ಮಿತಿಮೀರಿ ಹೋಗಿದೆ, ಅದಕ್ಕೆ ಇವತ್ತು ಏನು ಸಿದ್ಧೌಷದ ಎಂದರೆ ಯಾರಾದರೂ ನ್ಯಾಯ ತಜ್ಞರನ್ನು ಹೊರಗಡೆಯಿಂದ ಕರೆಸಿ ಅವರ ಮೂಲಕ ವಿಚಾರಣೆ ಮಾಡಿಸಿ, ಈ ವಿಚಾರದಲ್ಲಿ ನೀವು ಕಳಂಕರಹಿತರಾಗಿ ಹೊರಕ್ಕೆ ಬಂದರೆ, ಈ ಸಭೆಯಲ್ಲಿ ಯಾರ್ಯಾರು ಶರಾವತಿ ಬಗ್ಗೆ ಆರೋಪಣೆಗಳನ್ನು ಮಾಡಿದ್ದೇವೆಯೊ, ಅವರೆಲ್ಲರ ಪರವಾಗಿ ಮುಖ್ಯ ಮಂತ್ರಿಗಳಲ್ಲಿ ಕ್ಷಮಾಪಣೆ ಯಾಚಿಸುವುದಕ್ಕೆ ಸಿದ್ಧನಿದ್ದೇನೆ. ಇದು ನಿಮಗೆ ದೊರತಿರತಕ್ಕ ಸದವಕಾಶ. ಈ ಅವಕಾಶವನ್ನು ಉಪಯೋಗಿಸಿಕೊಂಡು ಕಮಿಟಿ ಮಾಡಿ ವಿಚಾರಣೆ ನಡೆಸುವುದಕ್ಕೆ ನೀವು ಸಿದ್ಧವೆ : ಇಲ್ಲವಾದರೆ ನೀವು ರಾಜಿನಾಮೆ ಕೊಟ್ಟು ಹೋಗಿ ಎಂದು ನಿಮ್ಮಲ್ಲಿ ಪ್ರಾರ್ಥಿಸಿ ಕೊಳ್ಳುತ್ತೇನೆ.

(ಶ್ರೀ ಎಸ್. ಎಂ. ಕೃಷ್ಣ)

ಎರಡನೆಯದಾಗಿ ಈ ಖಾದಿ ಬೋರ್ಡು ವ್ಯವಹಾರದ ಬಗ್ಗೆ ಹೇಳುತ್ತೇನೆ. ಸ್ವಾಮಿ, ಹಿಂದೆ ನಾನೂ ಖಾದಿ ಹಾಕುತ್ತಾ ಇದ್ದೆ. ಈಗ ಖಾದಿಯನ್ನು ಬಿಟ್ಟಿದ್ದೇನೆ. ಖಾದಿಯ ಬಗ್ಗೆ ನನಗೆ ಬಹಳ ಗೌರವವಿದೆ. ನನ್ನ ಸ್ನೇಹಿತರು ಹಲವಾರು ಜನರು ಖಾದಿಯನ್ನು ಹಾಕಿದ್ದಾರೆ. ಆದರೆ ಈ ಖಾದಿಯ ವ್ಯವಹಾರ ಯಾವ ಸುಸಂಸ್ಕೃತನಿಗೂ ಗೌರವ ತರತಕ್ಕಂಥ ವ್ಯವಹಾರವಲ್ಲ. ಇದರಲ್ಲಿರುವವರೂ ಕೂಡ ಕಾಂಗ್ರೆಸ್ ಸಂಸ್ಥೆಯ ಶಿಪಾಯಿಗಳು. ಈ ಖಾದಿ ವ್ಯವಹಾರದಲ್ಲಿ ನಡೆದಿರತಕ್ಕಂಥ ಕೆಲವು ಅಕ್ರಮಗಳ ಬಗ್ಗೆ ನಾವು ಇವತ್ತು ಯೋಚನೆ ಮಾಡಬೇಕಾಗಿದೆ, ಮತ್ತು ತರೆ ತಗ್ಗಿಸಬೇಕಾಗಿದೆ. ಮಾನ್ಯ ಮಂತ್ರಿಗಳಾದ ಶ್ರೀ ಮಲ್ಲಪ್ಪನವರು ಒಂದು ಹೇಳಿಕೆಯನ್ನು ಕೊಟ್ಟರು. ಅವರು ಹೇಳಿಕೆಯಲ್ಲಿ ಎರಡು ವಿಚಾರಗನ್ನು ಪ್ರಸ್ತಾಪ ಮಾಡಿದರು. ಒಂದು ಏನೆಂದರೆ, ಆ ಸಂಸ್ಥೆ ಒಂದು ಸ್ಟ್ಯಾಚ್ಯುಟರಿ ಬಾಡಿ ಅದರ ಬಗ್ಗೆ ಸರಕಾರದ ನೇರವಾದ ಜವಾಬ್ದಾರಿ ಇಲ್ಲ, ಅವರ ಲೆಕ್ಕಪತ್ರಗಳನ್ನೆಲಾ ಅವರೇ ನಿರ್ವಹಿಸಕೊಳ್ಳತಕ್ಕದು ಎಂದು. ನಾನಾದರೂ ಇವತ್ತು ಬಹಳ ವಿಷಾದದಿಂದ ಹೇಳಬೇಕಾಗಿದೆ. ಒಂದು ಸಣ್ಣ ಸೊಸೈಟಿಯಲ್ಲಿ, ಸುಮಾರು 100-200 ವ್ಯವಹಾರಗಳನ್ನು ನಡೆಸತಕ್ಕಂಥಾ ಸಣ್ಣ ಸೊಸೈಟಿಯಲ್ಲಿ, ಲೆಕ್ಕಪತ್ರವನ್ನು ಇಟ್ಟಿರುತ್ತಾರೆ. ಆದರೆ ಖಾದಿ ಬೋರ್ಡಿನಲ್ಲಿ ಅಕೌಂಟೆಂಟ್-ಜನರಲ್ಲರು ಅಭಿಪ್ರಾಯ ಪಟ್ಟಿರುವಂತೆ 1957ನೆ ಇಸವಿಯಿಂದ; ಅದು ಶುರುವಾದಾಗಿನಿಂದ (ಇನ್‌ಸೆಪ್‌ಶನ್ನಿನಿಂದ) ಲೆಕ್ಕಪತ್ರಗಳನ್ನು ಕಂರಾರುವಾಕ್ಕಾಗಿ ಇಟ್ಟಿಲ್ಲ. ಅಕೌಂಟೆಂಟ್-ಜನರಲ್ಲರು ಆರೋಪ ಮಾಡಿದ್ದರೆ, ಮಾದಯ್ಯ ಗೌಡರು, ಗಾಂಜಿ ವೀರಪ್ಪನವರು, ಶ್ರೀಮತಿ ನಾಗರತ್ನಮ್ಮ ಹಿರೇಮಠರು ನಮ್ಮ ಕಡೆ ಬೆರಳು ಮಾಡಿ ತೋರಿಸತಕ್ಕಂಥ ಅವಶ್ಯಕತೆ ಏನಿತ್ತು? ಶ್ರೀ ಶಿವಪ್ಪನವರು ಹೇಳಿದಹಾಗೆ ಅವರಲ್ಲಿ ಆತ್ಮಶೋಧನೆಯಾಗಬೇಕು. ನಾನು ಶ್ರೀಮತಿ ನಾಗರತ್ನಮ್ಮನವರನ್ನು ಕೇಳುತ್ತೇನೆ: ಖಾದಿ ಬೋರ್ಡಿನ ಬಗ್ಗೆ 1957ನೇ ಇಸವಿಯಿಂದ ಲೆಕ್ಕಪತ್ರಗಳನ್ನು ಇಡದೆ ಇದ್ದಂಥ ಈ ಸಂಸ್ಥೆಯ ಅಧ್ಯಕ್ಷರು ಕಾಂಗ್ರೆಸ್ಸಿನವರಲ್ಲವೆ? ಶ್ರೀಮಾನ್ ಕೃಷ್ಣಪ್ಪನವರು ಅವಿಶ್ವಾಸ ನಿರ್ಣಯವೆಂಬ ಬ್ರಹ್ಮಾಸ್ತ್ರವನ್ನು ಉಪಯೋಗಿಸಿದ್ದು ತಿಳಿಗೇಡಿತನವೆಂದು ಹೇಳಿದರು. ಈ ತಿಳಿಗೇಡಿತನ ಜನಗಳ ಮುಂದೆ ನೇಕೆಡ್ ಆಗಿ ನಿಂತಿದೆ. ಜನಗಳಿಗೆ ಕಾಂಗ್ರೆಸ್ ಸರಕಾರದ ಮುಸುಕನ್ನು ತೆಗೆದು ಹಾಕುವುದಕ್ಕೆ ಇಲ್ಲಿ ನಿಂತಿದ್ದೇವೆ. ಈ ಮುಸುಕನ್ನು ತೆಗೆಯುವುದಕ್ಕೆ ಒಂದಲ್ಲ, 100 ಪ್ರಯತ್ನಗಳನ್ನು ಮಾಡುತ್ತೇವೆ. ಬ್ರಹ್ಮಾಸ್ತ್ರವನ್ನೂ ಉಪಯೋಗಿಸುತ್ತೇವೆ. ಯಾವ ಅಸ್ತ್ರವನ್ನಾದರೂ ಉಪಯೋಗಿಸತಕ್ಕಂಥ ಶಕ್ತಿ ಇದೆ. ಆ ಹಕ್ಕನ್ನು ನಿಮ್ಮ ಕಾಲದಲ್ಲಿ ನೀವು ಗಳಿಸಿಕೊಟ್ಟಿರಬಹುದು. ಆದರೆ ಆ ಹಕ್ಕನ್ನು ಹಿಂದಕ್ಕೆ ತೆಗೆದುಕೊಳ್ಳುವಂಥ ಶಕ್ತಿ ನಿಮಗಿಲ್ಲ. ಇವತ್ತು ಖಾದಿ ಬೋರ್ಡಿನ ಜವಾಬ್ದಾರಿಯಿಂದ ಮಾನ್ಯ ಮಂತ್ರಿಗಳು ಸುಲಭವಾಗಿ ಜಾರಿಕೊಳ್ಳುವುದಕ್ಕೆ ಪ್ರಯತ್ನಪಟ್ಟರು. ಒಂಭತ್ತನೆಯ ಕ್ಲಾಜಿನಲ್ಲಿ ಹೀಗೆ ಹೇಳುತ್ತಾರೆ:

"The State Government shall, from amongst its officers, appoint the Accounts Officer to the Board."

ಇದನ್ನು ಖಾದಿ ಸಲಹಾ ಮಂಡಳಿ ಅಧ್ಯಕ್ಷರೆ ಮಾಡಬೇಕು ಅಂತ ಹೇಳಿದರು. ಸರಕಾರದವರು ಕೋಟ್ಯಂತರ ರೂಪಾಯಿ ವ್ಯವಹಾರಗಳನ್ನು ನಡೆಸತಕ್ಕಂಥ ಒಂದು ಸಲಹಾ ಮಂಡಲಿಗೆ ನಿಮ್ಮ ಅಕೌಂಟ್ಸ್ ಆಫೀಸರನ್ನು ಹಾಕುತ್ತೀರ; ಅಂದಮೇಲೆ ಮಂಡಲಿ ಖರ್ಚುಮಾಡತಕ್ಕಂಥ ಮತ್ತು ಅದಕ್ಕೆ ಸಲ್ಲತಕ್ಕಂಥ ಹಣದ ಬಗ್ಗೆ ಸರಿಯಾದ ಲೆಕ್ಕಗಳನ್ನು ಇಡದೆ ಹೋದರೆ; ನೀವು ನಾಮಕರಣ ಮಾಡತಕ್ಕಂಥ ಅಧ್ಯಕ್ಷರು ತಮಗೆ ಸಲ್ಲದೆ ಇರತಕ್ಕಂಥ ಹಣವನ್ನು ಮಂಡಲಿಯಿಂದ ಡ್ರಾ ಮಾಡಿದರೆ, ಅಕೌಂಟೆಂಟ್-ಜನರಲ್ಲರು ಅವರು ಡ್ರಾ ಮಾಡಿರತಕ್ಕ ಹಣವನ್ನು ವಾಪಸು ಕೊಡಬೇಕೆಂದು ಕಾಗದವನ್ನು ಬರೆದಾಗ ಏನು ಸಮಜಾಯಿಷಿ ಹೇಳುತ್ತಾರೆ ಅನ್ನುವುದನ್ನು ನೀವು ಯೋಚನೆ ಮಾಡಬೇಕು. ಖಾದಿ ಬೋರ್ಡು ಆಕ್ಟು 28ನೆ ಕ್ಲಾಜು ಈ ರೀತಿ ಹೇಳುತ್ತದೆ:

"The Accounts of the Board shall be maintained and an annual statement of accounts shall be prepared in such manner as may be prescribed, and such accounts shall be audited by an Auditor appointed by the State Government."

ಇವೆರಡು ಕ್ಲಾಜಿನ ಎದುರಿಗೆ, ಈ ಸಂಸ್ಥಾನದ ಸರಕಾರ ಬಹು ಸುಲಭವಾಗಿ ಅದು ಒಂದು ಸ್ಟ್ಯಾಚುಟರಿ ಬಾಡಿ, ಅದರಲ್ಲಿ ಏನು ನಡೆಯುತ್ತದೆ ಅನ್ನುವುದರ ಬಗ್ಗೆ ನಮಗೆ ಜವಾಬ್ದಾರಿ ಇಲ್ಲ, ಅಕೌಂಟ್ಸು ಇಡುವುದು ಖಾದಿ ಸಂಸ್ಥೆಯ ಕರ್ತವ್ಯ ಎಂದು ಬಹಳ ಚಕಮಕಿಯಿಂದ ವಾದಮಾಡಿ

ಗೆಲ್ಲತಕ್ಕಂಥ ಪ್ರಶ್ನೆ ಅಲ್ಲ. ನಮ್ಮಲ್ಲಿ ಯಾರಿಗೆ ಸಂಶಯ ಉದ್ಭವವಾಗಿದೆ, ಅವರ ಹೃದಯವನ್ನು ಗೆಲ್ಲುವುದಕ್ಕೆ ಪ್ರಯತ್ನ ಮಾಡಿ. ಕೇವಲ ವಾದದಿಂದ ನಮ್ಮನ್ನು ಗೆಲ್ಲುವುದಕ್ಕೆ ಸಾಧ್ಯವಿಲ್ಲ.

ಎಲೆಕ್ಟ್ರಿಸಿಟಿ ಬೋರ್ಡಿನ ವಿಚಾರವಾಗಿ ಸಾಕಾದಷ್ಟು ಚರ್ಚೆಯಾಗಿದೆ. ಈ ಸಾರ್ವಜನಿಕ ಜೀವನದಲ್ಲಿ ಪರಿಶುದ್ಧತೆಯ ವಾದವನ್ನು ಮುಂದಿಡುತ್ತಾ ಇದ್ದೇವೆ.

ಆಹೊತ್ತೇ ನಾನು ಈ ಸಭೆಗೆ ಅರಿಕೆಮಾಡಿಕೊಂಡೆ. ಎಲೆಕ್ಟ್ರಿಸಿಟಿ ಬೋರ್ಡಿನವರು ಎರಡೇ ಬ್ಯಾಂಕುಗಳಲ್ಲಿ ಹೆಚ್ಚಿನ ಮೊತ್ತವನ್ನು ಹಾಕಿದ್ದಾರೆ ಎಂದು ಅವರಿಬ್ಬರೂ ಕೂಡ ಆ ಬ್ಯಾಂಕಿಗೆ ಸಂಬಂಧಪಟ್ಟಂಥ ಇಬ್ಬರು ಮುಂದಾಳುಗಳು ಅವರು ಇವತ್ತಿನ ದಿವಸ ಕಾಂಗ್ರೆಸ್ ಸಂಸ್ಥೆಯಲ್ಲೂ ಇದ್ದಾರೆ ಮತ್ತು ಈ ಕಾಂಗ್ರೆಸ್ ಸರ್ಕಾರಕ್ಕೆ ಬಹಳ ಅಚ್ಚುಮೆಚ್ಚಿನವರಾಗಿದ್ದಾರೆ. ಆದುದರಿಂದ ಇಲ್ಲಿ ಬರತಕ್ಕದ್ದು, ಸಾರ್ವಜನಿಕ ಜೀವನದಲ್ಲಿ ಮತ್ತು ಸರ್ಕಾರ ಅದರ ಕೆಲಸ ಕಾರ್ಯಗಳನ್ನು ಮಾಡುವಾಗ ಸಂಶಯಕ್ಕೆ ಬಹಳ ದೂರವಾಗಿರಬೇಕು. ಕಡಮೆ ಬಡ್ಡಿಯ ದರದಲ್ಲಿ ಅವರ ಹತ್ತಿರ ದುಡ್ಡನ್ನು ಇಡತಕ್ಕದ್ದು, ಹೆಚ್ಚಿನ ಬಡ್ಡಿಯ ದರವನ್ನು ಕೊಡತಕ್ಕದ್ದು ಇಂಥ ವ್ಯವಹಾರಗಳ ಬಗ್ಗೆ ನಾವು ಟೀಕೆ ಟಿಪ್ಪಣಿಗಳನ್ನು ಮಾಡಿದಾಗ ಅವನ್ನು ಭರಿಸತಕ್ಕ, ಎದುರಿಸತಕ್ಕ ಧೈರ್ಯ, ಅದನ್ನು ಪರಿಹಾರ ಮಾಡತಕ್ಕ ಯುಕ್ತಿಯನ್ನು ಕೂಡ ಭಗವಂತನು ನಿಮಗೆ ಕೊಡಬೇಕು. ಆದರೆ ದುರದೃಷ್ಟದಿಂದ ಅಷ್ಟಾಗಿ ನಾನು ಅದನ್ನು ನೋಡುತ್ತಿಲ್ಲ. ನಾವು ಹೇಳುವುದೆಲ್ಲ ದುರುದ್ದೇಶಪೂರಿತವಾದುವು ಎನ್ನುವ ಮಾತನ್ನು ಕೆಲವಾರು ಜನ ಮಿತ್ರರು ಆಡಿದ್ದಾರೆ. ದುರುದ್ದೇಶದಿಂದ ಇರಬಹುದು, ಒಳ್ಳೆಯ ರೀತಿಯಲ್ಲಾಗಲೀ, ಕೆಟ್ಟ ರೀತಿಯಲ್ಲಾಗಲೀ, ನಾವು ನಿಮ್ಮನ್ನು ಸ್ಥಳಾಂತರ ಮಾಡಬೇಕು ಎಂದು ಇಲ್ಲಿ ಬಂದು ಕುಳಿತಿದ್ದೇವೆ. ಇವತ್ತು ನಮಗೆ ಒಂದಲ್ಲ ನೂರು ಅವಕಾಶಗಳನ್ನು ನೀವು ಕೊಡುತ್ತಿದ್ದೀರಿ. ಪ್ರತಿ ದಿನವೂ ಕೂಡ ಯಾವುದಾದರೂ ಒಂದು ವಿಚಾರದಲ್ಲಿ ನಾವು ಸರ್ಕಾರದ ಬಗ್ಗೆ ಟೀಕೆ ಮಾಡಲೇಬೇಕಾಗಿದೆ.

10-00 A.M.

ಇನ್ನು ಖಾದಿ ಬೋರ್ಡ್ ವ್ಯವಹಾರವನ್ನು ಮತ್ತೆ ಪ್ರಸ್ತಾಪಮಾಡ ಬಯಸುತ್ತೇನೆ. ಅಲ್ಲಿ ಅಕೌಂಟ್ಸ್ ಆಫೀಸರಾಗಿದ್ದವರು ಲೆಕ್ಕಪತ್ರಗಳನ್ನು ಸರಿಯಾಗಿ ಇಡದೆ ಇದ್ದಂಥವರನ್ನು ತೆಗೆದುಕೊಂಡು ಹೋಗಿ ಶರಾವತಿಗೆ ಹಾಕಿದ್ದಾರೆ; ಶರಾವತಿ ಲೆಕ್ಕಪತ್ರಗಳನ್ನು ನೋಡಿ ಎಂದು. ಇದಕ್ಕಿಂತಲೂ ಇನ್ನು ಅವಹೇಳನಕರವಾದ ಅಂಶ ಬೇರೆ ಇಲ್ಲ. ಶರಾವತಿ ವಿಚಾರ ನಾವು ಹೇಳಿದ್ದು ಲೆಕ್ಕಪತ್ರಗಳ ದೃಷ್ಟಿಯಿಂದ ಇದು ಒಂದು ಕರ್ಮಕೂಪ. ಇಲ್ಲಿಗೆ ಅಂಥ ಅಕೌಂಟ್ಸ್ ಆಫೀಸರನ್ನು ತೆಗೆದುಕೊಂಡು ಹೋಗಿ ಹಾಕಿದರೆ ನಿಮ್ಮಲ್ಲಿ ನಮಗೆ ಎಷ್ಟರಮಟ್ಟಿನ ನಂಬಿಕೆ ಹುಟ್ಟುತ್ತದೆ ಎಂದು ಅರ್ಥಮಾಡಿಕೊಳ್ಳಬೇಕಾಗಿದೆ.

ಸ್ವಾಮಿ, ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರು ಕೆಲವು ದಿವಸಗಳ ಹಿಂದೆ ಒಂದು ಹೇಳಿಕೆಯನ್ನು ಕೊಟ್ಟರು. ಅದನ್ನು ನಾನು ಉದ್ಧರಿಸುತ್ತೇನೆ. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ದಿವಾಳಿಯಾಗಿದ್ದವರು ಸ್ವಾತಂತ್ರ್ಯ ಬಂದನಂತರ ಲಕ್ಷಾಧೀಶರಾಗಿದ್ದಾರೆ, ಕೋಟ್ಯಾಧೀಶರಾಗಿದ್ದಾರೆ ಎಂಬುದಾಗಿ ಹೇಳಿದ್ದಾರೆ. ಇದು ಇವತ್ತು ನಿಮ್ಮೆಲ್ಲರ ಹೃದಯವನ್ನೂ ಕೂಡ ಚುಚ್ಚಬೇಕಾಗಿದೆ. ಈ ಕಾಂಗ್ರೆಸ್ ಪಕ್ಷದಲ್ಲಿ ಇವತ್ತು ಕುಳಿತಿರತಕ್ಕ ಹಲವಾರು ಜನರನ್ನು ನೋಡಿದರೆ ಅವರೆಲ್ಲರೂ ಕೂಡ ಹಿಂದೆ ಒಂದಲ್ಲ ಒಂದು ಕಾಲದಲ್ಲಿ ಕಾಂಗ್ರೆಸ್ಸನ್ನು ಒಂದಲ್ಲ ಒಂದು ರೀತಿಯಲ್ಲಿ ವಿರೋಧಿಸಿದವರು ಎಂದು ನನಗೆ ಗೊತ್ತು. ಇವತ್ತು ನಾನು ಕಾಂಗ್ರೆಸ್‌ನವರಿಗೆ ಕೇಳುತ್ತಿದ್ದೇನೆ: ನಿನ್ನೆ ಮಹಾತ್ಮ ಗಾಂಧೀಜಿಯವರ ಹೆಸರನ್ನು ಹೇಳಿದಾಗ ಆಕ್ಷೇಪಣೆ ಬಂತು ಸುಮ್ಮನೆ ಗಾಂಧೀಜಿಯವರ ಹೆಸರನ್ನು ಏಕೆ ಹೇಳುತ್ತೀರಿ ಎಂದು ಇವತ್ತು ಗಾಂಧೀಜಿಯವರ ಹೆಸರನ್ನು ಉಪಯೋಗ ಮಾಡುವುದಕ್ಕೆ ನಿಮಗೆ ಎಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ನಮಗೂ ಕೂಡ ಇದೆ. ಏಕೆಂದರೆ ಕೊನೆಗೆ ಅವರು ಕಾಂಗ್ರೆಸ್ಸಿನ ಸಾಧಾರಣ ಸದಸ್ಯರಾಗಿ ಕೂಡ ಇರಲಿಲ್ಲ. ಕಾಂಗ್ರೆಸ್ಸನ್ನು ಬರ್ತರ್ಫ್‌ಮಾಡಿ ಲೋಕಸೇವಾ ಸಂಘ ಎಂದು ಮಾಡಿ ಎಂಬುದಾಗಿ ಅವರೇ ಹೇಳಿ ಹೋಗಿದ್ದಾರೆ. ಆದುದರಿಂದ, ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರು ಹೇಳಿರತಕ್ಕ ಮಾತುಗಳನ್ನು ನಮ್ಮ ಸಂಸ್ಥಾನಕ್ಕೆ ಎಷ್ಟರಮಟ್ಟಿಗೆ ಅನ್ವಯ ಮಾಡಬಹುದು ಎನ್ನುವುದನ್ನು ಪ್ರತಿಯೊಬ್ಬರೂ ಕೂಡ ನೀವೇ ನಿಮ್ಮ ಆತ್ಮವನ್ನು ಶೋಧನೆ ಮಾಡಿಕೊಳ್ಳಬೇಕೆಂಬುದಾಗಿ ಹೇಳುತ್ತೇನೆ. ನಾವು ಯಾರಾದರೂ ಆ ಮಾತನ್ನು ಹೇಳಿದ್ದರೆ ಎಷ್ಟು ಉದ್ರೇಕಪೂರ್ಣರಾಗಿ ನಮ್ಮ ಮೇಲೆ ಬೀಳುತ್ತಿದ್ದಿರೋ ಅದನ್ನು ನಾನು ಹೇಳಲಾರೆ. ಒಟ್ಟಿನಲ್ಲಿ ಕಾಂಗ್ರೆಸ್ ಅಧ್ಯಕ್ಷರು ದೇಶಕ್ಕೆ ಬಹಳ ಉಪಕಾರವನ್ನು ಮಾಡಿದ್ದಾರೆ. ಅದಕ್ಕೋಸ್ಕರ ಈ ಒಂದು ಸತ್ಯವಾದಂಥ, ಪ್ರಮಾಣಭೂತವಾದಂಥ ಮಾತನ್ನು ಅವರು ಆಡಿದ್ದಕ್ಕಾಗಿ ಈ ಸಭೆಯ ವಿರೋಧಪಕ್ಷದವರ ಪರವಾಗಿ ಕಾಂಗ್ರೆಸ್ ಅಧ್ಯಕ್ಷರನ್ನು ನಾನು ಅಭಿನಂದಿಸುತ್ತೇನೆ.

(ಶ್ರೀ ಎಸ್. ಎಂ. ಕೃಷ್ಣ)

ಇವತ್ತು, ಗಾಂಧೀಜಿಯವರಿಗೆ ಜನ್ಮ ಕೊಟ್ಟಂಥ ನಾಡಿನಲ್ಲಿ ನಾವೂ ನೀವೂ ಸರ್ಕಾರವನ್ನು ಸುಪ್ರಸಿದ್ಧ ಮಾಡುವುದಕ್ಕೆ ಕುಳಿತಿದ್ದೇವೆ. ಸರ್ಕಾರ ಎಲ್ಲಿಯವರೆಗೆ ಎಡವುತ್ತ ಹೋಗುತ್ತದೆಯೋ, ಸರ್ಕಾರ ನಮ್ಮ ಟೀಕೆಗಳಿಗೆ ಎಲ್ಲಿಯವರೆಗೆ ಜವಾಬ್ದಾರಿಯುತವಾದ ಗಮನವನ್ನು ಕೊಡುವುದಿಲ್ಲವೋ ಅಲ್ಲಿಯವರೆಗೂ ಕೂಡ ಈ ಬ್ರಹ್ಮಾಸ್ತ್ರವನ್ನು ಎಷ್ಟು ಸಾರಿ ಬೇಕಾದರೂ ಉಪಯೋಗಿಸುವುದಕ್ಕೆ ಸಿದ್ಧರಾಗಿದ್ದೇವೆ ಎಂಬುದಾಗಿ ನಾನು ಇವತ್ತು ಹೇಳುತ್ತಿದ್ದೇನೆ. ನಾವು ತೊಟ್ಟ ಅಸ್ತ್ರವನ್ನು ತೊಡುವುದಿಲ್ಲವೆಂದು ಯಾರಿಗೂ ಕೂಡ ಭಾಷೆಯನ್ನು ಕೊಟ್ಟಿರತಕ್ಕ ಕರ್ಣರಲ್ಲ ನಾವು. ತೊಟ್ಟ ಅಸ್ತ್ರವನ್ನೇ ಎಷ್ಟು ಸಾರಿ ಬೇಕಾದರೂ ತೊಡುತ್ತೇವೆ. ಇದಕ್ಕಿಂತ ಅದ್ಭುತವಾದ ಅಸ್ತ್ರವೆಂದರೆ ಅದು ಜನತಾ ಅಸ್ತ್ರ. ನಮ್ಮ ಕೆಲಸದಲ್ಲಿ ಸಾಫಲ್ಯತೆಯನ್ನು ಪಡೆಯದೆ ಹೋದರೆ ನೇರವಾಗಿ ಮಹಾಜನತೆಯ ಶರಣು ಹೋಗಬೇಕು, ಅವರ ಮೊರೆಯನ್ನು ನಾವು ಹೋಗ ಬೇಕಾಗುತ್ತದೆಂದು ಈ ಸಮಯದಲ್ಲಿ ಹೇಳಬೇಕಾಗುತ್ತದೆ.

ಇನ್ನೊಂದು ವಿಚಾರ. ಈ ಸರ್ಕಾರದ ರೀತಿ ನೀತಿಗಳೆಲ್ಲವೂ ಕೂಡ ಯಾರು ತಮ್ಮನ್ನು ಹೊಗಳುತ್ತಾರೆಯೋ ಯಾರು ತಮ್ಮ ಹಿಂಬಾಲಕರಾಗಿರುತ್ತಾರೆಯೋ ಅಂಥವರಿಗೆ ಆಶ್ರಯ ಕೊಡತಕ್ಕದ್ದು, ಅಂಥವರಿಗೆ ಎಲ್ಲ ರೀತಿಯ ಉತ್ತೇಜನವನ್ನೂ ಕೊಡತಕ್ಕದ್ದು ನಡೆದುಕೊಂಡು ಬರುತ್ತಿದೆ. ಇದು ಕಾಂಗ್ರೆಸ್ ಸರ್ಕಾರಕ್ಕೆ ಒದಗಿ ಬಂದಿರತಕ್ಕ ದೊಡ್ಡ ಶಾಪ. ಈ ಶಾಪದಿಂದ ಯಾವ ಸರ್ಕಾರವೇ ಆಗಲಿ ಮೈಸೂರು ಸಂಸ್ಥಾನದಲ್ಲಿ ಇದುವರೆಗೂ ಕೂಡ ಮುಕ್ತಿಯನ್ನು ಪಡೆದಿಲ್ಲ. ಈಗ ಪತ್ರಿಕೆಗಳವರಿಗೆ ಸರ್ಕಾರದವರು ಕೃಪಾಶ್ರಯ ಕೊಟ್ಟಿದ್ದಾರೆ. ಹಿಂದೆ ರಾಮಸ್ವಾಮಿ ಮೊದಲಿಯಾರ್ ಅವರು ದಿವಾನರಾಗಿದ್ದಾಗ, ಮಿರ್ಜಾ ಅವರು ದಿವಾನರಾಗಿದ್ದಾಗ ಸರ್ಕಾರದವರು ಜಾಹಿರಾತುಗಳನ್ನು ಕೊಡತಕ್ಕ ನೀತಿಯ ಬಗ್ಗೆ ನೀವೇ ಬಹಳ ಟೀಕೆ ಮಾಡಿದ್ದೀರಿ. ಮಾನ್ಯ ಕೃಷ್ಣಪ್ಪನವರು ಆಗ ಮಾಡುತ್ತಿದ್ದ ಟೀಕೆಗಳನ್ನು ನಾನು ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತುಕೊಂಡು ಕೇಳಿದಾಗ ನನಗೆ ಒಂದು ರೀತಿಯ ಉತ್ಸಾಹವನ್ನು ತುಂಬುತ್ತಿತ್ತು, ಜೀವಕಳೆಯನ್ನು ತುಂಬುತ್ತಿತ್ತು. ಇವತ್ತು ಅಲ್ಲಿಂದ ಈ ಕಾಂಗ್ರೆಸ್ಸಿನ ಅಧಃಪತನ ಎಲ್ಲಿಯವರೆಗೆ ಹೋಗಿದೆ ಎಂದರೆ ಯಾವುದನ್ನು ಇನ್ನೊಂದು ಸರ್ಕಾರಕ್ಕೆ ಮಾಡಬೇಡಿ ಎಂದು ಟೀಕೆ ಮಾಡುತ್ತಿದ್ದರೋ ಅದೇ ಕೆಲಸವನ್ನು ಈಗ ಈ ಸರ್ಕಾರ ಮಾಡುವುದಕ್ಕೆ ಪ್ರಾರಂಭಿಸಿರುವುದನ್ನು ನೋಡಿದರೆ ನಮಗೆ ಸಖೇದಾಶ್ಚರ್ಯವುಂಟಾಗಿದೆ. ಇದು ಸಣ್ಣ ವಿಚಾರವಿರಬಹುದು ಅಷ್ಟೇ ಮಹತ್ವದ ವಿಚಾರವೂ ಆಗಿದೆ. ಜಾಹಿರಾತುಗಳನ್ನು ಕೊಟ್ಟಿರತಕ್ಕ ರೀತಿ ಯಾವ ಒಂದು ಪತ್ರಿಕೆ, ಯಾವ ಒಂದು ಗುಂಪಿನ ಪತ್ರಿಕೆಗಳು ನಿಮ್ಮನ್ನು ಇಂದ್ರಚಂದ್ರರು, ದೇವರಾದ ಮೇಲೆ ನಿಜಲಿಂಗಪ್ಪನವರು ಎಂದು ಹೊಗಳುತ್ತದೆಯೋ ಅಂಥ ಪತ್ರಿಕೆಗಳಿಗೆ ನೀವು ಕೊಟ್ಟಿರತಕ್ಕ ಜಾಹಿರಾತು ಎಷ್ಟು, ಅದರ ಸರ್ಕ್ಯುಲೇಷನ್ ಎಷ್ಟಿದೆ ಎನ್ನುವುದನ್ನು ಕೂಡ ಗಣನೆಗೆ ತೆಗೆದುಕೊಳ್ಳದೆ ಆ ಒಂದು ಗುಂಪಿನ ಪತ್ರಿಕೆಗಳಿಗೆ ಆರು ತಿಂಗಳ ಅವಧಿಯಲ್ಲಿ 65 ಸಹಸ್ರ ರೂಪಾಯಿಗಳನ್ನು ಕೊಟ್ಟಿರತಕ್ಕ ರೀತಿ ನೀತಿಗಳನ್ನು ನೋಡಿದರೆ ಇದು ಜವಾಬ್ದಾರಿ ಸರ್ಕಾರವೇ, ನೀವು ಹೇಳಿಕೊಡುತ್ತ ಇರತಕ್ಕ ಪಾಠವೇ ಎಂದು ಕೇಳುತ್ತೇನೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ: ನನ್ನ ಹತ್ತಿರ ಸಂಬಂಧಪಟ್ಟಂಥ ಆ ಪತ್ರಿಕೆಗಳ ಮಾಲೀಕರು ಸಂಪಾದಕರುಗಳು ಸರ್ಕಾರಕ್ಕೆ ಬರೆದಿರತಕ್ಕ ಕಾಗದವಿದೆ. ಆ ಕಾಗದದಲ್ಲಿ ಅವರು ಹೇಳಿದ್ದಾರೆ: ಹಿಂದೆ ಜತ್ತಿ ಮಂತ್ರಿಮಂಡಲದಲ್ಲಿನ ನಿಮ್ಮ ವಿರೋಧಾಭಿಪ್ರಾಯದಲ್ಲಿ ನಾನು ನಿಮ್ಮ ಪರವಾಗಿ ಇದ್ದುದ್ದರಿಂದ ಅಂದಿನ ಮಂತ್ರಿಮಂಡಲ ನಮ್ಮ ಮೇಲೆ ಕಣ್ಣು ಕೆಂಪಗೆ ಮಾಡಿತ್ತು. ಇವತ್ತು ನೀವು ಅಧಿಕಾರಕ್ಕೆ ಬಂದಿದ್ದೀರಿ ಆದುದರಿಂದ ನಿಮ್ಮ ಎಲ್ಲ ಜಾಹಿರಾತುಗಳನ್ನೂ ಕೂಡ ನಮಗೆ ಕೊಡಬೇಕು ಎಂದು ಬರೆದಿರತಕ್ಕ ಕಾಗದ ನನ್ನ ಹತ್ತಿರ ಇದೆ.

Mr. SPEAKER.—Addressed to whom?

Sri S. M. KRISHNA.—Addressed to the Home Minister of Mysore.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಆ ಪತ್ರವನ್ನು ನನಗೆ ಕಳಿಸಿಕೊಡಿ, ಆದನ್ನು ನೋಡುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಎನ್‌ಕ್ವೈರಿ ಕಮಿಟಿ ಮಾಡುತ್ತೇವೆಂದು ಹೇಳಿದರೆ ಕೊಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅವರಿಗೆ ಪತ್ರವನ್ನು ಬರೆದಿದ್ದಾರೆಂದು ಹೇಳಿದರು. ಮಾನ್ಯ ಸದಸ್ಯರ ಹತ್ತಿರವಿರುವ ಪತ್ರವನ್ನು ಕೊಡುವುದಕ್ಕೆ ಅವರ ಹತ್ತಿರ ಇರುವ ಪತ್ರವನ್ನು ಕೊಡಲಿ.

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಪತ್ರವನ್ನು ನೋಡಿ ಹೇಳುತ್ತಿದ್ದರು. ಅದಕ್ಕೋಸ್ಕರ ಕಳಿಸಿಕೊಡಿ ಎಂದು ಹೇಳಿದೆ.

Sri S. M. KRISHNA.—I can produce the photostat copy to the enquiry committee. I am prepared to take the consequences. ಈ ರೀತಿ ಆಡಳಿತವನ್ನು ನಡೆಸಿಕೊಂಡು ಹೋಗತಕ್ಕದ್ದು ಒಳ್ಳೆಯದಲ್ಲ. ಇದು ಪ್ರಜಾಪ್ರಭುತ್ವದಲ್ಲಿ ಕಹಿ ವಾತಾವರಣವನ್ನು ಉಂಟುಮಾಡುವುದಕ್ಕೆ ಸಹಾಯಕ ಮಾತ್ರ ಆಗುತ್ತದೆ. ಈ ಕಹಿಯನ್ನು ಹೋಗಲಾಡಿಸಿ ಸರಿ ಮಾಡತಕ್ಕದ್ದು ಶಾಸನ ಸಭೆಯ ನಾಯಕರಿಗೆ ಜವಾಬ್ದಾರಿಯಾಗಿದೆ. ಆ ಜವಾಬ್ದಾರಿಯನ್ನು ಅವರು ಎಷ್ಟು ವಿಚಕ್ಷಣೆಯಿಂದ ನಿರ್ವಹಿಸುತ್ತಾರೆಯೋ, ಎಷ್ಟು ತಾಳ್ಮೆಯಿಂದ ನಿರ್ವಹಿಸುತ್ತಾರೆಯೋ ಅದರ ಮೇಲೆ ನಮ್ಮ ಸಂಸ್ಥಾನದ ಭವಿಷ್ಯ ನಿರ್ಧರವಾಗಬೇಕಾಗುತ್ತದೆ.

ಇನ್ನು ಮಾನ್ಯ ಶ್ರೀ ನಿಜಲಿಂಗಪ್ಪನವರ ಸುವರ್ಣ ತುಲಾಭಾರ ಪ್ರಕರಣ ಸಾಕಷ್ಟು ನಡೆದಿದೆ. ಈ ಬಗ್ಗೆ ನಾನು ಒಂದು ಮಾತು ಹೇಳಲು ಇಚ್ಛೆಪಡುತ್ತೇನೆ. ಈ ಸುವರ್ಣ ತುಲಾಭಾರದ ಚಿತ್ರೀಕರಣಮಾಡಿ ಒಂದು ಫಿಲ್ಮ ಮಾಡಿ ಸಂಸ್ಥಾನದಲ್ಲೆಲ್ಲ ತೋರಿಸಿ ರಾಷ್ಟ್ರೀಯ ರಕ್ಷಣಾ ನಿಧಿಗೆ ಸಹಾಯ ಮಾಡಲು ಸಾಕಷ್ಟು ಉತ್ಸಾಹ ಅಭಿಮಾನ ಉಂಟುಮಾಡಬೇಕೆಂಬ ದೃಷ್ಟಿಯಿಂದ ಇದನ್ನು ಮಾಡಿದ್ದಾರೆ. ಉದ್ದೇಶ ಬಹಳ ಒಳ್ಳೆಯದು ಅದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಆದರೆ ಈ ಚಿತ್ರೀಕರಣಕ್ಕಾಗಿ ಏನು ಒಂದು ಏಜೆನ್ಸಿ ಮಾಡಿಕೊಂಡಿದ್ದೀರೋ ಆ ಏಜೆನ್ಸಿ ಬಗ್ಗೆ ನಮಗೆ ಸಂಶಯ ನಿವಾರಣೆಯಾಗಿಲ್ಲ. ಬೆಂಗಳೂರು ಅಕ್ಯುಪೇಶನಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಒಂದು ಫಿಲ್ಮ ಯೂನಿಟ್ ಇದೆ. ಗವರ್ನಮೆಂಟ್ ಆಫ್ ಇಂಡಿಯಾದವರು ಈ ತುಲಾಭಾರದ ಚಿತ್ರವನ್ನು ಪ್ರದರ್ಶಿಸಿದ್ದಾರೆ. ಅದನ್ನು ನಾನು ನೋಡಿದ್ದೇನೆ ಅದರಲ್ಲಿ ನಮ್ಮ ಮುಖ್ಯ ಮಂತ್ರಿಗಳನ್ನು ನೋಡಿ ನಾನು ಸಂತೋಷಪಟ್ಟಿದ್ದೇನೆ. ಹೊಸದಾಗಿ ನಿಮ್ಮದೇ ಆದ ಒಂದು ರೀತಿಯಲ್ಲಿ ಬೆಂಗಳೂರಿನ ಒಬ್ಬ ಮಹನೀಯರಿಗೆ 30-40 ಸಾವಿರ ರೂಪಾಯಿ ಕೊಟ್ಟು ಒಂದು ಚಿತ್ರ ತೆಗೆಯಬೇಕು—ಒಂದು ಫಿಲ್ಮ ಮಾಡುತ್ತೇವೆಂದು ಹೇಳುವುದರಲ್ಲಿ ಏನು ನ್ಯಾಯ ಇದೆ? ಮೈಸೂರಿನಲ್ಲಿ ಪ್ರಾರಂಭದಿಂದಲೂ ನಡೆಯುತ್ತಿರುವ ಈ ವ್ಯಕ್ತಿ ಆರಾಧನೆ ವಿರೋಧಿಸಬೇಕಾಗಿದೆ. ಮೈಸೂರಿನಲ್ಲಿ ಈ ವ್ಯಕ್ತಿ ಆರಾಧನೆಗೆ ಹುಟ್ಟು ಹಾಕತಕ್ಕಂಥಾದ್ದನ್ನು ತೀವ್ರ ಪ್ರತಿಭಟಿಸಬೇಕಾಗಿದೆ. ಈ ದಿವಸ ನಮಗೆ ಬಹು ಅವಶ್ಯಕವಾಗಿ ಬೇಕಾಗಿರತಕ್ಕಂಥಾದ್ದು ಆಡಳಿತೆಯಲ್ಲಿ ಪರಿಶುದ್ಧತೆ. ಪರಿಶುದ್ಧತೆ ಜೊತೆಗೆ ಆಡಳಿತದಲ್ಲಿ ಹೆಚ್ಚು ಲವಲವಿಕೆ ಉಂಟು ಮಾಡಬೇಕಾಗಿದೆ. ಇಲ್ಲಿ ಕೂತಿರತಕ್ಕಂಥ 139 ಜನ ಕಾಂಗ್ರೆಸ್ ಸದಸ್ಯರನ್ನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಯಾವದೇ ಕಚೇರಿಗೆ ಹೋದರೂ ದಳ್ಳಾಳಿ ಇಲ್ಲದೆ ಅಥವಾ ಲಂಚ ಕೊಡದೆ ಯಾವದೇ ಒಂದು ಕಾಗದ ಒಂದು ಟೇಬಲ್ಲಿನಿಂದ ಇನ್ನೊಂದು ಟೇಬಲ್ಲಿಗೆ ಹೋಗುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ಯೋಚನೆಮಾಡಿ. ಶ್ರೀ ಮಲ್ಲಿಕಾರ್ಜುನಸ್ವಾಮಿಯವರು ತಲೆ ಅಲ್ಲಾಡಿಸುತ್ತಿದ್ದಾರೆ ಯಾಕೆಂದರೆ ಅವರಿಗೆ ಇದು ಗೊತ್ತು. ಶ್ರೀ ಟಿ. ಮಾದಪ್ಪಗೌಡರನ್ನು ಕೇಳುತ್ತೇನೆ. ಅವರು 40 ವರ್ಷ ಪಾರ್ಲಮೆಂಟರಿ ಅನುಭವವುಳ್ಳ ಖಣಿ ಆಗಿದ್ದಾರೆ. ರಾಮನಗರಂ ತಾಲ್ಲೂಕು ಕಚೇರಿಯಲ್ಲಿ ಎಲ್ಲವೂ ಮಾದಯ್ಯನವರದು ಹನುಮಂತಯ್ಯನವರದು ಆಗಿ ಹೋಗಿ ಬಿಟ್ಟಿದೆ.

Mr. SPEAKER.—No Names of other members need be mentioned; at any rate the names of those that are not members of this House. I have always said that Hon. Members should avoid mentioning the names of persons who are not here.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಒಳ್ಳೇ ಮಾತು ಹೇಳುವಾಗ್ಗೆ ಹೆಸರು ಹೇಳಬೇಕಾಗಿಲ್ಲವೆ?

ಶ್ರೀ ಎಸ್. ಎಂ. ಕೃಷ್ಣ.—ರಾಮನಗರಂನಲ್ಲಿಯಾಗಲಿ, ಚನ್ನಪಟ್ಟಣದಲ್ಲಿಯಾಗಲಿ ನಿಪ್ಪಾಣಿಯಲ್ಲಾಗಲಿ ಸರಕಾರದ ಕೆಲಸ ಕಾರ್ಯಗಳು ವಿಚಕ್ಷಣೆಯಿಂದ ನಡೆಯುತ್ತಿವೆಯೇ? ಸಂಬಂಧಪಟ್ಟ ಜನರು ನೂರಾರು ಸಲ ತಿರುಗಾಡಿ ಪ್ರತಿದಿವಸ ತಹಶೀಲದಾರರ ಆಫೀಸು ಬ್ಲಾಕ್ ಡೆವಲಪ್ಮೆಂಟ್ ಆಫೀಸುಗಳಿಗೆ ಹೋಗದೇ ಇದ್ದರೆ ಯಾವ ಕೆಲಸವೂ ನಡೆಯುವುದಿಲ್ಲ. ರಾಮ ರಾಜ್ಯ ಎಂದು ಏನು ಹೇಳುತ್ತೀರೋ ಅದನ್ನು ಚನ್ನಪಟ್ಟಣಕ್ಕೆ ಹೋಗಿ ನೋಡಬೇಕು. ಎಲ್ಲಾ ಸರಿಯಾಗಿ ಇದೆಯೇ? ಯಾವ ವಿಧವಾದಂಥ ಮಮಕಾರವಿಲ್ಲದೆ ಹೇಳಬೇಕಾಗಿದೆ. ಎಲ್ಲರ ಒಗ್ಗಟ್ಟಿನಿಂದ ಪ್ರಯತ್ನ ನಡೆಯಬೇಕು. ನಿಧಾನ ಮಾಡುವುದನ್ನು ಬಿಟ್ಟು ತೀವ್ರ ಕೆಲಸ ಕಾರ್ಯಗಳು ನಡೆಯುವುದಕ್ಕೆ ಎಲ್ಲ ಕ್ರಮ ತೆಗೆದುಕೊಳ್ಳಬೇಕು. 27 ಜನ ಮಂತ್ರಿಗಳನ್ನು ಹೊಂದಿರತಕ್ಕಂಥ ನೀವು ಪ್ರತಿಯೊಬ್ಬರು ಒಂದೊಂದು ಜಿಲ್ಲೆ, ಒಂದೊಂದು ತಾಲ್ಲೂಕು ತೆಗೆದುಕೊಂಡು ಅಲ್ಲಿ ಕೆಲಸ ಕಾರ್ಯಗಳು ವೇಗವಾಗಿ ನಡೆಯುವಂತೆ ಮಾಡಿದರೆ ಬಹಳ ಒಳ್ಳೆಯ ಕೆಲಸ ಮಾಡಿದಂತಾಗುತ್ತದೆಂದು ನಾನು ಹೇಳಬೇಕಾಗಿದೆ.

Sri M. C. BASAPPA (Chamarajnagar).—You can give us your experience about Maddur.

Mr. SPEAKER.—Is that a ground for no-confidence motion?

Sri S. M. KRISHNA.—We want clean, efficient Government and besides, we have not mentioned any ground at all in the no confidence motion.

Mr. SPEAKER.—I wanted to know if the delay at lower level was a ground for the no confidence motion against the Ministry?

ಶ್ರೀ ಎಸ್. ಎಂ. ಕೃಷ್ಣ.—ಕೆಲಸ ಕಾರ್ಯಗಳು ಬೇಗ ಬೇಗ ನಡೆಯುವ ಹಾಗೆ ಮಾಡಲು ಸರಕಾರದ ಕೈಯಲ್ಲಿ ಆಗಲಿಲ್ಲ. ಕೆಲಸ ವೇಗವಾಗಿ ನಡೆಸುವುದಕ್ಕೆ ಮಂತ್ರಿಮಂಡಲ ದುರ್ಬಲವಾಗಿದೆ, ಅದಕ್ಕೆ ಶಕ್ತಿ ಇಲ್ಲ, ಮಂತ್ರಿಮಂಡಲ ಇರುವುದಕ್ಕೆ ಯೋಗ್ಯವಿಲ್ಲ ಎಂಬ ವಾದ ಹೇಳುವುದರಲ್ಲಿ ಸಾಕಷ್ಟು ಕಳಕಳಿ ಇದೆ ಎಂದು ನಾನು ಭಾವನೆ ಮಾಡುತ್ತೇನೆ. ನಾಳೆ ಇಲ್ಲಿಗೆ ನಮ್ಮ ರಾಷ್ಟ್ರಪತಿಗಳು ಬರುತ್ತಾರೆ. ರಾಷ್ಟ್ರಪತಿಗಳು ಬಂದಾಗ್ಗೆ ನಮ್ಮ ಆಗು ಹೋಗುಗಳನ್ನು ಈ ಮೂಲಕ ಅವರ ದೃಷ್ಟಿಗೆ ತರಬೇಕಾಗಿದೆ. ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಒಂದು ಮಾತು ಹೇಳಿದರು. ಪ್ರಜಾಪ್ರಭುತ್ವಕ್ಕೆ ವಿರೋಧವಾದರೂ ಕೂಡ ನಮ್ಮ ಸಂಸ್ಥಾನದಲ್ಲಿ ಗವರ್ನರ್ ಆಳ್ವಿಕೆ ಬರಲಿ ಯಾಕೆಂದರೆ ಈ ಮಂತ್ರಿಮಂಡಲಕ್ಕೆ ಕೆಲಸಮಾಡುವ ಶಕ್ತಿ ಸಾಮರ್ಥ್ಯ ಇಲ್ಲ.

Mr. SPEAKER.—I object to reference to the Governor. Such reference should not come in the Debate.

Sri S. M. KRISHNA.—Yesterday, a point was made.

Mr. SPEAKER.—Any point made regarding the Governor's position, status and all that, it cannot be permitted. I am not permitting it, much less in this Debate on the no confidence motion.

ಶ್ರೀ ಎಸ್. ಎಂ. ಕೃಷ್ಣ.—ಈ ಆರೋಪಣೆಗಳ ಹೊರೆ ನೋಡಿದರೆ ಸರಕಾರದ ಮೇಲಿನ ವಿಶ್ವಾಸ ನಾವು ಕಳೆದುಕೊಳ್ಳುವುದಕ್ಕೆ ಈ ಹೊರೆ ಸಾಕ್ಷಿಯಾಗಿದೆ. ಇದರಿಂದ ಸರಕಾರ ದೋಷ ಮುಕ್ತವಾಗಬೇಕಾದರೆ ನಾವು ಹೇಳಿದ ವಿಚಾರದ ಬಗ್ಗೆ ವಿಚಾರಣೆ ನಡೆಸಬೇಕು ಅದರಲ್ಲಿ ಸರಕಾರ ಕಳಂಕ ರಹಿತವಾಗಿ ಹೊರೆ ಬಂದರೆ ಈ ಸರಕಾರ 5 ವರ್ಷ ರಾಜ್ಯಭಾರ ಮಾಡಲು ಲಾಯಖ ಆಗಿರುತ್ತದೆ. ಅಸಮರ್ಥತೆ ಹೊರೆ ಹೊತ್ತುಕೊಂಡು ಮುಂದೆ ಸರಕಾರ ಚಲಿಸುವದಾದರೆ ಸರಕಾರ ಎಷ್ಟು ದುರ್ಬಲವಾಗುತ್ತದೆ. ಅದಕ್ಕೆ ಅವಕಾಶ ಕೊಡಬಾರದು ಎಂದು ಮಾನ್ಯ ಶ್ರೀ ನಿಜಲಿಂಗಪ್ಪನವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೊಮ್ಮೆ ಹೇಳುವುದೇನೆಂದರೆ ಶರಾವತಿ ಪ್ರಕರಣ ನಿಮ್ಮ ಹೆಗಲು ಹತ್ತಿದ ಭೂತ ಆಗಬಾರದು. ಇದರ ವಿಚಾರಣೆ ನಡೆಸಲು ನಿಮಗೆ ತೊಂದರೆ ಏನು? ಹೊರಗಡೆಯಿಂದ ಒಬ್ಬ ನ್ಯಾಯಾಧೀಶರನ್ನು ಕರೆಸಿ ಅವರಿಗೆ ಸಾಕಷ್ಟು ಸಾಕ್ಷಿ ವಗೈರೆ ಸಂಗ್ರಹಿಸಿ ಕೊಟ್ಟು ವಿಚಾರಣೆ ನಡೆಸಿ ಮಂತ್ರಿಮಂಡಳಿ ಕೈ ತೊಳೆದುಕೊಳ್ಳುವುದು ಒಳ್ಳೆಯದು ಎಂದು ಹೇಳಿ ನನ್ನ ಈ ನಾಲ್ಕು ಮಾತು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ಎಂ. ಸಿ. ಬಸಪ್ಪ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾಜಿ ಮುಖ್ಯಮಂತ್ರಿಗಳೊಬ್ಬರು ಸದ್ಯಕ್ಕೆ ಪಾರ್ಲಿಮೆಂಟಿನ ಸದಸ್ಯರಾಗಿರತಕ್ಕಂಥವರು ಈ ಸಭೆಯ ಕಾರ್ಯಕಲಾಪಗಳನ್ನು ಕೇಳುವುದಕ್ಕೆ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶ ಕೊಡಬಹುದೇ ಎಂದು ಕೇಳುತ್ತೇನೆ. ಮಾನ್ಯ ಅಧ್ಯಕ್ಷರು ಇದಕ್ಕೆ ವಿವರಣೆ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

Mr. SPEAKER.—I will give a ruling at the appropriate time.

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜ ನಗರ).—ಮಾನ್ಯ ಸಭಾಪತಿಗಳೇ, ಈ ಸಭೆಯ ಮುಂದೆ ವಿರೋಧಪಕ್ಷದ ನಾಯಕರು ಮಂಡಿಸಿರತಕ್ಕಂಥ ಅವಿಶ್ವಾಸ ನಿರ್ಣಯವನ್ನು ವಿರೋಧಿಸುತ್ತಾ ಅದಕ್ಕಾಗಿ ಕೆಲವು ಕಾರಣಗಳನ್ನು ಕೊಡಲು ಬಯಸುತ್ತೇನೆ. ಈ ಸಭೆಯ ಮುಂದೆ ಮಂತ್ರಿಮಂಡಳದ ವಿಚಾರವಾಗಿ ಅವಿಶ್ವಾಸ ನಿರ್ಣಯ ಎರಡನೇ ಬಾರಿಗೆ ಚರ್ಚೆ ಮಾಡುತ್ತಿದ್ದೇವೆ. ಮೊದಲನೆ ಬಾರಿಗೂ ಎರಡನೇ ಬಾರಿಗೂ ಸ್ವಲ್ಪವೂ ವ್ಯತ್ಯಾಸ ನಾವು ನೋಡುತ್ತಾ ಇಲ್ಲ. ಬಹು ಮಟ್ಟಿಗೆ ಕಾಣತಕ್ಕಂಥ ವ್ಯತ್ಯಾಸ ಅಂದರೆ ಮೊದಲನೆ ಬಾರಿ ನಿರ್ಣಯದಲ್ಲಿ ಆರೋಪಣೆ ಲಿಸ್ಟ್ ಇದ್ದಿತು, ಎರಡನೆ ಬಾರಿ ಅಂಥ ಲಿಸ್ಟು ಕೊಡುವ ಗೋಜಿಗೆ ಹೋಗಿಲ್ಲ. ಮನಸ್ಸಿನಲ್ಲಿ ಸಂಶಯ ಇದೆ ಎಂದು ಪ್ರತಿಯೊಬ್ಬ ಸದಸ್ಯರೂ ಒತ್ತಿ ಒತ್ತಿ ಹೇಳಿದ್ದಾರೆ.

ಈ ಸಂಶಯಗಳಿಗೆ ನೆಲೆ ಯಾವುದು, ಮನೆ ಯಾವುದು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದ್ದು ಬಹಳ ಮುಖ್ಯ, ಮತ್ತು ಎರಡನೆಯದಾಗಿ ವಿರೋಧ ಪಕ್ಷದಲ್ಲಿ 30 ಜನ ಸದಸ್ಯರಿಗೆ ಏನಾದರೂ ಒಂದು ಸಂಶಯ ಬಂದ ಪಕ್ಷದಲ್ಲಿ ಒಂದು ಸರ್ಕಾರವೇ ಸ್ಥಾನಬದ್ಧತೆಗೆ ಯೋಗ್ಯವೇ ಎಂದು ಪ್ರಶ್ನೆ ಮಾಡುವುದಾಗಲಿ ಅಥವಾ ಒಂದು ಸಂಶಯವನ್ನು ವ್ಯಕ್ತಪಡಿಸಿದಾಗ ನನಗೆ ಒಂದು ಸಂಶಯ ಬಂದಿದೆ ಈ ಕಳಂಕವನ್ನು ಸಂಶಯವನ್ನು ನೀವು ತಪ್ಪಿಸಿಕೊಳ್ಳುವುದು ಬಹಳ ಉಚಿತ ಇದಕ್ಕೆ ಒಂದು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಹೇಳುತ್ತಾ ಹೋದರೆ ಈ ಸಂಶಯಕ್ಕೆ ಕೊನೆ ಯಾವುದು ಎಂಬುದನ್ನು ಅವರು ಯಾರು ವಿಷದಪಡಿಸಲಿಲ್ಲ. ಒಬ್ಬ ಮನುಷ್ಯನಿಗೆ ಸಂಶಯ ಪ್ರಾರಂಭವಾದರೆ ಜೀವಮಾನದಲ್ಲಿ ಕೊನೆಯ ತನಕ ಆ ಸಂಶಯ ಜಾಸ್ತಿಯಾಗುತ್ತಲೇ ಹೋಗುತ್ತದೆ, ಇಂತಹ ಆಪಾದನೆಗಳಿಗೆ ಕೊನೆ ಉಂಟೇ? ಎಲ್ಲಿಗೆ ನಿಲ್ಲಿಸುತ್ತಾನೆ? ಸಮಾಧಾನ ಆದಾಗ ನಿಲ್ಲಿಸುತ್ತಾನೆ ಆ ಆಶೆ ಆಕಾಂಕ್ಷೆಗಳು ಈಡೇರಬೇಕು ಹಾಗಾದರೆ ಯಾವಾಗಲೂ ಸಂಶಯವೇ ಪಡತಕ್ಕ ಸ್ವಭಾವದವರಿಗೆ ನಾಳೆ ಮುಖ್ಯಮಂತ್ರಿಗಳು ಪಶ್ಚಿಮದ ಗೇಟಿನಲ್ಲಿ ಬರುತ್ತಿದ್ದವರು ಪೂರ್ವದ ಗೇಟಿನಲ್ಲಿ ಬಂದರೆ ಅದಕ್ಕೂ ಒಂದು ಸಂಶಯ ಅವರಿಗೆ ಬರುತ್ತದೆ. ಈ ಕಡೆ ಅವರು ಬರಬೇಕು ಆ ಕಡೆ ಏಕೆ ಬಂದರು ಎಂದು. ಆದ್ದರಿಂದ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಎನ್ನುವುದಕ್ಕೆ ಈ ದಿನ ಈ ರೀತಿ ಎಲ್ಲಾ ಅವಿಶ್ವಾಸ ನಿರ್ಣಯ ಬಂದು ಚರ್ಚೆ ಮಾಡುತ್ತಾ ಇದ್ದೇವೆ ಶರಾವತಿ ಯೋಜನೆಯನ್ನು ಬಹಳವಾಗಿ ಎತ್ತಿ ಹಿಡಿದಿದ್ದಾರೆ ಅವರಿಗೆ ಇದರಲ್ಲಿ ಸಂಶಯ ಹೆಚ್ಚಬೇಕಾದರೆ ಕಾರಣ ಇದೆ ಬಹುಶಃ ಅವರು ಶರಾವತಿಗೆ ಹೋಗಿ ನೋಡಿ ಬಂದಿಲ್ಲ—ಮತ್ತು—ಇನ್ನೊಂದು ಏನೆಂದರೆ ಅವರು ಯಾವುದಾದರೂ ಒಂದು ನಿರ್ದಿಷ್ಟವಾದ ಅಂಶವನ್ನು ಚೆನ್ನಾಗಿ ತಿಳಿದುಕೊಂಡು ಅದನ್ನು ಪ್ರತಿಪಾದನೆ ಮಾಡುವ ಗೋಜಿಗೇ ಹೋಗಿಲ್ಲ ಮತ್ತು ವಿಷಯಗಳನ್ನು ತಿಳಿದುಕೊಂಡಿಲ್ಲ. ಜ್ಯುಡಿಷಿಯಲ್ ಎನ್‌ಕ್ವೈರಿ ಆಗಬೇಕು ನಿಜ, ಚೀಫ್ ಮಿನಿಸ್ಟರು ಬಹಳ ಒತ್ತಾಯಮಾಡಿ ಹೇಳಿದ್ದಾರೆ ಒಂದಲ್ಲ ಎರಡು ಸಾರಿ—ನನಗೆ ಮನದಟ್ಟು ಆದ ಪಕ್ಷದಲ್ಲಿ ಬಿಟ್ಟುಬಿಡುವುದಕ್ಕೆ ತಯಾರಾಗಿಲ್ಲ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತೇನೆ ಎಂದು ಹೇಳಿದ್ದಾರೆ ಒಂದು ವೇಳೆ ಜ್ಯುಡಿಷಿಯಲ್ ಎನ್‌ಕ್ವೈರಿ ಆಯಿತು ಎಂದು ಇಟ್ಟುಕೊಳ್ಳಿ ಆಗಲೂ ಅದು ಸರಿಯಾಗಿ ಆಗಿಲ್ಲ ಎಂದು ಸಂಶಯ. ಈ ರೀತಿ ಸಂಶಯಕ್ಕೆ ಎಲ್ಲಿ ಸ್ವಾಮಿ ಕೊನೆ? ಮುಖ್ಯಮಂತ್ರಿಗಳು ಒತ್ತಾಯವಾಗಿ ಹೇಳಿದ್ದಾರೆ ವಿಚಾರ ಮಾಡುತ್ತಾ ಇದ್ದೇನೆ, ನಿಜವಾಗಿಯೂ ಇರತಕ್ಕ ಆರೋಪಣೆ ಸತ್ಯವಾಗಿದ್ದ ಪಕ್ಷದಲ್ಲಿ ಯಾರ ದಯಾದಾಕ್ಷಿಣ್ಯಕ್ಕೂ ಹೆದರುವುದಿಲ್ಲ ಎನ್‌ಕ್ವೈರಿ ಇನ್‌ಸ್ಟಿಟ್ಯೂಟ್ ಮಾಡುತ್ತೇನೆ ಎಂದು ಹೇಳಿರಬೇಕಾದರೆ ಸಂಶಯ ಮುಗಿಯಲಿಲ್ಲ ಎಂದರೆ ಈ ಸಂಶಯಕ್ಕೆ ಕೊನೆಯೇ ಇಲ್ಲ. ಹನ್ನೆರಡು ಎನ್‌ಕ್ವೈರಿಗಳನ್ನು ಮಾಡಿದರೂ ಸಂಶಯವನ್ನು ಕೊನೆಗಾಣಿಸುವುದಕ್ಕಾಗುವುದಿಲ್ಲ. ಮಂತ್ರಿಮಂಡಲದ ಮೇಲೆ ಮಾಡುವುದಕ್ಕೆ ಅದು ಒಂದು ಆಪಾದನೆಯೇ ಎಂಬುದು ಒಂದು ಪ್ರಶ್ನೆ. ಎರಡನೆಯದಾಗಿ ಆಹಾರ ಸಮಸ್ಯೆ—ಬೆಲೆ ಏರಿತು, ಇಳಿಯಿತು ಎಂದು ವಾದ ಮಾಡಿದರು ಇದು ವಾದಕ್ಕೆ ಬಹಳ ಚೆನ್ನಾಗಿದೆ. ನೆನ್ನೆ ದಿವಸ ಮಾನ್ಯ ರೆವಿನ್ಯೂ ಮಿನಿಷ್ಟರು ಹೇಳಿದ್ದಾರೆ ಆದ್ದರಿಂದ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಒಂದು ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಾದರೆ ಎರಡು ರೀತಿಯಲ್ಲೂ ವಾದ ಮಾಡಬಹುದು ಆಹಾರ ಧಾನ್ಯಗಳ ಬೆಲೆಯ ಪರಿಮಿತ ಜಾಸ್ತಿಯಾಯಿತು ಆದ್ದರಿಂದ ಅದನ್ನು ಇಳಿಸಬೇಕು ಎಂದು ಹೇಳಿ ಇಳಿಸಿದರೆ ವಿರೋಧ ಪಕ್ಷದವರು ರೈತರ ಕಡೆಗೆ ಸೇರಿಕೊಂಡು ದವಸ ಧಾನ್ಯಗಳ ಬೆಲೆ ಇಳಿದುಹೋಯಿತು, ಅಧೋಗತಿಗೆ ಇಳಿದು ಹೋಗಿದೆ ಆದ್ದರಿಂದ ನೀವು ಈ ಮನೆಯಲ್ಲಿ ಕೂಡುವುದಕ್ಕೆ ಲಾಯಕ್ಕಲ್ಲ ಎಂದು ಹೇಳತಕ್ಕ ವಾದವೂ ಕೂಡ ಇದೆ. ರೈತನ ದೃಷ್ಟಿಯನ್ನು ತೆಗೆದುಕೊಂಡು ಆಹಾರ ಧಾನ್ಯಗಳ ಬೆಲೆಯನ್ನು ಏರಿಸಿದರೆ ಕನ್‌ಸ್ಯೂಮರ್ಸ್ ಪರ ಪೇಟೆಗಳಲ್ಲಿ 200 ರೂಪಾಯಿ ಸಂಬಳ ತೆಗದುಕೊಂಡು ಹೇಗೆ ಸಂಸಾರ ಮಾಡುವುದು ಎಂದು ಆಗಲೂ ಕೂಡ ಅವರು ವಾದ ಮಾಡುತ್ತಾರೆ. ಈ ವಿಧದಲ್ಲಿ ವಾದಮಾಡುತ್ತಾ ಹೋದರೆ ಅಂತ್ಯ ಎಲ್ಲಿ ಇದಕ್ಕೆ ಒಂದು ರೀಸನ್ ಬೇಕು, ರೈತನ ಹಿತವನ್ನು ಎಷ್ಟರಮಟ್ಟಿಗೆ ಬಯಸುತ್ತೇವೆಯೋ ಬಳಕೆದಾರರ ಹಿತವನ್ನೂ ಕೂಡ ಅಷ್ಟೇಮಟ್ಟಿಗೆ ಬಯಸಬೇಕಾದ್ದು ಸರ್ಕಾರದವರ ಕರ್ತವ್ಯ ಮತ್ತು ಸರ್ಕಾರದವರ ಜವಾಬ್ದಾರಿಯಾಗಿದೆ. ಒಂದು ಸಾರಿ ರೈತರ ಪರವಾಗಿ ವಾದ ಮಾಡಿ ಸರ್ಕಾರ ರೈತನ ಪರ ಇದ್ದರೆ ಅವರೇ ಪುನಹ ಕನ್‌ಸ್ಯೂಮರ್ಸ್ ಪರ ವಾದಮಾಡಿ ನೀವು ಮಾಡಿದ್ದು ತಪ್ಪು ಎಂದು ಹೇಳುತ್ತಾ ಹೋದರೆ ಇದು ಸಂಶಯ ಸೂಚಿಸತಕ್ಕ ಒಂದು ವಾದವೇ ಹೊರತು ಇದರಲ್ಲಿ ತಿರುಳು ಏನಿದೆ? ನ್ಯಾಯವಾದದ್ದೇ ಅಲ್ಲವೇ ಎಂಬುದನ್ನು ತಾವೇ ವಿಚಾರ ಮಾಡಬೇಕು. ಬಹುಶಃ ಸರಿಯಾಗಿದ್ದ ಪಕ್ಷದಲ್ಲಿ ಸರ್ಕಾರಕ್ಕೆ ಹೇಳುವುದು ನ್ಯಾಯ, ವಿರೋಧ ಪಕ್ಷದವರಿಗೆ ಈ ಅವಿಶ್ವಾಸ ನಿರ್ಣಯ ಸೂಚಿಸತಕ್ಕ ಅವಕಾಶವಿರುವುದು ಒಂದು ಅಸ್ತ್ರ ಇದ್ದ ಹಾಗೆ ಇದು ಒಂದು ಬ್ರಹ್ಮಾಸ್ತ್ರ ಇದನ್ನು ಯಾವಾಗ ಉಪಯೋಗಿಸಬೇಕೆಂದರೆ ಆಡಳಿತ ಮಾಡತಕ್ಕ ಸಂದರ್ಭದಲ್ಲಿ ಎಷ್ಟು ಮಟ್ಟಿಗೆ ನ್ಯಾಯ ಅಥವಾ ಅನ್ಯಾಯವಾಗಿದೆ ಆಡಳಿತ ಸರಿಯಾಗಿದೆಯೋ

(ಶ್ರೀ ಎಂ. ಸಿ. ಬಸಪ್ಪ)

ಇಲ್ಲವೇ ಎಂಬುದನ್ನು ಆಲೋಚನೆ ಮಾಡಿ ತೀರ ಉಪಯೋಗಿಸಲೇಬೇಕಾದ ಸಂದರ್ಭ ಬಂದಾಗ ಇದರ ಯೋಗ್ಯತೆಯನ್ನು ತಿಳಿದುಕೊಂಡು ಉಪಯೋಗಿಸಬೇಕಾದ್ದು ಬಹಳ ಮುಖ್ಯವಾದುದು.

ಇನ್ನು ಕಾಮರಾಜ ಸೂತ್ರದ ವಿಷಯವನ್ನು ಹೇಳಿದರು ದೇವತೆಯನ್ನು ನೋಡುವವರು ದೇವರನ್ನು ಪ್ರತ್ಯಕ್ಷವಾಗಿ ನೋಡುವುದಿಲ್ಲ, ಒಂದು ಕಲ್ಲಿನಲ್ಲಿ ಕಡೆದಂತಹ ಮೂರ್ತಿ ದೇವರಲ್ಲ ಎನ್ನತಕ್ಕ ಜನ ಇದ್ದಾರೆ, ವಿಗ್ರಹದಲ್ಲಿ ದೇವರು ಇದ್ದಾನೆ ಎನ್ನತಕ್ಕ ಜನ ಇದ್ದಾರೆ, ಇದು ಅವರವರ ಮನಸ್ಸಿನ ಭಾವನೆಯ ಮೇಲೆ ಹೋಗುತ್ತದೆ. ಅವರು ನಮ್ಮ ಪಕ್ಷದವರಲ್ಲದೇ ಬೇರೆ ಪಕ್ಷದವರಾಗಿ ಕಾಮರಾಜಸೂತ್ರವನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವೇ ? ಯಾವ ಒಂದು ಭಾವನೆಯಿಂದ ಅದನ್ನು ಸೂಚನೆ ಮಾಡಿದ್ದಾರೋ ಅದನ್ನು ಅರ್ಥಮಾಡಿಕೊಳ್ಳದೇ ಮಂತ್ರಿಮಂಡಲದಿಂದ ಕೆಲವರನ್ನು ತೆಗೆದುಹಾಕಿಸಲು ಆ ಸೂತ್ರವನ್ನು ತರಲಾಯಿತು ಎಂದು ಹೇಳುವುದು ಸರಿಯಲ್ಲ. ಕಾಮರಾಜ ಸೂತ್ರವನ್ನು ಉಪಯೋಗಿಸುತ್ತಾ ಇರುವುದು ಮಂತ್ರಿಮಂಡಲ ಬಿಗಿಯಾಗಬೇಕು ದೇಶಕ್ಕೆ ಅನುಕೂಲವಾಗಬೇಕು ಎಂಬ ಒಂದು ಚಿತ್ರವನ್ನು ಭಾವನೆಯನ್ನು ಅವರು ಏನು ಇಟ್ಟಿದ್ದಾರೆ ಅದರ ಉದ್ದೇಶ ನಿಜವಾಗಿಯೂ ಒಳ್ಳೆಯದು ಎಂದು ನೋಡಿದರೆ ಅದರಿಂದ ಸಾರ್ಥಕವಾಗುತ್ತದೆ. ಕಾಮರಾಜ ಸೂತ್ರವನ್ನು ಮೈಸೂರು ಮಂತ್ರಿಮಂಡಲದ ಮೇಲೆ ಉಪಯೋಗಿಸೋಣ ಇಲ್ಲಿನ ನಾಯಕರ ಮೇಲೆ ಒತ್ತಾಯ ತರೋಣ ಎಂದು ವಾದ ಮಾಡುತ್ತಾ ಇದ್ದರೆ ಅದಕ್ಕೆ ಮಾನ್ಯತೆ ಕೊಡಬೇಕಾಗಿದ್ದರೆ ಅವರು ಹೇಳತಕ್ಕದ್ದರಲ್ಲಿ ಅರ್ಥವಿದ್ದರೆ ಒಳ್ಳೆಯ ಉದ್ದೇಶ ಇಟ್ಟುಕೊಂಡು ಹೇಳತಕ್ಕ ಅಂಶ ಇದ್ದರೆ ಅದನ್ನು ಪರಿಶೀಲನೆ ಮಾಡಬೇಕೇ ಹೊರತು ವಾದಕ್ಕೆ ವಾದ, ಅಪವಾದ ಸಂಶಯ ಇವುಗಳಿಗೆಲ್ಲಾ ಹೆದರಿ ಅವರು ಹೇಳುವುದನ್ನೆಲ್ಲಾ ಮಾಡುತ್ತಾ ಹೋದರೆ ಬಹುಶಃ ಪ್ರಾಥಮಿಕ ಶಾಲೆಯಲ್ಲಿ ಓದಿದ ಒಂದು ಪುಸ್ತಕದ ಕಥೆ ಜ್ಞಾಪಕಕ್ಕೆ ಬರುತ್ತದೆ: ಒಬ್ಬ ತಂದೆ ಮತ್ತು ಅವನ ಮಗ ಒಂದು ಕತ್ತೆಯನ್ನು ಹೊಡೆದುಕೊಂಡು ಹೋಗುತ್ತಾ ಇದ್ದರು ದಾರಿಯಲ್ಲಿ ಹೋಗುತ್ತಿದ್ದವನು ಒಬ್ಬ ಯಾಕಯ್ಯ ಕತ್ತೆ ಇಟ್ಟುಕೊಂಡು ನಡೆದುಕೊಂಡು ಹೋಗುತ್ತಾ ಇದ್ದೀರಿ ಎಂದು ಕೇಳಿದ. ತಂದೆ ಕತ್ತೆಯ ಮೇಲೆ ಕುಳಿತುಕೊಂಡ ಮಗ ಪಕ್ಕದಲ್ಲಿ ಬರುತ್ತಾ ಇದ್ದ ಸ್ವಲ್ಪ ದೂರ ಹೋದ ಮೇಲೆ ಇನ್ನೊಬ್ಬ ಬಂದ ಏನಯ್ಯಾ ಮುದುಕನಾಗಿದ್ದೀಯ ನೀನು ಕುಳಿತುಕೊಂಡು ಸಣ್ಣ ಹುಡುಗನನ್ನು ನಡೆಸುತ್ತಿದ್ದೀಯಲ್ಲಾ ಎಂದು ಹೇಳಿದ. ನಂತರ ತಂದೆ ಮಗ ಇಬ್ಬರೂ ಕುಳಿತುಕೊಂಡರು. ಇನ್ನೂ ಸ್ವಲ್ಪ ದೂರ ಹೋದ ಮೇಲೆ ಏನಯ್ಯಾ ಇದು ಇಬ್ಬರೂ ಕುಳಿತುಕೊಂಡಿದ್ದೀರಿ ಪಾಪ ಆ ಕತ್ತೆಯ ಗತಿ ಏನಾಗಬೇಕು ಎಂದು ಇನ್ನೊಬ್ಬ ಅಂದನಂತೆ, ಅದನ್ನು ಕೇಳಿ ಕೊನೆಗೆ ಅವರಿಬ್ಬರೂ ಆ ಕತ್ತೆಯನ್ನು ಕಟ್ಟಿ ಹೊತ್ತುಕೊಂಡು ಹೋದರಂತೆ. ಇದರಲ್ಲಿ ಒಂದು ನೀತಿ ಇದೆ. ಆಡಳಿತದಲ್ಲಿ ಪ್ರತಿಯೊಂದು ಆಪಾದನೆ ಸಂಶಯಗಳಿಗೂ ಬೆಲೆ ಕೊಡುತ್ತಾ ಹೋದ ಪಕ್ಷದಲ್ಲಿ ಬಹುಶಃ ಆ ತಂದೆ ಮಗನಂತೆ ಅವರು ಕತ್ತೆಯನ್ನು ಯಾವ ರೀತಿ ಹೊತ್ತುಕೊಂಡು ಹೋದರೋ ಆ ರೀತಿ ಕತ್ತೆಯ ಭಾರವನ್ನು ಹೊರಬೇಕಾಗುತ್ತದೆ. ನಮ್ಮ ಮುಂದೆ ಇರತಕ್ಕ ಒಂದು ನಿರ್ಣಯಕ್ಕೆ ನಾವು ಬೆಲೆ ಕೊಡಬೇಕು ನಿಜ. ಸರಿಯಾದ ರೀತಿಯಲ್ಲಿ ಬೆಲೆ ಕೊಡಬೇಕಾದರೆ ಅದಕ್ಕೆ ತಕ್ಕ ಕಾರಣಗಳಿರಬೇಕು.

ವಿದ್ಯುಚ್ಛಕ್ತಿ ಬೋರ್ಡಿನ ವಿಚಾರವನ್ನು ಬಹಳ ಹೆಚ್ಚು ದೊಡ್ಡದಾಗಿ ಮಾಡಿದ್ದಾರೆ. ಈ ಒಂದು ಬೋರ್ಡನ್ನು ಕಾನೂನು ಪ್ರಕಾರ ರಚನೆ ಮಾಡಿದ್ದೇವೆ ಅವರಿಗೆ ಒಂದು ಜವಾಬ್ದಾರಿ ಇದೆ ಅವರಿಗೆ ಯೋಗ್ಯತೆ ಇದೆ, ನಡೆಸಿಕೊಂಡು ಹೋಗುತ್ತಾರೆ ಎಂದು ಹೇಳಿ ಬೇಕಾದಷ್ಟು ಹಣವನ್ನು ಕೊಟ್ಟಿದ್ದೇವೆ. ಅವರು ಮಾಡಿರತಕ್ಕ ವ್ಯವಹಾರ ಸರಿಯೇ ತಪ್ಪೇ ಎಷ್ಟು ಸರಿ ಎಷ್ಟು ತಪ್ಪು ಎಂಬುದನ್ನು ನೋಡುವಾಗ ಆರೋಪಣೆಗಳು ಬಹಳ ಜಾಸ್ತಿ ಇವೆ. ಬಂಡವಾಳವನ್ನು ಇನ್‌ವೆಸ್ಟ್ ಮಾಡುವಾಗ ಬೋರ್ಡಿಗೆ ಎಷ್ಟೋ ನಷ್ಟವಾಗಿದೆ ಎಂಬ ಮಾತು ಬಂದಿದೆ. ಒಂದು ವ್ಯಾಪಾರಿ ಸಂಸ್ಥೆ ತನ್ನ ಹಣವನ್ನು ಒಂದು ಬ್ಯಾಂಕಿನಲ್ಲಿ ಇಡಬೇಕಾದರೆ ಅನೇಕ ತರಹ ಸನ್ನಿವೇಶಗಳು ಇರುತ್ತವೆ ಯಾವ ಸನ್ನಿವೇಶದಲ್ಲಿ ಯಾವ ಸಂದರ್ಭದಲ್ಲಿ ಅವರು ಹಣವನ್ನು ಇಟ್ಟಿದ್ದಾರೆ ಎಂಬುದನ್ನು ಪರಿಶೀಲನೆ ಮಾಡಬೇಕಾದ್ದು ಮುಖ್ಯವೇ ಹೊರತು ಒಟ್ಟಿನಲ್ಲಿ ನೋಡಿ ಏನೋ ಒಂದು ತೀರ್ಮಾನಕ್ಕೆ ಬಂದದ್ದೇ ಆದರೆ ಅದು ಸರಿಯಾದುದಲ್ಲ ಎಂದು ಹೇಳಿ ವಿಷಯಗಳನ್ನು ವಿಚಾರ ಮಾಡದೇ ಅವರು ಮಾಡಿರತಕ್ಕದ್ದು ಸರಿಯಲ್ಲ ಎಂದು ತೀರ್ಮಾನ ಕೈಕೊಳ್ಳುವುದು ಸರಿಯಲ್ಲ. ಬಹುಶಃ ವಿಚಾರ ವಿಮರ್ಶೆ ಮಾಡಿದ ಪಕ್ಷದಲ್ಲಿ ಈ ಒಂದು ನಿರ್ಣಯಕ್ಕೆ ಅವಕಾಶವೇ ಇರಲಿಲ್ಲ ಈಗಲೂ ಕೂಡ ಈ ನಿರ್ಣಯದಲ್ಲಿ ಮಹತ್ವ ಏನೂ ಇಲ್ಲ ಎಂದು ಹೇಳಿ ಶ್ರೀಮಾನ್ ಶಿವಪ್ಪನವರು ತಂದಿರುವ ಈ ನಿರ್ಣಯದಲ್ಲಿ ತೀವ್ರವಾಗಿ ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಮರುಳಪ್ಪ (ಕಡೂರು).—ಸ್ವಾಮಿ ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಲಿಕ್ಕೆ ಅವಕಾಶ ಕೇಳಿದಾಗ ನೀವು ಈ ಪಾರ್ಟಿಗೂ ಸೇರಿಲ್ಲ ಆ ಪಾರ್ಟಿಗೂ ಸೇರಿಲ್ಲ ಮಧ್ಯೆ ಇದ್ದೀರಿ ಎಂದು ತಾವು ಹೇಳಿದಿರಿ? ಪ್ರಜಾಪ್ರಭುತ್ವದಲ್ಲಿ ಇದು ಸ್ವಲ್ಪ ಕಷ್ಟದ ಕೆಲಸ; ಅವರವರ ಪಾರ್ಟಿಯಲ್ಲಿ ಇರಬೇಕು ಒಪ್ಪಿಕೊಳ್ಳುತ್ತೇನೆ.

10-30 A.M.

ಸ್ವಾಮಿ ಅಧ್ಯಕ್ಷರೇ. ಈಗ ತಾನೇ ಮಾತನಾಡಿದ ನಮ್ಮ ಕಾಂಗ್ರೆಸ್ ಮಿತ್ರರೊಬ್ಬರು ಸರ್ಕಾರದ ಮೇಲೆ ಹೀಗೆ ನೀವು ಪದೇ ಪದೇ ಅವಿಶ್ವಾಸ ನಿರ್ಣಯವನ್ನು ತರುತ್ತಿದ್ದರೆ, ನಿಮ್ಮ ಬತ್ತಳಿಕೆಯಲ್ಲಿರುವಂಥ ಈ ಒಂದು ಒಳ್ಳೆಯ ಅಸ್ತ್ರವನ್ನು ನೀವು ಕಳೆದುಕೊಂಡು ಬಿಡುತ್ತೀರಿ. ಮುಂದೆ ಕಾಂಗ್ರೆಸನ್ನು ಉರುಳಿಸಬೇಕಾದ ಸಮಯ ಬಂದಾಗ ನೀವು ಏನು ಮಾಡುತ್ತೀರಿ ಎಂದು ಪ್ರಶ್ನೆ ಮಾಡಿದರು. ಆದರೆ ಈ ಸಂದರ್ಭದಲ್ಲಿ ನಾನು ಆಡಳಿತ ಪಕ್ಷದವರ ಗಮನಕ್ಕೆ ಒಂದು ಬಹು ಮುಖ್ಯವಾದ ವಿಚಾರವನ್ನು ಈಗ ತರಬೇಕಾಗಿದೆ. ಹಿಂದೆ ಮಹಾತ್ಮ ಗಾಂಧಿಯವರು ತಮ್ಮ ಹೋರಾಟದಲ್ಲಿ ಸತ್ಯಾಗ್ರಹವನ್ನು ಹೂಡುತ್ತಿದ್ದರು. ಆ ಸತ್ಯಾಗ್ರಹದ ಚಿಹ್ನೆಯೇನೆಂದರೆ ಆಗ ಆಡಳಿತ ನಡೆಸುತ್ತಿದ್ದ ಬ್ರಿಟಿಷ್ ಸರ್ಕಾರವನ್ನು ಓಡಿಸಲು ದೇಶದಲ್ಲಿರತಕ್ಕ ಜನರನ್ನು ಒಂದು ಯುನೈಟ್ ಮಾಡತಕ್ಕ ಒಂದು ಅಸ್ತ್ರವಾಗಿತ್ತು ಅದು. ಅಂಥ ಒಂದು ಶಕ್ತಿ ಆ ಅಸ್ತ್ರದಲ್ಲಿ ನಮಗೆ ಜಯವು ದೊರೆಯಿತು. ಅದಕ್ಕಾಗಿ ಅವರು ಅದನ್ನು ಪದೇ ಪದೇ ಉಪಯೋಗಿಸಲೇ ಬೇಕಾಗಿತ್ತು. ಆ ಒಂದು ಅಂಶವನ್ನು ಆಳುವ ಪಕ್ಷ ಗಮನದಲ್ಲಿಟ್ಟುಕೊಳ್ಳಬೇಕು ಎಂದು ನಾನೀಗ ಹೇಳುತ್ತಿದ್ದೇನೆ. ಈ ಹಿಂದೆ ತಂದಿದ್ದ ಅವಿಶ್ವಾಸ ನಿರ್ಣಯಕ್ಕೂ ಈಗ ತಂದಿರುವ ಅವಿಶ್ವಾಸ ನಿರ್ಣಯಕ್ಕೂ ಏನು ವ್ಯತ್ಯಾಸವಿದೆ ಎಂಬುದನ್ನು ಅಧಿಕಾರದಲ್ಲಿರತಕ್ಕ ಪಕ್ಷ ಕಂಡುಕೊಳ್ಳಬೇಕು. ಈ ಹಿಂದೆ ಈ ವಿರೋಧ ಪಕ್ಷ ಇಷ್ಟು ಯುನೈಟಾಗಿರಲಿಲ್ಲ. ಇಂದು ಈ ಹಾದಿಯಲ್ಲಿ ಈ ಪಕ್ಷ ಯಶಸ್ಸುಗಳಿಸುತ್ತಿದೆ ಎಂಬುದನ್ನು ಅವರು ಮರೆಯಬಾರದು. ಆದರೆ ಅಧಿಕಾರ ಪಕ್ಷದಲ್ಲಿ 150 ಜನಗಳಿರತಕ್ಕ ವಿಚಾರ ವಿರೋಧ ಪಕ್ಷದವರಿಗೆ ಗೊತ್ತಿಲ್ಲದೆ ಇಲ್ಲ. ವಿರೋಧ ಪಕ್ಷದ ಬಲ ಕೇವಲ 65 ಇದೆ ಎಂಬುದು ಎಲ್ಲರಿಗೂ ಗೊತ್ತಿದೆ. ಈ ಪಕ್ಷಕ್ಕೆ ಆಡಳಿತ ಪಕ್ಷವನ್ನು ಓಡಿಸುವಂಥ ಶಕ್ತಿಯಿಲ್ಲ, ಈ ನಿರ್ಣಯವನ್ನು ಆ ಒಂದು ಉದ್ದೇಶದಿಂದ ತಂದಿದ್ದಾರೆ ಎಂತ ಯಾರೂ ಭಾವಿಸಬಾರದು. ಈ ದಿವಸ ದೇಶದಲ್ಲಿ ಹಲವಾರು ಪಕ್ಷಗಳಿವೆ. ಈಗ ಈ ಅಸ್ತ್ರ ಪ್ರಯೋಗದಿಂದ ಅವುಗಳನ್ನೆಲ್ಲ ಒಂದುಗೂಡಿಸತಕ್ಕ ಹಾದಿಯಲ್ಲಿ ಇದು ಮುಂದುವರಿಯುತ್ತಿದೆ. ಈ ಸಾಧನೆಯಲ್ಲಿ ಇಂದಲ್ಲ ನಾಳೆ ಇದು ಯಶಸ್ವಿಗಳಿಸುತ್ತದೆ ಎಂಬ ವಿಚಾರದಲ್ಲಿ ಸರ್ಕಾರ ಎಚ್ಚರದಿಂದ ಇರಬೇಕೆಂದು ನಾನು ಹೇಳುತ್ತೇನೆ ಆದರೆ ನಮ್ಮ ಪಕ್ಷದಲ್ಲೂ ಕೆಲವು ನ್ಯೂನಾತಿರಿಕ್ತಗಳಿವೆ. ಇಡೀ ಹಿಂದೂಸ್ಥಾನದಲ್ಲಿರತಕ್ಕ ಎಲ್ಲಾ ಸರ್ಕಾರಗಳಲ್ಲೂ ಎಷ್ಟೋ ನ್ಯೂನತೆಗಳಿವೆ. ಅದಕ್ಕಾಗಿ ಅಲ್ಲೆಲ್ಲ ಇದೇ ರೀತಿ ಅವಿಶ್ವಾಸ ನಿರ್ಣಯಗಳನ್ನು ತರುತ್ತಿದ್ದಾರೆ. ಹೀಗಿರುವಾಗ ನಾವು ಇವರನ್ನು ಕೂಡಲೆ ಆಫೀಸು ಬಿಟ್ಟು ಹೋಗಿ, ನೀವು ಕೂಡಲೇ ಮಂತ್ರಿ ಪದವಿಯನ್ನು ಬಿಟ್ಟು ಹೋಗಿ ಎಂದರೆ, ಹಾಗಾಗುವುದಾದರೆ ಇಲ್ಲಿ ಯಾರು ಆಡಳಿತ ನಡೆಸಬೇಕು ? ರಾಜ್ಯಭಾರ ಹೇಗೆ ನಡೆಯಬೇಕು ? ಹೀಗೆ ಎಲ್ಲರೂ ಬಿಟ್ಟು ಹೋದರೆ ಆಡಳಿತ ಹೇಗೆ ನಡೆಯಬೇಕು ? ಅಂಥ ಸಂದರ್ಭಗಳಲ್ಲಿ ಮೈನಾರ್ಟಿ ಪಾರ್ಟಿಗಳಿಗೆ ಆಡಳಿತ ನಡೆಸಲು ಅವಕಾಶ ಇದೆಯೇ ಎಂದು ಕೇಳುತ್ತೇನೆ. ಆದುದರಿಂದ ಇಂಥ ಅವಿಶ್ವಾಸ ನಿರ್ಣಯಗಳಿಗೆ ದೇಶಾದ್ಯಂತ ಎಲ್ಲರಿಂದಲೂ ಒಂದು ಮಾನ್ಯತೆ ಬಂದರೆ ಆಗ ಸಮಗ್ರವಾಗಿ ಎಲ್ಲ ಕಡೆಗಳಲ್ಲೂ ಇದರಿಂದ ಅನುಕೂಲವಾಗುತ್ತದೆ. ಆದುದರಿಂದ ಇದಕ್ಕೆ ಆ ಪಕ್ಷದವರೂ ಸಹಾ ಬೆಂಬಲ ಕೊಡಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಆದರೆ ನಾನೀಗ ಈ ಖಾದೀ ಬೋರ್ಡಿನ ವಿಚಾರದಲ್ಲಿ ನನ್ನ ಕೆಲವು ಮಾನ್ಯ ಸ್ನೇಹಿತರು ಮಾತನಾಡಿರುವುದರಿಂದ ನಾನು ಈ ಮಾನ್ಯ ಸಭೆಯ ಮುಂದೆ ಕೆಲವು ವಿಚಾರಗಳನ್ನು ಇಡಬಯಸುತ್ತೇನೆ. ಆದರೆ ಇದರ ಬಗ್ಗೆ ತೀರ್ಮಾನ ಮಾಡತಕ್ಕವರು ಬೇರೆ ಇದ್ದಾರೆ. ಆದರೆ ಖಾದೀ ಬೋರ್ಡಿನ ವಿಚಾರದಲ್ಲಿ ಬಹಳ ಬಂಗ್ಲಿಂಗ್ ಆಗಿದೆ ಎಂಬುದು ಖಂಡಿತವಾದ ಮಾತು. ಇದನ್ನು ಸರ್ಕಾರದವರು ಕೂಡಲೆ ತನಿಖೆ ನಡೆಸಬೇಕು. ಯಾರು ತಪ್ಪಿತಸ್ಥರೋ ಅಂಥವರನ್ನು ಕಂಡುಹಿಡಿದು ಅವರನ್ನು ಶಿಕ್ಷಿಸತಕ್ಕದ್ದು ಸರ್ಕಾರದವರ ಕರ್ತವ್ಯ. ಆದರೆ ಆ ತಪ್ಪಿತಸ್ಥರನ್ನು ಶಿಕ್ಷಿಸುವಂಥ ಶಕ್ತಿ ಈ ಸರ್ಕಾರಕ್ಕಿದೆಯೆ ಎನ್ನತಕ್ಕ ಬಗ್ಗೆ ನನಗೆ ಅನುಮಾನವಿದೆ. ಶ್ರೀ ನಿಜಲಿಂಗಪ್ಪನವರೇನೋ ಇಂಥವರೇ ತಪ್ಪಿತಸ್ಥರು ಎಂದು ತೀರ್ಮಾನ ತೆಗೆದುಕೊಳ್ಳಬಹುದು. ಅವರು ಎಂಥವರೇ ಆಗಲಿ ಶಿಕ್ಷೆ ಅನುಭವಿಸಲೇಬೇಕು ಎಂದು ಇವರು ಬಾಯಲ್ಲಿ ಹೇಳಲೂಬಹುದು. ಆದರೆ ಇವರಿಗೆ ಅದನ್ನು ಕಾರ್ಯತಃ ನಡೆಸುವುದು ಬಹಳ ಕಷ್ಟವಿದೆ. ಖಾದೀ ಬೋರ್ಡಿನಲ್ಲಿ ಯಾರು ಅನ್ಯಾಯ ಮಾಡಿದ್ದಾರೆ, ಯಾರು ತಪ್ಪಿತಸ್ಥರು ಎಂಬುದನ್ನು ಇವರು ಕಂಡುಹಿಡಿಯಲು ಕಷ್ಟವೇನೂ ಆಗುವುದಿಲ್ಲ. ಆದರೆ ಅವರಿಗೆ ಶಿಕ್ಷೆ ವಿಧಿಸಲು ಇವರಿಗೆ ಖಂಡಿತ ಸಾಧ್ಯವಿಲ್ಲ. ಇದೇ ಸಭೆಯಲ್ಲಿ ಮೊನ್ನೆ ತಾನೆ ಮಂತ್ರಿಗಳು ಹೇಳಿದರು

(ಶ್ರೀ ಜಿ. ಮರುಳಪ್ಪ)

ಖಾದೀಬೋರ್ಡಿನ ಅಧ್ಯಕ್ಷರಾಗಿದ್ದವರು ಅಲ್ಲಿ ಬಹಳ ಅನ್ಯಾಯವಾಗಿದೆ ಎಂದು ಹೇಳಿದ್ದಾರೆಂದು ಹೇಳಿದರು. ಈ ವಿಚಾರದಲ್ಲಿ ಇನ್ನು ಕೆಲವರು ಏನು ಹೇಳುತ್ತಾರೆಂದರೆ : ಮೊನ್ನೆ ತಾನೆ ನಿವೃತ್ತಿ ಹೊಂದಿದ ಅಧ್ಯಕ್ಷರು ತಮ್ಮ 3 ವರ್ಷಗಳ ದೀರ್ಘಾವಧಿ ಕಾಲ ಕಳೆಯುವವರೆಗೂ ಸುಮ್ಮನಿದ್ದು, ಅಲ್ಲಿ ಅಷ್ಟು ಅನ್ಯಾಯಗಳು ನಡೆದಿದ್ದಾಗ್ಯೂ ಅವರು ಅಲ್ಲಿ ಯಾವ ಮಾತನ್ನೂ ಆಡದೆ 3 ವರ್ಷಗಳ ಕಾಲ ಆಡಳಿತ ನಡೆಸಿ ಅಲ್ಲಿ ನಡೆದಿರತಕ್ಕ ಯಾವ ವ್ಯತ್ಯಾಸಗಳನ್ನೂ ತಿಳಿಸದೆ, ಅವರು ತಮ್ಮ ಅಧಿಕಾರ ವನ್ನು ಬಿಡತಕ್ಕ ಕಡೆ ದಿನದಲ್ಲಿ ಅವರು ಛಾರ್ಜು ಕೊಡತಕ್ಕ ಕಾಲದಲ್ಲಿ ಇದನ್ನು ಹೇಳತಕ್ಕದ್ದು ನ್ಯಾಯವೇ ಎಂದು ಕೆಲವರು ನನ್ನನ್ನು ಕೇಳಿದರು. ಇದಕ್ಕೇನು ಉತ್ತರ ಹೇಳಬೇಕೋ ಅದು ನನಗೆ ಗೊತ್ತಿಲ್ಲ. ಇನ್ನು ಕೆಲವರು ಇವರಿಗೆ ಕೊಡಲಾಗಿದ್ದ 3 ವರ್ಷದ ಅಧಿಕಾರಾವಧಿಯನ್ನು ಇನ್ನು 3 ವರ್ಷಕ್ಕೆ ಹೆಚ್ಚಿಸಿದ್ದರೆ, ಆಗ ಇವರು ಇದನ್ನೆಲ್ಲಾ ಹೇಳುತ್ತಿದ್ದರೇ ಎಂದು ಪ್ರಶ್ನೆ ಮಾಡು ತ್ತಿದ್ದಾರೆ. ಇದಕ್ಕೇನು ಉತ್ತರ ಹೇಳಬೇಕೋ ಅದೂ ಸಹ ನನಗೆ ಗೊತ್ತಿಲ್ಲ.

ಸ್ವಾಮಿ ಈ ಹಿಂದೆ ಈ ರಾಜ್ಯ ಸ್ಥಾಪನೆಯಾದಾಗ ಇಲ್ಲಿಯ ಆಡಳಿತ ನಾನ್‌ಕಮ್ಯೂನಲ್ ಹಾಗೂ ಸೆಕ್ಯುಲರ್ ಆಗಿರಬೇಕೆಂದು ಹೇಳಲಾಗಿತ್ತು. ಆದರೆ ಆಡಳಿತ ಇವತ್ತು ಈ ತಳಹದಿ ಮೇಲೆ ನಡೆಯುತ್ತಿದೆಯೇ ಎಂಬ ಬಗ್ಗೆ ನಾನೀಗ ಕೆಲವು ವಿಚಾರಗಳನ್ನು ಈ ಸಭೆಯ ಮುಂದೆ ಇಡಬಯಸು ತ್ತೇನೆ. ಒಂದೇ ಇಲಾಖೆಯಲ್ಲಿ—ಅಂದರೆ ಲಾ ಇಲಾಖೆಯಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ಅಡ್ವಕೇಟ್ ಜನರಲ್ಲರ ಹುದ್ದೆ, ಗೌರ್ನಮೆಂಟ್ ಅಡ್ವಕೇಟುಗಳ ಹುದ್ದೆ ಇತ್ಯಾದಿಗಳೆಲ್ಲ ಹೇಗೆ, ಯಾವ ರೀತಿಯಾಗಿ ಒಬ್ಬರಿಗೇ ಮನಾಪಲಿಯಾಗಿ ನಡೆದುಕೊಂಡು ಬರುತ್ತಿವೆ, ಹೀಗೆ ಆದರೆ ನಿಜ ವಾಗಿಯೂ ಇದು ಆ ಸೆಕ್ಯುಲರಿಜಂ ತತ್ವಕ್ಕೆ ಸರಿಹೊಂದುತ್ತವೆಯೆ ಎಂದು ನಾನೀಗ ಕೇಳಬೇಕಾಗಿದೆ ! ಹಾಗಿಲ್ಲವೆನ್ನುವುದಾದರೆ ಇವು ಯಾವ ತತ್ವದ ಮೇಲೆ ನಡೆಯುತ್ತಿವೆ ? ಈ ಸ್ಥಾನಕ್ಕೆ ಈಗಿರತಕ್ಕ ಮಂತ್ರಿಗಳು ಬರುವುದಕ್ಕೆ ಮೊದಲು ಈಗ ನಾನು ಹೇಳಿದ ಸ್ಥಾನಗಳಲ್ಲಿ ಯಾರ್ಯಾರಿದ್ದರು, ಎಷ್ಟು ಜನ ಇದ್ದರು ? ಈಗ ಇವರು ಬಂದಮೇಲೆ ಯಾರ್ಯಾರಿದ್ದಾರೆ, ಇವರು ಎಲ್ಲರೂ ಯಾರು ಎಂಬುದನ್ನು ವಿವರವಾಗಿ ಈ ಸಭೆಯ ಮುಂದೆ ಇಡಬಲ್ಲರೆ ಎಂದು ಕೇಳುತ್ತೇನೆ ? ಈ ವಿಚಾರದಲ್ಲಿ ಆರೋಪಣೆಗೆ ಅವಕಾಶವಿಲ್ಲವೇ ಎಂದು ನಾನು ಅವರಲ್ಲಿ ವಿನಯದಿಂದ ಕೇಳಿಕೊಳ್ಳುತ್ತೇನೆ. ಆದರೆ ಇಂಥ ಒಂದು ದೋಷಾರೋಪಣೆ ಮಾಡತಕ್ಕ ಅವಕಾಶ ಮುಖ್ಯಮಂತ್ರಿಗಳ ಬಗ್ಗೆ ಸಾಧ್ಯವಿಲ್ಲ. ಅವರು ಇಂಥದಕ್ಕೆಲ್ಲ ಅವಕಾಶ ಕೊಟ್ಟಿಲ್ಲ. ಈ ದಿವಸ ಅವರ ಆಫೀಸಿನಲ್ಲಿರತಕ್ಕ ಪಿ. ಎ. ಮತ್ತು ಪ್ರೈವೇಟ್ ಸೆಕ್ರೆಟರಿ ಇಂಥವರನ್ನೆಲ್ಲ ಬೇರೆಯವರನ್ನೇ ಮುಖ್ಯ ಮಂತ್ರಿಗಳು ಇಟ್ಟುಕೊಂಡಿದ್ದಾರೆ. ಆದರೆ ಇವರೊಬ್ಬರು ಹೀಗೆ ತತ್ವವನ್ನು ಆಚರಿಸಿದರೆ ಇವರ ಮಂತ್ರಿಮಂಡಲವೆಲ್ಲ ಹೀಗೇ ಇದೆ ಎಂದು ಹೇಳುವುದಕ್ಕಾಗು ವುದಿಲ್ಲ. ಮುಖ್ಯ ಮಂತ್ರಿ ಒಬ್ಬರು ಒಳ್ಳೆಯವರಾದರೆ ಎಲ್ಲರೂ ಹಾಗೇ ಇದ್ದಾರೆ ಎಂದು ಹೇಳು ವುದಕ್ಕಾಗುವುದಿಲ್ಲ. ಇವರು ಮಾತ್ರ ಎಲ್ಲರಿಗೂ ನಾನ್‌ಕಮ್ಯುನಲ್ಲಾಗಿರಬೇಕು ಎಂದು ಹೇಳುತ್ತಿ ದ್ದಾರೆ. ಬಾಕಿಯವರು ಆರೀತಿ ಇಲ್ಲ. ಆದರೆ ಲಾ ಇಲಾಖೆಯ ಮಂತ್ರಿಗಳು ಎಷ್ಟರಮಟ್ಟಿಗೆ ಆಡಳಿತ ನಡೆಸುತ್ತಾರೆ, ಇವರು ಜನರ ಕಣ್ಣಿಗೆ ಎಷ್ಟರಮಟ್ಟಿಗೆ ಬಿದ್ದಿದ್ದಾರೆ ಎಂಬುದು ಎಲ್ಲೆಲ್ಲಿಯೂ ಜನಜನಿತ ವಾಗಿದೆ. ಈ ವಿಚಾರದಲ್ಲಿ ಜನರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಏನು ಹೇಳುತ್ತಿದ್ದಾ ರೆಂದರೆ ಶ್ರೀ ನಿಜಲಿಂಗಪ್ಪನವರೇನೋ ಬಹಳ ಒಳ್ಳೆಯವರು, ಆದರೆ ಅವರು ಅದೇನೋ ಪ್ರತಿ ನಿಮಿಷವೂ ಈ ಲಾ ಸಚಿವರ ಈಶ್ವರನ ಮುಂದೆ ಬಸವಣ್ಣ ಇದ್ದಹಾಗೆ ಅಲ್ಲೇ ಇರುತ್ತಾರೆ ಎಂತ ಜನರು ಆಡಿಕೊಳ್ಳುತ್ತಿದ್ದಾರೆ. ಈ ವಿಚಾರದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವು ದಾದರೆ ಶ್ರೀಮಾನ್ ನಿಜಲಿಂಗಪ್ಪನವರ ಒಂದು ಔದಾರ್ಯದ ಮೇಲೆ ಇವರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಳ್ಳಲಾಯಿತು ಎಂದು ಜನ ಆಡಿಕೊಳ್ಳುತ್ತಿದ್ದಾರೆ.

ಇದು ನಮಗೆ ಅವರ ಮೇಲಿರತಕ್ಕ ವಿಶ್ವಾಸ; ಅವರಿಗೆ ನಿಮ್ಮ ಮೇಲೆ ವಿಶ್ವಾಸ ಇದೆಯೋ ಇಲ್ಲವೋ ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವರಿಗೆ ಎಷ್ಟು ನಂಬಿಕೆ ಇದೆಯೋ ಅಷ್ಟೇ ನಂಬಿಕೆ ಮತ್ತು ವಿಶ್ವಾಸ ನನಗೂ ಇದೆ. ಆ ಒಂದು ವಿಶ್ವಾಸಕ್ಕೆ ಕಟ್ಟುಬಿದ್ದು out of the way ಹೋಗಿ ಈ ರೀತಿ ನೇಮಿಸಿಕೊಂಡಿದ್ದಾರೆಯೇ ? ಅಧಿಕಾರದಲ್ಲಿ ನಾನು ಎಷ್ಟರಮಟ್ಟಿಗೆ ಇರ ಬೇಕು ಎನ್ನುವುದಕ್ಕೆ ಫಂಡಮೆಂಟಲ್ ರೈಟಿನಲ್ಲಿ ಹಾಗೂ ಕಾನ್‌ಸ್ಟಿಟ್ಯೂಷನ್ನಿನಲ್ಲಿ ಇರುವ ಪ್ರಿನ್ಸಿ ಪಲ್ಲುಗಳೇನು ?

Mr. SPEAKER.—The House is not dealing with the selection of the Ministers. It is dealing with the 'No-confidence' motion.

Sri G. MARULAPPA.—This is one of the charges where they have gone wrong.

Mr. SPEAKER.—Let the hon'ble member come to the point.

ಶ್ರೀ ಜಿ. ಮರುಳಪ್ಪ.—ಆದುದರಿಂದ ನಾವು ಬಹಳ ಹುಷಾರಾಗಿರಬೇಕು. ನೀವೂ ಕೂಡ ಬಹು ಜಾಣರು ಮುಖ್ಯ ಮಂತ್ರಿಗಳೇ ಇಲ್ಲಿ ಉತ್ತರ ಕೊಡಬಹುದು. ಇಲ್ಲಿ ಮಾಡಿರುವ ಕೆಲಸಗಳು ಯಾವ ಸಂದರ್ಭದಲ್ಲಿ ಆಯಿತು ಎನ್ನುವುದನ್ನು ರುಜುವಾತು ಮಾಡಿಕೊಡಿ, ಜನಕ್ಕೆ ಬಂದಿರುವ ಅನುಮಾನವನ್ನು ಪರಿಹಾರ ಮಾಡಿ ಎಂದರೆ ತಾವು ಸಂಪೂರ್ಣವಾಗಿ ಅವರನ್ನೇ ನಂಬಿದ್ದೀರಿ. ನಮ್ಮ ನ್ಯಾಯಶಾಖೆ ಮಂತ್ರಿಗಳು ಹೇಳುವುದಾದರೂ ಇಷ್ಟೇ, ಇದಕ್ಕೆಲ್ಲಾ ತಲೆ ಕೆಡಿಸಿಕೊಳ್ಳುವುದಕ್ಕಾಗುವುದಿಲ್ಲ, ಯಾರು ಏನು ಬೇಕಾದರೂ ಹೇಳಲಿ ನನ್ನ ಕರ್ತವ್ಯವನ್ನು ನಾನು ಯೋಗ್ಯವಾಗಿ ಮಾಡಿದ್ದೇನೆ ಎಂದು ಹೇಳಬಹುದು. ಆದುದರಿಂದ ತಾವು ಇಲ್ಲಿ ರಿಪ್ಲೈ ಕೊಡುವಾಗ ಅಪಾಯಿಂಟ್‌ಮೆಂಟುಗಳನ್ನು ಮಾಡುವಾಗ ಯಾವ ಯಾವ ಕಮಿಟಿಗಳಲ್ಲಿ ಯಾವ ಹೆಸರುಗಳು ಯಾವ ಯಾವ ಕಮ್ಯೂನಿಟಿಗೆ ಸೇರಿದವರು ಎನ್ನುವುದನ್ನೂ ಹೇಳಿದರೆ ಬಹಳ ಸಂತೋಷವಾಗುತ್ತದೆ. ನಿಮ್ಮ ಒಳ್ಳೆಯತನ ದುರುಪಯೋಗವಾಗಬಾರದು ಎಂದು ಇಲ್ಲಿ ನಾನು ಹೇಳುತ್ತಿದ್ದೇನೆ. ಈ ಮಂತ್ರಿಗಳಿರುವುದರಿಂದಾಗಿ ಒಂದು ನಂಬಿಕೆಯನ್ನು ಇಟ್ಟಿರುವುದರಿಂದ ನಿಮಗೆ ಕಷ್ಟ ಕಾಣುತ್ತಿದೆ. ಸ್ವಾಮೀ, ಅನಾವಶ್ಯಕವಾಗಿ ಅಪಾಯಿಂಟ್‌ಮೆಂಟುಗಳ ವಿಷಯದಲ್ಲಿ ಜಿ.ಎ.ಡಿ. (G.A.D.) ಮತ್ತು ಹೋಂ ಡಿಪಾರ್ಟುಮೆಂಟಿನಲ್ಲಿ ತಮಗೆ ಸಂಬಂಧವಿಲ್ಲದ ಇಲಾಖೆಯಲ್ಲಿ ಕೈ ಹಾಕುತ್ತಿದ್ದಾರೆ. ಅಧಿಕಾರಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎನ್ನುವ ಅಪವಾದ ಕೂಡ ಇದೆ. ಇದೂ ಕೂಡ ಒಂದು ಛಾರ್ಜು. ಇದಕ್ಕೆ ತಾವು ಅವಕಾಶ ಕೊಡಬಾರದು. ಇದಕ್ಕೆ ತಾವು ಪ್ರೊಹಿಬಿಷನ್ನು ಮಿನಿಸ್ಟರೂ ಹೌದು. ಯಾವಾಗ ಹೇಳಬೇಕಾದರೂ ನೀವು ಪ್ರೊಹಿಬಿಷನ್ನು ತೆಗೆಯುವುದಕ್ಕೆ ಆಗುವುದಿಲ್ಲ ಬಹಳ ಚೆನ್ನಾಗಿ ಸಕ್ಸಸ್ ಆಗಿ ಹೋಗಿದೆ ಎಂದು ಹೇಳುತ್ತಾ ಹೋಗುತ್ತಾರೆ. ಯಾವ ಧೈರ್ಯದಿಂದ ಪ್ರೊಹಿಬಿಷನ್ನನ್ನು ನೀವು ತಂದಿದ್ದೀರಾ ಎಂದರೆ ಈ ದೇಶದಲ್ಲಿ ಕಳ್ಳಬಟ್ಟಿ ಸಾರಾಯಿ ಕೇಸುಗಳು ಕಡಿಮೆಯಾಗಿದೆಯೇ ಅಥವಾ ಹೆಚ್ಚಾಗಿದೆಯೇ ಎನ್ನುವ ಅಂಕಿ ಅಂಶಗಳನ್ನು ಕೊಡುವುದಕ್ಕೆ ಸಾಧ್ಯವಿದೆಯೇ ಎಂದು ಇಲ್ಲಿ ನಾನು ಕೇಳುತ್ತೇನೆ. ಈ ದೇಶದಆಡಳಿತ ದುರಾಡಳಿತವಾಗುತ್ತ ಬಂದಿದೆ, ಇದರಿಂದ ಅಪವಾದಗಳೂ ಹೆಚ್ಚು, ಸರಕಾರಕ್ಕೆ ನ್ಯಾಯವಾಗಿ ಬರಬೇಕಾದ ಹಣ ಅನ್ಯಾಯವಾಗಿ ಅದರ ಎರಡರಷ್ಟು ಖರ್ಚಾಗುತ್ತಿದ್ದರೂ ಕೂಡ ಈ ಅನ್ಯಾಯದ ಹಣದಿಂದ ಬೇರೆಯವರು ಕೈ ಹಾಕಿ ಅನೇಕರು ಶ್ರೀಮಂತರಾಗಿದ್ದಾರೆ. ಈ ದುರಾಡಳಿತ ಇಳಿದು ಪ್ರೊಹಿಬಿಷನ್ನು ಬಂದಿರುವುದರಿಂದ ಈ ದೇಶದಲ್ಲೇ ಅಲ್ಲದೇ ಹಿಂದೂಸ್ಥಾನದಲ್ಲೆಲ್ಲಾ ಡಿಸ್ ಆನೆಸ್ಟಿ ಎನ್ನುವುದು ಹೆಚ್ಚಾಗುತ್ತಿದೆ. ಇದರಿಂದ ಅಫಿಷಿಯಲ್ ಮೊರ್ಯಾಲಿಟಿ ಇದೆಯೇ? ಸ್ವಾಮೀ, ಒಬ್ಬರು ಕಾಂಗ್ರೆಸ್ಸಿನ ದೊಡ್ಡ ಮನುಷ್ಯರು ಹೇಳುತ್ತಾರೆ on the Floor of the House. ಅವರೇ ಹೀಗೆ ಹೇಳಿದರೆ ನಾನಾದರೂ ಏನು ಹೇಳುವುದು, ಅವರು ಬಹಳ ಪ್ರಮುಖ ವ್ಯಕ್ತಿ. ನನ್ನ ಮನೆಯ ಮುಂದೆ ಇಷ್ಟೊಂದು ಅನ್ಯಾಯಗಳಾಗುತ್ತಿವೆ ಎಂದು ನಾನೇ ಕೈ ಹಾಕಿ ದೂರು ಕೊಟ್ಟರೆ ನನ್ನ ಪ್ರಾಣ ಇರುವುದು ಕಷ್ಟ ಎಂದು ಹೇಳುತ್ತಾರೆ. ಈ ದೇಶದಲ್ಲಿ ಪರಿಸ್ಥಿತಿ ಈ ರೀತಿ ಇದೆ, ಸ್ವಾಮೀ, ದೇಶದ ಎಮರ್ಜೆನ್ಸಿ ದೃಷ್ಟಿಯಿಂದ ಒಳ್ಳೆಯ ಯೋಜನೆಗಳನ್ನು ಹಾಕಿ ಸರಕಾರ ಕೈಗೊಳ್ಳಬೇಕಾದರೂ ಅದರಿಂದ ಜನತೆಗೆ ಹೆಚ್ಚಾಗಿ ಪ್ರಯೋಜನವಾಗಬೇಕು. ನಿಮಗೆ ಹೆಚ್ಚಾಗಿ ಹಣ ಬೇಕು ಎಂದು ಈ ರೀತಿ ಇದರಲ್ಲಿ ವಿಫಲಗೊಂಡು ಈ ದೇಶದ ಜನರಲ್ಲಿ ನಂಬಿಕೆಯನ್ನು ಕಳೆದುಕೊಳುತ್ತಿದ್ದೀರಿ. ಇದನ್ನು ಉಪಯೋಗಿಸುವುದರಿಂದ ಜನಗಳ ಆರೋಗ್ಯ ಕೆಟ್ಟು ನೀತಿ ಕೆಟ್ಟು ಹೋಗುತ್ತದೆ, ನ್ಯಾಯಬದ್ಧವಾಗಿ ಬರತಕ್ಕ ಸರಕಾರದ ಹಣದಿಂದ ನಮ್ಮ ದೇಶಕ್ಕೆ ಬೇಕಾಗುವ ಒಳ್ಳೆಯ ಯೋಜನೆಗಳನ್ನು ಮಾಡಿ ಸಾಧಿಸಲು ಅನುಕೂಲವಾಗುತ್ತದೆ, ಅದರಿಂದ ದೃಢವಾಗಿ ಇದನ್ನು ಒಪ್ಪಿಕೊಳ್ಳಬೇಕೆಂದು ನಾನಿಲ್ಲಿ ಹೇಳಬಯಸುತ್ತೇನೆ.

ಸ್ವಾಮೀ, ಅಧ್ಯಕ್ಷರು ದಯಮಾಡಿ ಇನ್ನೂ ಐದು ನಿಮಿಷಗಳ ಕಾಲ ನನಗೆ ಮಾತನಾಡಲು ಜಾಸ್ತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The hon'ble member has to conclude. I am not giving him ten minutes according to his calculation. He may kindly finish in five minutes.

ಶ್ರೀ ಜಿ. ಮರುಳಪ್ಪ.—ಸ್ವಾಮೀ, "All taxes can be collected in the Finance Department" ಎನ್ನುವಂತೆ ಟ್ಯಾಕ್ಸುಗಳ ಕಲೆಕ್ಷನ್ ಮಾಡಲು ಪ್ರತ್ಯೇಕವಾಗಿ ಬೇರೆ ಇಲಾಖೆ ಯಾಕಿರಬೇಕು? ಇದನ್ನು ಕೂಡ ನಮ್ಮ ಆರ್ಥಿಕ ಶಾಖೆಗೇ ವಹಿಸಿದರೆ ಒಂದು ಸುಗಮವಾದ ಮತ್ತು ಒಂದು ಕ್ರಮಬದ್ಧವಾದ ವ್ಯವಸ್ಥೆಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ, ಇದನ್ನು ಸರಕಾರ ಮಾಡುವುದು ಒಳ್ಳೆಯದು ಎಂದು ನನಗನಿಸುತ್ತದೆ.

(ಶ್ರೀ ಜಿ. ಮಾರುಳಪ್ಪ)

ಸ್ವಾಮೀ, ಕಾಲ ಹೆಚ್ಚಾಗಿಲ್ಲ ಎಂದು ಆಗಲೇ ಹೇಳಿಬಿಟ್ಟಿದ್ದಾರೆ. ಶರಾವತಿಯ ಬಗ್ಗೆ ಇಲ್ಲಿ ದೂರುಗಳು ಬರುತ್ತಲೇ ಇವೆ, ಪದೇ ಪದೇ ಅಪವಾದಗಳೂ ಬರುತ್ತಲೇ ಇವೆ, ನಮ್ಮ ಮುಖ್ಯ ಮಂತ್ರಿಗಳೂ ಕೂಡ ಇದನ್ನೆಲ್ಲಾ ಸ್ಟಡೀ ಮಾಡಿಬಿಟ್ಟು ಅದಕ್ಕಾಗಿ ಏನು ಮಾಡಬೇಕೋ ಅದರಂತೆ ತೀರ್ಮಾನಕ್ಕೆ ಬರುತ್ತೇವೆ ಎಂದು ಅನೇಕ ಸಾರಿ ಅನೇಕ ತಿಂಗಳುಗಳ ಹಿಂದೆ ಹೇಳಿದ್ದಾರೆ, ಇಲ್ಲಿ ನಾನು ಒಂದು ವಿಷಯವನ್ನು ಹೇಳಬಯಸುತ್ತೇನೆ. ವಿಧಾನ ಸೌಧದ ಬಗ್ಗೆ ಅಪವಾದ ಬಂದಾಗ ಆಗಿನ ಮುಖ್ಯಮಂತ್ರಿಗಳು ಅದಕ್ಕೆ ಒಂದು ಎನ್‌ಕ್ವೈರಿ ಕಮಿಟಿ ಮಾಡಿಬಿಟ್ಟರು. ಅದು ಎರಡು ಕೋಟಿ ರೂಪಾಯಿಗಳ ವ್ಯವಹಾರವಾಗಿತ್ತು, ಈಗ ನೂರು ಕೋಟಿ ರೂಪಾಯಿಗಳ ವ್ಯವಹಾರ ನಡೆಯುತ್ತಿರುವಾಗ ಜನತೆಗೆ ಸಂಶಯ ಬಂದು ಪದೇ ಪದೇ ಈ ಸಭೆಯಲ್ಲಿ ಒಳಗೂ ಹೊರಗೂ ಪ್ರಸ್ತಾಪ ಬರುತ್ತಿರುವಾಗ, ಹೇಳಿಕೆಗಳು ಬರುತ್ತಿರುವಾಗ ತಾವು ಇದರಲ್ಲಿ ನಿರ್ಭಯವಾಗಿದ್ದರೆ ಹೇಗೆ? ಅನೇಕ ಸಾರಿ ನಿಮ್ಮ ಪಾರ್ಟಿಯಲ್ಲಿರತಕ್ಕವರೇ ಹೇಳಿದ್ದಾರೆ, ಇದರಲ್ಲಿ ಏನೇನು ಅನಾನು ಕೂಲಗಳಾಗಿವೆ ಎಂದು ಕೇಳಿದರೆ ಅವರನ್ನು ನಮ್ಮ ಲಿಸ್ಟಿಗೇ ಸೇರಿಸಿಕೊಂಡುಬಿಟ್ಟಿದ್ದೀರೇನು ? ಇದರಲ್ಲಿ ತಪ್ಪಿದೆ, ಇಂತಹ ದೊಡ್ಡ ವ್ಯವಹಾರಗಳಲ್ಲಿ ವಿಚಾರ ಮಾಡುವಾಗ ನಮ್ಮ ಮಾನ್ಯ ಮಿತ್ರರಾದ ಶ್ರೀಮಾನ್ ಬಸಪ್ಪನವರು ಮಾತೆತ್ತಿದರೆ ಜುಡಿಷಿಯಲ್ ಎನ್‌ಕ್ವೈರಿ ನಡೆಯಬೇಕು ಎಂದೇಕೆ ಹೇಳುತ್ತೀರಿ ಎಂದು ಕೇಳುತ್ತಾರೆ, ಕಾಂಗ್ರೆಸ್ಸಿನ ಸದಸ್ಯರಾಗಿ ಎರಡು ಕೋಟಿ ರೂಪಾಯಿಗಳಷ್ಟು ವ್ಯವಹಾರದಲ್ಲಿ ಎನ್‌ಕ್ವೈರಿ ಮಾಡಬೇಕೆಂದು ಏಕೆ ಮಾಡಿದಿರಿ ? ಎರಡು ಕೋಟಿ ರೂಪಾಯಿಗಳ ವ್ಯವಹಾರಕ್ಕೆ ಜುಡಿಷಿಯಲ್ ಎನ್‌ಕ್ವೈರಿ ಎಂದು ಮಾಡಿದ ಮೇಲೆ ನೂರು ಕೋಟಿ ರೂಪಾಯಿಗಳಷ್ಟು ವ್ಯವಹಾರ ನಡೆದಿರುವಾಗ ಅದಕ್ಕೇಕೆ ಒಂದು ಜುಡಿಷಿಯಲ್ ಎನ್‌ಕ್ವೈರಿ ಮಾಡಬಾರದು ? ಹಾಗೆ ಬೇಡ ಎಂದರೆ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಶಿವಪ್ಪನವರು ಮತ್ತು ಅವರಿಗೆ ಸೇರಿದ 2-3 ಜನರನ್ನು ಮತ್ತು ನಿಮ್ಮ ಪಕ್ಷಕ್ಕೇ ಸೇರಿದ 2-3 ಜನರನ್ನು ಹಾಕಿಕೊಂಡು ಒಂದು ಕಮಿಟಿ ಮಾಡಿ ಎನ್‌ಕ್ವೈರಿ ಮಾಡಿ, ಮುಂದೆ ಅವರೇನು ಹೇಳುತ್ತಾರೆ, ನೋಡೋಣ. ನೀವು ಎಷ್ಟೇ ಸತ್ಯವಂತರಾಗಿದ್ದರೂ ಕೂಡ ಅಪವಾದಗಳು ತಮ್ಮ ಮೇಲೆ ಬಂದಿರುವಾಗ ಆ ವಿಪತ್ತಿನಿಂದ ನಿವೃತ್ತರಾಗಲು, ಇಂತಹ ಒಂದು ಕಮಿಟಿ ಮಾಡಿ ಇದಕ್ಕೇನು ಸಲ್ಯೂಷನ್ನು ಕಂಡು ಹಿಡಿಯಬಹುದು ಎನ್ನುವುದನ್ನು ತಿಳಿದು ಕೊಳ್ಳುವುದು ಒಳ್ಳೆಯದು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಸ್ವಾಮೀ, ನನ್ನ ಸ್ನೇಹಿತರು ಈ ಸರಕಾರವನ್ನು ಮನೆಗೆ ಕಳುಹಿಸುವುದಕ್ಕೆ ಶಕ್ತಿ ಇಲ್ಲದಿದ್ದಾಗ್ಯೂ ನೋ ಕಾನ್‌ಫಿಡೆನ್ಸು ಮೋಷನನ್ನು ತಂದಿದ್ದಾರೆ. ತಂದರೂ ನಾವೇ ಮೆಜಾರಿಟಿಯಲ್ಲಿದ್ದೇವೆ ಇದನ್ನು ಸುಲಭವಾಗಿ ವೋಟ್ ಡೌನು ಮಾಡುತ್ತೇವೆಂದು ಅವರು ಹೇಳಬಹುದು. ಸರಕಾರವನ್ನು ಮನೆಗೆ ಕಳುಹಿಸುವುದು ದಡ್ಡತನ, ಇದರಲ್ಲಿ ಮಹತ್ವವಾದುದೇನಿಲ್ಲ ಎಂದು ಅವರು ವಾದದಲ್ಲಿ, ವಾದಸರಣಿಯಲ್ಲಿ, ಶೈಲಿಯಲ್ಲಿ ನಮಗೆಲ್ಲರಿಗಿಂತಲೂ ಅವರೆಲ್ಲ ಪ್ರವೀಣರಾದವರು, ಎಕ್ಸ್‌ಪರ್ಟುಗಳು ಆದ ಜನರಿದ್ದಾರೆ.

ಅದರಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಆದರೆ ಪ್ರಜಾಪ್ರಭುತ್ವದಲ್ಲಿ ಯಾವುದೇ ಸರಕಾರ ಆಡಳಿತದಲ್ಲಿರಲಿ, ಬಹಳ ಬಲಯುತವಾದಂಥ ಪ್ರತಿಪಕ್ಷ ಇರಬೇಕಾದುದು ಅವಶ್ಯಕ. ನಾವೇ ಯಾವಾಗಲೂ ಆಳುತ್ತೇವೆ ಅಥವ ನಮ್ಮ ಆಡಳಿತ ಬಹಳ ಪರಿಶುದ್ಧವಾಗಿದೆ ಎಂದು ತಿಳಿದುಕೊಳ್ಳುವುದೂ ತಪ್ಪು. ಅವರೇ ಪ್ರತಿಪಕ್ಷದ ಸ್ಥಾನಕ್ಕೆ ಬರಬಹುದು. ಒಂದು ಸಂಘಟಿತವಾದಂಥ, ಜವಾಬ್ದಾರಿ ಯುತವಾದಂಥ, ಡಿಗ್ನಿಫೈಡ್ ಆದಂಥ ಪ್ರತಿಪಕ್ಷ ದೇಶದಲ್ಲಿ ಹುಟ್ಟಬೇಕು. ಆಗ ಸಕಾಲದಲ್ಲಿ, ಸಕ್ರಮವಾಗಿ ಇವರ ಮೇಲೆ ಚಾರ್ಜಸ್ ತರಬೇಕು. ನಾವು ಮಾಡತಕ್ಕಂಥ ಚಾರ್ಜಸ್ ಹೇಗಿರಬೇಕೆಂದರೆ ಕೋರ್ಟಿನಲ್ಲಿ ಕ್ರಿಮಿನಲ್ ಅಪರಾಧಿಗಳ ಮೇಲೆ ಮಾಡಿದಂಥ ಚಾರ್ಜ ಇದ್ದಹಾಗೆ ಪಕ್ವವಾಗಿ ಇರಬೇಕು. ಸಾಕ್ಷ್ಯದಲ್ಲಿ ಸ್ವಲ್ಪ ಅನುಮಾನ ಬಂದರೆ ಅಪರಾಧಿಗೆ ಬೆನಿಫಿಟ್ ಆಫ್ ಡೌಟ್ ಕೊಟ್ಟು ಖುಲಾಸೆ ಮಾಡುತ್ತಾರೆ. ಆದ್ದರಿಂದ ಎಸ್ಕೇಪ್ ಆಗದ ಹಾಗೆ ಸಾಕ್ಷ್ಯವನ್ನು ಇಟ್ಟುಕೊಂಡು ಚಾರ್ಜಸ್ ತರಲು ವಿರೋಧ ಪಕ್ಷದವರು ಪ್ರಯತ್ನ ಮಾಡಬೇಕು.

ಏತಕ್ಕೆ ಪದೇಪದೇ ಅವಿಶ್ವಾಸ ನಿರ್ಣಯ ಬರುತ್ತಿದೆ ಎಂದು ಸರಕಾರವು ದೀರ್ಘವಾಗಿ ಆಲೋಚನೆ ಮಾಡಿ, ಸರಕಾರ, ಮಂತ್ರಿ ಮಂಡಲ, ಆಡಳಿತ ಪಕ್ಷ ಎಚ್ಚೆತ್ತು ನಡೆದುಕೊಳ್ಳಬೇಕು ಎಂಬ ಕಾಲ ಬಂದಿದೆ ಎಂಬುದನ್ನೂ ಗ್ರಹಿಸಬೇಕು. ಹೀಗೆ ಆಗ್ಗಾಗ ತರುತ್ತಿರುವ ಅವಿಶ್ವಾಸ ನಿರ್ಣಯ ವನ್ನು ತಾತ್ಸಾರ ಮನೋಭಾವದಿಂದ ನೋಡಬಾರದು, ಇದರಿಂದ ಆಡಳಿತ ಪಕ್ಷಕ್ಕೆ ಅಪಾಯವಿದೆ ಎಂದು ತಿಳಿದುಕೊಂಡು ಎಚ್ಚರಗೊಳ್ಳಬೇಕು. ಮತ್ತು ಹೆಚ್ಚು ಉಪಯುಕ್ತವಾದ ಕೆಲಸ ಮಾಡಬೇಕು. ನಿಮ್ಮ ಮಡಿಕೆಯೂ ತೂತು ಆಗುತ್ತಿದೆ, ನೀರು ಸೋರಿ ಹೋಗುತ್ತಿವೆ. ಆದ್ದರಿಂದ ನೀವೆಲ್ಲಾ ಯುನೈಟಾಗಿ ಚೆನ್ನಾಗಿ ರಾಜ್ಯಭಾರ ಮಾಡುವುದು ಒಳ್ಳೆಯದು.

ಕಡೆಯದಾಗಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒಂದು ವಿಷಯವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಕಾಮರಾಜ ಸೂತ್ರ ನಿಮಗೆ ಒಳ್ಳೆಯದಕ್ಕೇ ಬಂದಿದೆ. ಎಂದು ನೀವು ತಿಳಿದುಕೊಳ್ಳಬೇಕು. ಈ ಅವಕಾಶವಿರುವಾಗ ಧೈರ್ಯವಾಗಿ ಮಂತ್ರಿ ಮಂಡಲದ ಗಾತ್ರವನ್ನು ಕಡಿಮೆಮಾಡಿ. ನೀವು ಏನೇನನ್ನು ಸಾಧಿಸಿಕೊಳ್ಳಬೇಕೆಂದು ಇದ್ದೀರೊ ಅದನ್ನು ಈಗ, ಎಷ್ಟು ಜನ ಮಂತ್ರಿಗಳನ್ನು ಉಳಿಸಿಕೊಳ್ಳಬೇಕೊ, ಎಂಥೆಂಥವರನ್ನು ಉಳಿಸಿಕೊಳ್ಳಬೇಕೋ ಅಂಥವರನ್ನು ಉಳಿಸಿಕೊಂಡು, ಸಾಧಿಸಿಕೊಳ್ಳಿ. ಆಡಳಿತ ಎಫಿಷಿಯೆನ್ಸಿಯನ್ನು ಮನಸ್ಸಿನಲ್ಲಿಟ್ಟುಕೊಳ್ಳಿ.—ಹೆಚ್ಚು ಜನರಿರುವುದರಿಂದ ಏನೂ ಆಗುವುದಿಲ್ಲ; ಎಫಿಷಿಯನ್ಸಿ ಸಾಧ್ಯವೂ ಇಲ್ಲ. ಮಂತ್ರಿಗಳು ಜಾಸ್ತಿ ಇದ್ದರೆ ಎಫಿಷಿಯನ್ಸಿ ಇಂಪ್ರೂ ಆಗುವುದಿಲ್ಲ. ಈಗಿರತಕ್ಕಂಥ ಮಂತ್ರಿಗಳಲ್ಲಿ ಯಾರ್‍ಯಾರು ಆನೆಸ್ಟ್ ಇದ್ದಾರೊ, ಯಾರು ಜವಾಬ್ದಾರಿಯನ್ನು ಅರಿತುಕೊಂಡು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೋ, ಅಂಥವರನ್ನು ಇಟ್ಟುಕೊಂಡು ಬಾಕಿಯವರನ್ನು ತೆಗೆಯಬಹುದು. ಈಗ ಮಂತ್ರಿ ಮಂಡಲದಲ್ಲಿರುವ ಮಂತ್ರಿಗಳು ಬಹಳ ಜಾಸ್ತಿ; ಅದನ್ನು ಒಪ್ಪಲೇಬೇಕು, ಒಪ್ಪಿಕೊಂಡು ಇದ್ದೀರಿ. ಆದ್ದರಿಂದ ಈ ಅವಕಾಶವನ್ನು ಉಪಯೋಗಿಸಿಕೊಂಡು, ಬಹು ಎಚ್ಚರಿಕೆಯಿಂದ ಈಗಿರುವವರನ್ನು ಸ್ಕ್ರೀನ್ ಮಾಡಿ, ಯಾರ್‍ಯಾರನ್ನು ಇಟ್ಟುಕೊಳ್ಳಬೇಕೆಂದು ನೋಡಿ, ಒಂದು ಜವಾಬ್ದಾರಿಯುತವಾದ ಮಂತ್ರಿ ಮಂಡಲವನ್ನು ರಚಿಸಿ, ರಾಜ್ಯಕ್ಕೆ ಎಫಿಷಿಯಂಟ್ ಅಡ್ಮಿನಿಸ್ಟ್ರೇಷನ್ ಕೊಡಬೇಕು. ಇಲ್ಲದೆ ಹೋದರೆ ಈ ಅಪವಾದ ತಪ್ಪಿದ್ದೇ ಅಲ್ಲ. ನೊ—ಕಾನ್‌ಫಿಡೆನ್ಸ್ ಮೋಷನ್ ತರುವುದನ್ನು ಇವರು ಬಿಡುವುದಿಲ್ಲ. ನೀವು ಅವರನ್ನು ಬೇಡವೆನ್ನುವುದೂ ಉಚಿತವಲ್ಲ. ಈ ಕಡೆ ನೀವು ಇದ್ದರೂ ಅದೇ ಮಾಡುತ್ತೀರ. ನೀವು ಈ ಕಡೆ 10-15 ಜನವಿದ್ದರೂ, ಪ್ರತಿಪಕ್ಷದಲ್ಲಿರುವಾಗ ಇದೇ ಕೆಲಸ ಮಾಡುತ್ತೀರ. ಆದ್ದರಿಂದ ಯಾವ ಪ್ರತಿಪಕ್ಷವು ಈ ರೀತಿ ಪದೆಪದೆ ಅವಿಶ್ವಾಸ ನಿರ್ಣಯವನ್ನು ತರುವುದಿಲ್ಲ ಎಂದು ಹೇಳುವುದರಲ್ಲಿ ತಿರುಳಿಲ್ಲ.

†ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಮಂಡಿಸಿರತಕ್ಕಂಥ ಈ ಅವಿಶ್ವಾಸ ನಿರ್ಣಯವನ್ನು ನಾನು ವಿರೋಧಿಸುತ್ತೇನೆ.

ಈಗಾಗಲೇ ಆರು ತಿಂಗಳೊಳಗೆ ವಿರೋಧಪಕ್ಷದ ನಾಯಕರು ಎರಡು ಬಾರಿ ಅವಿಶ್ವಾಸ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಆಳುವ ಪಕ್ಷ ದೇಶದ ಬಗ್ಗೆ ಎಷ್ಟು ಜವಾಬ್ದಾರಿಯನ್ನು ವಹಿಸಿದೆಯೊ ಅಥವ ದೇಶದ ಅಭ್ಯುದಯ ಕಾಲದಲ್ಲಿ ಎಂತಹ ಗುರುತರ ಜವಾಬ್ದಾರಿ ವಹಿಸಿವೆಯೊ, ಅಷ್ಟರ ಮಟ್ಟಿಗೇ ವಿರೋಧ ಪಕ್ಷವೂ ವಹಿಸಬೇಕು ಅಂತ ನಂಬಿಕೆಯುಳ್ಳವರಲ್ಲಿ ನಾನೂ ಒಬ್ಬ. ಆದರೆ ಸರಕಾರ ಮಾಡಿದಂಥ ತಪ್ಪುಗಳನ್ನು ಅಥವ ಸರಕಾರದಲ್ಲಿ ಕಂಡುಬಂದಂಥ ದೋಷಗಳನ್ನು ತಿದ್ದಬೇಕಾದರೆ ವಿರೋಧಪಕ್ಷದ ನಾಯಕರಿಗೆ ಅಥವ ವಿರೋಧಪಕ್ಷಕ್ಕೆ ಇರತಕ್ಕಂಥಾದ್ದು ಅವಿಶ್ವಾಸ ನಿರ್ಣಯ ಒಂದೇಯೆ ಅನ್ನತಕ್ಕಂಥಾದ್ದನ್ನು ನಾನು ಪ್ರಶ್ನೆ ಮಾಡಬೇಕಾಗಿದೆ. ವಿರೋಧಪಕ್ಷದ ನಾಯಕರಾಗಿ, ಈ ಸರಕಾರ ಹೋದರೆ ಸರಕಾರವನ್ನು ಕಟ್ಟತಕ್ಕಂಥ, ಆಡಳಿತ ನಡೆಸತಕ್ಕಂಥ, ಆಳತಕ್ಕಂಥ ಜವಾಬ್ದಾರಿಯುಳ್ಳ ಇಂಥ ಮನುಷ್ಯರು, ಇಷ್ಟು ಗುರುತರ ಜವಾಬ್ದಾರಿಯನ್ನು ಹೊತ್ತು, ಈ ಕ್ಷುಲ್ಲಕ ಕಾರಣಗಳಿಗಾಗಿ ಅವಿಶ್ವಾಸ ನಿರ್ಣಯವನ್ನು ಎರಡು ಸಾರಿ ಮಂಡಿಸಿದರಲ್ಲಾ ಅಂತ ಅವರ ವಿಷಯದಲ್ಲಿ ಪಶ್ಚಾತ್ತಾಪ ಪಡುತ್ತಾ ಇದ್ದೇನೆ. ಇಂಗ್ಲೆಂಡಿನಲ್ಲಿ ಎಲ್ಲಿ ಪ್ರಜಾಪ್ರಭುತ್ವ ಚೆನ್ನಾಗಿ ಬೆಳೆದು 500 ವರ್ಷಗಳಿಂದ ಆದರ್ಶಪ್ರಾಯವಾಗಿದೆಯೊ ಆ ದೇಶದ ವ್ಯವಹಾರಗಳನ್ನು ಅವಲೋಕಿಸಿದರೆ, ಅಲ್ಲಿ ವಿರೋಧಪಕ್ಷದ ನಾಯಕರಿಗೆ ಪಕ್ಷದ ನಾಯಕರಷ್ಟು ಗೌರವವಿದೆ, ಮನ್ನಣೆ ಇದೆ, ಸಂಭಾವನೆ ಇದೆ. ಯಾವ ಘಳಿಗೆಯಲ್ಲಿ ಬಹಳ ಅಕ್ಷಮ್ಯ ಅಪರಾಧ ಮಾಡಿದರೆ, ದೇಶದಲ್ಲಿ ಆಂದೋಳನ ಉಂಟುಮಾಡಿದರೆ ಅಥವಾ ದೇಶದ ಒಂದು ಭದ್ರವಾದ ಬೆಂಬಲವಿದ್ದರೆ, ವಿರೋಧಪಕ್ಷದ ನಾಯಕರು ಸರಕಾರದ ಮೇಲೆ ಅವಿಶ್ವಾಸ ನಿರ್ಣಯವನ್ನು ತಂದು ಉರುಳಿಸಿ ತಾವೇ ಸರಕಾರವನ್ನು ನಡೆಸಿಕೊಂಡು ಹೋಗುತ್ತಾರೆ. ಇಷ್ಟೊಂದು ಹೆಚ್ಚಿನ ಜವಾಬ್ದಾರಿ ಅಲ್ಲಿನ ವಿರೋಧಪಕ್ಷದ ನಾಯಕರಿಗಿದೆ. ಇಲ್ಲಿ ವಿರೋಧಪಕ್ಷದ ನಾಯಕರು ಮತ್ತು ಅವರ ಅನುಯಾಯಿಗಳು ಆಳುವ ಸರಕಾರದ ಮೇಲೆ ಏನೇನು ಅಪಾದನೆಗಳನ್ನು ಮಾಡಿದ್ದಾರೋ ಅವುಗಳನ್ನು ಎಷ್ಟರ ಮಟ್ಟಿಗೆ ಸಾಬೀತು ಮಾಡಿದ್ದಾರೆ ಮತ್ತು ಇವರ ಒಂದು ಶಕ್ತಿ ಸಾಮರ್ಥ್ಯ ಎಷ್ಟರಮಟ್ಟಿಗೆ ಇದೆ ನೋಡೋಣ. ಮೂರು ಚುನಾವಣೆಗಳಲ್ಲಿ ದೇಶದ ಜನ ಇವರ ಹಿಂದೆ ಎಷ್ಟು ಜನ ಇದ್ದಾರೆ ಮತ್ತು ಎಷ್ಟು ಜನರನ್ನು ಅವರು ಆರಿಸಿ ಕಳುಹಿಸಿದ್ದಾರೆ? ಇವತ್ತಿನ ದಿವಸ ದೇಶಕ್ಕೆ ಯಾವ ಪಕ್ಷ ಸ್ವಾತಂತ್ರ್ಯವನ್ನು ತಂದುಕೊಟ್ಟಿತೋ, ದೇಶವನ್ನು 16 ವರ್ಷ ಸುವ್ಯವಸ್ಥಿತವಾದ ರೀತಿಯಲ್ಲಿ ರಾಜ್ಯಭಾರ ಮಾಡಿ ಜನತೆಯ ಜೀವನ ಮಟ್ಟವನ್ನು ಉತ್ತಮಪಡಿಸಿ ಪ್ರಗತಿಯ ಪಥದಲ್ಲಿ ಕರೆದೊಯ್ಯಿತೋ, ಆ ಕಾಂಗ್ರೆಸ್ ಸಂಸ್ಥೆಗೆ ಜನತೆ ಬೆಂಬಲ ಕೊಟ್ಟ ಮಾತನ್ನು ವಿರೋಧಪಕ್ಷದ ನಾಯಕರು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು ಎಂದು ನಾನು ಅವರಿಗೆ ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಡಿ. ಎಂ. ಸಿದ್ದಯ್ಯ)

ಮೊದಲನೆಯದಾಗಿ ವಿರೋಧಪಕ್ಷದ ನಾಯಕರು ಮತ್ತು ಅವರ ಅನುಯಾಯಿಗಳು ಶರಾವತಿ ವ್ಯಾಲಿ ವಿಚಾರದಲ್ಲಿ ಬಹಳ ಮಾತನಾಡಿದ್ದಾರೆ. ಶರಾವತಿ ಕೂಡ 100 ಕೋಟಿ ರೂಪಾಯಿನ ವೆಚ್ಚದಲ್ಲಿ ಮಾಡತಕ್ಕಂಥ ಬೃಹತ್ ಕಾರ್ಯ. ಅದರ ಜವಾಬ್ದಾರಿ ಎಷ್ಟಿದೆ ಅದರಲ್ಲಿರತಕ್ಕಂಥ ಕುಂದು ಕೊರತೆಗಳೇನು ಅನ್ನತಕ್ಕಂಥಾದ್ದನ್ನು ತಿಳಿದುಕೊಂಡು, ಅವರ ಅಪಾದನೆಗಳ ಬಗ್ಗೆ ಅಂಕಿ ಅಂಶಗಳನ್ನು ಇಟ್ಟು ತೋರಿಸಿಕೊಡುವ ಸಾಹಸ ಮಾಡಲಿಲ್ಲ. ಶ್ರೀ ಕೃಷ್ಣರವರು ಬಹಳ ಸೊಗಸಾದ ಭಾಷಣ ಮಾಡಿದರು; ಭಾಷಣ ಸ್ವಾರಸ್ಯವಾಗಿತ್ತೇ ಹೊರತು ಅದರಲ್ಲಿ ಬೇರೆ ಗಮನಾರ್ಹವಾದ ಅಂಶ ಏನೂ ಇಲ್ಲ ಎಂದು ವಿನಯ ಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ. ಶರಾವತಿ ಸಂಶಯ, ಪೆಡಂಭೂತ ಮುಖ್ಯ ಮಂತ್ರಿಗಳ ತಲೆಮೇಲೆ ಇದೆ, ಅದನ್ನು ತಿಳಿಮಾಡಬೇಕು, ವಿಚಾರಣೆ ನಡೆಸಬೇಕು, ಈ ಮಾನ್ಯ ಸಭೆಗೆ ಇರತಕ್ಕಂಥ ಸಂಶಯವನ್ನು ಹೋಗಲಾಡಿಸಬೇಕು ಅಂತ ಹೇಳಿದರು. ಅಷ್ಟು ಮಾತ್ರ ಅಲ್ಲ: ಇವತ್ತಿನ ದಿವಸ ದೊಡ್ಡ ದೊಡ್ಡ ಕಂಟ್ರಾಕ್ಟುದಾರರುಗಳಿಗೆ, ಕೊಟಿದ್ದಾರೆ ಆರ್ಬಿಟ್ರೇಷನ್ನಿನಲ್ಲಿ ಬೇಕಾದಷ್ಟು ದುಡ್ಡು ಕೊಟ್ಟಿದ್ದಾರೆ ಅಂತ ಹೇಳಿ ಬಹಳ ದಪ್ಪದಪ್ಪದ ಆಕ್ಷೇಪಣೆಗಳನ್ನು ಮಾಡಿದರೇ ಹೊರತು, ಅವುಗಳ ಬಗ್ಗೆ ಸ್ಪೆಸಿಫಿಕ್ಕಾಗಿ ಏನು ಚಾರ್ಜಸ್ ಮಾನ್ಯ ವಿರೋಧಪಕ್ಷದ ನಾಯಕರಾಗಲಿ, ಅಥವ ಅವರ ಅನುಯಾಯಿಗಳಾಗಲಿ ಸಭಿಕರಲ್ಲಿ ಇಟ್ಟಿದ್ದಾರೆ ಎಂದು ನಾನು ಮತ್ತೊಮ್ಮೆ ಪ್ರಶ್ನಿಸಬೇಕಾಗಿದೆ. ಆದ್ದರಿಂದ ಮುಂದೆ ಮಾತನಾಡತಕ್ಕಂಥ ವಿರೋಧಪಕ್ಷದ ಮಾನ್ಯ ಸ್ನೇಹಿತರು ಆ ವಿಷಯದಲ್ಲಿ ಸ್ಪಷ್ಟವಾಗಿ ಹೇಳಬೇಕು ಅಂತ ಅರಿಕೆ ಮಾಡಿಕೊಳ್ಳುತ್ತೇನೆ. ಇವತ್ತು ಆರ್ಬಿಟ್ರೇಷನ್ನಿನಲ್ಲಿ ಏನು ಅನ್ಯಾಯ ನಡೆದಿದೆ ಅಥವ ದೊಡ್ಡ ಕಂಟ್ರಾಕ್ಟರುಗಳು ತಮಗೆ ಕೊಟ್ಟ ಕಂಟ್ರಾಕ್ಟನ್ನು ಸಣ್ಣ ಕಂಟ್ರಾಕ್ಟರುಗಳಿಗೆ ಕೊಟ್ಟು ಏನು ಸಂಪಾದನೆ ಮಾಡಿದ್ದಾರೆ, ಏನು ಅನಾಹುತ ಶರಾವತಿಯಲ್ಲಿ ನಡೆದಿದೆ ಅನ್ನತಕ್ಕಂಥಾದ್ದನ್ನು ಅವರು ಸ್ಪಷ್ಟವಾಗಿ ಹೇಳಬೇಕೆಂದು ನಾನು ಸೂಚಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಒಂದು ಮಾತನ್ನು ಅನೇಕ ಸಲ ಹೇಳಿದ್ದಾರೆ: ನಾನು, ಸಂಬಂಧಪಟ್ಟ ಎಲ್ಲಾ ಫೈಲುಗಳನ್ನು ತರಿಸಿದ್ದೇನೆ, ಅವುಗಳನ್ನು ನೋಡುತ್ತೇನೆ, ಏನಾದರೂ ಕುಂದುಕೊರತೆಗಳು ಇದ್ದರೂ ಕೂಡ ಅವುಗಳನ್ನು ಸರಿಪಡಿಸಲು ನಿರ್ಧಾರ ಮಾಡಿದ್ದೇನೆ; ಈ ಮಾನ್ಯ ಸಭೆಗೆ ತೃಪ್ತಿಯಾಗುವ ರೀತಿಯಲ್ಲಿ ಒಳ್ಳೆಯ ಸಮಾಧಾನವನ್ನು ಕೊಡುತ್ತೇನೆ ಅಂತ ಹೇಳಿ ಭರವಸೆಯನ್ನು ಕೊಟ್ಟಿದ್ದಾರೆ.

ವಿರೋಧಪಕ್ಷದವರು ಹೇಳತಕ್ಕಂಥಾದ್ದು ನೋಡಿದರೆ ಈ ಸಭೆಯಲ್ಲಿರುವ 139 ಜನ ಕಾಂಗ್ರೆಸ್ ಪಕ್ಷದವರಾದ ನಾವು ಏನೂ ವಿಷಯವನ್ನು ಪಾರ್ಟಿಯಲ್ಲಿ ಚರ್ಚೆಮಾಡದೆ, ಯಾವ ವಿಷಯಗಳನ್ನೂ ಕೂಲಂಕಷವಾಗಿ ಯೋಚನೆ ಮಾಡದೆ, ಹನ್ನೆರಡುವರೆ ಗಂಟೆಗೆ ಸುಮ್ಮನೆ ಬಂದು ಇಲ್ಲಿ ಕೂತುಕೊಳ್ಳುವ ಜನ; ಅಧಿಕಾರ ವಿಲ್ಲದ, ಆಡಳಿತ ಜವಾಬ್ದಾರಿಯನ್ನು ವಹಿಸಿಕೊಳ್ಳದೆ ಇರತಕ್ಕಂಥ ಜನ, ಅಧಿಕಾರವನ್ನು ನಡೆಸತಕ್ಕಂಥ ಅಧಿಕಾರವನ್ನು ನಡೆಸುತ್ತಾ ಇರತಕ್ಕಂಥ ಜನರನ್ನು ಆಕ್ಷೇಪಣೆ ಮಾಡತಕ್ಕಂಥ ಇಷ್ಟೊಂದು ಜವಾಬ್ದಾರಿ ಇರಬೇಕಾದರೆ, ಸರಕಾರ ನಡೆಸತಕ್ಕಂಥ, ಆಡಳಿತ ಜವಾಬ್ದಾರಿ ಹೊತ್ತಿರತಕ್ಕಂಥ ಪಕ್ಷಕ್ಕೆ ಎಷ್ಟು ಜವಾಬ್ದಾರಿ ಇರಬೇಕು, ನಮ್ಮ ಕಾರ್ಯ ಕಲಾಪಗಳೇನಿರಬೇಕು, ಅನ್ನುವುದನ್ನು ತಿಳಿದುಕೊಳ್ಳಬೇಕು. ನಮ್ಮ ಪಕ್ಷದ ಸಭೆಯಲ್ಲಿ ಅನೇಕ ವಿಷಯಗಳನ್ನು ಚರ್ಚೆ ಮಾಡುತ್ತೇವೆ, ಆದ್ದರಿಂದ ಮಂತ್ರಿ ಮಂಡಲವಾಗಲಿ, ಮಂತ್ರಿಗಳೇ ಆಗಲಿ ಪಕ್ಷದ ಜನರನ್ನು ಬಾಲಬಡಕರಂತೆ ಭಾವಿಸಿ ದರ್ಪದಿಂದ ಆಡಳಿತ ನಡೆಸಲು ಸಾಧ್ಯವಿಲ್ಲ. ಲಂಚ ದೇಶದಲ್ಲಿ ತಾಂಡವಾಡುತ್ತಿದೆ, 139 ಜನ ಕಾಂಗ್ರೆಸ್ ಸದಸ್ಯರು ಏನಿದ್ದೇವೆ ಅವರು ತಮ್ಮ ಹೃದಯ ಪರೀಕ್ಷೆ ಮಾಡಿಕೊಳ್ಳಬೇಕು ಎಂದು ಹೇಳಿದರು. ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರು ದಿವಾಳಿಯಾಗಿದ್ದವರು ಈಗ ಶ್ರೀಮಂತರಾಗಿದ್ದಾರೆ ಎಂದು ಹೇಳಿದ್ದಾರೆಂದು ಹೇಳಿದರು. ನಾನಾದರೂ ಕೂಡ ಹೇಳುತ್ತೇನೆ: ನಿಸ್ಪೃಹ ಕಾಂಗ್ರೆಸ್ ಜನ ದೇಶದಲ್ಲಿ ಉಳಿದಿದ್ದಾರೆ. ಸತ್ಯಸಂಧರೂ, ಸೇವಾಧುರೀಣರೂ, ಜವಾಬ್ದಾರಿಯುತರಾದ ಕಾಂಗ್ರೆಸ್ ಸದಸ್ಯರು ಈ ಮಾನ್ಯ ಸಭೆಯಲ್ಲಿದ್ದಾರೆಂದು ವಿರೋಧಪಕ್ಷದ ನಾಯಕರಿಗೆ ಹೇಳುತ್ತೇನೆ. ಬಹುಶಃ ವಿರೋಧಪಕ್ಷದ ನಾಯಕರಿಗೆ ನಾವೆಲ್ಲರೂ ಕೂಡ ಅಪರಿಚಿತರಲ್ಲ, ಚಿರಪರಿಚಿತರು ಇದ್ದೇವೆ ನಮ್ಮ ಜೀವನವನ್ನು ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ, ಬಂದ ಮೇಲೆ ನೋಡಿದ್ದಾರೆ. ಕಾಂಗ್ರೆಸ್‌ನವರು 16 ವರ್ಷಗಳಿಂದ ಆಡಳಿತ ನಡೆಸಿಕೊಂಡು ಬಂದಿದ್ದಾರೆ: ಈ ಸತ್ಯಾಂಶಗಳನ್ನು ಬಚ್ಚಿಟ್ಟು, ಬೆಟ್ಟವನ್ನು ಅಗೆದು ಇಲಿಯನ್ನು ಹಿಡಿದ ಹಾಗೆ ಸಣ್ಣ ಪುಟ್ಟ ದೋಷಗಳನ್ನು ಬಹಳವಾಗಿ ವಿಸ್ತಾರ ಮಾಡಿ ಹೇಳಿದರು. ಇದರಿಂದ ಜನತೆಯನ್ನು ಮೋಸಗೊಳಿಸುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ನಾನು ಅವರಿಗೆ ನಮ್ರಪೂರ್ವಕವಾಗಿ ತಿಳಿಸುತ್ತಿದ್ದೇನೆ.

11-00 A.M.

ಇವತ್ತು ಕಾಂಗ್ರೆಸ್ ಅಧಿಕಾರವನ್ನು ವಹಿಸಿಕೊಂಡ ಮೇಲೆ ಏನೇನು ಕೆಲಸ ಕಾರ್ಯಗಳನ್ನು ಮಾಡಿದೆ, ದೇಶದಲ್ಲಿ ಜನಜೀವನವನ್ನು ಉತ್ತಮಪಡಿಸಬೇಕಾದರೆ ಎಲ್ಲಕ್ಕಿಂತ ಹೆಚ್ಚಿನ ಕೆಲಸವನ್ನು ಕಾಂಗ್ರೆಸ್‌ನವರು ಮಾಡಿರತಕ್ಕದ್ದು ರಚನಾತ್ಮಕವಾದ ಕೆಲಸ. ಅಭಿವೃದ್ಧಿಕಾರ್ಯಗಳು—ಅನೇಕ ಊರುಗಳಲ್ಲಿ ರಸ್ತೆಗಳನ್ನೂ, ಅನೇಕ ಊರುಗಳಲ್ಲಿ ಸ್ಕೂಲುಗಳನ್ನೂ, ಅನೇಕ ಊರುಗಳಲ್ಲಿ ಆಸ್ಪತ್ರೆಗಳನ್ನೂ, ಅನೇಕ ಕಡೆ ಕುಡಿಯುವ ನೀರಿನ ಬಾವಿಗಳನ್ನೂ, ಅನೇಕ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿ ಸಣ್ಣ ಕೈಗಾರಿಕೆಗಳನ್ನು ನಡೆಸುವುದಕ್ಕೆ ಅವಕಾಶ ಮಾಡಿರುವುದರಿಂದ ಜನಜೀವನ 16 ವರ್ಷ ಹಿಂದೆ ಇದ್ದುದಕ್ಕಿಂತ ಇವತ್ತು ಉತ್ತಮವಲ್ಲವೆ ಎನ್ನುವ ಮಾತನ್ನು ವಿರೋಧ ಪಕ್ಷದಲ್ಲಿ ಸವಾಲು ಹಾಕಿ ಕೇಳುತ್ತೇನೆ. ಅಷ್ಟೇ ಅಲ್ಲ, 16 ವರ್ಷಗಳ ಹಿಂದೆ ಬೇಜವಾಬ್ದಾರಿ ಸರ್ಕಾರವಿದ್ದಾಗ ಏನೊಂದು ದಾರುಣ ಪರಿಸ್ಥಿತಿಯನ್ನು ನೋಡುತ್ತ ಇದ್ದೆವೋ ಅದಕ್ಕಿಂತ ಈಗ ಉತ್ತಮವಾಗಿಲ್ಲವೆ ಎಂದೂ ಕೇಳುತ್ತೇನೆ. ಈ ಮಾತನ್ನು ಹೇಳುವಾಗ ಸಂಪೂರ್ಣವಾಗಿ ಎಲ್ಲ ಯಶಸ್ವಿಯಾಗಿದೆ ಎಂದು ಹೇಳತಕ್ಕ ಹುಚ್ಚನಲ್ಲ ನಾನು. ಇನ್ನೂ ಮಾಡಬೇಕಾದ ಕೆಲಸ ಬಹಳವಿದೆ. ಆದರೆ ಮಾಡಿರತಕ್ಕ ಕೆಲಸವನ್ನು ಪರಿಶೀಲನೆ ಮಾಡತಕ್ಕ ಸಹಾನುಭೂತಿ ನಿಮ್ಮಲ್ಲಿಲ್ಲದೆ ಇದ್ದರೆ ಅಧಿಕಾರವನ್ನು ವಹಿಸಿಕೊಳ್ಳತಕ್ಕ ದಕ್ಷತೆ, ವಿತರಣೆ ನಿಮ್ಮಲ್ಲಿ ಉಂಟೇ ಎಂದು ನಾನು ತಮ್ಮನ್ನು ಇವತ್ತಿನ ದಿವಸ ಕೇಳುತ್ತೇನೆ. ದೇಶದಲ್ಲಿ ಇವತ್ತಿನ ದಿವಸ ಭೂಸುಧಾರಣೆಯಿಂದ ಎಷ್ಟು ಅನುಕೂಲವಾಗಿದೆ ಎಂದು ವಿಚಾರ ಮಾಡಬೇಕು.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಭೂಸುಧಾರಣೆಯನ್ನು ಎಲ್ಲಿ ಜಾರಿಗೆ ತಂದಿದ್ದೀರಿ?

ಶ್ರೀ ಡಿ. ಎಂ. ಸಿದ್ದಯ್ಯ.—ಕೆಲವು ಕಾನೂನು ತಿದ್ದುಪಡಿಗಳಿಂದ ಭೂಸುಧಾರಣೆ ಜಾರಿಗೆ ಬರುವುದಕ್ಕೆ ತಡವಾಗಿರುವ ಮಾತನ್ನು ವಿರೋಧಪಕ್ಷದವರು ಒಪ್ಪುತ್ತಾರೆಂದು ಕಾಣುತ್ತದೆ. ಪಾರ್ಲಿಮೆಂಟಿನಲ್ಲಿ ಈ ಬಗ್ಗೆ ಒಂದು ತಿದ್ದುಪಡಿ ಬರುವುದಿದೆ. ಅದು ಅಂಗೀಕಾರವಾದ ಮರುಕ್ಷಣದಲ್ಲಿಯೇ ಭೂಸುಧಾರಣೆ ದೇಶದಲ್ಲಿ ಜಾರಿಗೆ ಬರುವುದಕ್ಕೆ ಸಿದ್ಧವಾಗಿದೆ ಎನ್ನುವ ಮಾತನ್ನು ವಿರೋಧ ಪಕ್ಷದವರಿಗೆ ತಿಳಿಸುತ್ತಿದ್ದೇನೆ.

ದೇಶದಲ್ಲಿರತಕ್ಕ ಜನಜೀವನವನ್ನು ಉತ್ತಮಗೊಳಿಸುವುದಕ್ಕೆ ಅದರಲ್ಲಿಯೂ ಜಾತ್ಯತೀತ ವರ್ಗ ರಹಿತ ಸಮಾಜವನ್ನು ಮಾಡುವುದಕ್ಕೆ ಕಾಂಗ್ರೆಸ್ ಸರ್ಕಾರ ಕೆಲಸ ಮಾಡುತ್ತಿದೆ ಎಂದು ನಾನು ವಿರೋಧಪಕ್ಷದವರಿಗೆ ಹೇಳುತ್ತೇನೆ.

ವಿದ್ಯಾಭ್ಯಾಸ ಇಲಾಖೆ ವಿಷಯದಲ್ಲಿ ಮಾತನಾಡಿದ ಶ್ರೀ ಮಾದಪ್ಪ ಗೌಡರು ಕೆಲವು ವಿಷಯಗಳನ್ನು ಹೇಳಿದರು. ಅನೇಕ ವರ್ಷಗಳ ಕಾಲ ಅವರು ಕಾಂಗ್ರೆಸ್ಸಿನಲ್ಲಿದ್ದವರು. ಅವರಲ್ಲಿ ನನಗೆ ತುಂಬ ಗೌರವವಿದೆ. ವಿದ್ಯಾಭ್ಯಾಸ ವಿಷಯದಲ್ಲಿ ಮಾತನಾಡುವಾಗ ಒಂದು ಮಾತನ್ನು ಹೇಳಿದ್ದಾರೆ. ಆ ಮಾತನ್ನು ಹೇಳುವುದಕ್ಕೆ ನಾನು ಇಚ್ಛೆಪಡುವುದಿಲ್ಲ. ಅವರು ಒಂದು ಕೋಮಿನ ಮೇಲೆ ಆರೋಪ ಮಾಡಿ ವಿದ್ಯಾಭ್ಯಾಸ ಇಲಾಖೆಯ ಬಗ್ಗೆ ಪ್ರಶ್ನೆ ಮಾಡಿದರು. ವಿಶ್ವವಿದ್ಯಾನಿಲಯಕ್ಕೆ ಕುಲಪತಿಗಳಾಗಿ ಹೊರಗಿನವರು ಅಗತ್ಯವೆಂದು ಕಂಡುಬಂದುದರಿಂದ ಅಂತರ ರಾಷ್ಟ್ರೀಯ ಖ್ಯಾತಿಯನ್ನು ಗಳಿಸಿರುವಂಥವರನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನೇಮಿಸಿರತಕ್ಕ ಸತ್ಕೀರ್ತಿ ಈ ಸರ್ಕಾರಕ್ಕೆ ಇಲ್ಲವೇ ಎಂದು ಕೇಳುತ್ತೇನೆ. ವಿದ್ಯಾಭ್ಯಾಸ ಇಲಾಖೆಯ ಡೈರೆಕ್ಟರಾದವರು ಸ್ಕೂಲುಗಳು ಅಭಿವೃದ್ಧಿ ಸ್ಥಿತಿಗೆ ಬರುವುದಕ್ಕೆ ಇಲಾಖೆ ಚೆನ್ನಾಗಿ ಕೆಲಸ ಮಾಡುವುದಕ್ಕೆ ಎಷ್ಟು ಕಷ್ಟದಿಂದ ಶ್ರಮಿಸಿದ್ದಾರೆ ಎನ್ನುವ ಮಾತನ್ನು ಮಾನ್ಯ ವಿರೋಧ ಪಕ್ಷದವರು ಸಹಾನುಭೂತಿಯಿಂದ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಕಡ್ಡಾಯ ಶಿಕ್ಷಣ ದೇಶದಲ್ಲಿ ಜಾರಿಗೆ ಬಂದು ಸಹಸ್ರಾರು ಜನ ವಿದ್ಯಾರ್ಥಿಗಳು ಓದುವುದಕ್ಕೆ ಮುಂದೆ ಬರುತ್ತಿದ್ದಾರೆ, ಹಿಂದುಳಿದ ಜನಾಂಗಗಳು ವಿದ್ಯಾವಂತರಾಗುತ್ತಿದ್ದಾರೆ. ಯಾವ ಜನಾಂಗ ಸ್ವರಾಜ್ಯ ಬರುವುದಕ್ಕೆ ಮುಂಚೆ ಪಶು ಪ್ರಾಣಿಗಳಿಗಿಂತ ಕಡಿಮೆಯಾಗಿತ್ತೋ ಅಂಥ ಜನಾಂಗಕ್ಕೆ ಸೇರಿದವರು ಎಲ್ಲರ ಸರಿಸಮಾನರಾಗಿ ಅಧಿಕಾರ ಸ್ಥಾನದಲ್ಲಿ, ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕದ್ದು ಕಾಂಗ್ರೆಸ್ ಸರ್ಕಾರದ ಹಿರಿಮೆಯಲ್ಲವೇ, ಇದು ಅವರ ಕೀರ್ತಿಯಲ್ಲವೇ ಎಂದು ಪ್ರಶ್ನೆ ಮಾಡುತ್ತೇನೆ. ಇಂಥ ಗುರುತರವಾದ ಜವಾಬ್ದಾರಿಯನ್ನು ಹೊತ್ತಿರುವಾಗ ವ್ಯವಹಾರ ಮಾಡುವಾಗ ಕಾರ್ಯಾಂಗವೇನಿದೆ ಅದರಲ್ಲಿ ಲೋಪದೋಷಗಳು ಇರತಕ್ಕದ್ದು ಸಹಜ. ದೇಶದಲ್ಲಿ ಶಾಸನಾಂಗವಿದೆ, ನ್ಯಾಯಾಂಗವಿದೆ.

(ಶ್ರೀ ಡಿ. ಎಂ. ಸಿದ್ದಯ್ಯ)

ಕಾನೂನನ್ನು ಮಾಡುವಾಗ, ಒಂದು ಕುದುರೆ ಮುಖಕ್ಕೆ ಮುಖವಾಡ ಹಾಕಿ ರಸ್ತೆಯಲ್ಲಿ ಬಿಟ್ಟರೆ ಒಂದೇ ಕಡೆ ಹೋಗುವ ಹಾಗೆ ಕಾನೂನು ಇರಬೇಕು; ಆದರೆ ಅದನ್ನು ವ್ಯಾಖ್ಯಾನ ಮಾಡುವಾಗ ವ್ಯಕ್ತಿ ವ್ಯಕ್ತಿಗೂ ಅನೇಕ ವ್ಯತ್ಯಾಸಗಳುಂಟಾಗುತ್ತವೆ. ಅನೇಕ ರಿಟ್ ಅರ್ಜಿಗಳು ಹೈಕೋರ್ಟಿನಲ್ಲಿರಬಹುದು. ಹಿಂದುಳಿದ ಜನಾಂಗಗಳಿಗೆ ಸಹಜವಾಗಿ ಏನು ಸೋಷಿಯಲ್ ಜಸ್ಟಿಸ್ ಸಿಕ್ಕಬೇಕೋ ಅದನ್ನು ವಿದ್ಯಾರ್ಥಿಗಳಿಗೆ ಒದಗಿಸುವುದಕ್ಕೆ ಕೆಲವು ವಿದ್ಯಾಸಂಸ್ಥೆಗಳು ಅವಕಾಶ ಕೊಟ್ಟಿಲ್ಲ. ಅದು ಕಾನೂನಿಗೆ ವಿರೋಧವಾದ ಮತ್ತು ಕಾನೂನು ಬಾಹಿರವಾದ ವಿಚಾರ, ತೀರ್ಮಾನವನ್ನು ಕೊಡುವುದಕ್ಕೆ ಒಂದು ಕಡೆ ಸೋಷಿಯಲ್ ಜಸ್ಟಿಸ್ ಕೇಳುತ್ತಾರೆ, ಒಂದು ಕಡೆ ಕಾನೂನು ವ್ಯಾಪ್ತಿಯನ್ನು ಕೇಳುತ್ತಾರೆ. ಇವೆರಡನ್ನೂ ಕೂಡ ಸಮನ್ವಯಗೊಳಿಸಿಕೊಂಡು ಹೋಗತಕ್ಕದ್ದು ಎಷ್ಟು ಗುರುತರವಾದುದು ಎನ್ನುವುದನ್ನು ಯೋಚನೆ ಮಾಡಬೇಕು. ಯಾರು ಈ ಸರ್ಕಾರವನ್ನು ತೆಗೆದುಹಾಕಿ ಅವರು ಬಂದು ಸರ್ಕಾರವನ್ನು ನಡೆಸಬೇಕು ಎನ್ನುವ ದೃಷ್ಟಿಯಿಂದ ಅವಿಶ್ವಾಸ ನಿರ್ಣಯವನ್ನು ತಂದಿದ್ದಾರೆಯೋ ಅವರು ಬಂದರೂ ಕೂಡ ಅವರ ರೀತಿ ನೀತಿಗಳು ಇದರ ಬಗ್ಗೆ ಏನು ಎನ್ನುವುದನ್ನು ನಾನು ಪ್ರಶ್ನೆ ಮಾಡುತ್ತೇನೆ.

ಮಾನ್ಯ ಪುರುಳಪ್ಪನವರು ಲಾ ಡಿಪಾರ್ಟ್‌ಮೆಂಟಿನ ವಿಷಯದಲ್ಲಿ ಮಾತನಾಡುತ್ತ ಬಹಳ ಕಟುವಾದ ಟೀಕೆಗಳನ್ನು ಮಾಡಿದರು. ಲಾ ಡಿಪಾರ್ಟ್‌ಮೆಂಟ್ ಬಹಳ ಬುದ್ಧಿವಂತರಿಂದ ಕೂಡಿದಂಥ ಇಲಾಖೆ, ಅಲ್ಲಿಗೆ ತಜ್ಞರು ಬೇಕು, ಪ್ರಾಜ್ಞರು ಬೇಕು ಎಂದು ಒಂದು ಕಡೆ ಹೇಳುತ್ತಾರೆ. ಮತ್ತೊಂದು ಕಡೆ ಯೋಗ್ಯರನ್ನು ನೇಮಿಸಿದಾಗ ಅದಕ್ಕೆ ಜಾತೀಯತೆಯ ಆರೋಪವನ್ನು ಮಾಡುತ್ತಾರೆ. ಜಾತ್ಯಾತೀತ ರಾಷ್ಟ್ರದಲ್ಲಿ ಯಾರನ್ನು ಯಾವ ಕೆಲಸಕ್ಕೆ ಬೇಕಾದರೂ ನೇಮಿಸಬಹುದು ಅರ್ಹತೆ ಇದ್ದರೆ. ಯೋಗ್ಯತೆ ಮತ್ತು ಅರ್ಹತೆಯ ಪ್ರಕಾರ ನೇಮಿಸಿದಾಗ ನೇಮಕ ಮಾಡಿದ ವ್ಯಕ್ತಿಗಳ ಮೇಲೆ ಆಕ್ಷೇಪಣೆಯನ್ನು ಮಾಡುತ್ತಾರೆ. ಟೀಕೆಗಳನ್ನು ಮಾಡಬೇಕೆಂದು ಉದ್ದೇಶಪಟ್ಟು ಈ ಅವಿಶ್ವಾಸ ಠರಾವನ್ನು ತಂದಿದ್ದ ಪಕ್ಷದಲ್ಲಿ ನಾನು ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಏನು ಕೆಲಸ ಮಾಡುವುದಕ್ಕೆ ಹೊರಟಿದ್ದೀರೋ ಅದರಿಂದ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟ ಹಾಗೆಯೂ ಆಗಲಿಲ್ಲ, ದೇಶಕ್ಕೆ ಒಳ್ಳೆಯದನ್ನು ಕೂಡ ಮಾಡಿದ ಹಾಗೆ ಆಗಲಿಲ್ಲ, ನಮ್ಮ ಪಕ್ಷವನ್ನು ಬೆಳೆಸಿಕೊಳ್ಳುವುದಕ್ಕೆ ಕೂಡ ಪ್ರಯೋಜನವಾಗುವುದಿಲ್ಲ ಎನ್ನುವ ಮಾತನ್ನು ಅವರಿಗೆ ತಿಳಿಸುತ್ತೇನೆ.

ಖಾದಿ ಬೋರ್ಡಿನ ವಿಷಯದಲ್ಲಿ ಬಹಳ ಹೆಚ್ಚಿನ ಟೀಕೆಗಳನ್ನು ಶ್ರೀಮಾನ್ ಎಸ್. ಎಂ. ಕೃಷ್ಣ ಅವರು ಮಾಡಿದರು. ಖಾದಿ ಬೋರ್ಡ್ ಇವತ್ತಿನ ದಿವಸ ಸ್ಟ್ಯಾಚೂಟರಿ ಬಾಡಿ. ಅಲ್ಲಿ ಖಾಸಗಿಯವರು ಅಧ್ಯಕ್ಷರು, ಖಾಸಗಿ ಜನರು ಅವರ ಸದಸ್ಯರು. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಈ ಮಾನ್ಯ ಸಭೆಯಲ್ಲಿ ಒಂದು ಅಂಶವನ್ನ ಬಚ್ಚಿಟ್ಟುಕೊಳ್ಳದೆ ಎಲ್ಲ ವಿಷಯಗಳನ್ನೂ ಹೇಳಿದ್ದಾರೆ. ಇದಕ್ಕೆ ಮಂತ್ರಿಗಳು ಹೇಗೆ ಜವಾಬ್ದಾರರಾಗುತ್ತಾರೆ ಎನ್ನುವುದು ವಿಮರ್ಶೆ ಮಾಡಬೇಕಾದ ವಿಷಯ. ಖಾದಿ ಬೋರ್ಡಿನಲ್ಲಿ ನಡೆದಂಥ ವಿಚಾರಗಳನ್ನು ನಾವು ಚರ್ಚಿಸುವಾಗ ಎಷ್ಟರಮಟ್ಟಿಗೆ ಮಂತ್ರಿಮಂಡಲ ಇದಕ್ಕೆ ಜವಾಬ್ದಾರಿಯುಳ್ಳದ್ದು ಎನ್ನುವುದನ್ನು ನಾವು ನಿಷ್ಪಕ್ಷಪಾತ ಬುದ್ಧಿಯಿಂದ ನೋಡಬೇಕು. ಏನು ಹೊಣೆ ಇದೆ ಎನ್ನುವುದನ್ನು ನಾನು ಈ ಸಭೆಗೆ ತಿಳಿಸಲು ಇಷ್ಟಪಡುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ: ಈ ಮಂಡಳಿಯ ಸದಸ್ಯರಾದ ವೆಂಕಟೇಶ ಮಾಗಡಿಯವರು ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು ಖಾದಿ ಬೋರ್ಡಿನ ವ್ಯವಹಾರದ ಬಗ್ಗೆ ಎಂದು ಹೇಳಿಕೆಯನ್ನು ಕೊಟ್ಟಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯ.—ಖಾದಿ ಬೋರ್ಡಿನ ಆಕ್ಟ್ ಪ್ರಕಾರವಾಗಿ,

"The State Government shall in consultation with the Board appoint a Secretary to the Board."

"The State Government shall appoint Accounts Officer to the Board."

ಇಷ್ಟಾದ ಮೇಲೆ ಅದರ ಪೂರ್ಣ ಜವಾಬ್ದಾರಿ ಖಾದಿ ಬೋರ್ಡಿನ, ಲೆಕ್ಕವನ್ನು ಇಡತಕ್ಕದ್ದು, ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗತಕ್ಕದ್ದು, ಆನ್ಯುಯಲ್ ರಿಪೋರ್ಟ್ ಕೊಡತಕ್ಕದ್ದು, ಲೆಕ್ಕಗಳನ್ನು ಆಡಿಟ್ ಮಾಡಿಸತಕ್ಕದ್ದು, ಇಂಥ ಕೆಲಸಗಳೆಲ್ಲ ಖಾದಿ ಬೋರ್ಡಿಗೇ ಇವೆ. ಈ ಮಾತನ್ನು ಹೇಳುವಾಗ ಸರ್ಕಾರಕ್ಕೆ ನೈತಿಕವಾದ ಜವಾಬ್ದಾರಿ ಖಾದಿ ಬೋರ್ಡಿನ ಮೇಲೆ ಏನೂ

ಇಲ್ಲವೆಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ. ಇವತ್ತು ಖಾದಿ ಬೋರ್ಡಿನಲ್ಲಿ ಏನು ಅವ್ಯವಸ್ಥೆ ಇದೆ ಅದನ್ನು ಸರಿಪಡಿಸತಕ್ಕದ್ದು ಸರ್ಕಾರದ ಕರ್ತವ್ಯ. ಆ ಕರ್ತವ್ಯದಲ್ಲಿ ಸರ್ಕಾರ ಇವತ್ತು ಮನಸ್ಸನ್ನು ಕೊಟ್ಟಿದೆ, ಆಡಿಟರನ್ನು ನೇಮಿಸಿದ್ದೇವೆ, ಲೆಕ್ಕಗಳನ್ನು ಅವರು ತನಿಖೆ ಮಾಡುತ್ತಿದ್ದಾರೆ, ಈ ಖಾದಿ ಬೋರ್ಡನ್ನು ವ್ಯವಸ್ಥಿತವಾಗಿ ನಡೆಸುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ಕಾರ್ಯಕ್ರಮಗಳೆಲ್ಲವನ್ನೂ ತೆಗೆದುಕೊಂಡಿದೆ ಮತ್ತು ಅಲ್ಲಿ ನಡೆದಿದೆ ಎಂದು ಹೇಳಲಾಗುತ್ತಿರುವ ವಿಷಯಗಳಿಗೆ ಯಾರೇ ಜವಾಬ್ದಾರರಾಗಿರಲಿ, ಅವರು ಎಷ್ಟೆ ದೊಡ್ಡ ಮನುಷ್ಯರಾಗಿರಲಿ ಅವರ ಮೇಲೆ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಈ ಸರ್ಕಾರಕ್ಕೆ ಸೂಕ್ತವಾದ ನೈತಿಕ ಹಿನ್ನೆಲೆ ಇದೆ ಸರ್ಕಾರಕ್ಕೆ ದಿಟ್ಟತನವಿದೆ ಎನ್ನುವ ಮಾತನ್ನು ನಾನು ವಿರೋಧ ಪಕ್ಷದವರಿಗೆ ತಿಳಿಸುತ್ತಿದ್ದೇನೆ. ಖಾದಿ ಬೋರ್ಡಿನಲ್ಲಿ ನಡೆದಿರತಕ್ಕ ಅವ್ಯವಹಾರಗಳಿಗೆ ಸರ್ಕಾರ ಕಿಂಚಿತ್ತೂ ಕಾರಣವಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಈ ಸಭೆಯಲ್ಲಿ ಹೇಳುತ್ತೇನೆ. ಆದರೆ ನೈತಿಕವಾಗಿ ಸರ್ಕಾರದಿಂದ ಎಷ್ಟರಮಟ್ಟಿಗೆ ಖಾದಿ ಬೋರ್ಡಿನ ವ್ಯವಹಾರವನ್ನು ಸುವ್ಯವಸ್ಥೆಯಿಂದ ನಡೆಸುವದಕ್ಕೆ ವ್ಯವಸ್ಥೆ ಮಾಡಬಹುದೋ ಅದನ್ನು ಮಾಡುವುದಕ್ಕೆ ಸಾಧ್ಯವೆಂದು ನಾನು ಹೇಳುತ್ತೇನೆ.

ಎಲೆಕ್ಟ್ರಿಸಿಟಿ ಬೋರ್ಡಿನ ವಿಷಯ ಸಾಕಾದಷ್ಟು ಚರ್ಚೆಯಾಗಿದೆ. ಇವತ್ತಿನ ದಿವಸ ದೇಶದಾದ್ಯಂತ ನೂರಾರು, ಸಹಸ್ರಾರು ಗ್ರಾಮಗಳಲ್ಲಿ ವಿದುಚ್ಛಕ್ತಿಯನ್ನು ಅನೇಕ ಕೈಗಾರಿಕೆಗಳಿಗೆ ಮತ್ತು ಇನ್ನೂ ವಿವಿಧ ವ್ಯವಸಾಯದ ಉದ್ಯಮಗಳಿಗೆ ಕೊಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡಿನವರು ಮಾಡಿರತಕ್ಕ ಸ್ತುತ್ಯ ಕಾರ್ಯವನ್ನು ವಿರೋಧ ಪಕ್ಷದವರು ನಿಷ್ಪಕ್ಷಪಾತ ಬುದ್ಧಿಯಿಂದ ನೋಡಲಿಲ್ಲ ಎಂದು ಅವರ ವಿಷಯದಲ್ಲಿ ವಿಷಾದ ಪಡುತ್ತೇನೆ.

ಕೊನೆಯದಾಗಿ ಇವತ್ತು ವಿರೋಧ ಪಕ್ಷದವರು ಕಾಮರಾಜ ಪ್ಲಾನ್ ಬಗ್ಗೆ ಬಹಳ ಆಸ್ಥೆ ವಹಿಸಿ ಜವಾಬ್ದಾರಿ ತೆಗೆದುಕೊಂಡು ಮಾತನಾಡಿದ್ದಾರೆ. ಕಾಮರಾಜ ಪ್ಲಾನ್ ಜಾರಿ ಮಾಡುವುದನ್ನು ವಿರೋಧ ಪಕ್ಷದವರ ಉಪದೇಶದಿಂದ ನಾವು ಇಂದು ಮಾಡಬೇಕಾಗಿಲ್ಲ. ಕಾಂಗ್ರೆಸ್ಸಿಗರು ಇಂದು ಅಧಿಕಾರ ಬಿಟ್ಟು ತ್ಯಾಗ ಮಾಡಿ ಸಂಸ್ಥೆಯಲ್ಲಿ ಸೇರಿಕೊಂಡು ದೇಶ ಸೇವೆ ಮಾಡಲು ಯಾವಾಗಲೂ ತಯಾರಾಗಿದ್ದಾರೆ. ತ್ಯಾಗಮಾಡಲು ಅತಿರಥಿ ಮಹಾರಥಿಗಳು ಮುಖ್ಯಮಂತ್ರಿಗಳು ಮುಂದೆ ಬಂದಿದ್ದಾರೆ. ಕಾಮರಾಜ ಪ್ಲಾನ್ ಜಾರಿಮಾಡಲು ನಮ್ಮ ಮುಖ್ಯಮಂತ್ರಿಗಳು ಹಿಂದೆ ಬೀಳತಕ್ಕಂಥವರಲ್ಲ. ಪೂರ್ಣ ಜವಾಬ್ದಾರಿಯಿಂದ ದೇಶದ ಹಿತದೃಷ್ಟಿಯಿಂದ ಎಂಥ ತ್ಯಾಗವನ್ನಾದರೂ ಮಾಡಲು ಸಿದ್ಧರಿದ್ದಾರೆ. ಅದಕ್ಕೆ ವಿರೋಧ ಪಕ್ಷದ ನಿಮ್ಮ ಉಪದೇಶ ನಮಗೆ ಬೇಕಾಗಿಲ್ಲ ಎಂದು ನಮ್ರತೆಯಿಂದ ಸೂಚಿಸುತ್ತೇನೆ. ಕಾಂಗ್ರೆಸ್ಸಿನವರು ಅಧಿಕಾರ ಪಡೆದು ಕಳೆದ 16 ವರ್ಷಗಳಲ್ಲಿ ಅನೇಕ ಮಹಾಕಾರ್ಯಗಳನ್ನು ಮಾಡಿದ್ದಾರೆ. ಮಹಾ ಕಾರ್ಯ ಮಾಡುವಾಗ್ಗೆ ಲೋಪದೋಷಗಳು ಬರಬಹುದು. ಯಾವಾಗಲೂ ನಡೆಯುವವರು ಎಡವುತ್ತಾರೆ. ಕೂತುಕೊಂಡವರು ಎಡವುದಿಲ್ಲ. ಪ್ರಜಾಸೇವೆಗಾಗಿ ಕಾಂಗ್ರೆಸ್ ಜನರು ಸೇವಾ ನಿಷ್ಠರಾಗಿದ್ದಾರೆ. ಇದನ್ನು ವಿರೋಧ ಪಕ್ಷದವರು ಅರ್ಥಮಾಡಿಕೊಳ್ಳಬೇಕು. ಎದುರು ಪಕ್ಷದವರು ಇದನ್ನು ಮರೆತು ಮನಸ್ಸಿನಲ್ಲಿ ತಪ್ಪು ಭಾವನೆ ಇಟ್ಟುಕೊಂಡು ಸಂಕುಚಿತ ದೃಷ್ಟಿಯಿಂದ ಸಣ್ಣದು ಇದ್ದುದನ್ನು ದೊಡ್ಡದುಮಾಡಿ ಹೇಳುವುದು ಒಳ್ಳೆಯ ಕೆಲಸವಲ್ಲ. ಇದನ್ನು ಯಾರೂ ಮೆಚ್ಚಲಾರರು ಎಂದು ಸೂಚಿಸುತ್ತೇನೆ. ಕೊನೆಯದಾಗಿ ಒಂದು ಮಾತು ಹೇಳುತ್ತೇನೆ ಹಿಂದೆ ಹಳೇ ಮೈಸೂರಿನಲ್ಲಿ ಶ್ರೀ ಕೆ. ಸಿ. ರೆಡ್ಡಿಯವರ ಕಾಲದಲ್ಲಿ ಒಂದು ನಿರ್ಣಯ ಚರ್ಚೆಗೆ ಬಂದು ಒಂಭತ್ತು ಗಂಟೆ ಕಾಲ ಚರ್ಚೆ ಸಭೆಯಲ್ಲಿ ನಡೆಯಿತು. ಆಗ ಅವರು ಸಮಾಧಾನಕರವಾದ ಉತ್ತರ ಕೊಟ್ಟು ವಿರೋಧ ಪಕ್ಷಕ್ಕೆ ತಿಳಿಸಿ ಹೇಳಿದ್ದಾರೆ.' There is democracy; there is ballot box; there is leadership. ಪ್ರಜಾಪ್ರಭುತ್ವ ಇದೆ, ಓಟಿನ ಪೆಟ್ಟಿಗೆ ಇದೆ, ನಾಯಕತ್ವ ಇದೆ. ದೇಶದಲ್ಲಿ ಇಂದು ನಿಮಗೆ ಪ್ರಜೆಗಳ ಪ್ರೇಮ, ವಿಶ್ವಾಸ ಸೂರೆಗೊಳ್ಳತಕ್ಕಂಥ ಸಾಮರ್ಥ್ಯ ಇದ್ದರೆ ಚುನಾವಣೆಯಲ್ಲಿ ಆರಿಸಿ ಬಂದು ಸರಕಾರ ನಡೆಸಬೇಕು ಎಂಬ ಮಾತನ್ನು ಶ್ರೀಮಾನ್ ರೆಡ್ಡಿಯವರು ತಿಳಿಸಿದ್ದಾರೆ. ಅದೇ ಮಾತನ್ನು ನಾನು ಈಗ ಪುನಃ ವಿರೋಧ ಪಕ್ಷದವರಿಗೆ ಹೇಳುತ್ತೇನೆ. ನಾಯಕತ್ವ ಇದೆ, ಓಟಿನ ಪೆಟ್ಟಿಗೆ ಇದೆ, ಪ್ರಜಾಪ್ರಭುತ್ವ ಇದೆ ಜನರ ವಿಶ್ವಾಸ ಇದ್ದರೆ ಅಧಿಕಾರಕ್ಕೆ ಬಂದು ಸರಕಾರ ನಡೆಸಬಹುದು. ನಾವು ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದೇವೆ. ನಿಜವಾಗಿಯೂ ನಿಮಗೆ ಮುಖಂಡತ್ವ ಇದ್ದರೆ ಜನತ ಮುಂದೆ ಹೋಗಿ ಇಂಥ ಕೆಲಸ ಮಾಡಬೇಕು ಎಂದು ಹೇಳಬೇಕು. ಕೇವಲ ಕ್ಷುಲ್ಲಕ ಕಾರಣಗಳ ಸಲುವಾಗಿ ಸರಕಾರ ರಾಜೀನಾಮೆ ಕೊಡಬೇಕು ಎಂದು ಹೇಳುವುದರಿಂದ ನಿಮ್ಮ ವಿರೋಧ ಪಕ್ಷ ಬೆಳೆಯುವುದಿಲ್ಲ, ನಿಮ್ಮ ಮುಖಂಡತ್ವ ಬೆಳೆಯುವುದಿಲ್ಲ ಎಂದು ಹೇಳಿ ಈ ಅವಿಶ್ವಾಸ ನಿರ್ಣಯ ಸಂಪೂರ್ಣವಾಗಿ ವಿರೋಧಿಸಿ ನನ್ನ ನಾಲ್ಕು ಮಾತು ಮುಗಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಈ ಚರ್ಚೆಯಲ್ಲಿ ಮಧ್ಯೆ ಭಾಗವಹಿಸಿ ಮಾತನಾಡಿದ ಮಾನ್ಯ ರೆವೆನ್ಯೂ ಮಂತ್ರಿಗಳು ಮಾತನಾಡುತ್ತಾ ಕೆಲವು ಸ್ವಾರಸ್ಯವಾದ ಸಂಗತಿಗಳನ್ನು ತಿಳಿಸಿದರು. ಅವಿಶ್ವಾಸ ನಿರ್ಣಯ ಒಂದು ಬ್ರಹ್ಮಾಸ್ತ್ರ; ಇಂಥ ಮಹತ್ವದ ಅವಿಶ್ವಾಸ ನಿರ್ಣಯವೆಂಬ ಬ್ರಹ್ಮಾಸ್ತ್ರ ವಿರೋಧ ಪಕ್ಷದ ಕೈಯಲ್ಲಿ ಇರುವುದನ್ನು ಯಾವ ಸಂದರ್ಭದಲ್ಲಿ ತರಬೇಕು ಹೇಗೆ ಉಪಯೋಗಿಸಬೇಕು ಎಂಬುದು ವಿರೋಧ ಪಕ್ಷದವರಿಗೆ ಗೊತ್ತಿಲ್ಲ ಎಂದು ಉಪದೇಶ ಕೊಟ್ಟರು. ನಾನು ಅವರಿಗೆ ಹೇಳುವುದು ಇಷ್ಟೇ. ಯಾವ ಸಂದರ್ಭದಲ್ಲಿ ಅವಿಶ್ವಾಸ ನಿರ್ಣಯ ತರಬೇಕು ಯಾವ ನಿರ್ಣಯ ಯಾರು ತರಬೇಕು ಎನ್ನುವುದು ವಿರೋಧ ಪಕ್ಷಕ್ಕೆ ಸೇರಿದ್ದೇ ವಿನಃ ನಾವು ಇನ್ನೊಬ್ಬ ಮಂತ್ರಿಯನ್ನು ಕೇಳಿ ತರಬೇಕಾದ ಅವಶ್ಯಕತೆ ಇಲ್ಲ ಎಂದು ತಮ್ಮ ಮೂಲಕ ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಅವರು ಇನ್ನೊಂದು ಸ್ವಾರಸ್ಯವಾದ ವಿಷಯ ತಿಳಿಸಿದರು. ಶರಾವತಿ ಬಗ್ಗೆ ಏನಾದರೂ ಮಾತನಾಡಿದರೆ ಕೇಂದ್ರ ಸರಕಾರ ಸಂದೇಹಪಟ್ಟುಕೊಂಡರೆ ಹಣ ಸಹಾಯ ನಿಲ್ಲಿಸುತ್ತಾರೆ ಎಂದು ಹೇಳಿದರು. ಇದನ್ನು ನೋಡಿದರೆ ಅವರ ಎಲೆಕ್ಷನ್ ಭಾಷಣಗಳು ಜ್ಞಾಪಕಕ್ಕೆ ಬರುತ್ತವೆ. ಎಲೆಕ್ಷನ್‌ನಲ್ಲಿ ವಿರೋಧ ಪಕ್ಷದಮೇಲೆ ಆರೋಪ ಮಾಡುತ್ತಾ, ಕಾಂಗ್ರೆಸ್ಸಿಗೆ ಓಟು ಕೊಡದಿದ್ದರೆ ನಿಮ್ಮ ಊರಿನಲ್ಲಿ ಮೋರಿ ಆಗುವುದಿಲ್ಲ, ಕೆರೆ ಆಗುವುದಿಲ್ಲ ಎಂದು ಹೇಳಿದ ಹಾಗೆ ಇದೆ. ಅವರ ಭಾಷಣ ಶರಾವತಿ ಯೋಜನೆಯಲ್ಲಿ ಅನೇಕ ಲೋಪದೋಷಗಳು ಆಗಿವೆ, ಅವುಗಳನ್ನು ಸರಿಪಡಿಸಬೇಕು, ಜ್ಯುಡಿಷಿಯಲ್ ಎನ್‌ಕ್ವಯರಿ ಮಾಡಬೇಕು ಎಂದು ಹೇಳಿದರೆ ಕೇಂದ್ರ ಸರಕಾರ ಹಣ ಕೊಡುವುದಿಲ್ಲ ಎಂದು ಹೇಳುತ್ತಾರೆ. ಇದು ಎಲೆಕ್ಷನ್ ಭಾಷಣವೇ ವಿನಾ ಅಸೆಂಬ್ಲಿಯಲ್ಲಿ ಮಾಡತಕ್ಕ ಭಾಷಣವಲ್ಲ ಎಂದು ಬಹಳ ವಿಷಾದದಿಂದ ತಿಳಿಸುತ್ತೇನೆ. ಅವರು ಇನ್ನೊಂದು ವಿಷಯ ಹೇಳಿದ್ದನ್ನೇ ಹೇಳುತ್ತಾರೆ. ಕೆನಡಾ, ಅಮೇರಿಕಾ, ರಸಿಯಾ, ಚೈನಾ, ಜಪಾನ್ ಮುಂತಾದ ಅನೇಕ ದೇಶಗಳಿಗೆ ಹೋಗಿ ಬಂದಿದ್ದೇನೆ ಎಂದು ಹೇಳುತ್ತಾರೆ. ಜರ್ಸಿ ಬುಲ್ ಬಗ್ಗೆ ಅಂತೂ ಮೇಲಿಂದ ಮೇಲೆ ಹೇಳುತ್ತಲೇ ಇರುತ್ತಾರೆ. ಅವರು ಜರ್ಸಿ ಬುಲ್ ಪರಿಣತರಾಗಿದ್ದಾರೆ. ಹತ್ತಾರು ಸಲ ಪರದೇಶಗಳಿಗೆ ಹೋಗಿ ಬಂದಿದ್ದೇನೆ ಎಂದು ಹೇಳುವುದನ್ನು ಬರೆಸಿ ಅಚ್ಚು ಹಾಕಿಸಿ ಸದಸ್ಯರಿಗೆ ಕೊಟ್ಟರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಪ್ರತಿಯೊಂದು ಭಾಷಣದಲ್ಲಿ ಜರ್ಸಿ ಬುಲ್, ಡೈರಿ ಫಾರ್ಮ್ ಈ ವಿಷಯಗಳನ್ನು ಹೇಳುತ್ತಾರೆ. ಆದರೆ ಬೇರೆ ವಿಷಯವೇನೂ ಹೇಳುವುದಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು ಹೇಳಿದರು 'ನಮಗೆ ಬಹುಮತದ ಬೆಂಬಲ ಇದೆ ಎಂದು. ಬಹುಮತ ಇರುವ ಪಕ್ಷ ಅಧಿಕಾರಕ್ಕೆ ಬರುತ್ತದೆ ಇನ್ನೊಂದು ಪಕ್ಷ ಅಧಿಕಾರಕ್ಕೆ ಬರುವುದಿಲ್ಲ.'' ಇದು ಸುಲಭವಾದ ಪ್ರಶ್ನೆಯಲ್ಲ. ಇದಕ್ಕೆ ಸಾಕ್ಷಿಯಾಗಿ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಹನುಮಂತಯ್ಯನವರು ಒಂದು ಮಾತು ಹೇಳಿದ್ದಾರೆ.'' ಒಂದೆರಡು ಲಕ್ಷ ರೂಪಾಯಿ ಖರ್ಚು ಮಾಡಿದರೆ ಮುಖ್ಯಮಂತ್ರಿಯಾಗಬಹುದು; ಕೋಟಿ ಹಣ ಖರ್ಚುಮಾಡಿದರೆ ಪ್ರಧಾನಮಂತ್ರಿಯಾಗಬಹುದು. ಹಣವಿದ್ದರೆ ಮಾತ್ರ ಚುನಾವಣೆಯಲ್ಲಿ ಜಯ ಸಂಪಾದನೆ ಮಾಡಬಹುದು. ಇಂದು ಬಹುಮತ ಇರಬಹುದು ನಾಳೆ ಅಲ್ಪ ಸಂಖ್ಯೆಯಾಗಬಹುದು. ವಿರೋಧ ಪಕ್ಷದವರು ಬಹುಮತ ಪಡೆಯಲು ಪ್ರಯತ್ನ ಮಾಡುತ್ತಿದ್ದೇವೆ. ಆದರೆ ನಿಮ್ಮ ಕೈಯಲ್ಲಿ ಅಧಿಕಾರ ಇದೆ ದುಡ್ಡು ಇದೆ, ಟ್ರಸ್ಟ್‌ಬೋರ್ಡು ಇದೆ ಯಾರಿಗೆ ಬೇಕೋ ಅವರಿಗೆ ಸೈಟು ಕೊಡುತ್ತೀರಿ, ನಿಮ್ಮ ಕೈಯಲ್ಲಿ ಹಣ ಇದೆ. ಹಣ ಇರುವುದರಿಂದ ಎಲ್ಲಾ ಕೆಲಸಗಳು ಆಗುತ್ತಿವೆ. ನಿಮ್ಮ ಹತ್ತಿರ ಹಣವಿಲ್ಲದೇ ಹೋಗಿದ್ದರೆ ಚುನಾವಣೆಯಲ್ಲಿ ಈ ಸಭೆಯ 30 ಸೀಟುಗಳು ಸಹ ದೊರಕುತ್ತಿರಲಿಲ್ಲ. ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದರಿಂದ ಈ ಸ್ಥಾನಕ್ಕೆ ಬಂದಿದ್ದೀರಿ. ಜನರಿಗೆ ನಿಮ್ಮಲ್ಲಿ ವಿಶ್ವಾಸ ಇಲ್ಲ. ಅವರು ಇದನ್ನು ತಿಳಿದುಕೊಂಡರೆ ಒಳ್ಳೆಯದು ಎಂದು ತಿಳಿಸುತ್ತೇನೆ, ಈ ಅವಿಶ್ವಾಸ ನಿರ್ಣಯ ತರುವುದಕ್ಕೆ ಅನೇಕ ಕಾರಣಗಳಿವೆ. ಮುಖ್ಯಮಂತ್ರಿಗಳ ಧೋರಣೆಯೂ ಒಂದು ಮುಖ್ಯ ಕಾರಣವಾಗಿದೆ; ಅವರನ್ನು ನೋಡಿದರೆ ನನಗೆ ಅವರ ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷದ ನಾಯಕರಲ್ಲಿ ಒಂದು ದೊಡ್ಡ ಅವಿಭಕ್ತ ಕುಟುಂಬದ ಯಜಮಾನರ ರೀತಿಯಲ್ಲಿ ಕಾಣುತ್ತಾರೆ. ಅವರ ಸರ್ಕಾರದಲ್ಲಿ ಯಾರು ಬೇಕಾದರೂ ಮಂತ್ರಿಗಳಾಗಬಹುದು. ಮಂತ್ರಿಗಳ ಕೆಲಸ ಅವರಿಗೆ ಬೇಕಾದವರಿಗೆ ಉದ್ಯೋಗ ಕೊಡಿಸುವುದು. ತಮ್ಮವರಿಗೆ ಸೈಟ್ ಕೊಡಿಸುವುದು. ಅವರನ್ನು ಮುಖ್ಯಮಂತ್ರಿಗಳಾಗಿ ಇಟ್ಟುಕೊಂಡು ಕನ್ನಡ ದೇಶದ ಯಜಮಾನರೆಂದು ಒಪ್ಪಿಕೊಂಡುಬಿಟ್ಟರೆ ಸಾಕು. ಅವರು ಪಾರ್ಟಿಯಲ್ಲಿ ಇದನ್ನು ಒಪ್ಪಿಕೊಂಡು ಬಿಟ್ಟರೆ ಸಾಕು. ಇವತ್ತಿನ ದಿವಸ ಈ ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂಬುದು ಅವರಿಗೆ ಗೊತ್ತಿಲ್ಲ. ಚೀಫ್ ಎಂಜಿನಿಯರ್ ಆಫೀಸಿನಲ್ಲಿ ಒಂದು ಟ್ರಾನ್ಸ್‌ಫರ್ ಮಾಡುವುದಕ್ಕೆ ಒಂದು ಸಾವಿರ ರೂಪಾಯಿ ಕೊಡಬೇಕಾಗುತ್ತದೆ.

ಇಂತಹ ವಿಷಯಗಳು ಮುಖ್ಯಮಂತ್ರಿಯವರಿಗೆ ಬಹಳ ಸಣ್ಣ ವಿಷಯಗಳು. ಈ ದಿವಸ ಅವರ ಮಂತ್ರಿಮಂಡಲದಲ್ಲಿ ಎಷ್ಟು ಜನ ಪ್ರೊಫ್ಯುಮೋಗಳು ಇದ್ದಾರೆ—ಅಂತಹ ಪ್ರಕರಣಗಳಲ್ಲಿ ನಿರತರಾಗಿರತಕ್ಕ ಜನ ಇದ್ದಾರೆ ಯಾರ್ಯಾರು ಆ ಜನ ಎಂಬುದನ್ನು ಅವರೆ ನೋಡಲಿ (ನಗು ;) ಅವರು

ಎಲ್ಲಾ ಅಧಿಕಾರಿಗಳಿಗೂ ಕೂಡ ಒಂದು ಸರ್ಕ್ಯುಲರ್‌ನ್ನು ಕಳುಹಿಸಿದ್ದಾರೆ ಅದೇನೆಂದರೆ ಅಧಿಕಾರಿಗಳೇ ನೀವೆಲ್ಲಾ ಬಹಳ ಹಣ ಮಾಡಿದ್ದೀರಿ ಎಂದು ಗೊತ್ತಾಗಿದೆ, ಎಷ್ಟು ಹಣ ಮಾಡಿದ್ದೀರಿ, ನಿಮ್ಮ ಆಸ್ತಿ ಮೊದಲು ಎಷ್ಟಿತ್ತು ಈಗ ಎಷ್ಟಿದೆ ಎಂಬ ವಿವರವನ್ನು ಕೊಡಿ ಎಂದು ಹೇಳಿದ್ದಾರೆ, ವಿರೋಧ ಪಕ್ಷದ ನಾಯಕರು ಮತ್ತು ಈ ಭಾಗದ ಬಹು ಮಂದಿ ಸದಸ್ಯರು ಮುಖ್ಯಮಂತ್ರಿಗಳನ್ನು ಹತ್ತಾರು ಸಾರಿ ಕೇಳಿದ್ದೇವೆ ಏನೆಂದರೆ ಈ ಕಾಂಗ್ರೆಸ್‌ನವರು ಮಂತ್ರಿಗಳಾಗುವುದಕ್ಕೆ ಮೊದಲು, ಈ ಶಾಸನ ಸಭೆಗೆ ಸದಸ್ಯರಾಗಿ ಬರುವುದಕ್ಕೆ ಮೊದಲು ಅವರಿಗೆ ಎಷ್ಟು ಆಸ್ತಿ ಇತ್ತು ಈಗ ಎಷ್ಟಿದೆ ಎಂಬುದನ್ನು ಬಹಿರಂಗವಾಗಿ ಹೇಳಿಕೆ ಕೊಡಿ ಎಂದು ಕೇಳುತ್ತಾ ಇದ್ದೇವೆ, ಸ್ವತಂತ್ರ ಸದಸ್ಯರಿಗೂ ಕೂಡ ಕೇಳಿ ಯಾರು ಬೇಡ ಎನ್ನುತ್ತಾರೆ ಆದರೆ. ಇಂಥಾದ್ದನ್ನೆಲ್ಲಾ ಕೇಳಿದರೆ ಮುಖ್ಯಮಂತ್ರಿಗಳು ಇದು ಸಣ್ಣ ವಿಷಯ." ಏನೇನೋ ಮಾತನಾಡಿಕೊಳ್ಳುತ್ತಾರೆ, ಇದೆಲ್ಲಾ ಏನು ಮಹಾ ದೊಡ್ಡ ವಿಷಯ ಎಂದು ಹೇಳುತ್ತಾರೆ. ಮಂತ್ರಿಗಳ ವಿಷಯ ತೆಗೆದುಕೊಂಡರೆ ಇಲ್ಲಿ 27 ಜನ ಮಂತ್ರಿಗಳಿದ್ದಾರೆ. ಮದರಾಸಿನಲ್ಲಿ 3 ಕೋಟಿ 20 ಲಕ್ಷ ಜನ ಇದ್ದಾರೆ. ಅಲ್ಲಿ ಬರೀ 8 ಜನ ಮಂತ್ರಿಗಳಿದ್ದಾರೆ. ಇದೇ ರೀತಿ ಬಂಗಾಳದಲ್ಲಿ, ಉತ್ತರ ಪ್ರದೇಶದಲ್ಲಿ ಎಲ್ಲಾ ಕಡೆಯಲ್ಲೂ ಮಂತ್ರಿಗಳ ಸಂಖ್ಯೆಯನ್ನು ಕಡಿಮೆ ಮಾಡಿದ್ದಾರೆ ನೀವೂ ಕೂಡ ಅದೇ ರೀತಿ ಮಾಡಿ ಎಂದಾಗ ಮುಖ್ಯಮಂತ್ರಿಗಳು ಉತ್ತರ ಕೊಟ್ಟದ್ದು ದಿನಕ್ಕೆ ಒಂದು ಸಾರಿ ನನಗೆ ಜ್ಞಾಪಕಕ್ಕೆ ಬರುತ್ತದೆ, ಅದೇನೆಂದರೆ "100 ಕೋಟಿ ರೂಪಾಯಿ ಆದಾಯ ಬರತಕ್ಕ ಕನ್ನಡ ರಾಜ್ಯದಲ್ಲಿ 10 ಲಕ್ಷ ರೂಪಾಯಿ ಮಂತ್ರಿಗಳಿಗೆ ಖರ್ಚು ಮಾಡಿದರೆ ಏನು ದೊಡ್ಡ ವಿಷಯ" ಎಂದು ಹೇಳಿದರು. ಲಕ್ಷ ಅವರಿಗೆ ಅಲಕ್ಷ್ಯವಾಗಿದೆ. ನಮ್ಮ ಮುಖ್ಯಮಂತ್ರಿಗಳ ಮೇಲೆ ತುರ್ತುಪರಿಸ್ಥಿತಿ ಏನೇನೂ ಪರಿಣಾಮ ಮಾಡಿಲ್ಲ ಎಂದು ನನಗೆ ಅನಿಸುತ್ತದೆ. ಅವರು ಈ ಕರ್ನಾಟಕ ಸಾಮ್ರಾಜ್ಯದಲ್ಲಿ ಸಾರ್ವಭೌಮರಾಗಿ ಅಲ್ಲಿ ಮುಖ್ಯಮಂತ್ರಿಗಳಾಗಿ ಮುಂದುವರಿಯುವುದಕ್ಕೆ ಏನುಬೇಕಾದರೂ ಮಾಡುವುದಕ್ಕೆ ತಯಾರಾಗಿದ್ದಾರೆ, ಕಾಮರಾಜ್ ಪ್ಲಾನ್‌ನನ್ನು ಕಡೆಗಣಿಸುವುದಕ್ಕೂ ತಯಾರಾಗಿದ್ದಾರೆ, ವಿರೋಧ ಪಕ್ಷದವರು ಏನಾದರೂ ಹೇಳಿದರೆ ಅದೇನು ಮಹಾ ವಿಷಯ ಬಿಡ್ರಿ ಎಂದು ಹೇಳುವುದಕ್ಕೂ ತಯಾರಾಗಿದ್ದಾರೆ, ತುರ್ತು ಪರಿಸ್ಥಿತಿ ಎಂದರೆ ಅರ್ಥವೇನು? ಈ ಕಡೆ ಪಾಕೀಸ್ತಾನ ಆ ಕಡೆ ಚೈನಾ ಎರಡು ಕಡೆಗಳಿಂದಲೂ ಗಂಡಾಂತರ ಸಂಭವಿಸಿದೆ ಇಂಥಾ ಪರಿಸ್ಥಿತಿಯಲ್ಲಿ ಸರ್ಕಾರದ ಹಣ ಮಿತವ್ಯಯವಾಗಿ ಖರ್ಚುಮಾಡಲು ಸಲಹೆ ಕೊಟ್ಟರೆ, ಈ ರೀತಿ ನಿರ್ಲಕ್ಷ್ಯ ಮಾಡುವುದನ್ನು ನೋಡಿದರೆ ಇದಕ್ಕಿಂತಲೂ ವಿಷಾದ ಪಡಬೇಕಾದ ಸಂಗತಿ ಬೇರೊಂದಿಲ್ಲ ಎಂದು ನನಗಾದರೂ ಅನಿಸುತ್ತದೆ.

ಇನ್ನೊಂದು ವಿಷಯ ಎಂದರೆ ಜನರಲ್ ಅಡ್ಮಿನಿಸ್ಟ್ರೇಷನ್ ಪೋರ್ಟ್‌ಫೋಲಿಯೋ ಅವರ ಕೈಯಲ್ಲಿ ಇದೆ, ಹೊಸ ಸರ್ಕಾರ ಬಂದು ಒಂದೂವರೆ ವರ್ಷವಾದರೂ ಕೂಡ ಇದುವರೆಗೂ ಹತ್ತಾರು ಇಲಾಖೆಗಳಲ್ಲಿರತಕ್ಕ ನೂರಾರು ಜನ ಕ್ಲಾಸ್ ಸೆಕೆಂಡ್ ಮತ್ತು ಇತರ ಹುದ್ದೆಗಳನ್ನು ಭರ್ತಿ ಮಾಡದೆ ಎಲ್ಲಾ ಇನ್‌ಚಾರ್ಜ್‌ನಲ್ಲಿ ನಡೆಯುತ್ತಾ ಇದೆ, ಈ ಹುದ್ದೆಗಳಿಗೆ ನೇಮಕ ಮಾಡಲು ಎಷ್ಟು ಜನ ಬೇಕು, ಯಾರು ಬರುವುದಕ್ಕೆ ತಡ ಮಾಡುತ್ತಾ ಇದ್ದಾರೆ ಎಂದು ತಮ್ಮ ಮೂಲಕ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. 1-2-3-4 ವರ್ಷದಿಂದ ಇನ್‌ಚಾರ್ಜ್ ಆಗಿಯೇ ಅಧಿಕಾರಿಗಳು ಕೆಲಸ ಮಾಡುತ್ತ ಇರುವುದು ನನಗೆ ಗೊತ್ತಿದೆ, ಹೀಗೆ ಏಕೆ ಮಾಡುತ್ತಾ ಇದ್ದಾರೆ? ಕಾರಣವೇನು ?

ಇನ್ನೊಂದು ವಿಷಯವೇನೆಂದರೆ ದೇಶದಲ್ಲಿ ಭೂಸುಧಾರಣೆಯನ್ನು ತಂದಿದ್ದೀರಿ; ಕಾನೂನನ್ನು ಪಾಸ್ ಮಾಡಿದ್ದೀರಿ ಅದನ್ನು ಜಾರಿಗೆ ತರುವುದಕ್ಕೆ ಕಷ್ಟವಾಗಿದೆ ಎಂಬುದಕ್ಕೆ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಉತ್ತರ ಹೇಳಿದರು, ಕೆಲವು ಪ್ರದೇಶಗಳಲ್ಲಿ ಅವನ್ನು ಜಾರಿಗೆ ತರುವುದಕ್ಕೆ ಕಷ್ಟವಿದೆ, ಇತರ ಪ್ರದೇಶಗಳಲ್ಲಿ ಜಾರಿಗೆ ತರುವುದಕ್ಕೆ ಕಷ್ಟವೇನೂ ಇಲ್ಲ ಎಂದು ಹೇಳಿದ್ದಾರೆ, ನಿಜವಾಗಿಯೂ ಇದನ್ನು ಕಾರ್ಯಗತ ಮಾಡುವುದಕ್ಕೆ ನಿಮಗೆ ಮನಸ್ಸು ಇದ್ದರೆ ಕೇಂದ್ರದಲ್ಲಿ ಒತ್ತಾಯ ಮಾಡಿ ಜಾಗ್ರತೆ ತಿದ್ದುಪಡಿ ತರುವುದಕ್ಕೆ ಸಾಧ್ಯವಿದೆ ಹಾಗೆ ಮಾಡದೆ ಅವರಿಗೆ ಚುನಾವಣೆಯಲ್ಲಿ ಹಿಂಬಾಲಕರಾಗಿರುವ ಭೂಸ್ವಾಮಿಗಳು ಇನ್ನೂ ಒಂದೆರಡು ವರ್ಷಗಳ ಕಾಲ ಅದನ್ನು ಅನುಭವಿಸಲಿ ಎಂದು ಹೇಳಿ ಅವರಿಗೆ ಅವಕಾಶವನ್ನು ಮಾಡಿಕೊಡುತ್ತಾ ಇದ್ದಾರೆ. ಭೂ ಸ್ವಾಮಿಗಳು ಆ ಭೂಮಿಯನ್ನೆಲ್ಲಾ ಅವರ ಮಕ್ಕಳು ಮೊಮ್ಮೊಕ್ಕಳ ಹೆಸರಿಗೆ ಬರೆಸಿ ಭೂಸುಧಾರಣೆ ಪರಿಣಾಮವಾಗದ ಹಾಗೆ ಮಾಡಲು ನೀವೇ ತಡಮಾಡುತ್ತಾ ಇದ್ದೀರಿ ಎಂದು ಈ ದಿವಸ ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ಹೇಳಬಯಸುತ್ತೇನೆ. ಇನಾಂ ರದ್ದಿಯಾತಿ ಕಾನೂನನ್ನು ಜಾರಿಗೆ ತಂದಿದ್ದರೂ ಕೂಡ ಇನಾಂಗಳನ್ನು ರದ್ದುಗೊಳಿಸುವುದಕ್ಕೆ ಬದಲಾಗಿ ಇನಾಂದಾರರ ಸ್ಥಿತಿಯನ್ನು ಉತ್ತಮಪಡಿಸುತ್ತಿದ್ದಾರೆ. ಸುಮಾರು 2,200 ಇನಾಂ ಗ್ರಾಮಗಳು ಹಳೇ ಮೈಸೂರು ಪ್ರದೇಶದಲ್ಲಿ ಇವೆ. ಈ ಕಾನೂನನ್ನು ಹೇಗೆ ಜಾರಿ ಮಾಡುತ್ತಾ ಇದ್ದಾರೆ ಎಂದರೆ ಒಬ್ಬೊಬ್ಬ ಡೆಪ್ಯೂಟಿ ಕಮೀಷನರು ಕನಿಷ್ಠ ಒಂದು ಲಕ್ಷ ರೂಪಾಯಿಗಳನ್ನು ಅನ್ಯಾಯವಾಗಿ ಸಂಪಾದನೆ ಮಾಡುತ್ತಾ ಇದ್ದಾರೆ. ಇನಾಂ ಅಬಾಲಿಷನ್ ಇಲಾಖೆಯಲ್ಲಿರತಕ್ಕ ಒಬ್ಬೊಬ್ಬ ಗುಮಾಸ್ತರು 20-30 ಸಾವಿರ ರೂಪಾಯಿಗಳ ಹಣ

(ಶ್ರೀ ಪಿ. ವೆಂಕಟಗಿರಿಯಪ್ಪ)

ವನ್ನು ಸಂಪಾದನೆ ಮಾಡಿದ್ದಾರೆ. ಇದರಬಗ್ಗೆ ಮುಖ್ಯ ಮಂತ್ರಿಗಳಿಗೆ ಕಾಗದ ಬರೆದು ಮಹಾಸ್ವಾಮಿ ಕನ್ನಡ ದೇಶದಲ್ಲಿ ಹೀಗೆಲ್ಲಾ ನಡೆಯುತ್ತಾ ಇದೆ, 3,000 ರೂಪಾಯಿ ಕಾಂಪೆನ್‌ಸೇಷನ್ ಕೊಡುವ ಕಾಲಕ್ಕೆ ಇನಾಂ ಆಫೀಸರುಗಳು ಅವರಿಂದ 3,000 ರೂಪಾಯಿಗಳನ್ನು ತೆಗೆದುಕೊಂಡು 30 ಸಾವಿರ ರೂಪಾಯಿಗಳನ್ನು ಕೊಡುತ್ತಾ ಇದ್ದಾರೆ, ಇಂತಹ ಪರಿಸ್ಥಿತಿ ಇದೆ ನೋಡಿ ಎಂದು ಈ ನಮ್ಮ ಕನ್ನಡ ರಾಜ್ಯದ ಸಾರ್ವಭೌಮರನ್ನು ಕೇಳಿಕೊಂಡೆ. ಅದಕ್ಕೆ ಅವರು ನನಗೆ ಒಂದು ಇಂಟರ್‌ವ್ಯೂ ಫಿಕ್ಸ್ ಮಾಡಿದರು. ಆ ದಿವಸ ನಾನು ಅವರ ಕಚೇರಿಗೆ ಹೋಗಿದ್ದೆ. ಅವರು ಇರಲಿಲ್ಲ. ಅವರ ಪರ್ಸನಲ್ ಅಸಿಸ್ಟೆಂಟರು ಇದ್ದರು. ಅವರು ಈ ದಿವಸ ಮುಖ್ಯಮಂತ್ರಿಗಳಿಗೆ ಬಹಳ ಕೆಲಸ ಇದೆ. ನಿಮಗೆ ಇನ್ನೊಂದು ತಾರೀಖನ್ನು ಕೊಡುತ್ತೇವೆ ಆಗ ಬನ್ನಿ ಎಂದರು. ಆಮೇಲೆ ಡೇಟ್ ಕೊಡುತ್ತಾರೆ ಎಂದು. ನಿಜವಾಗಿಯೂ ನಾನು ಕಾದಿದ್ದೆ ಇದುವರೆಗೂ ಇಂಟರ್‌ವ್ಯೂ ಕೊಡಲಿಲ್ಲ. ಮುಖ್ಯಮಂತ್ರಿಗಳ ದೃಷ್ಟಿಯಲ್ಲಿ ನಾನು ಬರೆದಂಥ ವಿಷಯ ಬಹಳ ಸಣ್ಣ ವಿಷಯ, ಅವರಿಗೆ ಎಷ್ಟೋ ದೊಡ್ಡ ವಿಷಯಗಳು ಇರುತ್ತವೆ, ಕಾಂಗ್ರೆಸ್ ಪಾರ್ಟಿಯಲ್ಲಿ ಅವರಿಗೆ ಯಾವ ವಿಧವಾದ ತೊಂದರೆಯೂ ಬರದಂತೆ ನೋಡಿ ಕೊಂಡು ಅವರ ಅಧಿಕಾರವನ್ನು ಕೇಂದ್ರೀಕರಿಸಿಕೊಳ್ಳುವ ಮಹತ್ತರ ಜವಾಬ್ದಾರಿ ಅವರಿಗೆ ಇರು ವುದರಿಂದ ನಾನು ಬರೆದ ಕಾಗದ ಬಹಳ ಸಣ್ಣ ವಿಷಯವಾಗಿ ಕಂಡಿರಬೇಕೆಂದು ನನಗೆ ಅನಿಸುತ್ತದೆ. ಇದರ ಬಗ್ಗೆ ಕಟುವಾಗಿ ಹೇಳುತ್ತೇನೆ ಈಗಲಾದರೂ ಕೂಡ ಸರ್ಕಾರದವರಿಗೆ ಧೈರ್ಯ ಇದ್ದರೆ ಇದರ ಬಗ್ಗೆ ಒಂದು ಪರಿಶೀಲನಾ ಸಮಿತಿಯನ್ನು ನೇಮಿಸಿ ಒರಿಜಿನಲ್ ಆಗಿ ಎಷ್ಟು ಪರಿಹಾರ ಹಣ ಸರ್ಕಾರ ಕೊಡಬೇಕೆಂದು ಯೋಚನೆ ಮಾಡಿತ್ತು. ಇವತ್ತು ಎಷ್ಟು ಹಣ ಇನಾಂ ಡೆಪ್ಯೂಟಿ ಕಮಿಷನರುಗಳು ಕೊಟ್ಟಿದ್ದಾರೆ ಎಂಬದನ್ನು ರೆವಿನ್ಯೂ ಮಂತ್ರಿಗಳು ನ್ಯಾಯಾಂಗ ಮಂತ್ರಿಗಳು ಪರೀಕ್ಷೆ ಮಾಡಿ ನೋಡಿ ನಾನು ಬೇಕಾದರೆ ತೋರಿಸುತ್ತೇನೆ, ಒಂದು ಊರಿನಲ್ಲಿ ಆ ಜಮೀನನ್ನು ಹರಾಜು ಮಾಡಿದರೆ 3,000 ರೂಪಾಯಿಗಳಿಗೆ ಯಾರೂ ತೆಗೆದುಕೊಳ್ಳುವುದಿಲ್ಲ ಅಂತಹ ಕಡೆ ಹುಣಸೇಮರ ಇದೆ ಕಲ್ಲುಬಂಡೆ ಇದೆ ಎಂದು ಹೇಳಿ ಯಾವುಯಾವುದೋ ಇಲ್ಲದ ಸಲ್ಲದ ರಸೀದಿ ಸೃಷ್ಟಿಮಾಡಿ ಮೂವತ್ತು ಸಾವಿರ ರೂಪಾಯಿ ಗಳನ್ನು ತೆಗೆದುಕೊಂಡ ನಿದರ್ಶನಗಳು ಇವೆ. ಇದನ್ನೆಲ್ಲಾ ನೋಡಿದರೆ ಏಕೆ ಇವರ ಮೇಲೆ ಅವಿಶ್ವಾಸ ನಿರ್ಣಯ ತರಬಾರದು? ಹೀಗೆಲ್ಲಾ ಮಾಡಬೇಡಿ, ನಿಂದನೆ ಮಾಡಬೇಡಿ, ನಾವು ಮಾಡುವುದು ಹೀಗೆಯೇ, ಇದೇ ಸರಿ. 27 ಜನ ಮಂತ್ರಿಗಳನ್ನು ಇಟ್ಟುಕೊಂಡು ಏನೋ ಎರಡು ದಿವಸ ಕಾಲ ಹಾಕುತ್ತೇವೆ ಎಂದು ಅವರು ಹೇಳಿದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ನಾವು ತಯಾರಾಗಿಲ್ಲ. ನಾವೂ ಕೂಡ ಜನಗಳಿಂದ ಆರಿಸಿ ಬಂದು ಅವರ ಪರವಾಗಿ ಈ ಕಾಂಗ್ರೆಸ್ ಸರ್ಕಾರ ಏನು ಮಾಡುತ್ತಾ ಇದೆ ಎಂಬದನ್ನು ದೇಶದ ಮುಂದೆ ಇಡಬೇಕಾಗಿದೆ. ಅದಕ್ಕಾಗಿಯೋ ಅವರು ನಮ್ಮನ್ನು ಕಳುಹಿಸಿದ್ದಾರೆ, ನಾವು ಈ ಕೆಲಸ ಮಾಡದೆ ಇದ್ದರೆ, ನಾವು ನಮ್ಮ ಜನಕ್ಕೆ ಅಪಕಾರ ಮಾಡಿದ ಹಾಗಾಗುತ್ತದೆ. ನಮ್ಮ ಕರ್ತವ್ಯ ಮಾಡಿದ ಹಾಗಾಗುವುದಿಲ್ಲ. ಆದ್ದರಿಂದ ನೀವು ಹೇಳುವ ಹಿತವಚನಗಳಿಗೆ ನಾವು ನಿಜ ವಾಗಿಯೂ ಕೂಡ ಮಾರುಹೋಗಿ ನಾವು ನಮಗೆ ಬೇಕಾದ್ದನ್ನು ಹೇಳದೇ ಇರುವುದಕ್ಕೆ ತಯಾರಾಗಿಲ್ಲ ಎಂಬದನ್ನು ಸ್ಪಷ್ಟಪಡಿಸುತ್ತೇನೆ.

11-30 A.M.

ಪಿ. ಡಬ್ಲ್ಯು. ಡಿ. ವಿಚಾರದಲ್ಲಿ ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಅದೇನೆಂದರೆ ದೊಡ್ಡ ದೊಡ್ಡ ಶ್ರೀಮಂತರ ಹುಡುಗಿಯರಿಗೆ ಲಗ್ನವಾಗಬೇಕಾಗಿದ್ದರೆ ಅವರಿಗೆ ಅಸಿಸ್ಟೆಂಟ್ ಇಂಜಿನಿಯರು ಗಳಾಗಿರತಕ್ಕ ವರಗಳೇ ಬೇಕಂತೆ. ಏಕೆಂದರೆ ಅವರಿಗೆ ಈ ಚೀಫ್ ಮಿನಿಸ್ಟರಿಗಿಂತ ಹೆಚ್ಚಿನ ಸಂಪಾದನೆ ಇರುತ್ತದೆಯಂತೆ. ಈ ಇಲಾಖೆಯಲ್ಲಿ ಎಗ್ಸಿಕ್ಯುಟೀವ್ ಇಂಜನಿಯರ ಸಂಪಾದನೆ ನಮ್ಮ ರಾಜ್ಯದ ಚೀಫ್ ಜಸ್ಟೀಸರ ಸಂಬಳಕ್ಕಿಂತಲೂ ಜಾಸ್ತಿ ಇರುತ್ತದಂತೆ. ಆದರೆ ಇದೇ ಸಂದರ್ಭದಲ್ಲಿ ನಾನು ನಮ್ಮ ಪಿ. ಡಬ್ಲ್ಯು. ಡಿ. ಮಂತ್ರಿಗಳಿಗೆ ಒಂದು ವಿಚಾರವನ್ನು ತಿಳಿಸಬೇಕಾಗಿದೆ. ನಮ್ಮ ಕೋಲಾರ ಜಿಲ್ಲೆಯ ಅಂದರೆ ಟೌನಿನ ಪಕ್ಕದಲ್ಲೇ ತಿರುಪತಿ ಎಂತ ಒಂದು ಬೆಟ್ಟ ಇದೆ. ಅಲ್ಲಿ ಹಿಂದಿನ ಮೈಸೂರು ಸರ್ಕಾರ ಒಂದು ದೊಡ್ಡ ಛತ್ರವನ್ನು ಕಟ್ಟಿಸಿದ್ದಾರೆ. ಈಗ ಅಲ್ಲಿ ಒಂದು ಸ್ಪೆಷಲ್ ಗೆಸ್ಟ್ ಹೌಸನ್ನೂ ಸಹಾ ಕಟ್ಟಿಸಿದ್ದಾರೆ. ಅಲ್ಲಿಗೆ ತಿರುಗಾಡಲು ಸರ್ಕಾರದವರೊಂದು ದೊಡ್ಡ ರಸ್ತೆಯನ್ನು ಮಾಡಿಸಿ ದ್ದಾರೆ. ಅಲ್ಲಿ ಮೊನ್ನೆ ತಾನೆ ಒಂದು ದೊಡ್ಡ ಸಮಾರಂಭವನ್ನು ಮಾಡಿದರು. ಆ ಸಮಾರಂಭಕ್ಕೆ ಈ ಇಲಾಖೆಯ ಮಂತ್ರಿಗಳೂ, ಎಲ್ಲಾ ಅಧಿಕಾರಿಗಳೂ, ಹಾಗೂ ನೌಕರರೂ ಹೋಗಿದ್ದರು. ಇವ ರೆಲ್ಲರೂ ಅಲ್ಲಿಗೆ ಈಗಿನ ಒಂದು ತುರ್ತುಪರಿಸ್ಥಿತಿ ಇಂದ ಹೋಗಿದ್ದರೆಂದು ಕಾಣುತ್ತದೆ. ಅಲ್ಲಿನ ಕೆಲಸಗಳನ್ನು ಮಾಡಿಸಲು 100 ರೂಪಾಯಿಗಳಿಗೆ ಆಗತಕ್ಕ ಕೆಲಸಕ್ಕೆ 180 ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದೇ ವಿಚಾರದಲ್ಲಿ ನಾನು ಒಂದು ಪ್ರಶ್ನೆಯನ್ನು ಕಳುಹಿಸಿ ಸ್ವಲ್ಪ ಗಲಾಟೆ ಮಾಡಿದ

ಮೇಲೆ ಮತ್ತೆ ಬೇರೆ ಟೆಂಡರುಗಳನ್ನು ಕರೆದು 100 ರೂಪಾಯಿನ ಕೆಲಸಕ್ಕೆ 115 ರೂಪಾಯಿಗಳ ಟೆಂಡರ್ ಬಂದಿದೆ. ಕೋಲಾರ ತಾಲ್ಲೂಕಿನ 5 ಸಾವಿರ ಪ್ರಜಾ ಸಂಖೆ ಇರುವ ಕ್ಯಾಲನೂರಿಗೆ ಒಂದು ರಸ್ತೆ ಅನುಕೂಲಮಾಡಿ ಕೊಡಿ ಎಂತ ಕೇಳಿದರೆ, ಈಗ ತುರ್ತುಪರಿಸ್ಥಿತಿ ಇರುವ ಕಾರಣ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ತಿರುಪತಿಯಲ್ಲಿ ಪಿ. ಡಬ್ಲ್ಯು. ಡಿ. ಇಲಾಖೆಯವರು, ಛತ್ರಕ್ಕೆ ಹೋಗುವ ರಸ್ತೆಯನ್ನು ಮಾಡಲು ತುರ್ತು ಪರಿಸ್ಥಿತಿ ಇಲ್ಲವೆ ಎಂದು ಕೇಳುತ್ತೇನೆ? ಇದನ್ನೆಲ್ಲಾ ನೋಡಿದರೆ ಈ ರಾಜ್ಯದಲ್ಲಿ ಯಾರಿಗೆ ಬಾಯಿ ಜೋರಾಗಿರುತ್ತದೋ ಅಂಥವರು ಮಾತ್ರ ಉಳಿಯುತ್ತಾರೆ, ಅಂತಹ ವರಿಗೆ ಮಾತ್ರ ಈ ರಾಜ್ಯ.

[MR. SPEAKER in the Chair.]

ನಮ್ಮ ಕೋಲಾರ ಜಿಲ್ಲೆಯಲ್ಲಿ ಕೆಲವು ದೊಡ್ಡ ದೊಡ್ಡ ಊರುಗಳಿಗೆ ರಸ್ತೆಗಳೇ ಇಲ್ಲ. ಆದರೆ ಮಂತ್ರಿಗಳಿರತಕ್ಕ ಊರುಗಳಾದರೆ ಅಂತಹ ರಸ್ತೆಗಳನ್ನು ಇಂಜಿನಿಯರಿಂಗ್ ಇಲಾಖೆ ಬಹು ಬೇಗ ಪಿ. ಡಬ್ಲ್ಯು. ಡಿ. ಗೆ ಸೇರಿಸಿಕೊಳ್ಳಲು ಒಪ್ಪುತ್ತದೆ. ಶ್ರೀ ಚಂಗಲರಾಯರೆಡ್ಡಿಯವರು ಅವರ ಊರಿನ ರಸ್ತೆಯನ್ನು 70-80 ಸಾವಿರ ರೂಪಾಯಿಗಳ ಖರ್ಚಿನಲ್ಲಿ ಮುಖ್ಯ ಮಂತ್ರಿಗಳಾಗಿದ್ದಾಗ ಮಾಡಿಸಿದರು. ಅದೇರೀತಿ ಶ್ರೀ ಎಂ. ವಿ. ಕೃಷ್ಣಪ್ಪನವರ ವಿಚಾರವೂ ಆಗಿದೆ. ಇಷ್ಟನ್ನು ಬಿಟ್ಟರೆ ಇನ್ನು ಜಿಲ್ಲೆಯಲ್ಲಿರತಕ್ಕ ಬಾಕಿ ತಾಲ್ಲೂಕ್ ಬೋರ್ಡ್ ಮೆಂಬರುಗಳೂ ಎಂ. ಎಲ್. ಎ. ಗಳು ಕಳುಹಿಸಿದ ಮನವಿಗಳಿಗೆ ಬೆಲೆಯಿಲ್ಲ. ಮಂತ್ರಿಗಳು ಹೇಳಿದರೆ ಆ ಕೆಲಸವಾಗುತ್ತದೆ, ಇಲ್ಲದಿದ್ದರೆ ಇಲ್ಲ. ಇಂಥ ಆಡಳಿತವಿದೆ. ಪ್ರಜೆಗಳ ಪ್ರತಿನಿಧಿಗಳಿಗೆ ಮನ್ನಣೆ ಕೊಡದೆ ಪ್ರಜಾಪ್ರಭುತ್ವವೆಂದುಹೇಳುವುದರಲ್ಲಿ ಅರ್ಥವಿಲ್ಲ. ಈ ನಿರ್ಣಯ ಒಳ್ಳೇ ಸಕಾಲಕ್ಕೆ ಬಂದಿದೆ. ಕಾಂಗ್ರೆಸ್ಸಿನವರು ಕೂಡಲೇ ಆಡಳಿತವನ್ನು ಬಿಟ್ಟು ಹೋಗತಕ್ಕದ್ದು ಸೂಕ್ತ ಎಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಮಾನ್ಯ ಸಭಾಪತಿಗಳೇ, ವಿರೋಧ ಪಕ್ಷದ ನಾಯಕರು ಸಭೆಯ ಮುಂದೆ ಮಂಡಿಸಿರತಕ್ಕ ಅವಿಶ್ವಾಸ ನಿರ್ಣಯದ ಬಗ್ಗೆ ಕೆಲವು ಮಾತುಗಳನ್ನಾಡಲು ಅಪೇಕ್ಷಿಸುತ್ತೇನೆ. ಅವರು ಈ ನಿರ್ಣಯವನ್ನು ಸಭೆಯ ಮುಂದಿಟ್ಟ ಕಾಲಕ್ಕೆ ನನಗೆ ಏನನ್ನಿಸಿತು ಎಂದರೆ; ದೇಶದಲ್ಲಿ ಏನೋ ಒಂದು ದೊಡ್ಡ ಪ್ರಸಂಗ ರಹಸ್ಯವಾಗಿ ನಡೆದುಹೋಗಿದೆ, ನಮಗೇಕೋ ಅದು ಗೊತ್ತಾಗದೆ ಹೋಗಿದೆ, ಆ ವಿಚಾರ ನಮಗೆ ಮೊದಲೇ ಗೊತ್ತಾಗಿದ್ದರೆ ಅದನ್ನು ನಾವು ನಮ್ಮ ಸರ್ಕಾರದ ಗಮನಕ್ಕೆ ತಂದು ಅದನ್ನು ಸರಿಪಡಿಸಬಹುದಾಗಿತ್ತು, ಆದರೆ ನಮಗೆ ಅದು ಗೊತ್ತಾಗದೆ ಇಷ್ಟಕ್ಕೆಲ್ಲ ಕಾರಣವಾಯಿತು ಎಂತ ಭಾವಿಸಿದ್ದೆನು. ಆದರೆ ಈಗ ಸಭೆಯ ಮುಂದೆ ಪರಿಶೀಲನೆಗೆ ಬಂದ ವಿಚಾರಗಳನ್ನು ನೋಡಿದರೆ ಇವು ಈ ಹಿಂದೆ ಎಷ್ಟೋಸಾರ್ತಿ ಬಂದು ಇಲ್ಲಿ ಚರ್ವಿತಚರ್ವಣವಾಗಿ ಚರ್ಚೆಯಾಗಿವೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಹಿಂದೆ ಒಂದಾವರ್ತಿ ವಿರೋಧಪಕ್ಷದವರು ಇಂಥದೇ ಒಂದು ಅವಿಶ್ವಾಸ ನಿರ್ಣಯವನ್ನು ಈ ಸಭೆಯ ಮುಂದೆ ತಂದಿದ್ದಾಗ ಅದರಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸಾಕಷ್ಟು ವಿವರಗಳನ್ನು ಕೊಟ್ಟು ಅವರ ಮನಸ್ಸಿನಲ್ಲಿದ್ದ ಅನುಮಾನಗಳನ್ನೆಲ್ಲಾ ಹಿಂದೆಯೇ ಪರಿತ್ಯಾಗ ಮಾಡಿದ್ದಾರೆ. ಅದರ ಮೇಲೂ ದೇಶದಲ್ಲಿ ಅಂಥ ಅನ್ಯಾಯಗಳೇನಾದರೂ ಆಗಿದ್ದಲ್ಲಿ ಅದನ್ನು ಸರ್ಕಾರದವರ ಗಮನಕ್ಕೆ ತಂದು ಸರಿಪಡಿಸಲು ವಿರೋಧ ಪಕ್ಷದವರಿಗೆ ಸಾಕಷ್ಟು ಅವಕಾಶಗಳಿವೆ. ಈ ಸಭೆಯ ಕಾರ್ಯಕಲಾಪಗಳಲ್ಲಿ ಅವರಿಗೂ ಸರಿಸಮಾನವಾದ ಹಕ್ಕುಬಾಧ್ಯತೆಗಳಿವೆ. ವಿರೋಧ ಪಕ್ಷದವರು ಅಂಥ ಅನ್ಯಾಯಗಳು ನಡೆದಿದ್ದರೆ ಅವುಗಳನ್ನು ಸರಿಪಡಿಸಲು ನಿಲುವಳಿ ರೂಪದಲ್ಲಿ, ಅಲ್ಪಕಾಲಾವಧಿ ಪ್ರಶ್ನೆಗಳಮೂಲಕ ಹಾಗೂ ನಿರ್ಣಯಗಳ ಮೂಲಕ ವಿಚಾರಗಳನ್ನು ತಂದು ಅವುಗಳಬಗ್ಗೆ ಪರಿಹಾರ ಪಡೆಯಲು ಸಾಕಷ್ಟು ಅವಕಾಶ ಇರುತ್ತದೆ. ಇಷ್ಟೆಲ್ಲಾ ಅವಕಾಶಗಳಿದ್ದರೂ ಅವರಿಗೆ ಅವರು ಅವುಗಳನ್ನೆಲ್ಲಾ ಕೈಬಿಟ್ಟು ಈ ಸರ್ಕಾರದಲ್ಲಿ ನಮಗೆ ನಂಬಿಕೆಯಿಲ್ಲ, ನೀವು ಅಧಿಕಾರದಿಂದ ಕೂಡಲೇ ಕೆಳಗಿಳಿಯಬೇಕು; ನೀವು ಮತ್ತೊಮ್ಮೆ ನಿಮ್ಮ ಅಗ್ನಿಪರೀಕ್ಷೆಮಾಡಿಕೊಂಡು ಬರಬೇಕು ಎಂದು ಹೇಳಿದ್ದನ್ನು ನೋಡಿದರೆ ಅವರು ಈ ವಿಚಾರದಲ್ಲಿ ಎಷ್ಟು ತಾತ್ಸಾರಭಾವನೆಯನ್ನು ಹೊಂದಿದ್ದಾರೆಂಬುದು ಇದರಿಂದಲೇ ವ್ಯಕ್ತಪಡುತ್ತದೆ. ಈ ಹಿಂದೆ 1962ರಲ್ಲಿ ನಡೆದ ಚುನಾವಣೆಗಳಲ್ಲಿ ಅವರು ಹೇಳಿದಂತೆ ಕೆಲವರು ಹಣವನ್ನು ಖರ್ಚುಮಾಡಿ ಚುನಾವಣೆಯನ್ನು ಗೆದ್ದು ಬಂದಿರಬಹುದು. ಅಂಥವರು ಎರಡು ಪಾರ್ಟಿಯಲ್ಲೂ ಇರಬಹುದು, ಆದರೆ ಅಂಥವರು ಅತಿ ವಿರಳ. ಆದರೆ ಬಹುಮಂದಿ ಕೇವಲ ಜನಾನುರಾಗಿಗಳಾಗೇ ಈ ಸಭೆಗೆ ಆರಿಸಿ ಬಂದಿದ್ದಾರೆಂದು ನಾನು ತಿಳಿದು ಕೊಂಡಿದ್ದೇನೆ. ಆಗ ನಮ್ಮ ನಿಮ್ಮೆಲ್ಲ ಅಗ್ನಿಪರೀಕ್ಷೆ ಆಗಿದೆ. ಇದಕ್ಕೆ ದೇಶದಲ್ಲಿರತಕ್ಕ ಜನತೆಯೇ ಆಳತೆಗೋಲಾಗಿದೆ. ಆದರೆ ಕಾಂಗ್ರೆಸ್ ಪಕ್ಷ ಆಡಳಿತಕ್ಕೆಬಂದ ನಂತರ ಇದರಲ್ಲಿ ಅಲ್ಲಲ್ಲೇ ಕೆಲವು ಲೋಪ ದೋಷಗಳಿರಬಹುದು. ಹಾಗೆ ಎಲ್ಲಿ ಲೋಪ ದೋಷಗಳಿವೆ ಎಂಬುದನ್ನು ವಿರೋಧ ಪಕ್ಷದವರು ತಿಳಿದರೆ ಅದನ್ನು ಸರಿಪಡಿಸಲು ಸಾಕಷ್ಟು

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಅವಕಾಶಗಳಿವೆ. ಈ ದಿವಸ ವಿರೋಧಪಕ್ಷದವರು ತಂದಿರುವಂಥ ಅವಿಶ್ವಾಸ ನಿರ್ಣಯದಲ್ಲಾದರೂ ಏನಿದೆ ಎಂಬುದನ್ನು ಅವಲೋಕಿಸಿದರೆ ಅದರಲ್ಲಿ ಮುಖ್ಯವಾಗಿ ಕಾಣತಕ್ಕದ್ದು ಮೂರು ವಿಚಾರಗಳು ಮಾತ್ರ. ಅವು ಯಾವುವೆಂದರೆ—ಒಂದು ಶರಾವತಿ ವಿಚಾರ, ಇನ್ನೊಂದು ಖಾದೀ ಬೋರ್ಡಿನ ವಿಚಾರ, ಇನ್ನು ಮೂರನೇಯದು ಎಲೆಕ್ಟ್ರಿಸಿಟಿ ಬೋರ್ಡಿನ ವಿಚಾರ—ಈ ಮೂರೂ ಅವರಿಗೆ ಬ್ರಹ್ಮಾಸ್ತ್ರ ಎಂತ ಭಾವಿಸಿದ್ದರೆ ಅಬಗ್ಗೆ ನಮ್ಮಲ್ಲಿ ಪಾಶುಪತಾಸ್ತ್ರವಿದೆಯೆಂಬುದನ್ನು ಅವರು ದಯವಿಟ್ಟು ಮರೆಯಬಾರದು ಎಂದು ಕೇಳಿಕೊಳ್ಳುತ್ತೇನೆ. ನಾನೂ ಸಹಾ ಈ ಹಿಂದೆ ವಿರೋಧ ಪಕ್ಷದಲ್ಲೇ 1943ರಿಂದ 1947ರ ವರೆಗೂ ಇದ್ದೆನು. ಆಗ್ಗೆ ಆಡಳಿತಪಕ್ಷದಲ್ಲಿ ಸರ್ ಅರ್ಕಾಟರೂ, ಶ್ರೀ ಎನ್. ಮಾಧವರಾಯರೂ ದಿವಾನರುಗಳಾಗಿದ್ದರು. ಆಗ ನಾವು ಈ ವಿರೋಧಪಕ್ಷದಲ್ಲಿದ್ದುಕೊಂಡು ಹೇಗೆ ಕೆಲಸ ಮಾಡಿದ್ದೇವೆ ಎಂಬುದಕ್ಕೆ ಆಗಿನ ವರದಿಗಳನ್ನು ತಾವು ತೆಗೆಸಿ ನೋಡಿದರೆ ಅದು ತಮಗೇ ಗೊತ್ತಾಗುತ್ತದೆ.

ಆದರೆ ನಮ್ಮ ಮೇಲೆ ಏನಾಯಿತು ? ಈ ದೇಶದಲ್ಲಿ ಪರರಾಷ್ಟ್ರಗಳು ಹೋಗಬೇಕು ನಮ್ಮ ಸರಕಾರ ಬರಬೇಕು ಎನ್ನುವ ದೃಷ್ಟಿಯಿಂದ ನಾವೂ ನಿರ್ಣಯಗಳನ್ನು ತಂದು ಆಗಿನ ಸರಕಾರಕ್ಕೆ ತಿಳಿಸುತ್ತಿದ್ದೆವು. ಆದರೆ ಈಗ ದೇಶ ಸ್ವಾತಂತ್ರ್ಯ ಸಂಪಾದಿಸಿದ ಮೇಲೆ ಆಡಳಿತ ಸರಕಾರ ಮತ್ತು ವಿರೋಧ ಪಕ್ಷಗಳೂ ಕಲೆತು ದೇಶದ ಅಭ್ಯುದಯಕ್ಕೆ ಯಾವತರಹ ಸಹಾಯಮಾಡಬೇಕು, ಹೇಗೆ ಅನುಸರಿಸಿಕೊಂಡುಹೋಗಬೇಕು ಎನ್ನುವುದನ್ನು ನಾವು ನೋಡಬೇಕು. ಒಂದು ಭದ್ರವಾದ ತಳಹದಿಯ ಮೇಲೆ ಸುಸಂಪುಟಿತರಾಗಿ ನಿಮ್ಮ ಪಕ್ಷದ ಆಡಳಿತದ ರೂಪು ರೇಖೆಗಳನ್ನು ರೂಪಿಸಿಕೊಂಡು ನಿಮ್ಮ ಪಕ್ಷದಲ್ಲಿ ಪ್ರಚಾರ ಮಾಡುತ್ತಿದ್ದೀರಾ ಎಂದು ನಾನು ಹೇಳಬೇಕಾಗಿದೆ. ಉದಾಹರಣೆಯಾಗಿ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ, ಕಾಂಗ್ರೆಸ್ಸು ಪಕ್ಷ ಇರುವುದರಿಂದ ಕಾಂಗ್ರೆಸ್ಸು ಪಕ್ಷದವರೇ ಆಡಳಿತವನ್ನು ಸ್ಥಾಪನೆ ಮಾಡಿದ್ದಾರೆ. ಇದು ಸ್ವಾಭಾವಿಕ. ನೀವು ವಿರೋಧಪಕ್ಷದವರು, ಮೈನಾರಿಟಿಯಲ್ಲಿದ್ದೀರಿ ಅದರಿಂದ ನೀವೆಲ್ಲಾ ಇಂದು ಸುಸಂಪುಟಿತರಾಗಿ ಒಂದು ಪಕ್ಷದವರಂತೆ ವರ್ತಿಸಲು ನಿಮ್ಮಲ್ಲಿ ಸರಿಯಾದ ರೂಪು ರೇಖೆಗಳಿವೆಯೇ ಎಂದು ನೋಡುವುದಾದರೆ ಏನೂ ಇಲ್ಲ ಎನ್ನುವುದು ಕಂಡು ಬರುತ್ತದೆ, ಹಾಗಿರುವಾಗ ಇಂತಹ ಒಂದು ಅವಿಶ್ವಾಸ ನಿರ್ಣಯಕ್ಕೆ ಬೆಂಬಲ ಖಂಡಿತ ಸಿಗುವುದಿಲ್ಲ ಎನ್ನುವುದು ನಿಮಗೂ ಗೊತ್ತಾಗಿದೆ. ಆಪಾದನೆಗಳನ್ನು ಮಾಡುವುದು ಸ್ವಾಭಾವಿಕ, ಅದರಂತೆ ಶರಾವತಿ ಯೋಜನೆಯ ಬಗೆಗೆ ಬಹಳ ದೊಡ್ಡದಾಗಿ ಹೇಳಿದರು. ರಾಷ್ಟ್ರಕ್ಕೆಲ್ಲಾ ಪೂರೈಸಬಹುದಾದಂತಹ ವಿದ್ಯುಚ್ಛಕ್ತಿಯನ್ನು ಪೂರೈಸಲು ಒಂದು ದೊಡ್ಡ ಉದ್ದೇಶವನ್ನು ಇಟ್ಟುಕೊಂಡು ಈ ಯೋಜನೆಯನ್ನು ನಿರ್ಮಾಣ ಮಾಡುತ್ತಿದ್ದಾರೆ, ಇದರ ಬಗ್ಗೆ ಟೀಕೆಗಳನ್ನೂ ಮಾಡಿದ್ದಾರೆ, ಟೀಕೆ ಮಾಡುವುದು ಬೇಡ ಎಂದು ಹೇಳುತ್ತಿಲ್ಲ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ದೇಶಾಭಿಮಾನದಿಂದ ಇದನ್ನು ಹೇಗಾದರೂ ಮಾಡಿ ಮುಗಿಸಬೇಕೆಂದಿದ್ದಾರೆ, ನಮಗೆಲ್ಲರಿಗಿಂತಲೂ ಅವರಿಗಿರತಕ್ಕ ದೇಶಾಭಿಮಾನ ಜಾಸ್ತಿಯಾಗಿದೆ ಎಂದು ಇಲ್ಲಿ ಹೇಳಿದರೆ ಅದು ತಪ್ಪಾಗಲಾರದು. ಅವರ ಮೇಲೆ ಈ ಜವಾಬುದಾರಿಯನ್ನು ಹೊರಿಸಿರುವುದರಿಂದ ಅವರೇ ಇದನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತಾರೆ, ಇದರಲ್ಲಿ ಅನುಮಾನವಿಲ್ಲ. ಇನ್ನು ಖಾದೀ ಬೋರ್ಡಿನ ಮೇಲೆ ಹೇಳಿದರು; ಹಾಗೇ ಲಾ ಡಿಪಾರ್ಟುಮೆಂಟ್ ನಲ್ಲಿ ವಾಸ್ತವವಾಗಿ ಕೋಮುವಾರು ಪ್ರಕರಣಗಳಾಗಿದ್ದರೆ ನಮಗೂ ಚಿಂತೆಯಾಗುತ್ತದೆ. ಆದುದರಿಂದ ಹೀಗೆಲ್ಲಾ ಹೇಳುವುದು ಸರಿಯಲ್ಲ. ಹಾಗೇ ವಿದ್ಯಾಭ್ಯಾಸದ ಇಲಾಖೆ ಬಗ್ಗೆ ಹೇಳುವಾಗ ಉಪಾಧ್ಯಯರುಗಳನ್ನು ನೇಮಕ ಮಾಡಿರುವುದು ಬಹಳ ಕಡಿಮೆ ಎಂದು ಹೇಳಿದರು, ಹಾಗೂ ಕಾಲೇಜು ಎಜುಕೇಷನ್ನಿಗಾಗಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಉತ್ತಮವಾದ ಉಪಕುಲಪತಿಗಳನ್ನು ನೇಮಿಸಿರುವುದರಿಂದ ಇದನ್ನು ಇನ್ನೂ ಉತ್ತಮ ಪಡಿಸಲಿಕ್ಕೆ ಬರುತ್ತದೆ ಎಂದು ನಾವು ತಿಳಿದುಕೊಂಡಿದ್ದೇವೆ. ಹಾಗೇ ಈ ದೇಶದ ಆಡಳಿತದ ವಿವಿಧ ಕಾರ್ಯ ಕ್ಷೇತ್ರಗಳಲ್ಲಿಯೂ ಸರಕಾರ ಉತ್ತಮವಾದ ಕೆಲಸಗಳನ್ನು ಅನುಸರಿಸಿಕೊಂಡು ಬಂದಿದೆ. ಹಿಂದೆ ನೂರಾರು ವರ್ಷಗಳಿಂದ ಇದ್ದ ಸರ್ಕಾರವೇ ಆಡಳಿತ ನಡೆಸುತ್ತಿದ್ದಾಗ ಎಷ್ಟೋ ತಪ್ಪುಗಳಾಗುತ್ತಿದ್ದವು, ಈ ನಮ್ಮ ಸರಕಾರ ಬಂದು 15 ವರ್ಷಗಳಾದರೂ ಕೂಡ ನಮ್ಮ ದೇಶದ ಜನಕ್ಕೆ ಅನುಕೂಲವಾಗುವಂತೆ ಎಲ್ಲ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿ ಮಾಡಲು ಸಾಹಸಪಡುತ್ತಿದ್ದಾರೆ. ಅದಕ್ಕಾಗಿ ಅವರನ್ನು ನಾವು ಅಭಿನಂದಿಸಬೇಕು ಎಂದು ನಾನು ಭಾವಿಸಿಕೊಂಡಿದ್ದೇನೆ. ಈಗ ಏನಾಗಿದೆ ಎಂದರೆ, ನಮ್ಮ ವಿರೋಧ ಪಕ್ಷದವರು ಮಾತನಾಡತಕ್ಕ ಮಾತು; ಕಾಂಗ್ರೆಸ್ಸು ಸರಕಾರದಲ್ಲಿ ಏನೋ ದೊಡ್ಡ ಅನಾಹುತ ಆಗಿದೆ ಎನ್ನುವಂತೆ ಈ ದೇಶದಲ್ಲಿ ಪ್ರಚಾರವಾಗಬೇಕು, ಹಾಗೆ ಪ್ರಚಾರ ಮಾಡಿದರೆ ಜನಗಳ ವಿಶ್ವಾಸವನ್ನು ಬೆಳೆಸುವುದಕ್ಕೆ ಸಾಧ್ಯ ಎನ್ನುವ ಧಾಟಿಯಲ್ಲಿ ಅವರು ಮಾತನಾಡುತ್ತಿದ್ದಾರೆನ್ನುವುದು ಕಂಡುಬರುತ್ತದೆ. ಇಲ್ಲಿ ಒಂದು ಗಾದೆ ನೆನಪಿಗೆ ಬರುತ್ತದೆ ' ಅಡಿಗೆ ಮಾಡಿರುವುದನ್ನು ಅರಿಸಿ ಊಟ ಮಾಡು '

ಎನ್ನುವಂತೆ; ಕಷ್ಟಪಟ್ಟು ಸರಕಾರ ಮಾಡುತ್ತಿರುವುದನ್ನೆಲ್ಲಾ ಜನ ನೋಡುವುದರಲ್ಲಿ ಬುದ್ಧಿವಂತರಾಗಿದ್ದಾರೆ, ನೀವು, ನಾವು ಏನು ಟೀಕೆಗಳನ್ನು ಮಾಡಿದರೂ ಅವೆರಡನ್ನೂ ವಿಮರ್ಶೆ ಮಾಡಿ ನೋಡಿ ಅವರೂ ಕೂಡ ಈಗಿರುವ ಸರಕಾರವೇ ಒಳ್ಳೆಯದು ಎನ್ನುವುದನ್ನೂ ತಿಳಿದಿದ್ದಾರೆ. ಶ್ರೀಮಾನ್ ಗೋಪಾಲ ಸಾರೆನ್ನನವರು ಪ್ರೊಹಿಬಿಷನ್ನಿನ ಬಗ್ಗೆ ಮಾತನಾಡುತ್ತ ಈ ತತ್ವ ಸರಿಯಾದುದಲ್ಲ ಎಂದು ಕಟುವಾದ ಟೀಕೆಗಳನ್ನು ಮಾಡಿದರು, ಇದು ಹದಗೆಟ್ಟು ಹೋಗಿದೆ ಇದನ್ನು ಸರಿಪಡಿಸಬೇಕು ಎಂದು ಹೇಳಿದರು, ಇದಕ್ಕಾಗಿ ಅಗ್ನಿ ಪರೀಕ್ಷೆ ನಿಮಗೂ ಆಗಬೇಕೆಂದು ಸರಕಾರದವರು ಇಟ್ಟುಕೊಂಡಿದ್ದಾರೆ ಕಾಂಗ್ರೆಸ್ಸು ಪಕ್ಷದ ಸದಸ್ಯರು ಏನು ಹೇಳುತ್ತಾರೆ, ಇತರರು ಏನುಹೇಳುತ್ತಾರೆ ಎನ್ನುವುದನ್ನು ಜನ ನೋಡುತ್ತಿರುತ್ತಾರೆ. ರಾಜ್ಯದ ಆಡಳಿತದ ಮೇಲೆ ನಿಮಗೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ಜನಗಳಲ್ಲಿಯೂ ಇವೆ. ಅವರು ನಮ್ಮೆಲ್ಲರ ಚಲನವಲನಗಳನ್ನು ಪರೀಕ್ಷೆ ಮಾಡುತ್ತಿರುತ್ತಾರೆ. ನಮ್ಮ ಮಾನ್ಯ ಸದಸ್ಯರಾದ ಮುಕ್ಕಣ್ಣಪ್ಪನವರಿಗೆ ಹೇಳಬೇಕಾದರೆ ನಾನು ಹದಿನಾರಾಣೆ ಕಾಂಗ್ರೆಸ್ಸಿನವಳು.

ಅಧ್ಯಕ್ಷರು.—ಶ್ರೀಮಾನ್ ಮುಕ್ಕಣ್ಣಪ್ಪನವರಿಗೆ ಉತ್ತರ ಹೇಳುವ ಅವಶ್ಯಕತೆ ಇಲ್ಲ; ಮಾನ್ಯ ಶಿವಪ್ಪನವರ ನಿರ್ಣಯ ಈ ಸಭೆಯ ಮುಂದೆ ಇಟ್ಟಿರುವುದು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹಾಗೆ ಜನ ಎಲ್ಲರನ್ನೂ ಪರೀಕ್ಷೆ ಮಾಡಿ ತಿಳಿದುಕೊಂಡೇ ಓಟನ್ನು ಕೊಟ್ಟು ನಮ್ಮನ್ನು ಚುನಾಯಿಸಿರುವುದರಿಂದ ಇಲ್ಲಿ ಇಂದು ಆಡಳಿತ ನಡೆಸುತ್ತಿದ್ದೇವೆ. ಮಾನ್ಯ ಸದಸ್ಯರಿಗೂ ತಿಳಿದಿರುವಂತೆ ದೇಶದ ಹಿತದೃಷ್ಟಿಯಿಂದ ಹಿಂದೂಸ್ತಾನದ ಸಮಸ್ಯೆ ಹೇಗಿದೆ ಏನ್ನುವುದನ್ನು ನೋಡಿದರೆ ಚೀಣಾದೇಶ ಆಕ್ರಮಣ ಮಾಡುತ್ತಿದೆ, ನಮ್ಮ ಪಕ್ಕದ ರಾಜ್ಯವಾದ ಪಾಕೀಸ್ಥಾನ ಶತ್ರುತ್ವವನ್ನು ಬೆಳಸುತ್ತಿದೆ, ಇಂತಹ ಕಾಲದಲ್ಲಿ ಆಡಳಿತ ಪಕ್ಷದವರು ಮತ್ತು ಇತರ ಪಕ್ಷಗಳವರು ಸೇರಿ ಒಟ್ಟಾಗಿ ಹಿಂದೂಸ್ಥಾನಕ್ಕೆ ಒದಗುವ ಕಷ್ಟಗಳನ್ನು ಪರಿಹರಿಸಲು ಪ್ರಯತ್ನ ಮಾಡಬೇಕು. ಇದರಿಂದ ನಮ್ಮ ಮತ್ತು ನಿಮ್ಮ ದೇಶಾಭಿಮಾನವನ್ನು ತೋರಿಸಲು ಒಂದು ಅವಕಾಶ ಸಿಗುತ್ತದೆ. ಇಂತಹ ಸನ್ನಿವೇಶದಲ್ಲಿ ಮಾನ್ಯ ಸದಸ್ಯರು ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ನಮ್ಮ ಈ ಮುಖ್ಯ ಮಂತ್ರಿಗಳ ಮಂತ್ರಿ ಮಂಡಲದಲ್ಲಿ ಅಂತಹ ಅನುಮಾನಗಳಿಗೆ ಕಳವಳಕ್ಕೆ ಕಾರಣವಾಗುವಂತಹ ಯಾವ ವಿಷಯಗಳೂ ಇಲ್ಲ. ಆದುದರಿಂದ ಮಾನ್ಯ ಸದಸ್ಯರು ಈ ನಿರ್ಣಯವನ್ನು ವಾಪಸ್ಸು ಪಡೆಯಬೇಕು ಎಂದು ಹೇಳಿ ಈ ನಿರ್ಣಯವನ್ನು ಪೂರ್ಣವಾಗಿ ವಿರೋಧಿಸುತ್ತೇನೆ. ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನೂ ವಂದಿಸುತ್ತೇನೆ.

Mr. SPEAKER.—That is not the charge by the movers of the resolution.

Sri SANJEEVANATH AIKALA (Suratkal).—Mr. Speaker, Sir, when the truth is required to be told, it should be told with all the sincerity and frankness. Sir, it may be very unpalatable to the Members of the Ruling Party when the truth is told frankly. We are bringing this no-confidence motion, not out of vengeance or any motive nor is it out of any *malafide* interest. We are bringing this no-confidence motion after having known that this Government and the Council of 27 Ministers has become incorrigible or is beyond repair, after bringing a similar motion nearly one year ago. We gave on that occasion a clear warning how the Government is misbehaving, how the Government has done misdeeds in administration. After waiting for one year, we find that this Govern-has not learnt any new lessons, we are bringing here this no confidence motion, Sir.

Mr. SPEAKER.—Is the Hon'ble Member bringing a vote of no-confidence against the Opposition ?

Sri SANJEEVANATH AIKALA.—When I say certain things, I am not saying as an individual member of the House, I am not saying as a member of the party opposed to the ruling party...

Mr. SPEAKER.—I will not allow the member to talk on behalf of others; he has to talk on behalf of himself.

Sri SANJEEVANATH AIKALA.—I am voicing the verdict of thousands and thousands of people who are outside this House.

Mr. SPEAKER.—I want the member to speak on his own behalf.

Sri SANJEEVANATH AIKALA.—Yesterday, the Hon'ble lady member Smt. Nagaratnamma said that it was a matter of sorrow for the Opposition to have brought this no-confidence motion against the Council of Ministers. I want to say that it is with deep sorrow that we are bringing this motion of no confidence against our elders. We thought that seasoned elders as they are, they would give us an administration which was clean, which was efficient, which was honest, but unfortunately it was not so. That is why we are very sorry that we have to bring a no-confidence motion against the Council of Ministers whom we found to be intellectual imbeciles, whom we found...

Mr. SPEAKER.—He shuld not use the word 'imbecile'. That word is not parliamentary.

Sri SANJEEVANATH AIKALA.—Then I will say 'intellectual impotents' to substitute those words, because I found impotency in them in taking decisions in important matters. On the question of sharing of Krishna—Godavari waters, about the appointment of an enquiry committee into the Sharavathi affairs—in all these matters when a major decision is required to be taken, this Government admits its total impotency, total failure in coming to right conclusion. For all these reasons we are compelled to bring this motion against this Ministry. It does not give us pleasure, it does not give any happiness to us to tell these things simply for the sake of 'tamasha'.

I shall now directly come to the few points which I want to place before the House. This Government has not only done so many bad things but has also prostituted the political power entrusted to their hands. I will give one example, the example of the Public Service Commission. The Public Service Commission is the highest body in the State which is entrusted with the work of recruiting officers to the higher cadres of office. The Public Service Commission is to-day a body of petty politicians, politicians who belong to the ruling party, who are defeated in the elections. That body is composed of petty politicians who are there to feather the nest of the Congress Party, the ruling party; can we expect justice from them? How many writ petitions are pending against the decisions of the Public Service Commission because most of the decisions, most of the conclusions arrived at by the Public Service Commission are vitiated, are motivated by particular interests.

Mr. SPEAEKR.—Writ petitions to the extent I have observed in the papers are against the executive orders of the Government, not against the Public Service Commission. If the member has on hand any specific cases of writ petitions, he can tell me.

Sri SANJEEVANATH AIKALA.—In a few minutes, I cannot bring all these examples. Let me come to the various other Boards about which reference has been made, about the Khadi Board, about the Electricity Board, about the Trust Board, about various corporations and committees. What are these Boards? Most of these Boards are just there

to vest powers in members of the ruling party. A lot of criticism has been made in this House and it has come in the papers also about the misdeeds of the Khadi Board. To-day this morning we found the announcement of a new Khadi Board. It is again a Board composed of only defeated ex-Ministers, members of the Congress who were not having any job elsewhere. It is again a body of few Congressmen who are again asked to go and make hay while the sun shines. An announcement of this sort of Board is what I found to-day in the papers. I know of a few people connected with the Board. I cannot accuse all the members of that Board, but a few members. Whom I know are not abovet blame.

Then I come to the very sad part—the formation of the Ministry. What is it? It is again an illegitimate combination of various elements, groups and sections just to....

Mr. SPEAKER.—What is the meaning of the word 'illegitimate'?

Sri SANJEEVANATH AIKALA.—That which is not legitimate.

Mr. SPEAKER.—Unlawful, illegal and illegitimate have got their own connotations.

Sri SANJEEVANATH AIKALA.—I am very blunt; I am very frank; I say whatever I feel it to be taken.

Mr. SPEAKER.—It must be relevant. This grants to having a debate without any specific charges; this is what is happening.

Sri SANJEEVANATH AIKALA.—What is the necessity for the State to have 27 Ministers? I pose this question with all seriousness. If I were The Chief Minister of this State, I would have run the Government with six Ministers! If I were the Chief Minister, I would have scrapped all these Boards and appointed five I. C. S. or I. A. S. men to look after these affairs; I would have got better administration at less expenditure; I would have entrusted these responsibilities to a few I. A. S. or I. C. S. people. I am telling you with all seriousness. If I were the Chief Minister, I would have scrapped prohibition which has entered into the very vitals of body politic. It has not only affected the health of the people, but a sort of frustration, a sort of disappointment has come to be felt by the people at the prohibition policy of the Government. It is stated even by the Congress members that prohibition is a total failure, it is a complete failure and in spite of knowing this, these Congress members dare not tell us openly and frankly. Some of the Congress members come to us and say 'Our mouth is sealed. We are helpless. Please ask the Government to scrap prohibition."

Mr. SPEAKER.—I am not aware of any member's mouth being sealed here, when he comes to the House.

Sri SANJEEVANATH AIKALA.—The members themselves know what it is.

Mr. SPEAKER.—The Hon'ble Member had better continue his speech afterwards. The House now rises and will meet again at 3 o'clock.

The House adjourned at Twelve of the Clock and re-assembled at Three of the Clock.

[MR. SPEAKER in the Chair.]

MOTION OF NO-CONFIDENCE IN THE COUNCIL OF MINISTERS

(Debate continued.)

Sri SANJEEVANATH AIKALA.—Mr. Speaker, Sir, this morning I was referring to the good work which would have been done if I were to be the head of the State. I would have certainly tried within these 16 years to see that this State of Mysore became real Ramrajya instead of the present Ravanarajya.

Sir, you will get excited and perhaps the Members of the ruling party will be irritated if I say that in the course of these 16 years the administration has been degenerated to a very great extent. The capacity of the people has been degraded. The industrial and the agricultural policy of the Government has not taken us to that cherished aim of our two Five-Year Plans. Even after two plans we are never nearer to that. We are not able to reach the take off stage. We can point out various examples of corruption, favouritism and nepotism in the administration and the failure of the ruling party to stem it. This is what is being repeated day in and day out by every person of this State. Every Member here has pointed out how injustice is being done by this Government and how people are suffering to a very great extent. I need not repeat all those again. But I would like to only point out how the ruling party and their satellites have betrayed the social justice that is expected of them. That is what the people outside talk about. Sir, some Hon'ble lady member I believe, Smt. B. L. Subbamma said that they came to power by means of ballot box. Sir, may I tell the historical events that happened in our neighbouring countries like Ceylon, Burma, Iran and Egypt where the people who had brought the persons to power, by ballots removed them by bullets. When a particular sect of people are suppressed, they will rise in rebellion and throw the Government whom they themselves had brought to power by voting for them. So, the ruling party may be very confident that they came to power by means of ballot boxes. That is not what is required. Democracy has been so blatantly raped by the Members of the ruling party. That is what has been done in this country and that is what is being said by thinking men and women of India.

† Sri RAMAKRISHNA HEGDE (Minister for Co-operation and Development).—Sir, the Hon'ble Member said that democracy was being raped by the ruling party; is it parliamentary?

Mr. SPEAKER.—Sri Sanjeevanath has got only two minutes more and he must conclude.

Sri SANJEEVANATH AIKALA.—Sir, that is why I said in the biginning itself that when I say anything frankly, the ruling party members would get irritated and excited. Now, Sir, I do not want to trespass the limit of time you have given me. I only say with very strong words that I impeach these 27 Ministers with all these allegations. I

only say that they have lost the confidence of the 70 members on this side. You must gain again the confidence of the people of the country. You must place your hand on your hearts and see what that little voice inside tells you.

While concluding, I would ask you to put your hand upon your heart and see what that little inner voice tells you. If your own voice tells that all of you are not guilty, all right, go ahead, I wish you Godspeed. But if you find palpitations and feel unhapyy and if your heart pronounces you guilty, I would say, "have the moral courage. Resign and get out". Thank you.

† ಶ್ರೀ ಜೆ. ಎಲ್. ಕಬಾಡಿ (ಬಾರಡೋಲ).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಇರತಕ್ಕಂಥ ಅವಿಶ್ವಾಸ ನಿರ್ಣಯವನ್ನು ನಾನು ವಿರೋಧಿಸುತ್ತೇನೆ. ದೇಶದಲ್ಲಿ ಕಾಂಗ್ರೆಸ್ ಸರಕಾರ ರಾಜ್ಯಭಾರ ಮಾಡುತ್ತಾ ಇರುವಾಗ ಒಂದು ಸರಿಯಾದ ವಿರೋಧ ಪಕ್ಷ ಇರಬೇಕೆಂದು ಎಲ್ಲರೂ ಹೇಳುತ್ತಾರೆ. ವಿರೋಧಪಕ್ಷ ಸರಿಯಾಗಿ ಇರಬೇಕಾದ ರೀತಿಯಲ್ಲಿ ಇರದೇ ಹೋದರೆ ವಿರೋಧಕ್ಕಾಗಿ ವಿರೋಧ ಮಾಡುವುದಾದರೆ ಅದು ಒಳ್ಳೆಯದಲ್ಲ. ನಿನ್ನೆಯಿಂದ ವಿರೋಧ ಪಕ್ಷದ ಸದಸ್ಯರು ಮಾತನಾಡುತ್ತಿರವುದನ್ನು ಕಿವಿಗೊಟ್ಟು ಆಸಕ್ತಿಯಿಂದ ಕೇಳುತ್ತಿದ್ದೇನೆ. ಅವರು ಭಾಷಣದಲ್ಲಿ ಸರ್ವೆ ಸಾಧಾರಣ ವಿಚಾರ ಲಂಚ ಮುಂತಾದ ವಿಚಾರ ಹೇಳುತ್ತಿದ್ದಾರೆ. ಸರಕಾರ ತಪ್ಪು ಮಾಡಿದ್ದನ್ನು ಒಂದೂ ಹೇಳಲಿಲ್ಲ. ಹಿಂದಿನ ಸಲ ಅವಿಶ್ವಾಸ ನಿರ್ಣಯ ಮಂಡಿಸಿದಾಗ್ಗೆ ಮಾತನಾಡಿದ್ದನ್ನೇ ಮತ್ತೆ ಹೇಳುತ್ತಿದ್ದಾರೆ. ಯಾವ ಹೊಸ ವಿಷಯ ಹೇಳಿರುವುದಿಲ್ಲ. ಬರೀ ವಿರೋಧ ಮಾಡಬೇಕು ಜನರಲ್ಲಿ ಪ್ರಭಾವ ಬೀರಬೇಕು ಎಂಬ ಉದ್ದೇಶ ಇಟ್ಟುಕೊಂಡು ಈ ನಿರ್ಣಯ ತಂದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಒಂದು ಕಥೆ ಇದೆ. ಒಬ್ಬನಿಗೆ ಪಂಡಿತ ಎಂದು ಅನ್ನಿಸಿಕೊಳ್ಳಬೇಕಾಗಿತ್ತು. ಪಂಡಿತ ಎಂದು ಹೇಗೆ ಅನ್ನಿಸಿಕೊಳ್ಳಬೇಕು ಎಂಬ ಯೋಚನೆ ಮಾಡಹತ್ತಿದನು. ಯಾರೂ ಅವನಿಗೆ ಪಂಡಿತ ಎಂದು ಅನ್ನಲಿಲ್ಲ. ಏನಾದರೂ ಒಂದು ಕಾರ್ಯ ಮಾಡಬೇಕು ಎಂದು ಒಬ್ಬರು ಅವನಿಗೆ ಹೇಳಿದರು. ಆಗ ಅವನು ಹೊರಟನು. ಒಂದು ಕಡೆ ಕೆಲವು ಹುಡುಗರು ಆಟವಾಡುತ್ತಿದ್ದರು. ಅವರನ್ನು ಕಣಕಿ ಬಿಟ್ಟನು. ಹುಡುಗರಲ್ಲಿ ಒಬ್ಬನಿಗೆ ಇವನ ವಿಚಾರ ಗೊತ್ತಿತ್ತು. ಆ ಹುಡುಗನು ಎಲ್ಲರ ಕಡೆಯಿಂದಲೂ ಅವನಿಗೆ ಪಂಡಿತ ಪಂಡಿತ ಎಂದು ಹೇಳಿಸಿದನು. ಈ ರೀತಿ ಹೇಳಿದರೆ ಅವನು ನಿಜವಾದ ಪಂಡಿತನಾಗಲಿಲ್ಲ. ಆದ್ದರಿಂದ ಸರಿಯಾಗಿ ತಿಳಿದುಕೊಂಡು ಮಾತನಾಡಿದರೆ ಒಳ್ಳೆಯದಾಗುತ್ತದೆ. ಮಾತನಾಡಲಿಕ್ಕೆ ನಿಮಗೆ ಅಂಕಿಅಂಶಗಳು ಎಲ್ಲಿಂದ ಸಿಗಬೇಕು? ಶ್ರೀ ಶಿವಪ್ಪನವರು ಮಾತನಾಡುತ್ತಾ ಹೇಳಿದರು. ತುರ್ತು ಪರಿಸ್ಥಿತಿಯಲ್ಲಿ ಮಂತ್ರಿಮಂಡಳ ಗಾತ್ರ ಕಡಿಮೆಯಾಗಬೇಕು ಹೀಗೆ ಆಗಬೇಕು ಹಾಗೆ ಆಗಬೇಕು. ಖಾದಿ ಬೋರ್ಡು, ಎಲೆಕ್ಟ್ರಿಸಿಟಿ ಬೋರ್ಡು ಇಂಥ ಕೆಲವು ವಿಚಾರ ಹೇಳಿದರು. ಖಾದಿಬೋರ್ಡ್ ಸದಸ್ಯನಾಗಿ ನಾನು ಮೂರು ವರ್ಷ ಇದ್ದೆನು. ಸರಕಾರದಿಂದ ನೇಮಕ ಮಾಡಲ್ಪಟ್ಟ ಅಕೌಂಟ್ಸ್ ಆಫೀಸರ್, ಸೆಕ್ರೆಟರಿ, ಚೀಫ್ ಎಗ್ಸಿಕ್ಯುಟಿವ್ ಆಫೀಸರ್ ಇರುವಾಗ್ಗೆ ಅಕೌಂಟ್ಸ್ ಸರಿಯಾಗಿ ಇಡಬೇಕಾದುದು ಅವರ ಕರ್ತವ್ಯ. ಅದಕ್ಕೆ ಬೇರೆಯವರು ಜವಾಬ್ದಾರರಲ್ಲ. ಲೆಕ್ಕಪತ್ರದಲ್ಲಿ ಏನಾದರೂ ಕಂಡು ಬಂದರೆ ಅದನ್ನು ಹೇಳುತ್ತಾರೆ. ಸರಕಾರ ನಿಗಾ ಕೊಡಲಿಲ್ಲ ಎಂದು ಹೇಳುವುದು ಟೀಕೆ ಮಾಡುವುದು ಸರಿಯೇ ಎಂಬುದನ್ನು ವಿಚಾರ ಮಾಡಬೇಕು. ಮುಖ್ಯ ಮಂತ್ರಿಗಳು ಮತ್ತು ಶ್ರೀಮತಿ ಇಂದಿರಾ ಗಾಂಧಿಯವರ ಸುವರ್ಣ ತುಲಾಭಾರಕ್ಕೆ ಇಪ್ಪತ್ತಾರು ಸಾವಿರ ರೂಪಾಯಿ ಖರ್ಚು ಮಾಡಿದರು ಇದು ಸರಿಯೇ ಎಂದು ಕೇಳಿದರು. ಈ ತುಲಾಭಾರಕ್ಕಾಗಿ ಬಂಗಾರ ಸಂಗ್ರಹಿಸುವುದಕ್ಕೆ ಎಷ್ಟೋ ಕಡೆ ಹರೆಸ್‌ಮೆಂಟ್ ಅಂದರೆ ಒತ್ತಾಯ ಮಾಡಿ ತೊಂದರೆ ಕೊಟ್ಟರು ಎಂದು ಹೇಳಿದರು. ನಾನು ಸ್ಪಷ್ಟವಾಗಿ ಹೇಳುತ್ತೇನೆ. ಬಂಗಾರ ವಸೂಲ್ಮಾಡುವುದರಲ್ಲಿ ಯಾವ ರೀತಿಯಿಂದಲೂ ಬಲವಂತ ಮಾಡಿಲ್ಲ. ಈ ಬಗ್ಗೆ ಬಿಜಾಪುರದಲ್ಲಿ ಯಾರೂ ತಕರಾರು ಮಾಡಿಲ್ಲ. ಜನರು ಸಂತೋಷದಿಂದ ತಾವಾಗಿಯೇ ಬಂಗಾರ ಕೊಟ್ಟಿದ್ದಾರೆ. ನನ್ನ ಜೊತೆಗೆ ಬಂದರೆ ಪ್ರತಿಯೊಂದು ಊರಿಗೆ ಕರೆದುಕೊಂಡು ಹೋಗಿ ನಿಮಗೆ ಇದನ್ನು ತೋರಿಸಿ ಕೊಡುತ್ತೇನೆ. ನಿಜವಾದ ಸಂಗತಿ ತಿಳಿದುಕೊಳ್ಳದೆ ಅದು ಹಾಗೆ ಆಯಿತು ಇದು ಹೀಗೆ ಆಯಿತು ಎಂದು ಹೇಳುವುದು ಸರಿಯಲ್ಲ. ತ್ಯಾಗ ಮನೋಭಾವನೆಯಿಂದ ಇಂಥ ತುರ್ತು ಪರಿಸ್ಥಿತಿಯಲ್ಲಿ ರಾಷ್ಟ್ರೀಯ ರಕ್ಷಣಾ ನಿಧಿಗೆ ಕೊಟ್ಟಿರುವುದಕ್ಕಾಗಿ ಬಿಜಾಪುರಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಬೇಕು. ಪ್ರತಿಯೊಂದು ಜಿಲ್ಲೆಯವರೂ ಇದನ್ನು ಅನುಕರಣೆ ಮಾಡತಕ್ಕದ್ದು ಅವರ ಕರ್ತವ್ಯ ಆಗಿದೆ. ಈ ಸುವರ್ಣ ತುಲಾಭಾರಕ್ಕಾಗಿ ರಾಷ್ಟ್ರೀಯ ರಕ್ಷಣಾ ನಿಧಿಗೆ ಕೈ ಹಚ್ಚಿಲ್ಲ. ಜನ ಮುಂದೆ ಬಂದು ಸ್ವಂತ ದುಡ್ಡು ಖರ್ಚು ಮಾಡಿದ್ದಾರೆ. ಇಂಥ

(ಶ್ರೀ ಜಿ. ಎಲ್. ಕಬಾಡಿ)

ತ್ಯಾಗ ಮನೋಭಾವನೆಯಿಂದ ಹಣ ಕೊಟ್ಟದ್ದರಿಂದ ಬಿಜಾಪುರದ ಏಳಿಗೆಯಾಗಿದೆ. ಪ್ರತಿ ವರ್ಷ ಬರಗಾಲ ಬೀಳತಕ್ಕಂಥ ಬಿಜಾಪುರ ಜಿಲ್ಲೆಯಲ್ಲಿ ಈ ವರ್ಷ ಮಳೆಯಾಗಿ ದೇವರ ಕೃಪೆಯಿಂದ ಐದರಷ್ಟು ಬೆಳೆ ಬಂದಿದೆ. ಬಿಜಾಪುರದ ಈ ತ್ಯಾಗ ಮನೋಭಾವನೆ ಪ್ರತಿಯೊಂದು ಜಿಲ್ಲೆಯವರು ಅನುಕರಣೆ ಮಾಡಿದರೆ ಅಲ್ಲಿಯೂ ಇದೇ ರೀತಿ ಬೆಳೆ ಬರಬಹುದು ಎಂದು ಹೇಳುತ್ತೇನೆ.

ಇನ್ನು ಸರಕಾರ ಕಾನೂನು ಮೂಲಕ ಸರಿಯಾಗಿ ರಕ್ಷಣೆ ಕೊಡುತ್ತಿಲ್ಲ, ಆದ್ದರಿಂದ ಹೈ ಕೋರ್ಟಿನಲ್ಲಿ ಅನೇಕ ರಿಟ್ ಅರ್ಜಿಗಳು ಬಂದಿವೆ ಎಂದು ಮುಂತಾಗಿ ಏನೇನೋ ಹೇಳಿದರು. ಇದು ಹುರುಳು ಇಲ್ಲದ ಮಾತು. ಯಾಕಂದರೆ ಕಾನ್‌ಸ್ಟಿಟ್ಯೂಷನ್ ನಿಯಮಗಳಿಗೆ ಅನುಸಾರವಾಗಿ ಯಾವುದೇ ಆರ್ಡರ್ ಬಗ್ಗೆ ಯಾರು ಬೇಕಾದವರು ರಿಟ್ ಅರ್ಜಿ ಹಾಕಲು ಏನೇನು ಅಭ್ಯಂತರವಿಲ್ಲ. ರಿಟ್ ಅರ್ಜಿ ಹಾಕಲು ಬರುತ್ತದೆ. ರಿಟ್ ಅರ್ಜಿ ಹಾಕುವುದನ್ನು ಹಿಂದಕ್ಕೆ ನಾವು ಮುಂಬಯಿ ರಾಜ್ಯದಲ್ಲಿದ್ದಾಗ್ಗೆ ಕೇಳಿದ್ದಿಲ್ಲ. ಇಲ್ಲಿ ಪ್ರತಿಯೊಂದು ಸಣ್ಣ ವಿಷಯದ ಬಗ್ಗೆ ರಿಟ್ ಹಾಕುತ್ತಾರೆ. ವಿರೋಧ ಪಕ್ಷದವರಿಗೆ ಲೋಪದೋಷಗಳು ಕಂಡು ಬಂದಿದ್ದರೆ ಅವುಗಳನ್ನು ತೋರಿಸಬಹುದಾಗಿತ್ತು. ಸಂಶಯ ಬಂದ ವಿಷಯದ ಬಗ್ಗೆ ಮಾತನಾಡಿದ್ದಾರೆ. ಅಂಕಿ ಅಂಶಗಳ ಆಧಾರದಿಂದ ಮಾತನಾಡ ಲಿಲ್ಲ. ಶರಾವತಿ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಫೈಲ್ ತರಿಸಿ ನಿರೀಕ್ಷಣೆ ಮಾಡುತ್ತೇನೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಪದೇ ಪದೇ ಹೇಳಿದ್ದಾರೆ.

ಇವತ್ತು ಒಂದು ಶಂಕೆ ಏನು ಮೂಡಿದೆ ಆ ದೃಷ್ಟಿಯಿಂದ ಒತ್ತಾಯ ಪೂರ್ವಕವಾಗಿ ಶಿವಪ್ಪ ನವರಿಗೆ ಹೇಳುತ್ತಾ ಇರುವುದು ಏನೆಂದರೆ ಆ ಶಂಕೆಯನ್ನು ಅವರು ನಿವಾರಣೆ ಮಾಡಿಕೊಳ್ಳಬಹು ದಾಗಿತ್ತು ಮುಖ್ಯ ಮಂತ್ರಿಗಳ ಹತ್ತಿರ ಹೋಗಿ ಏನಾಗಿದೆ ಏನಿಲ್ಲ ಏನಾಗಬೇಕು ಎಂಬ ಶಂಕೆ ಗಳನ್ನೆಲ್ಲಾ ನಿವಾರಣೆ ಮಾಡಿಕೊಂಡಿದ್ದರೆ ಈ ತರಹ ಅವಿಶ್ವಾಸ ನಿರ್ಣಯವನ್ನು ನಮ್ಮ ಮನೆಯ ಮುಂದೆ ತರುತ್ತಾ ಇರಲಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ 2 ಕೋಟಿ 7 ಲಕ್ಷ ರೂಪಾಯಿಗಳ ಲೆಕ್ಕ ಇಲ್ಲ ಎಂದು ಹೇಳಿದ್ದಾರೆ ಇದನ್ನು ಸರಿಯಾದ ರೀತಿಯಲ್ಲಿ ಶಿವಪ್ಪನವರು ತಿಳಿದುಕೊಳ್ಳದೇ ಹೇಳಿದ್ದಾರೆ ಎಂದು ಕಾಣುತ್ತದೆ. ಏಕೆಂದರೆ ಅಕೌಂಟೆಂಟ್ ಜನರಲ್ ಅವರು ಇರುತ್ತಾರೆ, ಸೆಂಟ್ರಲ್ ಗವರ್ನಮೆಂಟ್ ಆಡಿಟ್ ಇರುತ್ತದೆ ಇದೆಲ್ಲಾ ಇದ್ದೂ ಆದರೂ ಸಹಿತ ಲೆಕ್ಕ ಇಲ್ಲ ಎಂದು ಹೇಳುವುದು ಯಾವಾಗ? ಕೇವಲ ಒಂದು ಟೀಕೆ ಮಾಡುವ ಉದ್ದೇಶದಿಂದ ಹೀಗೆಲ್ಲಾ ಮಾಡಿದ್ದಾರೆ, ನಿಜವಾಗಿಯೂ ವಿಷಯಗಳನ್ನು ತಿಳಿದುಕೊಂಡು ಇದನ್ನು ತಂದಿದ್ದರೆ ಖಂಡಿತವಾಗಿಯೂ ಶಿವಪ್ಪನವರಿಗೆ ಶಹಬಾಸಗಿರಿ ಕೊಡುತ್ತಾ ಇದ್ದೆ, ಈ ದಿವಸ ಅವರು ತಂದಿರುವ ನಿರ್ಣಯ ಸಮಂಜಸವಾಗಿಲ್ಲ. ಕಂದಾಯದ ಮಂತ್ರಿಗಳು ಹೇಳಿದ ಹಾಗೆ— ಬ್ರಹ್ಮಾಸ್ತ್ರ ಉಪಯೋಗಿಸಲೇ ಬೇಕಾದಾಗ ಉಪಯೋಗಿಸ ಬೇಕಾಗುತ್ತದೆ ಆದರೆ ಒಂದು ಸಣ್ಣ ಕಾರಣಕ್ಕಾಗಿ ತಂದಿರುವುದು ಸರಿಯಲ್ಲ ಎಂದು ಹೇಳಿ ಅವರು ತಂದಿರುವ ಈ ಸೂಚನೆಯನ್ನು ವಾಪಸು ಪಡೆಯಬೇಕೆಂದು ಹೇಳಿ ಮುಗಿಸುತ್ತೇನೆ.

† ಶ್ರೀ ಮಹಾಂತಸ್ವಾಮಿ ವಿರೂಪಾಕ್ಷಯ್ಯ (ಷಹಾಪುರ).—ಸ್ವಾಮಿ ಅಧ್ಯಕ್ಷರೇ, ಇಂದು ನಮ್ಮ ಬೃಹತ್ ಭವನದಲ್ಲಿ ವಿರೋಧ ಪಕ್ಷದ ನಾಯಕರು ತಂದಿರತಕ್ಕ ಈ ಅವಿಶ್ವಾಸ ನಿರ್ಣಯವನ್ನು ಸ್ವಾಗತಿಸಿ ಒಂದೆರಡು ವಿಷಯಗಳನ್ನು ಹೇಳಬೇಕೆಂದು ಇದ್ದೇನೆ. ಈ ಅವಿಶ್ವಾಸದ ಬಗ್ಗೆ ಮಾತ ನಾಡುತ್ತಾ ನಮ್ಮ ರಾಜ್ಯದಲ್ಲಿ ಪ್ರಸ್ತುತ ರಾಜ್ಯಭಾರವನ್ನು ನಡೆಸಿಕೊಂಡು ಹೋಗತಕ್ಕ ಈ ಮಂತ್ರಿ ಮಂಡಲ ತನ್ನ ಕರ್ತವ್ಯ ಲೋಪವನ್ನು ಮಾಡಿದೆ, ಅದರ ಕರ್ತವ್ಯ ಕುಂಠಿತವಾಗಿದೆ, ಅದು ಮಾಡತಕ್ಕ ಕೆಲಸದಲ್ಲಿ ಹಿಂಜರಿಯುತ್ತಾ ಇದೆ ಕಾರ್ಯತತ್ಪರತೆ ಗಜಗಮನದಂತೆ ನಡೆಯುತ್ತಾ ಇದೆ ಎಂಬ ವಿಷಯವನ್ನು ತೆಗೆದುಕೊಂಡು ನಮ್ಮ ವಿರೋಧ ಪಕ್ಷದ ನಾಯಕರು ಈ ಅವಿಶ್ವಾಸ ನಿರ್ಣಯ ವನ್ನು ಈ ಬೃಹತ್ ಸಭೆಯಲ್ಲಿ ಮಂಡಿಸಿದ್ದಾರೆ. ಸ್ವಾಮಿ ಈ ಅವಿಶ್ವಾಸ ನಿರ್ಣಯ ಬರುತ್ತಿರುವುದು ಎರಡನೆಯ ಸಲ, ಮೊದಲನೆಯ ಸಲ ಯಾವ ವಿಷಯಗಳನ್ನು ನಮ್ಮ ಮುಖಂಡರು ಪ್ರಸ್ತಾಪ ಮಾಡಿದರೋ ಅದೇ ವಿಷಯಗಳನ್ನು ಈ ಸಲವೂ ಪ್ರಸ್ತಾಪ ಮಾಡಿ ಒಂದೆರಡು ವಿಷಯಗಳನ್ನು ಹೆಚ್ಚಿಗೆ ಹೇಳಿದ್ದಾರೆ. ಅದೇ ಶರಾವತಿ, ಅದೇ ಮೈಸೂರು ವಿದ್ಯುತ್ ಮಂಡಲಿ, ಅದೇ ಖಾದಿ ಮಂಡಲಿ ಹೀಗೆ ವಿಷಯಗಳನ್ನು ಹೇಳುತ್ತಾ ಇನ್ನೂ ಕೆಲವು ವಿಷಯಗಳನ್ನು ಹೇಳಿದ್ದಾರೆ, ಶರಾವತಿ ಯಲ್ಲಿ ಆಗಿರತಕ್ಕ ಒಂದು ಅವ್ಯವಹಾರದ ಮೇಲೆ ಮೈಸೂರು ಅಲ್ಲದೇ ಅಕ್ಕಪಕ್ಕದ ರಾಜ್ಯಗಳಿಗೂ ಕೂಡ ಅದರ ಶಖೆ ತಗಲಿದೆ. ಶರಾವತಿಯಲ್ಲಾಗಿರತಕ್ಕ ಒಂದು ಅವ್ಯವಹಾರದಿಂದ ಕರ್ನಾಟಕದಲ್ಲಿ ವಾಸಮಾಡತಕ್ಕ 237 ಲಕ್ಷ ಕನ್ನಡಿಗರಲ್ಲಿ ಯಾವ ಕನ್ನಡಿಗನೂ ಕೂಡ ರೋಮಾಂಚನ ಏಳದೇ ಇರತಕ್ಕ ವನೇ ಇಲ್ಲ. ಹೀಗೆ ಶರಾವತಿಯಲ್ಲಿ ಆಗಿ ಹೋಗಿರತಕ್ಕ ಒಂದು ವಿಷಯ ನಮ್ಮ ಕನ್ನಡ ನಾಡಿನಲ್ಲಿ

ಎಲ್ಲರಿಗೂ ಪರಿಚಯವಾದಂತಹುದು. ಈ ವಿಷಯವನ್ನು ಹಿಂದೊಮ್ಮೆ ಪರಿಶೀಲಿಸುತ್ತಿದ್ದಾಗಿ ನಮ್ಮ ನಾಡಿನ ಮುಖ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು, ತೀವ್ರದಲ್ಲೇ ನಾನು ಯಾವುದಾದರೂ ಒಂದು ಇತ್ಯರ್ಥಕ್ಕೆ ಬಂದು ಒಂದು ಸಮಾಧಾನಕರವಾದ ತೀರ್ಮಾನವನ್ನು ಈ ಬೃಹತ್ ಸಭೆಯಲ್ಲಿ ಕೊಡುತ್ತೇನೆ, ನೀವು ಇದೆಲ್ಲವನ್ನೂ ನನಗೆ ಬಿಟ್ಟು ಬಿಡಿ ಎಂದು ಹೇಳಿದ್ದರು. ಇದುವರೆಗೂ ಆ ಶರಾವತಿಯ ಬಗ್ಗೆ ಒಂದಾದರೂ ಸಮಾಧಾನಕರವಾದ ತೀರ್ಮಾನ ಮಾನ್ಯ ಮುಖ್ಯ ಮಂತ್ರಿಗಳಿಂದ ಬರಲಿಲ್ಲ. ಹೀಗೆಯೇ ಖಾದಿ ಬೋರ್ಡಿನ ಬಗ್ಗೆಯೂ ಸಾಕಾದಷ್ಟು ಚರ್ಚಾತ್ಮಕವಾಗಿ, ವಿಮರ್ಶಾತ್ಮಕವಾಗಿ ನಮ್ಮ ವರ್ಗದಲ್ಲೇ ಅಲ್ಲ ಅವರ ವರ್ಗದಲ್ಲೂ ಕೂಡ ಎಷ್ಟೋ ವಿಷಯಗಳನ್ನು ತಮ್ಮೊಳಗೆ ತಾವೇ ಕೆಲವು ಕಾಂಗ್ರೆಸ್ಸಿಗರು ಒಂದು ಪೇಪರ್‌ನ ಮುಖಾಂತರ ಮೊನ್ನೆ ಆಗಿ ಹೋಗಿರತಕ್ಕ ಅಧ್ಯಕ್ಷರು ಸ್ವತಃ ತಾವೇ ಪತ್ರಿಕಾ ಕರ್ತರನ್ನು ಕರೆಸಿ ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರೇನೂ ನಮ್ಮ ಪಕ್ಷದವರಲ್ಲ, ನಿಮ್ಮ ಪಕ್ಷದವರೇ ಇದ್ದುಕೊಂಡು............

ಒಬ್ಬ ಸದಸ್ಯರು.—ಅದನ್ನು ನೋಡಿದರೆ ಅವರು ನಿಮ್ಮ ಪಕ್ಷದಲ್ಲಿ ಇದ್ದ ಹಾಗೇ ಇದ್ದಾರೆ.

(ಸಭೆಯಲ್ಲಿ ನಗು.)

ಶ್ರೀ ಮಹಾಂತಸ್ವಾಮಿ ವಿರೂಪಾಕ್ಷಯ್ಯ.—ಸರಿ ಹಾಗಾದರೆ ಸ್ವಾಗತಿಸುತ್ತೇನೆ. ಈ ಅವಿಶ್ವಾಸ ನಿರ್ಣಯವನ್ನು ವರ್ಣಿಸಬೇಕಾದರೆ ಮಹಾಭಾರತದ ಒಂದು ಸಣ್ಣ ದೃಷ್ಟಾಂತವನ್ನು ಕೊಟ್ಟು ಹೇಳುವುದಾದರೆ: ಇದು ಮಹಾಭಾರತ ಯುದ್ಧ, ಕರ್ನಾಟಕ ರಾಜ್ಯವನ್ನು ಭದ್ರಪಡಿಸತಕ್ಕ ಕರ್ನಾಟಕ ರಾಜ್ಯದ ಪ್ರಜೆ ಧನುರ್ಧಾರಿ ನಿಜಲಿಂಗಪ್ಪನವರು ಅರ್ಜುನನಾಗಿ ತಮ್ಮ ಕೈಯಲ್ಲಿ ಗಾಂಡೀವವನ್ನು ತೆಗೆದುಕೊಂಡು ರಾಜ್ಯವನ್ನು ರೂಢಿಸಿಕೊಳ್ಳಬೇಕೆಂದಿರತಕ್ಕ ಸಮಯದಲ್ಲಿ ತಮ್ಮ ಹಿನ್ನೆಲೆಯಲ್ಲಿರತಕ್ಕ ಗಜಬಲ, ಅಶ್ವಬಲ, ಜನಬಲ ವೆಂಬ ಸಂಸಾರವನ್ನು ನಿರ್ವಹಣೆ ಮಾಡತಕ್ಕ ಕರ್ತವ್ಯ ಪಾಲನೆಯಲ್ಲಿ ಹಿಂಜರಿಯುತ್ತಿರುವುದನ್ನು ಕಂಡುಕೊಂಡು ನಮ್ಮ ಕೃಷ್ಣರೂಪಿಯಾಗಿರತಕ್ಕ ಶಿವಪ್ಪನವರು

"ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಮೈಸೂರು ನಿಜಲಿಂಗಪ್ಪ
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ"

ಎಂದು ಹೇಳಿ ಈ ಸಮಯದಲ್ಲಿ ಎಚ್ಚರಿಕೆ ಕೊಡುತ್ತಾ ಇದ್ದಾರೆ ಎಂದು ಈ ಒಂದು ಆಧುನಿಕ ಗೀತಾ ಶ್ಲೋಕವನ್ನು ಉದ್ಧರಿಸುತ್ತಾ ಇದ್ದೇನೆ. ಇಂಥಾ ಒಂದು ಅವಿಶ್ವಾಸ ನಿರ್ಣಯ ಈ ಬೃಹತ್ ಸಭೆಯಲ್ಲಿ ಬರುತ್ತಾ ಇರುವುದು ಇದು ಎರಡನೆಯ ಸಲ. ಕಂದಾಯ ಸಚಿವರು ಈ ವಿಷಯದಲ್ಲಿ ಮಾತನಾಡುತ್ತಾ ಮಾಡಿದ ಭಾಷಣ ನೋಡಿದರೆ ಚುನಾವಣೆಯ ಕಾಲದಲ್ಲಿ ಮಾಡುವಂತಹ ಭಾಷಣವನ್ನು ಈ ಬೃಹತ್ ಸಭೆಯಲ್ಲಿ ಮಾಡುತ್ತಾ ಹೋದರು. ಭಕ್ರಾನಂಗಲ್ ಕಟ್ಟಿಸಿದ್ದೇವೆ, ಹೀರಾಕುಡ್ ಕಟ್ಟಿಸಿದ್ದೇವೆ, ನಾಗಾರ್ಜುನ ಸಾಗರ ಕಟ್ಟಿಸಿದ್ದೇವೆ, ಶ್ರೀ ಶೈಲಕ್ಕೆ ತಳಹದಿ ಹಾಕಿದ್ದೇವೆ, ಕೃಷ್ಣರಾಜಸಾಗರ ಅಣೆಕಟ್ಟು ಇದೆ. ತುಂಗಭದ್ರಾ ಕಟ್ಟಿಸಿದ್ದೇವೆ ಹಾಗೆ ಹೀಗೆ ಎಂದು ಹೇಳಿದರು, ಉತ್ತರ ಹಿಂದೂಸ್ತಾನದಲ್ಲಿ ಹಾಕಿರತಕ್ಕ ಮಹಾನ್ ಯೋಜನೆಗಳಲ್ಲಿ ನೀವು ಪರಕೀಯರ ದಾಸ್ಯ ಶೃಂಖಲೆಯಿಂದ ಹೊರಬಂದ ಮೇಲೆ ಕಟ್ಟಿ ಪೂರೈಸಿರತಕ್ಕ ಯೋಜನೆಗಳೇ ಹೊರತು ನೀವಾಗಿ ನೀವೆ ಮಾಡಿರತಕ್ಕ ಒಂದು ಯೋಜನೆಯೂ ಇಲ್ಲ. ಇವೆಲ್ಲಾ ಅದಕ್ಕೆ ಪೂರ್ವದಲ್ಲೇ ಆಗಿರತಕ್ಕವು ಕೃಷ್ಣರಾಜ ಸಾಗರ ಯಾರ ಕಾಲಕ್ಕೆ ಆಯದ್ದು ? ಶ್ರೀಮನ್ ಮಹಾರಾಜರ ಕಾಲಕ್ಕೆ ಆದದ್ದು ಅದು, ಅದೇ ರೀತಿ ತುಂಗಭದ್ರಾ ತೆಗೆದುಕೊಳ್ಳಿ ನಮ್ಮ ಹೈದರಾಬಾದ್‌ನ ನಿಜಾಮರಾದ ಮೀರ್ ಉಸ್ಮಾನ್ ಆಲಿಖಾನ್ ಅವರ ಕಾಲದಲ್ಲ ಪ್ರಾರಂಭವಾದ ತುಂಗಭದ್ರಾ ಅಣೆಕಟ್ಟನ್ನು ನಿಮ್ಮ ಕಾಲಕ್ಕೆ ಮುಗಿಸಿದಿರಿ. ಹಾಗಿರುವಾಗ ನಾವು ಹಾಗೆ ಮಾಡುತ್ತಾ ಇದ್ದೇವೆ ಹೀಗೆ ಮಾಡುತ್ತಾ ಇದ್ದೇವೆ—ಎಂದು ಹೇಳುವಾಗ ಒಂದು ವಿಷಯವನ್ನು ತೆಗೆದುಕೊಳ್ಳೋಣ ಜಗತ್‌ಪ್ರಸಿದ್ಧವಾದ ಒಂದು ವಿದ್ಯುತ್ ಆಗರವನ್ನು ನಾವು ಕಟ್ಟಿಸುತ್ತಾ ಇದ್ದೇವೆ. ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಮನಸ್ಸಿನಲ್ಲಿ ಇಟ್ಟುಕೊಂಡು ಶರಾವತಿಯನ್ನು ಕಟ್ಟಿಸುವುದಕ್ಕೆ ಹೋದರೆ ಸಂಸ್ಕೃತದಲ್ಲಿ ಒಂದು ಗಾದೆ ಇದೆ. 'ಪ್ರಥಮ ಭಕ್ಷಣಂ ಭಕ್ಷಿತಾಹ,' ಎಂದು. ಮೊದಲೇನು ಸಿಕ್ಕುತ್ತದೆಯೋ ಅದನ್ನೇ ನುಂಗಿಹಾಕೋಣ ಎಂದು ಈ ಶ್ಲೋಕದ ಅರ್ಥ. ಈ ಪ್ರಕಾರವಾಗಿ ಈ ಸರ್ಕಾರ ಆ ಶರಾವತಿ ಯೋಜನೆಯ ಕೆಲಸ ಕಾರ್ಯಗಳನ್ನು ಕಾರ್ಯಗತ ಮಾಡುವುದರಲ್ಲಿ ತನ್ನ ಕರ್ತವ್ಯವನ್ನು ಸರಿಯಾಗಿ ಪರಿಪಾಲನೆ ಮಾಡಿಕೊಂಡು ಬಂದಿದೆಯೇ ಎಂಬುದನ್ನು ವಿಮರ್ಶೆಮಾಡಿ ನೋಡಿದರೆ ಇದರಲ್ಲಿ ಇವರು ಹಿಂಜರಿದಿದ್ದಾರೆ ಎಂಬುದು ಎಲ್ಲರಿಗೂ ವೇದ್ಯವಾಗುತ್ತದೆ. ಇವರು 100 ಕೋಟಿಯಲ್ಲಿ ಶೇಕಡ ಹತ್ತರಷ್ಟನ್ನು ಮಾತ್ರ ಕಾರ್ಯಗತ ಮಾಡಿದ್ದಾರೆ ಎಂಬುದು ಜಗತಪ್ರಾಹಿರಾತಾದದ್ದು.

(ಶ್ರೀ ಮಹಾಂತಸ್ವಾಮಿ ವಿರೂಪಾಕ್ಷಯ್ಯ)

3-30 P.M.

ಇನ್ನು ನಾವು ಸ್ವಲ್ಪ ಆ ವಿದ್ಯಾ ಇಲಾಖೆಯ ಕಡೆಗೆ ಒಂದು ವಿಹಂಗಮ ದೃಷ್ಟಿ ಇಟ್ಟು ನೋಡುವುದಾದರೆ, ಹೇಳುವುದಾದರೆ ಅದೊಂದು ಮಹಾಭಾರತ ಅಥವಾ ರಾಮಾಯಣವೇ ಆಗುತ್ತದೆ ಎಂದರೆ ಅದರಲ್ಲಿ ಅತಿಶಯೋಕ್ತಿಯೇನಿಲ್ಲ. ಇದರಲ್ಲಿ ಅಷ್ಟು ಲೋಪ ದೋಷಗಳಿವೆ. ಮೈಸೂರು ದೇಶದಲ್ಲಿರತಕ್ಕ ಜನಾಂಗದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆ ಜನರು ಬೆವರು ಸುರಿಸಿ ದುಡಿದಂಥ ಕಂದಾಯದಲ್ಲಿ ಹಳ್ಳೀ ಬಡಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ಈ ವಿದ್ಯಾಖಾತೆಯ ಕಡೆಗೆ 18 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ; ಅದರಲ್ಲಿ 10 ಕೋಟಿ ರೂಪಾಯಿಗಳನ್ನು ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಮೀಸಲಾಗಿಡಲಾಗಿದೆ. ಸ್ವಾಮಿ ನಮ್ಮ ಹೈದ್ರಾಬಾದ ಕರ್ಣಾಟಕದಲ್ಲಿ ಸುಮಾರು ಮೂರುಸಾವಿರ ಹಳ್ಳಿಗಳಲ್ಲಿರತಕ್ಕ ಮೂರು ಸಾವಿರ ಶಾಲೆಗಳಲ್ಲಿ ಎಷ್ಟೋ ಶಾಲೆಗಳಲ್ಲಿ ಶಿಕ್ಷಕರಿಲ್ಲ, ಶಿಕ್ಷಕರಿದ್ದರೆ ಶಾಲಾ ಕಟ್ಟಡಗಳಿಲ್ಲ, ಶಿಕ್ಷಕರೂ ಶಾಲಾ ಕಟ್ಟಡಗಳೂ ಇದ್ದರೆ ಅಲ್ಲಿ ಬಾಲಕರಿರುವುದಿಲ್ಲ. ನಮ್ಮ ಹೈದರಾಬಾದ್ ಕರ್ಣಾಟಕ ಪ್ರದೇಶದಲ್ಲಿ ಈ ಪ್ರಕಾರ ನಡೆಯುತ್ತಿದ್ದರೆ, ಇನ್ನು ಮುಂಬೈ ಕರ್ಣಾಟಕದಲ್ಲಿ ಯಾವ ರೀತಿ ಈ ಪ್ರಾಥಮಿಕ ವಿದ್ಯಾಭ್ಯಾಸ ನಡೆಯುತ್ತಿದೆ ಎಂದರೆ ಅಲ್ಲಿಯದೇ ಒಂದು ಬಹಳ ವಿಚಿತ್ರ ರೀತಿಯದಾಗಿದೆ. ಅಲ್ಲಿ 100ಕ್ಕೆ 95 ಭಾಗದಲ್ಲಿ ಹುಡುಗರು ಕುಳಿತುಕೊಳ್ಳಲು ಒಂದು ನೆರಳೂ ಸಹಾ ಇಲ್ಲ. ಆ ಭಾಗದಲ್ಲಿ ಕಟ್ಟಡಗಳೇ ಇಲ್ಲ. ಈ ರೀತಿಯಾಗಿ ಆ ಮುಂಬೈ ಕರ್ಣಾಟಕದಲ್ಲಿ ಶಾಲಾ ಮಂಡಳಿ ಕೆಲಸ ಮಾಡುತ್ತಿದೆ. ಇನ್ನು ಆ ಬಿಜಾಪುರ, ಧಾರ್ವಾಡ, ಬೆಳಗಾಂ ಮತ್ತು ಕಾರವಾರ ಜಿಲ್ಲೆಗಳಲ್ಲಿ ನಡೆಯತಕ್ಕ ವಿದ್ಯಾಭ್ಯಾಸವೇ ಒಂದು ರೀತಿಯದು, ಆ ಶಿಕ್ಷಣ ಪದ್ಧತಿಯನ್ನು ಒಂದು ಅಭೂತಪೂರ್ವವೆಂದೇ ಹೇಳಬಹುದು. ಆದರೆ ಈ ಶಿಕ್ಷಣ ಪದ್ಧತಿಯಲ್ಲಿ ನಮ್ಮ ಹೈದ್ರಾಬಾದ್ ಕರ್ಣಾಟಕ ಮತ್ತು ಹಳೇ ಮೈಸೂರು ಈ ಎರಡು ಭಾಗಗಳಲ್ಲಿ ನಡೆಯತಕ್ಕ ಶಿಕ್ಷಣ ಕ್ರಮ ಒಂದು ಒಂದು ರೀತಿಯವಾಗಿದ್ದರೆ ಆ ಮುಂಬೈ ರಾಜ್ಯದ ಶಿಕ್ಷಣ ಪದ್ಧತಿಯೆ ಒಂದು ಆಶ್ಚರ್ಯಕರವಾದ ರೀತಿಯಲ್ಲಿದೆ. ಆ ವಿಚಾರದಲ್ಲಿ ಮುಂಬೈ ಶಾಲಾ ಬೋರ್ಡಿನ ಅಧ್ಯಕ್ಷರೇ ಅದಕ್ಕೆ ಸಾರ್ವಭೌಮರಾಗಿದ್ದಾರೆ ಎಂದರೆ ಅತಿಶಯವಲ್ಲ. ಈ ವಿಚಾರದಲ್ಲಿ ವಿದ್ಯಾ ಮಂತ್ರಿಗಳು ಕೂಡಲೆ ಕ್ರಮ ಕೈಗೊಳ್ಳಬೇಕೆಂದು ನಾನು ಅವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಆ ಮುಂಬೈ ಪ್ರಾಂತ್ಯದ ಪ್ರಾಥಮಿಕ ಶಿಕ್ಷಣವನ್ನು ಬದಿಗಿರಿಸಿ ಈ ಹೈದ್ರಾಬಾದ್ ಮತ್ತು ಹಳೇ ಮೈಸೂರು ಪ್ರಾಂತದಲ್ಲಿರತಕ್ಕ ಶಿಕ್ಷಣವೇನಿದೆ ಅದನ್ನೇ ಅಲ್ಲಿಯೂ ಜಾರಿಗೆ ತರುವುದು ಉತ್ತಮವೆಂದು ನಾನು ಮಂತ್ರಿಗಳಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ತಾಂತ್ರಿಕ ಶಿಕ್ಷಣದ ಕಾಲೇಜುಗಳ ಹಾಗೂ ವೈದ್ಯಕೀಯ ಕಾಲೇಜುಗಳ ವಿಚಾರವನ್ನು ತೆಗೆದುಕೊಂಡರೆ ಅಲ್ಲಿ ನಡೆಯುತ್ತಿರುವಷ್ಟು ಅಧರ್ಮಗಳೂ, ಅನೀತಿಗಳೂ, ಮೇರು ಪರ್ವತದಂತೆ ಎಲ್ಲರಿಗೂ ಎದ್ದು ಕಾಣುತ್ತಿವೆ. ಈ ಶಾಲೆಗಳಲ್ಲಿ ಪ್ರವೇಶ ದೊರಕಿಸಿಕೊಳ್ಳಲು ನಮ್ಮ ದೇಶದವರಿಗೆ 3 ಸಾವಿರ, ಹೊರಗಿನವರಿಗೆ 5 ಸಾವಿರ ಎಂತ ಈ ವಿಚಾರ ಇಷ್ಟು ಕಟುವಾಗಿ ಪತ್ರ ವ್ಯವಹಾರಗಳಲ್ಲಿ ನಡೆಯುತ್ತಿದೆ. ಆದರೇ ಇದೇ ವ್ಯವಹಾರ ಕಾಳಸಂತೇಲಿ 3 ಸಾವಿರಕ್ಕೆ ಬದಲಾಗಿ 6 ಸಾವಿರ, 5 ಸಾವಿರಕ್ಕೆ ಬದಲಾಗಿ 10 ಸಾವಿರ ರೂಪಾಯಿಗಳನ್ನು ಪಡೆದುಕೊಂಡು ಆ ಶಾಲಾ ಕಾಲೇಜುಗಳು ಕೆಲಸ ಮಾಡುತ್ತಿದೆ. ದೇಶದಲ್ಲಿರತಕ್ಕ ಒಕ್ಕಲು ಮಕ್ಕಳ ಜೀವನ ಬಹಳ ದುಷ್ಪಟ್ಟಾಗಿರುವುದರಿಂದ ಅವರ ಮಕ್ಕಳಿಗೆ ಉಚಿತವಾಗಿ ಪುಕ್ಕಟ್ಟೆ ಈ ವಿದ್ಯಾಭ್ಯಾಸವನ್ನು ಒದಗಿಸಬೇಕೆಂದೂ ಇದರ ಜವಾಬ್ದಾರಿ ಸರ್ಕಾರದ ಮೇಲೆ ಇರುತ್ತದೆಂದು ನಾವೆಲ್ಲರೂ ಭಾವಿಸಿರುವಾಗ ಸರ್ಕಾರ ಈ ರೀತಿ ಮಾಡುತ್ತಾ ಇರುವುದು ಅವರ ಕರ್ತವ್ಯಲೋಪವನ್ನು ಇದು ಎತ್ತಿ ಸೂಚಿಸುತ್ತಿದೆ

ಇನ್ನು ಗೃಹ ವಿಭಾಗದ ಕಡೆ ವಿಚಾರಕ್ಕೆ ಬಂದರೆ ಅಲ್ಲಿ ಹೇಳತೀರದಾಗಿದೆ. ಈ ಬಾಬಿನಲ್ಲಿ ಅಷ್ಟೊಂದು ಅಪಾರ್ಥಗಳೂ ಅವ್ಯವಹಾರಗಳೂ ನಡೆಯುತ್ತಿವೆ. ಈ ವಿಚಾರ ಸಮಸ್ತರಿಗೂ ಗೊತ್ತಿದೆ. ನಮ್ಮ ಭಾಗದಲ್ಲಿ ಒಬ್ಬ ಸಾಮಾನ್ಯ ಶಿಪಾಯಿಯಿಂದ ಹಿಡಿದು ಉನ್ನತಾಧಿಕಾರಿಗಳ ವರೆಗೂ ಒಂದು ದೊಡ್ಡ ಭ್ರಷ್ಟಾಚಾರ ನಡೆಯುತ್ತಿದೆ. ನಿರಕ್ಷರಸ್ಥರಾದ ಹಳ್ಳೀ ಜನರ ಅಜ್ಞಾನವನ್ನು ಅವಕಾಶ ಮಾಡಿಕೊಂಡು ಅವರಿಂದ ಹೇಗೆ ಹಣವನ್ನು ಸುಲಿಯಬೇಕು ಎಂಬುದೇ ಸದಾ ಆ ಅಧಿಕಾರಿಗಳ ಕರ್ತವ್ಯವಾಗಿದೆ. ಹೀಗೆ ತಮ್ಮ ಕರ್ತವ್ಯಲೋಪ ಮಾಡಿಕೊಂಡಿರುವಂತ ಅನೇಕ ಅಧಿಕಾರಿಗಳು ನಮ್ಮಲ್ಲಿದ್ದಾರೆ. ಜನರಲ್ಲಿರತಕ್ಕ ಹಣವನ್ನು ಹೇಗೆ ಸುಲಿಯಬೇಕು, ಅದಕ್ಕೇನುಪಾಯ ಹೂಡಬೇಕು ಎಂಬುದೇ ಸದಾ ಅವರ ಚಿಂತೆಯಾಗಿದೆ. ಅವರಿಗೆ ಇದನ್ನು ಬಿಟ್ಟರೆ ಬೇರೆ ಉದ್ಯೋಗವೇ ಇಲ್ಲ. ಹೀಗೆ ಅವರು ತಮ್ಮ ಕರ್ತವ್ಯವನ್ನು ಲೋಪಮಾಡಿಕೊಂಡಿರುವುದೊಂದೇ ಅಲ್ಲದೇ, ಹಣದ ದಾಹ ಅವರಲ್ಲಿ ಉಲ್ಬಣವಾಗಿ ಅವರೇ ಜನರನ್ನು ಸುಲಿಗೆ ಮಾಡುವುದಕ್ಕೂ ಕೂಡ ಸಿದ್ಧರಾಗಿದ್ದಾರೆ. ಇದಕ್ಕೆ ಬೇಕಾದಷ್ಟು ನಿದರ್ಶನಗಳನ್ನು ಕೊಡಬಹುದು.

ಇನ್ನು ಪಾನ ನಿರೋಧದ ವಿಚಾರಕ್ಕೆ ಬಂದರೆ ಇದಂತೂ ಖಂಡಿತ ಜಯಪ್ರದವಾಗಿಲ್ಲ. ಇದನ್ನು ಕೂಲಂಕಷವಾಗಿ ವಿಚಾರ ಮಾಡಿದರೆ ಇದರ ಪದ್ಧತಿಯೇ ಬೇರೆ. ಅಂತೂ ದೇಶದಲ್ಲಿ ಇದು ಎಲ್ಲಿಯೂ ಯಶಸ್ವಿಯಾಗಿಲ್ಲ. ಈ ಪಾನ ನಿರೋಧದ ಶಾಸನವನ್ನು ನಖಶಿಖಾಂತದವರೆಗೆ ಅಧಿಕಾರಿಗಳು ಮುರಿದು ಹಾಕುತ್ತಿದ್ದಾರೆ. ಅವರೆ ಕುಡಿಯುವುದರಲ್ಲಿ ಎಲ್ಲರಿಗಿಂತಲೂ ಮುಂದಾಗಿದ್ದಾರೆ. ಈಗ ಆಂಧ್ರ ರಾಜ್ಯದಲ್ಲಿ ಮಧುರಪಾದ್ಯ ಎಂದು ತಯಾರುಮಾಡುತ್ತಿದ್ದಾರೆ. ಈ ದಿವಸ ನಾವು ಹಣಕ್ಕಾಗಿ ಕೇಂದ್ರ ಸರ್ಕಾರದವರಲ್ಲಿ ಏಕೆ ಭಿಕ್ಷೆ ಬೇಡಬೇಕು ? ಈ ಪಾನ ನಿರೋಧವನ್ನು ಕಿತ್ತು ಹಾಕಿ ಸ್ವೀಟ್‌ಟಾಡಿಯನ್ನು ತಯಾರು ಮಾಡಿ ಅದನ್ನು ಜಾರಿಗೆ ತಂದರೆ 10 ವರ್ಷಗಳಲ್ಲೇ ನಮಗೆ 100 ಕೋಟಿ ರೂಪಾಯಿಗಳ ಉತ್ಪತ್ತಿ ಬರುತ್ತದೆ. ಆದುದರಿಂದ ನಾನು ಇದನ್ನು ಬೇಗ ಕಿತ್ತುಹಾಕಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದರಿಂದ ನಮ್ಮ ಇತರ ಕೋಟ್ಯಾಂತರ ರೂಪಾಯಿಗಳ ಯೋಜನೆಗೆ ಇದರಿಂದ ತುಂಬಾ ಸಹಾಯವಾಗುತ್ತದೆ. ಇದನ್ನು ಕೂಡಲೇ ಜಾರಿಗೆ ತರಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಮಾನ್ಯ ಅಧ್ಯಕ್ಷರೇ, ನನಗೆ ಅಧ್ಯಕ್ಷರು 20 ನಿಮಿಷಗಳಷ್ಟು ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇವೊತ್ತಿನ ವಿಚಾರದಲ್ಲಿ ನಮ್ಮ ಅಪೋಸಿಷನ್ನು ಪಾರ್ಟಿಯವರು ಅವಿಶ್ವಾಸ ನಿರ್ಣಯ ಎಂದು ತಂದಿರುವುದು ಬಹಳ ಶೋಚನೀಯವಾಗಿದೆ; ಈ ವಿಚಾರದಲ್ಲಿ ವಿರೋಧ ಮಾಡುತ್ತ ನಾನು ಎರಡು ಸಲಹೆಗಳನ್ನು ಕೊಡುತ್ತೇನೆ. ಈ ಅವಿಶ್ವಾಸದ ಠರಾವು ಕೇವಲ ಮೊನ್ನೆ ತಾನೇ ತಂದಿದ್ದುದನ್ನು ಪುನಃ ಇಲ್ಲಿ ಇಂದು ಏಕೆ ತಂದಿದ್ದಾರೆ ಎನ್ನುವುದು ಅರ್ಥವಾಗುತ್ತಿಲ್ಲ. ನಮ್ಮ ಪಕ್ಷದವರು ಮೆಜಾರಿಟಿಯಲ್ಲಿದೆ, ಅದರಿಂದ ನಮ್ಮ ಪಕ್ಷದವರೇ ಆಡಳಿತ ನಡೆಸುತ್ತಿದ್ದಾರೆ. ವಿರೋಧ ಪಕ್ಷದವರಿಗೆ ಆಡಳಿತಕ್ಕೆ ಬರಲು ಅವಕಾಶವಿಲ್ಲ. ಇಂತಹ ಅವಿಶ್ವಾಸದ ಠರಾವನ್ನೂ ತಂದು ಅಮೂಲ್ಯವಾದ ಕಾಲವನ್ನು ಏಕೆ ಕಳೆಯುತ್ತಾರೋ ನನಗೊಂದೂ ಅರ್ಥವಾಗುತ್ತಿಲ್ಲ. ಎರಡು ದಿನಗಳಿಂದಲೂ ಈ ಸಭೆಯ ಅಮೂಲ್ಯ ಕಾಲವನ್ನು ವೇಸ್ಟು ಮಾಡಿದರೆ ಹೇಗೆ ?

ತುಲಾಭಾರದ ವಿಚಾರವಾಗಿ ಹೇಳಿದರು. ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರನ್ನು ಬಿಜಾಪುರಕ್ಕೆ ಕರೆಸಿಕೊಂಡು ಎಷ್ಟೋ ಲಕ್ಷ ರೂಪಾಯಿಗಳಷ್ಟು ಚಿನ್ನವನ್ನು ತೂಕ ಮಾಡಿ ಅಲ್ಲಿನ ಜನ ಕೊಟ್ಟರೆ ಇವರೇಕೆ ಇಷ್ಟು ಖರ್ಚು ಮಾಡಿದರು ಎಂದು ಹೇಳುತ್ತಾರೆ. (ನಗು). ಇಂತಹ ಪ್ರಾಮುಖ್ಯವಾದ ಕೆಲಸಕ್ಕಾಗಿ ಖರ್ಚು ಮಾಡಿದರೂ ಇದರಿಂದ ಪ್ರಯೋಜನವೇನು ಎನ್ನುತ್ತಾರೆ.

ಇನ್ನು ಈ ದೇಶದ ಸರಕಾರದ ಆಡಳಿತದ ವಿಚಾರದಲ್ಲಿ ಒಳ್ಳೆಯದು ಮಾಡಬೇಕೆನ್ನುವುದಿದ್ದರೆ ಅದರ ಐಡಿಯಾವನ್ನು ಸರ್ಕಾರಕ್ಕೆ ಕೊಡಲಿ. ಅದನ್ನು ಪರಿಶೀಲಿಸೋಣ. ಅದನ್ನು ಬಿಟ್ಟು ಸುಮ್ಮನೆ ಹೀಗೇಕೆ ಹೇಳುತ್ತಾರೆ? ಅಲ್ಲದೆ ಮಾನ್ಯ ಸದಸ್ಯರು ನಾವು ಎರಡು ಕೋಟಿ ಮೂವತ್ತೆರಡು ಲಕ್ಷ ಜನರ ಪರವಾಗಿ ಹೇಳುತ್ತೇವೆ ಎಂದು ಹೇಳಲು ಅವರಿಗೇನು ಅಧಿಕಾರವಿದೆ; ಕಾಂಗ್ರೆಸ್ಸು ಪಕ್ಷವಿಲ್ಲವೇನು ? ಅಪೋಸಿಷನ್ನಿನವರೊಬ್ಬರೇ ಎರಡು ಕೋಟಿ ಜನರ ಪರವಾಗಿದ್ದಾರೆಯೇ ?...... ಯಾವಾಗಲೂ ಹೇಳುವಾಗ ಅವರೂ ಸ್ವಲ್ಪ ರೀಸನಬಲ್ ಆಗಿರಬೇಕು. ನಮ್ಮ ಪಕ್ಷದವರೇ ಮೆಜಾರಿಟಿಯಲ್ಲಿರುವುದರಿಂದ ಆಡಳಿತ ಪಕ್ಷದವರು ಇಂತಹವರಿಗೆ ಮಾತನಾಡಲು ಅವಕಾಶಕೊಟ್ಟಿದ್ದೇ ಜಾಸ್ತಿ ಎಂದು ಕಾಣುತ್ತೆ.

ಹಾಗೇ ಎಲೆಕ್ಷನ್ನು ವಿಚಾರದಲ್ಲಿ ಭಾಷಣ ಮಾಡುವ ಹಾಗೆ ಶರಾವತಿ ಯೋಜನೆಯ ವಿಚಾರದಲ್ಲಿ ಮಂತ್ರಿಗಳು ಬಹಳ ಅನ್ಯಾಯ ಮಾಡಿದ್ದಾರೆ; ಅಕ್ರಮಗಳಾಗಿವೆ ಎಂದು ಹಿಂದೆ ಹೇಳಿದ್ದನ್ನೇ "ಹಾಡಿದ್ದೇ ಹಾಡು ಕಿಸಬಾಯಿ ದಾಸಾ" ಎನ್ನುವಂತೆ ಹೇಳುತ್ತಲೇ ಇದ್ದಾರೆ.

(*Interruptions.*)

ಖಾದಿ ಬೋರ್ಡಿಗೆ ಸಂಬಂಧಪಟ್ಟಂತೆ ಇಲ್ಲಿಯೂ ಕೂಡ ಕೆಲವು ವಿಚಾರಗಳನ್ನು ಎತ್ತಿದಾಗ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಸಮರ್ಪಕವಾದ ಉತ್ತರ ಹೇಳಿದರೂ ಅದು ಸರಿಯಾಗಿಲ್ಲ, ಅದರಲ್ಲಿ ತಪ್ಪಿದೆ ಎಂದು ಹೇಳುತ್ತಿದ್ದಾರೆ. ನಿನ್ನೆ ದಿನ ನಾನು ವಿರೋಧಿ ಪಕ್ಷದ ಸದಸ್ಯರಾದ ಶ್ರೀಮಾನ್ ಇ. ನಾರಾಯಣ ಗೌಡರನ್ನು ಭೇಟಿ ಮಾಡಿದಾಗ ಅವರೇ ನೂರಕ್ಕೆ ನೂರರಷ್ಟು ನಮ್ಮ ಸರಕಾರ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿದರು. ಹೀಗೆ ಅಪೋಸಿಷನ್ನು ಪಕ್ಷಕ್ಕೆ ಸೇರಿದವರೇ ನಮ್ಮ ಸರ್ಕಾರ ಚೆನ್ನಾಗಿ ಕೆಲಸ ಮಾಡುತ್ತದೆ ಎಂದು ಹೇಳುತ್ತಾರೆ.

ಇನ್ನು ಬ್ರಿಟೀಷ್ ಸಾಮ್ರಾಜ್ಯದಲ್ಲಿಲ್ಲದಂತಹ ಲಂಚ ಇವೊತ್ತು ಇದೆಯೇ ? ಇದಕ್ಕಾಗಿ ನಮ್ಮ ಸರಕಾರ ಆಂಟೀಕರಪ್ಷನ್ನು ಸಿ.ಐ.ಡಿ. ಇಲಾಖೆ ಇತ್ಯಾದಿ ಮಾಡಿ ಲಂಚ ಕಡಿಮೆಯಾಗಲು ಪ್ರಯತ್ನ

(ಶ್ರೀ ಕುಂದೂರು ರುದ್ರಪ್ಪ)

ಮಾಡುತ್ತಿದ್ದಾರೆ. ಈ ಠರಾವನ್ನು ತಂದು ಲಂಚ ನಿರ್ಮೂಲನ ಮಾಡುತ್ತಾರೇನು ? ಲಂಚ, ಲಂಚ ಎಂದು ವಿರೋಧ ಪಕ್ಷದವರು ಹೇಳುತ್ತಾರಲ್ಲ, ಅವರೇ ಆದರೂ ಒಬ್ಬರನ್ನು ಈ ಇಲಾಖೆಗೆ ಹಿಡಿದು ಕೊಟ್ಟಿದ್ದಾರೋ ? (ನಗು) ಏನಾದರೂ ಇದರ ಬಗ್ಗೆ ಸಲಹೆ ಕೊಟ್ಟರೆ ಅದು ನ್ಯಾಯವಾಗಿರುತ್ತದೆ. ಹೀಗೆ ಪ್ರತಿಯೊಂದು ಇಲಾಖೆಯಲ್ಲೂ ಕೆಲಸ ಚೆನ್ನಾಗಿ ನಡೆಯುತ್ತಿದ್ದರೂ ಸುಮ್ಮನೆ ಇಲ್ಲಿ ಹೇಳು ವುದು ಸರಿಯಲ್ಲ. ನಮ್ಮ ದೇಶದಲ್ಲಿ ಲಕ್ಕವಳ್ಳಿ ಪ್ರಾಜೆಕ್ಟು, ಶರಾವತಿ ಪ್ರಾಜೆಕ್ಟು, ತುಂಗಭದ್ರಾ ಪ್ರಾಜೆಕ್ಟು ಬರಲಿಲ್ಲವೇ ಹಾಗೇ ಇಲ್ಲಿ H.M.T., H.A.L. ಮತ್ತು B.E.L. ಫ್ಯಾಕ್ಟರಿಗಳಾಗಿಲ್ಲವೇ ಹೀಗೆ ನಮ್ಮ ಸರಕಾರ ಹದಿನೇಳು ವರ್ಷಗಳಿಂದಲೂ ಆಗದ ಕೆಲಸವನ್ನು ಮೂರು ವರ್ಷಗಳಲ್ಲಿ ಮಾಡಬಹುದು ಎಂದು ಹೇಳಿರುವುದನ್ನು ಯಾರಾದರೂ ಛಾಲೆಂಜು ಮಾಡಬಹುದು. ಇದರ ಬಗ್ಗೆ ಏನಾದರೂ ಐಡಿಯಾ ಕೊಡದೆ ಸುಮ್ಮನೆ ಸರಕಾರ ರಾಜೀನಾಮೆ ಕೊಡಬೇಕೆಂದು ಹೇಳಲು ಇಷ್ಟು ಟೈಂನ್ನು ಏಕೆ ವೇಸ್ಟು ಮಾಡಬೇಕು, ಹಣವನ್ನೇಕೆ ವೆಚ್ಚಮಾಡಬೇಕು. (ನಗು). ಹೀಗೆ ಎಲ್ಲಾ ಇಲಾಖೆಯಲ್ಲಿಯೂ ಕೆಲಸಗಳು ಚೆನ್ನಾಗಿ ನಡೆಯುತ್ತಿದ್ದರೂ ಇವೆಲ್ಲ ತಪ್ಪು ಎಂದು ನಮ್ಮ ಸ್ನೇಹಿ ತರು ಹೇಳುವುದು ಸರಿಯಲ್ಲ. ನಮ್ಮ ಸದಸ್ಯರಾದ ಶ್ರೀ ಶಿವಪ್ಪನವರು ನನ್ನ ಮಿತ್ರರು. ನನ್ನ ನಮ್ಮ ರೆವೆನ್ಯೂ ಮಂತ್ರಿಗಳು ಹೇಳಿದ ಹಾಗೆ ಅವರು ಈ ನಿರ್ಣಯವನ್ನು ವಾಪಸ್ಸು ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ.

ಈಗಲಾದರೂ ಕೂಡ ತಾವು ನಮ್ಮ ಸ್ನೇಹಿತರು ನಿಮ್ಮ ನಿರ್ಣಯವನ್ನು ವಾಪಸು ತೆಗೆದು ಕೊಂಡರೆ, ನಾವೂ ನೀವೂ ಸೇರಿಕೊಂಡು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ನೀವು ಹೀಗೆ ಪದೆಪದೇ ಅವಿಶ್ವಾಸನಿರ್ಣಯವನ್ನು ತಂದರೆ, ತೋಳ ಬಂತು ತೋಳಬಂತು ಅಂತ ಕುರಿ ಕಾಯುವ ಹುಡುಗ ಕೂಗಿ, ಕೊನೆಗೆ ಅವನ ಕೂಗಿಗೆ ಯಾರೂ ಮನ್ನಣೆ ಕೊಡದಹಾಗೆ ಆಯಿತೋ ನಿಮಗೂ ಅದೇ ಗತಿ ಬರುತ್ತದೆ. ನೀವುಗಳು ಇನ್ನೂ ಚೆನ್ನಾಗಿ ದುಡಿದು ನಿಮ್ಮ ಪಾರ್ಟಿಯನ್ನು ಭದ್ರವಾಗಿ ಕಟ್ಟಬೇಕು. ಈಗ ನೀವು 50 ಜನ ಈ ಸಭೆಗೆ ಆರಿಸಿ ಬಂದಿದ್ದೀರಿ. ಈ ತರಹ ತಿರುಳಿಲ್ಲದ ವಿಷಯಗಳನ್ನು ಸಭೆಯ ಮುಂದೆ ಮಂಡಿಸಿ ಕಾಲವನ್ನು ವೃಥಾ ಕಳೆದರೆ ಇಷ್ಟು ಜನವೂ ಮುಂದೆ ಚುನಾಯಿತರಾಗುವುದಿಲ್ಲ. ನಾವು ನಮ್ಮ ಪಕ್ಷವನ್ನು ಕಟ್ಟಲು ದುಡಿದಂತೆ ಸ್ವಲ್ಪ ದುಡಿಯಿರಿ. 1940ರಲ್ಲಿ ನಮ್ಮ ಕಾಂಗ್ರೆಸ್ಸಿಗೆ ಇಷ್ಟು ಬಲವಿರಲಿಲ್ಲ. ನಾವು ಬಹಳ ದುಡಿದು ಜನಗಳ ಬೆಂಬಲವನ್ನು ಪಡೆದು, ಪಕ್ಷದ ಶಕ್ತಿ ಬೆಳೆಸಿಕೊಂಡು, ಮೈಸೂರಿಗೆ ಜವಾಬ್ದಾರಿ ಸರಕಾರ ತಂದುಕೊಟ್ಟು, ಆಡಳಿತವನ್ನು ಆಗಿನಿಂದಲೂ ದಕ್ಷತೆಯಿಂದ ನಿರ್ವಹಿಸಿ ಈ ಉನ್ನತ ಸ್ಥಿತಿಗೆ ಬಂದೆವು. ನೀವು ಹೀಗೆ ಬೆಂಬಲವಿಲ್ಲದೆ ಅವಿಶ್ವಾಸ ನಿರ್ಣಯ ತರುವುದು ಸರಿಯಲ್ಲ, ದಯಯಿಟ್ಟು ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಸಭಾಪತಿಯವರೆ, ಈಗ ಒಂದು ವರ್ಷದ ಹಿಂದೆ ಈ ಸಭೆಯಲ್ಲಿ ನಾವು ಅವಿಶ್ವಾಸ ನಿರ್ಣಯವನ್ನು ತಂದ ಮೇಲೆ ನಮ್ಮ ದೇಶದಲ್ಲಿ ತುರ್ತು ಪರಿಸ್ಥಿತಿ ಬಂದಿದೆ. ನಮ್ಮ ಸ್ನೇಹಿತರಂತೆ ವರ್ತಿಸಿ ನಮ್ಮನ್ನು ವಂಚಿಸಿದ ಚೀಣೀಯರು ನಮ್ಮ ಮೇಲೆ ದಂಡೆತ್ತಿ ಬಂದರು. ನಮ್ಮ ದೇಶದ ಬಹುಭಾಗವನ್ನು ಆಕ್ರಮಿಸಿದರು. ಇಂಥ ಒಂದು ಪರಿಸ್ಥಿತಿಯಲ್ಲಿ ಇಡೀ ದೇಶ ಒಂದಾಗಬೇಕು, ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು, ಈ ಸಮಯದಲ್ಲಿ ಪಾರ್ಟಿ ಪಕ್ಷ ಎಂಬ ವ್ಯತ್ಯಾಸವನ್ನು ಹೋಗಲಾಡಿಸಿಕೊಂಡು ಎಲ್ಲರೂ ಭುಜಕ್ಕೆ ಭುಜ ಕೊಟ್ಟು ಕೆಲಸ ಮಾಡಬೇಕು, ಎಲ್ಲ ಭಾಗದಲ್ಲಿಯೂ ಮಿತವ್ಯಯ ಮಾಡಬೇಕು, ಹಣ ಮಿಗಿಸಬೇಕು, ಎಲ್ಲ ಶಕ್ತಿಯನ್ನೂ ಒಂದುಗೂಡಿಸಿ ದೇಶಕ್ಕೋಸ್ಕರ ಮೀಸಲಾಗಿಡಬೇಕು ಎಂದು ನಿರ್ಧರಿಸಿ ಕೆಲಸಮಾಡಿದೆವು. ನಮ್ಮ ದೇಶದಲ್ಲಿ ಜನಸಾಮಾನ್ಯರು, ಸರಕಾರದವರು ಮತ್ತು ಆಫೀಸರುಗಳು ಅನೇಕ ವಿಧವಾದ ಮಿತವ್ಯಯನ್ನು ಆಚರಿಸಬೇಕೆಂದು ಹೇಳಿ, ಮಿತವ್ಯಯದ ಬಾಬುಗಳನ್ನೂ ಆರ್ಡರ್ ಮಾಡಿದರು. ರಕ್ಷಣಾನಿಧಿ ಸಂಸ್ಥೆಗಳನ್ನು ರಚಿಸಿ ರಕ್ಷಣೆಗೋಸ್ಕರ ಹಣವನ್ನು ಒಂದುಗೂಡಿಸಿದರು. ಇದೆಲ್ಲಾ ನೋಡಿದರೆ, ದೇಶದಲ್ಲಿ ಎಲ್ಲಾ ಕಡೇನೂ ಬಹಳ ಸಹಕಾರ ದೊರೆಯಿತು. ಇಂಥ ಒಂದು ಒಳ್ಳೆಯ ವಾತಾವರಣ ಇರಬೇಕಾದರೆ, ಸ್ವಾಮಿ, ಸರಕಾರದವರು ಏನು ಮಾಡಿದರು ಅಂದರೆ ರಕ್ಷಣಾ ಸಮಿತಿಗೆ ಒಂದು ಪ್ರಚಾರ ಉಪಸಮಿತಿ ಅಂತ ಮಾಡಿದರು. ಆ ಉಪ ಸಮಿತಿಗೆ ಒಬ್ಬ ಸಂಚಾಲಕ ರನ್ನು ನೇಮಕಮಾಡಿದರು. ಹಿಂದೆ ಎಂದೂ ರಾಷ್ಟ್ರದ ಹೋರಾಟದಲ್ಲಿ ಯಾವ ಒಂದು ಪಾತ್ರವನ್ನೂ ವಹಿಸದೆ ಇರತಕ್ಕಂಥ, ರಾಷ್ಟ್ರಸೇವೆಯ ಗಂಧವೇ ಇಲ್ಲದಿರತಕ್ಕಂಥ, ಪರಾಕು ಹೇಳಿಕೊಂಡಿದ್ದ ಒಬ್ಬ ಹೊಗಳು ಭಟ್ಟರನ್ನು ನೇಮಕ ಮಾಡಿದರು. ಪರಿಣಾಮವೇನಾಯಿತು ? ನಮ್ಮ ದೇಶದಲ್ಲಿ ಜನತೆ

ಏನು ಉತ್ಸಾಹದಿಂದ ಮುಂದೆ ಬರುತ್ತಾ ಇದ್ದರು ಆ ಉತ್ಸಾಹ ಕುಂದಿ ಹೋಯಿತು. ನಮ್ಮ ಕನ್ನಡ ದೇಶದಲ್ಲಿ ಸೈನ್ಯಕ್ಕೆ ಸೇರಿರುವ ಜನ ಸಂಖ್ಯೆ ಬಹಳ ಕಡಿಮೆ. ರಕ್ಷಣಾ ನಿಧಿಗೆ ಸಹ ಹಣ ಸಾಕಷ್ಟು ಬಂದಿಲ್ಲ. ಕಾರಣ ಏನು? ನಮ್ಮ ಸರಕಾರದವರು ಮತ್ತು ಆಡಳಿತ ಪಕ್ಷದಲ್ಲಿರತಕ್ಕಂಥವರು ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಹಿಂದೆ ರಾಷ್ಟ್ರಕ್ಕೋಸ್ಕರ ದುಡಿದು ಹೋರಾಡಿದ ಅನೇಕ ನಮ್ಮ ಸ್ನೇಹಿತರ ಸಹಕಾರವನ್ನು ತೆಗೆದುಕೊಂಡಿಲ್ಲ.

Mr. SPEAKER.—Is that a charge for this omission?

Sri B. L. GOWDA.—Any omission on the part of the Government.

ಸ್ವಾಮಿ, ಹಿಂದೆ ದೇಶ ಗುಲಾಮಗಿರಿಯಲ್ಲಿರಬೇಕಾದರೆ ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಿ, ತ್ಯಾಗಮಾಡಿದ ಅನೇಕ ಜನರಿದ್ದಾರೆ. ಅಂಥ ಮಹನೀಯರ ಸೇವೆಯನ್ನು ನಮ್ಮ ಸರಕಾರದವರು ತೆಗೆದುಕೊಳ್ಳಬೇಕಾಗಿತ್ತು. ನಮ್ಮ ರಾಜ್ಯದಲ್ಲಿ ನಿವೃತ್ತ ದಂಡನಾಯಕರಾದ ಜನರಲ್ ಕಾರಿಯಪ್ಪನವರು ಇದ್ದಾರೆ, ಅವರ ಸಹಾಯವನ್ನು ಯಾವರೀತಿಯೂ ತೆಗೆದುಕೊಳ್ಳಲಿಲ್ಲ. ನಮ್ಮ ರಾಜ್ಯಕ್ಕೆ ಬಹಳ ಚಾರಿತ್ರ್ಯವಿದೆ. ಈ ರಾಜ್ಯ ಕಿತ್ತೂರು ಚನ್ನಮ್ಮ ಹುಟ್ಟಿ ಪ್ರಖ್ಯಾತಿ ಗಳಿಸಿದ ರಾಜ್ಯ. ಹಾಗೆಯೆ ಒನಕೆ ಓಬವ್ವ ನಮ್ಮ ರಾಜ್ಯದಲ್ಲಿದ್ದಳು. ಇಂಥ ಒಂದು ರಾಜ್ಯದಲ್ಲಿ ಸೈನ್ಯಕ್ಕೆ ಸೇರುವವರು ಇಲ್ಲ ಅಂದರೆ ಅವರ ಒಂದು ಸತ್ವಹೀನತೆ, ಅವಕಾಶವನ್ನು ಉಪಯೋಗಿಸಿಕೊಳ್ಳದಿರತಕ್ಕಂಥ ಅಸಹಾಯಕತೆ ತೋರಿಸುತ್ತದೆ. ಈ ಒಂದು ತುರ್ತು ಪರಿಸ್ಥಿತಿಯಲ್ಲಿ ಎಲ್ಲರಿಗೂ ಮಿತವ್ಯಯ ಅನುಸರಿಸಬೇಕೆಂದು ಹೇಳಿದವರು, ಮಿತವ್ಯಯವನ್ನು ತಮಗೆ ಅಪ್ಲೈ ಮಾಡಿಕೊಂಡರೆ? ನಮ್ಮ ಸ್ನೇಹಿತರು ಇದರ ಬಗ್ಗೆ ಹೇಳಿದ್ದಾರೆ. ನಾನು ಅದನ್ನೇ ಒತ್ತಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಮಂತ್ರಿ ಮಂಡಳದ ಸಂಖ್ಯೆಯನ್ನು ಕಡಿಮೆ ಮಾಡಲಿಲ್ಲ, ಜಾಸ್ತಿ ಮಾಡಿಕೊಂಡರು. ಎಷ್ಟರಮಟ್ಟಿಗೆ ಇವರ ಮಿತವ್ಯಯವಿದೆ ಎನ್ನುವುದು ಗೊತ್ತಾಗುತ್ತದೆ. ಜನರಿಗೆ ಮಿತವ್ಯಯ ಆಚರಿಸಬೇಕೆಂದು ಹೇಳುವವರು ತಾವೇ ಕಾರ್ಯಾಚರಣೆಯಲ್ಲಿ ಎಷ್ಟರಮಟ್ಟಿಗೆ ಮಾಡುತ್ತಾರೆಂಬುದನ್ನು ಊಹಿಸಬೇಕೆಂದು ನಾನು ಹೇಳಬಯಸುತ್ತೇನೆ.

ಅನ್ನದ ಸಮಸ್ಯೆ ಬಗ್ಗೆ ಹೇಳುವಾಗ, ನಮ್ಮ ನಾಯಕರು ಅವರ ಭಾಷಣದಲ್ಲಿ ಈ ಸರಕಾರ ಅನ್ನವನ್ನು ಜನರಿಗೆ ಒದಗಿಸುವುದರಲ್ಲಿ ವಿಫಲರಾಗಿರುವುದನ್ನು ವಿವರಿಸಿದರು. ನಮ್ಮ ರೆವಿನ್ಯು ಸಚಿವರು ಬಹಳ ದೊಡ್ಡದಾಗಿ ಭಾಷಣ ಮಾಡಿ ಬಿಟ್ಟು, ಏನು ಆಗಿದೆ, ಜನ ಸತ್ತುಹೋಗಿದ್ದಾರೆಯೆ ಎಂದು ಕೇಳಿದರು. ವಿಧಾನ ಸೌಧದ ಮೆಟ್ಟಲುಗಳ ಮೇಲೆ ರಾಶಿ ರಾಶಿ ಹೆಣ ಬಿದ್ದರೇನೆ ಕ್ಷಾಮ ಇದೆಯೆಂದು ತಿಳಿದುಕೊಳ್ಳಬೇಕೊ? ಈ ರೀತಿಯಾದರೆ ಪ್ರಜಾಪ್ರಭುತ್ವದಲ್ಲಿ ನೀವು ಇರಲು ಅಥವ ಅಧಿಕಾರ ಮಾಡಲು ಲಾಯಕ್ಕೇ ಎಂದು ಯೋಚನೆ ಮಾಡಬೇಕಾಗಿದೆ. ಕ್ಷಾಮವಿದೆ, ಬರಗಾಲ ಪರಿಸ್ಥಿತಿ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ಎಂದು ನಮ್ಮ ನಾಯಕರು ಹೇಳಿದರೆ, ಭಕ್ರನಂಗಲ್ ಕಟ್ಟಿದ್ದೇವೆ, ಹಿರಾಕುಡ್ ಕಟ್ಟಿದ್ದೇವೆ, ನ್ಯೂಜೀಲೆಂಡಿನಲ್ಲಿ ಹೀಗಿದೆ, ಇನ್ನೊಂದು ಕಡೆ ಹಾಗಿದೆ ಎಂತ ಹೇಳಿದರೆ ಏನು? ನಮ್ಮಲ್ಲಿ ಏನು ಪರಿಸ್ಥಿತಿ, ವಾಸ್ತವವಾಗಿ ಸರಕಾರ ಏನು ಮಾಡಿದೆ ಎನ್ನುವುದನ್ನು ಹೇಳಲಿಲ್ಲ. ನಮ್ಮ ತಾಲ್ಲೂಕಿನ ವಿಷಯ ಹೇಳುವುದಾದರೆ, ಈ ವರ್ಷ ಮಳೆಬೆಳೆ ಇಲ್ಲದೆ ಬಹಳ ತೊಂದರೆಯಾಗಿದೆ. ಅನೇಕ ಜನ ಒಪ್ಪತ್ತು ಊಟ ಮಾಡುತ್ತಾ ಇದ್ದಾರೆ. ಇಂಥ ಪರಿಸ್ಥಿತಿ ಇಲ್ಲಿ ಇರಬೇಕಾದರೆ ತಾವು ಅಲ್ಲಿ ಭಾಕ್ರನಂಗಲ್, ಹಿರಾಕುಡ್ ಕಟ್ಟಿದ್ದಾರೆ ಎಂದು ಹೇಳಿದರೆ ಏನು ಪ್ರಯೋಜನವಾಗುತ್ತದೆ? ಭೂಸುಧಾರಣೆ ಜಾರಿಗೆ ತನ್ನಿ ಅಂದರೆ ರಾಜ್ಯಾಂಗದ ತಿದ್ದುಪಡಿಯಾಗಬೇಕೆಂದು ಹೇಳಿ ಮುಂದೂಡುತ್ತಿದ್ದಾರೆ. ತಮಗೆ ಬೇಕಾದರೆ ಕ್ಷಣಕಾಲದಲ್ಲಿ ತಿದ್ದುಪಡಿ ಮಾಡುತ್ತಾರೆ. ಇಂಥ ಮೂಲ ಭೂಸುಧಾರಣೆ ವಿಷಯದಲ್ಲಿ ತಾವು ರಾಜ್ಯಾಂಗವನ್ನು ತಿದ್ದುಪಡಿ ಮಾಡಲು ಕ್ರಮವನ್ನು ಏಕೆ ಬೇಗ ತೆಗೆದುಕೊಳ್ಳಲಿಲ್ಲ, ಇಷ್ಟು ನಿಧಾನ ಏಕೆ ಮಾಡಿದಿರಿ? ನಿಮಗೆ ಬೇಕಾದಾಗ ಬಹಳ ಅವಸರದಲ್ಲಿ ಮಾಡುತ್ತೀರ. ನಿಮ್ಮ ನಡತೆಯನ್ನು ನೋಡಿದರೆ ನಿಮಗೆ ಭೂಸುಧಾರಣೆಯಲ್ಲಿ ನಂಬಿಕೆ ಇಲ್ಲ, ಅದನ್ನು ಜಾರಿಗೆ ತರುವುದಕ್ಕೆ ಮನಸ್ಸು ಇಲ್ಲವೆನ್ನುವುದನ್ನು ತೋರಿಸುತ್ತದೆ. ಜನರಿಗೆ ಕಣ್ಣೊರಸುವುದಕ್ಕೆ ತಿದ್ದುಪಡಿ ನೆಪ ಹೇಳುತ್ತಾ ಇದ್ದೀರಿ ಎಂದು ಒತ್ತಿ ಹೇಳಬೇಕಾಗಿದೆ. ವ್ಯವಸಾಯ ಮಂತ್ರಿಗಳು ಭೂಸುಧಾರಣೆಗೆ ಅವಸರವೇನಿದೆ, ಆಗಲೇ ಎಲ್ಲಾ ಜಮೀನನ್ನೂ ಕೊಟ್ಟುಬಿಟ್ಟಿದ್ದೇವಲ್ಲಾ ಎಂದು ಹೇಳಿದರು. ಯಾರಿಗೆ ಕೊಟ್ಟಿದ್ದೀರ? ಜಮೀನು ಇಲ್ಲದವರಿಗೆ ಕೊಟ್ಟಿದ್ದೀರ? ಮಂತ್ರಿಗಳಿಗೆ, ಬೇಕಾದವರಿಗೆ, ಕಾಂಗ್ರೆಸ್ ಪುಡಾರಿಗಳಿಗೆ ಬೇಕಾದಷ್ಟು ಜಮೀನು ಸಿಗುತ್ತದೆ. ನಿಜವಾಗಿ ಉಳುವವರಿಗೆ ಜಮೀನು ಕೊಟ್ಟಿದೀರ? ಬೇಕಾದಷ್ಟು ಸೌಕರ್ಯ ಮಾಡಿಕೊಟ್ಟಿದ್ದೇವೆಂದು ಹೇಳುತ್ತೀರಲ್ಲ, ರೈತನಿಗೆ ಅನುಕೂಲ ಮಾಡಿಕೊಟ್ಟಿದ್ದೀರ? ತಮ್ಮ ಸರಕಾರದಲ್ಲಿ ಎಲ್ಲಾ ಸೌಕರ್ಯ ಸಿಗುವುದು ಪುಢಾರಿಗಳಿಗೆ ಅಥವ ಪುಡಾರಿಗಳ ಶಿಫಾರಸು ಇರುವ ಜನಗಳಿಗೆ. ಬಡಬೋರೆಗೌಡನಿಗೆ ಎಳ್ಳಷ್ಟೂ ಪ್ರಯೋಜನವಾಗಿಲ್ಲ.

(ಶ್ರೀ ಬಿ. ಎಲ್. ಗೌಡ)

ವಿದ್ಯಾ ಇಲಾಖೆಗೆ ಬಂದರೆ ಬಹಳ ವಿಷಾದದಿಂದ ಹೇಳಬೇಕಾಗಿದೆ. ಇವತ್ತಿನ ದಿವಸ ತಾಂತ್ರಿಕ ಕಾಲೇಜುಗಳಲ್ಲಿ ಸೀಟುಗಳ ಮಾರಾಟ ನಡೆಯುತ್ತಾ ಇದೆ. ಇದು ಪ್ರಜಾಪ್ರಭುತ್ವದಲ್ಲಿ ನ್ಯಾಯವೆ? ಪ್ರಜಾಪ್ರಭುತ್ವದಲ್ಲಿ ವಿದ್ಯಾಭ್ಯಾಸದ ಬಗ್ಗೆ ಎಲ್ಲರಿಗೂ ಸಮಾನಾವಕಾಶವಿರಬೇಕು. ದುಡ್ಡಿದ್ದವರಿಗೆ ಮಾತ್ರ ಈಗ ವಿದ್ಯೆಗೆ ಅವಕಾಶವಿದೆ, ಬಡವನಿಗಿಲ್ಲ. ಐಶ್ವರ್ಯವಂತನಿಗೂ ಬಡವನಿಗೂ ತಾರತಮ್ಯ ವಿಲ್ಲದಂತೆ ಈ ಇಲಾಖೆಯು ಆಡಳಿತವನ್ನು ಪರಿಪಾಲನೆಮಾಡಿಲ್ಲ. ವಿದ್ಯಾಭ್ಯಾಸದ ಒಂದು ಮುಖ್ಯವಾದ ಕೆಲಸವನ್ನು ವಹಿಸಿದ ಇಲಾಖೆ, ಈ ಕಾರ್ಯದಲ್ಲಿ ವಿಫಲವಾಗಿದೆ. ಆದ್ದರಿಂದ ವಿದ್ಯಾಭ್ಯಾಸದಲ್ಲಿ ತಮಗೆ ಪ್ರಗತಿ ಸಾಧಿಸುವುದಕ್ಕೆ ಮನಸ್ಸಿದೆಯೆ, ಧೈರ್ಯವಿದೆಯೆ ಎಂಬ ಪ್ರಶ್ನೆ ಕೇಳುತ್ತೇನೆ. ಖಾಸಗಿ ಶಾಲೆ ಗಳಲ್ಲಿ ಸೀಟುಗಳು ಮಾರಾಟವಾಗಿವೆ. ಸರಕಾರಿ ಕಾಲೇಜುಗಳಲ್ಲಿಯೂ ಇದೇ ವಸ್ತುಸ್ಥಿತಿ ಇದೆ. ಒಂದು ಸೀಟು ಐದು ಸಾವಿರ ರೂಪಾಯಿವರೆಗೆ ಹೋಗಿ ಮಾರಾಟವಾಗಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ? ಈ ವರ್ಷ ಎಸ್. ಎಸ್. ಎಲ್. ಸಿ. ಪರೀಕ್ಷೆಯನ್ನು ಎರಡನೆಯ ಸಾರಿ ಮತ್ತೆ ನಡೆಸಲು 11 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. ಮೊದಲನೆ ಅವ್ಯವಸ್ಥೆ ಪರೀಕ್ಷೆಯಲ್ಲಿ ಯಾರು ತಪ್ಪಿತಸ್ಥರು ಎಂದು ನಿರ್ಧರಿಸಿ ಅವರ ಮೇಲೆ ಇವತ್ತಿನವರೆಗೆ ಕ್ರಮ ತೆಗೆದು ಕೊಂಡಿದ್ದೀರ? ಇಲ್ಲಿ ಇರತಕ್ಕಂಥ ಅಧಿಕಾರಿಗಳು ಶಿಕ್ಷಣ ಮಂತ್ರಿಯವರಿಗೆ, ಸರಕಾರದಲ್ಲಿ ಪ್ರಭಾವಶಾಲಿಗಳಾದವರಿಗೆ ಸಂಬಂಧ ಅಂತ ಹೇಳಿ ಅವರ ಮೇಲೆ ಯಾವವಿಧವಾದ ಆಕ್ಷನ್ನೂ ತೆಗೆದುಕೊಳ್ಳದೆ ಇದ್ದಾರೆ. ಅವರನ್ನು ಆ ಜಾಗದಲ್ಲಿಯೆ ಇನ್ನೂ ಇಟ್ಟಿದ್ದೀರ. ಈ ತರಹ ಎರಡನೆ ಸಾರಿ ಪರೀಕ್ಷೆಯಾಗಿ 11 ಲಕ್ಷ ರೂಪಾಯಿ ಖರ್ಚಾದುದಕ್ಕೆ ಯಾರು ಜವಾಬ್ದಾರರು, ಯಾರಮೇಲೆ ಹೊಣೆ ಹೊರಿಸಿದ್ದೀರ? ಇದು ಯಾರ ಕಾಸು, ಬಡಬೋರೇ ಗೌಡನ ಕಾಸು. ಇನ್ನೂ ಯಾರು ಮೇಲೂ ಏನೂ ಕ್ರಮ ತೆಗೆದುಕೊಂಡಿಲ್ಲ. ಎರಡನೆ ಸಾರಿ 11 ಲಕ್ಷ ರೂಪಾಯಿ ಖರ್ಚುಮಾಡಿ ಪರೀಕ್ಷೆಮಾಡುವಾಗ ಪ್ರಶ್ನೆ ಪತ್ರಿಕೆಗಳನ್ನು ಮದ್ರಾಸಿನಲ್ಲಿ, ಬೊಂಬಾಯಿ ನಲ್ಲಿ ಪ್ರಿಂಟ್ ಮಾಡಿಸಿರುವುದು ನಾಚಿಕೆಗೇಡು. ನಮ್ಮ ರಾಜ್ಯದಲ್ಲಿ ಪ್ರಶ್ನೆಪತ್ರಿಕೆ ಪ್ರಿಂಟ್ ಮಾಡಲು ಅವಕಾಶವಿರಲಿಲ್ಲವೆ? ಮೊದಲನೆಯ ಪರೀಕ್ಷೆ ಒಂದರಲ್ಲಿಯೇ ಅಲ್ಲ, ಎರಡನೆ ಸಾರಿ ಪರೀಕ್ಷೆಯಲ್ಲಿಯೂ ತಪ್ಪು ಮಾಡಿದ್ದಾರೆ. ಮಲ್ಲೇಶ್ವರಮ್ ಮತ್ತು ಮಂಡ್ಯ ಹೈಸ್ಕೂಲು ಸೆಂಟರುಗಳಲ್ಲಿ ಕೊಟ್ಟ ಪ್ರಶ್ನೆ ಪತ್ರಿಕೆಗಳಲ್ಲಿ ಹಿಂದುಗಡೆ ಪ್ರಶ್ನೆಗಳು ಪ್ರಿಂಟೇ ಆಗಿರಲಿಲ್ಲ. ಹೀಗೆ ಎರಡನೇ ಸಾರಿ ತಪ್ಪು ಮಾಡಿದ್ದರೂ ಅದಕ್ಕೆ ಜವಾಬ್ದಾರರಾದವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ ಒಂದು ಸಲವಲ್ಲ ಎರಡು ಸಲ ತಪ್ಪು ಮಾಡಿದ್ದರೂ ಅದಕ್ಕೆ ಕಾರಣರಾದವರ ಬಗ್ಗೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಇಂಥ ಸರ್ಕಾರ ಕೆಲಸ ಮಾಡಲು ಲಾಯಕ್ಕಲ್ಲವೆಂದು ಒತ್ತಾಯಮಾಡಿ ಹೇಳುತ್ತೇನೆ.

ಹೈಸ್ಕೂಲುಗಳನ್ನು ತೆರೆಯುವುದರಲ್ಲಿ ನಿಮ್ಮ ನೀತಿಯನ್ನು ನೋಡಬೇಕು. ತೆರಕಣಾಂಬಿ ಎಂಬಲ್ಲಿ ಎರಡು ಹೈಸ್ಕೂಲುಗಳನ್ನು ಕೊಟ್ಟಿದ್ದಾರೆ. ಒಂದು ಖಾಸಗಿ ಹೈಸ್ಕೂಲು ಮತ್ತೊಂದು ಸರ್ಕಾರಿ ಹೈಸ್ಕೂಲು. ಹಾಗೆ ಕೊಡಬೇಡಿ ಎಂದು ನಾನು ಹೇಳುವುದಿಲ್ಲ. ಯಾವುದಾದರೂ ಒಂದು ಕಡೆ 10-20 ಮೈಲಿ ದೂರ ಹೈಸ್ಕೂಲಿಗಾಗಿ ಹುಡುಗರು ಹೋಗಬೇಕಾದ ಪರಿಸ್ಥಿತಿ ಇರುವಾಗ ಯಾರದೋ ಪ್ರಭಾವಕ್ಕೆ ಒಳಗಾಗಿ ಖಾಸಗಿ ಹೈಸ್ಕೂಲನ್ನು ಸ್ಥಾಪನೆ ಮಾಡಿದ್ದರೂ ಅಲ್ಲಿಗೆ ಒಂದು ಸರ್ಕಾರಿ ಹೈಸ್ಕೂಲನ್ನು ಕೊಟ್ಟಿದ್ದಾರೆ. ನ್ಯಾಯವಾಗಿ, ನಿಷ್ಪಕ್ಷಪಾತ ವಾಗಿ ರಾಜ್ಯಭಾರ ಮಾಡುವುದು ನಿಮಗೆ ಬಂದಿಲ್ಲ. ಅವರಿವರ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಿ ಎಂದು ಹೇಳಬೇಕಾಗಿದೆ. ಇಂಥ ಅನೀತಿ, ಅಕ್ರಮಮಾಡುತ್ತ ಇರುವ ನೀವು ಇನ್ನು ಮುಂದಾದರೂ ಸರಿಪಡಿಸಿಕೊಳ್ಳುತ್ತೀರೆಂಬ ನಂಬಿಕೆ ನಮಗಿಲ್ಲ. ವಿದ್ಯಾಭ್ಯಾಸದ ವಿಷಯದಲ್ಲಿ ಇನ್ನೂ ಅನೇಕ ನ್ಯೂನತೆಗಳಿವೆ? ವೇಳೆ ಇಲ್ಲದೆ ಇರುವುದರಿಂದ ಹೆಚ್ಚು ಹೇಳುವು ದಕ್ಕೆ ಇಷ್ಟಪಡುವುದಿಲ್ಲ.

4-00 P.M.

ವಾರ್ತಾ ಇಲಾಖೆ ಸರ್ಕಾರದ ಬಾಜಾ ಭಜಂತ್ರಿ ಬಾರಿಸುವುದಕ್ಕೆ ಒಂದು ಮೇಳ ಇದ್ದಹಾಗೆ. ತುರ್ತು ಪರಿಸ್ಥಿತಿಗೋಸ್ಕರ, ಆ ಬಗ್ಗೆ ಪ್ರಚಾರ ಮಾಡಬೇಕು ಜನಗಳಲ್ಲಿ ಒಳ್ಳೆಯ ಭಾವನೆ ಮೂಡು ವಂತೆ ಮಾಡಬೇಕು ಎಂದು 'ಜಯಭೇರಿ' ಎಂಬ ಒಂದು ಪತ್ರಿಕೆಯನ್ನು ಹೊರಡಿಸುತ್ತಿದ್ದಾರೆ. ಅದರಲ್ಲಿ ಮಂತ್ರಿಗಳ ಪ್ರವಾಸ, ಅಧಿಕಾರಿಗಳ ವರ್ಗಾವರ್ಗಿ ಇಂಥ ವಿಚಾರಗಳನ್ನು ಕೊಡುತ್ತಿದ್ದಾರೆ. ಯಾವುದಾದರೂ ಒಂದು ಯೋಜನೆ ಬಗ್ಗೆ, ಅಭಿವೃದ್ಧಿ ಕಾರ್ಯದ ಬಗ್ಗೆ ಅಂಕಿ ಅಂಶಗಳನ್ನು ಒದಗಿಸು ತ್ತಾರೆಯೇ ಎಂದರೆ ಏನೂ ಇಲ್ಲ. ಮಂತ್ರಿಗಳ ಭಾವಚಿತ್ರಗಳನ್ನು ಅದರಲ್ಲಿ ಪ್ರಿಂಟ್ ಮಾಡಿಸುತ್ತಾರೆ. ಮುಂದೆ ಬರುವವರು, ಹಿಂದೆ ಇದ್ದವರು, ಈಗ ಇರುವವರು ಎಲ್ಲರ ಭಾವಚಿತ್ರಗಳನ್ನೂ ಪ್ರಿಂಟ್

ಹೂಡಿಸುತ್ತಾರೆ. ವಾರ್ತಾ ಇಲಾಖೆಯಿಂದ ಗ್ರಾಮಾಂತರ ಪ್ರದೇಶದ ಅಭಿವೃದ್ಧಿ ಬಗ್ಗೆ ಸರ್ಕಾರದವರು ಕೈಕೊಂಡಿರುವ ಕಾರ್ಯಕ್ರಮಗಳೇನು, ಮುಂದೆ ಕೈಕೊಳ್ಳಬೇಕೆಂದಿರುವ ಕಾರ್ಯಕ್ರಮಗಳೇನು, ಇಂಥವುಗಳ ಬಗ್ಗೆ ತಿಳುವಳಿಕೆ ಕೊಡುವಂಥ ವಿಷಯಗಳನ್ನು ಪ್ರಚಾರ ಮಾಡಬೇಕು.

ಇನ್ನು ರಸ್ತೆ ಸಾರಿಗೆ ಇಲಾಖೆಯಲ್ಲಿ ನಡೆಯುತ್ತಿರುವುದನ್ನು ಹೇಳುತ್ತೇನೆ. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಈ ಇಲಾಖೆಯನ್ನು ಸರಿಪಡಿಸಲು ಅಸಮರ್ಥರಾಗಿದ್ದಾರೆ. ಎಂದರೆ ಅದನ್ನು ಸರಿಪಡಿಸಲು ಸಾಧ್ಯವಿಲ್ಲವೇನೋ ಎಂದು ಅನಿಸುತ್ತದೆ. ಒಬ್ಬ ಕಂಡಕ್ಟರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾದರೆ 200-300 ರೂಪಾಯಿ ಲಂಚ ಕೊಡಬೇಕು. ಲಂಚ ಕೊಡುವುದು ಇಲ್ಲಿಂದ ಶುರುವಾಗುತ್ತದೆ. ಅಂದ ಮೇಲೆ ಅವನು ಲಂಚ ಹೊಡೆಯದೆ ಇರುವುದು ಹೇಗೆ? ಚಿತ್ರದುರ್ಗದಿಂದ ಇಲ್ಲಿಗೆ ಬರಬೇಕಾದರೆ ಮೂರು ನಾಲ್ಕು ದಿವಸಗಳಿಂದ ಎಕ್ಸ್‌ಪ್ರೆಸ್ ಬಸ್ ಇಲ್ಲ. ಅದು ಕೆಟ್ಟು ಹೋಗಿದೆ ಎಂದು ಹೇಳುತ್ತಾರೆ. ಇದರಿಂದ ಅನೇಕ ಜನರಿಗೆ ಕಷ್ಟವಾಗಿದೆ. ಬಸ್ಸುಗಳು ಕೆಟ್ಟು ಹೋಗಿದ್ದರೆ ಅದನ್ನು ಸರಿಪಡಿಸಬೇಡವೇ? ಬಸ್ಸುಗಳನ್ನು ವರ್ಕ್‌ಷಾಪಿನಲ್ಲಿ ರಿಪೇರಿ ಮಾಡಿಕೊಡಬೇಕಾದರೆ ನಾವು ದುಡ್ಡು ಕೊಡಬೇಕು, ಇಲ್ಲದೆ ಇದ್ದರೆ ಅವರು ರಿಪೇರಿ ಮಾಡುವುದಿಲ್ಲ ಎಂದು ಡ್ರೈವರುಗಳು ಹೇಳುತ್ತಾರೆ. ರಾಷ್ಟ್ರೀಕರಣ ಮಾಡಿರುವುದರ ವೈಶಿಷ್ಟ್ಯ. ಎಲ್ಲೆಲ್ಲಿ ಲಾಭ ಬರುವ ಮಾರ್ಗಗಳಿವೆಯೋ ಅಲ್ಲಿ ಒಂದು ಬಸ್ಸನ್ನೂ ಹಾಕುತ್ತ ಇಲ್ಲ. ಇಂಥ 'ಮಾರ್ಗಗಳನ್ನು ಕಾಂಗ್ರೆಸ್ ಮುಖಂಡರುಗಳಿಗೆ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಕೊಡುವವರಿಗೆ ಕೊಡುತ್ತಾರೆ. ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಮೈಸೂರಿನಿಂದ ಚಿತ್ರದುರ್ಗಕ್ಕೆ ಬಸ್ ಲೈನಿಗೆ ಕಾಂಗ್ರೆಸ್ ಮುಖಂಡರು ಅರ್ಜಿಯನ್ನು ಹಾಕಿದರು. ಮತ್ತೊಬ್ಬರು ತಕರಾರು ಹಾಕಿದ್ದರು. ಆವೆರಡೂ ಮೀಟಿಂಗಿನಲ್ಲಿ ಬಂತು. ತಕರಾರನ್ನು ವಾಪಸು ತೆಗೆದುಕೊಂಡರು. ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ಮುಖ್ಯ ಮುಖ್ಯವಾದ ಮಾರ್ಗಗಳಿವೆ. ಸರ್ಕಾರದವರು ಇವುಗಳನ್ನೆಲ್ಲ ವಶಪಡಿಸಿಕೊಂಡು ಸರ್ಕಾರದವರು ಬಸ್ಸುಗಳನ್ನು ಹಾಕಿದರೆ ಲಕ್ಷಾಂತರ ರೂಪಾಯಿ ಲಾಭ ಬರತಕ್ಕ ಸಂಭವವಿದೆ. ಇಂಥ ಮಾರ್ಗಗಳಲ್ಲಿ ಬಸ್ಸುಗಳನ್ನು ಹಾಕುವುದಿಲ್ಲ, ಬಸ್ಸು ಹಾಕಲು ಹಿಂಜರಿಯುತ್ತಾರೆ. ಇಂಥ ನ್ಯೂನತೆಗಳನ್ನು ಒಳಗೊಂಡಿರುವ ಆಡಳಿತ ಪಕ್ಷ ಖಂಡಿತವಾಗಿಯೂ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ.

ನಮಗೆ ಬೆಂಬಲವಿದೆ, ನಾವು ಬಹುಮತದಲ್ಲಿದ್ದೇವೆ, ನಮ್ಮ ಕಡೆ 139 ಜನರಿದ್ದಾರೆ, ನಿಮ್ಮ ಕಡೆ 69 ಜನ ಮಾತ್ರ ಇದ್ದಾರೆ ಎಂದು ಹೇಳಬಹುದು. ಆದರೆ ಒಟ್ಟು ಓಟುಗಳಲ್ಲಿ ನಿಮಗೆ ಬಂದಿರುವುದು ಶೇಕಡ 48 ರಷ್ಟು. ಶೇಕಡ 52 ರಷ್ಟು ಜನ ನಿಮ್ಮನ್ನು ತಿರಸ್ಕರಿಸಿದ್ದಾರೆ. ಆದ್ದರಿಂದ ಜನತೆಯ ಬೆಂಬಲ ನಿಮಗಿಲ್ಲ, ಜನತೆಯ ಬೆಂಬಲವನ್ನು ಗಳಿಸುವ ಶಕ್ತಿ ನಿಮ್ಮಲ್ಲಿಲ್ಲ. ಬಹು ಜನರೂ ತಿರಸ್ಕರಿಸಿದ್ದರೂ ಅಧಿಕಾರದಲ್ಲಿದ್ದೀರಿ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಮುಖ್ಯಮಂತ್ರಿಗಳನ್ನು ಜನ ತಿರಸ್ಕರಿಸಿದರು. ಅಂಥವರ ನಾಯಕತ್ವದಲ್ಲಿದ್ದೇವೆ. ಜನ ಯಾರನ್ನು ತಿರಸ್ಕರಿಸಿದ್ದರೋ ಅವರು ಮುಖ್ಯಮಂತ್ರಿಗಳಾಗಿರುವುದರಿಂದ ಅವರ ನಾಯಕತ್ವದಲ್ಲಿ ದೇಶಕ್ಕೆ ಎಷ್ಟರ ಮಟ್ಟಿಗೆ ಕಲ್ಯಾಣವಾದೀತು, ದೇಶದ ಪ್ರಗತಿ ಸಾಧ್ಯವಾದೀತು ಎಂದು ಯೋಚನೆ ಮಾಡಬೇಕಾಗಿದೆ. ನಿನ್ನೆ ರೆವೆನ್ಯೂ ಮಂತ್ರಿಗಳು ಅವರ ವಿಷಯದಲ್ಲಿ ಒಂದು ಮಾತು ಹೇಳಿದರು. ನಾನೂ ಸಹ ಹಾಗೆಯೇ ತಿಳಿದುಕೊಂಡಿದ್ದೆ. ಅವರು ನಮ್ಮ ಹಿರಿಯರು, ಅವರು ಅಧಿಕಾರಕ್ಕೆ ಬಂದರೆ ದೇಶಕ್ಕೆ ಒಳ್ಳೆಯದಾಗುತ್ತದೆ, ಎಂದು ಅವರು ಹಿಂದೆ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ತಿಳಿದುಕೊಂಡಿದ್ದೆ. 1956ನೇ ಇಸವಿಯಲ್ಲಿ ಅವರು ನಾಯಕರಾಗಲು ಪ್ರಯತ್ನ ಪಡಲಿಲ್ಲ. ಜನರೇ ಅವರು ನಾಯಕರಾಗಬೇಕೆಂದು ಆರಿಸಿದರು. ಆದರೆ ಈವಾಗ ಅವರು ಪ್ರಯತ್ನಪಟ್ಟು ಮುಂದುವರಿಯುತ್ತಿದ್ದಾರೆ. ಈಗ ಅವರೂ ಸಹ ಈ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಅವರೂ ಸಹ ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳದೆ ಅನ್ಯಾಯ ಪರಂಪರೆಗಳನ್ನು ತಪ್ಪಿಸಲು ಸಾಧ್ಯವಾಗದೆ ಶಕ್ತಿಹೀನರಾಗಿದ್ದಾರೆ ಎಂದು ನಾನು ಹೇಳುತ್ತೇನೆ. ಇಂಥ ಸರ್ಕಾರ ಮುಂದುವರಿಯಲು ಸಾಧ್ಯವಿಲ್ಲ. ಮೊದಲು ನಮ್ಮ ರಾಜ್ಯದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತ ಬರಲಿ, ಆ ಮೇಲೆ ಚುನಾವಣೆಗಳಾಗಲಿ ಎಂದು ತಿಳಿಸಿ ಈ ಅವಿಶ್ವಾಸ ನಿರ್ಣಯಕ್ಕೆ ನಾನು ಬೆಂಬಲ ಕೊಡುತ್ತೇನೆ, ಸ್ವಾಮಿ.

†ಶ್ರೀ ರಾಮಕೃಷ್ಣ ಹೆಗ್ಗಡೆ (ಸಹಕಾರ ಮತ್ತು ಅಭಿವೃದ್ಧಿ ಶಾಖೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಿನ್ನೆ ಮತ್ತು ಇವತ್ತು ವಿರೋಧ ಪಕ್ಷದ ಸದಸ್ಯರು ಸರ್ಕಾರದ ಮೇಲೆ ತಂದಿರುವಂಥ ಅವಿಶ್ವಾಸ ಠರಾವಿನ ಮೇಲೆ ಮಾಡಿದಂಥ ಭಾಷಣಗಳನ್ನು ನಾನು ಬಹಳ ಕುತೂಹಲದಿಂದ ಮತ್ತು ಏಕಾಗ್ರತೆಯಿಂದ ಕೇಳಿದ್ದೇನೆ. ಈ ಅವಿಶ್ವಾಸ ನಿರ್ಣಯಕ್ಕೆ ಪ್ರೇರಣೆ ಕಾರಣ ಮತ್ತು justification ಏನು ಎಂದು ಎಷ್ಟೇ ವಿಚಾರ ಮಾಡಿದರೂ ಕೂಡ ನನಗೆ ಯಾವುದೂ ಕಂಡುಬರಲಿಲ್ಲ. ಪ್ರಜಾಪ್ರಭುತ್ವದಲ್ಲಿ ಒಂದಕ್ಕಿಂತ ಹೆಚ್ಚು ಪಕ್ಷಗಳು ಇರುವಾಗ ಸರ್ಕಾರದ ಮೇಲೆ ಆಗಾಗ ಟೀಕೆ ಮಾಡುವಂಥಾದ್ದು ಅಸ್ವಾಭಾವಿಕವಾದುದಲ್ಲ. ಅವರಿಗೆ ಎಷ್ಟೋ ಅವಕಾಶಗಳಿದ್ದಾಗ್ಯೂ ಸಹಿತ

(ಶ್ರೀ ರಾಮಕೃಷ್ಣ ಹೆಗ್ಗಡೆ)

ವಿರೋಧಪಕ್ಷದವರು ಆತುರದಿಂದ ಇದನ್ನು ತಂದಿದ್ದಾರೆಂದು ಕಾಣುತ್ತದೆ. ಸರ್ಕಾರದ ಬೇರೆ ಬೇರೆ ಇಲಾಖೆಗಳು, ಸರ್ಕಾರಿ ಕರ್ಮಚಾರಿಗಳು ಮತ್ತು ಮಂತ್ರಿಗಳ ನಡವಳಿಕೆಯಲ್ಲಿ ಏನಾದರೂ ದೋಷವಿದ್ದರೆ, ಸರ್ಕಾರದ ಆಡಳಿತೆಯಲ್ಲಿ ಪ್ರಮಾದವಾಗಿದ್ದರೆ ಅದನ್ನು ಎತ್ತಿ ತೋರಿಸಬೇಕಾದಂಥದ್ದು, ದೇಶದ ದೃಷ್ಟಿಯಿಂದ, ಆಡಳಿತ ದೃಷ್ಟಿಯಿಂದ ಅವಶ್ಯಕವಾದುದು ಮತ್ತು ಅದನ್ನು ಸ್ವಾಗತಿಸಬೇಕಾದ್ದೂ ನಮ್ಮ ಕರ್ತವ್ಯ. ಇದಕ್ಕೆ ಕಾನೂನು ಪ್ರಕಾರ ಅನೇಕ ಅವಕಾಶಗಳಿವೆ. ನಾವು ಪ್ರತಿ ದಿವಸ ವಿರೋಧಿ ಪಕ್ಷ ಅಥವಾ ಆಳುವ ಪಕ್ಷ ಇವುಗಳ ಸದಸ್ಯರೆಲ್ಲರಿಗೂ ಸರ್ಕಾರದ ನಡವಳಿಕೆ ಬಗ್ಗೆ ಮತ್ತು ಕಾರ್ಯಕ್ರಮದ ಬಗ್ಗೆ ಇಲ್ಲಿ ಮಾತನಾಡುವ ಅವಶ್ಯಕತೆ ಇದ್ದರೆ ಅದಕ್ಕೆ ಪ್ರಶ್ನೆಗಳ ಕಾಲವಿದೆ. ಅದು ಸಾಲದೆ ಇದ್ದರೆ ಯಾವುದಾದರೂ ಒಂದು ಪ್ರಶ್ನೆ ಮೇಲೆ ಇನ್ನೂ ಹೆಚ್ಚಿನ ಟೀಕೆ ಮಾಡಬೇಕು, ಹೆಚ್ಚಿನ ಮಾಹಿತಿ ಬೇಕು ಎಂದು ಇದ್ದರೆ ಅದಕ್ಕೆ ಅರ್ಧಗಂಟೆ ಕಾಲ ಪ್ರತ್ಯೇಕವಾದ ಚರ್ಚೆಯನ್ನು ಮಾಡಲು ಅವಕಾಶವಿದೆ. ಅದೂ ಸಾಲದೆ ಇದ್ದರೆ ಅತಿ ಜರೂರಾದ ಸಾರ್ವಜನಿಕ ವಿಷಯ, ಒಂದು ಸಮಸ್ಯೆ ಉದ್ಭವವಾದರೆ ಅದಕ್ಕೆ ಅಲ್ಪ ಕಾಲಾವಧಿ ಪ್ರಶ್ನೆಯನ್ನು ಕೊಟ್ಟು ಆಗಲೂ ಕೂಡ ಅದರ ಪ್ರಯೋಜನವನ್ನು ಪಡೆದುಕೊಳ್ಳಬಹುದು. ಅಷ್ಟೇ ಅಲ್ಲ, ಬಡ್ಜೆಟ್ಟಿನ ಮೇಲೆ ಚರ್ಚೆಯಾಗುವಂಥ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗುವಂಥ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಸರ್ಕಾರದ ಆಡಳಿತದ ಬಗ್ಗೆ ಮಾತನಾಡುವಂಥ ಅವಕಾಶಗಳು ಬೇಕಾದಷ್ಟಿವೆ. ಇಷ್ಟೆಲ್ಲ ಇರುವಾಗ ಮತ್ತು ಅದಕ್ಕೂ ಹೆಚ್ಚಾಗಿ ಈ ಅವಿಶ್ವಾಸ ನಿರ್ಣಯವನ್ನು ಒಂದು ವರ್ಷದ ಅವಧಿ ಕೂಡ ಆಗಿಲ್ಲ ತಂದು—ಪುನಃ ಇವತ್ತಿನ ದಿವಸ ತರಲು ಏನು ಹೇತು ಇರಬಹುದು ಎನ್ನುವುದು ನನಗಂತೂ ನಿಗೂಢವಾದ ಪ್ರಶ್ನೆಯಾಗಿದೆ. ಮಾನ್ಯ ಮಿತ್ರರಾದ ಶ್ರೀ ಎಸ್. ಎಂ. ಕೃಷ್ಣ ಅವರು ಹೇಳಿದರು ಈ ಸಲ ಪಾರ್ಲಿಮೆಂಟಿನಲ್ಲಿ ಅವಿಶ್ವಾಸ ನಿರ್ಣಯವನ್ನು ತಂದಿದ್ದರು, ಬೇರೆ ಬೇರೆ ರಾಜ್ಯಗಳ ವಿಧಾನಸಭೆಗಳಲ್ಲಿಯೂ ಅವಿಶ್ವಾಸ ನಿರ್ಣಯ ಬಂದು ಚರ್ಚೆಯಾಗಿತ್ತು. ಆದರೆ ನಾವು ಉಳಿದಿದ್ದೆವು ಎಂದು. ಇದರಿಂದ ಅವಿಶ್ವಾಸ ನಿರ್ಣಯವನ್ನು ತಂದಿರುವುದರ ಆವಶ್ಯಕತೆ ಗೊತ್ತಾಗುತ್ತದೆ; ಎಂದು ಹೇಳುತ್ತಿದ್ದೇನೆ.

ಇದರಿಂದ ನನ್ನ ಮನಸ್ಸಿಗೆ ಸಮಾಧಾನವಾಗಲಿಲ್ಲ. ಕಳೆದಸಲ ಅವಿಶ್ವಾಸ ನಿರ್ಣಯ ತಂದಮೇಲೆ ಅಂಥ ಅನಾಹುತವಾಗಿದ್ದರೆ ಸಹಿಸಲಸಾಧ್ಯವಾದ ಪರಿಸ್ಥಿತಿ ಬಂದಿದ್ದರೆ ಈ ಅಧಿವೇಶನ ಪ್ರಾರಂಭವಾಗುವ ಕಾಲದಲ್ಲಿ ಇಂಥ ನಿರ್ಣಯ ತರಬಹುದಾಗಿತ್ತು. ಅಧಿವೇಶನ ನಡೆದು ಈಗ ಮುಗಿಯಲಿಕ್ಕೆ ಬಂದಿದೆ. ಪ್ರಸಕ್ತ ವಿಷಯಗಳ ಮೇಲೆ ಚರ್ಚೆ ಆಯಿತು. ಈ ಮಹಾ ಸಭೆಯ ಎರಡು ದಿವಸ ಕಾಲ ಈ ನಿರ್ಣಯದ ಚರ್ಚೆಗೆ ತೆಗೆದುಕೊಂಡಿರುವುದರಿಂದ ಏನಾದರೂ ಪ್ರಯೋಜನವಾಗಿದೆ ಎಂದು ನಾನು ತಿಳಿಯಲಾರೆ.

ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ಮುಖಂಡರು ಮತ್ತು ಇನ್ನೊಬ್ಬ ಸದಸ್ಯರು ಸರಕಾರ ಯಾವ ರೀತಿ ಕೆಲಸಮಾಡಬೇಕು ಎಂಬುವಕ್ಕೆ ಉಪದೇಶ ಕೊಟ್ಟರು ಅದಕ್ಕಾಗಿ ಅವರಿಗೆ ಕೃತಜ್ಞರಾಗಿದ್ದೇವೆ. ಅವರು ಹೇಳಿರುವುದರಲ್ಲಿ ಯೋಗ್ಯವಾದುದು ಎಷ್ಟು ಬೇಕೋ ಅಷ್ಟನ್ನು ಮಾತ್ರ ತೆಗೆದುಕೊಳ್ಳುತ್ತೇವೆ. ಅದಕ್ಕೆ ಮೊದಲು ಅವರು ಒಂದು ನಮ್ರ ಸೂಚನೆ ಸ್ವೀಕರಿಸಬೇಕು. ಇವತ್ತಲ್ಲ ನಾಳೆಯಾದರೂ ತಮ್ಮ ಪಕ್ಷದವರು ಸರಕಾರ ರಚನೆ ಮಾಡಬೇಕು ಎಂದು ಹೇಳತಕ್ಕ ಒಂದು ಆಕಾಂಕ್ಷೆ, ಮಹತ್ವಾಕಾಂಕ್ಷೆ ಅವರು ಇಟ್ಟುಕೊಂಡಿದ್ದಾರೆ. ಈ ಸಲ ಆಗಲಿಲ್ಲ ಮುಂದಿನ ಚುನಾವಣೆಯಲ್ಲಿ ಆಗಲಿ ಅಥವಾ ಇನ್ನು 50 ವರ್ಷದೊಳಗಾಗಲಿ ಅವರು ಅಧಿಕಾರಕ್ಕೆ ಬರಬಹುದು ಮತ್ತು ಅಧಿಕಾರಕ್ಕೆ ಬಂದಾಗ್ಗೆ ಯಾವ ರೀತಿ ಅಧಿಕಾರ ನಡೆಸಿಕೊಂಡು ಹೋಗಬೇಕು ಎನ್ನುವ ಅವಕಾಶ ಅವರಿಗೆ ಬರುತ್ತದೆ. ತಾವು ಯಾವಾಗ ಆ ಪಾತ್ರ ವಹಿಸಬೇಕಾಗುತ್ತದೆಯೋ, ಆ ಪಾತ್ರ ಯೋಗ್ಯ ರೀತಿಯಿಂದ ನಿರ್ವಹಿಸಲು ಈಗಿನಿಂದಲೇ ಕಲಿಯಬೇಕು. ತುರ್ತು ಪರಿಸ್ಥಿತಿ, ಎಕನಾಮಿಕ್ ಕಂಡಿಷನ್, ದೊಡ್ಡ ಮಂತ್ರಿ ಮಂಡಲ ಈ ವಿಚಾರ ಲ್ಲಿ ಬಹು ದೀರ್ಘವಾಗಿ ಅವರು ಮಾತನಾಡಿದರು. ನಾನು ಒಂದು ಮಾತು ಈ ಮಿತ್ರರಿಗೆ ಕೇಳುತ್ತೇನೆ. ಎರಡು ದಿವಸ ಚರ್ಚೆಗೆ ಅವಕಾಶ ದೊರೆತ ಸಮಯದಲ್ಲಿ ಯಾವ ಹೊಸ ವಿಷಯ ತೆಗೆದಿದ್ದೀರಿ? ಹಿಂದಕ್ಕೆ ಯಾವುದನ್ನು ಹೇಳಿದ್ದೀರೋ ಅದನ್ನೆ ಸ್ವಲ್ಪ ದೊಡ್ಡದು ಮಾಡಿ ಹೇಳಿದ್ದೀರಿ. ಯಾವುದೇ ಒಂದು ಹೊಸ ಶಬ್ದ ಕೂಡ ಈ ಮಾನ್ಯ ಸಭೆಯಲ್ಲಿ ಅವರು ಪ್ರಸ್ತಾಪಿಸಲಿಲ್ಲ. ಇದು ಅಸಮಾಧಾನಕಾರವಾಗಿತ್ತು. ಕೆಲವರು ಯಾವ ಯಾವ ವಿಚಾರ ಟೀಕೆ ಮಾಡಿದ್ದರೋ ಪುನಃ ಅದನ್ನೇ ಪ್ರಸ್ತಾಪ ಮಾಡಿದಾರೆ. ಇದರಿಂದ ಯಾವ ಪ್ರಯೋಜನವಾಯಿತು? ನನಗೆ ಸಮಾಧಾನ ಪಡಿಸಲು ಆಗಲಿಲ್ಲ. ಜನತೆಗೆ ಏನು ಲಾಭವಾಯಿತು? ದೇಶಕ್ಕೆ ಏನು ಲಾಭವಾಯಿತು, ಸಮಾಜಕ್ಕೆ ಏನು ಲಾಭವಾಯಿತು? ಸರಕಾರಕ್ಕೆ ಏನು ಲಾಭವಾಯಿತು? ಇದನ್ನು ದಯವಿಟ್ಟು ಅವರು ಹೇಳಲಿ. ಕೇವಲ ಪ್ರಚಾರಕ್ಕೋಸ್ಕರ ಕೇವಲ ವಿರೋಧ

ಕ್ಕಾಗಿ ವಿರೋಧಮಾಡಿ ಟೀಕೆ ಮಾಡುವ ಉದ್ದೇಶವಿದ್ದರೆ ಅವರಿಗೆ ನಾನೂ ಏನೂ ಹೇಳಲಾರೆ. ಈ ಮಾತನ್ನು ವಾಪಸು ತೆಗೆದುಕೊಳ್ಳುತ್ತೇನೆ. ಅದಕ್ಕೂ ಹೆಚ್ಚಿನ ಉದ್ದೇಶವೇನಾದರೂ ಇದ್ದರೆ ಅದನ್ನು ಯಾರಾದರೂ ಒಬ್ಬರು ಧಾರ್ಷ್ಟ್ಯದಿಂದ ತೋರಿಸುವ ಸೌಜನ್ಯ ತೋರಿಸಬೇಕು. ನೋ ಕಾನ್‌ಫಿಡೆನ್ಸ್ ಮೋಷನ್ ಇದು ಬ್ರಹ್ಮಾಸ್ತ್ರ ಎಂದು ಶ್ರೀಮಾನ್ ಕೃಷ್ಣಪ್ಪನವರು ಹೇಳಿದರು. ವಿರೋಧ ಪಕ್ಷದವರಿಗೆ ಇದನ್ನು ಉಪಯೋಗಿಸಲು ಅವಕಾಶ ರೂಲ್ಸ್ ಪ್ರಕಾರ ಇದ್ದೇ ಇದೆ. ರೂಲ್ಸ್ ಪ್ರಕಾರ ಇಂಥ ನಿರ್ಣಯ ಸಭೆಯ ಮುಂದೆ ತಂದು ಇಂತಿಷ್ಟು ಜನ ಎದ್ದು ನಿಂತರೆ ಅವಿಶ್ವಾಸ ನಿರ್ಣಯಕ್ಕೆ ಅನುಮತಿ ದೊರೆತು ಚರ್ಚೆಯಾಗುತ್ತದೆ. ಆದರೆ ಪುನಃ ಪುನಃ ಅವಿಶ್ವಾಸ ನಿರ್ಣಯ ತಂದು ಈ ಅವಕಾಶವನ್ನು ಉಪಯೋಗಿಸಿಕೊಳ್ಳುವುದು ವಿವೇಕವಲ್ಲ ಎಂದು ಹೇಳುತ್ತೇನೆ. ಇಂಥ ನಿರ್ಣಯವ ಎಂದಿನ ಅಧಿವೇಶನದಲ್ಲಿ ಸಹ ತರಬಹುದು, ಇಷ್ಟೇ ಅಲ್ಲದೆ ಪ್ರತಿಯೊಂದು ಅಧಿವೇಶನದಲ್ಲೂ ಸಹ ತರಬಹುದು. ಅಷ್ಟರಮಟ್ಟಿಗೆ ಸಂಖ್ಯಾ ಬಲ ಅವರಿಗೆ ಇದೆ. ವಿರೋಧ ಪಕ್ಷದ ಮಾನ್ಯ ಮಿತ್ರರಿಗೆ ಪುನಃ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಯಾವ ಜವಾಬ್ದಾರಿ ವಹಿಸಿಕೊಂಡಿದ್ದೀರೋ ಅದನ್ನು ತೂಕವಾಗಿ, ನ್ಯಾಯವಾಗಿ, ಯೋಗ್ಯ ಮಾರ್ಗದಿಂದ ನಿರ್ವಹಿಸಲು ಮೊದಲು ಕಲಿಯಬೇಕು. ಇದರ ಬಗ್ಗೆ ಶ್ರೀಮಾನ್ ಕೃಷ್ಣ ಅವರು ಬಹಳ ಸೊಗಸಾಗಿ ಮಾತನಾಡಿದರು. ನಾನು ಏಕಾಗ್ರ ಚಿತ್ತದಿಂದ ಅವರ ಭಾಷಣ ಕೇಳಿದೆ. ಆದರೆ ಅದರಲ್ಲಿ ಯಾವ ಹೊಸ ವಿಷಯವಿರಲಿಲ್ಲ. ಅವರು ಒಂದು ಮಾತನ್ನು ಹೇಳಿದರು. ಅದು ನನಗೆ ಬಹಳ ಆಶ್ಚರ್ಯವಾಯಿತು. ಅದು ಏನೆಂದರೆ ಮೈಸೂರು ಸರಕಾರ ಬಂಡವಾಳಶಾಹಿ ಕೈಗೂಸು ಆಗಿದೆ ಎಂದು ಆರೋಪ ಮಾಡಿದರು. ಅದನ್ನು ಮುಂದುವರಿಸಿಕೊಂಡು ಪುಷ್ಟೀಕರಿಸುವುದಕ್ಕೆ ಉದಾಹರಣೆ ಕೊಟ್ಟು ಸಮರ್ಥಿಸುವ ಗೋಜಿಗೆ ಹೋಗಲಿಲ್ಲ ಅದನ್ನು ಹಾಗೆ ಬಿಟ್ಟುಬಿಟ್ಟರು. ಮಾನ್ಯ ಸದಸ್ಯರು ಯಾವ ಅರ್ಥದಿಂದ ಈ ಮಾತನ್ನು ಹೇಳಿದರು ನನಗೆ ಗೊತ್ತಿಲ್ಲ. ಇಂದು ಯಾವ ಕಾಂಗ್ರೆಸ್ ಸಂಸ್ಥೆ ಸರಕಾರ ನಡೆಸುತ್ತಿದೆಯೋ ಅದು ಸಮಾಜವಾದ ಬಗ್ಗೆ ಮಾನ್ಯ ಸದಸ್ಯರು ಹುಟ್ಟುವುದಕ್ಕೆ ಮುಂಚೆ ಜಗತ್ತಿಗೆ ದೇಶಕ್ಕೆ ಹೇಳಿದೆ. ಅದಕ್ಕೆ ಅನುಗುಣವಾಗಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಸ್ಪಷ್ಟವಾದ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇಂದು ಕೇಂದ್ರ ಸರಕಾರವೇ ಆಗಲಿ, ರಾಜ್ಯ ಸರಕಾರವೇ ಆಗಲಿ ಯಾವ ದಾರಿಯಿಂದ ಹೋಗುತ್ತಿವೆಯೋ ಅದು ಸಮಾಜವಾದ ಮಾರ್ಗ. ಯಾವ ನಿರ್ದಿಷ್ಟ ಉದಾಹರಣೆ ಕೊಡದೆ ಈ ಸರಕಾರ ಬಂಡವಾಳಶಾಹೀ ಕೈಗೂಸು, ಕೈಗೊಂಬೆ ಎಂದು ಹೇಳುವುದು ಯಾವ ಜವಾಬ್ದಾರಿ ಸ್ಥಾನದಿಂದ ಮಾತನಾಡುತ್ತಾರೋ ಅದು ಅಷ್ಟೊಂದು ಯೋಗ್ಯವಲ್ಲ ಎಂದು ನನ್ನ ನಮ್ರ ಭಾವನೆ.

ಮಾನ್ಯ ಅಧ್ಯಕ್ಷರೇ, ನಾವು ಕೇವಲ ಬೈಯ್ಯೋದನ್ನೇ ಒಂದು ದೊಡ್ಡ ಧ್ಯೇಯ ಎಂದು ಇಟ್ಟುಕೊಂಡರೆ ಅದರಿಂದ ಯಾರಿಗೂ ಶ್ರೇಯಸ್ಸು ಆಗುವುದಿಲ್ಲ. ಮಾನ್ಯ ಸದಸ್ಯರು ಕಟುವಾಗಿ ಮಾತನಾಡಿದರು. ಕಟುವಾಗಿ ಮಾತನಾಡುವುದೇ ದೊಡ್ಡಸ್ತನ ಎಂದು ಅವರು ತಿಳಿದುಕೊಂಡಿದ್ದರೆ ಅಂಥ ದೊಡ್ಡಸ್ತನ ಅವರಿಗೇ ಇರಲಿ ಅದು ನಮಗೆ ಬೇಡ. ಸೂಕ್ಷ್ಮವಾಗಿ ಹೇಳಬೇಕಾದ್ದನ್ನು ಕಟುವಾಗಿ ಮಾತನಾಡುತ್ತಾರೆ. ಅಷ್ಟು ಕಟುವಾಗಿ ಮಾತನಾಡುವುದಕ್ಕೆ ಶಬ್ದ ಭಂಡಾರ ಸಾಮರ್ಥ್ಯ ನಮ್ಮ ಕಡೆಯ ಜನರಿಗೂ ಇದೆ. ಅದು ಇಷ್ಟು. ಸಿನ್‌ಸಿರಿಟಿ ಎಂಬುದು ಅವರದೇ ಮೊನೊಪಲಿ ಅಲ್ಲ. ಸರಕಾರ ಅಯೋಗ್ಯ ಮಂತ್ರಿಗಳು ನಾಲಾಯಕ ಎಂದು ಸಾವಿರ ಸಲ ಹೇಳಿದರೂ ಕೂಡ ಅದು ಆಗ ವುದಿಲ್ಲ. ಮಾತು ಕೆಟ್ಟರೆ ಹೇಳುವ ಬಾಯಿ ಸಿಹಿ ಆಗುವುದಿಲ್ಲ- ನಾಯಿ ಬೊಗಳುತ್ತಿದ್ದರೂ ಆನೆ ಗಂಭೀರವಾಗಿ ಹೋಗುತ್ತಲೇ ಇರುತ್ತದೆ. ಪ್ರತಿಯೊಂದು ಲಕ್ಷ ಜನಕ್ಕೆ ಒಬ್ಬ ಪ್ರತಿನಿಧಿಯಂತೆ ನಾವು ಇಲ್ಲಿ ಚುನಾಯಿತರಾಗಿ ಬಂದಿದ್ದೇವೆ. ಗೌರವಯುತವಾದ ಸ್ಥಾನದಲ್ಲಿ ಇರುವಾಗ ಪರಸ್ಪರ ನಿಂದೆ ಮಾಡುವುದಕ್ಕೆ ನಾವು ಇಲ್ಲಿ ಇರುವುದಿಲ್ಲ.

Sri V. S. PATIL.—On a Point of order. The Hon'ble Minister while comparing this Side with that of the Congress Side said that the Congress side is 'Elephant' and this Side is 'a barking Dog'. Is it parliamentary to use such words to the Opposition ?

Sri K. LAKKAPPA.—So far as this aspect is concerned...

Mr. SPEAKER.—Is it a new Point of Order..

Sri K. LAKKAPPA.—There is a Ruling that if anything is said either on this Side or on that Side, it is unparliamentary.

Mr. SPEAKER.—Let him give me the reference to that Ruling.

ಶ್ರೀ ರಾಮಕೃಷ್ಣ ಹೆಗ್ಗಡೆ.—ಸ್ವಾಮಿ, ನಾವು ಯಾವ ಉದ್ದೇಶದಿಂದ ಈ ಸಭೆಗೆ ಆರಿಸಿ ಬಂದಿದ್ದೇವೆ ಯಾವ ಜನತೆ ಸೇವೆಗಾಗಿ ಆರಿಸಿ ಕಳಿಸಿದ್ದಾರೆ ಅದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾದುದು ಅಗತ್ಯ ಮತ್ತು ಉತ್ತಮ. ಇಷ್ಟೊಂದು ಸದಸ್ಯರು ಒಂದೇ ಸಮನೆ ಟೀಕೆ ಮಾಡುತ್ತಿದ್ದಾರೆ. ಟೀಕೆ ಮಾಡಲಿ ನಾವು ಸ್ವಾಗತಿಸುತ್ತೇವೆ. ಅಥವಾ ಅದು ಅಗತ್ಯವಿರಲಿಕ್ಕಿಲ್ಲ. ಆದರೆ ವಿರೋಧ ಪಕ್ಷದ ಒಬ್ಬ ಸದಸ್ಯನಾದರೂ ಸರಕಾರ ಇಂಥ ಕೆಲಸ ಚೆನ್ನಾಗಿ ಮಾಡಿದೆ, ಸರಕಾರದ ಇಂಥ ಕೆಲಸ ತೃಪ್ತಿಕರವಾಗಿದೆ ಎಂದು ಒಂದು ಶಬ್ದ ಬಾಯಿಂದ ಬಂದಿದ್ದರೆ ಹೇಳಲಿ. ಇದರ ಅರ್ಥ ಏನು.

ಇದರ ಅರ್ಥವೇನು ? ಸರ್ಕಾರ ಮಾಡುವುದೆಲ್ಲವೂ ಕೆಟ್ಟ ಕೆಲಸ ಅಪ್ರಯೋಜಕವಾಗಿದ್ದು ಸರ್ಕಾರದಲ್ಲಿರುವವರೆಲ್ಲರೂ ಅಯೋಗ್ಯರ ಎಂಬ ರೀತಿಯಲ್ಲಿ ಮಾತನಾಡುತ್ತಾ ಇದ್ದಾರೆ, ನಾನಾಗಲೀ ನನ್ನ ಪಕ್ಷದ ಪರವಾಗಿ ಮಾತನಾಡಿದ ಸದಸ್ಯರು ಯಾರೇ ಆಗಲೀ ಯಾರೂ ಆ ರೀತಿ ಏನೂ ಸಮರ್ಥನೆ ಮಾಡಿಲ್ಲ, ನಡೆಯುವವರು ಎಡವುತ್ತಾರೆ, ಬೀಳುತ್ತಾರೆ, ಮುಗ್ಗರಿಸುತ್ತಾರೆ ಆದರೆ ಅದನ್ನೇ ದೊಡ್ಡದಾಗಿ ಮಾಡುವುದು ಸರಿಯಲ್ಲ, ಯಾರು ನಡೆಯುವುದಿಲ್ಲವೋ ಅವರು ಮುಗ್ಗರಿಸುವುದೂ ಇಲ್ಲ ಮಾನ್ಯ ಸದಸ್ಯರಿಗೆ ಮತ್ತೊಂದು ಪ್ರಶ್ನೆಯನ್ನು ಕೇಳುತ್ತೇನೆ ಏಕೆಂದರೆ ಅವರು ಈ ರಾಜ್ಯದಲ್ಲಿ ಅಧಿಕಾರಕ್ಕೆ ಬರದಿದ್ದರೂ ಕೂಡ ಮತ್ತೊಂದು ರಾಜ್ಯದಲ್ಲಿ ಕೆಲವು ಕಾಲ ಅಧಿಕಾರದಲ್ಲಿದ್ದಂತಹ ಒಂದು ಪಕ್ಷದವರು ಆದ್ದರಿಂದ ಯಾವ ಕಾಲದಲ್ಲಿ ಅವರ ಪಕ್ಷ ಅಧಿಕಾರದಲ್ಲಿ ಇತ್ತೋ ಆ ಕಾಲದಲ್ಲಿ ಆ ರಾಜ್ಯದಲ್ಲಿ ಸಂಪೂರ್ಣವಾಗಿ ಅತ್ಯಂತ ತೃಪ್ತಿಕರವಾಗಿ ಆಡಳಿತ ನಡೆಯುತ್ತಾ ಇತ್ತೇ ಎಂಬುದನ್ನು ಅವರೇ ಸ್ವತಃ ಹೇಳುತ್ತಾರೆಯೇ ಎಂದು ಕೇಳುತ್ತೇನೆ. ಪ್ರಜಾಪ್ರಭುತ್ವದಲ್ಲಿ ನಿರಂಕುಶವಾಗಿ, ಸ್ವೇಚ್ಛಾಚಾರವಾಗಿ ಕೆಲಸ ಮಾಡುವುದಕ್ಕೆ ಯಾರಿಗೂ ಸಾಧ್ಯವಿಲ್ಲ ಮುಖ್ಯ ಮಂತ್ರಿಯಾಗಲೀ ಸರ್ಕಾರಿ ಕೆಲಸಗಾರರೇ ಆಗಲಿ, ಇತರ ಮಂತ್ರಿಗಳೇ ಆಗಲಿ ಆಡಳಿತ ಪಕ್ಷಕ್ಕೆ ಸೇರಿದ ಇತರ ಮನುಷ್ಯರೇ ಆಗಲಿ ಅವರು 24 ಗಂಟೆಯೂ ಕೂಡ ಜನಗಳ ಕಣ್ಣು ಬೆಳಕಿನಲ್ಲೇ ಇದ್ದುಕೊಂಡು ಕೆಲಸ ಮಾಡತಕ್ಕ ಪ್ರಸಂಗಗಳು ಇರುತ್ತವೆ ಆದ್ದರಿಂದ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಯಾರಾದರೂ ಅಲ್ಲಿ ಇಲ್ಲಿ ಸ್ವಲ್ಪಮಟ್ಟಿಗೆ ತೊಂದರೆಗೆ ಒಳಗಾಗಿದ್ದರೆ ಅದನ್ನು ಸುಧಾರಿಸುವುದಕ್ಕೆ ಸೂಚನೆ ಕೊಡಿ. ರಚನಾತ್ಮಕವಾದ ಟೀಕೆಗಳನ್ನು ಮಾಡಿ ಅದನ್ನು ಅಂಗೀಕಾರ ಮಾಡುತ್ತೇವೆ ಮತ್ತು ಅದರ ಪ್ರಕಾರ ನಮ್ಮ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಿಕ್ಕೆ ತಿದ್ದುಪಡಿ ಮಾಡಿಕೊಳ್ಳಲಿಕ್ಕೆ ಸಿದ್ಧರಾಗಿದ್ದೇವೆ. ಇಷ್ಟು ಹೊತ್ತೂ ಮಾತನಾಡಿದಂತಹ ಸದಸ್ಯರು ನಾನಾಗಲೇ ಹೇಳಿದಂತೆ ಶರಾವತಿ ಪ್ರಕರಣ, ಪಾನನಿರೋಧ, ಎಲೆಕ್ಟ್ರಿಸಿಟಿ ಬೋರ್ಡ್‌ನ ವಿಚಾರ, ಪಬ್ಲಿಕ್ ಸರ್ವೀಸ್ ಕಮಿಷನ್ ವಿಚಾರ ಹೀಗೆ ನಾಲ್ಕೈದು ವಿಚಾರಗಳನ್ನು ಬಿಟ್ಟರೆ ಬೇರೆ ಯಾವ ವಿಚಾರವನ್ನೂ ಕೂಡ ಅವರು ಹೊಸದಾಗಿ ಹೇಳಲಿಲ್ಲ, ಈ ಎಲ್ಲ ವಿಚಾರಗಳೂ ಚರ್ಚೆ ಆಗಿದೆ ಪುನಃ ಪುನಃ ಚರ್ಚೆಯಾಗಿದೆ. ಆದ್ದರಿಂದ ಸರ್ಕಾರದ ಪರವಾಗಿ ಅವುಗಳ ಉದ್ದೇಶವನ್ನು ಕುರಿತು ಹೇಳಬೇಕಾದ್ದು ಯಾವುದೂ ಇಲ್ಲ ಆದರೂ ಕೂಡ ಒಂದೆರಡು ವಿಚಾರವನ್ನು ನನಗೆ ಸಂಬಂಧಪಟ್ಟ ಖಾತೆಯಲ್ಲಿ ಉದಹರಿಸಬೇಕೆಂದು ಇದ್ದೇನೆ. ಏಕೆಂದರೆ ನಮ್ಮ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣದಲ್ಲಿ ಸಹಕಾರಿ ಸಂಘ ಅಥವಾ ಸಹಕಾರಿ ಕ್ಷೇತ್ರದಲ್ಲಿ ವಿಪರೀತ ಅನ್ಯಾಯ ನಡೆದಿದೆ ಮತ್ತು ಅದರಲ್ಲಿ ಗೂಳಿಗಳಿಗೆ ವಾಸ ಸ್ಥಾನವಾಗಿದೆ ಎಂದು ಹೇಳಿದರು. ಸಹಕಾರಿ ಕ್ಷೇತ್ರ ಪ್ರತಿ ದಿವಸ ಬೆಳೆಯುತ್ತಿರುವಂತಹ ಕ್ಷೇತ್ರ ಇಂದು ಈ ಕ್ಷೇತ್ರದಲ್ಲಿ ಸುಮಾರು 116 ಕೋಟಿ ರೂಪಾಯಿಗಳಷ್ಟು ವರ್ಕಿಂಗ್ ಕ್ಯಾಪಿಟಲ್ ಇದೆ, ಇಷ್ಟೊಂದು ವ್ಯಾಪಕವಾಗಿರುವಂತಹ ದೊಡ್ಡ ಕ್ಷೇತ್ರದಲ್ಲಿ ನಮ್ಮ ಮೈಸೂರು ರಾಜ್ಯದಲ್ಲಿ ಸುಮಾರು 16 ಸಾವಿರದಷ್ಟು ಬೇರೆ ಬೇರೆ ರೀತಿಯ ಸಹಕಾರ ಸಂಘಗಳು ಇವೆ. ಆದ್ದರಿಂದ ಈ ಎಲ್ಲಾ ಸಂಸ್ಥೆಗಳೂ ಬಹಳ ಸಮರ್ಪಕವಾಗಿವೆ ಅಥವಾ ನೂರಕ್ಕೆ ನೂರರಷ್ಟು ಪ್ರಾಮಾಣಿಕವಾಗಿವೆ ಎಂದು ಎಂದೂ ಹೇಳುವುದಿಲ್ಲ. ಆದರೆ ಕಳೆದ ಒಂದು ವರ್ಷದಲ್ಲಿ ಎಷ್ಟು ಮಟ್ಟಿಗೆ ಸಾಧ್ಯವೋ ಅಷ್ಟುಮಟ್ಟಿಗೆ ದಕ್ಷತೆ ಮತ್ತು ಪ್ರಾಮಾಣಿಕತೆಯನ್ನು ಕಾಪಾಡಲಿಕ್ಕೆ ಏನು ಬೇಕೋ ಅದನ್ನು ಮಾಡಿದ್ದೇವೆ ಅದಕ್ಕೆ ಬೇಕಾಗುವಂತಹ ಎಲ್ಲಾ ಕ್ರಮಗಳನ್ನೂ ಕೈಕೊಂಡಿದ್ದೇವೆ ಆದರೂ ಮಾನ್ಯ ಸಭೆಯ ಗಮನಕ್ಕೆ ಒಂದು ಅಂಶವನ್ನು ತರಲಿಕ್ಕೆ ಬಹಳ ಸಂತೋಷವಾಗುತ್ತದೆ. ಕಳೆದ ವರ್ಷ ಶೇಕಡ 97–98 ಸಂಘಗಳ ಆಡಿಟ್ ನಿರ್ಣಯ ಆಗಿದೆ ಬಾಕಿ ಸಂಘಗಳ ಪೈಕಿ ಕೆಲವು ಡೀಫಂಗ್ಟ್ ಆಗಿವೆ ಆದ್ದರಿಂದ ನೂರಕ್ಕೆ ಎರಡು ಅಥವಾ ಮೂರರಷ್ಟು ಸಂಘಗಳ ಆಡಿಟ್ ಪೂರ್ಣವಾಗಿಲ್ಲ ಹೊಸದಾಗಿ ಎಲ್ಲೆಲ್ಲಿ ಹಣದ ದುರ್ವಿನಿಯೋಗವಾಗಿದೆ ನಡೆದಿದೆ ಎಂಬ ಸಮಾಚಾರ ಕೂಡ ಸಿಕ್ಕುತ್ತದೆ. ಆದ್ದರಿಂದ ಆಡಳಿತ ಸಮರ್ಪಕವಾಗಿ ನಡೆದಿಲ್ಲ ಎನ್ನುವಂತಹ ಸಮಾಚಾರ ಬರುವುದಕ್ಕೆ ಕಾರಣವಿಲ್ಲ ಆ ರೀತಿ ನಡೆದಿರುವ ಸಂದರ್ಭದಲ್ಲಿ ತಕ್ಷಣ ಉಗ್ರವಾದ ಕ್ರಮ ತೆಗೆದುಕೊಳ್ಳಲಿಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ. ಸರ್ವಸಾಮಾನ್ಯವಾಗಿ ಒಂದು ವಿಷಯವನ್ನು ಮಾತ್ರ ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ ಎಲ್ಲರೂ ಈ ಕ್ಷೇತ್ರದಲ್ಲಿ ಮತ್ತು ಇನ್ನಿತರ ಶಾಖೆಗಳಲ್ಲಿ ನಮ

ರ್ಪಕವಾಗಿ ಕೆಲಸ ನಡೆದಿಲ್ಲ ಎಂದು ಜನರಲ್ ಆಗಿ ಪ್ರಸ್ತಾಪ ಮಾಡುತ್ತಾರೆಯೇ ಹೊರತು ಇಂಥಿಂಥ ಕಡೆ ಹೀಗೆ ಹೀಗೆ ನಡೆದಿದೆ ಎಂದು ನಿರ್ದಿಷ್ಟವಾದ ನಿದರ್ಶನ ಕೊಟ್ಟು ಇದು ಯೋಗ್ಯವಾಗಿ ನಡೆದಿಲ್ಲ, ಈ ರೀತಿಯಾಗಿ ಅಪರಾತಪರ ನಡೆದಿದೆ ಎಂದು ಒಬ್ಬ ಮಾನ್ಯ ಸದಸ್ಯರೂ ಕೂಡ ಹೇಳಲಿಲ್ಲ ಅದನ್ನು ಹೇಳಿದ್ದರೆ ತಕ್ಷಣ ಪರಿಶೀಲನೆ ಮಾಡಿಸಿ ಸೂಕ್ತವಾದ ಯೋಗ್ಯ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ ಎಂದು ಈ ಮೂಲಕ ತಮಗೆ ಆಶ್ವಾಸನ ಕೊಡಲಿಕ್ಕೆ ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ ಇಂದು ಮಾನ್ಯ ಸದಸ್ಯರ ಭಾಷಣದಲ್ಲಿ ಕಳೆದ ವರ್ಷ ನಾವು ಕೈಕೊಂಡ ಒಂದು ಹೊಸ ಸ್ಕೀಮಿನ ಬಗ್ಗೆ ಒಂದು ಮಾತಾದರೂ ಬಂದಿದ್ದರೆ ನನಗೆ ಎಷ್ಟೋ ಸಮಾಧಾನವಾಗುತ್ತಾ ಇತ್ತು. ಒಂದೇ ಉಸಿರಿನಲ್ಲಿ ಅವರು ಆಹಾರ ಸಾಮಗ್ರಿಗಳ, ದಿನಸಿಗಳ ಬೆಲೆ ಬಹಳವಾಗಿ ಏರುತ್ತಾ ಇದೆ ಸರ್ಕಾರ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಿದ್ದಾರೆ, ಆದಕ್ಕೆ ಉತ್ತರ ಕೊಡುತ್ತಾ ನಮ್ಮ ಮಿತ್ರರೊಬ್ಬರು ಆಗಲೇ ಚೆನ್ನಾಗಿ ಹೇಳಿದುದನ್ನು ನಾನು ಕೇಳಿದೆ, ನಾವು ವ್ಯವಸಾಯಗಾರರ ಪಕ್ಷ ವಹಿಸಿ ಬೆಲೆ ಹೆಚ್ಚಿಸಿದರೆ ಕನ್ಸ್ಯೂಮರ್ಸ್ ಬಗ್ಗೆ ಏನೂ ಮಾಡುತ್ತಿಲ್ಲ ಎಂದು ಹೇಳುತ್ತೀರಿ, ಬೆಲೆ ಏರಿದಾಗ ಕನ್ಸ್ಯೂಮರ್ಸ್ ಪಕ್ಷ ವಹಿಸಿ ಬೆಲೆ ಇಳಿಸಿದರೆ ವ್ಯವಸಾಯಗಾರರನ್ನು ಕೈಬಿಟ್ಟಿದ್ದೀರಿ ಎಂದು ಹೇಳುತ್ತೀರಿ, ಈ ಮಾತನ್ನು ಇಲ್ಲಿ ಉಲ್ಲೇಖಿಸುವುದಕ್ಕೆ ಕಾರಣವೇನೆಂದರೆ ಕಳೆದ ವರ್ಷ ಅಗ್ರಿಕಲ್ಚರಲ್ ಸೀಸನ್ ಪ್ರಾರಂಭವಾದಾಗ ನಮ್ಮ ನಿರೀಕ್ಷೆಗೆ ಮೀರಿ ಬತ್ತದ ಧಾರಣೆ ಮಾರ್ಕೆಟ್‌ನಲ್ಲಿ ಬೀಳುತ್ತಾ ಹೋಯಿತು ಸುಮಾರು 15 ರಿಂದ 20-25 ರಷ್ಟು ಬೆಲೆ ಇಳಿಮುಖವಾಯಿತು ಆ ಹೊತ್ತಿನಲ್ಲಿ ನಮ್ಮ ರಾಜ್ಯದಲ್ಲಿ ಬತ್ತ ಉತ್ಪಾದನೆ ಮಾಡುವಂತಹ ಕ್ಷೇತ್ರದಲ್ಲಿ ರೈತರಿಗೆ ಪರಿಹಾರ ಕೊಡಬೇಕಾದಂತಹ ಸಂಭವ ಬಂದು ಸರ್ಕಾರದವರು ಕೂಡಲೇ ಒಂದು ಸ್ಕೀಮನ್ನು ಮಾಡಿ ಸೊಸೈಟಿಗಳ ಮುಖಾಂತರ ಬತ್ತವನ್ನ ಮಾರ್ಕೆಟ್ ಬೆಲೆಗೆ ಖರೀದಿ ಮಾಡುವಂತಹ ಏರ್ಪಾಡನ್ನು ಮಾಡಿದರು. ಆದ್ದರಿಂದ ಒಂದು ಪಲ್ಲಾಕ್ಕೆ ಎರಡರಿಂದ ಮೂರು ನಾಲ್ಕು, ಐದು ರೂಪಾಯಿಗಳವರೆಗೂ ಧಾರಣೆ ಸಿಕ್ಕಿ ರೈತರಿಗೆ ಅನುಕೂಲವಾಯಿತು ಸುಮಾರು ಒಂದೂಮುಕ್ಕಾಲು ಲಕ್ಷ ಪಲ್ಲಾ ಬತ್ತವನ್ನು ಸಂಗ್ರಹಿಸಿ ಕನ್ಸ್ಯೂಮರ್ಸ್ ಸೊಸೈಟಿ ಮೂಲಕ ಬಳಕೆದಾರರಿಗೆ ಹಂಚಿದ್ದೇವೆ ಅದನ್ನು ರಿಲೀಸ್ ಮಾಡಿದಾಗ ಏರುತ್ತಾ ಇದ್ದ ಬೆಲೆ ಎರಡು ಮೂರು ರೂಪಾಯಿನಷ್ಟು ಕಡಿಮೆ ಆಯಿತು. ಇದಕ್ಕಾಗಿ ಯಾರಾದರೂ ಒಬ್ಬರು ಒಂದು ಕಾಂಪ್ಲಿಮೆಂಟ್ ಕೊಟ್ಟಿದ್ದಾರೆಯೇ ಎಂದು ನಾನು ಈ ದಿನ ಕೇಳುತ್ತೇನೆ. ಸರ್ಕಾರದ ಬೆನ್ನು ಚಪ್ಪರಿಸಿಕೊಳ್ಳಲು ಇದನ್ನು ಹೇಳುತ್ತಾ ಇಲ್ಲ. ಎಲ್ಲಿ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ ಎಂಬುದನ್ನು ತಾವು ನೋಡಬೇಕು. ಒಂದಾದರೂ ಒಳ್ಳೆಯ ಕೆಲಸ ಮಾಡಿಲ್ಲ ಎಲ್ಲ ಕೆಟ್ಟದ್ದೇ ಮಾಡಿದ್ದಾರೆ ಎಂದು ಹೇಳುವಂತಹ ಪರಿಪಾಠವನ್ನು ಅವರು ಸ್ವಲ್ಪ ಮಟ್ಟಿಗೆ ತಿದ್ದಿಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಈ ಅವಿಶ್ವಾಸ ನಿರ್ಣಯ ತಂದಿರುವಂತಹ ಉದ್ದೇಶ ಕೇವಲ ರಾಜಕೀಯವಾಗಿದ್ದರೂ ಇಷ್ಟು ಮಾತ್ರ ಹೇಳಬಲ್ಲೆ ಪುನಃ ಪುನಃ ಇಂತಹ ಅತ್ಯಂತ ಮಹತ್ವವಾದಂತಹ ಉಪಕ್ರಮವನ್ನು ಪದೇ ಪದೇ ಕೈಕೊಂಡು ಇದನ್ನು ಬಹಳ ಅಗ್ಗವಾಗಿ ಮಾಡಬಾರದು, ಯಾವ ಗೌರವ ವಿರೋಧ ಪಕ್ಷಕ್ಕೆ ಇರಬೇಕೋ ಆ ಗೌರವ ಹೊರಟುಹೋಗುತ್ತದೆ, ಇವತ್ತು ನಾವು ಒಂದು ದೊಡ್ಡ ಸಂಸ್ಥೆಯಾಗಿ ಮೆಜಾರಿಟಿಯಲ್ಲಿದ್ದು ಕೊಂಡೂ ಕೂಡ ವಿರೋಧ ಪಕ್ಷ ಬೆಳೆಯಬೇಕು, ವಿರೋಧ ಪಕ್ಷದ ಕೆಲಸ ಚೆನ್ನಾಗಿ ಆಗಬೇಕು ಅದರಿಂದ ನಮ್ಮ ಪ್ರಜಾಪ್ರಭುತ್ವ ಆರೋಗ್ಯಕರವಾಗಿ ಬೆಳೆಯಲಿಕ್ಕೆ ಸಹಾಯವಾಗುತ್ತದೆ ಎಂದು ಹೇಳಿ ಅವರನ್ನು ಸ್ವಾಗತಿಸುತ್ತೇನೆ. ಆದರೆ ಅವರು ಸರಿಯಾದ ಮಾರ್ಗದಲ್ಲಿ ತಮ್ಮ ಕಾರ್ಯಕ್ರಮವನ್ನು ಹಾಕಿಕೊಂಡು ಹೋಗದಿದ್ದರೆ ಅವರು ಕೇವಲ ತಮ್ಮ ಪಕ್ಷಕ್ಕೆ ಪಂಗಡಕ್ಕೆ ಅಷ್ಟೇ ಅಲ್ಲ ಅದರ ಮೂಲಕ ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುತ್ತಾರೆ. ಆದ್ದರಿಂದ ನಮ್ಮ ವಿರೋಧ ಪಕ್ಷದ ನಾಯಕರೂ ಮತ್ತು ಇನ್ನಿತರ ಸ್ನೇಹಿತರಿಗೂ ಕೂಡ ಕೊನೆಯದಾಗಿ ಈ ಸೂಚನೆ ಮಾಡಲಿಕ್ಕೆ ಬಯಸುತ್ತೇನೆ. ಇದು ಜನತೆಯ ಮುಂದೆ ಅಂತಿಮವಾಗಿ ನಿರ್ಧಾರವಾಗಬೇಕಾದ ವಿಚಾರ ಸರ್ಕಾರದ ಮೇಲೆ ವಿಶ್ವಾಸ ಇದೆಯೇ ಇಲ್ಲವೇ ಎಂಬುದು ತಿಳಿಯಬೇಕಾದರೆ 5 ವರ್ಷಕ್ಕೆ ನಾವು ಜನತೆಯ ಮುಂದೆ ಪ್ರತಿ ಸಲವೂ ಹೋಗುತ್ತೇವೆ ನಾವೂ ಹೋಗುತ್ತೇವೆ ಅವರೂ ಹೋಗುತ್ತಾರೆ ಆಗ ಜನತೆ ನಿರ್ಧಾರ ಮಾಡಬೇಕು ಸರ್ಕಾರ ಸರಿಯಾಗಿ ನಡೆಯುತ್ತಿದೆಯೇ ಇಲ್ಲವೇ ಎಂಬುದನ್ನು ಜನತೆ ನಿರ್ಧಾರ ಮಾಡಬೇಕಾದರೆ ಇನ್ನೂ ಮೂರು ವರುಷ ಇದೆ ಆ ಕಾಲಕ್ಕೆ ಅವರು ಯಾವ ರೀತಿ ನಿರ್ಧಾರ ಮಾಡುತ್ತಾರೆ ಆ ರೀತಿ ನಡೆಯೋಣ ಎಂದು ಆಖೈರಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಸಭಾಪತಿಗಳೇ, ಇಲ್ಲಿಯವರೆಗೆ ಆ ಕಡೆ ಪಕದಲ್ಲಿರತಕ್ಕ ಸದಸ್ಯರುಗಳೂ ಮತ್ತು ಕೆಲವು ಅಧಿಕಾರದಲ್ಲಿರತಕ್ಕವರೂ ಮಾತನಾಡುತ್ತ ಏನು ಹೇಳಿದರು ಎಂದರೆ: ವಿರೋಧ ಪಕ್ಷದವರು ಮಾತೆತ್ತಿದರೆ ಇಂಥ ಸಣ್ಣಪುಟ್ಟ ವಿಚಾರಗಳಿಗೆಲ್ಲ ಈ

(ಶ್ರೀ ಬಿ. ಚನ್ನಪ್ಪರೇಗೌಡ)

ಬ್ರಹ್ಮಾಸ್ತ್ರವನ್ನು ಉಪಯೋಗಿಸ ಬಾರದು ಎಂದು ಹೇಳಿದರು. ಶ್ರೀ ಮಾದಯ್ಯಗೌಡರು ಈ ವಿಚಾರವನ್ನು ಒತ್ತಿ ಒತ್ತಿ ಹೇಳಿದ್ದಾರೆ. ನಾವು ಆಡಳಿತ ಪಕ್ಷದವರಿಗೆ ಅವರಲ್ಲಿರತಕ್ಕ ಅನೇಕ ಲೋಪ ದೋಷಗಳನ್ನು ಪದೇ ಪದೇ ಅವರ ಗಮನಕ್ಕೆ ತಂದಿದ್ದಾಯಿತು. ಆದಾಗ್ಯೂ ಅವರ ಆ ಲೋಪ ದೋಷಗಳನ್ನು ಸರಿಪಡಿಸಿ ಕೊಳ್ಳುತ್ತೇವೆಂದು ಎಂದೂ ಹೇಳಲಿಲ್ಲ. ಅವುಗಳನ್ನು ಅವರು ಸರಿಪಡಿಸಿ ಕೊಂಡು ಆಡಳಿತ ನಡೆಸಬೇಕೆಂಬ ಒಂದು ಮನೋಭಾವನೆ ಕೂಡ ಅವರಲ್ಲಿದ್ದ ಹಾಗೆ ಕಂಡುಬರುತ್ತಿಲ್ಲ. ಹೀಗಾದ ಮೇಲೆ ನಾವು ಈ ಬ್ರಹ್ಮಾಸ್ತ್ರವನ್ನು ಪದೇ ಪದೇ ತರಲೇಬೇಕಾಯಿತು. ಇದರಲ್ಲಿ ಆಶ್ಚರ್ಯವೇನಿದೆ? ಈ ಆಡಳಿತ ಪಕ್ಷವೇನಿದೆ ಇದನ್ನು ನಾನು ಕಾಂಗ್ರೆಸ್ ಪಕ್ಷವೆಂದಾಗಲೀ ಅಥವಾ ಗಾಂಧಿ ಅನುಯಾಯಿಗಳೆಂದಾಗಲೀ ಕರೆಯುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ಇವರಲ್ಲಿ ಆ ಗಾಂಧಿಯವರಲ್ಲಿದ್ದಂಥ ತತ್ವಗಳು ಒಂದೂ ಇಲ್ಲ, ಆದುದರಿಂದ ಈ ಪಕ್ಷವನ್ನು ನಾನೀಗ ಅಧಿಕಾರಕ್ಕೆ ಅಂಟಿಕೊಂಡಿರುವ ಒಂದು ಪಕ್ಷ ಎಂದು ಮಾತ್ರ ಕರೆಯುತ್ತೇನೆ. ಈ ದಿನ ಆಡಳಿತದಲ್ಲಿರತಕ್ಕ ಪಕ್ಷ ಏನಾದರೊಂದು ಒಳ್ಳೇ ಕೆಲಸವನ್ನು ಮಾಡಿದ್ದರೆ ಅದು ಅವರ ಕರ್ತವ್ಯವನ್ನು ಪಾಲಿಸಿದಂತೆ ಆಯಿತೇ ವಿನಾ ಅದಕ್ಕಾಗಿ ನಾವು ಅವರನ್ನು ಹೊಗಳಬೇಕಾಗಿಲ್ಲ. ಈ ದಿವಸ ಬೆಳಗಾಂನಿಂದ ಬೆಂಗಳೂರಿಗೆ ಒಂದು ಪ್ರಯಾಣಿಕರ ಬಸ್ಸಿದೆ. ಅದಕ್ಕಾಗಿ ಒಬ್ಬ ಡ್ರೈವರನನ್ನು ನೇಮಕ ಮಾಡಿರುತ್ತಾರೆ. ಆತನು ಪ್ರಯಾಣಿಕರನ್ನು ಬೆಳಗಾಂನಿಂದ ಬೆಂಗಳೂರಿಗೆ ಸುಖವಾಗಿ ಕರೆದುಕೊಂಡು ಬಂದರೆ ಅದು ಆತನ ಕರ್ತವ್ಯವಾಯಿತು. ಆತ ಅಷ್ಟು ಕೆಲಸಮಾಡಿದ್ದಕ್ಕೆ ಬಸ್ಸನ್ನು ಇಳಿದು ಹೋಗತಕ್ಕ ಪ್ರಯಾಣಿಕರಾರೂ ಮಹಾರಾಯ ನೀನು ನಮಗೆಲ್ಲ ಬಹಳ ಉಪಕಾರ ಮಾಡಿದ್ದೀಯೇ, ನಿನಗೆ ನಮ್ಮ ಅನಂತ ನಮಸ್ಕಾರಗಳು ಎಂದು ಎಲ್ಲಿಯಾದರೂ, ಯಾರಾದರೂ ಹೇಳಿಹೋಗಿರತಕ್ಕ ನಿದರ್ಶನಗಳಿವೆಯೇ? ಇಂಥ ಒಂದು ಪದ್ಧತಿ ಎಲ್ಲಿದೆ? ಹೀಗೆ ಈ ದಿವಸ ಆಡಳಿತದ ಜವಾಬ್ದಾರಿ ಹೊತ್ತಿರುವ ಈ ಸರ್ಕಾರ ದೇಶದಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳನ್ನು ನಡೆಸಲೇ ಬೇಕು. ಅದು ಅವರ ಆದ್ಯ ಕರ್ತವ್ಯ. ಅವರು ಹಾಗೆ ಅವರ ಒಂದು ಕರ್ತವ್ಯವನ್ನು ಮಾಡಿದ್ದರೆ ಅದೊಂದು ದೇಶಕ್ಕೆ ಅವರು ಉಪಕಾರ ಮಾಡಿದ್ದಾರೆ ಎಂತ ಹೇಳುವುದಕ್ಕೆ ಅವಕಾಶವೆಲ್ಲಿದೆ? ಆದುದರಿಂದ ಇಲ್ಲಿ ಇವರನ್ನು ಹೊಗಳತಕ್ಕ ಕಾರ್ಯಕ್ಕೆ ಎಳ್ಳಷ್ಟೂ ಅವಕಾಶವಿಲ್ಲ. ಆದರೆ ಇವರು ಎಲ್ಲಿ ತಮ್ಮ ಕರ್ತವ್ಯದಲ್ಲಿ ಎಡವಿದ್ದಾರೆ, ಎಲ್ಲಿ ಕರ್ತವ್ಯ ಲೋಪಮಾಡಿದ್ದಾರೆ, ಎಲ್ಲಿ ಭ್ರಷ್ಟಾಚಾರ ಮಾಡಿದ್ದಾರೆ ಎಂಬುದನ್ನು ಕಂಡು ಹಿಡಿದು ಅಂಥದನ್ನು ನಿರ್ಮೂಲವಾಡಲು ನಾವು ಹೀಗೆ ಟೀಕೆ ಮಾಡಲೇಬೇಕು. ಈ ದಿವಸ ಆಡಳಿತ ನಡೆಸುತ್ತಿರುವ ಪಕ್ಷ ದೇಶದಲ್ಲಿ ಅನೇಕ ಭ್ರಷ್ಟಾಚಾರಗಳನ್ನು ಮಾಡುತ್ತೆಂದು ಹೇಳಿ ಅಬಗ್ಗೆ ಒಂದು ಸಮಿತಿ ನೇಮಕ ಮಾಡುವುದು ಅತ್ಯಗತ್ಯ ಎಂದು ಯಾರು ಹೇಳಿದ್ದಾರೆ? ಆ ಮಾತನ್ನು ಆ ರಾಷ್ಟ್ರದ ಮುಖ್ಯ ನಾಯಕರಾಗಿರುಂಥ ಶ್ರೀ ನೆಹರೂರವರೇ ಹೇಳಿದ್ದಾರೆ. ಕೇಂದ್ರ ಸರ್ಕಾರ ಈ ದಿವಸ ಇಂಥ ಒಂದು ಸಮಿತಿಯನ್ನು ನೇಮಕ ಮಾಡಿದೆ. ಯಾರು ಹೀಗೆ ಈ ದಿವಸ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೋ ಅವರು ಕಾಂಗ್ರೆಸ್ಸಿಗೆ ಮೂಲಭೂತ ಪುರುಷರಾಗಿದ್ದಾರೆ. ಈದಿವಸ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷದಲ್ಲಿ ಅಂಥ ಲೋಪದೋಷಗಳಿರದಿದ್ದರೆ ಅವರೇಕೆ ಹಾಗೆ ಒಂದು ಸಮಿತಿಯನ್ನು ನೇಮಕ ಮಾಡುತ್ತಿದ್ದರು?

ಕಾಂಗ್ರೆಸ್ಸಿನವರಿಗೆ ಖಾದೀ ಎಂಬುದು ಬಹಳ ಪವಿತ್ರವಾದುದು. ಅಂಥ ಮೂಲ ಪವಿತ್ರ ವಸ್ತುವಿನ ವ್ಯವಹಾರನಡೆಸುತ್ತಿರುವ ಖಾದೀ ಭಂಡಾರದಲ್ಲಿ ಈಗ ಐದೂವರೆ ಲಕ್ಷ ರೂಪಾಯಿಗಳು ನಾಪತ್ತೆಯಾಗಿದೆ. ಇದಕ್ಕೆ ಸರಿಯಾದ ಲೆಕ್ಕಗಳಿಲ್ಲ, ಈ ಲೆಕ್ಕಗಳ ಆಡಿಟ್ ಕ್ರಮಬದ್ಧವಾಗಿ ನಡೆದಿರವುದಿಲ್ಲ. ಹೀಗೆ ಇದರ ಬಗ್ಗೆ ಪೂರ ಅವ್ಯವಸ್ಥೆಗಳಾಗಿ ಹಣದ ಲೆಕ್ಕಾಚಾರ ಹೊಲಸಾಗಿದೆ. ಇದಕ್ಕೆಲ್ಲಾ ಯಾರುಜವಾಬ್ದಾರರು? ಇವರು ಸರಿಯಾಗಿ ಲೆಕ್ಕಗಳನ್ನು ಕಾಲಕಾಲಕ್ಕೆ ಸರಿಯಾಗಿ ಏಕೆ ಆಡಿಟ್ ಮಾಡಿಸಲಿಲ್ಲ? ಇಂಥ ಈ ಪವಿತ್ರ ಖಾದೀ ವಸ್ತ್ರಾಲಯದಲ್ಲೇ ಹೀಗೆಲ್ಲ ದುರಾಡಳಿತಗಳು ನಡೆಯುತ್ತಿರುವುದರಿಂದ ದೇಶವರೆಲ್ಲ ಲಂಚರುಷವತ್ತುಗಳ ಹಾವಳಿ ತನ್ಮಯವಾಗಿದೆ. ಈ ದಿವಸ ಈ ಖಾದೀ ಉದ್ಯಮವೆಂಬುದು ಕೇವಲ ಈ ಪಕ್ಷಕ್ಕೆ ಅಂಟಿಕೊಂಡಿರುವ 2-3 ಲಕ್ಷ ಜನರ ಮನಾಫಲಯಾಗಿದೆ. ಇಲ್ಲಿ ಏನೇನು ಅನಾಚಾರಗಳು ನಡೆಯುತ್ತಿವೆ ಎಂಬುದನ್ನು ದೇಶದ ಜನತೆ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದೆ. ಈ ಅಂಶವನ್ನು ಆಡಳಿತ ಪಕ್ಷ ಮರೆಯಬಾರದು. ವರ್ಷಕ್ಕೊಮ್ಮೆ ಪ್ರತಿಯೊಂದು ಶಾಲೆ, ಶಿಶುವಿಹಾರ, ಸೊಸೈಟಿ, ಹೈಸ್ಕೂಲು ಮುನಿಸಿಪಾಲಿಟಿ ಹೀಗೆ ಪ್ರತಿಯೊಂದರ ಲೆಕ್ಕಪತ್ರಗಳು ಆಡಿಟ್ ಆಗುತ್ತಿರುವಾಗ ಅಂಥ ಒಂದು ಪದ್ಧತಿ ಜಾರಿಯಲ್ಲಿರುವಾಗ ಇಂಥ ಒಂದು ಲಕ್ಷಾಂತರ ರೂಪಾಯಿಗಳ ವ್ಯವಹಾರ ನಡೆಸತಕ್ಕ ಖಾದೀ ಭಂಡಾರದ ಲೆಕ್ಕ ಪತ್ರಗಳನ್ನು ಇವರು ಏಕೆ ಆಡಿಟ್ ಮಾಡಿಸಲಿಲ್ಲ? ಈ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸ ಬೇಕಾಗಿರದ್ದುದು ಯಾರ ಕರ್ತವ್ಯ? ಇದರ ಹೊಣೆ ಯಾರ ಮೇಲೆ ಇತ್ತು? 1957ರಿಂದ ಸರಿಯಾಗಿ ಲೆಕ್ಕ ಇಡಲಿಲ್ಲವೆಂದು ಆಕೌಂಟೆಂಟ್ ಜನರಲ್ಲರು ಹೇಳಿದ್ದು ಅದು ಅವರ ತಪ್ಪೇನು? ಇಷ್ಟಾದರೂ ಇವರು ಅದನ್ನು

ಕೊಡಲಿ ಸರಿಪಡಿಸುತ್ತೇವೆಂದು ಏನಾದರೂ ಹೇಳಿಬರೇನು ? ಹೀಗೆ ನಾವು ಪ್ರತಿಯೊಂದು ಬಾಬಿನಲ್ಲೂ ಅಂದರೆ ರಸ್ತೆ ಸಾರಿಗೆ ವೈದ್ಯಬಾಬು, ಪಿ.ಡಬ್ಲ್ಯು.ಡಿ. ಹೀಗೆ ಅನೇಕ ಬಾಬುಗಳಲ್ಲಿ ನಡೆದಿರತಕ್ಕ ಅತ್ಯಾಚಾರ ಅನಾಚಾರಗಳನ್ನು ಹೇಳುತ್ತಲೇ ಬಂದಿದ್ದೇವೆ. ಹಾಗೂ ಒಂದು ವೇಳೆ ವಿರೋಧ ಪಕ್ಷದವರು ಹೇಳುತ್ತಿರುವುದರಲ್ಲಿ ಸೇಕಡ 50ರಷ್ಟು ಉತ್ಪ್ರೇಕ್ಷೆ ಮಾಡಿ ಹೇಳಿದ್ದಾರೆಂತ ಇಟ್ಟುಕೊಂಡರೂ ಇನ್ನುಳಿದ 50 ಪರ್ಸೆಂಟ್ ಲೋಪ ದೋಷಗಳನ್ನಾದರೂ ಇವರು ಸರಿಪಡಿಸುತ್ತೇವೆಂದು ನಮಗೆ ಇಲ್ಲಿಯವರೆಗೂ ಯಾವ ಭರವಸೆಯನ್ನಾಗಲೀ ಆಶ್ವಾಸನವನ್ನಾಗಲೀ ಕೊಟ್ಟಿಲ್ಲ. ಹಾಗಾದರೆ ಈ ಲೋಪದೋಷಗಳು ಎಂದಿಗೆ ನಿವಾರಣೆಯಾಗುವುದು ! ಯಾರು ನಿವಾರಣೆ ಮಾಡುತ್ತಾರೆ? ಈ ದಿವಸ ಪೋಲೀಸ್ ಮತ್ತು ವೈದ್ಯ ಇಲಾಖೆಗಳಲ್ಲಿ ಯಾರು ಲಂಚ ತೆಗೆದು ಕೊಳ್ಳುವುದಿಲ್ಲ ! ಈ ದಿವಸ ಯಾವ ಇಲಾಖೆಯಲ್ಲಿ ಲಂಚವಿಲ್ಲದೆ ಕೆಲಸಗಳಾಗುತ್ತವೆ ? ಬಾಗೆಪಲ್ಲಿ ತಾಲ್ಲೂಕಿಗೆ ಒಂದು ವರ್ಷಕ್ಕೆ 150 ರೂಪಾಯಿನ ಔಷಧಿಗಳನ್ನು ಕಳುಹಿಸಿದ್ದಾರೆ. ಆದರೆ ಈ ದಿವಸ ಸರ್ಕಾರ ಅಲ್ಲಿಟ್ಟಿರತಕ್ಕ ಶಿಬ್ಬಂದಿಗೆ ದಿನ ಒಂದಕ್ಕೆ ಖರ್ಚು ಮಾಡುತ್ತಿರುವ ಹಣ ಎಷ್ಟೆಂದರೆ-ಡಾಕ್ಟರಿಗೆ 10 ರೂ.ಗಳು, ಕಾಂಪೌಂಡರಿಗೆ 5 ರೂ.ಗಳು, ಮಿಡವೈಫಿಗೆ 5 ರೂ.ಗಳು, ಹೀಗೆ ದಿನಕ್ಕೆ 20 ರೂ.ಗಳು ವೆಚ್ಚವಾಗುತ್ತಿದೆ. ಒಂದು ಕಡೆ ರಾಜ್ಯದ ಆಡಳಿತ ಹೀಗೆ ನಡೆಯುತ್ತಿದ್ದರೆ ಇನ್ನೊಂದು ಕಡೆ 390 ಜನ ಡಾಕ್ಟರುಗಳು ಸಾಲದೆ ಇದ್ದಾರೆಂದು ಬೇರೆ ಸರ್ಕಾರದವರು ಹೇಳಿದ್ದಾರೆ. ಅಂದರೆ ಅಲ್ಲಿಗೆ 390 ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ ಎಂದು ಹೇಳಿದಹಾಗಾಯಿತು. ಹಾಗೆ 390 ಆಸ್ಪತ್ರೆಗಳಲ್ಲಿ ಡಾಕ್ಟರುಗಳೇ ಇಲ್ಲ ಎಂದಮೇಲೆ ಆ ಆಸ್ಪತ್ರೆಗಳಾದರೂ ಏತಕ್ಕಿರಬೇಕು ? ಜನರಿಗೆ ಉಪಕಾರ ಮಾಡುತ್ತೇವೆ ಎಂಬ ಸೋಗಿನಲ್ಲಿ ಸರ್ಕಾರಿ ನೌಕರರ ಜೇಬು ಭರ್ತಿಯಾಗುತ್ತಿದೆಯೇ ವಿನಾ ದೇಶಕ್ಕೆ ಈ ಸರ್ಕಾರದಿಂದ ಏನೇನೂ ಪ್ರಯೋಜನವಾಗುತ್ತಿಲ್ಲ. ಜನರಿಗೆ ಉಪಕಾರ ಮಾಡುವಂಥ ಒಂದು ಶಕ್ತಿ ಈ ಕಾಂಗ್ರೆಸ್ ಸರ್ಕಾರಕಿಲ್ಲ ಎಂಬುದು ಜನಜನಿತವಾದ ಮಾತಾಗಿದೆ. ಈ ದಿವಸ ಸರ್ಕಾರದವರು ಪ್ರಶ್ನೋತ್ತರಗಳ ಕಾಲದಲ್ಲಿ ಕೊಡತಕ್ಕ ಅವರ ಉತ್ತರಗಳು ಸರಿಯಾದುವುಗಳೇ, ನ್ಯಾಯವಾದವುಗಳೇ ಎಂಬುದನ್ನು ಅವರೇ ಅವರ ಹೃದಯವನ್ನು ಪರೀಕ್ಷಿಸಿಕೊಳ್ಳಬೇಕು. ಜನರನ್ನು ಒಂದು ಉತ್ತಮ ಮಟ್ಟಕ್ಕೆತ್ತುವ ಚೈತನ್ಯ ಅವರಿಗಿದೆಯೇ ಎಂಬುದನ್ನು ಅವರೇ ಅವರ ಆತ್ಮಶೋಧನೆ ಮಾಡಿಕೊಂಡರೆ ಖಂಡಿತ ಅವರಲ್ಲಿ ಅಂಥ ಒಂದು ಚೈತನ್ಯವಿಲ್ಲ ಎಂಬುದು ಅವರಿಗೇ ವೇದ್ಯವಾಗುತ್ತದೆ. ಈ ದಿವಸ ಅದೇ ಕಾಂಗ್ರೆಸ್ ಪಕ್ಷಕ್ಕೆ ಸೇರಿರತಕ್ಕ ಶ್ರೀ ಎಚ್. ಸಿದ್ದವೀರಪ್ಪನವರು ಒಂದು ಕಡೆ ಮತ್ತು ಶ್ರೀ ಎಚ್. ಎಂ. ಚನ್ನಬಸಪ್ಪನವರು ಒದು ಕಡೆ ಇವರ ಅನೀತಿಯ ಬಗ್ಗೆ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಈ ಇಬ್ಬರೂ ಹಿಂದೆ ಇಲ್ಲೇ ಮಂತ್ರಿಗಳಾಗಿದ್ದವರು. ಈ ಹಿಂದೆ ಮುಖ್ಯ ಮಂತ್ರಿಗಳಾಗಿದ್ದವರು ಶ್ರೀ ಎಸ್. ನಿಜಲಿಂಗಪ್ಪನವರನ್ನು ಸೋಲಿಸಬೇಕೆಂದು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿದರು ಎಂದು.........

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಇದು ಬಹಳ ಸುಳ್ಳು ಮಾತು.

ಶ್ರೀ ಬಿ. ಚನ್ನಬೈರೇಗೌಡ.—ಕಾಂಗ್ರೆಸ್ಸಿನವರು ದೇಶದ ಬಗ್ಗೆ ಎಷ್ಟು ಉದಾಸೀನರಾಗಿದ್ದಾರೆ ಎಂಬುದನ್ನು ಸಮರ್ಥನೆ ಮಾಡಲು ನಾನೀಗ ಈ ವಿಚಾರವನ್ನು ಹೇಳಬೇಕಾಯಿತು ಅಷ್ಟೆ.

Mr. SPEAKER.—We have got $2\frac{1}{2}$ hours. By that time the debate as well the reply should be over and it will be necessary to put it to the vote of the House unless it is withdrawn. I would like to know what time is required for reply, because almost every subject is covered in the debate.

Sri S. NIJALINGAPPA.—I may take about an hour.

Sri S. R. KANTHI (Minister for Education).—I require about 20 minutes.

Sri M. V. RAMA RAO (Minister for Law).—I may be given 15 or 20 minutes.

Sri S. NIJALINGAPPA.—In that case I will just make my portion less; I will take half an hour.

Mr. SPEAKER.—Approximately $1\frac{1}{2}$ hours. I am mentioning particularly for the whip of the Party so that he may not send any other names, making allowance of the time.

ಶ್ರೀ ಬಿ. ಚನ್ನಬೈರೇಗೌಡ.—ಈ ಹಿಂದೆ ಒಬ್ಬ ಮಾನ್ಯ ಸದಸ್ಯರು ಮಾತನಾಡುತ್ತ ಹರಿಜನರನ್ನು ಪಶುಗಳಂತೆ ಕಾಂಗ್ರೆಸ್ ಪಕ್ಷ ತನ್ನ ಒಂದು ಅನುಕೂಲಕ್ಕಾಗಿ ಸಾಕಿಕೊಂಡಿದೆ ಎಂದು ಹೇಳಿದರು. ಅವರನ್ನು ಕೇವಲ ಒಂದು ಓಟಿನ ಬಲಕ್ಕಾಗಿಟ್ಟು ಕೊಂಡಿದ್ದಾರೆಂದೂ, ಅದಕ್ಕಾಗಿ ಅವರಲ್ಲಿ ಕೆಲವರಿಗೆ ಆ. ಪಿ. ಎಸ್. ಸಿ. ಎಲೆಕ್ಟ್ರಿಸಿಟಿ ಬೋರ್ಡು, ಹೀಗೆ ನಾಲ್ಕಾರು ಉದ್ಯೋಗಗಳನ್ನು ಕೊಟ್ಟು ಅವರನ್ನಿಟ್ಟುಕೊಂಡಿದ್ದಾರೆಂದು ಅವರು ಹೇಳಿದರು. ಹೀಗೆ ಕೇವಲ 4—6 ನೌಕರಿಗಳನ್ನು ಕೊಟ್ಟು 20 ಲಕ್ಷಜನರಿಂದ ಓಟನ್ನು ಗಳಿಸುತ್ತಿದ್ದಾರೆ. ಇದೂ ಒಂದು ರೀತಿಯ ಪ್ರಜಾಪ್ರಭುತ್ವವೇ. ಈ ಹಿಂದೆ ಮಾತನಾಡಿದ ಕೆಲವು ಕಾಂಗ್ರೆಸ್ ಸದಸ್ಯರು ದಿವಂಗತ ಡಾ. ಸರ್. ಎಂ. ವಿಶ್ವೇಶ್ವರಯ್ಯನವರ ಆಡಳಿತವನ್ನು ಪ್ರಸ್ತಾಪಿಸುತ್ತಾ ಅವರು ಹೊರಗಡೆ ಎಲ್ಲಿಯಾದರೂ ಹೊರಟರೆ ಅವರ ಸ್ವಂತಕ್ಕೆ ಸ್ವಂತಕಾರನ್ನೇ ಉಪಯೋಗಿಸುತ್ತಿದ್ದರೆಂದೂ ಸ್ವಂತ ಬರವಣಿಗೆಗೆ ಅವರು ತಮ್ಮ ಸ್ವಂತ ಮಸಿಯನ್ನು ಉಪಯೋಗಿಸುತ್ತಿದ್ದರೆಂದೂ ಹೀಗೆ ಏನೇನೋ ವಿಚಾರಗಳನ್ನು ಹೇಳಿದರು. ಈ ವಿಚಾರಗಳನ್ನು ಬರೆದು ಪ್ರಿಂಟ್ ಮಾಡಿಸಿದ ಪುಸ್ತಕಗಳನ್ನೂ ಸಹಾ ಹಂಚಿಸಿದ್ದಾರೆ. ಈ ದಿವಸ ಈ ಮಂತ್ರಿಮಂಡಲದಲ್ಲಿ ಅಂಥವರು ಎಷ್ಟು ಜನಮಂತ್ರಿಗಳಿದ್ದಾರೆ? ಈ ದಿವಸ ಈ ಮಂತ್ರಿಗಳಿಗೆ ನಮ್ಮ ಗೆಸ್ಟ್ ಹೌಸಿನಿಂದ ಕೊಟ್ಟಿರತಕ್ಕ ಕಾರುಗಳೇನಿವೆ ಅವು ತಿರುಗಾಡದ ಓಣಿಗಳಿಲ್ಲ, ಅವು ನಿಲ್ಲದೆ ಇದ್ದ ಹೋಟಲುಗಳಿಲ್ಲ, ಅವು ನಿಲ್ಲದಿದ್ದ ಸಿನೀಮಾ ಮಂದಿರಗಳಿಲ್ಲ, ಅವುಗಳಲ್ಲಿ ಪ್ರಯಾಣಮಾಡದ ಇರತಕ್ಕ ಜನರಿಲ್ಲ. ಇದನ್ನು ನಾನು ಕಣ್ಣಾರೆ ನೋಡಿದ್ದೇನೆ. ಈ ಸರ್ಕಾರ ಈ ಹೊತ್ತು ಇಂಥ ಅನ್ಯಾಯಗಳನ್ನು ನಡೆಸುತ್ತಿದೆ. ಹೀಗೆ ದೇಶಕ್ಕೆ ಅನ್ಯಾಯಮಾಡುತ್ತಿರುವ ಸರ್ಕಾರ ಬೇಗ ರಾಜೀನಾಮೆ ಕೊಟ್ಟು ಹೋಗಬೇಕೆಂದು ಹೇಳುತ್ತೇನೆ.

ಅಧಿಕಾರಿಗಳಿಗೆ 3,000ದಷ್ಟು ಸಂಬಳ ಎಂದು ಕೊಡುತ್ತಿದ್ದಾರೆ. ಅವರಿಗೆ ತಮ್ಮ ಕೆಲಸದ ರೆಸ್ಪಾನ್ಸಿಬಿಲಿಟಿ ಎನ್ನುವುದನ್ನು ತಿಳಿದುಕೊಂಡು ಮಾಡುವಾಗ ಪದೆಪದೇ ಅವರ ಅಧಿಕಾರದಲ್ಲಿ ಏಕೆ ಕೈಹಾಕಬೇಕು? ಆಡಳಿತದ ವ್ಯವಸ್ಥೆಯಲ್ಲಿ ಹೀಗೆ ಮಂತ್ರಿಗಳು ಅಧಿಕಾರಿಗಳ ಟ್ರಾನ್ಸ್‌ಫರಿನಲ್ಲಿ ಕೈ ಹಾಕುತ್ತಿರುವುದರಿಂದ ದೇಶದ ಹಣ ಹೆಚ್ಚಾಗಿ ಪೋಲಾಗುತ್ತಿದೆ. ಈ ರೀತಿಯಾದ ಟ್ರಾನ್ಸ್‌ಫರುಗಳಿಗಾಗಿ ಸುಮಾರು ಮೂರು ಕೋಟಿಯಷ್ಟು ಆಫೀಸರುಗಳ ಟಿ.ಎ., ಡಿ.ಎ. ಗಾಗಿಯೇ ಖರ್ಚು ಎಂದು ಬರುತ್ತಿದೆ. ಹೀಗೆ ಅಧಿಕಾರಿಗಳನ್ನೇಕೆ ಈರೀತಿ ಟ್ರಾನ್ಸ್‌ಫರು ಮಾಡಬೇಕು, ಇದರಿಂದ ಸರಕಾರಕ್ಕೆ ಖರ್ಚನ್ನೇಕೆ ಹೆಚ್ಚು ಮಾಡಬೇಕು, ಈರೀತಿಯಾಗಿ ನಾಲ್ಕಾರು ನಿದರ್ಶನಗಳನ್ನು ಕೊಡಬಹುದು.

ನಮ್ಮ ಪೋಲೀಸು ಮಂತ್ರಿಗಳು ಇಪ್ಪತ್ತೇಳು ವರ್ಷಗಳಿಂದಲೂ ಒಂದೇ ಜಾಗದಲ್ಲಿರುವ ಆಫೀಸರುಗಳಿದ್ದಾರೆ ಎಂದು ಹೇಳಿ ಇದಕ್ಕೆ ಕಾರಣ ಪಬ್ಲಿಕ್ ಇಂಟೆರೆಸ್ಟು ಎಂದು ಹೇಳಿದರು. ಕೆಲವು ಕಡೆಗಳಲ್ಲಿ ಆರುತಿಂಗಳಿಗೊಂದಾವರ್ತಿ ಟ್ರಾನ್ಸ್‌ಫರು ಎಂದು ಮಾಡುವುದರಿಂದ ಸರಕಾರದ ಹಣ ಹೆಚ್ಚಾಗಿ ವೆಚ್ಚವಾಗುವುದಿಲ್ಲವೇ? ಇದೆಲ್ಲಾ ಸರಕಾರದಮೇಲೆ ಫ್ರೇಂ ಮಾಡುವ ಚಾರ್ಜುಗಳು ಆಗುವುದಿಲ್ಲವೇ? ವಿರೋಧಪಕ್ಷದವರು ಹೇಳಿದರೆ ಏನೂ ಆಗುವುದಿಲ್ಲ. ಕಾಂಗ್ರೆಸ್ ಪಕ್ಷದ ಮಂತ್ರಿಗಳು ಟೂರು ಬಂದಾಗ ಅವರಿಗೆ ಸರಿಯಾಗಿ ಆಹಾರ ಕೊಡಲಿಲ್ಲ, ಕೋಳಿಸಾರಿ ಕುಯ್ದು ಕೊಡಲಿಲ್ಲ ಎಂದು ಒಂದು ಅಂತಹ ಅಧಿಕಾರಿಗಳನ್ನು ಟ್ರಾನ್ಸ್‌ಫರು ಮಾಡಿ ಎಂದು ಹೇಳಿದರೆ ಅವರನ್ನು ವರ್ಗ ಮಾಡುತ್ತಾರೆ. ಹೀಗೆ ಮಂತ್ರಿಗಳ ಬಾಲಬಡುಕರಾಗಿರುವವರಿಗೆ ಎಲ್ಲ ಅನುಕೂಲಗಳೂ ಸಿಗುತ್ತಿವೆ. ಹೀಗೆ ಯಾವ ವಿಧವಾದ ಶಿಸ್ತು ಅಥವಾ ವ್ಯವಸ್ಥೆಯೇ ಅಧಿಕಾರಿಗಳಲ್ಲಿಲ್ಲ. ಅಲ್ಲದೆ ನಾಯಕರೇ ಹೀಗಿರುವಾಗ ನಮ್ಮನ್ನು ಯಾರು ವರ್ಗಮಾಡಲು ಸಾಧ್ಯ ಎನ್ನುವ ಭಾವನೆಯೂ ಅಧಿಕಾರಿಗಳಲ್ಲಿ ಬರುತ್ತಿದೆ. ಸರಕಾರದಲ್ಲಿ ಅದಕ್ಷತೆ ಮತ್ತು ಅನ್ಯಾಯಗಳಿಂದ ತುಂಬಿರುವಾಗ ಅವರಿಂದ ದಕ್ಷತೆ ಎಲ್ಲಿಂದ ಬರಬೇಕು. 1946ನೇ ಇಸವಿಯಲ್ಲಿ ಪಾನ ನಿರೋಧದ ಬಗ್ಗೆ ಹಿಂದೆ ಭಾಷಣ ಮಾಡಿದ್ದನ್ನು ಇಲ್ಲಿ ಹೇಳಬಯಸುತ್ತೇನೆ. ಅವರು ಆಗ ಏನು ಹೇಳಿದರೆಂದರೆ......

(Interruption).

ಪಾನನಿರೋಧದಬಗ್ಗೆ ಭಾಷಣಮಾಡಿ ಆಗಿನ ಸರಕಾರದಮೇಲೆ ಟೀಕೆ ಮಾಡಿದ್ದಾರೆ. ಇವೊತ್ತು ಹೇಗಿದೆ ಎಂದರೆ, ಕೋಲಾರದಲ್ಲಿ ಇಲ್ಲದಿದ್ದರೆ ತುಮಕೂರಿಗೆ ಹೋಗಿ ಕುಡಿಯುವುದು ಹೀಗೆ ಈ ದೇಶದಲ್ಲಿ ಪಾನನಿರೋಧವನ್ನು ತಂದು ಯಾವ ಕಾರ್ಯಕ್ರಮವನ್ನೂ ಮಾಡದೇ ಇದನ್ನು ಯಶಸ್ವಿಯಾಗಿ ಮಾಡಲು ಹೇಗೆ ಸಾಧ್ಯ? ಈತರಹ ಪಾನನಿರೋಧವನ್ನು ತರುವುದಕ್ಕಿಂತ ತೆಗೆಯುವುದು ಒಳ್ಳೆಯದೇ ಎಂದು ಹೇಳಿದರೆ ತಪ್ಪಾಗಲಾರದು, ಹೀಗೆ ಮಧ್ಯಂತರವಾಗಿ ಇದನ್ನು ತರುವುದರಿಂದ ಅನ್ಯಾಯಗಳು ಹೆಚ್ಚಾಗಿ ಲಂಚಗುಳಿತನಕ್ಕೆ ಅವಕಾಶವಾಗುತ್ತದೆ ಜನರು ಆರೋಗ್ಯವನ್ನು ಹಾಳುಮಾಡಿಕೊಂಡು ದುಡ್ಡನ್ನೂ ಹಾಳುಮಾಡುತ್ತಾರೆ.

ಇನ್ನು ವಿದ್ಯಾ ಇಲಾಖೆಯ ವಿಚಾರ ತೆಗೆದುಕೊಂಡರೆ ಕಂಪಲ್ಸರಿ ಸ್ಕೀಂ ಎಂದು ದೊಡ್ಡದಾಗಿ ಪ್ರಚಾರಮಾಡಿ ತಂದರು ಅವರೇನು ಮಾಡಿದ್ದಾರೆ? ಸ್ಕೂಲು ಕಟ್ಟಡಗಳನ್ನು ಕಟ್ಟಿದ್ದಾರೆಯಲ್ಲ ಒಬ್ಬೊಬ್ಬರು ಮೇಷ್ಟ್ರರಿಗೆ ನಾಲ್ಕು ನಾಲ್ಕು ಕ್ಲಾಸುಗಳೆಂದು ಹಂಚಿ ಪಾಠ ಮಾಡಬೇಕೆಂದು ಹೇಳಿದರೆ ಅದರಿಂದ ಎಷ್ಟುಮಟ್ಟಿಗೆ ಮಕ್ಕಳು ಪಾಠ ಕಲಿತುಕೊಳ್ಳಬಹುದು. ಹಳ್ಳಿಗಾಡಿನ ಜನರ ಮಕ್ಕಳಿಗೆ ವಿದ್ಯೆ ತಾನೇ ಹೇಗೆ ಬರಬೇಕು. ಏನೋ ಪಟ್ಟಣಗಳಲ್ಲಿರುವ I.A.S. ಅಧಿಕಾರಿಗಳು, ಮಂತ್ರಿಗಳ ಮಕ್ಕಳಿಗೆ ಕಾನ್‌ವೆಂಟಿನಲ್ಲಿ ಸೇರಿಸಿ ಕಾಲೇಜಿಗೆ ಸೇರಿಸುವವರೆಗೂ ಅನುಕೂಲಗಳು ಸಿಗುತ್ತವೆ. ಆದರೆ ಬಡಜನರ ಮಕ್ಕಳಿಗೆ ಇಷ್ಟುಮಟ್ಟಿನ ವಿದ್ಯೆಯನ್ನು ಕೊಡಲು ಶಕ್ತಿ ಇರುತ್ತದೆಯೇ? ಇದನ್ನೇನಾದರೂ ಸರಕಾರದವರು ಆಲೋಚನೆ ಮಾಡಿದ್ದಾರೆಯೇ? ಎಲ್ಲ ಕಡೆಗೂ ಸ್ಕೂಲುಗಳನ್ನು ಕೊಡಲಾಗಿದೆ ಎಂದು ಹೇಳುತ್ತಾರೆ. ಹೀಗೆ ಕೊಟ್ಟಿರುವ ಸ್ಕೂಲುಗಳಲ್ಲಿ ನೂರರಲ್ಲಿ, 50 ಸ್ಕೂಲುಗಳಲ್ಲಿ ಮೈಸೂರು ದೇಶದ ಭೂಪಟ ಎನ್ನುವುದು ಇಲ್ಲವೇ ಇಲ್ಲ. ಒಂದೊಂದು ಸ್ಕೂಲಿಗೆ ಒಬ್ಬೊಬ್ಬರೇ ಮೇಷ್ಟ್ರು ಎಂದು ಮಾಡಿ ಅಲ್ಲಿ 120 ಜನ ಮಕ್ಕಳಿದ್ದರೆ ಅವರೇ ಎಲ್ಲ ವರ್ಗಗಳಲ್ಲಿಯೂ ಪಾಠ ಹೇಳಬೇಕು. ಹೀಗೆ ಒಬ್ಬರೇ ಮಾಸ್ಟರಿರುವ ಹತ್ತಾರು ಸ್ಕೂಲುಗಳಿರುವುದನ್ನು ನಾವು ನೋಡಬಹುದು. ನಮ್ಮ ದೇಶದ ಹುಡುಗರಿಗಾಗಿ ಸಹಾಯಮಾಡಲು ಕೇರ್ ಸಂಸ್ಥೆಯವರು ಹಾಲಿನ ಪುಡಿ ಇತ್ಯಾದಿಗಳನ್ನೂ ಹಂಚುವಾಗ ಅಮೆರಿಕಾದ ಅಂಬಾಸಿಡರ್‌ರವರು ಬಂದು ಇಲ್ಲಿ ಓಪನ್ ಮಾಡಿದರು, ಇಂತಹ ಕೇರ್ ಸಂಸ್ಥೆಯಿಂದ ಬಂದಂತಹ ಸುಮಾರು 65,000 ಟನ್‌ಗಳಷ್ಟು ಹಾಲಿನ ಪುಡಿಯನ್ನು ಒಬ್ಬರು ಕಾಂಗ್ರೆಸ್ಸಿನವರು ದುರುಪಯೋಗಮಾಡಿದ್ದರು ಎಂದು ಪೋಲೀಸಿನವರು ಈಗ ಅವರನ್ನು ಹಿಡಿದು ತಕ್ಕ ಕಾರ್ಯಕ್ರಮ ತಗೆದುಕೊಳ್ಳುತ್ತಿದ್ದಾರೆಂದು ಈಚೆಗೆ ವರ್ತಮಾನ ಬಂದಿದೆ ಇದು ಅವರಿಗೆ ಹೇಗೆ ಸಿಕ್ಕಿತು! ಇಂದು ಸರಕಾರದ ವಿದ್ಯಾ ಇಲಾಖೆಯಲ್ಲಿ ಎಷ್ಟುಮಟ್ಟಿಗೆ ದಕ್ಷತೆ ಇದೆ; ಎಷ್ಟರಮಟ್ಟಿಗೆ ಆಡಳಿತ ನಡೆಸುವುದರಲ್ಲಿ ಸಮರ್ಥರು ಎನ್ನುವುದು ಬಹು ಆಶ್ಚರ್ಯದ ಸಂಗತಿ, ಇದನ್ನು ಕೂಲಂಕಷವಾಗಿ ಏನೇನು ನಡೆದಿದೆ, ಯಾರಮೇಲೆ ತಪ್ಪು ಆಗಿದೆ, ಇದನ್ನು ಹೇಗೆ ಬಗೆಹರಿಸಬೇಕು ಎಂಬುದರಬಗ್ಗೆ ಯಾರಾದರೂ ಪರೀಕ್ಷೆ ಮಾಡಿದ್ದಾರೆಯೊ ಹೀಗೆ ವಿದ್ಯಾ ಇಲಾಖೆಯಲ್ಲಿ ಅನೇಕ ಅಕ್ರಮಗಳು ನಡೆಯುತ್ತಿರುವುದನ್ನು ಸರಕಾರ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಶಿರಾ).—ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಈ ಸಭೆಯ ಎರಡೂ ಪಕ್ಕದ ಜನ ಈ ಸಭೆಯ ಮುಂದೆ ಇರತಕ್ಕ ಈ ಮಂತ್ರಿ ಮಂಡಲದಮೇಲೆ ಇರತಕ್ಕ ಅವಿಶ್ವಾಸ ನಿರ್ಣಯದಮೇಲೆ ಚರ್ಚೆ ಮಾಡಿದ್ದಾರೆ. ಚರ್ಚೆ ಮಾಡಿ ಈ ಸರಕಾರ ಕೂಡಲೇ ರಾಜೀನಾಮೆ ಕೊಡಬೇಕೆಂದು ಕೆಲವರು, ಸರಕಾರ ಒಳ್ಳೆಯ ಕಾರ್ಯವನ್ನು ಸಾಧನೆ ಮಾಡಿಬಿಟ್ಟಿದೆ, ಈ ಸರಕಾರದ ಘನತೆ ಮತ್ತು ಮಾಡತಕ್ಕ ಕೆಲಸಗಳನ್ನು ನೋಡಿಯೂ ಇನ್ನೊತ್ತು ಜನತೆಯ ಅಭಿಮಾನವನ್ನು ತೋರಿಸುವುದಕ್ಕೋಸ್ಕರ ಕ್ಷುಲ್ಲಕ ಕಾರಣಗಳಿಗೋಸ್ಕರ ಈ ಸಭೆಯ ಮುಂದೆ ಬಂದಿರುವ ನಿರ್ಣಯವನ್ನು ತಿರಸ್ಕಾರ ಮಾಡುತ್ತಾರೆಂದು ಕೆಲವರು ಮಾತನಾಡಿದ್ದಾರೆ, ಕೆಲವರು ಪರಿಷ್ಕಾರವಾಗಿ ಘನತೆ, ಗಂಭೀರ, ಮಾನ ಮರ್ಯಾದೆ ಮತ್ತು ತೂಕ ಒಂದೂ ಇಲ್ಲದಂತೆ ಹೇಳಿದ್ದಾರೆ, ಅವರ ಕಾರ್ಯ ಸಾಧನೆಯಲ್ಲಿ ಈ ಸಭೆಯಲ್ಲಿ ಉಪಯೋಗಿಸದೇ ಇರತಕ್ಕಂತಹ ಪದವನ್ನು ಅವರು ಇವೊತ್ತಿನ ದಿನ ತಮ್ಮ ಕಟ್ಟಿನಿಂದ ಬಿಡೋಣ ಎಂದು ಅವರು ಪ್ರಯೋಗಿಸಿದ್ದಾರೆ. ಆದರೆ ಇಲ್ಲಿ ಒಂದು ವಿಷಯವನ್ನು ಮಾತ್ರ ನಾನು ಖಚಿತಪಡಿಸಬೇಕು ಎಂದು ನಿಂತಿದ್ದೇನೆ. ಇಲ್ಲಿ ಮಾತನಾಡಿದಂತಹ ಇಬ್ಬರು ಮಂತ್ರಿಗಳು ಮತ್ತು ಇಬ್ಬರು ಹೆಣ್ಣುಮಕ್ಕಳು, ಮಹಿಳಾ ಸದಸ್ಯರಾದವರು ಏನು ಹೇಳಿದರು ಎಂದರೆ ಇದು ಸುಮ್ಮನೆ ಚಪಲ ಎಂದರೆ ಚಾಪಲ್ಯಕ್ಕೋಸ್ಕರ ಇಂತಹ ನಿರ್ಣಯವನ್ನು ತಂದಿದ್ದಾರೆ ಮತ್ತು ಇಂತಹ ಬ್ರಹ್ಮಾಸ್ತ್ರವನ್ನು ತರುವುದು ತಪ್ಪು ಮತ್ತು ಇದನ್ನು ತಂದು ಇಲ್ಲಿ ಕಾಲವನ್ನು ಏಕೆ ಕಳೆಯಬೇಕಿತ್ತು ಎಂದು, ಕೆಲವರು ಸಮಯ ಸನ್ನಿವೇಶಗಳಿಗೆ ಅರಿತು ಕೆಲಸ ಮಾಡಬೇಕಾಗಿತ್ತು ಎಂದು ಹೇಳಿದ್ದಾರೆ. ತಾವು ಈ ನಿರ್ಣಯ ಚರ್ಚೆಗೆ ಬರುವುದಕ್ಕೆ ಮುಂಚೆ ಎರಡು ಮುತ್ತಿನಂತಹ ಆ ದೇಶಗಳನ್ನು ಕೊಟ್ಟಿರಿ. ಆಡಳಿತ ಮಾಡತಕ್ಕವರು ಆ ಪಕ್ಷದಮೇಲೆ ಟೀಕೆ ಮಾಡಕೂಡದು, ಆಡಳಿತ ಮಾಡತಕ್ಕವರು ನೀವು ಮಾಡಿರತಕ್ಕ ಕೆಲಸ ಸರಿಯಲ್ಲ ಎಂದು ಹೇಳುವುದು ಪ್ರತಿ ಪಕ್ಷಕ್ಕೆ ಸೇರಿದ್ದು. ಪ್ರತಿ ಪಕ್ಷದವರು ನೀವು ಅನುಸರಿಸುತ್ತಿರುವುದು ಸರಿಯಲ್ಲ ಇದನ್ನು ಸರಿ ಮಾಡಬೇಕು ಎಂದು ಹೇಳಿದರೂ ಅಂತಹ ದೂರುಗಳು ಬರುತ್ತಲೇ ಇರುತ್ತವೆ ಎಂದು ಹೇಳುತ್ತಾರೆ. ಪ್ರಜಾಪ್ರಭುತ್ವದಲ್ಲಿ ನಾವು ಡೆಮಾಕ್ರಸಿ ಪಾರ್ಲಿಮೆಂಟಿನಲ್ಲಿ ಪ್ರಭುತ್ವವನ್ನು ನಡೆಸಿಕೊಂಡು ಹೋಗುತ್ತಿದ್ದೇವೆ ಈ ಕಡೆಯಿಂದ ಸುಗಮವಾದ ದಡ ಸಿಗುತ್ತದೆ ಎನ್ನುವ ಮಾತುಗಳನ್ನು ಹೇಳಿ ಭುಜ ತಟ್ಟಿಕೊಂಡು ಹೊರಗೆ ಹೋಗಿ ಚುನಾವಣೆಯನ್ನು ನಡೆಸಿ ನೋಡೋಣ ಎಂದು ಹೇಳಿದ ದೀರ್ಘವಾದ ಭಾಷಣಗಳನ್ನು ಕೇಳಿ ನನಗಂತೂ ಆಶ್ಚರ್ಯವಾಯಿತು.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಸ್ವಾಮಿ, ಒಂದು ಹೊಸ ಶಬ್ದ ಇಲ್ಲ, ನಮ್ಮ ಮೇಲೆ ಒಂದು ಚಕಾರ ಹೇಳುವುದಕ್ಕೆ ಇವರಿಗೆ ಶಕ್ತಿ ಇಲ್ಲ, ಇವರಿಗೆ ಮಾತನಾಡುವುದಕ್ಕೇ ಯೋಗ್ಯತೆ ಇಲ್ಲ, ಹಾಗೆ ಹೀಗೆ ಅಂತ ಹೇಳಿದರು. ನಿಮ್ಮ ಕಿವಿಯಲ್ಲಿ ಯಾವ ಒಂದು ಹೊಸ ಶಬ್ದ ಹೋಗುತ್ತದೆಂದು ಹೇಳಿ ಕೊಡುತ್ತೀರಾ? ಅದು ಯಾವ ಪದ ಎಂದು ಹೇಳುತ್ತೀರಾ? ನಾವು ಎಷ್ಟೋ ರಚನಾತ್ಮಕ ತಿದ್ದುಪಡಿಗಳನ್ನು ತಂದಿದ್ದೇವೆ.

ಶ್ರೀ ಎ. ಪಿ. ಅಪ್ಪಣ್ಣ (ವಿರಾಜಪೇಟೆ).—ವಿರೋಧ ಪಕ್ಷದ ತಿದ್ದುಪಡಿಯನ್ನು ಒಪ್ಪಿಕೊಂಡಿಲ್ಲವೇ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನ್ನ ಸ್ನೇಹಿತರಾದ ಅಪ್ಪಣ್ಣನವರೇ, ಈವಾಗ ಅಪ್ರಿಯವಾಗಿ ಮಾತನಾಡಬೇಕೆಂದಿಲ್ಲ. ನನಗೆ ಆಕಡೆಯೂ ಬೇಕಾದ ಸ್ನೇಹಿತರಿದ್ದಾರೆ; ಮಂತ್ರಿ ಮಂಡಲದಲ್ಲಿಯೂ ಬೇಕಾದಂಥ ಸ್ನೇಹಿತರಿದ್ದಾರೆ. ಆದರೆ ಇವತ್ತು ಇರುವ ಕಹಿಯಾದ ಪ್ರಸಂಗವನ್ನು ಹಾದುಹೋಗಬೇಕಾದರೆ ನಮ್ಮ ಮುಂದಿರತಕ್ಕ ನೇರವಾದ ಹಾದಿ ಯಾವುದು ಎಂದು ಆಳವಾಗಿ ಯೋಚನೆ ಮಾಡಬೇಕಾಗಿದೆ. ನೀವು ತಪ್ಪು ಮಾಡಿದ್ದರೆ, ಅಚಾತುರ್ಯದಿಂದ ತಪ್ಪಾಗಿದೆ, ಒಪ್ಪಿಕೊಳ್ಳುತ್ತೇವೆ, ಅದನ್ನು ತಿದ್ದಿಕೊಳುತ್ತೇವೆಂದು ಹೇಳುವ ಏನೋ ವೈಶಾಲ್ಯ ನಿಮಗಿರಬೇಕು. ನೀವು ಒಳ್ಳೆಯದನ್ನು ಮಾಡಿದರೆ, ಶಹಭಾಸ್ ಎಂದು ಹೇಳುವ ಉದಾರ ಮನೋಭಾವ ನಮಗೂ ಇರಬೇಕು. ನಿಮ್ಮ ತಪ್ಪನ್ನು ತೋರಿಸುವಾಗ ಏಕೆ ಕೋಪೋದ್ರೇಕವಾಗುತ್ತದೋ ನನಗೆ ಅರ್ಥವಾಗುತ್ತಿಲ್ಲ. ಒಂದು ಹೊಸ ಶಬ್ದ ನಮ್ಮ ಕಡೆ ಚರ್ಚೆಯಲ್ಲಿಲ್ಲವೆಂದು ಅವರು ಅಪ್ಪಣೆ ಕೊಡಿಸಿದರು. 1962ರಿಂದ 1963ರ ಜೂನ್‌ವರೆಗೆ ವಿದ್ಯಾ ಇಲಾಖೆಯಲ್ಲಿ ಆದ ಅನ್ಯಾಯ, ಅತ್ಯಾಚಾರಗಳನ್ನು ಒಂದೊಂದನ್ನೂ ಸ್ವಲ್ಪ ತೆಗೆದುಹಾಕಿ ನೋಡಿದರೆ, ದೇಶದಲ್ಲಿ ನಾಗರಿಕರಾದಂಥವರು ಯಾರಾದರೂ ಇರಬಹುದೇ? ಇಲ್ಲಿ ನಾಗರಿಕರಿಗೆ ಸಲ್ಲಬೇಕಾದಂಥ ಸನ್ಮಾನಗಳು ಸಲ್ಲುತ್ತಿವೆಯೋ ಕನ್ನಡ ರಾಜ್ಯವನ್ನು ಕಟ್ಟುವುದಕ್ಕೆ ಹೊರಟ ಜನ ಇವತ್ತು ಮೈಸೂರು ಯೂನಿವರ್ಸಿಟಿಗೆ, ಕರ್ಣಾಟಕ ಯೂನಿವರ್ಸಿಟಿಗೆ ತಾಂತ್ರಿಕ ಕಾಲೇಜಿನ ಸೀಟುಗಳನ್ನು ಹಂಚುವಾಗ ತಮ್ಮ ದಬ್ಬಾಳಿಕೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಮೇಲೆ ತೋರಿಸಿ, ಆ ಬಡಹುಡುಗರಿಗೆ ಹಗ್ಗ ಹಾಕಿ ಗಲ್ಲಿಗೆ ಏರಿಸಿಲ್ಲವೇ! ಇದು ಹೊಸ ವಿಷಯ ವಲ್ಲವೇ? 5-10 15-20 ಸಾವಿರ ರೂಪಾಯಿಗೆ ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜಿನ ಒಂದೊಂದು ಸೀಟನ್ನೋ ಮಾರಿರ ತಕ್ಕಂಥಾದ್ದು ನಾಗರಿಕರು ತಲೆ ತಗ್ಗಿಸಬೇಕಾದ ವಿಚಾರವಲ್ಲವೇ? ಇದು ನಿಮಗೆ ಅರ್ಥವಾಗುವುದಿಲ್ಲವೆ? ಕರ್ಣಾಟಕ ಯೂನಿವರ್ಸಿಟಿ ವಿದ್ಯಾರ್ಥಿಗಳನ್ನೂ, ಮೈಸೂರು ಯೂನಿವರ್ಸಿಟಿ ವಿದ್ಯಾರ್ಥಿಗಳನ್ನೂ ಭೇದ ಭಾವನೆಯಿಂದ ನೋಡಿ, 2 ಕೋಟಿ ಚಿಲ್ಲರೆ ಜನರಿರುವ ಕನ್ನಡ ರಾಜ್ಯಕ್ಕೆ ಅವಮಾನ ಮಾಡತಕ್ಕದು ಸರಿಯೇ? ಇವತ್ತಿನ ದಿವಸ ನಿಮ್ಮ ವಿದ್ಯಾ ಮಂತ್ರಿಗಳು ಮಾಡಿದಂಥ ಒಂದು ಕ್ರೈಮ್, ಒಂದು ತಪ್ಪು ಏನಿದೆ, ಅದರಿಂದ ಅವರು ಈ ರಾಜ್ಯದಲ್ಲಿ ಉಳಿಯಲಿಕ್ಕೆ ಲಾಯಕ್ಕೆ? ಇವತ್ತಿನ ದಿವಸ ಈ ದೇಶದ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರಲ್ಲಿ ನಮಗೆ ಅಪಾರ ಗೌರವವಿದೆ. ಅವರ ವೃದ್ಧಪಯಸ್ಸಿಗೂ, ಅನುಭವಕ್ಕೂ, ದೊಡ್ಡಸ್ತಿಕೆಗೂ ನಾವು ಗೌರವ ಕೊಡುತ್ತೇವೆ. ಆದರೆ ಅವರು ನಡೆಸತಕ್ಕಂಥ ರಥದಲ್ಲಿ ಕೂತಿರತಕ್ಕ ಚಾಣಕ್ಯರಿಂದ ಅವರ ಮಂತ್ರಿಮಂಡಳಕ್ಕೆ ಭಂಗ ಬಂದಿದೆ. ನಿಜಲಿಂಗಪ್ಪನವರು ದೊಡ್ಡ ಮನಸ್ಸು ಮಾಡಿ, ಯಾರ್ಯಾರಿಂದ ಅವರಲ್ಲಿ ಏನು ತಪ್ಪಾಗಿದೆ, ಏನು ಅಪರಾಧವಾಗಿದೆ ಎಂದು ನೋಡಿ, ಅವರನ್ನು ಶಿಕ್ಷಿಸಬೇಕು, ದಂಡಿಸಬೇಕು. ಈ ರೀತಿ ಮಾಡಿ ನಿಮ್ಮ ಕೀರ್ತಿಯನ್ನು ಉಳಿಸಿಕೊಳ್ಳಬೇಕು. ಇವತ್ತು ನಿಜಲಿಂಗಪ್ಪನವರ ಮೇಲೆ, ನಿಮ್ಮ ಮಂತ್ರಿಮಂಡಲದ ಮೇಲೆ, ಅವಿಶ್ವಾಸ ನಿರ್ಣಯ ತಂದು, ಮಂತ್ರಿಮಂಡಲ ಸರಿಯಾಗಿಲ್ಲವೆಂದು 2ನೇ ಬಾರಿ ಹೇಳುವುದಕ್ಕೆ ನಮಗೆ ಇಚ್ಛೆ ಇಲ್ಲ. ನಿಮ್ಮ ಮಂತ್ರಿಮಂಡಲದಲ್ಲಿರತಕ್ಕಂಥ ಕೆಲವರು ಮಾಡತಕ್ಕ ದುರ್ವ್ಯವಹಾರಗಳಿಂದ, ದುರ್ವ್ಯಾಪಾರಗಳಿಂದ ಜನ ಸೋತು ಹೋಗಿದ್ದಾರೆ; ನೊಂದು ಹೋಗಿದ್ದಾರೆ. ಇಂಜನಿಯರಿಂಗ್ ಕಾಲೇಜು ಸೇರುವುದಕ್ಕೋಸ್ಕರ 483 ರಿಟ್ ಅರ್ಜಿಗಳು ಮೈಸೂರು ಹೈಕೋರ್ಟಿಗೆ ಹೋದುವು; ಅವುಗಳಲ್ಲಿ ವಿದ್ಯಾರ್ಥಿಗಳು ತಮಗೆ ಸೀಟು ಸಿಕ್ಕಬೇಕಾಗಿದ್ದರೂ ಸಿಕ್ಕಿಲ್ಲ, ತಮಗೆ ಅನ್ಯಾಯ ಮಾಡಿದ್ದಾರೆ, ದ್ರೋಹ ಮಾಡಿದ್ದಾರೆ ಸೀಟು ಹಂಚುವುದರಲ್ಲಿ ಜಾತಿಯತೆ ಇದೆ, ಲಂಚ ರುಷುವತ್ತು ಎಲ್ಲಾ ಇದೆಯೆಂದು ಇವತ್ತಿನ ದಿವಸ ಹೇಳಿದರು.

Mr. SPEAKER.—In the Writ Petition is there any reference to corruption?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—Injustice done ಹೇಳಿದ್ದಾರೆ. ರಿಟ್ ಪಿಟಿಷನ್ನಿಗೆ ಸಂಬಂಧಪಟ್ಟ ಜಡ್ಜ್‌ಮೆಂಟ್ ತಂದಿದ್ದೇನೆ. ಅವನ್ನು ತಮಗೆ ಕಳುಹಿಸುತ್ತೇನೆ. ತಾವೇ ಓದಿ ಅರ್ಥಮಾಡಿಕೊಳ್ಳಬಹುದು.

Mr. SPEAKER.—Whatever it is, I do not permit it.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಅದನ್ನು ಹೇಳದೆ ಇರಬಹುದು. ಮೈಸೂರು ಮೆಡಿಕಲ್ ಕಾಲೇಜಿಗೆ, ಬೆಂಗಳೂರು ಇಂಜನಿಯರಿಂಗ್ ಕಾಲೇಜಿಗೆ ಸೀಟು ಕೊಡುವಾಗ ಕರಪ್ಷನ್, ಬ್ರೈಬರಿ, ದುರ್ವ್ಯವಹಾರ ನಡೆಯುತ್ತಿದೆ ಎಂದು ಈ ಸಭೆಯಲ್ಲಿಯೇ ಮಾನ್ಯ ಮಂತ್ರಿಗಳ ಎದುರಿನಲ್ಲಿಯೇ ಹೇಳುತ್ತಾ ಇದ್ದೇನೆ. ಮೆಡಿಕಲ್ ಕಾಲೇಜು ಕಮಿಟಿಯಲ್ಲಿರತಕ್ಕಂಥ ಮೆಂಬರುಗಳು ಸೀಟಿಗೆ 2 ಸಾವಿರ, 3 ಸಾವಿರ ರೂಪಾಯಿಗಳ ಬ್ರೈಬ್ ತೆಗೆದುಕೊಳ್ಳುತ್ತಾ ಇದ್ದಾರೆ. ಡಾಕ್ಟರ್ ಆಳ್ವರವರಿಗೆ ಇನ್‌ಕ್ವಯಿರಿ ಮಾಡಿ ಎಂದು ಕೇಳಿ ಕೊಂಡಿದ್ದೇನೆ. ಸೆಲೆಕ್ಷನ್ ಸಮಿತಿಯ ಸದಸ್ಯರು ನಾವು ಒಬ್ಬರೇ ದುಡ್ಡು ತೆಗೆದುಕೊಳ್ಳುತ್ತಿಲ್ಲ, ಮಂತ್ರಿಗಳವರೆಗೂ ಹೋಗುತ್ತಾ ಇದೆ ಎಂದು ಹೇಳುತ್ತಾರೆ, ಅದನ್ನು ಸರ್ಕಾರಕ್ಕೆ ತಿಳಿಸಿದ್ದೇನೆ. ನಾನು ವೈದ್ಯಕೀಯ ಖಾತೆಯ ಡಾಕ್ಟರಿಗೆ (ಮಂತ್ರಿಗಳಿಗೆ) ಹೇಳಲಿಲ್ಲವೆಂದು ಅವರು ಹೇಳಿದರೆ ನಾನು ನನ್ನ ರಾಜೀನಾಮೆಯನ್ನು ತಮ್ಮ ಕೈಯಲ್ಲಿ ಕೊಡುತ್ತೇನೆ. ಇಂಥ ದುರ್ಗಮವಾದ, ಅಕ್ಷಮ್ಯವಾದ ಸಂಗತಿಯನ್ನು ಅವರ ಗಮನಕ್ಕೆ ತಂದರೆ, ಅವರು ಏನು ಕ್ರಮ ಕೈಗೊಂಡರು ? ತಾವು ಇವತ್ತಿನ ದಿವಸ ಇಂಜನಿಯರಿಂಗ್ ಕಾಲೇಜಿಗೆ ಮಾಡಿರುವ ಒಂದು ಆಯ್ಕೆ ಸಮಿತಿ ಏನಿದೆ ಅದು ಸರಿಯಿಲ್ಲ; ಆ ಒಂದು ಕಮಿಟಿಯಲ್ಲಿ ಒಂದೇ ಗುಂಪಿನ ಜನ ಇದ್ದಾರೆ; ತಮಗೆ ಬೇಕಾದಂಥ ರೀತಿಯಲ್ಲಿ ಅವರು ವ್ಯವಹಾರ ಮಾಡಿದ್ದಾರೆಂದು ನಾನು ಸರ್ಕಾರಕ್ಕೆ ಹೇಳಿದೆ. ಅದಕ್ಕೆ ಅವರು ಏನೂ ಅನ್ಯಾಯವಾಗುವುದಿಲ್ಲ ಏನಾದರೂ ಅನ್ಯಾಯ ಮಾಡುವುದಾದರೆ ಸರಿಪಡಿಸುತ್ತೇವೆಂದು ಹೇಳಿದರು. ಜಡ್ಜಿಗಳು ಏನು ಹೇಳುತ್ತಾರೆ ಅನ್ನುವುದನ್ನು ಹೇಳುತ್ತೇನೆ, ಅಷ್ಟೆ. ನನಗೆ ಮುಖ್ಯ ಮಂತ್ರಿಗಳನ್ನು ಪದಚ್ಯುತಿ ಮಾಡುವ ಇಚ್ಛೆ ಇಲ್ಲ. ಅವರ ಬೆನ್ನು ಹಿಂದೆ ಏನೇನು ನಡೆದು ಹೋಗಿದೆ ಎಂದು ಹೇಳಲು ಇಚ್ಛೆ ಇದೆ. ತಾಂತ್ರಿಕ ಕಾಲೇಜಿನಲ್ಲಿ 41 ಮತ್ತು 43 ಪರ್ಸೆಂಟ್ ಬಂದಿರತಕ್ಕಂಥ ವಿದ್ಯಾರ್ಥಿಗೆ ಸೀಟು ಕೊಟ್ಟಿದ್ದಾರೆ; ಅದೇ 59 ಪರ್ಸೆಂಟ್ ಬಂದಿರತಕ್ಕಂಥ ಒಬ್ಬ ಹೆಣ್ಣುಮಗಳಿಗೆ ಸೀಟು ಕೊಡದೆ, ಹೈಕೋರ್ಟಿನವರು ಕೊಡಬೇಕೆಂದು ಆದೇಶ ಕೊಟ್ಟರು. ಇವತ್ತು 41 ಪರ್ಸೆಂಟ್ ಬಂದು ಸೀಟು ಕೊಟ್ಟ ಅಭ್ಯರ್ಥಿಯಾರೆಂದರೆ ತಮ್ಮ ಆಳುವ ಪಕ್ಷದಲ್ಲಿರುವ ಒಬ್ಬ ಸದಸ್ಯರ ಮಗ. ಇವತ್ತು ಮೆಡಿಕಲ್ ಕಾಲೇಜಿನಲ್ಲಿ ಸೀಟು ಹಂಚಿಕೆಯಲ್ಲಿ ಈ ರೀತಿ ಅನ್ಯಾಯ ನಡೆದಿರುವಾಗ, ಅದನ್ನು ನೋಡಬೇಕಾದ್ದು ತಮ್ಮ ಕರ್ತವ್ಯವಲ್ಲವೇ ? ಶ್ರೀಮಾನ್ ನಿಜಲಿಂಗಪ್ಪನವರೇ, ತಾವು ಅಧಿಕಾರಕ್ಕೆ ಬಂದಾಕ್ಷಣ, ಯಾರದೋ ತಪ್ಪಿಗೆ ನಿಮ್ಮನ್ನು ಸ್ಕೇಪ್‌ಗೋಟ್ ಮಾಡುವುದಕ್ಕೆ ಕೆಲವರು ಹೊರಟಿದ್ದಾರೆ. ಆದ್ದರಿಂದ ಇವತ್ತಿನ ದಿವಸ ತಾವು ಅಧಿಕಾರ ಮಾಡುವಾಗ ಮೈತುಂಬ ಕಣ್ಣು ಇಟ್ಟುಕೊಂಡು ವೀಕ್ಷಿಸಬೇಕೆಂದು ನಾನು ತಮ್ಮಲ್ಲಿ ಭಿನ್ನಹ ಮಾಡುತ್ತೇನೆ.

ತಮ್ಮ ಮಂತ್ರಿಮಂಡಲದಲ್ಲಿರುವ ವಿದ್ಯಾಮಂತ್ರಿಗಳು 8ನೇ ಸ್ಟ್ಯಾಂಡರ್ಡ್ ತರಗತಿಯ ಮಕ್ಕಳಿಗೆ ಪಬ್ಲಿಕ್ ಎಕ್ಸಾಮಿನೇಷನ್ ಮಾಡುವುದು ಸರಿಯೇ ? ಈ ಪರೀಕ್ಷೆಯನ್ನು ಮಾಡುವುದಕ್ಕೆ ಇಲಾಖೆಯ ಡೈರೆಕ್ಟರಿಗೆ ಅಧಿಕಾರವಿಲ್ಲವೆಂದು ಹೈಕೋರ್ಟು ಆದೇಶ ಕೊಟ್ಟಮೇಲೆ, ಡೈರೆಕ್ಟರಿಗೆ ಅಧಿಕಾರವಿಲ್ಲದಿದ್ದರೆ, ನಾವು ಸರ್ಕಾರದವರು ಅಧಿಕಾರತೆಗೆದುಕೊಂಡು ಪರೀಕ್ಷೆ ಮಾಡುತ್ತೇವೆ ಎಂದು ಸರಕಾರ ಹೊರಟಿರುವುದು ಸರಿಯೇ ? 8ನೇ ತರಗತಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಮಕ್ಕಳನ್ನು ಮತ್ತೊಮ್ಮೆ ಈವಾಗ ಪರೀಕ್ಷೆಗೆ ಕೂರಿಸಿ, ಅವರನ್ನು ಅಕ್ಟೋಬರ್, ನವೆಂಬರ್ ತಿಂಗಳಿನಲ್ಲಿ ಹೈಸ್ಕೂಲಿಗೆ ಕಳುಹಿಸಿಕೊಡತಕ್ಕಂಥಾದ್ದು ನ್ಯಾಯವೇ ಸರ್ಕಾರಕ್ಕೆ ಎಂದು ಕೇಳುತ್ತಾ ಇದ್ದೇನೆ. ಇವತ್ತು 15 ಸಾವಿರ ಮಕ್ಕಳಿಗೆ ಆ ರೀತಿ ಪುನಃ ಪರೀಕ್ಷೆ ನಡೆಸುವುದು ನ್ಯಾಯವೇ? ನಿಮ್ಮ ವಿದ್ಯಾಮಂತ್ರಿಗಳು ತಮ್ಮ ಮಂತ್ರಿಮಂಡಲದಲ್ಲಿ ಇರುವುದಕ್ಕೆ ಲಾಯಕ್ಕೆ ! ಕಾಮರಾಜ್ ಪ್ಲಾನ್ ಈಗ ಇದೆ ; ಅದನ್ನು ಮೊದಲು ಅವರಿಗೆ ಅಪ್ಲೈ ಮಾಡಿ ತಮ್ಮ ಮಂತ್ರಿಮಂಡಲದಿಂದ ಆಚೆಗೆ ಮೊದಲು ಕಳುಹಿಸಿ.

ಹೈಕೋರ್ಟಿಗೆ 491 ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ರಿಟ್ ಹಾಕಿ, ಸೀಟು ಹಂಚಿಕೆಯನ್ನು ಪ್ರಶ್ನೆ ಮಾಡಿದ್ದರು. ಅವರಲ್ಲಿ ಕರ್ನಾಟಕ ಯೂನಿವರ್ಸಿಟಿಗೆ, ಮೈಸೂರು ಯೂನಿವರ್ಸಿಟಿಗೆ ಸೀಟುಗಳನ್ನು ಏನು ಡಿವೈಡ್ ಮಾಡಿದ್ದಾರೆ, ಆ ಡಿವಿಜನ್ ಮಾಡಿರತಕ್ಕಂಥಾದ್ದು ಸರಿಯಲ್ಲವೆಂದು ಎಕ್ಸಿಬಿಟ 'D' ಪ್ರಕಾರ ವೇದ್ಯವಾಗುತ್ತದೆ. ಅದಕ್ಕೆ ತಮ್ಮ ವಕೀಲರು ಕರ್ನಾಟಕ ಯೂನಿವರ್ಸಿಟಿಗೆ ಎಷ್ಟು ಜಾಸ್ತಿ ಕೊಟ್ಟಿದೆ ಎಂದು ನೋಡಿ, ಮೈಸೂರು ಯೂನಿವರ್ಸಿಟಿಗೆ ಎಷ್ಟು ನಷ್ಟವಾಗಿದೆಯೋ ಅಷ್ಟು ಸೀಟುಗಳನ್ನು ಭರ್ತಿ ಮಾಡಿಕೊಡುತ್ತೇವೆಂದು ಒಂದು ಅಫಿಡವಿಟ್ ಫೈಲ್ ಮಾಡಿದರು.

ಸ್ವಾಮಿ ಅವರು ಇನ್ನೂ ಒಂದು ವಿಷಯವನ್ನ ಹೇಳಿದ್ದಾರೆ. ಇವತ್ತು ಸೆಲೆಕ್ಷನ್ ಡಿಫೆಕ್ಟಿವ್ ಆಗಿ ಇದೆ, ಇದು ನಿಜವಾಗಿ ನೀತಿಗೆ ವಿರೋಧವಾದ ಸೆಲೆಕ್ಷನ್. ಒಂದು ನಿಮಿಷದಲ್ಲಿ ಹತ್ತಾರು ಜನರನ್ನು ಕರೆಸಿ ಅವರಿಗೆ 10 ನಂಬರು, 15 ನಂಬರು, 5 ನಂಬರು ಕೊಡತಕ್ಕದ್ದು ನನಗಾದರೂ ಅನ್ನಿಸುತ್ತದೆ ತಮ್ಮ ವಿದ್ಯಾಮಂತ್ರಿಗಳು ಈ ದೇಶವನ್ನ ಮಾರಾಟ ಮಾಡಿ ನಿಮ್ಮನ್ನು ಈ ದೇಶದಲ್ಲಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇರಗೊಡದಂತೆ, ತಮ್ಮನ್ನು ರಾಜಕೀಯದಿಂದ ದೂರ ಮಾಡಬೇಕೆಂದು ಮಾನಸ್ಸು ಮಾಡಿದ್ದಾರೆಂದು ಕಾಣುತ್ತದೆ. ಅವರು ಈ ದೇಶದಲ್ಲಿ ಯಾವುದೇ ಒಂದು ಉನ್ನತವಾದ, ಸ್ಥಾನದಲ್ಲಿ ಇರುವುದಕ್ಕೆ ಯೋಗ್ಯರಲ್ಲ.

5-00 P.M.

ಸ್ವಾಮಿ ಇನ್ನೂ ಒಂದು ವಿಷಯವನ್ನು ಹೇಳುತ್ತೇನೆ. ಈ ದೇಶದ ಮೇಲೆ ಬಹಳ ವಿಶ್ವಾಸ ವಿರತಕ್ಕ ಮುಖ್ಯಮಂತ್ರಿಗಳಿಗೆ ಅಧ್ಯಕ್ಷರ ಮುಖೇನ ಹೇಳುತ್ತೇನೆ, ಒಂದರಿಂದ ಐದನೆ ತರಗತಿಗಳ ವರೆಗಿನ ಪುಸ್ತಕಗಳಿಗೆ 7 ಲಕ್ಷ ರೂಪಾಯಿ ಕೊಟ್ಟು ಅಚ್ಚು ಮಾಡಿಸಿದ್ದಾರೆ. ಅದರಲ್ಲಿರುವ ಕೆಲವು ವಿಷಯಗಳನ್ನು ನಾನು ಹೇಳುತ್ತೇನೆ. ಅದರಲ್ಲಿರುವ ಚಿತ್ರಗಳು ರಾಕ್ಷಸರ ಚಿತ್ರಗಳಂತೆ ಇವೆ, ಚಿತ್ರ ಗಳು ತಲೆಕೆಳಕಾಗಿವೆ. ಇಂಥ ಚಿತ್ರಗಳನ್ನು ನೋಡಿ ಮಕ್ಕಳು ಹೇಗೆ ಪಾಠಗಳನ್ನು ಕಲಿಯಬೇಕು ಎನ್ನುವುದೇ ಅರ್ಥವಾಗುವುದಿಲ್ಲ. ಇಂಥ ಪುಸ್ತಕಗಳನ್ನು ಓದಿ ನಮ್ಮ ಮಕ್ಕಳು ವಿದ್ಯೆಯನ್ನ ಕಲಿಯಬೇಕಾಗಿದೆ. ನನ್ನ ಹತ್ತಿರವಿರುವ ಒಂದು ಪುಸ್ತಕದಲ್ಲಿ 23 ರಿಂದ 28ನೇ ಪುಟದವರೆಗೂ ಪುಟಗಳೇ ಇಲ್ಲ, ಪ್ರಿಂಟಾಗಿಲ್ಲ. ಸರ್ಕಾರದವರು ಮಕ್ಕಳಿಗೆ ಇಂಥ ಪುಸ್ತಕ ಕೊಟ್ಟು ಓದಿಸಬೇಕು ಎಂದು ಹೊರಟಿರುವುದು ನಿಜವಾಗಿಯೂ ಕೂಡ ಮರ್ಯಾದೆ ತರುತ್ತದೆಯೇ ಸ್ವಾಮಿ !

ಇನ್ನೊಂದು ವಿಷಯವನ್ನು ಹೇಳುತ್ತೇನೆ ಸ್ವಾಮಿ. ಈ ಪುಸ್ತಕದಲ್ಲಿ ಚಿತ್ರಗಳನ್ನು ನೋಡಿದರೆ ಎತ್ತು, ಹುಲಿ, ಕತ್ತೆ, ಏನೂ ಗೊತ್ತಾಗುವುದಿಲ್ಲ. ಅದನ್ನು ನೋಡಿದರೆ ಹುಲಿ ಬರುತ್ತದೆಯೇ, ಕತ್ತೆ ಬರುತ್ತದೆಯೇ, ಕೋಣ ಬರುತ್ತದೆಯೇ ಎನ್ನುವುದು ಮಕ್ಕಳಿಗೆ ಗೊತ್ತಾಗುವುದಿಲ್ಲ. ಹೀಗಿರುವಾಗ ಮಕ್ಕಳಿಗೆ ಪುಸ್ತಕ ಓದಿದರೆ ಹೇಗೆ ಅರ್ಥವಾಗಬೇಕು ಸ್ವಾಮಿ. ಮಾನ್ಯ ಮಂತ್ರಿಗಳಿಗೆ ಮೂರನೆ ಕ್ಲಾಸಿನಲ್ಲಿ ಓದತಕ್ಕ ಮಕ್ಕಳು ಯಾರಾದರೂ ಇದ್ದರೆ ಅವರಿಗೆ ಅರ್ಥವಾಗುತ್ತಿತ್ತು. ಹೀಗೆ ವಿದ್ಯಾ ಖಾತೆಯಲ್ಲಿ ನಡೆದಿರತಕ್ಕ ದುರ್ವ್ಯವಹಾರಗಳು ಅನೇಕ ಇವೆ. ಅವುಗಳನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

(*Sri Gopala Gowda was murmuring something*)

MR. SPEAKER.—Is the Hon'ble Member making any remarks to be heard by the House or is it intended only for his friends?

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಮುಕ್ಕಣ್ಣಪ್ಪನವರಿಗೆ ಒಂದು ಕಿವಿ ಮಾತು ಹೇಳಿದೆ.

MR. SPEAKER.—In that case, both these members may kindly go outside and have a talk. The point is that the hon'ble member Sri Mukkannappa should not make such remarks.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಮಗೆ ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಅವರು ವಿದ್ಯಾ ಮಂತ್ರಿ ಗಳಾಗಿ ಅಧಿಕಾರವನ್ನು ಕೈಗೆ ತೆಗೆದುಕೊಂಡು ಇವತ್ತಿನವರೆಗೆ 31 ಸ್ಟೇಟ್‌ಮೆಂಟುಗಳನ್ನು ಕೊಟ್ಟರು. ಅವು ಒಂದಕ್ಕೊಂದು ಅಸಂಬದ್ಧವಾಗಿವೆ, ಒಂದಕ್ಕೊಂದು ವ್ಯತ್ಯಾಸವಾಗಿವೆ. ಕಾಲೇಜು ಫೀ ಏರಿಸಿದಾಗ ಹುಡುಗರೆಲ್ಲ ಮುಷ್ಕರ ಹೂಡಿದರು. ಆಗ ನಿಮಗೆ ರಿಯಾಯಿತಿಯನ್ನು ಕೊಡು ತ್ತೇನೆಂದು ಹೇಳಿದರು. ಆದಾದ 6 ತಿಂಗಳಿಗೆ ನಿಮಗೆ ಶೇಕಡ 50 ರಷ್ಟು ರಿಯಾಯಿತಿಯನ್ನು ಕೊಡುತ್ತೇವೆಂದು ಹೇಳಿದವರು ಕೊನೆಗೆ ನಿಮಗೆ ರಿಯಾಯಿತಿ ಸಿಕ್ಕುವುದಿಲ್ಲ ಎಂದು ಹೇಳಿದರು. ಸ್ಕಾಲರ್‌ಷಿಪ್ ಪಡೆಯುತ್ತಿದ್ದವರಿಗೆ ಹಿಂದೆ ಫೀ ರಿಯಾಯಿತಿಯನ್ನು ಕೊಡುತ್ತಿದ್ದರು. ಅವರಿಗೆ ಇನ್ನು ಮೇಲೆ ಆ ರಿಯಾಯಿತಿ ಸಿಕ್ಕುವುದಿಲ್ಲವೆಂದು ಪೂರ್ತಿ ಫೀ ಕೊಟ್ಟೇ ತೀರಬೇಕೆಂದು ಹೇಳುತ್ತಾರೆ. ಈ ರೀತಿ ಎಷ್ಟೋ ನಡೆಯುತ್ತಿವೆ. ವಿದ್ಯಾ ಖಾತೆ ಯಾವ ಮಕ್ಕಳನ್ನು ಮುಂದಿನ ನತ್ಪಜೆಗಳನ್ನಾಗಿ ಮಾಡಬೇಕೋ ಅಂಥ ವಿದ್ಯಾ ಖಾತೆಯಲ್ಲಿ ನಡೆಯುತಕ್ಕ ದುರ್ವ್ಯವಹಾರ, ದುರ್ನೀತಿ, ಅವ್ಯವಹಾರ ಗಳನ್ನು ತಡೆಗಟ್ಟಲು ಮೊದಲು ವಿದ್ಯಾಮಂತ್ರಿಗಳನ್ನು ಆಚೆಗೆ ಕಳಿಸಬೇಕೆಂದು ಹೇಳುವುದಕ್ಕೆ ನಾನು ಈ ನಿರ್ಣಯದ ಮೇಲೆ ಮಾತನಾಡುತ್ತಿದ್ದೇನೆ.

MR. SPEAKER.—The hon'ble member has already exceeded the time limit.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇನ್ನೊಂದು ವಿಷಯವನ್ನು ಹೇಳುತ್ತೇನೆ, ನನಗೆ ಸ್ವಲ್ಪ ಕಾಲಾವ ಕಾಶ ಕೊಟ್ಟರೆ, ನನ್ನ ಸ್ನೇಹಿತರು ಹೇಳಿದ ರೀತಿಯಲ್ಲಿ ನನಗಾದರೂ ಸರ್ಕಾರದ ಮೇಲೆ ಈ ನಿರ್ಣಯ ತರಬೇಕೆಂಬ ಆಸೆ ಇರಲಿಲ್ಲ.

Mr. SPEAKER.—I may remind the Member that I heard him over the Loudspeaker saying that he need not be called upon and that Sri Gopala Salenna may be given more time.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ನಾನು ಹಾಗೆ ಹೇಳಲೇ ಇಲ್ಲ ಸ್ವಾಮಿ.

Mr. SPEAKER.—Then, it is a mistake on my part.

Sri C. J. MUCKANNAPPA.—If you permit me, I will speak. I don't want to rub on the wrong side. Please give me ten minutes more.

Mr. SPEAKER.—Can I take it that the hon'ble member will be the last speaker? If so, I give him ten minutes.

(*Some Members wanted to speak.*)

Sri C. J. MUCKANNAPPA.—If my friends feel that I am taking all their time, let them make out a case. It is not that I want to abuse the Government.

Mr. SPEAKER.—Is the member abusing?

Sri S. SIVAPPA.—There are others also who are willing to participate.

Sri C. J. MUCKANNAPPA.—I don't want to cringe. If they allow me, I will speak.

Mr. SPEAKER.—Supplementary demand will be placed before the House and on that occasion, the member can speak on his other points.

Sri C. J. MUCKANNAPPA.—Supplementary demand has nothing to do with this. It is in a usual way. If you allow, I will speak.

Mr. SPEAKER.—It is not for me to suggest.

Sri C. J. MUCKANNAPPA.—I have absolutely no objection. I will take my seat.

†**ಶ್ರೀ ಕೆ. ಲಕ್ಕಪ್ಪ**—ಅಧ್ಯಕ್ಷರೇ, ಈಗ ತಂದಿರತಕ್ಕ ಅವಿಶ್ವಾಸ ನಿರ್ಣಯದ ಮೇಲೆ ಮಾನ್ಯ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ಈ ಅವಿಶ್ವಾಸ ನಿರ್ಣಯ ಸರ್ಕಾರದ ವಿರುದ್ಧ, ಸರ್ಕಾರದವರು ಮಾಡತಕ್ಕ ಭ್ರಷ್ಟಾಚಾರ, ಸರ್ಕಾರ ಮಾಡತಕ್ಕ ಅನ್ಯಾಯ ಈ ಎಲ್ಲದರ ವಿರುದ್ಧ ಮಂಡಿಸಲ್ಪಟ್ಟಿದೆ. ಅಧಿಕಾರ ಸೂತ್ರವನ್ನು ವಹಿಸಿಕೊಂಡಿರತಕ್ಕ ಪಕ್ಷದ ಸದಸ್ಯರು ಯಾವ ನಿರ್ದಿಷ್ಟವಾದ ಅಂಕಿ ಅಂಶಗಳನ್ನೂ ವಿರೋಧ ಪಕ್ಷದವರು ಅವಿಶ್ವಾಸ ನಿರ್ಣಯವನ್ನು ಸೂಚಿಸಿದಾಗ ಹೇಳಲಿಲ್ಲ ಎನ್ನುವ ಅಂಶವನ್ನು ವ್ಯಕ್ತಪಡಿಸಿದರು. ನಾನಾದರೂ ಹೇಳುತ್ತೇನೆ ಎಲ್ಲ ಸತ್ಯಾಂಶಗಳನ್ನೂ, ಎಲ್ಲ ಅಂಕಿ ಅಂಶಗಳನ್ನೂ ಹಿಂದೆ ತಂದಂಥ ಅವಿಶ್ವಾಸ ನಿರ್ಣಯದ ಸಂಬಂಧದಲ್ಲಿಯೂ ಹೇಳಿದ್ದೇವೆ. ಅದನ್ನು ಈ ಸಭೆಯಲ್ಲಿ ಪ್ರತಿಪಾದನೆ ಮಾಡಿದ್ದೇವೆ. ಈ ಸಂದರ್ಭದಲ್ಲಿಯೂ ಸಹ ಅನೇಕ ಹೊಸ ವಿಚಾರಗಳನ್ನು, ಸರ್ಕಾರ ಮಾಡಿರತಕ್ಕ ಭ್ರಷ್ಟಾಚಾರಗಳನ್ನು ಅಂಕಿ ಅಂಶಗಳ ಮೂಲಕ ಸಭೆಯ ಮುಂದೆ ಇಟ್ಟಿದ್ದೇವೆ. ಅವಿಶ್ವಾಸ ನಿರ್ಣಯದ ಮಂಡನೆಯನ್ನು ವಿರೋಧಿಸುವಾಗ ಅದನ್ನು ಕ್ಷುಲ್ಲಕವಾದ ವಿಚಾರಗಳಿಗೋಸ್ಕರ ತಂದಿದ್ದಾರೆನ್ನುವ ಅಂಶವನ್ನು ಮಾತ್ರ ಆಡಳಿತ ಪಕ್ಷದ ಸದಸ್ಯರು ಹೇಳಿದ್ದಾರೆಯೇ ಹೊರತು ನಾವು ತಂದಿರತಕ್ಕ ಅಂಕಿ ಅಂಶಗಳು, ಸರ್ಕಾರದ ಮೇಲೆ ಹೊರಿಸಿರತಕ್ಕ ಆರೋಪಣೆಗಳನ್ನು ನಾವು ಪ್ರತಿಪಾದಿಸಿದಾಗ್ಯೂ ಕೂಡ ಅದಕ್ಕೆ ಸೂಕ್ತವಾದ ಉತ್ತರವನ್ನು ಸರ್ಕಾರ ಇದುವರೆಗೆ ಕೊಟ್ಟಿಲ್ಲ. ಸರ್ಕಾರದವರು ಹೇಳುತ್ತಾರೆ, ಶರಾವತಿ ವಿಷಯ ಹಳೆಯದು ಎಂದು. ಈ ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಬೇಕಾದರೆ ಎಷ್ಟು ಹಣವನ್ನು ಇವರು ದುರುಪಯೋಗಪಡಿಸಿದ ಮೇಲೆ ಮಾಡಬೇಕು, ಪ್ರಜೆಗಳ ಹಣವನ್ನು ಎಷ್ಟು ತಿಂದ ಮೇಲೆ ಅವಿಶ್ವಾಸ ನಿರ್ಣಯವನ್ನು ಮಂಡಿಸಬೇಕು - ಎಷ್ಟು ಭ್ರಷ್ಟಾಚಾರಗಳನ್ನು ಮಾಡಿದ ಮೇಲೆ ಅವಿಶ್ವಾಸ ನಿರ್ಣಯವನ್ನು ಮಂಡಿಸಬೇಕು ಎನ್ನುವ ಅಂಶವನ್ನಾದರೂ ಹೇಳಿದರೆ ಅನುಕೂಲವಾಗುತ್ತದೆ. ಆದುದರಿಂದ ಈ ವಿಷಯವನ್ನು ಸರ್ಕಾರದವರು ಹೇಳಬೇಕು.

ನಿಜವಾಗಿಯೂ ಸರಕಾರ ಪ್ರಜಾಪ್ರಭುತ್ವ ನೀತಿಯನ್ನು ಅನುಸರಿಸುತ್ತಿಲ್ಲ. ನಾವು ಹೇಳತಕ್ಕಂಥ ಆರೋಪಣೆಗಳಿಗೆ ಗಮನ ಕೊಡುತ್ತಿಲ್ಲ. ಇಂದು ನೀವು ಬಹು ಸಂಖ್ಯಾಬಲದಿಂದ ಅಧಿಕಾರ

(ಶ್ರೀ ಕೆ. ಲಕ್ಕಪ್ಪ)

ಮಾಡುತ್ತಿದ್ದೀರಿ ಆದರೆ ನಿಮಗೆ ನೈತಿಕ ಬಲ ಇಲ್ಲ. ಜನಗಳ ಮಾತಿಗೆ ಪ್ರಜೆಗಳ ಅಭಿಪ್ರಾಯಕ್ಕೆ ಮನ್ನಣೆ ಕೊಡುವುದಕ್ಕೆ ಪ್ರಜಾಪ್ರಭುತ್ವ ರಾಜ್ಯ ಪದ್ಧತಿ ಜಾರಿಗೆ ತಂದಿದ್ದೀರಿ. ಆದರೆ ಅದನ್ನು ಯೋಗ್ಯ ರೀತಿಯಿಂದ ನ್ಯಾಯವಾಗಿ ಅನುಷ್ಠಾನ ಮಾಡುತ್ತಿಲ್ಲ. ನೀವು ಚುನಾವಣೆಯಲ್ಲಿ ಬಹು ಸಂಖ್ಯೆಯಲ್ಲಿ ಬರುವುದಕ್ಕೆ ಎಲ್ಲರೂ ನೋಟಿನ ಕಂತೆ ಕೊಟ್ಟು ಓಟು ಪಡೆದು ಶೇಕಡ 48 ರಷ್ಟು ಓಟು ಪಡೆದು ಅಧಿಕಾರಕ್ಕೆ ಬಂದಿದ್ದೀರಿ. ಇದು ನಿಮ್ಮ ಪ್ರಜಾತಂತ್ರ. ಹೀಗೆ ಅನೇಕ ತಂತ್ರಗಳ ಮೂಲಕ ಅಧಿಕಾರಕ್ಕೆ ಬಂದಿದ್ದೀರಿ. ವಿರೋಧ ಪಕ್ಷದವರು ಏನಾದರೂ ಆರೋಪ ಮಾಡಿದರೆ ಅವಕ್ಕೆ ಗಮನಕೊಡುವುದಿಲ್ಲ. ಇಂಗ್ಲೆಂಡಿನಲ್ಲಿ ಕೀಲರ್ ಪ್ರಕರಣ ಪಾರ್ಲಿಮೆಂಟಿನಲ್ಲಿ ಪ್ರಸ್ತಾಪ ಮಾಡಿದಾಗ್ಗೆ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ. ಅದರ ಹಾಗೆ ಇರತಕ್ಕ ಅನೇಕ ಆರೋಪಗಳನ್ನು ಹೇಳ ಬಹುದು. ದೇಶದಲ್ಲಿ ಇಂದು ಭ್ರಷ್ಟಾಚಾರ ಲಂಚಖೋರತನ ಅನೇಕ ರೀತಿಯಿಂದ ನಡೆದಿದೆ. ನಾವು ಇದುವರೆಗೆ ಮಾಡಿರುವ ಆರೋಪಗಳಿಗೆ ಯಾವದೇ ಒಂದು ಸೂಕ್ತವಾದ ಉತ್ತರ ಸರಕಾರ ದಿಂದ ಬಂದಿಲ್ಲ. ಸರಕಾರಕ್ಕೆ ಚಾಲೆಂಜು ಮಾಡಿ ಹೇಳುತ್ತೇನೆ. ಈ ಸಭೆಯ ಮಾನ್ಯ ಸದಸ್ಯರಲ್ಲದ ವರು ಮಂತ್ರಿಮಂಡಲದಲ್ಲಿ ನ್ಯಾಯಾಂಗ ಮಂತ್ರಿಗಳಾಗಿ ಈ ಮಾನ್ಯ ಸಭೆಯಲ್ಲಿ ಬಂದು ಕುಳಿತು ಕೊಳ್ಳುತ್ತಾರೆ. ಅಂಥ ನ್ಯಾಯಾಂಗ ಮಂತ್ರಿಗಳು ಈ ಸಭೆಯ ಮಾನ್ಯ ಸದಸ್ಯರೊಬ್ಬರು ಸಾರ್ವ ಜನಿಕರ ಹಿತದ ಕೆಲಸಕ್ಕಾಗಿ ಅವರ ಕಡೆ ಹೋದಾಗ್ಗೆ ಗೌರವಕ್ಕೆ ಧಕ್ಕೆ ಬರುವ ರೀತಿಯಲ್ಲಿ ವರ್ತನೆ ಮಾಡಿದ್ದಾರೆ. ಇದು ಕ್ರಮಬದ್ಧವೇ. ನ್ಯಾಯವೇ ಇಂಥವರನ್ನು ಮಂತ್ರಿಮಂಡಳದಲ್ಲಿ ಇಟ್ಟು ಕೊಂಡರೆ ದೇಶದಲ್ಲಿ ಪ್ರಜಾಪ್ರಭುತ್ವ ಬೆಳೆಯುವುದಕ್ಕೆ ಸಾಧ್ಯವೇ ಎಂಬುದನ್ನು ಮಾನ್ಯ ಶ್ರೀ ನಿಜಲಿಂಗಪ್ಪನವರು ಯೋಚನೆ ಮಾಡಬೇಕು.

ಇನ್ನು ವಿದ್ಯಾ ಇಲಾಖೆ ಬಗ್ಗೆ ಹೇಳುವುದಾದರೆ ಒಂದು ಸ್ಕೂಲು ಮಂಜೂರು ಮಾಡುವುದರಲ್ಲಿ ಸಹ ನ್ಯಾಯವಿಲ್ಲ. ಭ್ರಷ್ಟಾಚಾರ ನಡೆಯುತ್ತಿದೆ. ಕಾಗದ ಬರದು ತಿಳಿಸಿದರೂ ಕೂಡ ತನಿಖೆ ನಡೆಸಿಲ್ಲ. ಇನ್ನು ಯಾವ ನೇರ ಆರೋಪ ಹೇಳೋಣ? ಇದಕ್ಕೆ ಉತ್ತರ ಹೇಳಲಿಲ್ಲ. ಅಧಿಕಾರ ದಲ್ಲಿದ್ದವರು ಹಸ್ತಕ್ಷೇಪ ಮಾಡಿ ಸಾರ್ವಜನಿಕರಿಗೆ ತೊಂದರೆ ಮಾಡುತ್ತಿದ್ದಾರೆ. ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಅಡ್ಡಿ ಬರತಕ್ಕಂಥ ರೀತಿಯಲ್ಲಿ ಹಸ್ತಕ್ಷೇಪ ಮಾಡಲಾಗುತ್ತಿದೆ. ವಿದ್ಯುತ್‌ಶಕ್ತಿ ಮಂಡಲಿ ಬಗ್ಗೆ ಹೇಳುತ್ತಿರುವಾಗ್ಗೆ ಒಂದು ಮಾತು ಹೇಳಿದರು: ಒಬ್ಬರು ಸದಸ್ಯರು ಹೋಗಿದ್ದರೆ ಸರಕಾರ ನಡೆಯುತ್ತಿರಲಿಲ್ಲವೇ? ವಿದ್ಯುತ್‌ಶಕ್ತಿ ಮಂಡಲಿಯಲ್ಲಿ ಹಿತಾಸಕ್ತಿಯಿಂದ ನಡೆದ ಅನ್ಯಾಯ, ಭ್ರಷ್ಟಾಚಾರದ ಬಗ್ಗೆ ಅಪಾದನೆ ಮಾಡಿದರೂ ಕೂಡ ಸೂಕ್ತವಾದ ಉತ್ತರ ಕೊಡಲಿಲ್ಲ. ವಿಚಾರಣೆ ಮಾಡುತ್ತೇವೆ, ತನಿಖೆ ಮಾಡುತ್ತೇವೆ ಎಂದು ಭರವಸೆ ಕೊಡಲಿಲ್ಲ ಇಂಥ ಭರವಸೆ ಇಲ್ಲದೇ ಹೋದರೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಹೋಗುತ್ತದೆ. ಪ್ರಜಾಪ್ರಭುತ್ವದ ಸ್ಥಿತಿ ಏನಾಗಬಹುದು? ಈ ರೀತಿ ಯಾದರೆ ರಾಮರಾಜ್ಯ ಸ್ಥಾಪನೆ ಮಾಡಲು ಸಾಧ್ಯವೇ! ಎಂದು ಸರಕಾರಕ್ಕೆ ನೇರವಾಗಿ ಕೇಳು ತ್ತೇನೆ.

ಸ್ವಾಮಿ, ಇನ್ನು ಪಬ್ಲಿಕ್ ವರ್ಕ್ಸ್ ಡಿಪಾರ್ಟಮೆಂಟಿನಲ್ಲಿ ಆಗುವ ಅನ್ಯಾಯ ಹೇಳುವುದಕ್ಕೆ ಸಾಧ್ಯವಿಲ್ಲ. ಸರಕಾರದಲ್ಲಿ ಇರತಕ್ಕಂಥ ಹಣ ಸಾಮಾನ್ಯವಾಗಿ ಐದಾರು ಜನರ ಕೈಯಲ್ಲಿದೆ. ಈ ಇಲಾಖೆಯ ಏಳೆಂಟು ಜನ ಕಂಟ್ರಾಕ್ಟದಾರರ ಹಿತಾಸಕ್ತಿಗಾಗಿ ದೇಶದ ಹಣ ಪೋಲು ಮಾಡುತ್ತಿದ್ದೀರಿ. ತಿಪಟೂರು ರೋಡು ಬಗ್ಗೆ ಅಂಕಿಅಂಶಗಳ ಸಹಿತವಾಗಿ ಕಾಗದ ಬರೆದರೂ ಇದನ್ನು ಇದುವರೆಗೆ ನೀವು ಮಾಡಲಿಲ್ಲ. ತಮ್ಮವರಾದ ಜನರಿಗೆ, ಬಂಧುವರ್ಗದವರಿಗೆ ಕೆಲಸ ಕೊಟ್ಟು ದೇಶದ ಹಣ ಪೋಲು ಮಾಡಲಾಗುತ್ತಿದೆ. ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಕ ವಿಚಾರದಲ್ಲಿ ಹೇಳುವುದಾದರೆ 53 ಜನರು ಒಂದೇ ಕೋಮಿಗೆ ಸೇರಿದವರನ್ನು ನೇಮಕ ಮಾಡಿದ್ದೀರಿ. ಇದು ಒಂದು ನೇರವಾದ ಅಪಾದನೆ. ದೇಶದಲ್ಲಿ ಇಂದು ಅನೇಕ ಅನ್ಯಾಯ ಭ್ರಷ್ಟಾಚಾರ ನಡೆಯುತ್ತಿರುವ ನಿದರ್ಶನಗಳನ್ನು ನಾವು ನೋಡುತ್ತಿದ್ದೇವೆ. ಇದರಿಂದ ದೇಶದ ಹಿತ ರಕ್ಷಣೆಯಾಗುತ್ತದೆಯೇ! ಒಂದು ಮಾತನ್ನು ಬಹು ಕಠಿಣವಾಗಿ ಹೇಳುತ್ತೇನೆ. ಈ ಅಪಾದನೆಗಳಿಗೆ ಸರಿಯಾದ ಉತ್ತರ ಕೊಡದೇ ಇದ್ದರೆ ಮಂತ್ರಿಮಂಡಳವನ್ನು ಕೆಳಗೆ ಇಳಿಸಲು ನೇರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಜನತೆಗೆ ಕರೆ ಕೊಡುತ್ತೇವೆ. ಪ್ರತಿಭಟನೆ ಮಾಡುತ್ತೇವೆ. ಬ್ರಹ್ಮಾಸ್ತ್ರಕ್ಕಿಂತಲೂ ದೊಡ್ಡದಾದ ಒಂದು ಅಸ್ತ್ರ ವನ್ನು ನಮ್ಮಲ್ಲಿ ಇಟ್ಟುಕೊಂಡಿದ್ದೇವೆ. ಆ ಅಸ್ತ್ರದ ಮೇಲೆ ನಿಮ್ಮ ಬಾಣ ನಡೆಯುವುದಿಲ್ಲ. ಜನತೆಯ ಕರೆ ಮುಂದೆ ಯಾವ ಅಸ್ತ್ರವೂ ನಡೆಯುವುದಿಲ್ಲ. ನಿಮ್ಮ ಅಧಿಕಾರ ಉಳಿಯುವುದಿಲ್ಲ.

ಇನ್ನು ಕೋಆಪರೇಟಿವ್ ಸೊಸೈಟಿಗಳ ಬಗ್ಗೆ ಹೇಳುವುದಾದರೆ ಲಕ್ಷಾಂತರ ರೂಪಾಯಿ ದುರುಪಯೋಗವಾಗಿದೆ. ಯಾವ ಸೊಸೈಟಿಯೊಳಗೆ ಇಲ್ಲದ ಸಲ್ಲದ ಭ್ರಷ್ಟಾಚಾರ ನಡೆದಿದೆಯೋ ಅಂಥ ಸೊಸೈಟಿಯ ಹಣದ ಬಗ್ಗೆ ವಿಚಾರಣೆ ನಡೆಸಬೇಕು ಎಂದು ಅನೇಕ ಸಲ ಕಾಗದ ಬರೆದಿದ್ದೇವೆ.

ಆದರಿಂದ ಏನೂ ಪ್ರಯೋಜನವಾಗಿಲ್ಲ. ದರೋಡೆ ಲೂಟಿ ಮಾಡತಕ್ಕಂಥ ಜನರ ಕೈಯಲ್ಲಿ ಅಧಿಕಾರ ಕೊಡುತ್ತೀರಿ. ಅಂಥವರನ್ನು ಅಧಿಕಾರ ಸ್ಥಾನಕ್ಕೆ ತಂದು ಸುಖಸಂಪತ್ತು ಒದಗಿಸಿಕೊಡುತ್ತೀರಿ. ಯಾಕೆಂದರೆ ಅಂಥವರು ನಿಮ್ಮ ಪಕ್ಷಕ್ಕೆ ಬೆಂಬಲ ಕೊಡುತ್ತಾರೆ. ನಿಮಗೆ ಚುನಾವಣೆಯಲ್ಲಿ ಓಟು ದೊರಕಿಸಿ ಕೊಡುತ್ತಾರೆ. ಇದು ನಿಮ್ಮ ಸಮಾಜವಾದ, ಸಮತಾವಾದ. ಕಾಂಗ್ರೆಸ್ಸಿನವರ ದುರ್ನಡತೆ ಬಗ್ಗೆ ಪ್ರಶ್ನೆ ಮಾಡುತ್ತೇನೆ. ಅದಕ್ಕೆ ಮಂತ್ರಿಗಳು ಉತ್ತರ ಹೇಳಲಿ. ತುಮಕೂರು ಡಿಸ್ಟ್ರಿಕ್ಟಿನಲ್ಲಿ 87 ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿದೆ. ಎಷ್ಟೋ ಸೊಸೈಟಿಗಳಲ್ಲಿ ಧಫಾವಣೆ ಮಾಡಿದ್ದೀರಿ. ಸರಕಾರದ ಮೇಲಿನ ಜನರ ನಂಬಿಕೆ ಹೊರಟು ಹೋಗಿದೆ. ಇನ್ನು ವಿಚಾರ ಮಾಡ ಬೇಕು. ಈ ವಿಚಾರದಲ್ಲಿ ಏನಾದರೂ ನೇರವಾದ ಕ್ರಮ ತೆಗೆದುಕೊಂಡಿದ್ದೀರಾ ? ವಿರೋಧ ಪಕ್ಷದ ವರು ಚಾರ್ಜ್ ಸ್ಪೆಸಿಫಿಕ್ ಆಗಿ ಹೇಳಲಿ ಎಂದು ಅನ್ನುತ್ತೀರಿ. ಸ್ಪೆಸಿಫಿಕ್ಕಾಗಿ ಚಾರ್ಜ್ ಮಾಡಿದರೆ ಅದಕ್ಕೆ ಸರಿಯಾದದ್ದಲ್ಲ ಎಂದು ಉತ್ತರ ಕೊಡುತ್ತೀರಿ, ಇದರಲ್ಲಿ ಕೈಹಾಕಬೇಡಿ ಎಂದು ಹೇಳು ತ್ತೀರಿ. ನಿಮ್ಮ ಕಾಂಗ್ರೆಸ್ ಅಧ್ಯಕ್ಷರಾದ ಸಂಜೀವಯ್ಯನವರು ನಿಮಗೆ ಇದನ್ನು ಚೆನ್ನಾಗಿ ಹೇಳಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ಕಾಂಗ್ರೆಸ್ ಅಧ್ಯಕ್ಷರು ಮಾಡಿರತಕ್ಕ ಬಹಿರಂಗ ಸ್ಟೇಟ್‌ಮೆಂಟನ್ನು ತಾವೆಲ್ಲಾ ಓದಿದ್ದೀರಿ, ಈಗ ಪಾಪರ್ ಆಗಿರತಕ್ಕ ಕಾಂಗ್ರೆಸ್ ಜನ ನೀವೇ ಹೇಳುತ್ತೀರಿ 1957 ರಿಂದ ಅಧಿಕಾರದಲ್ಲಿದ್ದ ಕಾಂಗ್ರೆಸ್ ಜನ ಕೋಟ್ಯಾಂತರ ರೂಪಾಯಿ ದೇಶದ ಹಣವನ್ನು ತಮ್ಮ ಭೋಗಕ್ಕೆ ಉಪಯೋಗಿಸಿಕೊಂಡಿದ್ದಾರೆ ಎಂದು ಅಂತಹ ಅನೇಕ ನಿದರ್ಶನಗಳು ಇವೆ; ಇದನ್ನು ನಿಮ್ಮವರೇ ಎಲ್ಲರಿಗೂ ತಿಳಿಯುವ ರೀತಿಯಲ್ಲಿ ಹೇಳಿದ್ದಾರೆ ಇದಕ್ಕಿಂತ ಬೇರೆ ನಿದರ್ಶನ ಏನು ಬೇಕು ? ಇದನ್ನು ತಾವೆಲ್ಲರೂ ಆಲೋಚನೆ ಮಾಡಬೇಕೆಂದು ಹೇಳಿ ಇಷ್ಟು ಅವಕಾಶಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ ?

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ ಬಹುಶಃ ನಾನೇ ಕೊನೆಯ ಭಾಷಣ ಕಾರ ಎಂದು ಕಾಣುತ್ತದೆ.

Mr. SPEAKER.—I don't commit myself.

ಶ್ರೀ ಎಸ್. ಗೋಪಾಲಗೌಡ.—ಏನೋ ದಯಮಾಡಿ ಒಂದು ಅವಕಾಶವನ್ನು ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ನಾನು ಅಭಿವಂದನೆಯನ್ನು ಅರ್ಪಿಸಿ ಈ ಭಾಷಣವನ್ನು ಆರಂಭ ಮಾಡಬೇಕೆಂದು ಇದ್ದೇನೆ. ತಾವು ಮೊನ್ನೆ ದಿವಸ ಕೆನರಾ ಬ್ಯಾಂಕಿಗೂ ನನಗೂ ಸಂಬಂಧವಿಲ್ಲ ಎಂದು ಹೇಳಿದಿರಿ ತಾವು ಅದರ ಚೇರ್ಮನ್‌ರು ಆಗಿದ್ದಿರಿ ಎಂದು ಹೇಳಿದೆ, ಅದು ಒಂದು ವಿಷಯವನ್ನು......

Mr. SPEAKER.—If the hon'ble Member raising the matter again, I am prepared to............

ಶ್ರೀ ಎಸ್. ಗೋಪಾಲಗೌಡ.—ಹಿಂದೆ ತಾವು ಚೇರ್ಮನ್‌ರಾಗಿದ್ದಿರಿ ಎಂದು......

Mr. SPEAKER.—But I have put the question. Has the member answered it ? How does my position come into the picture ?

ಶ್ರೀ ಎಸ್. ಗೋಪಾಲಗೌಡ.—ಅದು ಒಂದು ವಿಷಯ ಬೇಕಾಗಿತ್ತು ನನಗೆ-ಏಕೆಂದರೆ ಮುಂದೆ ನಾನು ಆ ವಿಚಾರ ಹೇಳಬೇಕಲ್ಲಾ......

Mr. SPEAKER.—It is not every whim of the members which is going to be satisfied.

ಶ್ರೀ ಎಸ್. ಗೋಪಾಲಗೌಡ.—ಅಲ್ಲಿ ಏನಾದರೂ ಸಂಬಂಧವಿತ್ತೇ ಎಂದು ಕೇಳಿದೆ, ನನಗೆ ಸಂಬಂಧ ಇಲ್ಲ ಎಂದು ಹೇಳಿದಿರಿ.

Mr. SPEAKER.—I said that I was not a Director. Let the Hon'ble Member close that chapter or if he wants he can raise it very seriously ; but this kind of insinuation is intolerable.

ಶ್ರೀ ಎಸ್. ಗೋಪಾಲಗೌಡ.—ಈ ನಿರ್ಣಯಕ್ಕೆ ನಾನು ಪೂರ್ಣ ಬೆಂಬಲ ಕೊಟ್ಟು ಮಾನ್ಯ ಶ್ರೀಮಾನ್ ನಿಜಲಿಂಗಪ್ಪನವರು ತಮ್ಮ ಮೇಲೆ ಈ ಮನೆಯಲ್ಲಿ ಮಾನ್ಯ ಸದಸ್ಯರು ಹೊರಿಸಿರತಕ್ಕ ಅಪಾದನೆಗಳನ್ನು ಮತ್ತು ಹೊರಗಡೆ ಪತ್ರಿಕೆಗಳಲ್ಲಿ ಹಾಗೂ ಸಾರ್ವಜನಿಕ ಮುಖಗಳಿಂದ ಕೇಳಿ ಬರುತ್ತಾ ಇರತಕ್ಕ ಅಪಾದನೆಗಳನ್ನು ಪ್ರಾಮಾಣಿಕವಾಗಿ ತೊಳೆದುಕೊಳ್ಳಬೇಕು, ತೊಳೆದುಕೊಳ್ಳು ವುದಕ್ಕೆ ಕಷ್ಟವಾಗಿ ಕಂಡುಬಂದರೆ ಆ ಸಾರ್ವಜನಿಕ ಪದವಿಯನ್ನು ನಿರ್ಮಮತೆಯಿಂದ ಬಿಟ್ಟು ಕೊಡಬೇಕೆಂದು ನಾನು ಈ ಮಾನ್ಯ ಸಭೆಯ ಪರವಾಗಿ ಕೇಳಿಕೊಳ್ಳುತ್ತೇನೆ.

(ಶ್ರೀ ಎಸ್. ಗೋಪಾಲಗೌಡ)

ಇನ್ನು ಸ್ಪಷ್ಟವಾದ ಅಪಾದನೆಗಳನ್ನು ಮಾಡಬೇಕೆಂದು ಶ್ರೀಮಾನ್ ಕಬಾಡಿಯವರು ಕೇಳಿದ್ದಾರೆ-ತಾವು ಅಪ್ಪಣೆ ಕೊಟ್ಟರೆ ಕೆಲವು ಹೆಸರುಗಳನ್ನು ಹೇಳಿ ಕೆಲವು ಅಪಾದನೆಗಳನ್ನು ಮಾಡಬೇಕೆಂದು ಇದ್ದೇನೆ.

Mr. SPEAKER.—In the case of persons who are not here to defend themselves their names should not be mentioned here.

ಶ್ರೀ ಎಸ್. ಗೋಪಾಲಗೌಡ.—ಶ್ರೀಮಾನ್ ನಿಜಲಿಂಗಪ್ಪನವರು ಈ ಸಭೆಯ ನಾಯಕರೂ ಹೌದು, ರಾಜ್ಯದ ಮುಖ್ಯಮಂತ್ರಿಗಳೂ ಹೌದು. ಅವರ ಮಗ ಅಗಿರತಕ್ಕವರು ಶರಾವತಿಯ ರಚನೆಯಲ್ಲಿ ಕಂಟ್ರಾಕ್ಟರ್ಸ್ ಆಗಿರತಕ್ಕ ಕರ್ನಾಟಕ ಕನ್‌ಸ್ಟ್ರಕ್ಷನ್ಸ್ ಅವರ ಜೊತೆಯಲ್ಲಿ ಪಾಲುಗೊಂಡಿದ್ದಾರೆ ಎಂದು ಕೇಳುತ್ತೇನೆ. ಅವರಿಗೆ ಸಂಬಂಧಪಟ್ಟವರೊಬ್ಬರಿಗೆ ಡೆಪ್ಯೂಟಿಕಮಿಷನರು ಭೂಮಿಯನ್ನು ಕೊಟ್ಟಿದ್ದಾರೆ ಎಂದು ಕೇಳುತ್ತೇನೆ, ಶ್ರೀಮಾನ್ ಗಾಂಜಿ ವೀರಪ್ಪನವರಿಗೆ ಸ್ಟೇನ್‌ಲೆಸ್‌ಸ್ಟೀಲ್ ಕೋಟಾ ಇದೆ ಎಂದು ಕೇಳುತ್ತೇನೆ. ಹೀಗೆ......

ಅಧ್ಯಕ್ಷರು.—ಹೆಸರು ಎತ್ತಬೇಡಿ ಎಂದು ನಾನು ತಮಗೆ ಹೇಳುತ್ತಿರುವುದು

ಶ್ರೀ ಎಸ್. ಗೋಪಾಲಗೌಡ.—ಹೀಗೇ ಪಟ್ಟಿ ಬರುತ್ತದೆ ಇಂತಹ ನೂರು ಇವೆ ಅಂಕಿ ಅಂಶ ಕೊಡುತ್ತೇನೆ. ಬೇಕಾದರೆ ಒಂದು ಪುಸ್ತಕ ಬರೆದುಕೊಡುತ್ತೇನೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ ಶ್ರೀಮಾನ್ ಕಬಾಡಿಯವರ ಬಗ್ಗೆ ಹೇಳಬಲ್ಲೆ, ಶ್ರೀನಿವಾಸ ನಾಯಕರ ಬಗ್ಗೆ ಹೇಳಬಲ್ಲೆ, ಈ ಸಭೆಯಲ್ಲಿರತಕ್ಕ ಅನೇಕರ ಬಗ್ಗೆ ಹೇಳಬಲ್ಲೆ. ನನ್ನನ್ನು ನೀವು ಗಲ್ಲಿಗೆ ಹಾಕಲಾರಿರಿ ಎಂದು ತಿಳಿದುಕೊಂಡಿದ್ದೇನೆ. ದಯಾನಂದ ಸಾಗರ್ ಅವರು ಮಂತ್ರಿ ಯಾದಮೇಲೆ ಅನೇಕ ಸೈಟುಗಳನ್ನು ಬೆಂಗಳೂರಿನಲ್ಲಿ ಮಾಡುತ್ತಾ ಇದ್ದಾರೆ ಮತ್ತು ಮಾಡಿದ್ದಾರೆ ಎಂದು ಕೇಳುತ್ತೇನೆ. ಇವು ವೈಯಕ್ತಿಕವಾದ ಅಪಾದನೆಗಳು, ಬೇಕಾದರೆ ಇನ್ನೂ ಸ್ಪಷ್ಟವಾಗಿ ಹೇಳುತ್ತೇನೆ ಆದ್ದರಿಂದ ದಯವಿಟ್ಟು ಯಾರೂ ನನ್ನನ್ನು ಕೆರಳಿಸಬಾರದು.

Sri R. DAYANANDA SAGAR (Deputy Minister for Sericulture).—The Hon'ble Member may give details of the sites I am making. I insist upon that.

ಶ್ರೀ ಎಸ್. ಗೋಪಾಲಗೌಡ.—ಚಕ್ಕುಬಂದಿ ಕೊಡಬೇಕೇ? ಈಗ ತೆಗೆದುಕೊಂಡಿರುವುದಕ್ಕೇ? ಅಥವಾ ತೆಗೆದುಕೊಳ್ಳಬೇಕೆಂದಿರುವುದಕ್ಕೇ?

Sri R. DAYANANDA SAGAR.—Please be specific and responsible in your statements.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ ಶರಾವತಿ ಪ್ರಕರಣದ ಬಗ್ಗೆ ವಿಚಾರಣೆ ನಡೆಯಬೇಕೆಂದು ಹೇಳಿ—

Sri K. H. RANGANATH (Mudigere).—I rise to a point of order. The Honourable Deputy Minister without addressing the Chair, is addressing the particular member. He said 'Please make a responsible statement'. Is it in order?

Sri R. DAYANANDA SAGAR.—I insist through the Speaker.

ಅಧ್ಯಕ್ಷರು.—ದಯಾನಂದ ಸಾಗರ್ ಅವರು ಮಾನ್ಯ ಸದಸ್ಯರನ್ನೇ ಉದ್ದೇಶಿಸಿ ಅವರಿಗೇ ಪ್ರಶ್ನೆ ಹಾಕಿದರೆ ಅದು ಸರಿಯಿಲ್ಲ: ಆದರೆ ಅದು ಸ್ವಲ್ಪ ಮಟ್ಟಿಗೆ ಎರಡು ಕಡೆಯಿಂದಲೂ ನಡೆಯುತ್ತಾ ಇದೆ. The current is running in both ways.

ಶ್ರೀ ಎಸ್. ಗೋಪಾಲ ಗೌಡ.—ಶರಾವತಿ ಬಗ್ಗೆ ವಿಚಾರಣೆ ನಡೆಸಬೇಕೆಂದು ಹೇಳಿ—

Sri R. DAYANANDA SAGAR.—I again insist through you, that the Hon'ble Member may give details, because it will be a charge and I have got to defend myself.

ಶ್ರೀ ಎಸ್. ಗೋಪಾಲಗೌಡ.—ಇದನ್ನು ತಮಗೆ ಒಪ್ಪಿಸುತ್ತೇನೆ, ಈ ಸಭೆಯ ಮುಂದೆ ಇಡುತ್ತೇನೆ, ಏಕೆಂದರೆ ನನಗೆ ಕೊಟ್ಟಿರತಕ್ಕ ಕಾಲ ಮುಗಿದುಹೋಗುತ್ತದೆ ಆದ್ದರಿಂದ ಆ ಸೈಟುಗಳ ಚಕ್ಕುಬಂದಿ ಕೊಡುವುದು ಕಷ್ಟ.

Sri R. DAYANANDA SAGAR.—This is a charge levelled by way of trying to defame me. I insist that he must give all details.

Mr. SPEAKER—He has said what he wanted to say.

ಶ್ರೀ ಎಸ್. ಗೋಪಾಲ ಗೌಡ.—ಶರಾವತಿಯ ಬಗ್ಗೆ ವಿಚಾರಣೆಯನ್ನು ಮಾಡಬೇಕೆಂದು ಕೇಳಿದ್ದೇವೆ, ವಿಚಾರಣೆಯನ್ನು ಮಾಡಬೇಕು, ನ್ಯಾಯಾಂಗ ವಿಚಾರಣೆಯನ್ನು ಮಾಡಬೇಕು ಇದನ್ನು ಎಲ್ಲ ಜವಾಬ್ದಾರಿಯಿಂದ ಹೇಳುತ್ತೇನೆ, ದೇಶದ ಎಲ್ಲ ಜನರ ಪರವಾಗಿ ಹೇಳುತ್ತೇನೆ ವಿಚಾರಣೆಯನ್ನ ಮಾಡಬೇಕು. ಶ್ರೀಮಾನ್ ನೆಹರೂರವರು ಪ್ರಧಾನ ಮಂತ್ರಿಯಾಗಿ ಶರಾವತಿ ವ್ಯವಹಾರ ಎಲ್ಲಾ ಸರಿಯಾಗಿ ನಡೆಯುತ್ತಾ ಇದೆ ಎಂದು ಹೇಳತಕ್ಕ ಸರ್ಟಿಫಿಕೇಟನ್ನು ನಾನು ಒಪ್ಪುವುದಿಲ್ಲ. ಇದರ ಬಗ್ಗೆ ಅವರು ಸರ್ಟಿಫಿಕೇಟ್ ಕೊಟ್ಟು ಈ ವ್ಯವಹಾರದಲ್ಲಿ ಏನು ಕೆಡುತ್ತಾ ಇಲ್ಲ ಎಂದು ಹೇಳಿದರೆ ಈ ದೇಶದಲ್ಲಿ ಒಪ್ಪತಕ್ಕವರು ಯಾರೂ ಇಲ್ಲ. ಇದರ ಬಗ್ಗೆ ವಿಚಾರಣೆ ಆಗಬೇಕು, ನ್ಯಾಯಾಂಗ ವಿಚಾರಣೆಯಾಗಬೇಕು. 25ಕೋಟಿ ರೂಪಾಯಿನ ಈ ಒಂದು ಪ್ರಾಜೆಕ್ಟು ಇವತ್ತು ಎಲ್ಲರೂ ಹೇಳುತ್ತಾರೆ ಇದು ನೂರುಕೋಟಿ ರೂಪಾಯಿ ಅಗಬಹುದು ಎಂದು ಇದು ಹೇಗೆ ನೂರುಕೋಟಿ ರೂಪಾಯಿ ಆಯಿತು ? ಏಕೆ ಆಗಬೇಕು ? ಇಷ್ಟು ವಿಳಂಬ ಏಕೆ ಆಯಿತು ? ಇಷ್ಟು ಜನ ದೊಡ್ಡ ದೊಡ್ಡ ಕಂಟ್ರ್ಯಾಕ್ಟರುಗಳಿಗೆ ಯಾವ ರೀತಿ ಕಂಟ್ರ್ಯಾಕ್ಟ್ ಕೊಡಲಾಯಿತು, ಕೊಟ್ಟಾದಮೇಲೆ ತಾರಾ ಪೂರ ಅವರಿಗೆ ಅವರು ಹೇಳಿದ ರೇಟಿಗಿಂತ ಎಂದರೆ 70 ರೂಪಾಯಿ ಇದ್ದದ್ದನ್ನು 140 ರೂಪಾಯಿನಂತೆ ಹೇಗೆ ಕೊಟ್ಟಿರಿ ? ಇವೆಲ್ಲಾ ಊಹಾಪೋಹ, ಕಥೆ ಮಾತಲ್ಲ, ನಾವು ಹುಟ್ಟಿಸಿ ಹೇಳಿದ್ದಲ್ಲ ನೀವು ಮಾಡಿದ್ದು, ನಿಮ್ಮ ಅಧಿಕಾರಿಗಳು ಮಾಡುತ್ತಾ ಇರುವುದು, ನೀವು ಖಜಾನೆಯಿಂದ ಹಣವನ್ನು ಪ್ರತಿದಿವಸ ಕೊಡುತ್ತಾ ಇರುವುದು ಆದ್ದರಿಂದ ಹಿಂದಿನ ಸಲವೂ ಹೇಳಿದೆ ನಿಜಲಿಂಗಪ್ಪನವರು ಯಾವ ವ್ಯಾಮೋಹವೂ ಇಲ್ಲದೇ ಯಾವ ದಾಕ್ಷಿಣ್ಯವೂ ಇಲ್ಲದೆ, ಯಾವ ಮುಲಾಜೂ ಇಲ್ಲದೇ ಈ ಕಾಂಗಾರಿ ವಿಷಯದಲ್ಲಿ ವಿಚಾರಣೆಯನ್ನು ಏರ್ಪಡಿಸಿ ಸಾರ್ವಜನಿಕರ ಮುಂದೆ ಇಟ್ಟು ಅವರ ಮೇಲೆ ಹೊರಿಸಿರತಕ್ಕ ಅಪಾದನೆಗಳನ್ನು ತೊಳೆದುಕೊಳ್ಳಬೇಕು, ತಮ್ಮ ಹಿತದೃಷ್ಟಿಯಿಂದ ಮತ್ತು ದೇಶದ ಹಿತದೃಷ್ಟಿಯಿಂದ ಎಂದು ನಾನು ಅವತ್ತೇ ಹೇಳಿದೆ. ಅದಕ್ಕೆ ಅವರು ನಾನು ಫ್ಲೈಟ್ ತರಿಸಿಕೊಂಡು ನೋಡುತ್ತೇನೆ ಎಂದರು ನಿಜಲಿಂಗಪ್ಪನವರ ಅರ್ಥ ಏನು ? ಶಿವಮೊಗ್ಗಾದಲ್ಲಿ ಅಣೆಕಟ್ಟು ಬಹಳ ಚೆನ್ನಾಗಿದೆ ಎಂದು ಹೇಳಿದರೆ ನನಗೆ ನಿಜಲಿಂಗಪ್ಪನವರಿಗೆ ಅರ್ಥವಾಗತಕ್ಕ ಅಣೆಕಟ್ಟು ಅದಲ್ಲ, ಯಾರೋ ಹೇಳುತ್ತಾ ಇದ್ದರು ಶರಾವತಿಗೆ ಕಳುಹಿಸಿದ ಸಿಮೆಂಟು ಗೋವಾದಲ್ಲಿ ಮಾರಾಟವಾಗುತ್ತಾ ಇತ್ತು, ಬೆಂಗಳೂರಿನಲ್ಲಿ ಮನೆಗಳಿಗೆ ಉಪಯೋಗವಾಗುತ್ತಾ ಇವೆ ಎಂದು. ಶರಾವತಿಯಲ್ಲಿ ಉಪಯೋಗವಾಗಬೇಕಾದ ಕಬ್ಬಿಣ ದೇಶದಲ್ಲಿ ಎಲ್ಲೆಲ್ಲಿಗೆ ಹೋಗಿದೆ ಎಂಬುದನ್ನು ನೋಡಿದ್ದೀರೇನು ? ಇದು ನಮಗೂ ಅರ್ಥವಾಗುವುದಿಲ್ಲ ನಿಮಗೂ ಅರ್ಥವಾಗುವುದಿಲ್ಲ ಆದ್ದರಿಂದ ಈ ವಿಷಯದಲ್ಲಿ ಯಾವಾಗಲೂ ಬಾಯಿಬಡಿದು, ಮುಸುಕನ್ನು ಎಳೆದು ಪ್ರಧಾನಿಯವರಿಂದ ಸರ್ಟಿಫಿಕೇಟ್ ಪಡೆದುಕೊಳ್ಳತಕ್ಕ ವ್ಯವಹಾರವನ್ನು ಖಂಡಿತ ಮಾಡಕೂಡದು, ಈ ವ್ಯವಹಾರದ ಬಗ್ಗೆ ವಿಚಾರಣೆ ನಡೆಯಲೇಬೇಕು ಎಂದು ಹೇಳಿ ನಾನು ಈ ಸಭೆಯಲ್ಲಿ ಒತ್ತಾಯಪೂರ್ವಕವಾಗಿ ತಮ್ಮನ್ನು ಕೇಳಿಕೊಳ್ಳುತ್ತಾ ಇದ್ದೇನೆ.

ಇನ್ನು ವಿದ್ಯುಚ್ಛಕ್ತಿ ಬೋರ್ಡಿನ ವಿಷಯ, ಅದಕ್ಕೇ ಪ್ರಾರಂಭದಲ್ಲೇ ಅಧ್ಯಕ್ಷರನ್ನು ಕೇಳಿದೆ ಅಧ್ಯಕ್ಷರು ನಮಗೆ ನಿರ್ವಿಕಾರದಿಂದ ಅವಕಾಶಗಳನ್ನು ಕೊಡಬೇಕು ಈ ಮಾನ್ಯ ಸಭೆಯ ಸದಸ್ಯರಾದ ನಾವು ತಮಗೆ ಅವಮಾನ ಮಾಡಬೇಕೆನ್ನುವ ಉದ್ದೇಶದಿಂದ ಹೇಳುತ್ತಾ ಇಲ್ಲ.

Mr. SPEAKER—We shall see about it.

ಶ್ರೀ ಎಸ್. ಗೋಪಾಲ ಗೌಡ.—ನನ್ನ ಮುಂದಿನ ವಾಕ್ಯವನ್ನು ಕೇಳಿ ಈ ವಿದ್ಯುಚ್ಛಕ್ತಿ ಬೋರ್ಡು, ಬಹಳ ದೊಡ್ಡ ಬೋರ್ಡು, ದೊಡ್ಡ ಜವಾಬ್ದಾರಿ ಇದೆ, ವಿದ್ಯುಚ್ಛಕ್ತಿ ದೇಶಕ್ಕೆ ಬಹಳ ಅವಶ್ಯಕವಾಗಿ ಬೇಕಾದದ್ದು ಅದರ ಆಡಳಿತ ಚೆನ್ನಾಗಿ ನಡೆಯಬೇಕಾದ್ದು ಮುಖ್ಯ ಎಂದು 25 ಕೋಟಿ ರೂಪಾಯಿ ಆಸ್ತಿಯನ್ನು ಕೊಟ್ಟಿದ್ದೇವೆ, ಸಾಲಗಳನ್ನು ಕೊಟ್ಟಿದ್ದೇವೆ, ಅವರು ಆ ಹಣವನ್ನು ಎರಡು ಖಾಸಗಿ ಬ್ಯಾಂಕುಗಳಲ್ಲಿ ಇಟ್ಟಿದ್ದಾರೆ.

ಇಬ್ಬರು ಖಾಸಗೀ ಮುಖಂಡರು ಇದರಲ್ಲಿದ್ದಾರೆ. ಈ ಇಬ್ಬರು ಇದರಲ್ಲಿ ಸದಸ್ಯರಾಗಿದ್ದುಕೊಂಡು ಇವರು ಬೇರೆ ಖಾಸಗೀ ದೊಡ್ಡ ಉದ್ಯಮಗಳಲ್ಲಿ ವಿಶೇಷ ಹಣವನ್ನು ಹಾಕಿ ಅವುಗಳನ್ನೂ ಇವರು ಖಾಸಗಿಯಾಗಿ ನಡೆಸುತ್ತಿದ್ದಾರೆ. ಇಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆಯುತ್ತದೆ. ಎಲ್ಲಿ ಏನು ವ್ಯತ್ಯಾಸವಾಯಿತು ಎಂಬುದು ಸಾಮಾನ್ಯ ಜನರಿಗೆ ಬೇಗ ಗೊತ್ತಾಗುವುದಿಲ್ಲ. ಇದನ್ನು ಹೇಳೋಣ ಎಂದರೆ ಏನೇನೋ ಹೇಳಿ ಇವರು ನಮ್ಮ ಬಾಯನ್ನು ಮುಚ್ಚಿಸಿಬಿಡುತ್ತಾರೆ.

Mr. SPEAKER.—What does Sri Gopala Gowda mean by saying that his mouth was shut? He has got the Government in his mind and he says "ತಾವು". (*Laughter*)

5-30 P.M.

ಶ್ರೀ ಎಸ್. ಗೋಪಾಲ ಗೌಡ.—ನಾನು ಹೇಳಿದ್ದು ತಮಗಲ್ಲ, ತಾವಲ್ಲ, ಸರ್ಕಾರದವರು ಹೀಗೆ ನಮ್ಮ ಬಾಯನ್ನು ಮುಚ್ಚಿಸುತ್ತಾರೆಂದು ಹೇಳಿದೆನು. ಹೀಗೆ ಈ ವಿದ್ಯುಚ್ಛಕ್ತಿ ಬೋರ್ಡಿನಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಇರುವುದಲ್ಲ ಶ್ರೀ ಮಣಿಲಾಲ್ ನಾಯ್ಕರು ಇರುವುದು ಸರಿ ಎಂಬುದಾಗಿ ಶ್ರೀ ಶ್ರೀನಿವಾಸ ನಾಯ್ಕರು ಅವರನ್ನು ಡಿಫೆಂಡ್ ಮಾಡಿಕೊಳ್ಳುತ್ತಾರೆ. ಇವರು ಇಲ್ಲಿಯೂ ಭಾಷಣ ಮಾಡುತ್ತಾರೆ, ಅಲ್ಲಿಯೂ ಅಧ್ಯಕ್ಷರಾಗಿ ಕುಳಿತುಕೊಳ್ಳುತ್ತಾರೆ. ಹೀಗೆ ಇಲ್ಲಿಯ ವ್ಯವಹಾರ ಒಂದು ಸಂದಿಗ್ಧಪರಿಸ್ಥಿತಿಯಲ್ಲಿ, ಒಂದು ವಿಪರ್ಯಾಸರೀತಿಯಲ್ಲಿ ನಡೆಯುತ್ತಿದೆ.

Mr. SPEAKER.—Was the member speaking at the time Sri Srinivas Naik was in the Chair? Or, anybody else came and told him about it?

ಶ್ರೀ ಎಸ್. ಗೋಪಾಲ ಗೌಡ.—ಇದರಲ್ಲಿ ಅವರು ಹಾಗೆ ಡಿಫೆಂಡ್ ಮಾಡಿದ್ದಾರೆ. ಇದರಿಂದ ಶ್ರೀ ನಿಜಲಿಂಗಪ್ಪನವರಿಗೆ ಒಂದು ಸಮಾಧಾನವಾಗಿರಬಹುದು. ಆದರೆ ಇದೇನೂ ಅಂಥ ಒಂದು ಒಳ್ಳೇ ಡಿಫೆನ್ಸ್ ಅಲ್ಲ ಎಂದು ಹೇಳುತ್ತೇನೆ. ಈ ವಿಚಾರದಲ್ಲಿ ಸರ್ಕಾರದವರು ಪ್ರೋಬ್ ಮಾಡಿ ಒಳಹೊಕ್ಕು ನೋಡಬೇಕು, ಎಲ್ಲೆಲ್ಲಿ ಏನೇನಾಗಿದೆ ಎಂಬುದರಬಗ್ಗೆ ದೇಶ ಒಪ್ಪುವಂತೆ ಅದರಲ್ಲಿ ಹಣ ಹಾಕಿರತಕ್ಕವರು ಒಪ್ಪುವಂತೆ ಒಂದು ಸಮರ್ಪಕವಾದ ಸಮಜಾಯಿಷಿಯನ್ನು ಸರ್ಕಾರ ನೀಡಬೇಕು. ಈ ವಿಚಾರದಲ್ಲಿ ಇದೇ ಸಭೆಯಲ್ಲಿ ಪ್ರಶ್ನೋತ್ತರದ ಕಾಲದಲ್ಲಿ ಶ್ರೀ ಆರ್. ಕೆ. ಪ್ರಸಾದರವರು ಆ ಮಂಡಲಿಯಲ್ಲಿ ಇಂಥ ಕೆಲವು ವ್ಯಕ್ತಿಗಳಿರುವುದರಿಂದ ಸಾರ್ವಜನಿಕರು ಇದರಲ್ಲಿ ಹಣ ಹಾಕುವುದಕ್ಕೆ ಹೆದರುತ್ತಿದ್ದಾರೆಂದು ಆ ಕಾಂಗ್ರೆಸ್ ಪಕ್ಷದ ಸದಸ್ಯರೇ ಹೇಳಿದ್ದಾರೆ. ಇಂಥ ಒಂದು ಕಾರ್ಪೊರೇಷನ್ನಿನ ವಿಚಾರದಲ್ಲಿ ಇಂಥ ಅಧ್ವಾನ್ನಗಳಾಗ ಬಾರದು. ಆ ಮಂಡಲಿಯಲ್ಲಿ ಇಂಥವರು ಇರುವುದಕ್ಕೆ ಸರ್ಕಾರ ಖಂಡಿತ ರಕ್ಷಣೆ ಕೊಡಬಾರದು. ವಿರೋಧ ಪಕ್ಷದವರು ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದು ಎಷ್ಟೋ ದಿವಸಗಳಾಯಿತು. ಆದರೂ ಸರ್ಕಾರ ಈ ಬಗ್ಗೆ ಸಾಕಷ್ಟು ನಿಗಕೊಟ್ಟಿಲ್ಲ. ವಿರೋಧ ಪಕ್ಷದವರ ಮಾತಿಗೆ ಈ ಸಭೆಯಲ್ಲಿ ಮರ್ಯಾದೆಯಿಲ್ಲ. ಇಂಥ ಗಂಭೀರ ಪರಿಸ್ಥಿತಿಯಲ್ಲಿರತಕ್ಕ ಅಪಾದನೆಗಳನ್ನು ನಾವು ಸರ್ಕಾರದ ಗಮನಕ್ಕೆ ತಂದರೆ ಇದಕ್ಕೆ ಏನು ಸಮಜಾಯಿಷಿ ಎಂದರೆ ಶ್ರೀಮತಿ ನಾಗರತ್ನಮ್ಮನವರಂಥ ಸದಸ್ಯರು ಯಾವುದೋ ಒಂದು ಕಾಗೆ ಗುಬ್ಬಿ ಕಥೆ ಹೇಳುವಂಥ ಅಗತ್ಯವಿಲ್ಲ; ಇಂಥ ನೀತಿಯನ್ನು ಆಡಳಿತ ಪಕ್ಷ ಅದೆಷ್ಟು ಜಾಗ್ರತೆ ತೋರದು ಅಲ್ಲಿ ನಡೆಯುತಕ್ಕ ಅನ್ಯಾಯಗಳನ್ನು ಕೂಡಲೇ ತಡೆಗಟ್ಟಬೇಕು. ಹಾಗಿಲ್ಲವಾದರೆ ಮುಂದೆ ಇತಿಹಾಸಕಾರರು ಈ ಅವಿವೇಕವನ್ನೆಲ್ಲ ಬರೆದಿಡಬೇಕಾದ ಸಂದರ್ಭ ಬರುತ್ತದೆ. ಈ ದಿವಸ ಈ ಮಾನ್ಯ ಸಭೆಯಲ್ಲಿ ಕುಳಿತಿರತಕ್ಕ ಸದಸ್ಯರೆಲ್ಲರೂ ಬಹಳ ಜವಾಬ್ದಾರಿಯನ್ನು ಹೊತ್ತಂಥ ಸದಸ್ಯರಾಗಿದ್ದಾರೆ. ಹಾಗಿರುವಾಗ ಇಂಥ ಒಂದು ದೊಡ್ಡ ದೇಶದ ಆಡಳಿತ ಜವಾಬ್ದಾರಿಯನ್ನು ಹೊತ್ತಿರುವಂಥ ಶ್ರೀ ನಿಜಲಿಂಗಪ್ಪನವರ ಹಾಗೂ ಅವರ ಅನುಯಾಯಿಗಳ ಜವಾಬ್ದಾರಿ ಬಹಳ ಗುರುತರವಾದುದ್ದಾಗಿದೆ. ಅವರ ಬಾಯಿಂದ ಹೊರಡತಕ್ಕ ಪ್ರತಿಯೊಂದು ಶಬ್ದಗಳೂ ಬಹಳ ಪವಿತ್ರವಾದವುಗಳಾಗಿರುತ್ತವೆ. ಜನ ಯಾವ ಯಾವ ಬಾಯಿನಲ್ಲಿ ಯಾರ ಯಾರ ಬಾಯಿನಲ್ಲಿ ಏನೇನು ಶಬ್ದಗಳು ಬರುತ್ತವೋ ಎಂದು ಕಾದಿರುತ್ತಾರೆ. ಹಾಗಿರುವಾಗ ಶ್ರೀ ಮರ್ಾ ಕೃಷ್ಣಪ್ಪನವರ ಹಾಗೆ ಏನೋ ತೆಕ್ಕೆ ಹೆಚ್ಚು ಕಡಿಮೆ 80 ಲಕ್ಷ ಎನ್ನುವ ಕಡೆ 80 ಕೋಟಿ ಎಂದು ಹೇಳಿಬಿಡತಕ್ಕದ್ದು ಸರಿಯಾದ್ದಲ್ಲ. ಮಂತ್ರಿಗಳ ಬಾಯಲ್ಲಿ ಆ ರೀತಿ ಹೆಚ್ಚುಕಡಿಮೆ ಮಾತುಗಳು ಬರುವುದು ಸರಿಯಲ್ಲ. ನನ್ನಂಥ ಒಬ್ಬ ಸಾಮಾನ್ಯ ಸದಸ್ಯನಾದರೆ ಏನೋ ಹೋಗಲಿ ಎಂದು ಸುಮ್ಮನಾಗಬಹುದು. ನಾನು ಸ್ವಲ್ಪ ಹೆಚ್ಚು ಕಡಿಮೆ ಹೇಳಿದರೂ ಹೇಳಬಹುದು. ಆದರೆ ಸರ್ಕಾರದವರಾಡತಕ್ಕ ಮಾತು ಬಹಳ ತೂಕವಾಗಿರಬೇಕು. ಇಲ್ಲವಾದರೆ ಶ್ರೀಮರ್ಾ ಕಂಠಿಯವರು ಮಾತನಾಡಿದ ಹಾಗೆ ಆಗುತ್ತದೆ. ಶ್ರೀಮರ್ಾ ಮುಕ್ಕಣ್ಣಪ್ಪನವರು ಈ ವಿದ್ಯಾಖಾತೆಯ ಬಗ್ಗೆ ಹೇಳಿದಂಥ ಒಂದು ವಿಚಾರವೇ ಸಾಕು. ಅವರು ರಾಜೀನಾಮೆ ಕೊಡಲು ಬೇಕಾದಷ್ಟಾಯಿತು. ಕೇವಲ 5 ಗ್ರೇಸ್ ಮಾರ್ಕುಗಳನ್ನು ಕೊಟ್ಟಿದ್ದರೆ ಈಗ ಪಾಸಾಗಿರತಕ್ಕ ವಿದ್ಯಾರ್ಥಿಗಳ ಜೊತೆಗೆ ಇನ್ನು ಸಾವಿರಾರು ಮಂದಿ ಹುಡುಗರು ಪಾಸಾಗುತ್ತಿದ್ದರು. ಇವರಿಗೆ ಆ ಹುಡುಗರ ಮೇಲ್ಯಾಕೆ ಅಷ್ಟು ಆಕ್ರೋಶವೋ ಅದು ಗೊತ್ತಾಗಲಿಲ್ಲ. ಈ ವಿಚಾರದಲ್ಲಿ ಅನೇಕ ಕೇಸುಗಳು ಹೈಕೋರ್ಟಿನ ಮುಂದೆ ಹೋಗಿ ಇವರ ಆಜ್ಞೆಗಳನ್ನು ಅಲ್ಲಗಳೆದಿದ್ದಾರೆ. ಆದಾಗ್ಯೂ ಅವರನ್ನು ಮತ್ತೆ ಪರೀಕ್ಷೆಗೆ ಕುಳಿತು

ಕೊಳ್ಳಬೇಕೆಂದು ಹೇಳಿದ್ದಾರೆ. ಇಷ್ಟು ವಿದ್ಯೆಯ ಮೇಲೆ ಅಭಿಮಾನವಿರತಕ್ಕ ಮಂತ್ರಿಗಳ ಕಾಲದಲ್ಲಿ 15 ಸಾವಿರ ಶಾಲಾ ಚಿಕ್ಕ ಮಕ್ಕಳಿಗೆ ಕುಳಿತುಕೊಳ್ಳಲು ಸ್ಥಳವಿಲ್ಲ, ಅವರಿಗೆ ಶಾಲಾ ಕಟ್ಟಡಗಳಿಲ್ಲ, ಇವರಲ್ಲಿ ದಕ್ಷತೆ ಇಲ್ಲ ಎಂದು ಹೇಳುವುದಕ್ಕೆ ಇದಕ್ಕಿಂತ ನಿದರ್ಶನ ಬೇಕೇ ? ಹೀಗೇ ಶ್ರೀ ಕಬಾಡಿ ಯವರು ಸಹಾ ಹಿಂದುಳಿದ ಪಂಗಡಗಳಿಗೆ ಎಷ್ಟರಮಟ್ಟಿಗೆ ಸಹಾಯ ನೀಡಲಾಗಿದೆ ಎಂಬುದನ್ನು ತಿಳಿಸಿದ್ದಾರೆ. ಹೀಗೆಲ್ಲಾ ಇರುವಾಗ ಇವರು ಆತ್ಮವಂಚನೆ ಮಾಡಿಕೊಂಡು ಇಲ್ಲ ನಮಗೆ ಇಲ್ಲಸಲ್ಲದ ಉತ್ತರಗಳನ್ನು ಹೇಳಿದರೆ ಅದರಿಂದ ಇವರು ದೇಶಕ್ಕೆ ಒಂದು ದೊಡ್ಡ ದ್ರೋಹವನ್ನು ಮಾಡಿದ ಹಾಗೆ ಆಗುತ್ತದೆ. ತಪ್ಪಾಗಿದ್ದರೆ ಅದನ್ನು ಒಪ್ಪಿ ಕೊಳ್ಳೋಣ, ಅದನ್ನು ಸರಿಪಡಿಸೋಣ ಎಂಬ ಒಂದು ಹೊಣೆಗಾರಿಕೆ ಇಲ್ಲದಂಥ ಈ ಸರ್ಕಾರಕ್ಕೆ ಏನೋ ಒಂದು ಇವರಸಂಖ್ಯೆ ಹೆಚ್ಚಾಗಿದೆ ಎಂಬ ಮಾತ್ರಕ್ಕೇ ಇವರಿಗೆ ನಮ್ಮನ್ನು ನಾಯಿಗಳಂತ ಕರೆಯುವ ಧೈರ್ಯ ಇವರಿಗೆ ಬರುತ್ತದೇನು ? ಹೌದು ನಾವೇನೂ ನಿಜವಾಗಿಯೂ ವಾಚ್ ಡಾಗುಗಳೇ. ಇವರು ಬಲದಲ್ಲಿ ಆನೆ ಎಂತ ತಿಳಿದು ಕೊಂಡಿದ್ದರೆ ನಾವು ಇವರಿಗೆ ಒಂದು ಅಂಕುಶ ದೋಪಾದಿಯಲ್ಲಿದ್ದೇವೆ ಎಂದು ಹೇಳುತ್ತೇನೆ. ಈ ಪ್ರಜಾಪ್ರಭುತ್ವಾಡಳಿತ ದಲ್ಲಿ ನಮ್ಮ ಮಾತುಗಳಿಗೆ ಇವರು ಕಿವುಡರಂತೆ ವರ್ತಿಸಿದಲ್ಲಿ ನಾಳೆ ಇವರಿಗೆ ದೇಶದಲ್ಲಿರತಕ್ಕ ಜನತೆ ಪಾಠ ಕಲಿಸುತ್ತೆ ಎಂಬುದನ್ನು. ಇವರು ಮರೆಯಬಾರದು. ಇವರ ಬಾಯಿ ಮಾತಿಗೆ ಹೆದರಿ ಹೋಗತಕ್ಕಂತ ಹೇಡಿಗಳು ಇಲ್ಲ ಯಾರು ಇಲ್ಲ ದೇಶದ ಆಡಳಿತವನ್ನು ಯಾವಾಗಲೂ ಇವರೇ ಆಳಬೇಕೆಂದು ಇದನ್ನು ಇವರಿಗೆ ಯಾರೂ ಜ ಹ ಗೀ ರಿ ಹಾಕಿ ಕೊಟ್ಟಿಲ್ಲ. ಯಾರೇ ಆಗಲೀ ಅವರವರ ಆತ್ಮ ಒಪ್ಪುವಂತೆ ಆಡಳಿತ ನಡಸಬೇಕು ಈಗೇನು 5 ವರ್ಷಕ್ಕೊಮ್ಮೆ ಶಾರ್ವಜನಿಕರ ಮುಂದೆ ನಾವು ಹೋಗಲೇಬೇಕು. ನಮ್ಮಲ್ಲಿರತಕ್ಕ ಮೋಸ ವಂಚನೆಗಳು ಎಷ್ಟು ಕಡಮೆಯಾದರೆ ಅಷ್ಟೂ ನಮಗೆ ಜನರ ವಿಶ್ವಾಸವನ್ನು ಗಳಿಸಲು ಒಂದು ಹಕ್ಕು ಬರುತ್ತದೆ. ಈ ದಿವಸ ನಾನಾದರೂ ಕೇಳುತ್ತೇನೆ ಈ ಕಾಂಗ್ರೆಸ್ ಪಕ್ಷದ ಹಿಂದೆ ದೇಶದ ಜನತೆ ಎಷ್ಟಿದೆ ಎಂದು ? ಇವರ ಹಿಂದೆ ಶೇಕಡ- 50 ರಷ್ಟು ಜನಗಳಿದ್ದಾರೆ ಎಂದರೆ ಅದು ಪೂರ ಹೆಚ್ಚೆ ಆಯಿತು. ಇನ್ನುಳಿದ ಜನರೆಲ್ಲ ಯಾರ ಹಿಂದಿದ್ದಾರೆ ? ದೇಶದಲ್ಲಿ ಜನತೆಯ ಬೆಂಬಲ ನಮಗೂ ಇದೆ. ನಮ್ಮ ಮಾತನ್ನೂ ಸಹಾ ಮಾನ್ಯ ಅಧ್ಯಕ್ಷರು ಲಾಲಿಸಿ ಕೇಳ ಬೇಕು. ವಿರೋಧ ಪಕ್ಷದವರ ಮೇಲೆ ಅವರಿಗೆ ಯಾವಾಗಲೂ ಹೆಚ್ಚಿನ ಕರುಣೆ ಇರಬೇಕು. ನಮ್ಮಲ್ಲಿ ತಪ್ಪಾದಾಗ ಅವರು ನಮಗೆ ಬುದ್ಧಿ ಹೇಳಬೇಕು. ಆವರದು ಒಂದು ದೊಡ್ಡ ಸ್ಥಾನ. ಆದರೆ ನಾನೀಗ ಅಧ್ಯಕ್ಷರಮೂಲಕ ಈ ಸರ್ಕಾರಕ್ಕೆ ತಿಳಿಸುವುದೇನೆಂದರೆ ಶ್ರೀ ಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿರತಕ್ಕ ಮಂತ್ರಿಗಳ ಕೆಲಸ ಕಾರ್ಯಗಳು ಅಷ್ಟು ಸಮರ್ಪಕವಾಗಿಲ್ಲ; ತೃಪ್ತಿಕರವಾಗಿಲ್ಲ, ಅದಕ್ಕಾಗಿ ಮಂತ್ರಿಮಂಡಲವನ್ನು ನಾವು ಕಡಮೆ ಮಾಡಬೇಕೆಂದು ಹೇಳುತ್ತಿದ್ದರೆ ಇವರು ಮತ್ತೆ ಇಬ್ಬರು ಪಾರ್ಲಿಯಮೆಂಟರಿ ಸೆಕ್ರೆಟೆರಿ ಗಳನ್ನು ನೇಮಕ ಮಾಡಿ ಕೊಂಡಿದ್ದಾರೆ.

ಅನೇಕ ದೂರುಗಳು ಬಂದಿವೆ. ಅಂತಹ ಸಾವಿರಾರು ದೂರುಗಳನ್ನು ಬೇಕಾದರೂ ಬರೆದು ಕೊಡಬಲ್ಲೆ. ಅಷ್ಟು ಆಡಳಿತ ಕೆಟ್ಟು ಹೋಗಿದೆ. ನನಗಂತೂ ಇದು ಹೇಗೆ ನಡೆಯುವುದಕ್ಕೆ ಸಾಧ್ಯ ವಿದೆ ಎಂದು ಯೋಚನೆ ಮಾಡಬೇಕಾಗಿದೆ. ಒಂದೇ, ಎರಡೇ ಸರಕಾರಕ್ಕೆ ಹೇಳುವುದಕ್ಕೆ. ಒಂದು ಲೆಜಿಸ್ಲೇಟರ್ಸ್ ಹೋಂನ ಉದಾಹರಣೆಯನ್ನೇ ತೆಗೆದುಕೊಂಡರೆ ಸಾಕು. ಅದು ನನಗೆ ಸೇರಿದ್ದು ಎಂದು ನಮ್ಮ ಅಧ್ಯಕ್ಷರು ಹೇಳುತ್ತಾರೆ. ಹೀಗಿದೆ ಆಡಳಿತ. ಸಾಮಾನ್ಯವಾಗಿ ಒಂದು ಸಣ್ಣ ಟೂರಿಸ್ಟ್ ಹೋಟೆಲನ್ನು ನಡೆಸುತ್ತಿರುವವರನ್ನು ನೋಡಿ; ಎಷ್ಟು ಅಚ್ಚುಕಟ್ಟಾಗಿ, ಎಷ್ಟು ಜನಗಳಿಗಾಗಿ ರೂಮುಗಳು ಇತ್ಯಾದಿಗಳನ್ನೆಲ್ಲಾ ಸರಿಯಾಗಿ ನೋಡಿಕೊಂಡು ಹೋಗುತ್ತಾರೆ. ಇಲ್ಲಿ ನೋಡಿದರೆ ಏನೇನೂ ಇಲ್ಲ. ನಾನು ಇಲ್ಲಿ ಆಪಾದನೆಗಳನ್ನು ಜವಾಬ್ದಾರಿಯಿಂದ ಮಾಡುತ್ತಿದ್ದೇನೆ. ಪಂಚ ವಾರ್ಷಿಕ ಯೋಜನೆಗಳನ್ನು ಮಾಡಿ, ಇಷ್ಟು ಹೊಸ ತೆರಿಗೆಗಳನ್ನು ಜನರ ಮೇಲೆ ಹಾಕಿ. ಅವರು ತಮ್ಮ ದೈನಂದಿನ ಜೀವನವನ್ನು ನಡೆಸಿಕೊಂಡು ಹೋಗುವುದೇ ದುಸ್ತರವಾಗಿದೆ. ಇದರೊಳಗೂ ಹೇಗೋ ತಮ್ಮ ಜೀವನವನ್ನು ನಡೆಸಿಕೊಂಡು ಹೋಗುವುದೇ ಕಷ್ಟ. ಹಾಗೆ ನಡೆಸಿಕೊಂಡು ಹೋಗು ತ್ತಿದ್ದಾರೆ.

ಇನ್ನು ಮೂರಾಣೆ ಆದಾಯ ವಿಷಯ ಹೇಳಿದರು. ನಾನು ಅದರ ಬಗ್ಗೆನೂ ಹೇಳುತ್ತೇನೆ. ೧೮೬೮ರಲ್ಲಿ ಒಬ್ಬ ಮನುಷ್ಯನ ಆದಾಯ ೨೦ ರೂಪಾಯಿಗಳಿತ್ತು ಎಂದು ದಾದಾಭಾಯಿ ನವರೋಜಿ ಯವರು ಒಂದು ಕಡೆ ಹೇಳಿದ್ದಾರೆ. ೧೯೧೧ರಲ್ಲಿ ಆದಾಯ ಒಬ್ಬರದು ೪೯ ರೂಪಾಯಿಗಳಿತ್ತು ೧೯೩೧-೩೨ರಲ್ಲಿ ೬೫ ರೂಪಾಯಿಗಳಿತ್ತು ಎಂದು ಶ್ರೀಮಾನ್ ವಿ. ಕೆ. ಆರ್. ವಿ. ರಾವ್. ಹೇಳಿ ದ್ದಾರೆ. ಹಾಗೇ ಇದು ೪೨-೪೩ರಲ್ಲಿ ೧೧೪ಕ್ಕೆ ಏರಿತು. ೪೭-೪೮ರಲ್ಲಿ ೨೨೭ ಎಂದು ಇದ್ದದ್ದು ಈಗ ೨೯೧ಕ್ಕೆ ಏರಿ ೩೧೮ ರವರೆಗೆ ಆಗಿದೆ ಎಂದು ವಿವರಗಳಿವೆ. ನೀವು ಬಡವರ, ಮಧ್ಯಮ ವರ್ಗದ ಜನರ ಆದಾಯ ಎಷ್ಟು ಹೆಚ್ಚಾಗಿದೆ ಎನ್ನುವುದನ್ನು ಕೊಡಬಲ್ಲಿರೇನು ? ಹಿಂದೆ ಬಡವನಾದವ ಒಬ್ಬ ಒಂದು ಸಂಸಾರದ ಆದಾಯ ಒಂದು ರೂಪಾಯಿ ಇದ್ದಾಗ ಅವರು ಐದು ಜನ ಜೀವನ ಮಾಡುತ್ತಿದ್ದರು.

(ಶ್ರೀ ಎಸ್. ಗೋಪಾಲಗೌಡ)

ನಮ್ಮ ಮಾನ್ಯ ಗೃಹ ಸಚಿವರು ಹೇಳಬಹುದು. ನಾನೂ ಅವರೂ ಸೇದುವ ಸಿಗರೇಟು ಪ್ಯಾಕಿನ ಬೆಲೆ ಒಂದು, ಒಂದೂಕಾಲ ರೂಪಾಯಿಗಳಾಗಿರಬಹುದು. ಅದು ಬೇರೆ ಮಾತು. ಆದರೆ ಬಡ ಜನಾಂದರೆ ರೈತರು ಎಂದು ಏನಿದ್ದಾರೆ ಅವರು ಎಷ್ಟು ನಷ್ಟಕ್ಕೊಳಗಾಗಿದ್ದಾರೆ ಎನ್ನುವುದನ್ನೇನಾದರೂ ಸರಕಾರ ತುಲನ ಮಾಡಿ ಅವರ ಸ್ಥಿತಿ ಎಷ್ಟುಮಟ್ಟಿಗೆ ಉತ್ತಮ ಮಾಡಿದ್ದೇವೆ ಎನ್ನುವುದನ್ನು ಹೇಳಿದ್ದಾರೆಯೇ? ಪರಿಸ್ಥಿತಿ ಹಾಗಿತ್ತು ಎಂದು ಇಲ್ಲಿ ಮಾತನಾಡಬಹುದು. ಇಲ್ಲಿ ಹಿಂದೆ ಮೂರು ದಿನಗಳ ಕಾಲ ''ಅಭಾವ ಪರಿಸ್ಥಿತಿ''ಯ ಬಗೆಗೆ ದೀರ್ಘವಾಗಿ ಚರ್ಚೆಮಾಡಿದೆವು. ಈಗ ಕೆಲವು ಕಡೆ ದೇಶದಲ್ಲಿ ಆಹಾರ ಬೆಳೆಯುವ ಭೂಮಿ ಒಣಗಿ ಹೋಗಿ ಅಲ್ಲಿ ಕೆಲಸ ಮಾಡುತ್ತಿದ್ದ ಜನ ಗಂಟು ಕಟ್ಟಿಕೊಂಡು ರಸ್ತೆ ಕೆಲಸ ಮಾಡಲು ಹೋಗುತ್ತಿದ್ದಾರೆ. ಇದಕ್ಕಿಂತ ಕೆಟ್ಟ ಪರಿಸ್ಥಿತಿ ಬೇಕೇ ನಿಮಗೆ ವಿಧಾನ ಸೌಧದ ಮುಂದೆ ಹೆಣಗಳು ಸತ್ತು ಬಿದ್ದ ಮೇಲೆ ನಿಮಗೆ ಪರಿಸ್ಥಿತಿ ಗೊತ್ತಾಗುತ್ತದೆ ಎಂದು ಶ್ರೀಮಾನ್ ಲಕ್ಕಪ್ಪನವರು ಹೇಳಿದ ಹಾಗೆ ಆಗಬೇಕೇನು? ಇವೊತ್ತು ಆಹಾರದ ದಾಸ್ತಾನಿನಲ್ಲಿ ಸುಮಾರು ೨೦ ಲಕ್ಷ ಟನ್ನಿನಷ್ಟು ಆಹಾರದ ಕೊರತೆ ಬಂದಿದೆ. ಇದಕ್ಕೆ ಕಾರಣ ಎಕ್ಸ್‌ಪೋರ್ಟು ಮಾಡದಿದ್ದರೆ ಸರಿಯಾಗಿರುತ್ತಿತ್ತು ಎಂದು ಹೇಳಿದರು. ಎಕ್ಸ್‌ಪೋರ್ಟುಗಳನ್ನೂ ಮಾಡಬೇಕು, ಬೆಲೆಗಳನ್ನು ಸ್ಥಿರೀಕರಿಸಬೇಕು. ಬೆಲೆ ಏರುತ್ತಾ ಹೋಗಿದೆ ಎಂದು ಹೇಳುವುದಕ್ಕೆ ನಾವಿರುವುದು. ಅದಕ್ಕಾಗಿ ನಿಮ್ಮನ್ನು ಸರಕಾರದಲ್ಲಿ ಆಡಳಿತ ಮಾಡಲು ಕೂರಿಸಿರುವಾಗ ಅದನ್ನು ಏರಿಸುವುದು ತಪ್ಪು ಎಂದು ಸ್ಥಿರೀಕರಿಸಬೇಕಾದ್ದು ನಿಮ್ಮ ಕರ್ತವ್ಯ. ಇದಕ್ಕೆ ತಕ್ಕ ಕಾನೂನನ್ನು ಮಾಡಿ ಆದರ ಅನುಭವಗಳನ್ನು ತಿಳಿದು ಇದರ ಬಗ್ಗೆ ಸೂಕ್ತವಾದ ಕೆಲಸಗಳನ್ನು ಮಾಡುವುದಕ್ಕೆ ಎಂದೇ ಜನ ನಿಮ್ಮನ್ನು ಅಧಿಕಾರದಲ್ಲಿ ಕೂರಿಸಿರುವುದು. ನಾವು ಹೇಳುವ ಆಪಾದನೆಗಳಲ್ಲಿ ಹುರುಳಿಲ್ಲ, ಕ್ಷುಲ್ಲಕವಾದವುಗಳು ಎನ್ನುವುದನ್ನು ಬದಿಗಿಟ್ಟು ತಾವೇ ತಾವಾಗಿ ಮಂತ್ರಿ ಮಂಡಲವನ್ನು ನಡೆಸಿಕೊಂಡು ಹೋಗುವುದಾದರೆ ದೇಶಕ್ಕೆ ಅಪಾರವಾದ ಹಾನಿಯುಂಟಾಗುತ್ತದೆ. ಮುಂದೆ ಇನ್ನೂ ಕೆಟ್ಟು ಹೋಗಿ, ಇದನ್ನು ತಡೆಗಟ್ಟುವುದಕ್ಕೆ ಪರಿಹಾರವೂ ಇದೆ. ಖಂಡಿತವಾಗಿ ಅದನ್ನು ಹೇಳುವುದಕ್ಕೆ ದೂರವೇನಿಲ್ಲ. ಈಗ್ಗೆ ಎರಡು ದಿವಸಗಳಿಂದ ಮಾನ್ಯ ಸದಸ್ಯರು ಏನೇನು ಆಪಾದನೆಗಳನ್ನು ಮಾಡಿದ್ದಾರೆ ಆ ಆಪಾದನೆಗಳಿಗೆಲ್ಲಾ ಉತ್ತರ ಕೊಡಬೇಕು. ಶರಾವತಿ ಯೋಜನೆ ಬಗ್ಗೆ, ಖಾದಿ ಬೋರ್ಡಿನ ವ್ಯವಹಾರದ ಬಗ್ಗೆ, ಎಲೆಕ್ಟ್ರಿಸಿಟಿ ಬೋರ್ಡಿನ ವ್ಯವಹಾರದ ಬಗ್ಗೆ, ರಸ್ತೆಸಾರಿಗೆ ಬಗ್ಗೆ ಮತ್ತು ಫೈನಾನ್ಸ್ ಕಾರ್ಪೊರೇಷನ್ನಿನ ಬಗ್ಗೆ ಈ ಐದು ವಿಚಾರಗಳ ಬಗೆಗೂ ಕೂಲಂಕಷವಾಗಿ ವಿಚಾರ ಮಾಡಬೇಕು. ಈ ವಿಚಾರಗಳಲ್ಲಿ ಏನೇನು ನಡೆದಿವೆ ಅವನ್ನೆಲ್ಲಾ ಜನತೆಯ ಮುಂದಿಟ್ಟು ಸ್ಥಿರೀಕರಿಸಬೇಕು.

ಸಹಕಾರ ಇಲಾಖೆಯ ಬಗ್ಗೆ ಕೂಡ ದುರುಪಯೋಗ ನಡೆದಿದೆ ಎಂದು ಹೇಳುವಾಗ ಅದನ್ನು ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಹೆಗ್ಗಡೆಯವರು ತಮ್ಮ ಕಣ್ಣು ಬಿಟ್ಟು ನೋಡಬೇಕು. ತನ್ನ ಪಕ್ಷದ ಅನುಕೂಲಕ್ಕೋಸ್ಕರ ಮಾಡುವುದು ಸಾಧುವಲ್ಲ. ಯಾರೇ ಆಗಿರಲಿ, ಕಾಂಗ್ರೆಸ್ಸು ಪಕ್ಷದವರಾಗಿರಲಿ, ಇತರರೇ ಆಗಿರಲಿ ಅವರೂ ಕೂಡ ಬುದ್ಧಿವಂತರಾಗಿರುವವರು ಇದ್ದಾರೆ ಎಂದು ತಿಳಿಸುತ್ತೇನೆ. ನೀವು ಹೇಳುವುದನ್ನೆಲ್ಲಾ ಕೇಳುತ್ತಾರೆ ಎಂದು ಭಾವಿಸಬೇಡಿ. ಹಾಗೇ ಬಹಳ ದೂರ ಹೋಗುತ್ತದೆ. ನೀವು ಸ್ವಲ್ಪ ದೇಶದಲ್ಲಿ ಕಾಂಗ್ರೆಸ್‌ನವರಲ್ಲದೆ ಹೊರಗಡೆಯೂ ಜನರಿದ್ದಾರೆ ಎಂದು ತಿಳಿದು ಕೊಳ್ಳಬೇಕು. ಹಾಗೇ Rule of Law ಎಂದು ಏನು ಪುಸ್ತಕಗಳಿವೆ, ಕಾಯಿದೆಗಳಿವೆ ಅವುಗಳನ್ನೆಲ್ಲಾ ಗಮನಿಸಿ ವಾಸ್ತವವಾದ ಗೌರವವನ್ನು ಕೊಟ್ಟು ನೀವು ಸರಕಾರವನ್ನು ನಡೆಸಿಕೊಂಡು ಹೋಗಬೇಕು. ಆದುದರಿಂದ, ನೀವು ನಾವು ಹೇಳಿದ್ದುದನ್ನೆಲ್ಲಾ ಕೇಳಬೇಕು. ಕಾಲ ಕಡಿಮೆ ಇರುವುದರಿಂದ ಇನ್ನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮಂತ್ರಿಗಳಾದ ಶ್ರೀಮಾನ್ ದಯಾನಂದಸಾಗರ್ ರವರ ಬಗ್ಗೆ ಹೇಳಬೇಕಾದರೆ ಸಾಕಷ್ಟು ಅಂಕಿ ಅಂಶಗಳು ನನ್ನಲ್ಲಿವೆ. ಬೇಕಾದರೆ ಕಳುಹಿಸಿ ಕೊಡುತ್ತೇನೆ.

(*Interruption*)

ಕೊನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಎಲ್ಲ ಆಪಾದನೆಗಳನ್ನು ಕೇಳಿದಮೇಲೆ ತಮ್ಮ ಮಂತ್ರಿ ಮಂಡಲದವರು ರಾಜೀನಾಮೆ ಕೊಡುತ್ತಾರೋ ಬಿಡುತ್ತಾರೋ ಅಥವಾ ಬೇರೆ ಮಂತ್ರಿ ಮಂಡಲವನ್ನು ಆರಿಸಿಕೊಂಡು ಬರುತ್ತಾರೋ ಅದು ಬೇರೆ ಮಾತು. ಎಲ್ಲ ಆಪಾದನೆಗಳಿಗೂ ಸಮಂಜಸವಾಗಿ ಉತ್ತರ ಕೊಟ್ಟು ಸರಕಾರದಲ್ಲಿ ಆಡಳಿತವನ್ನು ಮುಂದೆ ಸರಿಪಡಿಸಿಕೊಂಡು ಹೋಗುತ್ತಾರೆ ಎಂದು ನಾನು ಹೇಳುವುದಕ್ಕಾಗುವುದಿಲ್ಲ. ಹಾಗೆ ಮಾಡುವ ಸ್ಥಿತಿಯಲ್ಲಿಲ್ಲ. ಆದರೂ ವಾಸ್ತವವಾದ ವಿಷಯಗಳಿಗೆ ಸೂಕ್ತ ಗಮನ ಕೊಟ್ಟು ಸೂಕ್ತವಾದ ಮತ್ತು ಸಮಂಜಸವಾದ ಉತ್ತರಗಳನ್ನು ಈ ಸಭೆಗೆ ಮತ್ತು ಹೊರಗಿರತಕ್ಕ ಜನತೆಗೆ ಕೊಟ್ಟು

ಸರಕಾರ ನಡೆಸಿಕೊಂಡು ಹೋಗುತ್ತಾರೆಂದು ಭಾವಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು II).—ಮಾನ್ಯ ಅಧ್ಯಕ್ಷರೇ, ಈ ಅವಿಶ್ವಾಸದ ಠರಾವನ್ನು ನಾನು ಸಮರ್ಥಿಸಿ ಒಂದೆರಡು ವಿಷಯಗಳನ್ನು ನಿಮ್ಮ ಮುಂದೆ ಇಡಲಿಕ್ಕೆ ಪ್ರಯತ್ನಿಸುತ್ತೇನೆ. ಈ ನಿಮ್ಮ ಸರಕಾರ ಒಂದು ಪಾರ್ಟಿಯ ಸರಕಾರ. ಆ ಪಾರ್ಟಿಯ ಒಂದು ಕಾರ್ಯಕ್ರಮವಿದೆ. ಆ ಕಾರ್ಯಕ್ರಮವನ್ನು ಹೊಂದಿಕೊಂಡು ಈ ಸರಕಾರ ಅದರ ಕಾರ್ಯವನ್ನು ಮಾಡಿಕೊಂಡು ಹೋಗಬೇಕು. ಇಷ್ಟರವರೆಗೆ ಮಾತನಾಡುತ್ತ ಆಡಳಿತ ಪಕ್ಷದ ಮೆಂಬರುಗಳು ನಮ್ಮ ಕಾರ್ಯಕ್ರಮ ಮಾಡಲು ನಮ್ಮ ಮ್ಯಾನಿಫೆಸ್ಟೋ ಇದೆ. ಅದರ ಪ್ರಕಾರ ಇಂತಹುದನ್ನು ಸಾಧಿಸಲಿಕ್ಕೆ ಇದೆ ಎಂದು ವಿಧಾಯಕ ಮಾಡಿದ್ದಾರೆ ಎಂದು ಹೇಳಿದರೇ ಹೊರತು ಎಷ್ಟು ಆಹಾರದ ದವಸಗಳನ್ನು ಉತ್ಪತ್ತಿಮಾಡಿ ಜನತೆಗೆ ಎಷ್ಟು ಉಪಯೋಗ ಮಾಡಿದ್ದೇವೆ ಎಂದು ಹೇಳುವ ಒಂದು ಮಾತನ್ನು ಯಾರೂ ಹೇಳಲಿಲ್ಲ. ಇದು ಅವರಿಂದ ಬರಬೇಕಾದ ಒಂದು ನಿಜವಾದ ಮಾತು. ಅವರು ಹೇಳುವುದಾದರೂ ಏನು, ನಾವು ಬಹಳ ಒಳ್ಳೆಯ ಕೆಲಸ ಮಾಡಿದ್ದೇವೆ ಎಂದರು. ನೀವು ಇಲ್ಲಿಯವರೆಗೆ ಒಂದು ಇಂಚಿನಷ್ಟು ರೈಲನ್ನು ತರಲಿಲ್ಲ. ಬ್ರಿಟಿಷರ, ಮಹಾರಾಜರುಗಳಕಾಲದಲ್ಲಿ ಹೇಗೆ ಇತ್ತೋ ಹಾಗೆನೇ ಇಂದೂ ಇದೆ. ಸ್ವಾಮೀ, ತಾವು ಹೇಳುತ್ತೀರಿ, ನೀವು ಈ ಅವಿಶ್ವಾಸದ ಠರಾವು ತರುವಾಗ ಏನೂ ಒಂದು ಅಕ್ರಮಗಳನ್ನು ಹೇಳಲಿಲ್ಲ, ವಿಷಯಗಳನ್ನು ಹೇಳಲಿಲ್ಲ, ಚಾರ್ಜಸ್ ಫ್ರೇಂ ಮಾಡಲಿಲ್ಲ. ಎಂದು ನಾನು ಹೇಳುತ್ತೇನೆ. ಈ ಸಭೆ ಜರುಗಿದ ಮೇಲೆ ನಿಮ್ಮ ಮೇಲೆ ಅವಿಶ್ವಾಸ ತೋರಿಸಿ ಇಲ್ಲಿ ನಿರ್ಣಯ ತಂದ ನಿಮ್ಮ ಸದಸ್ಯರಾದ ಅಂದಾನಪ್ಪ ದೊಡ್ಡಮೇಟಿಯವರು ತಂದದ್ದು ಸರಿಯೇನು ? ಅಲ್ಲದೆ ನಿಮ್ಮ ನೀತಿಯನ್ನು ಪ್ರತಿಭಟಿಸಿ ಈ ಸಭೆಯ ೨೪ ಜನ ಷೆಡ್ಯುಲ್ಡು ಕ್ಯಾಸ್ಟ್, ಟ್ರೈಬ್ ಜನಾಂಗಕ್ಕೆ ಸೇರಿದ ಸದಸ್ಯರುಗಳು ಅವಿಶ್ವಾಸ ತೋರಿಸಿ ರಾಜೀನಾಮೆ ಸಲ್ಲಿಸಿದ್ದು ಅವಿಶ್ವಾಸವಲ್ಲವೇನು ? ಈ ದೇಶವನ್ನು ಎರಡು ವಿಧವಾಗಿ ವಿಭಾಗ ಮಾಡಬೇಕು ಎಂದು ಇಲ್ಲಿ ಠರಾವು ತಂದು ಮಂಡಿಸಿದುದು ನಿಮ್ಮಲ್ಲಿರುವ ವಿಶ್ವಾಸದಿಂದಲ್ಲವೇ ? ಈ ರೀತಿ ಅಳತೆಯಿಲ್ಲದ ವಾಸ್ತವ್ಯವಲ್ಲದ ಠರಾವನ್ನು ಮಂಡಿಸಿದವರು ನಿಮ್ಮವರೇ ಅಲ್ಲವೇ ? ಹೊರಗಿನಿಂದ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕಾಗಿ ಬಂದು ಪಾಲಿಟೆಕ್ನಿಕ್ ಶಾಲೆಗಳಲ್ಲಿ ಹದಿನೆಂಟು ತಿಂಗಳುಗಳಲ್ಲಿ ಪಾಸುಮಾಡಿದವರನ್ನು ಮೂರು ನಾಲ್ಕು ವರ್ಷಗಳಿಗೆ ಮೇಲ್ಪಟ್ಟು ವಿದ್ಯಾಭ್ಯಾಸ ಮಾಡಿದವರೂ ಸಮ ಎಂದು ತೀರ್ಮಾನ ಮಾಡಿದುದ್ದಕ್ಕಾಗಿ ಆ ವಿದ್ಯಾರ್ಥಿಗಳ ಮುಷ್ಕರ ಹೂಡಿದ್ದಾಗ ಅದನ್ನು ಸರಿಯಲ್ಲ ಎಂದು ಹೇಳಿದುದು ನಿಮ್ಮಲ್ಲಿರುವ ಅವಿಶ್ವಾಸದಿಂದಲ್ಲವೇ. ಹೇಳಿ. ವೊಕ್ಕಲು ಮಾಡುವ ರೈತರ ಸಾವಿರಗಟ್ಟಲೆ ಅರ್ಜಿಕೊಟ್ಟಿದ್ದು ನಿಮ್ಮಲ್ಲಿರುವ ಅವಿಶ್ವಾಸದಿಂದಲ್ಲವೇ ? ಹೇಳಿ.

ಇತ್ತೀಚೆಗೆ ನಾನು ದೆಹಲಿಗೆ ಹೋದ ಸಮಯದಲ್ಲಿ ಅಲ್ಲಿ ಜೈಲಿನಲ್ಲಿ ಕೆಲವರು ಸಿಕ್ಕಿದರು, ಅವರಲ್ಲಿ ಪಂಚರಂಗಿ (ಹ್ಯಾಬಿಟುಯಲ್ ಅಫೆಂಡರ್ಸ್) ಅಂತ ಏನು ಹೇಳುತ್ತೀರ, ಅವರು ಸಿಕ್ಕಿದ್ದರು. ಹಾಬಿಚುಯುಲ್ ಅಫೆಂಡರ್ ಅಂದರೆ ಸ್ವಲ್ಪ ತಪ್ಪಿಗೆ ಸಿಕ್ಕಿಹಾಕಿಕೊಂಡವರು. ನೀವು ಈ ಅವಿಶ್ವಾಸ ಠರಾವಿನಲ್ಲಿ ಅಪಾದನೆಗಳು ಏನು ಎಂದು ಹೇಳಿಲ್ಲವೆಂದು ಹೇಳುತ್ತಿರ. ಆ ಎಲ್ಲಾ ವಿಷಯಗಳನ್ನೂ ನಾವು ಒಟ್ಟಿಗೆ ತಂದು ಈ ಒಂದು ಠರಾವನ್ನು ತಯಾರು ಮಾಡುವುದು ಬ್ರಹ್ಮನಿಗೂ ಸಾಧ್ಯವಿಲ್ಲ; ಒಂದಲ್ಲ ಎರಡಲ್ಲ, ಅಷ್ಟು ವಿಷಯಗಳು ತುಂಬಿವೆ, ಆದ್ದರಿಂದ ಬ್ರಹ್ಮನಿಗೂ-ಬರೆಯಲಿಕ್ಕೆ ಕಷ್ಟ. ವಿಜ್ಞಾನ ಶಾಸ್ತ್ರದಲ್ಲಿ ಅದರಲ್ಲಿಯೂ ಭೌತಶಾಸ್ತ್ರ quantitative and qualitative change ಅಂತಉಂಟು ನೀರನ್ನು 99 ಡಿಗ್ರಿವರೆಗೆ ಕಾಯಿಸಿದರೂ ಆವಿಯಾಗುವುದಿಲ್ಲ, ಆ ಉಷ್ಣತೆಗೆ ಇನ್ನೊಂದು ಡಿಗ್ರಿ ಸೇರಿದರೆ ಮಾತ್ರ, ದ್ರವ ಕುದಿದು ಆವಿಯಾಗಿ ಬದಲಾವಣೆಯಾಗುತ್ತದೆ. ಆದ್ದರಿಂದ ಕೊನೆಯ ಒಂದು ಡಿಗ್ರಿ ಉಷ್ಣತೆ ಸೇರುವುದು ಬದಲಾವಣೆಗೆ ಮುಖ್ಯ ಹಾಗೆಯೇ ನಿಮ್ಮ ಪೋಲೀಸು ಬಿಲ್ಲು, ಸೇಲ್ಸ್ ಟ್ಯಾಕ್ಸ್ ಬಿಲ್ಲು, ಡ್ರಮಾಟಿಕ್ ಪರ್ಫಾರ್ಮೆನ್ಸ್ ಬಿಲ್ಲು, ಲ್ಯಾಂಡ್ ಸರ್ಛಾರ್ಜ್ ಅಮೆಂಡ್‌ಮೆಂಟ್ ಬಿಲ್ ಅತೃಪ್ತಿಯನ್ನು ಜನಗಳಲ್ಲಿ ತುಂಬಿವೆ. ಈ ಮಸೂದೆಗಳೂ ಮತ್ತು ನಿಮ್ಮ ಇತರ ಅನೇಕ ಚಟುವಟಿಕೆಗಳೂ ನಿಮ್ಮ ಬಗ್ಗೆ ಜನಗಳಲ್ಲಿ ಅವಿಶ್ವಾಸವನ್ನು ಉಂಟುಮಾಡಿದೆ. ಜನಗಳ ಭಾವನೆಯನ್ನು ಈ ರೀತಿ ಠರಾವಿನ ಮೂಲಕ ನಿಮಗೆ ವ್ಯಕ್ತಪಡಿಸದಿದ್ದರೆ, ಜನಗಳಿಗೆ ನಿಮ್ಮಲ್ಲಿ ನಂಬಿಕೆ ಇಲ್ಲ ಅನ್ನುವುದನ್ನು ತೋರಿಸಿ ಕೊಡದಿದ್ದರೆ ನಾವು ಕರ್ತವ್ಯಲೋಪ ಮಾಡಿದಂತಾಗುತ್ತದೆ. ದೇಶದರಕ್ಷಣೆ ಬಗ್ಗೆ ನೀವು ಯಾವ ಕೆಲಸ ಮಾಡುತ್ತೀರೋ, ಅದಕ್ಕೆ ಸಹಕಾರ ಕೊಡುವುದಕ್ಕೆ ತಯಾರಿದ್ದೇವೆ. ಅದೇರೀತಿ ದೇಶದ ಅಭಿವೃದ್ಧಿಗೆ ಕೆಲಸ ಮಾಡಿದರೆ, ನಾವೂ ನಿಮ್ಮ ಜೊತೆಗೆ ಒಟ್ಟಿಗೆ ಕೆಲಸ ಮಾಡುವುದಕ್ಕೆ ತಯಾರಿದ್ದೇವೆ. ಆದರೆ ನೀವು ವಿಘಾತಕ ಕೆಲಸಗಳನ್ನು ಮಾಡಿಕೊಂಡು ಹೋಗುವುದಾದರೆ ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರವನ್ನೇ ಉರುಳಿಸುವುದಕ್ಕೆ ನೀವು ಹೇಗೆ ಪ್ರಯತ್ನ ಮಾಡಿದಿರೋ, ಅದೇ ರೀತಿ ವಿರೋಧಪಕ್ಷದವರು ಇಲ್ಲಿಯೂ ಒಗ್ಗಟ್ಟಾಗಿ, ಹೊರಗಡೆಯ ಜನತೆಯನ್ನು ಒಗ್ಗಟ್ಟು ಮಾಡಿ, ಜನತೆಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಟ್ಟು ಸರಕಾರದ ಮೇಲೆ ಹೋರಾಟ ಮಾಡುವ ಕಾಲ

(ಶ್ರೀ ಎ. ಕೃಷ್ಣ ಶೆಟ್ಟಿ)

ಬೇಗ ಸನ್ನಿಹಿತವಾಗುವುದು; ಅದನ್ನೇ ಈ ಅವಿಶ್ವಾಸ ಠರಾವು ಎಚ್ಚರಿಕೆ ಕೊಡುತ್ತದೆ; ಅದೇ ಉದ್ದೇಶದಿಂದರೇ ಈ ಅವಿಶ್ವಾಸ ನಿರ್ಣಯವನ್ನು ನಿಮ್ಮ ಮುಂದೆ ಮಂಡಿಸಿದ್ದೇವೆ. ನಾನು ಮೊದಲು ಪ್ರಸ್ತಾಪಿಸಿದ ವಿಷಯಕ್ಕೆ ಹಿಂದಿರುಗುತ್ತೇನೆ. ಕೇಂದ್ರದಿಂದ ನಮಗೆ ಬೇಕಾದ ಸಹಾಯ ಏಕೆ ಸಿಗುವುದಿಲ್ಲ ಎಂದು ಒಬ್ಬ ಪಾರ್ಲಿಮೆಂಟ್ ಮೆಂಬರನ್ನು ಕೇಳಿದೆ, ಅವರು ಹೇಳಿದರು: ನಿಮ್ಮ ಪ್ರಾಂತ್ಯದ ಮಂತ್ರಿಮಂಡಲ ಒಂದು ಜಾತಿ ಮಂತ್ರಿಮಂಡಲ. "ನೀವು ನಿಮ್ಮ ಮುಖ್ಯಮಂತ್ರಿಯನ್ನು ನೋಡಿ, ಪಿ.ಡಬ್ಲ್ಯು.ಡಿ. ಮಂತ್ರಿಯನ್ನು ನೋಡಿ, ವಿದ್ಯಾ ಮಂತ್ರಿಯನ್ನು ನೋಡಿ, ಹಣಕಾಸಿನ ಮಂತ್ರಿಯನ್ನು ನೋಡಿ, ಕೈಗಾರಿಕೆ ಮಂತ್ರಿಯನ್ನು ನೋಡಿ, ರಾಜ್ಯದ ಆಡಳಿತ ಒಂದು ಜಾತಿಯ ಕೈನಲ್ಲಿದೆ. ಆದ್ದರಿಂದ ನಿಮ್ಮ ಪ್ರಶ್ನೆಗೆ ಸಮಾಧಾನ ಸಿಗುತ್ತದೆ" ಎಂದು ಹೇಳಿದರು. ಆದ್ದರಿಂದ ನೀವು ಜಾತಿಯ ಆಧಾರದ ಮೇಲೆ ಮಂತ್ರಿಮಂಡಳವನ್ನು ಇಟ್ಟುಕೊಂಡು ಎಲ್ಲಿಯವರೆಗೆ ಕೆಲಸ ಮಾಡುತ್ತೀರೋ ಅಲ್ಲಿಯವರೆಗೆ ನಿಮಗೆ ಬೇಕಾದ ಸಹಾಯವು ಕೇಂದ್ರದಿಂದ ಸಿಗುವುದಿಲ್ಲ, ಏಕೆಂದರೆ ಈ ಮಂತ್ರಿ ಮಂಡಲದಲ್ಲಿ ಶಕ್ತಿ ಇಲ್ಲವೆಂದು ಹೇಳಿದರು. ಕೇಂದ್ರ ಮದ್ರಾಸಿಗೆ ಬೇಕಾದ ಸಹಾಯ ಕೊಡಲು ಸಿದ್ಧವಿದೆ, ಕೇರಳಕ್ಕೆ ಕೊಡಲು ಸಿದ್ಧವಿದೆ, ಮತ್ತು ಅವು ಪಡೆದುಕೊಂಡಿವೆ, ಆದರೆ ಇಲ್ಲಿಗೆ ಕೊಡಲು ಸಿದ್ಧವಿಲ್ಲ ಎಂದು ಉದಾಹರಣೆಯನ್ನು ಕೊಟ್ಟರು. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಈ ರಾಜ್ಯಕ್ಕೆ ಸೇರಿದ ಮೇಲೆ ನಮ್ಮದು ಬಹಳ ಆಸೆ ಇತ್ತು; ನಾವು ಇವರೊಡನೆ ಸೇರಿ ಅಭಿವೃದ್ಧಿಯಾಗಬಹುದು ಅಂತ. ಇಲ್ಲಿ ಆಡಳಿತದಲ್ಲಿ ಇತರ ರಾಜ್ಯಗಳೊಂದಿಗೆ ಯಾವ ವಿಧವಾದಂಥ ಸ್ಪರ್ಧೆಯೂ ಇಲ್ಲ.

ಇಲ್ಲಿನ ಮಂತ್ರಿಮಂಡಲಕ್ಕೆ ಶ್ರೀಮಾನ್ ರಾಮರಾಯರು ಬ್ರೇನ್‌ಸ್ಟ್ರಸ್ಟ್ ಅಂತ ಹೇಳುತ್ತಾರೆ. ಅವರು ಇಂಟಲೆಕ್ಚುಯಲ್ ಕಮ್ಯೂನಿಟಿಗೆ ಸೇರಿದವರು, ದೇಶದ ಅಭಿವೃದ್ಧಿಗೆ ಪ್ರಯತ್ನ ಮಾಡುತ್ತಾರೆಂದು ಅಂದುಕೊಂಡಿದ್ದೆವು. ಆದರೆ ವಿದ್ಯಾಸಂಸ್ಥೆಗಳಲ್ಲಿ ಈ ಇಂಟಲೆಕ್ಚುಯಲ್ ಕಮ್ಯೂನಿಟಿಗೆ ಪ್ರವೇಶ ದೊರಕಿಸಿಕೊಟ್ಟು ಉಪಕಾರ ಮಾಡುತ್ತಾರೆಂದರೆ, ಅವರಿಗೆ ಪ್ರವೇಶ ದೊರಕಿಸುವುದರಲ್ಲಿ ಭಗ್ನರಾಗಿದ್ದಾರೆ, ಹಿಂದುಳಿದಿದ್ದಾರೆ. ಇದು ಸರಿಯಲ್ಲ.

ಇನ್ನು ಮೂರು ವಿಷಯಗಳ ಬಗ್ಗೆ ಮಾತನಾಡಬೇಕಾಗಿದೆ, ಅವು ಯಾವುವೆಂದರೆ ; ಕೈಗಾರಿಕೆ, ಮಜದೂರರು ಮತ್ತು ಭೂಸುಧಾರಣೆ. ನಮ್ಮ ರಾಜ್ಯದಲ್ಲಿ ಕೈಗಾರಿಕೆ ವೃದ್ಧಿಯಾಗಿಲ್ಲ, ಕುಂಠಿತಗೊಂಡಿದೆ ನಿಜವಾಗಿ ಹೇಳುವುದಾದರೆ ಈ ಎರಡು ವರ್ಷಗಳಲ್ಲಿ ನಮ್ಮ ಕೈಗಾರಿಕೆ ಏನೂ ಬೆಳೆಯಲಿಲ್ಲ; ರಾಫಿಲ್ಮ್ ಇಂಡಸ್ಟ್ರಿ ನಮಗೆ ಬರಬೇಕಾದದ್ದು ಮದ್ರಾಸಿಗೆ ಹೋಯಿತು. ನಮ್ಮಲ್ಲಿ ಫರ್ಟಿಲೈಜರ್ ಫ್ಯಾಕ್ಟರಿ ಇಲ್ಲ, ಅಲ್ಯೂಮಿನಿಯಂ ಫ್ಯಾಕ್ಟರಿ ಇಲ್ಲ; ನಮಗೆ ಏನೂ ಹೊಸ ಕೈಗಾರಿಕೆ ಬರಲಿಲ್ಲ. ಇನ್ನೂ ಕೆಲವು ಫ್ಯಾಕ್ಟರಿಗಳು ಎಷ್ಟು ಕೆಪ್ಯಾಸಿಟಿಯಲ್ಲಿ ಕೆಲಸಮಾಡಬೇಕೋ, ಅಷ್ಟು ಸಾಮರ್ಥ್ಯದಿಂದ ಕೆಲಸ ಮಾಡುತ್ತಿಲ್ಲ. ನಮ್ಮ ಕೈಗಾರಿಕೆ ಮಂತ್ರಿಗಳು ಜಪಾನಿಗೆ ಹೋಗಿ ಬಂದ ಸಮಯದಲ್ಲಿ, ನಾವೆಲ್ಲಾ ಬಹಳ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸುತ್ತಾರೆಂದು ತಿಳಿದುಕೊಂಡಿದ್ದೆವು. ಆದರೆ ಎಲ್ಲಾ ಯಥಾಸ್ಥಿತಿಯಾಗಿಯೇ ಇದೆ. ಯಾವ ಒಂದು ಕೈಗಾರಿಕೆಯೂ ಆಗದೆ, ನಿರುದ್ಯೋಗ ನಿವಾರಣೆಯಾಗಲಿಲ್ಲ ಇನ್ನು 24 ಕಾರ್ಖಾನೆಗಳಲ್ಲಿ ಸ್ವಲ್ಪದರಲ್ಲಿ ಲಾಭ ಉಂಟೆಂದು ಒಪ್ಪಿಕೊಳ್ಳುತ್ತೇನೆ. ಆದರೆ ಜಾಸ್ತಿ ಕೈಗಾರಿಕೆಗಳಲ್ಲಿ ನಷ್ಟ ಉಂಟಾಗುತ್ತದೆ, ಲಾಭವಿಲ್ಲ. ಕೆಲವೇ ಕೆಲವು ಕಾರ್ಖಾನೆಗಳಲ್ಲಿ ಲಾಭ ಉಂಟು; ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ, ಸೋಪು ಫ್ಯಾಕ್ಟರಿಯಲ್ಲಿ ಲಾಭ ಉಂಟು. ಗಂಧದ ಎಣ್ಣೆ ಕಾರ್ಖಾನೆಯಲ್ಲಿಯೂ ಲಾಭವಿರಬಹುದು, ಆದರೆ ಮಿಕ್ಕದ್ದರಲ್ಲಿ ನಷ್ಟವಾಗುತ್ತಿದೆ. ಕೈಗಾರಿಕೆ ಅಭಿವೃದ್ಧಿಯಾಗದೆ ನಿರುದ್ಯೋಗ ನಿವಾರಣೆಯಾಗುವುದು ಹೇಗೆ! ದೇಶದ ಸಂಪತ್ತು ಬೆಳೆಯುವುದು ಹೇಗೆ? ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಕೈಗಾರಿಕೆ ಬೆಳೆಯಬೇಕಾಗಿತ್ತೋ, ಅಷ್ಟು ಬೆಳೆಯಲಿಲ್ಲ. ಕಚ್ಚಾ ಮಾಲು, ಫಿಲ್ಮ್ ಇಂಡಸ್ಟ್ರಿ ತಯಾರು ಮಾಡುವ ಕಾರ್ಖಾನೆಗಳು ಮದ್ರಾಸಿಗೆ ಸಿಕ್ಕವು, ಕೆಲವಕ್ಕೆ ಬಂದವು. ಆದರೆ ಅದನ್ನು ಪಡೆದುಕೊಳ್ಳುವ ಶಕ್ತಿ ನಮ್ಮಲ್ಲಿಲ್ಲ. ಇದನ್ನೆಲ್ಲಾ ನೋಡಿದರೆ, ನಿಮಗೆ ಬೇಕಾದ ಹೊಸಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ನಿಮಗೆ ಸಾಧ್ಯವಿದೆಯೇ; ನಿರುದ್ಯೋಗ ನಿವಾರಣೆ ಮಾಡಲು ಸಾಧ್ಯವಿದೆಯೇ? ನಮ್ಮ ರಾಜ್ಯವನ್ನು ಅಭಿವೃದ್ಧಿಪಡಿಸಲಿಕ್ಕೆ ನಿಮಗೆ ಸಾಧ್ಯವಾದೀತೆ? ಇನ್ನು ಮಜದೂರ ರಂಗದಲ್ಲಿ ನೀವು ಏನು ಏನು ಕೆಲವು ಕೆಲಸಗಳನ್ನು ಮಾಡುತ್ತೇವೆಂದಿದ್ದರೋ, ಅವೂ ನಡೆಯಲಿಲ್ಲ. 23 ಉದ್ಯಮಗಳಲ್ಲಿ ಮಿನಿಮಮ್ ವೇಜಸ್ ಇರಬೇಕೆಂದಿದೆ. ಆದರೆ ಅದನ್ನು ಇಂಪ್ಲಿಮೆಂಟ್ ಮಾಡಲೇ ಇಲ್ಲ. ಬೀಡಿ, ಸೋಪು ಕಾರ್ಖಾನೆಗಳಲ್ಲಿ ಇದು ಜಾರಿಯಲ್ಲಿರಬಹುದು ಬೇರೆಕಡೆ ಆಗಿಲ್ಲ. ಲಿವಿಂಗ್ ಇಂಡೆಕ್ಸ್ ತೆಗೆದುಕೊಂಡು ತುಟ್ಟಿಭತ್ಯವನ್ನು ಮಜದೂರರಿಗೆ ಕೊಡುತ್ತಿಲ್ಲ. ಈ ಜೂಡಿಶಿಯಲ್ ಮೇಜಿಸ್ಟ್ರೇಟರುಗಳ ಸಹಾಯವನ್ನು ಹೆಸರಿನಲ್ಲಿ ಕೊಟ್ಟಿದ್ದಾರೆ. ಮೂರು

ಜುಡಿಶಿಯಲ್ ಮೇಜಿಸ್ಟ್ರೇಟರುಗಳಲ್ಲಿ ಯಾರೂ ಕೂಡ ವೇಜಸ್ ತೀರ್ಮಾನ ಮಾಡುವ ಕೇಸುಗಳನ್ನು ತೆಗೆದುಕೊಳ್ಳುವುದಕ್ಕೆ ಇಷ್ಟರವರೆಗೆ ಆಗಿಲ್ಲ. ಕೆಲವುಕಡೆ ಹೊಸದಾಗಿ ನೇಮಕ ಮಾಡಿರುವ ಜಡ್ಜುಗಳಿಗೂ, ಕೆಲವು ವ್ಯಾಪಾರಸ್ಥರಿಗೂ ಕೈಗಾರಿಕಾ ಉದ್ಯಮಿಗಳಿಗೂ ಬಹಳ ದೊಡ್ಡ ಸಂಬಂಧವಿದೆ. ಅಂಥವರನ್ನು ನೇಮಕ ಮಾಡಿದರೆ ನಿಜವಾಗಿಯೂ ಕೆಲಸಗಾರರಿಗೆ ಅನುಕೂಲವಾಗುವ ಸಾಧ್ಯತೆ ಇದೆಯೋ? ಈಗ ಜೀವನದ ಪ್ರಮಾಣ ಹೆಚ್ಚಿದೆ; ಸರಕುಗಳ ಬೆಲೆ ಏರಿದೆ. ಆದರೂ ನೀವು ಮಿನಿಮಮ್ ವೇಜಸ್ಸನ್ನೂ ತುಟ್ಟಿಭತ್ಯವನ್ನೂ ನಿಯಮಕ್ಕೆ ತಕ್ಕಂತೆ ಕೊಡಲು ಒತ್ತಾಯ ಮಾಡಿಲ್ಲ.

ಮೂರನೆಯದಾಗಿ ಭೂಸುಧಾರಣೆ ವಿಷಯ. ಇದರ ವಿಷಯದಲ್ಲಿ ಮಾತನಾಡುವಾಗ ಶ್ರೀ ಗೋಪಾಲ ಗೌಡರು ಮತ್ತು ಬಾಕಿಯವರು ಏನು ಹೇಳಿದರೆಂದರೆ ಭೂಸುಧಾರಣೆಯನ್ನು ತರುವ ಹೊತ್ತಿಗೆ ಭೂಮಿ ಯಾರದು ಆಗಬೇಕಾಗಿತ್ತೋ ಅವರದು ಆಗದೆ ಭೂ ಒಡೆಯರು ಅವನ್ನು ತಮಗೆ ಬೇಕಾದಂತೆ ಬದಲಾಯಿಸಲು ಅವಕಾಶವುಂಟಾಗುತ್ತದೆ. ಇದರಿಂದ ಗೇಣಿದಾರರಿಗೆ ಎಷ್ಟು ಭೂಮಿ ಸಿಕ್ಕಬೇಕಾಗಿತ್ತೊ ಅಷ್ಟು ಸಿಕ್ಕುವುದಿಲ್ಲ. ಭೂಸುಧಾರಣೆ ತರುವ ಹೊತ್ತಿಗೆ ಕುದುರೆ ಲಾಯದಲ್ಲಿ ಕುದುರೆ ಇಲ್ಲದೆ ಹೋದ ಹಾಗೆ ನಮ್ಮ ಕಾನೂನು ಆಗುತ್ತದೆ. ಅದುದರಿಂದ ಗೇಣಿದಾರರಿಗೆ ಏನೂ ಪ್ರಯೋಜನವಾಗುವುದಿಲ್ಲ. ಅಂಥ ಪರಿಸ್ಥಿ ನಮ್ಮ ಜಿಲ್ಲೆಯಲ್ಲಿ ನಡೆಯುತ್ತಿದೆ. ಇವರಿಗೆ ಅನುಕೂಲವಾಗುವಂತೆ ನಾವು ಭೂಸುಧಾರಣೆಯನ್ನು ಮುಂದಕ್ಕೆ ಹಾಕುತ್ತಿದ್ದೇವೆ. ಇದು ನಿಜವಾಗಿಯೂ ದೇಶದ ಜನತೆಗೆ ನಾವು ಮಾಡುವ ದೊಡ್ಡ ಅಪರಾಧ. ಆದುದರಿಂದ ಈ ಅವಿಶ್ವಾಸ ಠರಾವನ್ನು ನಾನು ಮಂಡಿಸುತ್ತೇನೆ. ಸಮಾಜವಾದ ಸಮಾಜವನ್ನು ಸ್ಥಾಪಿಸುವಾಗ ಎಲ್ಲ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಳ್ಳಬೇಕು. ಅದರಲ್ಲಿ ರೈತ ಕಾರ್ಮಿಕರನ್ನೂ ತೆಗೆದುಕೊಳ್ಳಬೇಕು. ಈ ಹೊಣೆಗಾರಿಕೆ, ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಅವರ ಹಿತವನ್ನು ಕಾಪಾಡುವ ರೀತಿಯಲ್ಲಿ ಕೆಲಸ ಮಾಡಬೇಕಾಗಿತ್ತು ಎಂದು ಹೇಳಿ ಈ ಅವಿಶ್ವಾಸಠರಾವನ್ನು ಒತ್ತಾಯ ಮಾಡಿ ಸರ್ಕಾರ ರಾಜಿನಾಮೆಕೊಟ್ಟು ಚುನಾವಣೆಗೆ ಮುಂದೆ ಬರಬೇಕು ಎಂದು ಹೇಳಿ ನಾನು ಕುಳಿತುಕೊಳ್ಳುತ್ತೇನೆ.

6-00 P.M.

Mr. SPEAKER.—Sri Ganji Veerappa has sent me a note that some person has made certain charges against him and that he wants to make a personal explanation.

Sri GANJI VEERAPPA (Harihar).—I was not present when Sri Gopala Gowda was making his speech.

Sri C. J. MUCKANNAPPA.—If every Member begins to make clarifications......

Mr. SPEAKER.—If a member has dragged the name of another Member, I am bound to give an opportunity.

Sri C. J. MUCKANNAPPA.—So many Members' names have been dragged by so many Members.

Mr. SPEAKER.—I mentioned even then. If names of Members are dragged in, in all fairness, I think the House should give them time.

Sri GANJI VEERAPPA.—Sir, I learn from my friends here that Mr. Gopal Gowda made a reference in the House to me and made the false statement that I am a quota-holder of stainless steel. That allegation is far from true. Not only myself, nor my relations nor any body connected with me hold quotas. It is better that Mr. Gopal Gowda corrects himself or withdraws it.

Mr. SPEAKER.—What has Sri Gopal Gowda to say? He says that it is false. If he is satisfied I have nothing to say.

†Sri R. DAYANANDA SAGAR.—Sir, he has not got any material nor can he prove anything. What Sri Gopal Gowda said against me is irresponsible. The Hon. Member, under cover of privilege, has dragged things that are not relevant. If he had made the speech outside, the Hon. Member would have been dragged to the Court. Because he is covered by privilege, he thinks he can speak as he likes. Is he right, Sir, in making a charge which amounts to a defamatory statement ?

Mr. SPEAKER.—I have already told him.....

Sri R. DAYANANDA SAGAR.—I request him through the Chair to bring the charges, frame them and put them before the House.

Sri C. J. MUCKANNAPPA.—I rise to a point of order. The Speaker is there to conduct the business of the house and the Deputy Minister now says that some Member made irresponsible statement. If that is so, the Chair is there to pull up the Member. Because he is in Gadi or power, can he pounce upon another Member with all vengeance. Is that fair ? The Chair has been pleased to pull up Members, including myself, many times (laughter). I crave your indulgence, Sir, to pull up the Deputy Minister and correct him.

Mr. SPEAKER.—For two days we discussed all that.....

Sri R. DAYANANDA SAGAR.—I throw a challenge ....

Mr. SPEAKER.—I do not want any challenge here.....

Sri R. DAYANANDA SAGAR.—If the Hon. Member has anything, he should get out of the House and make a statement and take the consequences.

Sri C. J. MUCKANNAPPA.—Sir, he is defying you. Whenever a person on this side does not listen to the Chair, you ask the Leader of the Opposition to take action Now, may I request the Hon. Chair to request the Leader of the House to pull down the Deputy Minister.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಈಗ ತಮ್ಮ ಮೂಲಕ ನಾನು ಮಾನ್ಯ ದಯಾನಂದ ಸಾಗರ್ ಅವರನ್ನು ಕೇಳಿಕೊಳ್ಳುವುದೇನೆಂದರೆ ನಾನು ಹೇಳಿದ ಅಪಾದನೆಗಳು ಯಾವ ದೃಷ್ಟಿಯಿಂದ ಸರಿಯಾಗಿಲ್ಲ, ಟೆಕ್ನಿಕಲ್ ಆಗಿ ಅವರ ಹೆಸರಿನಲ್ಲಿ ಸ್ಕೈಟುಗಳನ್ನು ಪಡೆದಿಲ್ಲವೋ ಅಥವಾ ಅವರು ಮಂತ್ರಿಗಳಾದ ಮೇಲೆ ಪಡೆದಿಲ್ಲವೋ ಅಥವಾ ತಾರೀಖುಗಳಲ್ಲಿ ವ್ಯತ್ಯಾಸವಿದೆಯೋ ಏನು ಎನ್ನುವುದನ್ನು ಹೇಳುತ್ತಾರೆಯೋ ಅಥವಾ......

Mr. SPEAKER.—Are we embarking upon an enquiry now ?

ಶ್ರೀ ಎಸ್. ಗೋಪಾಲ ಗೌಡ.—ಏನು ಹೇಳುತ್ತಾರೆ ಎನ್ನುವುದು ಗೊತ್ತಾದರೆ ಅದಕ್ಕೆ ಉತ್ತರವನ್ನು ಸಭೆಯ ಮುಂದೆ ಯಾವತ್ತು ಬೇಕಾದರೂ ಇಡುವುದಕ್ಕೆ ಸಿದ್ಧನಾಗಿದ್ದೇನೆ, ಸ್ವಾಮಿ.

Mr. SPEAKER.—I would request the Hon. member Sri Gopal Gowda to give me anything and everything if he wants, within two days. I will examine it and then deal with the matter. Now the Minister for Education will speak. Does the mover of the motion want any time for reply ?

Sri S. SIVAPPA—Yes, Sir.

Mr. SPEAKER.—Where is the time ? I already told the Member about it.

Sri S. R. KANTHI.—May I with your permission speak sitting because I am not well ?

Mr. SPEAKER.—Yes.

† ಶ್ರೀ ಎಸ್. ಆರ್. ಕಂಠಿ.—ಸನ್ಮಾನ್ಯ ಅಧ್ಯಕ್ಷರೇ, ಈ ಎರಡು ದಿವಸ ನಡೆದಂಥ ಕಾರ್ಯ ಕಲಾಪಗಳಲ್ಲಿ ವಿದ್ಯಾ ಖಾತೆಯ ಬಗ್ಗೆ ಕೆಲವು ಮಾತುಗಳನ್ನು ಆಡಿದ್ದಾರೆ. ಈ ಮನೆಯಲ್ಲಿ ಸಾಮಾನ್ಯವಾಗಿ ಅನೇಕ ವಿಚಾರಗಳು ಬರುತ್ತವೆ. ಅದರಲ್ಲಿ ವಿದ್ಯಾ ಖಾತೆಗೆ ಸಂಬಂಧಪಟ್ಟ ಹಾಗೆ, ಅಡ್ಮಿಷನ್ ವಿಚಾರವಾಗಿ, ಪ್ರೈಮರಿ ವಿದ್ಯಾಭ್ಯಾಸದ ವಿಚಾರವಾಗಿ, ಎಸ್. ಎಸ್. ಎಲ್. ಸಿ., ಸೆಲೆಕ್ಷನ್ ಕಮಿಟಿ, ಎಂಟನೆ ಸ್ಟಾಂಡರ್ಡ್, ಪಠ್ಯ ಪುಸ್ತಕಗಳು, ಹೀಗೆ ಕೆಲವು ವಿಷಯಗಳು ಈ ಸಭೆಯಲ್ಲಿ ಬಂದಿವೆ.

ಮೊದಲನೆಯದಾಗಿ ಅಡ್ಮಿಷನ್ ವಿಚಾರವಾಗಿ ನಾನು ಹೇಳಬೇಕಾಗಿದೆ. ಈ ವಿಚಾರ ಹೈ ಕೋರ್ಟ ಮುಂದೆ ಇದ್ದು ಅವರು ಒಂದು ನಿರ್ಣಯ ಕೊಟ್ಟಿದ್ದಾರೆ. ಸರ್ಕಾರದವರು ಎರಡು ಆರ್ಡರ್ ಮಾಡಿದ್ದಾರೆ. ಒಂದು ಆರ್ಡರಿನಲ್ಲಿ ಹಿಂದುಳಿದ ವರ್ಗಗಳೆಂದರೆ ಏನು ಎಂದು ನಿರ್ಣಯ ಮಾಡಿದ್ದಾರೆ. ಅದನ್ನು ಹೈಕೋರ್ಟಿನವರು Valid ಎಂದು ಹೇಳಿದ್ದಾರೆ. ಎರಡನೆ ಆರ್ಡರು ಎರಡು ವಿಶ್ವವಿದ್ಯಾನಿಲಯಗಳಲ್ಲಿ ಸೀಟುಗಳನ್ನು ಹಂಚಲಾಗಿರುವ ವಿಚಾರಕ್ಕೆ ಸಂಬಂಧಪಟ್ಟದ್ದಾಗಿದೆ. ಅದು ತಪ್ಪು ಇದೆ ಎಂದು ಹೈ ಕೋರ್ಟಿನವರು ಹೇಳಲಿಲ್ಲ. ಅದನ್ನು Strike down ಮಾಡಿಲ್ಲ ಎಂದು ಹೇಳಬೇಕಾಗಿದೆ. ಆದರೆ ಈ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳುವುದು ಏಕೆ ಅತ್ಯವಶ್ಯವಿದೆ ಎಂದರೆ ಕೆಲವರು ಮಾನ್ಯಸದಸ್ಯರು ಬಹಳ ತಪ್ಪಾದ ಭಾವನೆಯನ್ನು ಮಾಡಿಕೊಂಡಿದ್ದಾರೆ. ಈ ತಪ್ಪಾದ ಭಾವನೆ ಎಂದರೆ, ಈ ಎರಡೂ ವಿಶ್ವವಿದ್ಯಾನಿಲಯಗಳು ಈಗ ಮಾಡಿದವುಗಳಲ್ಲ. ಯಾವ ದಿವಸ ನಮ್ಮ ರಾಜ್ಯ ಒಂದಾಗುತ್ತೋ ಆ ದಿವಸದಿಂದ ಇವತ್ತಿನ ದಿವಸದವರೆಗೂ ನಡೆದಿರುವ ಸೆಲೆಕ್ಷನ್ ಕಮಿಟಿಗಳು, ಆ ವಿಶ್ವವಿದ್ಯಾನಿಲಯಕ್ಕೆ ಒಂದು, ಈ ವಿಶ್ವ ವಿದ್ಯಾನಿಲಯಕ್ಕೆ ಒಂದು ಈ ಪ್ರಕಾರವಾಗಿ ಇದೆ. ಇವತ್ತಿನ ದಿವಸ ಎರಡು ಸೆಲೆಕ್ಷನ್ ಕಮಿಟಿಗಳೂ ನಡೆಯುತ್ತಿವೆ.

ಮೊದಲು ಸಹ ಯೂನಿವರ್ಸಿಟಿ ವೈಸ್ ಚಾನ್ಸಲರ್ ಈ ಸೆಲೆಕ್ಷನ್ ಕಮಿಟಿಯ ಚೇರ್ಮನ್ ಆಗಿರುತ್ತಿದ್ದರು. 1959ರಲ್ಲಿ ಸರಕಾರ ಈ ಅಧಿಕಾರ ತಮ್ಮ ಕಡೆ ತೆಗೆದುಕೊಂಡು ಎರಡು ಯೂನಿವರ್ಸಿಟಿಗಳಿಗೆ ಎರಡು ಸೆಲೆಕ್ಷನ್ ಕಮಿಟಿಗಳನ್ನು ಮಾಡಿದ್ದಾರೆ. ಇದು ಯಾವ ರೀತಿ ಇದ್ದರೂ ಕೂಡ ಮೊದಲಿನಿಂದ ಇವತ್ತಿನವರೆಗೆ ಅಡ್ಮಿಷನ್ ಬಗ್ಗೆ ಇರುವ ಪ್ರೊಸಿಜರ್‌ನಲ್ಲಿ ಯಾವ ವ್ಯತ್ಯಾಸ ಮಾಡಿಲ್ಲ. ಟೆಕ್ನಿಕಲ್ ಕಾಲೇಜ್ ಆಗಲಿ ಮೆಡಿಕಲ್ ಕಾಲೇಜ್ ಆಗಲೀ ಪ್ರೊಸೀಜರ್ ಒಂದೇ ಇದೆ. ಮೈಸೂರು ಯೂನಿವರ್ಸಿಟಿಗೆ ಅಡ್ಮಿಷನ್‌ಗಾಗಿ ಅರ್ಜಿ ಹಾಕಿದಂತ ವಿದ್ಯಾರ್ಥಿಗಳ ಇಂಟರ್‌ವ್ಯೂ ಮೈಸೂರು ಯೂನಿವರ್ಸಿಟಿಯ ಸೆಲೆಕ್ಷನ್ ಕಮಿಟಿಯವರು ಮಾಡುತ್ತಾರೆ. ಕರ್ನಾಟಕ ಯೂನಿವರ್ಸಿಟಿಗೆ ಅರ್ಜಿ ಹಾಕಿದಂಥ ವಿದ್ಯಾರ್ಥಿಗಳ ಇಂಟರ್‌ವ್ಯೂ ಕರ್ನಾಟಕ ಯೂನಿವರ್ಸಿಟಿ ಸೆಲೆಕ್ಷನ್ ಕಮಿಟಿಯವರು ಮಾಡುತ್ತಾರೆ. ಇದು ಕಳೆದ ಏಳು ವರ್ಷಗಳಿಂದ ನಡೆಯುತ್ತಾ ಬಂದಿದೆ. ಸೆಲೆಕ್ಷನ್ ಕಮಿಟಿ ಒಂದೇ ಆಗಿದ್ದರೂ ಕೂಡ ಎರಡು ಯೂನಿವರ್ಸಿಟಿಗಳಿಗೆ ಎರಡು ಬೇರೆ ಬೇರೆಯಾಗಿ ಇಂಟರ್ ವ್ಯೂ ತೆಗೆದುಕೊಳ್ಳುವ ಪದ್ಧತಿ ಇದೆ. ಮೆಡಿಕಲ್ ಕಾಲೇಜ್ ಅಡ್ಮಿಷನ್ನಿಗಾಗಿ ಇಂಟರ್‌ವ್ಯೂ ತೆಗೆದುಕೊಳ್ಳುವಾಗ್ಗೆ ಕರ್ನಾಟಕ ಯೂನಿವರ್ಸಿಟಿಯ ಜನರನ್ನು ಯೂನಿವರ್ಸಿಟಿಯ ಬೇಸಿಸ್ ಮೇಲೆ ಸೆಲೆಕ್ಷನ್ ಕಮಿಟಿಯು ಸೆಲೆಕ್ಷನ್ ಮಾಡುತ್ತದೆ. ಅದೇ ರೀತಿ ಮೈಸೂರು ಯೂನಿವರ್ಸಿಟಿಯಲ್ಲಿಯೂ ಸೆಲೆಕ್ಷನ್ ಮಾಡಲಾಗುತ್ತದೆ. ಇದರಲ್ಲಿ ಯಾವ ತರಹ ವ್ಯತ್ಯಾಸವಾಗಿಲ್ಲ. ಅದು ಒಂದೇ ರೀತಿಯಾಗಿ ಇಲ್ಲಿಯವರೆಗೆ ನಡೆದುಕೊಂಡು ಬಂದಿದೆ. ಕರ್ನಾಟಕ ಯೂನಿವರ್ಸಿಟಿಗೆ ಜಾಸ್ತಿ ಸೀಟ್ ಕೊಟ್ಟಿದ್ದೇವೆ ಎಂದು ಮಾನ್ಯ ಸದಸ್ಯರು ಭಾವನೆ ಮಾಡಿಕೊಂಡಿರುವುದು ತಪ್ಪು. ಕರ್ನಾಟಕ ಯೂನಿವರ್ಸಿಟಿಗೆ ಜಾಸ್ತಿ ಸೀಟು ಸಿಕ್ಕಿವೆ ಎಂಬ ವಿಚಾರ ಸರಿಯಲ್ಲ. ಈ ರಾಜ್ಯದಲ್ಲಿರುವ ಕಾಲೇಜುಗಳಲ್ಲಿ ಎಲ್ಲರ ಸ್ವತ್ತು ಇರುವುದರಿಂದ ಇದರಲ್ಲಿ ವ್ಯತ್ಯಾಸ ಮಾಡಲು ಆಗುವುದಿಲ್ಲ. ಮುಂದೆ ಬೆಂಗಳೂರು ಯೂನಿವರ್ಸಿಟಿ ಯಾದರೆ ಬೆಂಗಳೂರು ಕಾಲೇಜ್ ವಿದ್ಯಾರ್ಥಿಗಳಿಗೆ ನೂರಕ್ಕೆ ನೂರರಷ್ಟು ಒಂದೂ ಕಡಿಮೆ ಇಲ್ಲದಷ್ಟು ಅಡ್ಮಿಷನ್ ಸಿಕ್ಕಬೇಕಾಗುತ್ತದೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಮೈಸೂರು ಯೂನಿವರ್ಸಿಟಿಯ ವಿದ್ಯಾರ್ಥಿಗಳಿಗೆ ಅಡ್ಮಿಷನ್ ಸಿಕ್ಕಲಿಕ್ಕಿಲ್ಲ ಎಂದು ಹೇಳಬೇಕಾಗುತ್ತದೆ. ಯೂನಿವರ್ಸಿಟಿ ಬೇರೆ ಇದ್ದಂತೆ ಅದರ ವ್ಯಾಪ್ತಿ ಸಹ ಬೇರೆ ಇರುತ್ತದೆ. ಸರಕಾರದ ದೃಷ್ಟಿಯಲ್ಲಿ ಎಲ್ಲ ಕಾಲೇಜುಗಳು ಸಮನಾಗಿ ಇರಬೇಕು ಎಂದಿದೆ. ಯೂನಿವರ್ಸಿಟಿ ವಿದ್ಯಾರ್ಥಿಗಳ ಪಾಪ್ಯುಲೇಷನ್ ಬೇಸಿಸ್ ಮೇಲೆ ಸೀಟು ಹಂಚುವ ಪದ್ಧತಿ ಇಟ್ಟುಕೊಳ್ಳಲಾಗಿದೆ. ಈ ಅಂಶವನ್ನು ಸ್ಪಷ್ಟಪಡಿಸುವುದಕ್ಕೆ ಕೆಲವು ಅಂಕಿ ಅಂಶಗಳನ್ನು ಈ ಮಾನ್ಯ ಸಭೆಯ ಮುಂದೆ ಇಡಲು ಬಯಸುತ್ತೇನೆ. ಅಂದರೆ ಈ ವಿಷಯ ವಿಶದವಾಗಿ ಸದಸ್ಯರಿಗೆ ಅರ್ಥವಾಗುತ್ತದೆ. ಹಿಂದಿನ ಮುಂಬಯಿ ರಾಜ್ಯದಲ್ಲಿಯೂ ಕೂಡ ಯೂನಿವರ್ಸಿಟಿಗೆ ಅನುಗುಣವಾಗಿ ಸೀಟು ಹಂಚುವ ಪದ್ಧತಿ ಇದೆ. ಇವತ್ತಿಗೂ ಕೂಡ ಅದೇ ಪದ್ಧತಿ ಅನುಸರಿಸಿಕೊಂಡು ಬಂದಿರುತ್ತಾರೆ. ಯೂನಿವರ್ಸಿಟಿ ಸ್ಟೂಡೆಂಟ್ಸ್ ಪಾಪ್ಯುಲೇಷನ್ ಬೇಸಿಸ್-ಮೇಲೆ ಸೀಟು ಹಂಚುವ

(ಶ್ರೀ ಎಸ್. ಆರ್. ಕಂಠಿ)

ಪದ್ಧತಿ ಹೇಗೆ ಯೋಗ್ಯವಾಗಿದೆ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ನಾವು ಕೂಡ ಯೂನಿವರ್ಸಿಟಿ ಸ್ಟೂಡೆಂಟ್ಸ್ ಪಾಪ್ಯುಲೇಷನ್ ತೆಗೆದುಕೊಂಡು ಯಾವ ರೀತಿ ಸೀಟು ಹಂಚಲಾಗಿದೆ ಎಂಬುದನ್ನು ಹೇಳುತ್ತೇನೆ.

		Karnatak University	Mysore University
Total strength	1962-63	19,000	40,157
	1963-64	20,900	44,173
P.U.C. strength	1962-63	7,018	14,500

ಆಮೇಲೆ ಮೈಸೂರು ಯೂನಿವರ್ಸಿಟಿಯಲ್ಲಿ 14,500 ಪಿ.ಯು.ಸಿ. ವಿದ್ಯಾರ್ಥಿಗಳಲ್ಲಿ 9,658 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತವರಲ್ಲಿ ಸಯನ್ಸ್ ತೆಗೆದುಕೊಂಡು ಕೂತಿದವರಲ್ಲಿ ಪಾಸಾದವರು 3,324. ಕರ್ಣಾಟಕ ಯೂನಿವರ್ಸಿಟಿಯಲ್ಲಿ 7,018 ಪಿ.ಯು.ಸಿ. ವಿದ್ಯಾರ್ಥಿಗಳು ಇದ್ದರೆ ಸಯನ್ಸ್‌ನಲ್ಲಿ ಅಪಿಯರ್ ಆದವರು 3,163 ಮತ್ತು ಪಾಸಾದವರು 1621. ಈ ಬೇಸಿಸ್ ನೋಡಿದರೆ ಕರ್ನಾಟಕ ಯೂನಿವರ್ಸಿಟಿಗೆ 1 ಆದರೆ ಮೈಸೂರು ಯೂನಿವರ್ಸಿಟಿಗೆ 2 ಆಗುತ್ತದೆ. ಇದನ್ನು ಹೇಳಬೇಕಾಗಿದೆ. ಆದರೆ ಇನ್ನೊಂದು ಮಾತು ಹೇಳುತ್ತೇನೆ. ಮೈಸೂರು ಯೂನಿವರ್ಸಿಟಿಯಲ್ಲಿ ಮತ್ತು ಕರ್ನಾಟಕ ಯೂನಿವರ್ಸಿಟಿಯಲ್ಲಿ ಯಾವ ಯಾವ ಮಾರ್ಕ್ಸ್ ಗ್ರೂಪಿನಲ್ಲಿ ಯಾವ ಯಾವ ರೀತಿಯಿಂದ ವಿದ್ಯಾರ್ಥಿಗಳು ಪಾಸ್ ಆಗಿದ್ದಾರೆ ಎಂಬ ವಿವರವನ್ನು ಸಹ ಹೇಳುತ್ತೇನೆ. ಈ ವಿವರದಿಂದ ಪ್ರಮಾಣ ಯಾವ ರೀತಿಯಾಗಿ ದೆ ಎಂಬುದು ಗೊತ್ತಾಗುತ್ತದೆ. ಅದು ಹೀಗೆ ಇದೆ.—

Marks Group	Mysore University	Karnatak University
96-100	2	1
91-95	40	2
86-90	24	6
81-85	144	15
76-80	187	21
71-75	221	50
66-70	287	49
61-65	393	73

ವಿದ್ಯಾರ್ಥಿಗಳ ಸಂಖ್ಯೆ ಮೈಸೂರು ಯೂನಿವರ್ಸಿಟಿಯಲ್ಲಿ 1,348 ಇದೆ. ಅದೇ ರೀತಿಯಾಗಿ ಕರ್ನಾಟಕ ಯೂನಿವರ್ಸಿಟಿಯಲ್ಲಿ 230 ಮಾತ್ರ ಇದೆ. ಪಿ.ಯು.ಸಿ.ನಲ್ಲಿ ಪರೀಕ್ಷೆಗೆ ಕೂತು ಪಾಸಾದಂಥವರ ಸಂಖ್ಯೆ ಪ್ರಮಾಣ 1-2 ಪ್ರಪೋರ್ಷನ್ ಇರುವುದರಿಂದ ಒಂದಕ್ಕೆ ಎರಡರಂತೆ ಮೈಸೂರು ಯೂನಿವರ್ಸಿಟಿಯಲ್ಲಿ 460 ಈ ಗುಂಪಿನಲ್ಲಿ ಆಗುತ್ತಿತ್ತು. ಆದರೆ ಈ ದಿವಸ ಈ ಗ್ರೂಪಿನಲ್ಲಿ 1,348 ವಿದ್ಯಾರ್ಥಿಗಳು ಇದ್ದಾರೆ. ಮಾರ್ಕ್ಸ್ ಗ್ರೂಪ್ ಸಿಸ್ಟಂ ಎರಡೂ ಯೂನಿವರ್ಸಿಟಿಯಲ್ಲಿ ಬೇರೆ ಬೇರೆ ರೀತಿಯಾಗಿದೆ ಎಂಬುದನ್ನು ಎಲ್ಲರೂ ಒಪ್ಪಬೇಕಾಗುತ್ತವೆ.

Sri SANJEEVANATH AIKALA (Suratkal).—Sir, on a Point of Order to the effect that such a fine speech should go un-reported.

Mr. SPEAKER.—What is to be said more, if at the end of nearly two years or over 1½ years the Hon'ble Member has to raise a Point of Order of this type ? The Members of the M.E.S. have all along been delivering their speeches in Marathi and they are not being recorded. There is no Point of Order.

Sri SANJEEVANATH AIKALA.—I want to make myself clear. The Chair had assured this House in the last session that a Hindi Reporter would be arranged to be appointed early in Legislative Secretariat.

Mr. SPEAKER.—I will have to verify it. If the Hon'ble Member gets me one, I will appoint him.

Sri B. R. SUNTHANKAR (Belgaum City).—Mr. Speaker, Sir, I rise to support this motion of 'no-confidence' in the Council of Ministers moved by the Hon'ble the Leader of the Opposition, because this Government deserves such a motion. This Government deserves to be censured. The mis-deeds and failures of the Ruling Party are so many and so far and so wide they deserve nothing but censure. The Ruling Party is just like the Bourbons of France. It is said of the Bourbon kings of France that they forgot nothing and they learnt nothing

Similarly, this Government, however, the opposition Members may criticize and level charges against them, forgets nothing and learns nothing. That is why we are forced to use this 'Bramhastra' in the words of the Hon'ble Revenue Minister, Sri M. V. Krishnappa. During the last sixteen years there has been virtually a One-Party Rule in this Country. This One-Party Rule has created a false sense of security in the Ruling Party. There has been growing a mood of complacency and indifference, calousness to criticism in the Ruling Party. This callousness and indifference to criticism makes the prospect of Democracy very uncertian and that is very harmful to Democracy. That is why, even in spite of our Will, we had to move such a 'no-confidence' motion.

For want of time, I will deal with only two points. My first point is about the border problem; and the second point I will deal with is the question of linguistic minorities in the State.

Mr. SPEAKER.—Does the border problem form a ground for the 'no-confidence' motion ? It was not raised by anybody up till now.

Sri B. R. SUNTHANKAR.—It does form a ground.

Mr. SPEAKER.—I have given the Hon'ble Members ten minutes and he can use it as best as he can.

Sri B. R. SUNTHANKAR.—Even through nearly seven years have elapsed since the formation of the new State of Mysore, the border problem of this State with all the adjoining States remains unsolved. The Hon'ble The Chief Minister is very generous and liberal in giving assurances only, but they are never implemented. He gives assurances never to be implemented. As the first Chief Minister of the new Mysore State, he gave an assusance that all efforts would be made to bring in all the Kannada areas that are lying in the adjoining States. In the first address of the Governor to this Assembly, there was an assurance by the Government that efforts would be made to bring in Kannada areas in Kasargod, Madaksira, South Sholapur, Akkalkot etc. There are so many Kannada areas in the adjoining State. This Border Problem concerns about two million people, both Kannadigas and Maharashtrians. It concerns the happiness and convenience of two millions of people. Just like we the Maharashtrians of Belgaum, Karwar and Bidar Districts are agitating .....

Sri B. D. JATTI (Minister for Finance).—Is there any agreement between Sri Sunthankar and the Leader of Opposition on this point ?

Sri S. SIVAPPA (Sravanabelagola).—Mysore consists of 19 Districts.

Sri S. M. KRISHNA (Maddur).—On certain principles to be applied or border district, we agree.

Sri B. R. SUNTHANKAR.—There was a definite assurance by the Hon'ble the Chief Minister that all efforts would be made to bring in Kannada areas in the State. I want to know what this Chief Minister or what this Government has done in that direction during the last seven years.

Sir, this matter is left to the Zonal Council. Sir, Mysore is a part of the Southern Zonal Council. There have been eight meetings of the Council and the proceedings are available in the Legislature Library. In

(SRI B. R. SUNTHANKAR)

not a single meeting, this Question of Hosur or Kasargod or Madakasira was raised in the Zonal Council. Why? Sir. Why did not this Government implement the assurances given to those people? They have betrayed those Kannadigas. That is a betrayal. Seven years have elapsed and the question of the Kannadigas lying in the adjoining States is not solved. That is a sheer betrayal of the Kannadigas.

HON'BLE MEMBERS.—Crocodile tears!

Sri B. R. SUNTHANKAR.—These are not crocodile tears. We can realise their hardships more than anybody else here. I say that the Government has failed to bring these Kannada areas into this State. This is one of the greatest failures of the Government. That is a betrayal. When the people of Kasargod approached the Chief Minister, the Chief Minister assured that he would take up that issue. What has he done? He is deceiving the people of Kasargod! That is charge. We can realise what difficulties the Kannadigas in Kasargod have to undergo in a different State. Sir, in the words of the Kasargod people themselves, they are in "a cultural administrative imprisonment" in the Kerala State. That is the State of affairs. We can realise it; not you. Because we are sufferring the same thing.

Mr. SPEAKER.—In respect of the Government of a neighbouring State, to say that its citizens are in imprisonment, it is not fair and I would like the Member not to repeat it.

Sri B. R. SUNTHANKAR.—These are not my words, Sir. These are the words of the people of that area.

Mr. SPEAKER.—Whoever it may be. He should not say that on the floor of the this House. I cannot allow that. It is not fair to the neighbouring State.

Sri B. R. SUNTHANKAR.—I am quoting from the representation made by the people of Kasargod. These are the feelings of the delegation.

Similarly Sir, I say this Government is deceiving the people of Kasargod. About Kasargod one of their own party Members in the Council Hon'ble Sri Achar said some time back, that they were sacrificing Kasargod for the sake of Belgaum. Maharashtra Government is willing......

Mr. SPEAKER.—Whose representative he is?

Sri B. R. SUNTHANKAR.—Hon'ble Sri K. R. Achar is a Member of the Upper House. He is a representative of the Congress Party.

Mr. SPEAKER.—Whatever is said in the Upper House it should not be commented upon here. The deliberations of one legislative chamber are usually not commented upon in the other House.

Sri B. R. SUNTHANKAR.—I am not commenting. I am only quoting, Sir. The Maharashtra Government is willing to transfer the Kannada areas of 260 villages and a population of about four lakhs. But this Government is not prepared to take them, Sir. The Government is not taking them because this Government is afraid that they will have to part with Belgaum and Karwar. About our Marathi area, Sir, I will have

again to quote, on 24th December 1956, the Hon'ble Chief Minister at that time said:

"I for one would not hesitate to have those areas included in their respective linguistic States. It would be necessary." These are his words. What has he done during the last six years? He is going back on his words. The Marathi people of the border areas have adopted all democratic means. They have contested all the elections during the last 7 years right from the Gram Panchayet to the Assembly elections. They have contested all the elections on this sole issue of Maharastra and they have won all the elections. They have thus clearly obtained the verdict of the people. This Government is flouting the verdict of the people. They are trampling upon all democratic rights of the people of the Maharashtrian border areas. Sir, a democratic Government has to respect the wishes of the people. Instead of that, this Government is trampling upon the wishes and democratic rights of the Marathi people in the border areas.

(Interruption from Treasury Benches.)

Sir, I say that this Government has failed, this Chief Minister has failed to solve the border problem and if he cannot solve the border problem, he will have to quit office. For his failure, he should quit office. That is one of the reasons why I support this No-confidence motion.

Sir, my second point is, about linguistic minorities.

Mr. SPEAKER.—It was agreed that everybody should have ten minutes. The Hon'ble member must conclude within two minutes.

Sri B. R. SUNTHANKAR.—I shall be grateful if I can get five minutes, Sir.

Sir, about linguistic minorities, again, I have to quote. The Chief Minister at that time said that he would see that the linguistic minorities were safe and kept satisfied. What is the experience of the last seven years? Are they safe? Are their interests safe and secure? Are they kept satisfied? The answer is 'No.' No linguistic minority is happy in this State, not only Maharastrians, but even Telugu speakers, Tamilians, Urdu speakers, they are not happy in this State. They are not kept satisfied. Sir, the policy of the State is to crush the linguistic minorities and wipe out their languages. That is what is happening in the Marathi areas.

Mr. SPEAKER.—Is it one more ground for non-confidence?

Sri B. R. SUNTHANKAR.—Yes, Sir. That is certainly one more ground. What has been the fate of linguistic minority of the Marathi speakers in the State?. I will tell you about one aspect What is the proportions of the linguistic minorities in Government service? I wish to challenge the Government and ask how many people of minority sections have been recruited in the Government services since the formation of this State? Hundreds of people have been recruited and have been given employment during the last 6 to 7 years. How many of them are Marathi speakers?

(Mr. Speaker rang the bell)

Mr. SPEAKER.—What is the use of my ringing the bell if it has no effect on the Members?

†ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಮಾನ್ಯ ಅಧ್ಯಕ್ಷರೇ, ಈ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ಪ್ರಾರಂಭಮಾಡಿ ಎರಡು ದಿವಸಗಳ ಮೇಲೆ ಆಯಿತು. ವಿರೋಧ ಪಕ್ಷದವರು ಅಂಕಿ ಅಂಶ ಕೊಟ್ಟು ನ್ಯಾಯವಾದ ರೀತಿಯಲ್ಲಿ ಏನೇನು ಹೇಳಬೇಕೋ ಅದನ್ನು ಹೇಳಿದಾರೆ. ಆದರೆ ಯಾವುದೂ ಇಲ್ಲದೆ ಈ ಅವಿಶ್ವಾಸ ನಿರ್ಣಯ ತಂದಿದ್ದಾರೆ, ಆದಾದನೆ ಹೊರಿಸಿ ಅಧಿಕಾರ ಬಿಟ್ಟು ಹೋಗಬೇಕು, ಏನಾದರೂ ಇವರಿಗೆ ಬುದ್ಧಿ ಇದೆಯೇ, ಜ್ಞಾನ ಇದೆಯೇ? ಎಂದು ಅಧಿಕಾರ ಪಕ್ಷದ ಸದಸ್ಯರು ಮಾತನಾಡಿದರು. ಕಣ್ಣು ಇದ್ದೂ ಇವರು ಕುರುಡರಾಗಿದ್ದಾರೆ, ಕಿವಿ ಇದ್ದೂ ಕಿವುಡರಾಗಿದ್ದಾರೆ, ಬಾಯಿ ಇದ್ದೂ ಮಾತನಾಡಲು ಬರುವುದಿಲ್ಲ. ಇಂಥವರಿಗೆ ಅಧಿಕಾರ ಕೊಟ್ಟು ರಾಜ್ಯ ಭಾರ ಮಾಡಲು ಕೊಡಬಹುದೇ? ಉದಾಹರಣೆ ಹೇಳುವುದಾದರೆ ಕೋ-ಆಪರೇಟಿವ್ ಮಿನಿಸ್ಟರು ಸಾಹೇಬರು ತಾವು ಕುಳಿತುಕೊಂಡಂಥ ಸ್ಥಾನದ ಮರ್ಯಾದೆ ಬಿಟ್ಟು ಅವರಿಗೆ ಇರತಕ್ಕಂಥ ಉನ್ನತ ಸ್ಥಾನದ ಮರ್ಯಾದೆ ಬಿಟ್ಟು ನಾಯಿ ನರಿ ಎಂಬ ಶಬ್ದ ಉಪಯೋಗಿಸಿದರು. ಅಂಥ ಗೌರವ ಅವರಿಗೇ ಇರಲಿ. ಅದು ನಮಗೆ ಬೇಡ. ನಾವು ಆ ಮಟ್ಟಕ್ಕೆ ಹೋಗುವುದಿಲ್ಲ. ತುಮಕೂರು ಜಿಲ್ಲೆಯಲ್ಲಿ ಒಂದು ಸಹಕಾರ ಸಂಘದ ವಿವಾದ ಬಗ್ಗೆ ಪತ್ರ ಬರೆದು ತಿಳಿಸಿದ್ದೇನೆ, ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕೇಸು ಆಗಿದೆ ಎಂದು ತಿಳಿಸಿದರೂ ಅವರ ಫೊಟೋ ಅನಾವರಣ ಮಾಡಲಿಕ್ಕೆ ಬಂದರು. ಇದಕ್ಕೂ ಹೆಚ್ಚಿನ ಉದಾಹರಣೆ ಬೇಕೆ? ಹಣ ದುರುಪಯೋಗ ಆಗಿದೆ. ಕೋರ್ಟಿನಲ್ಲಿ ಕೇಸು ನಡೆಯಿದೆ ಎಂದು ಕಾಗದ ಬರೆದರೂ ಅವರ ಫೋಟೋ ಅನಾವರಣ ಮಾಡಿದರು ಎಂದರೆ ದೇಶದಲ್ಲಿ ವಿರೋಧ ಪಕ್ಷ ಹೇಗೆ ಉಳಿಯಬೇಕು?

ಇನ್ನೊಂದು ಅಸ್ತ್ರ ಏನೆಂದರೆ ನಾವು ಅಧಿಕ ಸಂಖ್ಯೆಯಲ್ಲಿ ಇಲ್ಲ, ನಮಗೆ ಬಹುಮತ ಇಲ್ಲ ಎಂದು ಹೇಳುತ್ತೀರಿ. ನಾವೇನೂ ಇಂಗ್ಲೀಷು ಓದಿಲ್ಲ ಒಂದೂ ಇಲ್ಲ. ಇಷ್ಟು ಲಕ್ಷ ರೂಪಾಯಿ ಹಣ ವ್ಯರ್ಥ ಮಾಡಿದ್ದೀರಲ್ಲಾ ಎಂದು ನಾವು ನಿಮ್ಮ ಮೇಲೆ ಛಾರ್ಜ್ ಹಾಕುತ್ತಾ ಇರುವಾಗ ಅದನ್ನು ಸಮರ್ಥಿಸಿಕೊಳ್ಳುವುದಕ್ಕೆ ನಿಮ್ಮಿಂದ ಆಗುತ್ತಿಲ್ಲ ಎಂದ ಮೇಲೆ ನೀವು ಮಂತ್ರಿಗಳಾಗಿದ್ದು ಎಷ್ಟು ಸಾರ್ಥಕವೋ ನಾನಂತೂ ತಿಳಿದುಕೊಳ್ಳಲಾರೆ, ನಿಮಗೆ ಕಂಟ್ರ್ಯಾಕ್ಟರು ಮೋಸ ಮಾಡಿದ್ದಾರೆ. ನೀವು (ಎ) ಕ್ಲಾಸ್ ಕಂಟ್ರ್ಯಾಕ್ಟರು ಎಂದು ಹೇಳಿ ಅವರನ್ನು ನೇಮಕ ಮಾಡಿದ ಉದ್ದೇಶವೇನು? ಅವರಿಂದ ಪೆನಾಲ್ಟಿ ವಸೂಲು ಮಾಡುವುದಕ್ಕೆ ನಿಮ್ಮಿಂದ ಸಾಧ್ಯವಿಲ್ಲವೇ? (ಎ) ಕ್ಲಾಸ್ ಎಂದು ಮಾಡಬೇಕಾದರೆ ಅವರು ನಿಮಗೆ ಎರಡು ಲಕ್ಷ ರೂಪಾಯಿಗಳ ಸೆಕ್ಯೂರಿಟಿ ಕೊಡಬೇಕು. ಯಾವ ರೀತಿ ಅವರಿಗೆ ನೀವು ಕಂಟ್ರ್ಯಾಕ್ಟ್ ಕೊಟ್ಟಿದ್ದೀರಿ ಎಂದರೆ ಅವರು 8-10 ಜನ ಸೇರಿಕೊಂಡು ಅವರವರಲ್ಲೇ ಒಂದು ತೀರ್ಮಾನಕ್ಕೆ ಬಂದಿರುತ್ತಾರೆ. ತುಮಕೂರು ಜಿಲ್ಲೆಗೆ ನಾವು ಬರುವುದಿಲ್ಲ ಎಂದು ಹೇಳಿ ರೇಟು ಜಾಸ್ತಿ ಹಾಕಿ ಬೇಕಾದಷ್ಟು ಹಣ ಸಂಪಾದನೆ ಮಾಡಿಕೊಂಡಿದ್ದಾರೆ. ನಿಮಗೆ ಇನ್ನೊಂದು ಗುರುತರವಾದ ಮಾತನ್ನು ಹೇಳುತ್ತೇವೆ, ನೀವು 10 ಜನ ಎಲೆಕ್ಷನ್‌ನಲ್ಲಿ ಗೆಲ್ಲುವುದೂ ಒಂದೇ ನಿಮಗೆ ಬೇಕಾದಷ್ಟು ಸಹಾಯ ಇರುತ್ತದೆ ನಮ್ಮಂತಹವರು ಏನೂ ಸಹಾಯವಿಲ್ಲದೇ ಜನರನ್ನು ಒಲಿಸಿಕೊಂಡು ಒಬ್ಬರು ಗೆಲ್ಲುವುದೂ ಒಂದೇ, ಇದನ್ನು ತಾವು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮ ಶ್ರೀಮಾನ್ ಕೃಷ್ಣಪ್ಪನವರು—ಕೃಷ್ಣರಾಜ ಒಡೆಯರು—ಅವರಿಗೆ ಕ್ಷತ್ರಿಯ ಮನೋಭಾವ ಇದೆ—ಅವರು ಹೇಳಿದರು.....

2-00 P.M.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಒಡೆಯರು ಎಂಬ ಮರ್ಯಾದೆ ನಮಗೇನೂ ಬೇಕಾಗಿಲ್ಲ, ನಿಮಗೇ ಇರಲಿ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಇರಲಿ, ನಾನು ನಿಮಗೆ ಕೊಡುತ್ತೇನೆ. ನೀವು ಕೃಷ್ಣರಾಜ ಒಡೆಯರು ಆದ ಹಾಗೇ ಆಗುತ್ತಾ ಇದ್ದೀರಿ (ನಗು). ನೀವು ವಿರೋಧ ಪಕ್ಷದಲ್ಲಿ ಇದ್ದಾಗ ಇಂತಹ ಸನ್ನಿವೇಶದಲ್ಲಿ ಯಾವ ರೀತಿ ಮಾತನಾಡುತ್ತಾ ಇದ್ದಿರಿ; ಎಂಬುದು ನಮಗೂ ಗೊತ್ತಿದೆ. ನಿಮ್ಮನ್ನು ಆಗ ಯಾರೂ ಕೇಳುವವರೇ ದಿಕ್ಕಿಲ್ಲ ವಾಕ್ ಔಟ್ ಮಾಡುತ್ತಾ ಇದ್ದೀರಿ ಮತ್ತೆ ಹಿಂದಿನಿಂದ ಬಂದು ಕುಳಿತುಕೊಳ್ಳುತ್ತಾ ಇದ್ದಿರಿ. ಆಗ ನಿಮಗೆ ಚುನಾವಣೆಗಳಾದಾಗ ಕಾರಿನಲ್ಲಿ ಓಡಾಡುವುದಕ್ಕೆ ಪೆಟ್ರೋಲ್ ಇದ್ದದ್ದೇ ಮುಗಿದು ಹೋದಾಗ ನಿಮ್ಮನ್ನು ಛತ್ರಗಳಲ್ಲಿ ಊಟ ಹಾಕಿಸಿ ಮಲಗಿಸಿದ್ದೇವೆ, ಎತ್ತಿನ ಗಾಡಿಗಳಲ್ಲಿ ಬಿಟ್ಟು ಬಂದಿದ್ದೇವೆ, ಈ ರೀತಿ ಏನೂ ಇಲ್ಲದೇ ಇದ್ದವರು ಇವತ್ತಿನ ದಿವಸ ಅಲ್ಲಿ

ಕಳಿತುಕೊಂಡು ಎಲ್ಲಾ ಅನುಭವಿಸುತ್ತಾ ನಿಮಗೆ ಯಾವುದು ಬೇಕೋ ಅದನ್ನು ಹೇಳುತ್ತಾ ಇದ್ದೀರಿ. ನಿಮಗೆ ಜನ ನೀವು ಯಾವ ಅರ್ಧ ರಾಜ್ಯ ತ್ಯಾಗ ಮಾಡಿದ್ದೀರಿ ಎಂದು ಹೇಳಿ ಬೆಂಬಲ ಕೊಡುತ್ತಾರೋ ತಿಳಿಯದು. ನಿಮ್ಮ ಹೆಸರು ಎಲ್ಲೂ ಕಾಣುತ್ತಾ ಇಲ್ಲ, ಮತ್ತೆ ಇನ್ನು ಕೆಲವರು ನಿಮ್ಮ ಬೆಂಬಲಿಗರು ಇದ್ದಾರೆ ಅವರು ನೀವು ಎಲ್ಲೇ ಹೋಗಲಿ ನಿಮ್ಮ ಹಿಂದೆ ಇದ್ದುಕೊಂಡು ಫೋಟೋ ತೆಗೆಸಿಕೊಳ್ಳುತ್ತಾರೆ, ಇದು ಏತಕ್ಕೆ ಗೊತ್ತೇ ? ಪೋಲೀಸ್‌ನವರು ಅವರನ್ನು ಹಿಡಿಯದೇ ಇರಲಿ ಎಂದು ಅವರು ಯಾವಾಗಲೂ ಚೀಫ್ ಮಿನಿಸ್ಟರ್ ಹಿಂದೆಯೇ ಇರುತ್ತಾರೆ, ಇದಕ್ಕೆ ಕಾರಣ ಸರ್ಕಾರದ ಪ್ರೊಟೆಕ್ಷನ್ ಪಡೆಯಬೇಕೆಂದು. ಇದೆಲ್ಲಾ ರಾಜಕೀಯದ ಒಂದು ಜಾಣ್ಮೆ ಇರುತ್ತದೆ, ಜನ ನಿಮ್ಮನ್ನು ನಿಮ್ಮಲ್ಲಿ ಅಧಿಕಾರ ಇರುವುದರಿಂದ ಹಿಂಬಾಲಿಸುತ್ತಾರೆಯೇ ಹೊರತು ಇಲ್ಲದೇ ಇದ್ದರೆ ಯಾರೂ ನಿಮ್ಮನ್ನು ಕೇಳುವುದಿಲ್ಲ, ಬಹಳ ಮೇಧಾವಿಗಳಾದ ಗಾಂಜಿ ವೀರಪ್ಪನವರು ಮತ್ತು ಡಿ. ಎಂ. ಸಿದ್ದಯ್ಯನವರು ಶ್ರೀಮತಿ ಸುಬ್ಬಮ್ಮನವರು ಅದರಲ್ಲೂ ಮತ್ತು ನಮ್ಮ ಸಹೋದರಿಯರಾದ ನಾಗರತ್ನಮ್ಮನವರು ಕಾಗೆ-ಗುಬ್ಬಿ ಕಥೆ ಹೇಳುತ್ತಾರೆಯಲ್ಲಾ ಈ ರೀತಿ ಹೇಳಿದರು, ಅಂಥಾ ಕಥೆಗಳನ್ನು ಹೇಳಿಕೊಂಡು ಕುಳಿತಿರುವುದಕ್ಕೇನು ಈ ವಿಧಾನ ಸಭೆ ಇರುವುದು ? ಸರ್ಕಾರದ ಆಡಳಿತವನ್ನು ದಕ್ಷತೆಯಿಂದ ನಡೆಸಿದ್ದರೆ ಗೊಬ್ಬರದ ಕಾರ್ಖಾನೆ ಎಲ್ಲಿ ಹೋಯಿತು, ಚಿನ್ನದ ಶುದ್ಧೀಕರಣದ ಕಾರ್ಖಾನೆ ಎಲ್ಲಿ ಹೋಯಿತು, ಅಲ್ಯೂಮಿನಿಯಂ ಕಾರ್ಖಾನೆ ಎಲ್ಲಿ ಹೋಯಿತು ? ಮೈಸೂರಿನವರಿಗೆ ಕೇಂದ್ರದಲ್ಲಿ ಮಾನ್ಯತೆ ಇದ್ದಿದ್ದರೆ ಅವುಗಳೆಲ್ಲಾ ಬೇರೆ ದೇಶಗಳಿಗೆ ಹೋಗುವುದಕ್ಕೆ ಕಾರಣವೇನು ? ನಿರುದ್ಯೋಗ ನಿವಾರಣೆ ಮಾಡಬೇಕಾಗಿದ್ದರೆ ಕಾರ್ಖಾನೆಗಳನ್ನು ಹೆಚ್ಚಿಗೆ ಮಾಡಬೇಕು, ಕೈಗಾರಿಕೆಗಳನ್ನು ಹೆಚ್ಚಿಸಬೇಕು, ಹೀಗೆಲ್ಲಾ ಆಗುವುದಕ್ಕೆ ಕಾರಣ ನಿಮ್ಮಲ್ಲಿ ಇರತಕ್ಕ ಭಿನ್ನಾಭಿಪ್ರಾಯ ನಿಮ್ಮಲ್ಲಿ ತಲೆದೋರಿರತಕ್ಕ ವ್ಯಾಜ್ಯ, ಪಕ್ಷಗಳು, ಸ್ವಜನ ಪಕ್ಷಪಾತ, ಕೇಂದ್ರ ಸರ್ಕಾರದವರು ನಮ್ಮ ದೇಶದಲ್ಲಿ ತೆಗೆದಿರುವ ಯಾವ ಕಾರ್ಖಾನೆಯನ್ನು ತೆಗೆದುಕೊಳ್ಳಿ, ಶೇಕಡ 20 ಭಾಗ ಕೂಡ ನಮ್ಮ ಜನರಿಗೆ ಅಲ್ಲಿ ಕೆಲಸ ಸಿಕ್ಕಿಲ್ಲ, ನಿರುದ್ಯೋಗ ಸಮಸ್ಯೆ ಬೃಹದಾಕಾರವಾಗಿ ಬೆಳೆಯುತ್ತಾ ಇರುವಾಗ ನಾವು ಬಹಳ ಚೆನ್ನಾಗಿ ಆಳುತ್ತಾ ಇದ್ದೇವೆ ಎಂದರೆ ಯಾರು ತಾನೆ ನಂಬುತ್ತಾರೆ? ಶ್ರೀಮಾನ್ ಗಾಂಜಿ ವೀರಪ್ಪನವರು ಮತ್ತು ಸಿದ್ದಯ್ಯನವರು ಏಕೆ ಈ ರೀತಿ ವಿರೋಧ ಪಕ್ಷದವರು ಈ ಒಂದು ಬ್ರಹ್ಮಾಸ್ತ್ರವನ್ನು ಪದೇ ಪದೇ ಯಾವುದಕ್ಕೂ ಪ್ರಯೋಜನಕ್ಕೆ ಬಾರದಂತೆ ಉಪಯೋಗಿಸುತ್ತಾರೋ ಗೊತ್ತಾಗುವುದಿಲ್ಲ ಎಂದು ಹೇಳಿದರು. ಇರಲಿ ನಮ್ಮ ಹತ್ತಿರ ಇರುವುದು ಬ್ರಹ್ಮಾಸ್ತ್ರ ಒಂದೇ ಅಲ್ಲ, ಆಟಂಬಾಂಬ್ ಕೂಡ ಇದೆ, ಅದನ್ನು ಮುಂದಿನ ಚುನಾವಣೆಯಲ್ಲಿ ಉಪಯೋಗಿಸುತ್ತೇವೆ.

ಖಾದಿ ಗ್ರಾಮೋದ್ಯೋಗದ ಬೋರ್ಡು ಒಂದು ಇದೆ, ಅವರು ಕೊಟ್ಟಣದ ಅಕ್ಕಿಗೆ 3-4 ಲಕ್ಷ ರೂಪಾಯಿ ಕೊಟ್ಟಿದ್ದಾರಲ್ಲಾ ಸಾಲ, ಇದೇನು ಮೋಹನಾಸ್ತ್ರಕ್ಕೆ ಬಲೆ ಬಿದ್ದರಾ ಸ್ವಾಮಿ ! ಯಾರೋ ಆ ಬಲೆಯನ್ನು ಬೀಸಿದರು ಎಂದು ಕೇಳಿದ್ದೇನೆ. ಆ ಬಲೆಯನ್ನು ತಪ್ಪಿಸಿಕೊಳ್ಳಲಾರದೆ ಎಡವಿಬಿಟ್ಟಿದ್ದೀರಲ್ಲಾ ! ಅಂತಹ ಮೋಹನಾಸ್ತ್ರದಿಂದ ಖಾದಿ ಬೋರ್ಡಿನಲ್ಲಿ ಎಷ್ಟು ಜನರಿಗೆ ಸೌಲತ್ತು ಕೊಟ್ಟಿದ್ದೀರಿ ? ಇದು ಯಾವ ಧರ್ಮ ? ಈ ಎಲ್ಲಾ ಕಾರಣಗಳಿಂದ ಈ ಸರ್ಕಾರ ಅಧಿಕಾರದಲ್ಲಿರುವುದಕ್ಕೆ ಲಾಯಕ್ಕಿಲ್ಲ, ಜಲ್ಲಿ ಕಲ್ಲಿಗೆ 40 ರೂಪಾಯಿ ಕೊಡುವ ಕಡೆ ನೂರು ರೂಪಾಯಿ ಕೊಟ್ಟಿದ್ದೀರಿ, ಇದಕ್ಕೆ ಟೆಕ್ನಿಕಲ್ ಒಪೀನಿಯನ್ ಬೇಕೇ ? ನಮಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತೀರಿ ಮಂಗಳೂರಿನಲ್ಲಿ ವಾರ್‌ಫಂಡ್‌ಗೆ ಹಣ ವಸೂಲು ಮಾಡವುದಕ್ಕೆ ಹೋಗಿ ಪಟೇಲರು ಸ್ವಂತ ರಸೀದಿ ಕೊಟ್ಟು ಹಣ ವಸೂಲು ಮಾಡಿಕೊಂಡು ಬಂದಿದ್ದಾರೆ, ಅದು ಚೀಫ್ ಮಿನಿಸ್ಟರ್ ಫಂಡಿಗೆ ಜಮಾ ಆಯಿತೇ ಎಂದು ಕೇಳಿದರೆ ಇದುವರೆಗೂ ಅದಕ್ಕೆ ದಾಖಲೆ ಇಲ್ಲ. ಇದನ್ನೆಲ್ಲಾ ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡಬೇಕು.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ವಿರೋಧ ಪಕ್ಷದವರು ತಂದಿರುವ ಈ ಅವಿಶ್ವಾಸ ನಿರ್ಣಯವನ್ನು ಸಂಪೂರ್ಣವಾಗಿ ವಿರೋಧಿಸಿ ಒಂದೆರಡು ಮಾತುಗಳನ್ನು ಆಡಬೇಕೆಂದಿದ್ದೇನೆ. ಈ ನಿರ್ಣಯವನ್ನು ಏಕೆ ತಂದರು, ಇದರಿಂದ ಏನಾಗಿದೆ ಎಂಬುದನ್ನು ಶ್ರೀಮತಿ ನಾಗರತ್ನಮ್ಮ ಹಿರೇಮಠ್ ಅವರು ಬಹಳ ವಿಶದವಾಗಿ ಹೇಳಿದ್ದಾರೆ. ಆದ್ದರಿಂದ ಅದನ್ನೇ ನಾನು ಪುನಃ ಹೇಳುವುದಕ್ಕೆ ಹೋಗುತ್ತಿಲ್ಲ. ಇದರ ಅವಶ್ಯಕತೆ ಬಹಳವಾಗಿತ್ತು, ದೂರಾಲೋಚನೆ ಮಾಡಿ ಇದನ್ನು ಪುನಃ ತರಲೇಬೇಕಾಯಿತು ಎಂದು ನಮ್ಮ ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಬಹಳ ಕುತೂಹಲದಿಂದ ಅವರ ಮಾತುಗಳನ್ನು ತೀಪ್ರ ಗಮನವಿಟ್ಟು ಕೇಳಿದೆ. ಇಂತಹ ತೀವ್ರ ಪರಿಸ್ಥಿತಿ ಏನಿತ್ತು ಎಂಬುದು ಏನೂ ನನಗೆ ಕಾಣಬರಲಿಲ್ಲ. ಇದರಲ್ಲಿ ಇನ್ನೊಂದು ಸ್ವಾರಸ್ಯ ಎಂದರೆ ಪ್ರತಿಯೊಬ್ಬರೂ ಮಾತನಾಡುತ್ತಾ ಇದ್ದೀರಿ, ನಮ್ಮ ನಿಜಲಿಂಗಪ್ಪನವರು ಅಂತೀರ, ಅಭಿಮಾನ ಅಂತೀರ, ಗೌರವ ಅಂತೀರ, ವಿಶ್ವಾಸ ಅಂತೀರ ಮತ್ತೆ ಇದನ್ನು ಮಂಡಿಸುತ್ತೇವೆ ಅಂತೀರ ಇದರ ಅರ್ಥ ಗೊತ್ತಾಗುತ್ತಾ ಇಲ್ಲ. ಯಾರೋ ಕೆಲವರ ಮೇಲಿನ

(ಶ್ರೀಮತಿ ರತ್ನಮ್ಮ ಮಾಧವರಾವ್)

ಅಸಮಾಧಾನದಿಂದ ಈ ನಿರ್ಣಯ ಅವರು ತಂದಿದ್ದಾರೆ ಏನೋ ಎಂದು ಕೂಡ ನನಗೆ ಯೋಚನೆ ಬಂದಿದೆ. ತಮಗೇನಾದರೂ ಅಸಮಾಧಾನ ಇದ್ದರೆ ಅದನ್ನು ನೇರವಾಗಿ ಅವರ ಹತ್ತಿರ ಹೋಗಿ ಹೇಳಿ ರಿಪೇರಿ ಮಾಡಿ ಎಂದರೆ ರಿಪೇರಿ ಮಾಡುತ್ತಾರೆ.

ಈ ಮಂತ್ರಿ ಮಂಡಲವನ್ನು ತೆಗೆಯದೇ ಹೋದರೆ ಈ ರಾಜ್ಯದಲ್ಲಿ ಮುಂದೆ ಕೆಲಸ ಕಾರ್ಯಗಳೊಂದೂ ಆಗುವುದಿಲ್ಲ, ಈಗಿರತಕ್ಕ ನ್ಯೂನತೆಗಳನ್ನು ಸರಿಪಡಿಸುವುದಕ್ಕೂ ಆಗುವುದಿಲ್ಲ ಎಂದು ವಿರೋಧಪಕ್ಷದ ಮಾನ್ಯ ಸಂಜೀವನಾಥ ಐಕಳರವರು ಮತ್ತು ಇನ್ನು ಕೆಲವರು ಮಾಡುತ್ತಿದ್ದ ಭಾವ ಪೂರಿತ ಉದ್ವೇಗಪೂರಿತ ಭಾಷಣಗಳನ್ನು ಕೇಳುತ್ತಿದ್ದಾಗ ನನಗೆ ಆ ಕನ್ನಡ ರಂಗಭೂಮಿಯ ಮೇಲೆ ನಾನೀಗ ಆ ಕುರುಕ್ಷೇತ್ರ ನಾಟಕವನ್ನು ನೋಡುತ್ತಿದ್ದೇನೆ, ಆ ಕೌರವೇಂದ್ರನೇ ಇಲ್ಲಿ ಮಾತನಾಡು ತ್ತಿದ್ದನೇನೋ ಅನ್ನುವಂತೆ ಭಾಸವಾಯಿತು. ಆದರೆ ಸ್ವಲ್ಪ ಹೊತ್ತಿನ ಮೇಲೆ ಇದು ಆ ನಾಟಕ ವಲ್ಲ, ಇಲ್ಲಿ ವಿಧಾನ ಸಭೆಯ ಕಾರ್ಯಕಲಾಪಗಳು ನಡೆಯುತ್ತಿವೆ ಎಂಬುದಾಗಿ ಗೊತ್ತಾಯಿತು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಆ ನಿಮ್ಮ ಕುಂದೂರು ರುದ್ರಪ್ಪನವರೋ ?

ಶ್ರೀಮತಿ ರತ್ನಮ್ಮ ಮಾಧವರಾವ್.—ಇನ್ನೊಬ್ಬರು ಇನ್ನೂ ಒಂದು ಸ್ವಾರಸ್ಯವಾದ ಮಾತ ನ್ನಾಡಿದರು. ಈ ಸರ್ಕಾರದಲ್ಲಿ ಎಲ್ಲವೂ ಜಾತಿಯ ಮೇಲೆ ಕೆಲಸಗಳಾಗುತ್ತಿವೆ ಎಂದು ಹೇಳಿ ದರು. ನಡೆಯುತ್ತಿದ್ದರೆ ಅದನ್ನು ಸರಿಪಡಿಸುವುದು ಸದಸ್ಯರುಗಳ ಕರ್ತವ್ಯ. ಹೀಗೆ ಸದಸ್ಯರು ಮಾಡಬೇಕಾದ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳುವುದು ಸರಿಯಲ್ಲ. ವಿರೋಧ ಪಕ್ಷ ಇಂಥ ಒಂದು ರಾಜ್ಯದ ಶಾಸನ ಸಭೆಯಲ್ಲಿ ಒಂದು ಬೆಳಕನ್ನು ಚೆಲ್ಲುದ ಹಾಗಿರಬೇಕು. ವಿರೋಧ ಪಕ್ಷದ ನಾಯಕರು ಎಂದರೆ ಅವರು ಈ ಸಭೆಗೆ ಒಂದು ನಕ್ಷತ್ರದ ಹಾಗಿ ಇರಬೇಕು. ನಮ್ಮ ಪಕ್ಷ ದಲ್ಲೇನೋ ಇಂಥ ಒಂದು ಸುವ್ಯವಸ್ಥೆ ಇದೆ. ಆದರೆ ವಿರೋಧ ಪಕ್ಷದಲ್ಲಿ ಇಂಥ ಒಂದು ವ್ಯವಸ್ಥೆ ಇಲ್ಲವಲ್ಲ ಎಂದು ನನಗೆ ಬಹಳ ವ್ಯಸನವಾಯಿತು.

ಇನ್ನು ಕೆಲವರು ಖಾದಿ ಬಹಳ ಪವಿತ್ರವಾದಂಥ ವಸ್ತು. ಅದನ್ನು ಧರಿಸಿರತಕ್ಕ ಎಲ್ಲ ಖಾದೀ ಧಾರಿಗಳು ತಪ್ಪು ದಾರಿಯಲ್ಲಿ ಹೋಗುತ್ತಿದ್ದಾರೆ ಎಂದು ಹೇಳಿದರು. ಅದು ಸರಿಯಲ್ಲ. ನಾನು ಮಾತನಾಡಬೇಕೆಂದಿರಲಿಲ್ಲ. ಇದನ್ನು ಕೇಳಿದ ಮೇಲೆ ನಾನಿಲ್ಲಿ ಮಾತನಾಡುವಂತಾಯಿತು. ಆದರೆ ಯಾರೋ ಒಬ್ಬರು ಒಂದು ಮಾತನ್ನು ಹೇಳಿದರು—ಪವಿತ್ರವಾದ ಖಾದೀಧರಿಸಿದ ಮಾತ್ರಕ್ಕೆ ಅವರಲ್ಲಿ ಒಳ್ಳೆಯ ಭಾವನೆಗಳು ಇರುತ್ತವೆಯೇ ಎಂದು ಕೇಳಿದರು. ಅವರಲ್ಲಿ ಅಂಥ ಒಳ್ಳೇ ಭಾವನೆಗಳಿರುತ್ತವೆ ಎಂಬುದು ನಿಜ. ಬೇಕಾದರೆ ನೀವೂ ಅದನ್ನು ಹಾಕಿ ಪವಿತ್ರವಾದ ಖಾದಿ ಧರಿಸಿ ಪರೀಕ್ಷೆ ಮಾಡಿ ನೋಡಿ. ಆದರೆ ತಪ್ಪು ಮಾಡುವುದು ಮನುಷ್ಯನ ಸ್ವಭಾವ. ಆದರೆ ಆ ತಪ್ಪುಗಳನ್ನು ತಿದ್ದುವುದು ಹೀಗಲ್ಲ. ನಾವೆಂದೂ ತಪ್ಪನ್ನೇ ಮಾಡುವುದಿಲ್ಲ ಎಂದು ನಾವು ಹೇಳುವುದಿಲ್ಲ. ದೇಶ ಕ್ಕಾಗಿ ದುಡಿದವರು ಅದನ್ನು ಹಾಳು ಮಾಡುವುದಕ್ಕೆ ಎಂದಿಗೂ ತಯಾರಾಗಿಲ್ಲ. ದೇಶದಲ್ಲಿ ನಡೆ ಯುತ್ತಿರುವ ಅನ್ಯಾಯಗಳನ್ನು ತಡೆಗಟ್ಟಲು ನೀವು ನಮ್ಮನ್ನು ಎಂದಾದರೂ ಕರೆದಿದ್ದೀರಾ ಎಂದು ಕೇಳಿದ್ದಾರೆ. ಈ ವಿಚಾರದಲ್ಲಿ ಅವರಿಗೆ ಅಜೀರ್ಣವಾಗುವಷ್ಟರ ಮಟ್ಟಿಗೆ ವಿಧಾನ ಸಭೆಯಲ್ಲಿ ಪ್ರಶ್ನೆ, ಉತ್ತರ ಆದಾಗ್ಯೂ ಎಲ್ಲದರಲ್ಲಿಯೂ ತಿಳಿಸಿದ್ದೀರಿ. ಅವರು ನೀವು ಹೇಳುವುದರಲ್ಲಿ ಯಾವುದು ಸತ್ಯ, ಯಾವುದು ಮಿಥ್ಯ ಎಂದು ಕೇಳಿದ್ದಾರೆ. ಯಾವ ತಕ್ಕಡಿಯಲ್ಲಿ ತೂಗಿದ್ದೀರಿ ಎಂದರು.

ಸತ್ಯ ಮಿಥ್ಯಗಳನ್ನು ನಿರ್ಧರಿಸತಕ್ಕಂಥ ಸರಿಯಾದ ತಕ್ಕಡಿಯಲ್ಲಿ ತೂಗಿ ನಾವು ಮಾತನಾಡುತ್ತಿ ದ್ದೇವೆ. ಆ ತಕ್ಕಡಿ ನಮ್ಮಲ್ಲಿದೆ ನಿಮಗೆ ಸಿಕ್ಕಿಲ್ಲ. ಇನ್ನು ದೇಶದಲ್ಲಿ ಲಂಚದ ಹಾವಳಿ ಬಹಳ ಜಾಸ್ತಿಯಾಗಿದೆ ಎಂದು ಹೇಳಿದರು. ಆದರೆ ಆ ಲಂಚವನ್ನು ಕೊಡತಕ್ಕವರು ಯಾರು ? ಆ ಲಂಚ ಕೊಡತಕ್ಕವರೂ ಅದನ್ನು ತೆಗೆದು ಕೊಳ್ಳತಕ್ಕವರೂ ಈ ಇಬ್ಬರೂ ಒಂದಾದರೆ ಅಂಥವರನ್ನು ಯಾರು ಹಿಡಿದು ಕೊಡಬಲ್ಲರು ? ನಮ್ಮ ಪಕ್ಷದಲ್ಲಿರತಕ್ಕ 139 ಜನ ಸದಸ್ಯರಲ್ಲಿ ಯಾರಾದರೂ ಹೇಳಲಿ-ಯಾವ ಒಂದು ತಾಲ್ಲೂಕ್ ಕಛೇರಿಯಲ್ಲೇ ಆಗಲೀ, ಅಥವಾ ತಾಲ್ಲೂಕ್ ಬೋರ್ಡಿನಲ್ಲೇ ಆಗಲೀ ಲಂಚ ಕೊಡದೇ ಕೆಲಸಗಳಾಗುತ್ತವೆ ಎಂಬುದನ್ನು ಅವರು ಹೇಳಲಿ ಎಂದು ಕೇಳಿದ್ದಾರೆ. ಅದಕ್ಕೆ ನಾನು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಯಾರೂ ಒಂದು ಕಾಸನ್ನೂ ಲಂಚ ಕೇಳು ತ್ತಿಲ್ಲ, ಕೆಲಸ ಕಾರ್ಯಗಳೆಲ್ಲವೂ ಬಹಳ ಚೆನ್ನಾಗಿ ನಡೆಯುತ್ತಿವೆ ಎಂದು ಯಾರು ಬೇಕಾದರೂ ಬಂದು ನೋಡಬಹುದು.

ಇನ್ನು ಕೆಲವರು ಹೇಳಿದರು—ದೇಶದಲ್ಲಿರತಕ್ಕ ಜನರ ನಂಬಿಕೆಯನ್ನು ನೀವು ಕಳೆದುಕೊಂಡಿ ದ್ದೀರಿ, ಆದುದರಿಂದ ನಿಮಗೆ ಈ ರಾಜ್ಯವಾಳತಕ್ಕ ಶಕ್ತಿ ಇರುವುದಿಲ್ಲ ಎಂದು ಹೇಳಿದ್ದಾರೆ. ಇವರಿಗೆ ನಾನಾದರೂ ಇಷ್ಟೇ ಹೇಳುತ್ತೇನೆ. ಈ ಹಿಂದೆ ಇದ್ದಂಥ ಸರ್ಕಾರವೇ ಈಗಲೂ ಇದ್ದಿದ್ದರೆ ಇವರ ನ್ನೆಲ್ಲ ಇದುವರೆಗೆ ಅವರನ್ನೆಲ್ಲಾ ಮಟ್ಟಾ ಹಾಕಿರುತ್ತಿತ್ತು. ಆದರೆ ನಮ್ಮ ಸರ್ಕಾರ ಇರುವುದರಿಂದ

ನಾವು ಆ ಮಟ್ಟಿಕ್ಕೆ ಕೈಹಾಕದೆ ರಾಜ್ಯವನ್ನು ಸತ್ಯ ಧರ್ಮಗಳಿಂದ, ನ್ಯಾಯ ನೀತಿಗಳಿಂದ ಆಳಿಕೊಂಡು ಬರುತ್ತಿದ್ದೇವೆ. ನೀವು ನಮ್ಮನ್ನು ಹೊಗಳದಿದ್ದರೆ ಆ ಮಾತು ಹಾಗಿರಲಿ, ನಮ್ಮ ಮೇಲೆ ಯಾವ ಆಕ್ಷೇಪಣೆಗಳನ್ನೂ ಹೊರಿಸಲು ನಿಮಗೆ ಶಕ್ತಿಯಿಲ್ಲ ಎಂದು ಹೇಳುತ್ತೇನೆ.

ಇನ್ನು ಕೆಲವರು ಈ ವಿದ್ಯುಚ್ಛಕ್ತಿ, ಖಾದೀ ಬೋರ್ಡು, ಶರಾವತಿ ಇವುಗಳ ವಿಚಾರವನ್ನು ಪ್ರಸ್ತಾಪಿಸುತ್ತ ದೇಶದಮೇಲೆ ಹೊರೆ ಜಾಸ್ತಿಯಾಗುತ್ತಿದೆ ಎಂದು ಹೇಳಿದರು. ಆದರೆ ಅವು ವಿರೋಧಪಕ್ಷದವರಿಗೆ ಮಾತ್ರ ಹೊರೆಯಾಗಿರಬಹುದು. ಸಂಶಯಗ್ರಸ್ಥವಾದ ಮನಸ್ಸಿರತಕ್ಕವರಿಗೆ ಎಷ್ಟೇ ಸಮಾಧಾನ ಹೇಳಿದರೂ ನಮಗೆ ಅದರಲ್ಲಿರತಕ್ಕ ಸಂಶಯವನ್ನು ಕಿತ್ತುಹಾಕಲು ಸಾಧ್ಯವಾಗುತ್ತಿಲ್ಲ.

ಇನ್ನು ಕೆಲವರು ಈ ಮಂತ್ರಿಗಳಿಗೆ ರಾಜ್ಯವಾಳತಕ್ಕ ಶಕ್ತಿ ಇಲ್ಲ ಎಂದು ಹೇಳಿದರು. ಇನ್ನೂ ಮೊನ್ನೆ ತಾನೆ ನಡೆದ ಟಗ್-ಆಫ್ ವಾರಿನಲ್ಲಿ ಅವರು ಗೆದ್ದಿರತಕ್ಕದ್ದೆ ಸಾಕು, ಅಲ್ಲಿ ಅವರ ಶಕ್ತಿ ಪರೀಕ್ಷೆ ಆಗಿದೆ. ಅವರು ಬಹಳ ಶಕ್ತಿವಂತರಾಗಿದ್ದಾರೆ, ಆರೋಗ್ಯಶಾಲಿಗಳಾಗಿದ್ದಾರೆ ಅವರಿಗೆ ಈ ಆಡಳಿತವನ್ನು ಸರಿಯಾಗಿ ನಡೆಸಿಕೊಂಡುಹೋಗತಕ್ಕ ಶಕ್ತಿಯಿದೆ ಎಂದು ಎಲ್ಲರಿಗೂ ಗೊತ್ತಾಗಿದೆ. ಇನ್ನು ಕೆಲವರು ಇಂಥ ವಿಶ್ವಾಸ ಘಾತಕರ ನೇತೃತ್ವದಲ್ಲಿ ಮುಖ್ಯ ಮಂತ್ರಿಗಳು ಆಡಳಿತ ನಡೆಸಿಕೊಂಡು ಹೋಗುತ್ತಿದ್ದಾರೆ ಎಂದು ಹೇಳಿದರು. ಆದರೆ ನಮ್ಮ ನಾಯಕರಿಗೆ ವಿಶ್ವಾಸ ಘಾತಕರಿಂದ ಸೋಲೇನೂ ಆಗಲಿಲ್ಲ. ಅವರು ಅವಿರೋಧವಾಗಿ ಆರಿಸಿ ಬಂದಿರುವುದು ಜನತೆಗೆ ಅವರಲ್ಲಿ ಎಷ್ಟು ವಿಶ್ವಾಸವಿದೆ ಎಂಬುದನ್ನು ಅದು ಸೂಚಿಸುತ್ತಿದೆ.

ಆದರೆ ವಿರೋಧಪಕ್ಷದ ಕೆಲವು ಸದಸ್ಯರು ಹೆಣ್ಣುಮಕ್ಕಳ ವಿಚಾರದಲ್ಲಿ ಬಹಳ ಲಘುವಾಗಿ ಮಾತುಗಳನ್ನಾಡಿದ್ದಾರೆ. ಯಾರೇ ಆಗಲಿ ಅಷ್ಟು ಲಘುವಾಗಿ ಮಾತನಾಡಬಾರದು. ನೀವು ನೋಡಿದ್ದೀರಾ ? ಕಂಡಿದ್ದೀರಾ ? ನಿಮಗೆ ಅಕ್ಕತಂಗಿಯರಿಲ್ಲವೇ ? ಅವರು ಈ ಸಭೆಯಲ್ಲಿ ಘನತೆ ಗೌರವಗಳಿಂದ ಮಾತನಾಡಬೇಕು. ಆ ರೀತಿ ಕೆಲವರು ಆ ಮೋಹನಾಸ್ತ್ರ ಹಾಗೆ ಹೀಗೆ ಎಂದು ಹೇಳಿರತಕ್ಕದ್ದನ್ನು ನಾನು ಬಹಳ ವಿಷಾದದಿಂದ ಅದನ್ನು ಖಂಡಿಸುತ್ತೇನೆ.

ಇನ್ನು ಕೆಲವರು ಈ ದೇಶದಿಂದ ಕೈಗಾರಿಕೆಗಳೆಲ್ಲ ಹೋಗುತ್ತವೆ ಎಂದು ಹೇಳಿದರು. ನಾವು ಇಲ್ಲಿ 2–3 ದಿವಸಗಳಿಂದ ಇಲ್ಲಿ ಕುಳಿತುಕೊಂಡು ಇಂಥ ಕೆಲಸಕ್ಕೆ ಬಾರದ ವಿಚಾರಗಳನ್ನು ಚರ್ಚೆ ಮಾಡುವ ಬದಲು ಆ ಕೈಗಾರಿಕ ವಿಚಾರಗಳನ್ನು ಚರ್ಚೆಮಾಡಬಹುದಿತ್ತು. ಆದರೆ ಅಂಥದಕ್ಕೆ ಮನಸ್ಸು ಕೊಡುವುದಿಲ್ಲ.

ಇನ್ನು ಕೆಲವರು ಶ್ರೀಮತಿ ನಾಗರತ್ನಮ್ಮ ಹಿರೇಮಠ ಅವರು ಕಾಗೆ ಗುಬ್ಬಚ್ಚಿ ಕಥೆಗಳನ್ನು ಹೇಳಿ ಒಂದು ಮನರಂಜನೆ ಮಾಡಿದರು ಎಂದು ಹೇಳಿದರು. ಆದರೆ ಅವರು ಹೇಳಿರತಕ್ಕದ್ದರ ಅರ್ಥ ಏನೆಂಬುದನ್ನು ತಾವು ಸರಿಯಾಗಿ ತಿಳಿದುಕೊಂಡರೆ ಆಗ ಅವರು ತಮಗೆ ಎಂಥ ಪೆಟ್ಟನ್ನು ಹಾಕಿದ್ದಾರೆ ಎಂಬುದು ನಿಮಗೆ ಗೊತ್ತಾಗುತ್ತದೆ. ವಿರೋಧಪಕ್ಷದವರು ತಮ್ಮಲ್ಲಿ ಬ್ರಹ್ಮಾಸ್ತ್ರ ಇದೆ ಎಂದು ತಿಳಿದುಕೊಂಡಿದ್ದರೆ, ಅದನ್ನು ನುಂಗುವ ಬ್ರಹ್ಮದಂಡ ನಮ್ಮಲ್ಲಿದೆ ಎಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Before I call upon Sri Namoshi, I want to know the time required. The time extended is expiring and I suppose it is the desire of the House to extend it till 3 o'clock, or 3-30 p.m.

Sri S. NIJALINGAPPA.—One hour more, Sir.

Mr. SPEAKER.—Tentatively I will extend it till 4-30 p.m. It does not mean that it should continue till then. Sri Sanjeevanath referred to certain proceedings. I request him to refer to Rule 120.

The time taken for this Debate by the ruling party including the Ministers is 5 hours 29 minutes. Time taken by the opposition is 6 hours 35 minutes till yesterday. As for the time taken by members to-day the House is fully aware of is.

† ಶ್ರೀ ಗಂಗಾಧರನಾಮೋಶಿ (ಗುಲ್ಬರ್ಗ).—ಸ್ವಾಮಿ, ಈ ಅವಿಶ್ವಾಸ ಠರಾವನ್ನು ಸಮರ್ಥಿಸುತ್ತಾ ಇಲ್ಲಿ ಕೆಲವು ಮಹತ್ವಪೂರಿತವಾದ ವಿಷಯಗಳನ್ನು ಹೇಳಬೇಕಾಗಿದೆ.

ಕಾಂಗ್ರೆಸ್ ಕಡೆಯವರು ಮಾತನಾಡುತ್ತಾ ನಾವು ಕ್ಷುಲ್ಲಕವಾದಂಥ ಠರಾವನ್ನು ತಂದಿದ್ದೇವೆ, ಯಾವ ಒಂದು ಚಾರ್ಜೂ ತಮ್ಮ ಸರ್ಕಾರದಮೇಲೆ ಮಾಡಿಲ್ಲವೆಂದು ಹೇಳಿದರು. ಇವರಮೇಲೆ ಏನು ಚಾರ್ಜು ಕೊಡೋಣ ? ಒಂದು ಚಾರ್ಜು ಇದೆಯೋ, ಎರಡು ಚಾರ್ಜು ಇದೆಯೋ, 3 ಚಾರ್ಜು ಇದೆಯೋ, 4 ಚಾರ್ಜು ಇದೆಯೋ, ಕೊಡೋಣವೆಂದರೆ, ಯಾವ ಡಿಪಾರ್ಟ್‌ಮೆಂಟಿಗೆ ಹೋಗಲಿ, ಅಲ್ಲಿ

(ಶ್ರೀ ಗಂಗಾಧರ ನಾಮೋಶಿ)

ಕರಪ್‌ಷನ್, ನೆಪೊಟಿಸಮ್, ಜಾತೀಯ ಮನೋಭಾವ, ಈ ಜಾತಿಗೆ ಪಕ್ಷಪಾತ ಮಾಡಿದ್ದಾರೆ, ಆ ಜಾತಿಗೆ ಅನ್ಯಾಯ ಮಾಡಿದ್ದಾರೆ ಎಂಬ ಕೂಗು. ಹೀಗೆ ಇವರ ಇಲಾಖೆಗಳಲ್ಲಿಯೇ ಎಲ್ಲಿ ನೋಡಿದರೂ ಸರಕಾರದಮೇಲೆ ದೂರು, ಕೊರಗು ಇರುವಾಗ, ಇನ್ನು ಸ್ಪೆಸಿಫಿಕ್ ಚಾರ್ಜುಗಳನ್ನು ಬರೆದು ಕೊಡಬೇಕೇ? ಇಂಗ್ಲೆಂಡು ಡೆಮಾಕ್ರಟಿಕ್ ದೇಶ, ಬಹಳ ಮುಂದುವರಿದ ದೇಶ ಅಲ್ಲಿ ಸರಕಾರದ ಮೇಲೆ ಚಾರ್ಜ್ ಫ್ರೇಮ್ ಮಾಡಿದಕಾಲಕ್ಕೆ, ಸರಕಾರ ಒಂದು ತಪ್ಪುಮಾಡಿದ್ದರೆ, ತಪ್ಪು ಮಾಡಿದ್ದೇವೆಂದು ಒಪ್ಪಿಕೊಳ್ಳುತ್ತದೆ. ಆದರೆ ಅಲ್ಲಿ ಸರಕಾರ ಏನು ತಪ್ಪು ಮಾಡಿದೆ ಎಂದು ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಹುಡುಕಬೇಕಾಗುತ್ತದೆ. ಇಲ್ಲಿ ನಾವು ಅಂಥ "ಕೇಸ್" ಪ್ರಕರಣವಿದ್ದರೂ ಅದನ್ನು ಹೊರಗೆ ತರಬೇಕೆಂದು ಹೊರಟಿಲ್ಲ. ಬೇರೆ ಎಲ್ಲಿಯೂ ಹೋಗಬೇಕಾಗಿಲ್ಲ, ವಿಧಾನಸೌಧದಲ್ಲಿ ಒಂದು ಚಕ್ಕರ್ ಹೊಡೆದರೆ ಇಲ್ಲಿರುವ ನೌಕರರುಗಳಲ್ಲಿ ಎಷ್ಟು ಅತೃಪ್ತಿ, ಅಸಮಾಧಾನವಿದೆ ಎನ್ನುವುದು ಗೊತ್ತಾಗುತ್ತದೆ. ಎಷ್ಟೋ ಗೆಜೆಟೆಡ್ ಮತ್ತು ಐ.ಎ.ಎಸ್. ಆಫೀಸರುಗಳಿದ್ದು ಸರಕಾರದಮೇಲೆ ಕಂಪ್ಲೇಂಟ್ ಇದೆ; ತಮಗೆ ಪ್ರಮೋಷನ್ಸ್ ಪ್ರಾಪರ್ ಆಗಿ ಕೊಡುತ್ತಿಲ್ಲ, ಅನ್ಯಾಯವಾಗಿದೆ ಎಂದು ಹೇಳುತ್ತಾರೆ. ಕಮ್ಯೂನಲ್ ಮತ್ತು ಕ್ಯಾಸ್ಟ್ ಕನ್ಸಿಡರೇಷನ್ ಮೇಲೆ ಸರಕಾರದ ಕೆಲಸ ಕಾರ್ಯಗಳು, ಬಡ್ತಿ ನಡೆಯುತ್ತಿವೆ ಎಂದು ಹೇಳುತ್ತಾರೆ. ಬಹುಮಂದಿಯಿಂದ ತಮಗೆ ನ್ಯಾಯವಾಗಿ ಬರಬೇಕಾದ ಪ್ರಮೋಷನ್ ಬಂದಿಲ್ಲ, ತಮ್ಮನ್ನು ವಿನಾಕಾರಣ ಸಸ್ಪೆನ್‌ಷನ್ ಮಾಡಿದ್ದಾರೆ, ತಮಗೆ ಟ್ರಾನ್ಸ್‌ಫರ್‌ಮಾಡಿ ನರಳಾಡಿಸುತ್ತಿದ್ದಾರೆ ಎಂದು ಎಷ್ಟೋ ದೂರುಗಳು ನೀವು ಒಂದು ರೌಂಡು ಹೋಗಿ ಬಂದರೆ ಬರುತ್ತವೆ. ಆಂಟಿ-ಕರಪ್‌ಷನ್ ಇಲಾಖೆಯಿಂದ ಬಹಳ "ಕಾಂಗ್ರೆಸ್" ಆಗುತ್ತಿದೆ. ಒಬ್ಬ ಐ.ಸಿ.ಎಸ್. ಸೆಕ್ರೆಟರಿ, ಒಬ್ಬ ಸಿ.ಐ.ಡಿ. ಜೊತೆಗೆ ವಿಧಾನಸೌಧ ಸುತ್ತಿದರೆ ಇದೆಲ್ಲ ಗೊತ್ತಾಗುತ್ತದೆ. ಎಷ್ಟೆಷ್ಟು ಪ್ರಾಮಾಣಿಕ ನೌಕರರುಗಳಿಗೆ ಏನೂ ಅಪಾದನೆಯಿಲ್ಲದೆ ಟ್ರಾನ್ಸ್‌ಫರ್ ಮಾಡಿದ್ದಾರೆಂದು ಗೊತ್ತಾಗುತ್ತದೆ. ಹೀಗಾದರೆ ಡಿಸ್‌ಕಂಟೆಂಟ್ ಹುಟ್ಟುವುದಿಲ್ಲವೇ? ಮೊರೇಲ್ ಹೋಗುವುದಿಲ್ಲವೇ? ನಿಜವಾಗಿ ಇಡೀ ಅಡ್ಮಿನಿಸ್ಟ್ರೇಷನ್‌ನಲ್ಲಿ ಗವರ್ನ್‌ಮೆಂಟ್ ಆಫೀಸರುಗಳಲ್ಲಿ ಮಾರಲ್ ಡೌನ್ ಆಗಿದೆ. ಅವರಿಗೆ ಸರ್ವೀಸ್ ಗ್ಯಾರಂಟಿ ಇಲ್ಲದಿರುವುದರಿಂದ, ನೆಮ್ಮದಿ ಇಲ್ಲ. ಅವರಿಗೆ ಬಹಳ ಹೆರ್‍ಯಾಸ್‌ಮೆಂಟ್ ಇದೆ. ಅನಾವಶ್ಯಕವಾಗಿ ಆಫೀಸರುಗಳನ್ನು ಸಸ್ಪೆಂಡು, ಟ್ರಾನ್ಸ್‌ಫರ್ ಮಾಡುತ್ತಿರುವುದರಿಂದ ಸರ್ಕಾರಕ್ಕೆ ಬಹಳ ಲುಕ್ಸಾನ್ ಆಗುತ್ತಿದೆ. ಉದಾಹರಣಾರ್ಥವಾಗಿ ಹೇಳುವುದಾದರೆ, ಗುಲ್ಬರ್ಗದಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ನೌಕರರು ಹಂಗರ್ ಸ್ಟ್ರೈಕ್ ನೋಟೀಸ್ ಕೊಟ್ಟಿದ್ದಾರೆ. ಡ್ರೈವರು, ಕಂಡಕ್ಟರುಗಳಿಗೆ 10 ರೂಪಾಯಿ ಪಗಾರದಲ್ಲಿ ಜಾಸ್ತಿಯಾಗಿದೆ. ಆದರೆ ಅವರ ಸಸ್ಪೆನ್‌ಷನ್ ಪದೇಪದೇ ನಡೆಯುತ್ತಿದೆ. ಮೋಟಾರ್‌ವೆಹಿಕಲ್ಲುಗಳು ಒಳ್ಳೆಯ ಸ್ಥಿತಿಯಲ್ಲಿರುವುದಿಲ್ಲ, ರಸ್ತೆ ಚೆನ್ನಾಗಿರುವುದಿಲ್ಲ, ಅಕಸ್ಮಾತ್ ಕ್ರ್ಯಾಶ್ ಆಯಿತು ಎಂದರೆ ಸಸ್ಪೆನ್‌ಷನ್. ಡ್ರೈವರಿಗೆ ಎರಡು ದಿವಸ ಸಸ್ಪೆಂಡಾದರೆ, ಆರು ರೂಪಾಯಿ ಸಂಬಳ ಹೋಯಿತು; ಕಂಡಕ್ಟರಿಗೆ 2 ದಿನದ ಸಂಬಳ ಫೈನ್ ಹಾಕಿದರೆ, 4 ರೂಪಾಯಿ ಹೋಯಿತು. ಈ ತರಹ ಎಲ್ಲಾ ಮಾಡುತ್ತಿರುವುದರಿಂದ, ಗವರ್ನ್‌ಮೆಂಟ್ ಸರ್ವೆಂಟುಗಳಿಗೇ ನಿಮ್ಮಲ್ಲಿ ವಿಶ್ವಾಸ ಉಳಿದಿಲ್ಲ. ಕೆಲವು ನೌಕರರುಗಳಮೇಲೆ ಆಂಟಿ-ಕರಪ್‌ಷನ್ ಇಲಾಖೆಯವರು ಚಾರ್ಜ್ ಫ್ರೇಮ್ ಮಾಡಿ, ಅಪರಾಧವನ್ನು ರುಜುಪಡಿಸಿ, ಡಿಸ್‌ಮಿಸ್ ಮಾಡಬೇಕೆಂದು ಶಿಫಾರಸು ಕಳುಹಿಸಿದ್ದರೂ, ಅಂಥವರನ್ನು ಕಾಂಗ್ರೆಸಿನವರು ಶಿಕ್ಷೆಗೆ ಒಳಗಾಗದಂತೆ ಉಳಿಸಿದ್ದಾರೆ. ಇನ್ನು ಕೆಲವರಮೇಲೆ, ಏನೂ ಚಾರ್ಜ್ ಇಲ್ಲ, ಡಿಪಾರ್ಟ್‌ಮೆಂಟ್ ಚಾರ್ಜೂ ಇಲ್ಲ, ಅವರನ್ನು ಸಸ್ಪೆನ್‌ಷನ್ ಮಾಡಿ ಮನೆಗೆ ಕಳುಹಿಸಿದ್ದಾರೆ. ಈಚೆಗೆ ನಡೆದ ಕೆಲವು ಉದಾಹರಣೆಗಳನ್ನು ಹೇಳುವುದು ನಿಮಗೆ ಅಹಿತವಾಗುವುದೆಂದು ಕಾಣಿಸುತ್ತದೆ; ಆದ್ದರಿಂದ ಹೇಳುವುದಿಲ್ಲ, ನಿಮ್ಮ ಪಾಲಿಸಿಗಳನ್ನು ಇಂಪ್ಲಿಮೆಂಟ್ ಮಾಡತಕ್ಕಂಥ ಮೆಷಿನರಿಯ ವಿಶ್ವಾಸವನ್ನೇ ನೀವು ಉಳಿಸಿಕೊಂಡಿಲ್ಲ. ಅಂದಮೇಲೆ ನೀವು ರಾಜ್ಯಭಾರವನ್ನು ಹೇಗೆ ನಡೆಸುತ್ತೀರಿ? ಅವರ ಬಲವನ್ನು ಮಂತ್ರಿಮಂಡಲ ಉಳಿಸಿಕೊಂಡಿಲ್ಲ. ಅವರ ವಿಶ್ವಾಸಕ್ಕೆ ಈ ಸರ್ಕಾರ ಪಾತ್ರರಾಗಿಲ್ಲ. ಆದಕ್ಕೋಸ್ಕರ ಈ ಸರ್ಕಾರ ರಾಜೀನಾಮೆ ಕೊಡಬೇಕು ಎಂದು ಹೇಳುತ್ತೇನೆ.

ಅನಂತರ ಮಾನ್ಯ ರೆವಿನ್ಯು ಮಂತ್ರಿಗಳಾದಂಥ ಶ್ರೀಮಾನ್ ಕೃಷ್ಣಪ್ಪನವರು ಮೊನ್ನೆ ಮಾತನಾಡುತ್ತಾ, ಸರ್ ಎಂ. ವಿಶ್ವೇಶ್ವರಯ್ಯನವರು ಕನ್ನಂಬಾಡಿ ಒಂದು ಕಟ್ಟಿದರು, ಏನು ಮಹಾ ಮಾಡಿದರು ಎಂದು ಹಗುರವಾಗಿ ಅಂಥ ಯೋಗ್ಯ ಮನುಷ್ಯರ ವಿಚಾರದಲ್ಲಿ ಹೇಳಿದರು. ಆ ಮಹನೀಯರು ಎಂಥೆಂಥ ದೊಡ್ಡ ಕೆಲಸ ಮಾಡಿದ್ದಾರೆಂದು ಅರ್ಥ ಮಾಡಿಕೊಂಡಿದ್ದಾರೇನು?

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ ಎಂ. ವಿಶ್ವೇಶ್ವರಯ್ಯನವರು ಮಹನೀಯರು, ಅವರ ಕಾಲದಲ್ಲಿ ಒಂದೇ ಒಂದು ಪ್ರಾಜೆಕ್ಟ್ ಕಟ್ಟಿದರು; ಈಗ 15 ವರ್ಷಗಳಲ್ಲಿ 10-15-20-30 ದೊಡ್ಡ ಕೆಲಸ ಮಾಡಿದ್ದೇವೆಂದು ಹೇಳಿದರೇ ವಿನಾ ವಿಶ್ವೇಶ್ವರಯ್ಯನವರ ಮಹತ್‌ಕಾರ್ಯ ಸಾಧನೆ ನನಗೆ ಗೊತ್ತು

ಮೊದಲು ಅವರದು ನಮ್ಮ ಪಕ್ಷದ ಗ್ರೂಪು, ಅವರಬಗ್ಗೆ ನನಗೆ ಅಪಾರಗೌರವ, ವಿಶ್ವಾಸವಿದೆ. ನಾನು ಹೇಳಿದ್ದನ್ನು ತಾವು ಅಪಾರ್ಥ ಮಾಡಿಕೊಂಡಿದ್ದೀರಿ.

ಶ್ರೀ ಗಂಗಾಧರನಾಮೋಶಿ.—ಇದು ಎಲ್ಲಾ ನಿಮಗೆ ಅಭ್ಯಾಸವಾಗಿಹೋಗಿದೆ. ಒಬ್ಬರನ್ನು ಹಳಿಯುವುದು, ತಮ್ಮ ದೊಡ್ಡಸ್ತಿಕೆ ಹೇಳಿಕೊಳ್ಳುವುದು ನೀವು ಸೋಶಿಯಲಿಸ್‌ಮ್, ಪಬ್ಲಿಕ್ ಸೆಕ್ಟಾರ್ ಎಂದು ಹೇಳಿಕೊಂಡು, ಮೈಸೂರಿನಲ್ಲಿ ಪ್ರೈವೇಟ್ ಸೆಕ್ಟಾರಿಗೆ ಪರ್ಮಿಷನ್‌ಕೊಟ್ಟು ಅದಕ್ಕೆ ಉತ್ತೇಜನ ಕೊಡುತ್ತಿದ್ದೀರಿ. ಸರ್ ಎಂ. ವಿಶ್ವೇಶ್ವರಯ್ಯನವರು ಸೋಶಿಯಲಿಸಂ ಮಾತನಾಡಲಿಲ್ಲ, ಪಬ್ಲಿಕ್ ಸೆಕ್ಟಾರಿನಲ್ಲಿ ಬಹಳ ಕೆಲಸ ಸಾಧನೆ ಮಾಡಿದರು, ಭದ್ರಾವತಿ ಕಾರ್ಖಾನೆ ಕಟ್ಟಿದರು, ಸಿಮೆಂಟ್ ಕಾರ್ಖಾನೆ ಕಟ್ಟಿದರು, ಸಕ್ಕರೆ ಕಾರ್ಖಾನೆ ಕಟ್ಟಿದರು; ವಿದ್ಯುಚ್ಛಕ್ತಿ ಉತ್ಪಾದನೆಗೆ ಹೆಚ್ಚು ಸಹಕಾರ ಕೊಟ್ಟರು. ಅವರು ಇಷ್ಟು ಕೈಗಾರಿಕೆಗಳನ್ನು ಪಬ್ಲಿಕ್ ಸೆಕ್ಟಾರಿನಲ್ಲಿ ಮಾಡದಿದ್ದರೆ, ಅವು ಇಷ್ಟು ಮಟ್ಟಿಗೆ ಬೆಳೆಯುತ್ತಲೂ ಇರಲಿಲ್ಲ, ನೀವು ಪಬ್ಲಿಕ್ ಸೆಕ್ಟಾರ್‌ಬಗ್ಗೆ ಇಷ್ಟು ಹೆಮ್ಮೆಪಟ್ಟುಕೊಳ್ಳುವುದಕ್ಕೆ ಅವಕಾಶವಿರುತ್ತಿರಲಿಲ್ಲ, ಅವರೇ ವಿದ್ಯುಚ್ಛಕ್ತಿ ಇಲಾಖೆಯನ್ನು ಮಾಡಿದವರು; ನೀವು ಬೋರ್ಡ್ ಎಂದು ಮಾಡಿಕೊಂಡಿದ್ದೀರಿ, ನೀವು ಆ ಅಪೂರ್ವ ಪುರುಷರು ಮಾಡಿರುವಂಥಾದ್ದನ್ನು ಏನೂ ಮಾಡಿಲ್ಲ, ಆದರೂ ನಿಮ್ಮ ದೊಡ್ಡಸ್ತಿಕೆಯನ್ನು ಹೇಳಿಕೊಳ್ಳುತ್ತೀರ. ಅವರು ವಿದ್ಯುಚ್ಛಕ್ತಿಗೆ ಪ್ರಾಶಸ್ತ್ಯಕೊಟ್ಟು ಅಷ್ಟೆಲ್ಲಾ ಮಾಡಿದರೆ, ನೀವು ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಮಾಡಿದ್ದೇನು? ಎಲೆಕ್ಷನ್ನಿನಲ್ಲಿ ಸೋತುಹೋದ ಒಬ್ಬ ಕಾಂಗ್ರೆಸ್ಸಿನವರನ್ನೇ, ಎಲ್ಲಿಯೂ ಜಾಗವಿಲ್ಲದೆ, ಎಲೆಕ್ಟ್ರಿಸಿಟಿ ಬೋರ್ಡಿನ ಚೇರ್ಮನ್ನಾಗಿ ನೇಮಕ ಮಾಡಿದಿರಿ. ಇವೊತ್ತು ನೀವು ಪಬ್ಲಿಕ್ ಸರ್ವೀಸ್ ಕಮಿಶನ್ನಿಗೆ ನೇಮಿಸಿರುವ ಮೆಂಬರು, ಎಲೆಕ್ಟ್ರಿಸಿಟಿ ಬೋರ್ಡಿಗೆ ಮಾಡಿರುವ ಚೇರ್ಮನ್, ಅಡ್‌ವೈಸರಿ ಬೋರ್ಡು ಗಳಿಗೆ ನೇಮಿಸಿರುವ ಸದಸ್ಯರು ಮತ್ತು ಅಧ್ಯಕ್ಷರನ್ನು ನೋಡಿದರೆ ನಿಮ್ಮ ನೀತಿ ಗೊತ್ತಾಗುತ್ತದೆ. ಈಗಾಗಲೇ ಇರುವ ನೂರಾರು ಉದಾಹರಣೆಗಳ ಜೊತೆಗೆ ಇನ್ನೊಂದು ಉದಾಹರಣೆ ಕೊಡಬಹುದು. ಈಚೆಗೆ ಸ್ಟೇಟ್ ಇಂಡಸ್ಟ್ರೀಸಿಗೆ ನೀವು ನಾಮಿನೇಟ್ ಮಾಡಿದ ಬಗ್ಗೆ ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಗವರ್ನ್‌ಮೆಂಟ್ ಇಂಡಸ್ಟ್ರೀಸಿಗೆ ಆಗಲಿ, ಪ್ರೈವೇಟ್ ಇಂಡಸ್ಟ್ರೀಸಿಗೇ ಆಗಲಿ, ಐ.ಎ.ಎಸ್. ಆಫೀಸರ್ ಗಳನ್ನು ನಾಮಿನೇಟ್ ಮಾಡಬಹುದು, ಅವರಿಗೆ ಟಿ.ಎ. ಡಿ.ಎ. ರೂಲ್ಸ್ ಪ್ರಕಾರ ಸಿಕ್ಕುತ್ತದೆ, ಅವರು ಹೆಚ್ಚಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನೀವು ನಿಮ್ಮ ನೀತಿಯನ್ನು ಬದಲಾಯಿಸಿಕೊಳ್ಳ ದಿರುವುದರಿಂದ ಎಂಥೆಂಥ ಅನಾಹುತ ನಡೆದಿದೆ. ಶರಾವತಿಯಲ್ಲಿ ಸಿಮೆಂಟ್ ಮಾಯವಾಗಿದೆ; ಕಬ್ಬಿಣ ಕದ್ದು ಮಾರಾಟವಾಗುತ್ತಿದೆ. ಆದಕಾರಣ ಸರಕಾರದವರು ಬೇಗನೆ ತಮ್ಮನ್ನು ತಾವೇ ಸುಧಾರಿಸಿಕೊಳ್ಳಬೇಕು. ಕಾಮರಾಜ್ ಪ್ಲಾನ್ ಎಂದು ಹೇಳುತ್ತಿದ್ದೀರಿ. ಆದರೆ ನಿಜಲಿಂಗಪ್ಪ ನವರು ಮುಖ್ಯಮಂತ್ರಿ ಸ್ಥಾನದಿಂದ ನಿವೃತ್ತರಾಗುವ ಹಾಗೆ ಕಾಣಲಿಲ್ಲ. ಆದರೆ ಕಾಮರಾಜ ಸೂತ್ರವನ್ನು ಈ ರಾಜ್ಯದಲ್ಲಿ ಜಾರಿಗೆ ಕೊಡುವ ಕಾಲಕ್ಕೆ ಜಾತಿಯಮೇಲೆ ಮಂತ್ರಿಗಳನ್ನು ಆರಿಸು ವುದನ್ನು ಕಡಿಮೆ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಜಾತಿ ಆಧಾರದಮೇಲೆ ಮಂತ್ರಿಮಂಡಲವನ್ನು ರಚಿಸಬೇಡಿ. ಯಾರು ಯೋಗ್ಯರಿದ್ದಾರೋ, ಯಾರಿಗೆ ಸೆಕ್ಯುಲರ್ ಔಟ್‌ಲುಕ್ ಇದೆಯೋ, ಅಂಥವರನ್ನು ಇಟ್ಟುಕೊಂಡು ಮಿಕ್ಕವರನ್ನು ಬದಲಾಯಿಸುವುದು ಒಳ್ಳೆಯದು. ನಿಮ್ಮ ಮಂತ್ರಿಮಂಡಲದಲ್ಲಿರುವವರು ದೇಶಕ್ಕಾಗಿ ತ್ಯಾಗಮಾಡಿಲ್ಲ, ಅವರಿಗೆ ನ್ಯಾಷನಲ್ ಔಟ್‌ಲುಕ್ ಇಲ್ಲ. ದೇಶದ ಅಭಿಮಾನವಿರುವವರು ಇಲ್ಲ. ದೇಶಭಕ್ತಿ ಇರುವವರು ಮಂತ್ರಿಮಂಡಲದಲ್ಲಿರಬೇಕು. ದೇಶಾಭಿಮಾನಿಗಳೇ ಜನತೆಯ ಸಂಕಟಗಳನ್ನು, ಕುಂದು ಕೊರತೆಗಳನ್ನು ಬಗೆಹರಿಸಬಲ್ಲರು. ಅವರ ಹೆಸರು ತೆಗೆದುಕೊಂಡು ಹೇಳಿರಿ, ಆಗ ತ್ಯಾಗ ಮಾಡಿದಂಥವರು ಎಂದು ಸ್ವಲ್ಪ ಭಾವನೆ ಬರುತ್ತದೆ. ಆದರೆ ತ್ಯಾಗ ಮಾಡಿದ್ದೂ ಇಲ್ಲ, ಏನೂ ಇಲ್ಲ. ಇರುವುದೆಲ್ಲ ಒಂದೇ ಒಂದು, ಅದು ಕೋಮು ಭಾವನೆ. ಈ ಕೋಮು ಭಾವನೆ, ಮೈನಾರಿಟಿ ಪಂಗಡದವರು—ಅವರೂ ಇರಲಿ, ಅವ ರಿಗೂ ಪ್ರತ್ಯೇಕ ಸಹಾಯವಾಗುವುದಿರಲಿ—ಇಂಥದ್ದನ್ನೆಲ್ಲ ನೋಡಬೇಡಿರಿ. ಇನ್ನಾದರೂ ತಾವು ಕಾಮರಾಜ್ ಪ್ಲಾನನ್ನು ಮೈಸೂರು ಮಂತ್ರಿಮಂಡಲಕ್ಕೂ ಅನ್ವಯಿಸಿ ಮಂತ್ರಿಮಂಡಲದ ಗಾತ್ರ ವನ್ನು ಕಡಮೆ ಮಾಡಿ ಒಳ್ಳೆಯ ಮಂತ್ರಿಮಂಡಲವನ್ನು ರಚಿಸಬೇಕು. ಹಾಗೆ ಮಾಡುವಾಗ ಯಾವ ಜಾತಿಯವರನ್ನು ಕಡಮೆ ಮಾಡಬೇಕು ಎಂದು ಯೋಚಿಸದೆ ದಕ್ಷರಾದ, ಯೋಗ್ಯರಾದ ಜಾತ್ಯಾತೀತ ವ್ಯಕ್ತಿಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

2-30 P.M.

† ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಅಧ್ಯಕ್ಷರೇ, ಈಗ ಎರಡು ದಿವಸಕ್ಕಿಂತ ಮೇಲ್ಪಟ್ಟು ಸ್ವಾರಸ್ಯವಾದ ಭಾಷಣಗಳನ್ನು ಕೇಳಿದೆವು. ತಾವು ದಯವಿಟ್ಟು ಎಷ್ಟು ಜನಕ್ಕೆ ಬೇಕೋ ಅಷ್ಟು ಜನಕ್ಕೆ ಅವಕಾಶ ಕೊಟ್ಟಿದ್ದೀರಿ. ಏಕೆ ಈ ನಿರ್ಣಯ ಬಂತು ಎಂದು ಯೋಚನೆ ಮಾಡಿದೆ. ಬಹುಶಃ

(ಶ್ರೀ ಎಸ್. ನಿಜಲಿಂಗಪ್ಪ)

ಒಂದು ಅವಕಾಶ ಸಿಕ್ಕಲಿಲ್ಲವೆಂದು ಕಾಣುತ್ತದೆ ನಮ್ಮ ವಿರೋಧ ಪಕ್ಷದ ಸ್ನೇಹಿತರಿಗೆ ಬಯ್ಯುವುದಕ್ಕೆ. ಒಂದು ಅವಕಾಶವಿತ್ತು, ಅದು ತಪ್ಪಿ ಹೋಯಿತು ಎಂದು ಇದನ್ನು ತಂದಿರಬಹುದು. ಪಬ್ಲಿಕ್ ಸರ್ವಿಸ್ ಕಮಿಷನ್ ವಿಚಾರದಲ್ಲಿ ರಿಪೋರ್ಟ್ ಬಂದಿತ್ತು. ಅದು ಈ ಸಭೆಯಲ್ಲಿತ್ತು. ಅವರು ಇಲ್ಲದೆ ಇದ್ದಾಗ ಆ ನಿರ್ಣಯವನ್ನು ಒಪ್ಪಿಕೊಂಡೆವು. ಬಯ್ಯುವುದಕ್ಕೆ ಅವಕಾಶ ಸಿಕ್ಕಲಿಲ್ಲವೆಂದು ಮಾರನೆಯ ದಿವಸವೇ ಈ ನಿರ್ಣಯ ಬಂತು, ಅವಿಶ್ವಾಸ ನಿರ್ಣಯ. ಅದಕ್ಕೆ ಅವಕಾಶ ಸಿಕ್ಕಿದ್ದರೆ ಇದು ಬರುತ್ತಿರಲಿಲ್ಲವೆಂದು ನನಗನ್ನಿಸುತ್ತದೆ. ಅವರನ್ನು ಹೋಗಿ ಎಂದು ನಾವು ಹೇಳಲಿಲ್ಲ. ಎಲ್ಲರೂ ಹೋಗಲಿ. ಈ ಸಭೆಗೆ ಸಂಬಂಧಪಟ್ಟಂಥ ನಿಯಮಗಳ ಪ್ರಕಾರ ಅದು ಅಂಗೀಕಾರ ವಾಯಿತು. ಬಹಳ ಅನ್ಯಾಯ ಮಾಡಿದ್ದೀರಿ ಅದನ್ನು ವಿಚಾರ ಮಾಡುವುದಕ್ಕಾಗುವುದಿಲ್ಲವೇ ಎಂದು ಕೇಳಿದರು. ಅದನ್ನು ಪುನಃ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಕ್ಕೆ ಸಿಟ್ಟು ಬಂತು ಎಂದು ಕಾಣುತ್ತದೆ ಕೆಲವರಿಗೆ, ಈ ನಿರ್ಣಯವನ್ನು ತಂದಿದ್ದಾರೆ. ಈ ನಿರ್ಣಯಕ್ಕೆ ಏನಾದರೂ ಆಧಾರವಿದೆಯೇ ಎಂದರೆ, ಹೊಸದೇನಾದರೂ ಹೇಳಿದ್ದಾರೆಯೇ ಎಂದರೆ ಯೋಚನೆ ಮಾಡಿದರೆ ಒಂದು ವಿಚಾರವೂ ಹೊಸದಲ್ಲ. ಇದೇ ಸಭೆಯಲ್ಲಿ ಒಂದು ವರ್ಷದ ಮೇಲೆ ಒಂದು ತಿಂಗಳ ಕೆಳಗೆ ಅವಿಶ್ವಾಸ ನಿರ್ಣಯವನ್ನು ತಂದರು. ಅಲ್ಲಿ ಹೇಳಿದ್ದೂ ಇದೇ, ಇಲ್ಲಿ ಹೇಳಿದ್ದೂ ಅದೇ. ಇವತ್ತು ಮಾತನಾಡಿದ್ದೆಲ್ಲ ಪಲ್ಲವಿ ಅನುಪಲ್ಲವಿ ಎಲ್ಲ ಒಂದೇ ಏನೇನೂ ವ್ಯತ್ಯಾಸ ವಾಗಿಲ್ಲ. ಸಂಗೀತದಲ್ಲಿ ಪಲ್ಲವಿ ಅನುಪಲ್ಲವಿ ಒಂದೇ ಆದರೂ ಮಧ್ಯೆ ಸ್ವಲ್ಪ ಬದಲಾವಣೆ ಇರುತ್ತದೆ. ಏನಾದರೂ ವ್ಯತ್ಯಾಸವಿದೆಯೇ ಎಂದರೆ ಏನೇನೂ ಇಲ್ಲ. ಅದೇ ಹಳೇ ಮಾತು, ಅದೇ ಹಳೇ ಜೋಗುಳ. ಹೊಸದು ಯಾವುದೂ ಇಲ್ಲ. ಖಾದಿ ಬೋರ್ಡಿನ ವಿಷಯವನ್ನು ಸಾಕಷ್ಟು ವಿಚಾರ ಮಾಡಿದ್ದಾರೆ ಎಲೆಕ್ಟ್ರಿಸಿಟಿ ಬೋರ್ಡಿನ ವಿಷಯವನ್ನೂ ಸಾಕಷ್ಟು ವಿಚಾರ ಮಾಡಿದ್ದಾರೆ. ಮತ್ತು ವಗೈರೆ ವಗೈರೆ ವಿಷಯಗಳನ್ನೆಲ್ಲ ವಿಚಾರ ಮಾಡಿದ್ದಾರೆ. ಎರಡು ವಿಷಯಗಳು ಹೊಸದು ಬಂದಿವೆ. ಅದು ಏನೆಂದರೆ ಎನ್. ಡಿ. ಎಫ್. ರಾಷ್ಟ್ರೀಯ ರಕ್ಷಣಾ ನಿಧಿ ವಿಚಾರದಲ್ಲಿ ಏನೋ ಹಣ ದುರ್ವ್ಯಯ ಮಾಡಿದೆವು ಎಂದು ಮಾನ್ಯ ಶಿವಪ್ಪನವರು ಅಬ್ಬರಿಸಿ ಹೇಳಿದರು. ಅಪಾರವಾದ ಹಣವನ್ನು ಖರ್ಚು ಮಾಡಿದ್ದೇವೆಂದು ಎರಡು ಮೂರು ಸಲ ಅಬ್ಬರಿಸಿ ಹೇಳಿದರು. ಇನ್ನೊಂದು ಏನೆಂದರೆ-ಒಂದು ಸಂತೋಷದ ಮಾತಾಗಿತ್ತು ನನಗೆ, ಜಾತೀಯತೆ ಬರುತ್ತಿರಲಿಲ್ಲ ಇಲ್ಲಿಯವರೆಗೆ—ಇವತ್ತು ಬಂದಿದೆ ಈ ಸಭೆಯಲ್ಲಿ ಈ ನಿರ್ಣಯ ಬಂದ ಮೇಲೆ. ಈಗ ಎರಡು ದಿವಸದಿಂದ ಜಾತೀಯತೆಯನ್ನು ಎತ್ತಿದ್ದಾರೆ ದುರುದ್ದೇಶದಿಂದ. ಅದನ್ನು ಹೆಚ್ಚಾಗಿ ಹೇಳತಕ್ಕದ್ದು ಯಾರು ಎಂದರೆ ಯಾರಿಗೆ ಜಾತಿಯ ಅಭಿಮಾನವಿಲ್ಲವೋ ಅಂಥವರಿಂದ ಬಂದಿದೆ, ಅದು ಕಮ್ಯೂನಿಸ್ಟ್ ಸದಸ್ಯರಿಂದ. ಅವರು ಹೀಗೆ ಏಕೆ ಮಾಡಿದ್ದಾರೆಂದರೆ, ಅವರು ಬಹಳ ಬುದ್ಧಿವಂತರು. ಎಲ್ಲಿ ವ್ಯಾಜ್ಯ ಇಲ್ಲವೊ ಅಲ್ಲಿ ವ್ಯಾಜ್ಯ ಹತ್ತಿಸಿ, ಎಲ್ಲಿ ಜನ ಸುಖವಾಗಿದ್ದಾರೆಯೋ ಅಲ್ಲಿ ಅಲ್ಲೋಲಕಲ್ಲೋಲವನ್ನುಂಟು ಮಾಡಿ, ಎಲ್ಲಿ ನೆಮ್ಮದಿ ಇದೆಯೋ ಅಲ್ಲಿ ನೆಮ್ಮದಿ ಇಲ್ಲದಂತೆ ಮಾಡಿ ವ್ಯತ್ಯಾಸವನ್ನುಂಟುಮಾಡಿ ಆಳತಕ್ಕದ್ದೇ ಅವರ ನೀತಿ. ಅವರು ತಂದಿದ್ದಾರೆ ಜಾತಿಯ ವಿಚಾರವನ್ನು ಇವತ್ತು. ಅದಕ್ಕೆ ಒಬ್ಬಿಬ್ಬರು ಪುಟ ಕೊಟ್ಟಿದ್ದಾರೆ, ಅದು ವಿಷಾದದ ಮಾತು. ಈ ಎರಡು ವಿಚಾರಗಳು ಹೊಸದಾಗಿವೆ. ಇದನ್ನು ತರಬಾರದಾಗಿತ್ತು. ಯಾರೂ ಜಾತೀಯತೆಯಿಂದ ಕೆಲಸ ಮಾಡುತ್ತಿಲ್ಲ ಎಂದು ಹೇಳುತ್ತೇನೆ. ಆ ದೃಷ್ಟಿ ನಮಗೆ ಇಲ್ಲ. ಮಂತ್ರಿಮಂಡಲ ಮಾಡಬೇಕಾದರೆ ಒಂದೇ ಜಾತಿಯವರಿಗೆ ಸ್ಥಳವನ್ನು ಜಾಸ್ತಿ ಕೊಟ್ಟಿವೆಂತೆ! ಎಲ್ಲಿಯ ವಾದವಿದು ? ಬಹುಶಃ ಅದಕ್ಕೆ ನಾನೇನೂ ಉತ್ತರಗಳನ್ನು ಕೊಡುವುದಕ್ಕೆ ಇಷ್ಟಪಡುವುದಿಲ್ಲ. ಅದನ್ನು ಒಪ್ಪತಕ್ಕ ಮನಸ್ಸಿಲ್ಲ ಎಂದು ಮಾತ್ರ ಹೇಳುತ್ತೇನೆ. ಹೇಯವಾದ ಮನಸ್ಸಿನಿಂದ ಹೇಳಿದ್ದಾರೆ.

ರಾಷ್ಟ್ರೀಯ ರಕ್ಷಣಾ ನಿಧಿಯ ಸಂಗ್ರಹಣದಲ್ಲಿ ಜನ ಸಾಕಷ್ಟು ಕೊಟ್ಟರು. ಎಲ್ಲರೂ ಕೊಟ್ಟಿದ್ದಾರೆ. ಅವರುಗಳು ಎಷ್ಟು ಕೊಟ್ಟಿದ್ದಾರೆ, ಎಷ್ಟು ಜನ ಕೊಟ್ಟಿದ್ದಾರೆಯೋ ಗೊತ್ತಿಲ್ಲ. ಜನತೆಯ ಪ್ರತಿನಿಧಿ ಹಾಗೂ ಮುಖಂಡ ಇಂಥ ಒಂದು ಪ್ರಮಾದ ಒದಗಿದೆ, ಶತ್ರುಗಳು ನಮ್ಮ ಮೇಲೆ ದಂಡೆತ್ತಿ ಬಂದಿದ್ದಾರೆ, ಎಲ್ಲರೂ ಅದಕ್ಕೆ ಬರಬೇಕು, ಸಹಾಯಕರಾಗಬೇಕು, ಸಹಾಯ ಮಾಡಬೇಕು ಎಂದು ಕೇಳಿದಾಗ ಎಲ್ಲರೂ ಮುಂದೆ ಬಂದಿದ್ದಾರೆ, ಶ್ರೀಮಂತರೂ ಬಂದಿದ್ದಾರೆ—ಶ್ರೀಮಂತರು ಅಷ್ಟು ಬಂದಿಲ್ಲ ಬಡವರು ಹೆಚ್ಚು ಕೊಟ್ಟಿದ್ದಾರೆ. ಬಿಜಾಪುರ, ಚಿತ್ರದುರ್ಗ, ಬೆಳಗಾಂ, ಮಂಗಳೂರು ಎಲ್ಲಕಡೆಯೂ ಕೊಟ್ಟಿದ್ದಾರೆ. ಒಂದು ವಿಚಾರವನ್ನು ಹೇಳಿದರು ನಮ್ಮ ಬಿ. ಎಲ್. ಗೌಡರು ಒಂದು ಕಮಿಟಿಗೆ ಯಾರೋ ಒಬ್ಬರನ್ನು ಕಾಂಗ್ರೆಸ್‌ನಲ್ಲಿಲ್ಲದೆ ದೇಶಕ್ಕಾಗಿ ದುಡಿಯದ ಇದ್ದವರನ್ನು ಕನ್ವೀನರ್ ಆಗಿ ಮಾಡಿದರು, ಚಾಲಕರಾಗಿ ಮಾಡಿದರು ಅದರಿಂದ ಏನೂ ಪ್ರಯೋಜನವಾಗದೆ ಎಲ್ಲ ನಿಂತು ಹೋಯಿತು ಎಂದು. ಎಂದು ಇಲ್ಲಿ ಕೇಂದ್ರ ಸಭೆಯನ್ನು ಮಾಡಿದೆವೋ ಆಗಲೇ ಎಲ್ಲ ಕಮಿಟಿಗಳನ್ನು

ನೇಮಕ ಮಾಡಿದೆವು ಹಾಗೆಯೇ ಇವರನ್ನೂ ನೇಮಕ ಮಾಡಿದೆವು. ಅದು ಹೋದ ವರ್ಷ ಅಕ್ಟೋಬರ್ ನವಂಬರ್ ತಿಂಗಳಿನಲ್ಲಿ. ಆ ಕಮಿಟಿಯನ್ನು ಮಾಡಿದಾಗಿನಿಂದ ಚೆನ್ನಾಗಿ ಪ್ರಚಾರ ಮಾಡುತ್ತಿದ್ದಾರೆ. ಅವರು ವಿದ್ಯಾವಂತರು, ಸಂಸ್ಕೃತ, ಕನ್ನಡ, ತೆಲಗು ಎಲ್ಲ ಭಾಷೆಗಳೂ ಬರುತ್ತವೆ. ಬಹಳ ಚೆನ್ನಾಗಿ ವ್ಯವಸ್ಥೆ ಮಾಡಿಕೊಂಡು ಹೋಗಿದ್ದಾರೆ. ಅವರು ಏನಾದರೂ ಒಂದು ಹೇಳಬೇಕಲ್ಲ, ಅದಕ್ಕೆ ಹೇಳಿದ್ದಾರೆ.

ಈಗ 2-3 ದಿನಗಳಿಂದ ಏನು ನಡೆಯುತ್ತಿದೆ ಎಂದರೆ ಏನಾದರೂ ಒಂದು ತಪ್ಪನ್ನು ಕಂಡು ಹಿಡಿಯಬೇಕು, ಏನೂ ಇಲ್ಲವೆ ಇದ್ದರೆ ಹುಟ್ಟು ಹಾಕಬೇಕು. ಈ ಒಂದು ದೃಷ್ಟಿ ಕಂಡು ಬರುತ್ತಿದೆಯೇ ವಿನಾ ಇರತಕ್ಕದ್ದರಲ್ಲಿ ಏನಾದರೂ ಲೋಪವಿದೆಯೇ, ಸರ್ಕಾರ ಮಾಡತಕ್ಕ ಕಾರ್ಯದಲ್ಲಿ ಲೋಪವಿದೆಯೇ ಅಥವಾ ಇನ್ನೂ ಯಾವುದಾದರೂ ತಪ್ಪುದಾರಿ ಹಿಡಿದಿದ್ದಾರೆಯೇ ಎನ್ನುವುದೇನೂ ಕಾಣುವುದಿಲ್ಲ. ಬಿಜಾಪುರದಲ್ಲಿ ಬಳೆಗಳನ್ನು ಬಿಚ್ಚಿಕೊಟ್ಟರು ಹೆಣ್ಣು ಮಕ್ಕಳು ಎಂದು ಹೇಳಿದರು. ಹೆಣ್ಣು ಮಕ್ಕಳ ಕೈಯಿಂದ ಬಾರದೆ ಬೇರೆ ಕೈಯಿಂದ ಬಳೆಗಳು ಬರುತ್ತವೆಯೇ ? ಅವರಾಗಿಯೇ ಬಳೆಗಳನ್ನು ತಂದುಕೊಟ್ಟಿದ್ದಾರೆ. ಶ್ರೀಮತಿ ಇಂದಿರಾ ಗಾಂಧಿಯವರ ತೂಕದಷ್ಟು ಚಿನ್ನವನ್ನು ಕೊಡಬೇಕೆಂದು ತೂಕ ಮಾಡಿದಾಗ ಒಬ್ಬ ಹೆಣ್ಣು ಮಗಳು ದೇವರನ್ನು ಕೈಯಲ್ಲಿ ಹಿಡಿದುಕೊಂಡು ಕರಡಿಗೆಯನ್ನು ತಂದುಕೊಟ್ಟರು. ಕೆಲವರು ಮೈಮೇಲೆ ಇದ್ದ ಬಂಗಾರವನ್ನು ಕೊಟ್ಟರು. ಹಾಗೆ ಕೊಡತಕ್ಕ ಸಂದರ್ಭದಲ್ಲಿ ಏನಾಯಿತು ಎಂದರೆ ಅದು ನಡೆದದ್ದು ಹಿಂದಿನ ದಿವಸ. ಅಲ್ಲಿಯವರು ಮುಖ್ಯಮಂತ್ರಿಯವರನ್ನು ತೂಕ ಮಾಡುತ್ತೇವೆ ಎಂದು ಹೇಳಿದಾಗ, ಇಂದಿರಾ ಗಾಂಧಿಯವರನ್ನು ತೂಕ ಮಾಡುತ್ತೇವೆಂದು ಹೇಳಿದಾಗ ಯಾವ ಜನ ಈ ನಿಧಿಗೆ ಸಹಾಯ ಮಾಡಿದ್ದರೋ, ಶಕ್ತಿ ಮೀರಿ ಸಹಾಯ ಮಾಡಿದ್ದರೋ, ಆ ಜನ ಲಕ್ಷಾನುಗಟ್ಟಲೆ ಬಂದಿದ್ದರು ಅಲ್ಲಿ. ಕೆಲವರಿಗೆ ಇದು ಹಿಡಿಸಲಿಲ್ಲ. ಇದರಿಂದ ಒಳ್ಳೆಯದಾಗುತ್ತದೆ, ಇಷ್ಟೊಂದು ಜನ ಸೇರಿದರೆ ಜನಗಳಲ್ಲಿ ಉತ್ಸಾಹ ಬಂದೀತು, ರಾಷ್ಟ್ರಪ್ರೇಮ ಜಾಸ್ತಿಯಾದೀತು, ತಮ್ಮ ದೇಶವನ್ನು ಕಾಪಾಡುವುದಕ್ಕೆ ಜನ ಎದ್ದು ಬರುತ್ತಾರೆ, ಅದಕ್ಕೋಸ್ಕರ ಇಂಥದಕ್ಕೆ ಸಹಾಯ ಮಾಡಬೇಕು ಎಂಬುದನ್ನು ಮರೆತರು. ಇದನ್ನು ರಾಷ್ಟ್ರದ್ರೋಹವೆಂದು ತಿಳಿದುಕೊಳ್ಳುತ್ತೇನೆ. ಕೆಲವು ಜನ ಹೋಗಿ, ಇಲ್ಲಿಂದಲೂ ಹೋಗಿ, ಅದು ಆಗಕೂಡದು.... ...

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ನಾನು ಹೋಗಿದ್ದೆ. ಅದರ ಹಿಂದಿನ ದಿವಸ ಅಲ್ಲಿ ಭಾಷಣ ಮಾಡಿದೆ, ತುಲಾಭಾರ ಒಳ್ಳೆಯದಲ್ಲ, ಮಾಡಬಾರದು ಎಂದು ಹೇಳಿದೆ.

ಶ್ರೀ ಎಸ್. ನಿಜಲಿಂಗಪ್ಪ.—ಹೀಗೆ ಅದಕ್ಕೆ ತಕರಾರು ಹಾಕಬೇಕೆಂದು ಪ್ರಯತ್ನಪಟ್ಟರು. ಜನ ಕೇಳುತ್ತಾರೆಯೇ ? ಏಳೆಂಟು ಹಸ್ತಪತ್ರಿಕೆ (ಹ್ಯಾಂಡ್ ಬಿಲ್ಸ್)ಗಳನ್ನು ಹಂಚಿ ಬಿಸಾಕಿದರು. ಅದನ್ನು ನೋಡಿ ನಾವು ನಕ್ಕೆವು, ಇಂಥ ಜನರೂ ಇದ್ದಾರಲ್ಲ ಎಂದು ಕನಿಕರಪಟ್ಟೆವು, ಅಷ್ಟೆ. ಆ ಸಮಾರಂಭಕ್ಕೆ ಲಕ್ಷಾಂತರ ಜನರು ಬಂದಿದ್ದರು. ಅವರ ಉತ್ಸಾಹವನ್ನು ನೋಡಿ ಸಂತೋಷ ಕೂಡ ಪಟ್ಟೆವು. ತುಲಾಭಾರ ಮಾಡಿದರು. ನನಗೆ ಇಷ್ಟವಿರಲಿಲ್ಲ. ತೂಕವಾಗಿದ್ದೀರಿ, ಸ್ವಲ್ಪ ಬನ್ನಿ ಎಂದು ಹೇಳಿದರು. ಅದೇ ರೀತಿ ಬೆಳಗಾಂನವರೂ ಒತ್ತಾಯ ಮಾಡಿದರು. ನಿಮ್ಮನ್ನು ತೂಕ ಮಾಡುತ್ತೇವೆಂದರು. ಬರತಕ್ಕ ನಿಧಿ ಬರಬೇಕಾದರೆ ನನ್ನನ್ನು ತೂಗಿದರೆ, ತೂಕ ಮಾಡಿದರೆ ನನ್ನ ತೂಕ ಕಡಮೆಯಾಗುತ್ತದೆಯೆ ? ಜನರು ತಾವಾಗಿಯೇ ಮುಂದೆ ಬಂದು ಮಾಡಿರತಕ್ಕದ್ದು, ಅದಕ್ಕೆ ಅಪಾರವಾದ ಖರ್ಚಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಅದಕ್ಕೆ ನಾವು ಒಂದು ಕಾಸನ್ನೂ ಖರ್ಚು ಮಾಡಲಿಲ್ಲ ಅಥವಾ ರಾಷ್ಟ್ರೀಯ ರಕ್ಷಣಾ ನಿಧಿಯಿಂದ ಒಂದು ಕಾಸನ್ನೂ ಖರ್ಚು ಮಾಡಲಿಲ್ಲ. ನಾನು ವಿಚಾರಿಸಿದೆ. ಜನ ತಾವಾಗಿಯೇ ಕಂಬ ತಂದು ಹಾಕಿದರು, ತಾವಾಗಿಯೇ ಕಾಗದ ತಂದರು, ಗಳ ತಂದರು, ಚಪ್ಪರ ಹಾಕಿದರು, ಅವರಷ್ಟಕ್ಕೆ ಅವರೇ ಎಲ್ಲವನ್ನೂ ಮಾಡಿದರು. ಯಾರೂ ಏನೂ ಇದಕ್ಕೆ ಖರ್ಚು ಮಾಡಬೇಕಾದ ಸಂಭವವೇ ಇರಲಿಲ್ಲ. ಜನ ಎಷ್ಟೊಂದು ವಿಶ್ವಾಸದಿಂದ ಪ್ರೇರಿತರಾಗಿ ಕೆಲಸ ಮಾಡಿದ್ದಾರೆ. ಇದರಲ್ಲಿ 20 ಸಾವಿರ ರೂಪಾಯಿ ಖರ್ಚು ಮಾಡಿದ್ದೇವೆ ಎಂಬುದು ಇವರಿಗೆ ಹೇಗೆ ಗೊತ್ತಾಯಿತು ? ಇಂಡಿಯಾ ಸರಕಾರದವರು ಫಿಲ್ಮ ತೆಗೆದುಕೊಳ್ಳುವದಕ್ಕೋಸ್ಕರ ಆ ಜನರನ್ನು ಕಳಿಸಿದ್ದರು. ಇದಲ್ಲದೆ ಬೇರೆ ಒಂದು ಫಿಲ್ಮ ತಯಾರುಮಾಡುವುದಕ್ಕೆ ವ್ಯವಸ್ಥೆ ಮಾಡಿದೆ ಎಂದು ಗೃಹಮಂತ್ರಿಗಳು ಹೇಳಿದರು ಎಂದು ಟೀಕೆ ಮಾಡಿದರು. ಈ ಯುದ್ಧ ಸಮಯದಲ್ಲಿ ಜನ ಹೇಗೆ ಸಹಾಯ ಮಾಡುತ್ತಿದ್ದಾರೆ, ಜನ ಎಷ್ಟು ಉತ್ಸಾಹದಿಂದ ಮುಂದೆ ಬಂದು ಹಣ ಕೊಡುತ್ತಿದ್ದಾರೆ ಪ್ರತಿಯೊಂದು ಊರಿನಲ್ಲಿ ಜನ ಹೇಗೆ ಹಣ ಕೊಡುತ್ತಿದ್ದಾರೆ ಎಂಬುದನ್ನು ಎಲ್ಲ ಜನರಿಗೆ ತೋರಿಸುವುದಕ್ಕಾಗಿ ಒಂದು ಫಿಲ್ಮ ತಯಾರುಮಾಡಲು ಎನ್. ಡಿ. ಎಫ್. ಅವರು ಇದಕ್ಕಾಗಿ ಹತ್ತು ಹದಿನೈದು ಸಾವಿರ ರೂಪಾಯಿ ಕೊಟ್ಟಿದ್ದಾರೆಂದು ಗೊತ್ತಾಗಿದೆ. ಈ ಫಿಲ್ಮ ತೆಗೆದುಕೊಳ್ಳುವುದು ಈಗ ಇದಕ್ಕೋಸ್ಕರ ಹುಟ್ಟಿದ್ದು ಅಲ್ಲ. ಇದು ಮೊದಲಿನಿಂದಲೂ ನಡೆಯುತ್ತಿದೆ. ಇದಕ್ಕಾಗಿ ಒಂದು ಕಮಿಟಿ ನೇಮಕ ಮಾಡಿಕೊಂಡಿದ್ದಾರೆ.

(ಶ್ರೀ ಎಸ್. ನಿಜಲಿಂಗಪ್ಪ)

ಇದಕ್ಕೆ ಎಷ್ಟು ಖರ್ಚಾಯಿತು ನನಗೆ ಗೊತ್ತಿಲ್ಲ. ಹೊಸದಾಗಿ ಏನಾದರೂ ಹೇಳಬೇಕು ಎಂದು ವಿರೋಧ ಪಕ್ಷದವರು ಇದನ್ನು ಪ್ರಸ್ತಾಪಮಾಡಿದ್ದಾರೆ. ಕೆಲವು ಸ್ನೇಹಿತರು ಹೇಳಿದರು. ಬಹಳ ಒತ್ತಾಯದಿಂದ ಹಣ ವಸೂಲ್ಮಾಡುತ್ತಿದ್ದಾರೆ ಎಂದು ಅಲ್ಲಲ್ಲಿ ಪುಕಾರ ಎಬ್ಬಿಸಿದರು. ಅನೇಕ-ಕಡೆ ಪೋಲಿಸ್ ಅಧಿಕಾರಿಗಳನ್ನು ಕಳಿಸಿ ವಿಚಾರಣೆ ಮಾಡಿಸಿದ್ದೇನೆ. ಡೆಪ್ಯುಟಿ ಕಮಿಷನರನ್ನು ಕಳಿಸಿರಿ ವಿಚಾರಣೆ ಮಾಡಿದೆ. ಕೆಲವು ಕಡೆ ನಾನೇ ಸ್ವತಃ ಹೋಗಿ ವಿಚಾರಣೆ ಮಾಡಿದ್ದೇನೆ. ಎಲ್ಲಿಯೂ ಒತ್ತಾಯ ಮಾಡಿಲ್ಲ ಎಂದು ಕಂಡುಬಂದಿದೆ. ಒತ್ತಾಯ ಮಾಡಿದ ಒಂದು ಸ್ಥಳದ ಬಗ್ಗೆ ನಾನು ಹೋಗಿ ವಿಚಾರಿಸಲು ಆ ಮನುಷ್ಯ ಇರಲಿಲ್ಲ. ಅವನ ಮಗನನ್ನು ಕರೆಸಿ ವಿಚಾರಿಸಲು ಅವನ ತಂದೆಯು ವಯಸ್ಸಾಗಿದ್ದರಿಂದ ಸತ್ತು ಹೋದನೆಂದೂ, ಹಣ ಕೊಡಲು ಆವನಿಗೆ ಯಾರೂ ಒತ್ತಾಯ ಮಾಡಲಿಲ್ಲ ಎಂದೂ ಮತ್ತು ಅವನು ಸ್ವತಃ ಸಂತೋಷದಿಂದ ಬಂದು ಹಣ ಕೊಟ್ಟಿದ್ದಾನೆಂದೂ ಅವನ ಮಗನು ಹೇಳಿದನು. ಇಷ್ಟೇ ಅಲ್ಲದೆ, ಕೆಲವು ಜನ ಬಂದಿದ್ದರು, ಒತ್ತಾಯ ಮಾಡಿದರು ಎಂದು ಹೇಳಿ ಎಂದು ಕಲಿಸಿಕೊಡುವುದಕ್ಕೆ ಬಂದಿದ್ದರೆಂದೂ ಸಹ ಅವನು ಹೇಳಿದನು. ಇಂಥ ಆಯೋಗ್ಯ ಕೆಲಸ ಮಾಡೋಣವೇ? ಎಂದು ಸಹ ಹೇಳಿದರು. ಹೀಗೆ ಮಾಡುವುದರಿಂದ ಏನಾಗಿದೆ ಎಂದರೆ ಆಗತಕ್ಕಂಥ ಕೆಲಸಕ್ಕೆ ಹರಕತ್ತು, ಆಗಬಾರದು ಕೆಲಸಕ್ಕೆ ಕುಮ್ಮಕ್ಕು ಮಾಡುತ್ತಿದ್ದಾರೆ.

ಯಾವುದೋ ಅಧಿಕಾರಿಯು ಟ್ರಾನ್ಸ್‌ಫರ್ ಆಯಿತು ಅದಕ್ಕಾಗಿ, ಸರಕಾರ ಹೋಗಬೇಕು; ಖಾದಿ ಬೋರ್ಡಿನ ಲೆಕ್ಕಪತ್ರ ಸರಿಯಾಗಿಲ್ಲ ಅದಕ್ಕಾಗಿ ಸರಕಾರ ಹೋಗಬೇಕು ಹೀಗೆ ಒಂದಕ್ಕೊಂದು ಸಂಬಂಧವಿಲ್ಲದ್ದನ್ನು ಹೇಳಿ ಸರಕಾರ ಹೋಗಬೇಕು ಎಂದು ಹೇಳುವುದರಲ್ಲಿ ಏನು ಅರ್ಥ ಇದೆ? ಎಲ್ಲಿಯೋ ಹೊಡೆದರೆ ಹಲ್ಲು ಬಿತ್ತು ಎಂದು ಹೇಳುವ ಹಾಗೆ ಇದು ನಡೆಯುತ್ತಿದೆ. ಖಾದಿ ಬೋರ್ಡಿನ ಕಥೆ ಬಹಳ ಹಿಂದಿನ ಕಥೆ. ಅದನ್ನು ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ. ಎನ್. ಡಿ. ಎಫ್. ಬಗ್ಗೆ ಈ ರೀತಿ ತಪ್ಪು ಭಾವನೆ ಉಂಟುಮಾಡುವ ಹಾಗೆ ಬಹಿರಂಗವಾಗಿ ಹೇಳಬಾರದು. ಇದುವರೆಗೆ ಜನ ಉತ್ಸಾಹದಿಂದ ಸಂತೋಷದಿಂದ ಹಣ ಕೊಡುತ್ತಾ ಬಂದಿದ್ದಾರೆ. ಜನ ಹೀಗೆ ಕೊಡದೇ ಇದ್ದರೆ ಇಷ್ಟು ಹಣ ಬರತ್ತಾ ಇರಲಿಲ್ಲ. ರಾಷ್ಟ್ರೀಯ ರಕ್ಷಣಾ ನಿಧಿ ಒತ್ತಾಯದಿಂದ ವಸೂಲ್ಮಾಡಬಾರದೆಂದು ಹೇಳಿದ್ದೇವೆ. ಎಲ್ಲಿಯೂ ಒತ್ತಾಯಮಾಡಿಲ್ಲ. ಈಗಾಗಲೇ ಮೂರು ನ ಲ್ಕು ಕೋಟಿಯಷ್ಟು ವಸೂಲಾಗಿದೆ. ಯಾವ ಒತ್ತಾಯ ನಡೆದಿಲ್ಲ, ಮೋಸ ನಡೆದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ತುಲಾಭಾರದ ಬಗ್ಗೆ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ತುಲಾಭಾರ ನಡೆಯಿತು ಎಂದು ಸರಕಾರ ಹೋಗಬೇಕೇ? ಇದು ಒಂದು ಹೊಸಕಾರಣ. ಅಲ್ಲಿ ಕೆಲವು ಕಮ್ಯುನಿಸ್ಟ್ ಸದಸ್ಯರು ಇದ್ದರು. ಇದರಲ್ಲಿ ಜಾತೀಯತೆ ತುಂಬಿದರು. ಅವರು ಬಹಳ ಬುದ್ಧಿವಂತರು, ಜಾಣರು.

ಇನ್ನು ಎಲೆಕ್ಟ್ರಿಸಿಟಿ ಬೋರ್ಡ್ ಲೆಕ್ಕ ಪತ್ರಗಳ ಬಗ್ಗೆ ಹೇಳುವುದಾದರೆ 1957ನೇ ಇಸವಿ ಮುಂಚೆ ಕೆಲವು ಐಟಮ್ಸ್ ಇರಲಿಲ್ಲ ಎಂದು ಗೊತ್ತಾಯಿತು. ಸುಮಾರು 207ಲಕ್ಷ ರೂಪಾಯಿ ಬಗ್ಗೆ ಸಾಕಷ್ಟು ಲೆಕ್ಕ ಇಲ್ಲ ಎಂದು ಗೊತ್ತಾಯಿತು. ಅದಕ್ಕಾಗಿ ಸರಕಾರ ಒಬ್ಬ ಅಕೌಂಟ್ಸ್ ಆಫೀಸರ್ ನೇಮಕ ಮಾಡಿ ಲೆಕ್ಕ ಪತ್ರ ತರಿಸಿದ್ದೇವೆ. ಅವುಗಳ ವಿವರ ಈ ರೀತಿ ಇದೆ;—

Outlay on old electricity schemes incurred prior to 30-9-57	Rs. 8,10,000
Total installation of penstock.	Rs. 2,12,000
T.A. paid between 1941 to 1951 to labour employed in capital works.	Rs. 21,74,000
Expenditure on replacement of 25 cycle motors on account of frequency conversion scheme.	Rs. 5,00,000
Assetsin unserviceable conditions transferred from Government Department	Rs. 20,80,000
Outlay on old works at Sharavathi old transmission lines, outlay on assets not traceable due to renewals and replacements, changes in extensive distribution system over 40 years.	Rs. 65,00,000
Total: Rs. 207 lakhs.	

ಇದು 50 ವರ್ಷಗಳಿಂದ ನಡೆದುಕೊಂಡು ಬಂದಿರುವುದರಿಂದ ಲೆಕ್ಕ ಹುಡುಕುವುದು ಬಹಳ ಕಷ್ಟವಾಗಿದೆ. ಇನ್ನೊಂದು ವಿಷಯ: ಸಣ್ಣದು ಇದ್ದರೂ ಅದನ್ನು ಬಹು ದೊಡ್ಡದು ಮಾಡಿ ಏನೋ ಅನಾಹುತ ನಡೆದಿದೆ ಎನ್ನುವ ರೀತಿಯಲ್ಲಿ ಹೇಳಿದರು. ಎರಡು ಬ್ಯಾಂಕುಗಳಿಗೆ ಕೊಟ್ಟುಬಿಟ್ಟಿದ್ದಾರೆ ಹಾಗೆ ಹೀಗೆ ಎಂದು ಹೇಳಿದರು. ಆ ಎರಡು ಬ್ಯಾಂಕಿನವರು ಜಾಸ್ತಿ ಕೊಟ್ಟರು ಆದುದರಿಂದ ಅವರಿಗೆ ಕೊಟ್ಟಿದ್ದೇವೆ. ಬಹುಶಃ ಪಬ್ಲಿಕ್‌ಲೋನ್ಸ್ ಕೇಳುವಾಗ ಈ ಸಂಬಂಧದಲ್ಲಿ ಏನೇನು ವಿಷಯ ನಡೆಯುತ್ತದೆ ಎಂಬುದು ಅನೇಕರಿಗೆ ಗೊತ್ತೂ ಇಲ್ಲ. ಸರಕಾರ ಪಬ್ಲಿಕ್ ಲೋನ್ ಕೇಳಿದ ಕೂಡಲೆ ಜನ ಎಲ್ಲವನ್ನೂ ತಾವೇ ಕೊಟ್ಟುಬಿಡುತ್ತಾರೆಂದು ತಿಳಿದುಕೊಂಡಿದ್ದಾರೆ. ಅಲ್ಪಸ್ವಲ್ಪ ಹಣ ಜನ ಕೊಡುತ್ತಾರೆ. ಆದರೆ ಬ್ಯಾಂಕರ್ಸ್ ಹೆಚ್ಚಾಗಿ ಕೊಡುತ್ತಾರೆ. ಒಂದೊಂದು ಬ್ಯಾಂಕಿನವರು ಇಷ್ಟಿಷ್ಟು ಹಾಕಬೇಕು ಎಂದು ಅಷ್ಟು ಹಣ ಹಾಕುತ್ತಾರೆ. ಇದಕ್ಕಾಗಿ ಒಂದು ಬೋರ್ಡ್ ಇದೆ. ಬ್ಯಾಂಕಿನವರಿಗೆ ಹೇಳಿಕಳಿಸುತ್ತೇವೆ ಮತ್ತು ದಯವಿಟ್ಟು ಸಹಾಯ ಮಾಡಬೇಕೆಂದು ಹೇಳುತ್ತೇವೆ. ಮೂರು ಕೋಟಿ ಹಣ ಬೇಕಾಗಿದ್ದರೆ ಅವರಿಗೆ ಹೇಳಿ ಕಳಿಸುತ್ತೇವೆ. ಅವರು ಹಣ ಕೊಡುವುದಕ್ಕೆ ಒಪ್ಪಿಕೊಂಡು ತಮ್ಮ ತಮ್ಮ ಶಕ್ತ್ಯನುಸಾರ ಹಣ ಹಾಕುತ್ತಾರೆ. ಇದರಲ್ಲಿ ಯಾರಿಗೂ ಫೇವರ್ ತೋರಿಸುವುದಿಲ್ಲ. ಒಬ್ಬರು ಮೇಲು ಮತ್ತೊಬ್ಬರು ಕೀಳು ಎಂದು ಇದರಲ್ಲಿ ಮಾಡಿಲ್ಲ. ಎಂಟು ಹತ್ತು ಬ್ಯಾಂಕಿನವರು ಬಂದು ಇದಕ್ಕೆ ಹಣ ಹಾಕುತ್ತಾರೆ. ಹಣ ವಸೂಲಾದ ಮೇಲೆ ಅದನ್ನು ಎಲ್ಲಿ ಇಡಬೇಕು ಎಂಬ ಪ್ರಶ್ನೆ ಬರುತ್ತದೆ. ಸರಕಾರದ ಟ್ರೆಜರಿಯಲ್ಲಿ ಇಟ್ಟರೆ ಬಡ್ಡಿ ಬರುವುದಿಲ್ಲ. ಆದರಲ್ಲಿಯೂ ಲಾಂಗ್‌ಟರ್ಮ್ ಡಿಪಾಜಿಟ್ ಇದ್ದರೆ ಟ್ರೆಜರಿಯಲ್ಲಿ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಎಲ್ಲಿ ಹೆಚ್ಚು ಬಡ್ಡಿ ಬರುವುದೋ ಅಲ್ಲಿ ಈ ಹಣ ಇಡಬೇಕು ಎಂದು ತೀರ್ಮಾನಮಾಡಿ ಅದರಂತೆ ಇಟ್ಟಿದ್ದೇವೆ. ಈ ಇಬ್ಬರು ಸದಸ್ಯರಿಂದ ಹೆಚ್ಚಾಗಿ ದುಡ್ಡು ಬಂದಿದೆ. ಒಬ್ಬರು 150 ಲಕ್ಷ ಹಾಕಿದ್ದಾರೆ ಮತ್ತೊಬ್ಬರು 60 ಲಕ್ಷ ಹಾಕಿದ್ದಾರೆ. ಈ ಹಣ ಎರಡು ಬ್ಯಾಂಕಿನಲ್ಲಿಟ್ಟಿರುವುದು ತೀರ್ಮಾನಕ್ಕೆ ಅನುಗುಣವಾಗಿ ಇಟ್ಟಿದ್ದೇವೆ. ಇದು ಮಾನ್ಯ ಶಿವಪ್ಪನವರಿಗೆ ಗೊತ್ತು ಇರಬಹುದು. ನಮ್ಮ ಸುದೈವದಿಂದ ಈ ವ್ಯವಹಾರ ನಡೆದಾಗ ಅವರು ಕನ್ಸಲ್ಟೇಟಿವ್ ಕಮಿಟಿಯಲ್ಲಿ ಇದ್ದರು.

> "Sri S. Sivappa while agreeing to the deposits so made, enquired if there is any discrimination in the quantum of deposits.
>
> "The Chairman replied that there was no discrimination in this behalf and that the deposits were made in proportion to the subscription made by each Bank."

ಬೇಕಾದಾಗ ತೆಗೆದುಕೊಳ್ಳಲಿಕ್ಕೆ ಬರುತ್ತದೆಂದು ಅನುಕೂಲಕ್ಕೋಸ್ಕರ ಈ ಬ್ಯಾಂಕಿನಲ್ಲಿ ಹಣ ಇಟ್ಟಿರುತ್ತದೆ. 614 ಲಕ್ಷ ರೂಪಾಯಿ ಬಂದಿರುವುದಲ್ಲಿ ಸುಮಾರು 3 ಕೋಟಿ ರೂಪಾಯಿ ಆಗಿಂದಾಗ್ಗೆ ಪರ್ಚೇಜಿಸ್ ಗೋಸ್ಕರ ಖರ್ಚಾಗಿದೆ. ಇನ್ನೂ ಸುಮಾರು 300 ಲಕ್ಷ ರೂಪಾಯಿ ಇದೆ. ಈ ಹಣ ಇತ್ತಲ್ಲಾ ಈಗ ಏತಕ್ಕೆ ಸಾಲ ತೆಗೆದುಕೊಂಡಿರಿ ಎಂದು ಕೇಳುವುದು ಬುದ್ಧಿವಂತಿಕೆಯ ಮಾತು ಅಲ್ಲ.

ಏಕೆಂದರೆ ಈಗಾಗಲೇ ಒಂದೂವರೆ ಕೋಟಿ ರೂಪಾಯಿ ಬೆಲೆ ಬಾಳುವ ಡೀಸೆಲ್ ಎಂಜನ್ ಸೆಟ್ಸು ಅಮೇರಿಕಾದಿಂದ ಬಂದಿವೆ, ಅದಕ್ಕೆ ಕೊಡಬೇಕು. ಶರಾವತಿ ವ್ಯಾಲಿಯಿಂದ ಸಾಧ್ಯವಾದರೆ ಮುಂದಿನ ಏಪ್ರಲ್‌ನಿಂದ ಸುಮಾರು ಒಂದು ಲಕ್ಷ ಕಿಲೋವಾಟ್ ವಿದ್ಯುಚ್ಛಕ್ತಿ ಬರುತ್ತದೆ, ಅದನ್ನು ಕೊಡಬೇಕಾಗುತ್ತದೆ. ಎಲ್ಲೆಲ್ಲಿ ಅದನ್ನು ಹಂಚಬೇಕಾಗುತ್ತದೆಯೋ ಅಲ್ಲೆಲ್ಲಾ ಕನ್‌ಸ್ಯೂಮರ್ಸ್‌ಗೆ ಕೊಡಲು ಟ್ರಾನ್ಸ್‌ಫಾರ್ಮರ್ಸ್‌ನ್ನು ತರಿಸಬೇಕು, ಸ್ವಿಚ್ ಗೇರ್ಸ್ ತರಿಸಬೇಕು, ವೈರ್ಸ್ ತರಿಸಬೇಕು. ಇದಕ್ಕೆಲ್ಲಾ ಬೋರ್ಡಿನವರು 15 ಕೋಟಿ ರೂಪಾಯಿಗಳ ಆರ್ಡರನ್ನು ಕೊಡಬೇಕಾಗುತ್ತದೆ. ಅವರು ಆರ್ಡರ್ ಮಾಡಿದ್ದಾರೆ ಈ ವರ್ಷ ಮತ್ತು ಇನ್ನು ಎರಡು ಮೂರು ವರ್ಷದಲ್ಲಿ ಬರುತ್ತದೆ. ಹಾಗೆ ಬರುವಾಗ ಅವುಗಳನ್ನು ತೆಗೆದುಕೊಳ್ಳಲು ಯಾವ ಬ್ಯಾಂಕಿನಿಂದ ಹಣ ತೆಗೆದುಕೊಳ್ಳಲು ಅನುಕೂಲವಾಗಿರುತ್ತದೆಯೋ ಆ ಬ್ಯಾಂಕಿನಲ್ಲಿ ಹಣವನ್ನು ಇಡಬೇಕಾಗುತ್ತದೆ. ಬ್ಯಾಂಕಿನವರು ಸುಲಭವಾಗಿ ಕೊಡುವುದಿಲ್ಲ. ಅವರು ಬಹಳ ಬುದ್ಧಿವಂತರು ಇರುತ್ತಾರೆ. ಬಹಳ ಅವಸರ ಇದೆ ಎಂದಾಗ ಅವರು ಮೂರು ಮುಕ್ಕಾಲರಂತೆ ಸಬ್‌ಸ್ಕ್ರೈಬ್ ಮಾಡುತ್ತೇವೆ. ನಾಲ್ಕೂ ಮುಕ್ಕಾಲರಂತೆ ಬಡ್ಡಿ ಕೊಡುವುದಿಲ್ಲ ಎಂದು ಹೇಳುತ್ತಾರೆ ಅಥವಾ ಬಡ್ಡಿ ಜಾಸ್ತಿ ಕೊಡಬೇಕೆಂದು ಹೇಳುತ್ತಾರೆ. ಆದ್ದರಿಂದ ಯಾವತ್ತು ಬಹಳ ಅವಸರ ಇದೆ ಎಂದು ಗೊತ್ತಾಗುತ್ತದೆ ಆಗ ಬಡ್ಡಿ ಜಾಸ್ತಿ ಮಾಡುತ್ತಾರೆ; ನಮಗೆ ಲುಕ್ಸಾನಾಗುತ್ತದೆ ಎಂದು ಅದಕ್ಕೆ ಬದಲಾಗಿ ಮುಂಜಾಗರೂಕತೆಯಿಂದ ಎರಡು ವರ್ಷಕ್ಕೆ ಎಷ್ಟು ಬೇಕಾಗುತ್ತದೆ ಎಂಬುದನ್ನು ಲೆಕ್ಕಾಚಾರ ಮಾಡಿ ಒಂದೇ ವರ್ಷದಲ್ಲಿ ತರಿಸಿ

(ಶ್ರೀ ಎಸ್. ನಿಜಲಿಂಗಪ್ಪ)

ಕೊಳ್ಳಲು ಆರ್ಡರ್ ಮಾಡಿ ಅದಕ್ಕೆ ಬೇಕಾಗುವಷ್ಟು ಹಣವನ್ನು ತೆಗೆದಿಟ್ಟಿದ್ದಾರೆ. ಈ ವರ್ಷ ಸುಮಾರು ಏಳು-ಎಂಟು ಕೋಟಿ ರೂಪಾಯಿಗಳ ಸಾಲು ಬಂದೀತು. ಸಮಯ ಬಂದಾಗ ಹಣ ಬೇಕಾಗುತ್ತದೆ ಎಂದು ಹೇಳಿ ಸಾಲ ಮಾಡಿದ್ದರು. ಸಾಲ ತೆಗೆದುಕೊಂಡು ಬಡ್ಡಿ ಬಾರದೇ ಇರುವ ಕಡೆ ಇಡುವುದಕ್ಕಿಂತ ಬಡ್ಡಿ ಬರುವ ಕಡೆಯೇ ಇರುವುದು ಅನುಕೂಲ ಎಂದು ಅಲ್ಲಿಯೇ ಇಟ್ಟಿದ್ದರಿಂದ ನಮಗೆ ಒಟ್ಟು 31, 71, 152 ರೂಪಾಯಿಗಳ ಬಡ್ಡಿ ಬಂದಿದೆ. ಲುಕ್ಸಾನೇನೂ ಆಗಿಲ್ಲ.

ನಾನು ಮೊದಲೇ ಹೇಳಿದ್ದೇನೆ, ಬ್ಯಾಂಕಿನಿಂದ ಮೊದಲು ತೆಗೆದುಕೊಂಡು ಇಟ್ಟುಕೊಳ್ಳಬೇಕು. ಫ್ಲೂಯಿಡ್ ಅಸೆಟ್ಸ್ ಇಲ್ಲದೇ ಹೋದರೆ, ಯಾವಾಗ ಬೇಕೋ ಆಗ ಡ್ರಾ ಮಾಡುವುದಕ್ಕೆ ಹಣ ಇಲ್ಲದೇ ಹೋದರೆ ನಾಲ್ಕೂ ಮುಕ್ಕಾಲು ರೂಪಾಯಿ ಬಡ್ಡಿ ಕೊಡಬೇಕಾದ ಕಡೆ ಆರು ರೂಪಾಯಿ ಕೊಡಬೇಕಾಗಿ ಬಂದೀತು ಎಂದು ಅದನ್ನು ತಪ್ಪಿಸುವುದಕ್ಕೆ ಈ ರೀತಿ ಮಾಡಲೇಬೇಕಾಯಿತು. ತೆಗೆದುಕೊಂಡ ಹಣಕ್ಕೆ ಸಾಕಾದಷ್ಟು ಬಡ್ಡಿ ಬರಬೇಕೆಂದು ಬೇರೆ ಬೇರೆ ಬ್ಯಾಂಕುಗಳಲ್ಲಿ ಇಟ್ಟಿದ್ದೇವೆ. ಯಾರ್ಯಾರ ಹತ್ತಿರ ಎಷ್ಟೆಷ್ಟು ಇದೆ ಎಂಬುದನ್ನು ಹೇಳುವುದಾದರೆ :

ಕೆನರಾ ಬ್ಯಾಂಕಿನವರು 156 ಲಕ್ಷ ರೂಪಾಯಿ ಸಾಲ ಕೊಟ್ಟಿದ್ದಾರೆ. ಅವರಲ್ಲಿ 96 ಲಕ್ಷ ರೂಪಾಯಿ ಇದೆ.

ಕೆನರಾ ಇಂಡಸ್ಟ್ರಿಯಲ್ ಬ್ಯಾಂಕಿಂಗ್ ಸಿಂಡಿಕೇಟ್‌ನವರು 162 ಲಕ್ಷ ರೂಪಾಯಿ ಸಾಲ ಕೊಟ್ಟಿದ್ದಾರೆ; ಅವರಲ್ಲಿ 101 ಲಕ್ಷ ರೂಪಾಯಿ ಇದೆ.

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅವರು 76 ಲಕ್ಷ ರೂಪಾಯಿ ಸಾಲ ಕೊಟ್ಟಿದ್ದಾರೆ; ಅವರಲ್ಲಿ 47 ಲಕ್ಷ ರೂಪಾಯಿ ಇದೆ.

ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಅವರು 26 ಲಕ್ಷ ರೂಪಾಯಿ ಕೊಟ್ಟಿದ್ದಾರೆ; ಅವರಲ್ಲಿ 16 ಲಕ್ಷ ರೂಪಾಯಿ ಇದೆ.

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಅವರು 8 ಲಕ್ಷ ರೂಪಾಯಿ ಕೊಟ್ಟಿದ್ದಾರೆ; ಅವರಲ್ಲಿ 5 ಲಕ್ಷ ರೂಪಾಯಿ ಇದೆ.

ಈ ರೀತಿ ನಡೆದುಕೊಂಡು ಹೋಗುವುದು ಸ್ವಾಭಾವಿಕ, ಸರಿ. ಯಾರೋ ಕಾಲು ಪರ್ಸೆಂಟು ಜಾಸ್ತಿ ಕೊಡುತ್ತಾರೆ ಎಂದು ಒಂದೂವರೆ ಕೋಟಿ ರೂಪಾಯಿ ಅವರ ಹತ್ತಿರ ಇಡುವುದಕ್ಕೆ ಆಗುತ್ತದೆಯೇ? ನಾವು ಯಾವ ರೀತಿ ಬಡ್ಡಿ ಕೇಳುತ್ತೇವೆಯೋ ಅವರೂ ಅದೇ ರೀತಿ ಬಡ್ಡಿ ಕೇಳುತ್ತಾರೆ. ಇದು ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರದ ನೀತಿ. ಆದ್ದರಿಂದ ಬೋರ್ಡಿನವರು ಮಾಡಿರುವುದು ಸರಿ. ಅದರಲ್ಲಿ ಏನೂ ಅನ್ಯಾಯವಾಗಿಲ್ಲ; ಆಗಬಾರದ್ದು ಏನೂ ಆಗಿಲ್ಲ, ಯಾರಿಗೂ ಏನೂ ತೊಂದರೆಯಾಗುವುದಿಲ್ಲ, ಬಹುಶಃ ಹೆಚ್ಚು ತಿಳಿಯದೇ, ಪಬ್ಲಿಕ್ ಡೆಟ್ ಹೇಗೆ ತೆಗೆದುಕೊಳ್ಳುತ್ತಾರೆ, ಎಲ್ಲಿ ಡಿಪಾಸಿಟ್ ಮಾಡುತ್ತಾರೆ ಎಂಬ ವ್ಯವಹಾರ ತಿಳಿಯದೇ ಇರಬೇಕು. ಇಲ್ಲದೇ ಹೋದರೆ ಮೊಸರಿನಲ್ಲಿ ಕಲ್ಲು ಸಿಕ್ಕುತ್ತದೆ ಎನ್ನುವ ಹಾಗೆ ಅವರು ಈ ವಿಷಯದಲ್ಲಿ ವಾದ ಮಾಡಿದ್ದಾರೆ. ಯಾವ ಬ್ಯಾಂಕಿನಲ್ಲಿ ಇಡಬೇಕು, ಯಾವ ಶರತ್ತಿನ ಮೇಲೆ ಇಡಬೇಕು ಎಂಬುದನ್ನೆಲ್ಲಾ ಪರಿಶೀಲನೆ ಮಾಡಲು ಕನ್‌ಸಲ್ಟೇಟೀವ್ ಕಮಿಟಿ ಇದೆ, ಅವರಿಗೆ ತಿಳಿಯದ ರೀತಿಯಲ್ಲಿ ಯಾವುದೂ ಕೂಡ ಆಗುವುದಿಲ್ಲ.

Sri S. SIVAPPA.—That is not the power of the Consultative Committee. I enquired and got information. It is not a decision by the Consultative Committee.

ಶ್ರೀ ಎಸ್. ನಿಜಲಿಂಗಪ್ಪ.—ಕನ್‌ಸಲ್‌ಟೇಟೀವ್ ಕಮಿಟಿಯವರು ಏನು ತೀರ್ಮಾನ ಮಾಡಿದರು ಅದನ್ನು ಬೋರ್ಡಿನವರು ಅನುಸರಿಸಿಕೊಂಡು ಹೋಗಿದ್ದಾರೆ. ಆದ್ದರಿಂದ ಯಾವುದೂ ಅನ್ಯಾಯ ನಡೆದಿಲ್ಲ.

ಇನ್ನು ಖಾದಿ ಬೋರ್ಡಿನ ವಿಚಾರ. ಬಹಳ ಸ್ವಾರಸ್ಯ ಇದರಲ್ಲಿ ಏನೆಂದರೆ ಗಾಂಧೀ ಹೆಸರು ಹೇಳುವವರಲ್ಲಿ ಅವರು ಯಾರಿಗೆ ಏನೂ ಕಡಮೇ ಇಲ್ಲ, ಖಾದಿ ಬಟ್ಟೆ ಬಹಳ ಪವಿತ್ರವಾದದ್ದು, ಖಾದಿ ಅಂಥಾದ್ದು ಇಂಥಾದ್ದು ಎಂದ ಮೇಲೆ ಎಷ್ಟು ಜನ ಅವರಲ್ಲಿ ಖಾದಿ ಹಾಕಿಕೊಂಡಿದ್ದಾರೆ ?

ಕೆಲವು ಮಾನ್ಯ ಸದಸ್ಯರು.—ಏಕೆ ನಾವೆಲ್ಲಾ ಖಾದಿ ಹಾಕಿಕೊಂಡಿಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಇರಲಿ, ಬಹಳ ಒಳ್ಳೆಯದು. ಇದರಲ್ಲಿ ಏನೋ ಅನ್ಯಾಯ ನಡೆದಿದೆ ಎಂದು ನನಗೆ ಅನಿಸುತ್ತದೆ. ಖಾದಿ ಬೋರ್ಡಿನಲ್ಲಿ ಕೆಲವು ಅನ್ಯಾಯ ನಡೆದಿರುವುದನ್ನು

ಒಪ್ಪುತ್ತೇನೆ, ಅನ್ಯಾಯ ನಡೆದಿದೆ, ಅನ್ಯಾಯ ನಡೆದಿರುವುದು ಅಷ್ಟೇ ಅಲ್ಲದೇ ಹಣ ದುರುಪಯೋಗವಾಗಿದೆ ಎಂದು ನನಗೆ ಅನಿಸುತ್ತದೆ.

(OPPOSITION MEMBERS: Hear, hear.)

ಆದರೆ ಒಂದು ಮಾತನ್ನು ಹೇಳುತ್ತೇನೆ ನೀವು ಬಯ್ಯುವುದಕ್ಕೆ ಏನು ಅವಕಾಶ ಮಾಡಿಕೊಂಡಿದ್ದೀರಿ ಅದನ್ನು ನಾವೇ ಒದಗಿಸಿರುವುದು, ನಮ್ಮ ಪ್ರಾಮಾಣಿಕತೆಯಿಂದ ನಿಮಗೆ ಬಯ್ಯುವುದಕ್ಕೆ ಅವಕಾಶ ಸಿಕ್ಕಿದೆ, ಮಾಹಿತಿ ಸಿಕ್ಕಿದೆ. ನಾವು ಏನನ್ನೂ ಬಚ್ಚಿಡುವುದಕ್ಕೆ ಹೋಗಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದೇವೆ, ಅವರು ತಿಳಿದುಕೊಳ್ಳಲಿ ಎಂದು. ಏಕೆಂದರೆ ನಿಮ್ಮಲ್ಲಿ ನಮಗೆ ವಿಶ್ವಾಸ ಉಂಟು, ನಂಬಿಕೆ ಉಂಟು. ಏನು ವಾಸ್ತವಸ್ಥಿತಿ ಇದೆ ಇದು ಚೆನ್ನಾಗಿ ತಿಳಿಯಬೇಕು, ಯೋಗ್ಯವಾಗಿ ತಿಳಿಯಬೇಕ , ನಾವೂ ನೀವೂ ಒಗ್ಗಟ್ಟಿನಿಂದ ಬೆರೆಯಬೇಕು.

3-00 P.M.

ಈ ನಾನಾ ಪಕ್ಷಗಳಲ್ಲಿರತಕ್ಕ ತಾವೆಲ್ಲರೂ ಒಂದು ಏಕ ಪಕ್ಷವಾಗುವುದು ನನಗೆ ಬಹಳ ಸಂತೋಷ. ಇದರಿಂದ ನಿಮಗೂ ಬಲವುಂಟಾಗುತ್ತದೆ. ದೇಶವನ್ನು ಒಂದು ಒಳ್ಳೇ ಮಾರ್ಗದಲ್ಲಿ ಒಯ್ಯಲು ನೀವೆಲ್ಲರೂ ಒಂದಾಗುವುದು ಬಹಳ ಒಳ್ಳೆಯದು. ಹಾಗಲ್ಲದೆ ನಮಗೆ ನಾಲ್ಕಾರು ಹಳ್ಳಿಗಳನ್ನು ಬಿಟ್ಟು ಕೊಡಲಿಲ್ಲ ಎಂದು ಅದಕ್ಕೇ ಒಂದು ಪಾರ್ಟಿ, ನಮಗೆ ಚುನಾವಣೆಯಲ್ಲಿ ಸ್ಥಾನ ಕೊಡಲಿಲ್ಲ ಎಂದು ಅದಕ್ಕೇ ಒಂದು ಪಾರ್ಟಿ, ದೇಶವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೊಯ್ಯಲು ಅದಕ್ಕೇ ಒಂದು ಪಾರ್ಟಿ ಹೀಗೆಲ್ಲ ನೀವು ಮಾಡುತ್ತ ಹೋದರೆ ನಿಜವಾಗಿಯೂ ನಿಮಗೆ ಅಧಿಕಾರ ಕೊಟ್ಟರೆ ನಿಮಗೆ ಈ ದೇಶದ ಆಡಳಿತವನ್ನು ನಡೆಸುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ? ಆದರೆ ಈ ನಿರ್ಣಯದಲ್ಲಿ ನೀವು ಒಂದು ಸಾರಿ ಏನು ಈ ಹಿಂದೆ ಹೇಳಿದ್ದರೋ ಅದನ್ನೇ ಈ ಸಾರಿಯೂ ಹೇಳಿದ್ದೀರಿ. ಆದ್ದರಿಂದ ನಾನು ಈ ಹಿಂದೆ ಒಂದಾವರ್ತಿ ಹೇಳಿದ್ದನ್ನೇ ಈಗಲೂ ಹೇಳಬೇಕಾಗಿದೆ. ಇಲ್ಲಿರತಕ್ಕ ಎರಡು ಪಕ್ಷಗಳಲ್ಲಿ ಯಾರಾದರೂ ಪಾಂಡವರಾಗಿರಬಹುದು, ಯಾರಾದರೂ ಕೌರವರಾಗಿರಬಹುದು. ಕೌರವರು ನೂರು ಜನ ಇರಬಹುದು, ಪಾಂಡವರು ಐದೇ ಜನರಿರಬಹುದು. ಈ ಎರಡು ಗುಂಪುಗಳೂ ಒಂದಕ್ಕೊಂದು ಬೇಕಾದಷ್ಟು ಕಿತ್ತಾಡಬಹುದು. ಆದರೆ ಹೊರಗಡೆಯವರು ಬಂದಾಗ ನಾವು ನೂರಾಐದು ಒಟ್ಟಿಗೆ ಒಂದೇ ಪಾರ್ಟಿಯಾಗುತ್ತೇವೆ. ಈ ವಿಚಾರವನ್ನು ಧರ್ಮರಾಯ ದ್ರೌಪದಿಗೆ ಹೇಳಿದ್ದಾನೆ. ಆದುದರಿಂದ ನೀವು ಚೆನ್ನಾಗಿ ಬೆಳೆಯಬೇಕು, ಒಳ್ಳೇ ಅನುಭವ ಪಡೆಯಬೇಕು. ಆಗಲೇ ಪ್ರಜಾಪ್ರಭುತ್ವ ಇಲ್ಲಿ ಯಶಸ್ವಿಯಾಗುವುದು. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ದೇಶದಲ್ಲಿ ಒಂದು ಯೋಗ್ಯವಾದ ವಿರೋಧ ಪಕ್ಷ ಇರಬೇಕು. ಇಲ್ಲದೆ ಹೋದರೆ ರಾಜ್ಯಭಾರ ಸರಿಯಾಗಿ ನಡೆಯುವುದಿಲ್ಲ. ಹಾಗೂ ಆ ಪಕ್ಷ ಬಲಯುತವಾದ ಪಾರ್ಟಿಯೂ ಆಗಿರಬೇಕು. ಹಾಗಲ್ಲದೆ ಕೇವಲ ಸಣ್ಣಪುಟ್ಟ ವಿಚಾರಗಳನ್ನೇ ಒಂದು ದೊಡ್ಡದನ್ನಾಗಿ ಮಾಡಿಕೊಂಡು ವಿರೋಧ ಪಕ್ಷದ ಕರ್ತವ್ಯ ಯಾವಾಗಲೂ ಟೀಕೆ ಮಾಡುವುದೇ ಎಂದು ಹೀಗೆಲ್ಲ ಮಾಡುತ್ತಿದ್ದರೆ ಇದರಿಂದ ಒಂದು ಅಪಹಾಸ್ಯಕ್ಕೆ ದಾರಿಯಾಗುತ್ತದೇ ವಿನಾ ಇನ್ನೇನೂ ಪ್ರಯೋಜನವಾಗುವುದಿಲ್ಲ. ಇಂಥ ಸಣ್ಣಪುಟ್ಟ ವಿಚಾರಗಳಿಗೆಲ್ಲ ಸುಮ್ಮನೆ ಹಾ, ಹೂ, ಎಂದರೆ ಏನು ಪ್ರಯೋಜನ? ಆದರೆ ಇದರಲ್ಲಿ ಇನ್ನೊಂದು ವಿಚಾರ ಏನೆಂದರೆ ವೈಯುಕ್ತಿಕವಾಗಿ ಟೀಕೆ ಮಾಡತಕ್ಕದ್ದನ್ನು ನಾನೆಲ್ಲಿಯೂ ನೋಡಿಲ್ಲ. ಶರಾವತಿ ವ್ಯಾಲಿಯಲ್ಲಿ ನನ್ನ ಮಗ ಕಂಟ್ರಾಕ್ಟ್ ಮಾಡುತ್ತಿದ್ದಾನೆ ಎಂಬ ಮಾತು ಸತ್ಯಕ್ಕೆ ಬಹಳ ದೂರವಾದ ಮಾತು. ಹಾಗಿದ್ದರೆ ಇಲ್ಲಿಯವರೆಗೂ ಏಕೆ ಇವರು ಬಂದು ನನ್ನ ಹತ್ತಿರ ಹೇಳಲಿಲ್ಲ? ಒಂದೊಂದು ದಿವಸಕ್ಕೂ ನನ್ನ ಹತ್ತಿರ ಎಲ್ಲರೂ ಬರುತ್ತಲೇ ಇದ್ದಾರೆ. ಆದರೆ ಈ ವಿಚಾರವನ್ನು ಇಲ್ಲಿಯತನಕ ಯಾರೂ ನನಗೆ ಹೇಳಲಿಲ್ಲ. ಯಾರು ಈ ವಿಚಾರ ಇಲ್ಲಿ ಹೇಳಿದ್ದಾರೋ ಅವರಿಗೆ ನಾನು ಇನ್ನೂ ಒಂದು ತಿಂಗಳು ಕಾಯಿದೆ ಕೊಡುತ್ತೇನೆ. ಅವರು ಹೇಳಿರತಕ್ಕದ್ದು ಸತ್ಯವೇ ಅಸತ್ಯವೇ ಎಂಬುದನ್ನು ಅವರೇ ಇನ್ನೊಂದಾವರ್ತಿ ಪರಿಶೀಲನೆ ಮಾಡಿ ನನಗೆ ಹೇಳಲಿ. ಇನ್ಯಾರೋ ಒಬ್ಬರು ಹೇಳಿದರು, ನನ್ನ ಸಂಬಂಧಿಗೆ ಮೋಟಾರ್ ಡೀಲರ್ಸ್ ಲೈಸೆನ್ಸ್ ಸಿಕ್ಕಿದೆ ಎಂದು. ಆದರೆ ನನಗೆ ಇಲ್ಲಿಯವರೆಗೂ ಯಾರು ಸಂಬಂಧಿಗಳು, ಯಾರು ಸಂಬಂಧಿಗಳಲ್ಲ ಎಂಬುದನ್ನು ನಿರ್ಧರಿಸುವುದೇ ಬಹಳ ಕಷ್ಟವಾಗಿದೆ. ನನಗೆ ಒಂದರ್ಥದಲ್ಲಿ ಎಲ್ಲರೂ ಸಂಬಂಧಿಗಳೇ. ಶ್ರೀ ಎಸ್. ಶಿವಪ್ಪನವರೂ ಅವರು ವಿರೋಧ ಪಕ್ಷದ ನಾಯಕರಾಗಿದ್ದರೂ ನನಗೆ ಅವರೂ ಸಂಬಂಧಿಗಳೇ. ಅಂದರೆ ರಾಜಕೀಯ ಸಂಬಂಧಿಗಳು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನನಗೆ ಯಾರೂ ಅಂಥ ಸಂಬಂಧೀಕರಿಲ್ಲ. ಒಂದು ವೇಳೆ ಹಾಗೆ ಲೈಸನ್ಸ್ ಕೊಟ್ಟಿದ್ದರೆ ಅವರು ಯಾರು, ಅವರಿಗೂ ನನಗೂ ಏನು ಸಂಬಂಧ, ಅವರಿಗೆ ಯಾರು ಲೈಸನ್ಸ್ ಕೊಟ್ಟಿದ್ದಾರೆ, ಅದರಲ್ಲಿ ನನ್ನ ಜವಾಬ್ದಾರಿ ಏನಿದೆ, ಅವರು ಅಪ್ಲಿಕೇಷನ್ ವಗೈರೆ ಕೊಟ್ಟಿದ್ದರೇ, ಅಥವಾ ಇಲ್ಲವೇ ಈ

(ಶ್ರೀ ಎಸ್. ನಿಜಲಿಂಗಪ್ಪ)

ವಿವರಗಳೊಂದನ್ನೂ ವಿಚಾರ ಮಾಡದೆ ಅಂಥ ಒಂದು ಕೆಲಸವಾಗಬೇಕಾದರೆ ಅದರ ರೀತಿ ನೀತಿಗಳೇನು ಎಂಬುದನ್ನೊಂದನ್ನೂ ವಿಚಾರ ಮಾಡದೆ, ಇಂಥ ವಿಚಾರಗಳನ್ನು ಇಷ್ಟು ಬೇಜವಾಬ್ದಾರಿಯಾಗಿ ಯಾರೂ ಹೇಳಬಾರದು. ಆ ರೀತಿ ಹೇಳುವುದು ಖಂಡಿತ ಸರಿಯಲ್ಲ.

ಇನ್ನು ಖಾದಿ ಬೋರ್ಡಿನಲ್ಲಿ ಬಹಳ ಅನ್ಯಾಯವಾಗಿದೆ ಎಂದು ಹೇಳಿದ್ದಾರೆ. ಆದರೆ ಆ ವಿಚಾರ ನನಗೆ ಗೊತ್ತಿಲ್ಲ. ಆದರೆ ಆರೀತಿ ಆಗಿರಬಹುದು ಎಂದು ಊಹಿಸುವುದಕ್ಕೆ ಅವಕಾಶ ಇದೆ. ಆದರೆ ಶ್ರೀಮಾನ್ ರೇವಣಸಿದ್ದಪ್ಪನವರು ಅದೇನೋ ಮೋಹನಾಸ್ತ್ರ ಎಂದು ಹೇಳಿದರು. ಅದು ಎಂಥ ಮೋಹನಾಸ್ತ್ರವೋ ನನಗೆ ಅದು ಗೊತ್ತಿಲ್ಲ. ಅವರಿಗೆ ಗೊತ್ತಿರಬಹುದು. ಆದರೆ ಈಗ ಅಲ್ಲಿ ಏನು ನಡೆದಿದೆ ಎಂಬುದು ನನಗೆ ಗೊತ್ತಾಗಬೇಕಾಗಿದೆ. ಇನ್ನೂ ಈಗ ತಾನೆ ನನಗೆ ನಮ್ಮ ಶ್ರೀಮಾನ್ ಜತ್ತಿಯವರು ಕಳೆದ ಫೆಬ್ರುವರಿ, ಮಾರ್ಚಿ ತಿಂಗಳಲ್ಲಿ ಖಾದಿ ಬೋರ್ಡಿನ ಅಧ್ಯಕ್ಷರಿಂದ ಒಂದು ಪತ್ರ ಬಂದಿದೆ, ಅದರಲ್ಲಿ ಅಲ್ಲಿಯ ಲೆಕ್ಕಪತ್ರಗಳೊಂದೂ ಸರಿಯಾಗಿಲ್ಲ ಎಂಬುದಾಗಿ ತಿಳಿಸಿದರು. ಆ ಖಾದಿ ಬೋರ್ಡಾದರೋ ಒಂದು ಸ್ಟ್ಯಾಚ್ಯೂಟರಿ ಆಟಾನಮಸ್ ಬಾಡಿ. ಆದಾಗ್ಯೂ ಸರ್ಕಾರದವರ ನಿಗಾ ಅದರ ಮೇಲಿದೆ. ಅದಕ್ಕೆ ಕೇಂದ್ರದಿಂದ ಬಹಳ ಹಣ ಬರುತ್ತದೆ. ಅದೊಂದು ಪವಿತ್ರವಾದ ಸಂಸ್ಥೆಯೂ ಹೌದು. ಆದರೆ ಅದು ಈಗ ಪವಿತ್ರವಾಗಿದೆಯೇ ಅಥವಾ ಅಪವಿತ್ರವಾಗಿದೆಯೇ ಎಂಬುದನ್ನು ಕಂಡುಹಿಡಿಯಬೇಕಾಗಿದೆ. ಆ ಡಿಪಾರ್ಟ್‌ಮೆಂಟಿನ ಪ್ರತಿಯೊಂದು ಲೆಕ್ಕಾಚಾರಗಳನ್ನೂ ತನಿಖೆ ಮಾಡಲು ಒಳ್ಳೇ ನುರಿತ ಎಪ್ಪತ್ತು ಎಂಬತ್ತು ಜನಗಳನ್ನು ಅಲ್ಲಿಗೆ ಈಗ ಕಳುಹಿಸಲಾಗಿದೆ. ಅವರೀಗ ಅಲ್ಲಿ ಏನೇನಾಗಿದೆ, ಹಣ ದುರುಪಯೋಗ ಆಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಅವರೀಗ ಕಂಡುಹಿಡಿಯಬೇಕಾಗಿದೆ. ಈಗ ತಾನೆ ಯಾರೋ ಹೇಳಿದರು, ಅಲ್ಲಿ ಒಬ್ಬ ಹೆಂಗಸರಿಗೆ ಮೂರು ನಾಲ್ಕು ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ ಎಂದು: ಈಗ ಅದನ್ನೆಲ್ಲಾ ವಿಚಾರ ಮಾಡಬೇಕೆಂದು ಆಜ್ಞೆ ಮಾಡಿದ್ದೇವೆ. ಜಾಗ್ರತೆ ಆ ಲೆಕ್ಕಪತ್ರಗಳನ್ನೆಲ್ಲಾ ತಪಾಸ್ ಮಾಡಿ ಅಲ್ಲಿ ಯಾರಿಗೆ ಶಿಕ್ಷೆ ಮಾಡಬೇಕು ಎಂಬುದನ್ನು ಕಂಡುಹಿಡಿದು ತಪ್ಪಿತಸ್ಥರಿಗೆ ಖಂಡಿತ ಶಿಕ್ಷೆ ಮಾಡುತ್ತೇವೆ. ಆದರೆ ಕೆಲವರು ಹೇಳಿದರು 'ನನಗೆ ಆ ಶಿಕ್ಷೆ ಮಾಡತಕ್ಕ ಶಕ್ತಿಯಿಲ್ಲ ಎಂದು. ಅವರು ಅದನ್ನು ಹೇಗೆ ಹೇಳಿದರೋ ನನಗೆ ತಿಳಿಯದು. ನಾನೇನೋ ಯಾವಾಗಲೂ ಒಳ್ಳೆಯದನ್ನೇ ಹೇಳುತ್ತಿರುತ್ತೇನೆ. ಅಂದಾಕ್ಷಣಕ್ಕ ತಪ್ಪಿತಸ್ಥರನ್ನು ಅವರು ಒಳ್ಳೇ ಮಾತಾಡಿದಾಕ್ಷಣಕ್ಕೆ ಕೈ ಬಿಟ್ಟುಬಿಡುತ್ತಾರೆಂಬುದು ಸರಿಯಲ್ಲ. ಆ ರೀತಿ ಭಾವಿಸಿರತಕ್ಕವರು ತಪ್ಪು ಮಾಡಿ ಒಂದಾವರ್ತಿ ನನ್ನ ಕೈಗೆ ಸಿಕ್ಕಿ ನೋಡಲಿ, ಆಗ ನಾನು ಏನು ಮಾಡುತ್ತೇನೆ ಎಂಬುದನ್ನು ತೋರಿಸುತ್ತೇನೆ.

ಇನ್ನು ಕೆಲವರು ದೇಶದಲ್ಲಿ ಲಂಚ ಬಹಳ ಜಾಸ್ತಿಯಾಗಿದೆ, ಅಧಿಕಾರಿಗಳು ಹಾಗೆ ಮಾಡುತ್ತಾರೆ, ಹೀಗೆ ಮಾಡುತ್ತಾರೆ ಎಂದು ಹೇಳಿದರು, ನಿಜ. ಆದರೆ ಈ ಲಂಚ ಎಂಬುದು ದೇಶದಲ್ಲಿ ಎಷ್ಟೋ ಕಾಲದಿಂದ ಹೀಗೇ ನಡೆಯುಕೊಂಡು ಬರುತ್ತಿದೆ. ಇದನ್ನು ಈ ದಿವಸ ನಿರ್ಮೂಲ ಮಾಡಬೇಕೆಂದರೆ ಖಂಡಿತ ಸಾಧ್ಯವಿಲ್ಲ. ಇದನ್ನು ವಿರೋಧ ಪಕ್ಷದವರಿಗೂ ನಿರ್ಮೂಲ ಮಾಡಲು ಸಾಧ್ಯವಿಲ್ಲ. ಒಂದು ವೇಳೆ ದೇವರೇ ಇಲ್ಲಿಗೆ ಇಳಿದು ಬಂದರೂ ಆತನಿಗೂ ಇದನ್ನು ತಡೆಗಟ್ಟಲು ಸಾಧ್ಯವಾಗುತ್ತದೆಯೋ ಇಲ್ಲವೋ ಅದು ಗೊತ್ತಿಲ್ಲ. ಈ ಲಂಚ ದೇಶ ಹುಟ್ಟಿದಾಗಿನಿಂದಲೂ ಇದ್ದೇ ಇದೆ. ಆದರೆ ಅನೇಕ ಮಾನ್ಯ ಸದಸ್ಯರಿಗೆ ಈ ಲಂಚಕೋರರನ್ನು ಹಿಡಿದು ಶಿಕ್ಷಿಸುವುದು ಎಷ್ಟು ಕಷ್ಟ ಎನ್ನುವುದು ಗೊತ್ತಿಲ್ಲವೆಂದು ಕಾಣುತ್ತದೆ. ಇದಕ್ಕೆ ಬಹಳ ಅಡಚಣೆಗಳಿವೆ. ಕಾನೂನನ್ನು ಬಿಟ್ಟು ಶಿಕ್ಷಿಸಬೇಕೆಂದರೆ ಬಹಳ ಕಷ್ಟ. ಈ ಬಗ್ಗೆ ಏನು ಮಾಡಬೇಕೆಂದು ನಾವು ಮತ್ತು ಕೇಂದ್ರ ಸರ್ಕಾರದವರೂ ಆಲೋಚನೆ ಮಾಡುತ್ತಿದ್ದೇವೆ. ಇದನ್ನು ಸಿಂಪ್ಲಿಫೈ ಮಾಡಬೇಕು ಎಂದು ಮಾಡಿದ್ದೇವೆ. ಈ ಸಂಬಂಧದಲ್ಲಿ ನಾವು ಒಂದ ಚೂರು ಏನಾದರೂ ಕೈಬಿಟ್ಟೆವೆಂದರೆ ಹೈ ಕೋರ್ಟಿನವರು ನಾವು ಶಿಕ್ಷೆ ಮಾಡಿದ್ದೇ ತಪ್ಪು ಎಂದು ಹೇಳಿಬಿಡುತ್ತಾರೆ. ಹೀಗಾಗಿ ನಾವು ಶಿಕ್ಷೆ ಮಾಡಿದ ಎಷ್ಟೋ ಕೇಸುಗಳು ಕೋರ್ಟಿನಲ್ಲಿ ವಜಾ ಆಗಿವೆ. ಆದುದರಿಂದ ಈ ಲಂಚವನ್ನು ತಡೆಗಟ್ಟತಕ್ಕ ಕೆಲಸ ಬಹಳ ಕಷ್ಟವಾದದ್ದು. ಇದನ್ನು ಸರಿಯಾಗಿ ತಿಳಿದುಕೊಳ್ಳದೆ ನಿಮ್ಮ ಆಡಳಿತ ಕೆಟ್ಟಿದೆ, ನೀವು ಅಧಿಕಾರ ಬಿಟ್ಟು ಕೆಳಗೆ ಇಳಿಯಬೇಕು ಎಂದರೆ ಅದೇನು ಮಾತು? ಆದರೆ ಈ ವಿಚಾರದಲ್ಲಿ ನಾನು ತಮ್ಮಲ್ಲಿ ಕೇಳಿಕೊಳ್ಳುವುದಿಷ್ಟೆ: ಅಂಥ ಅನಾಚಾರ ಎಲ್ಲೆಲ್ಲಿದೆಯೋ ಅದನ್ನು ನಿರ್ಮೂಲ ಮಾಡಲು ನಿಮ್ಮ ಸಹಕಾರ ನಮಗೆ ಬಹಳ ಅಗತ್ಯವಾಗಿದೆ. ನೀವೂ ನಾವೂ ಇಬ್ಬರೂ ಸೇರಿ ಮಾಡುವಂಥ ಕೆಲಸ ಇದು. ಇದರಲ್ಲಿ ನಮಗೆ ಶ್ರೀ ಗೋಪಾಲ ಗೌಡರ ಸಹಕಾರವೂ ಬೇಕು. ಸಮಾಜದಲ್ಲಿರತಕ್ಕ ದುರ್ಗುಣಗಳನ್ನು ಅಳಿಸಬೇಕಾಗಿದ್ದರೆ ಅದಕ್ಕಾಗಿ ಎಲ್ಲರೂ ದುಡಿಯಬೇಕು.

ಇನ್ನು ಕೆಲವರು ಆಹಾರದ ಬೆಲೆಗಳು ಬಹಳವಾಗಿ ಏರಿರುತ್ತವೆ ಎಂದು ಹೇಳಿದ್ದಾರೆ. ಹೋದ ಸಾರಿ ತಂದಿದ್ದ ನಿರ್ಣಯದಲ್ಲೂ ಇದೇ ವಿಚಾರ ಇತ್ತು. ಆದರೆ ಇದರಲ್ಲಿ ಈ ಸಾರಿ ಇವರು

ಒಂದು ಬುದ್ಧಿವಂತಿಕೆಯನ್ನು ಮಾಡಿದ್ದಾರೆ. ನೀವೂ ಬಹಳ ಬುದ್ಧಿವಂತರೇ.. ಹೀಗೆ ಒಂದು ಬದಲಾವಣೆ ಮಾಡದಿದ್ದರೆ ಅಧ್ಯಕ್ಷರು ಈ ಸೂಚನೆಯನ್ನು ಅಲೋಚಿಸುವುದಿಲ್ಲ ಎಂದೋ ಏನೋ.

Sri S. M. KRISHNA (Maddur).—I rise to a point of order, Sir. The Leader of the House said and it has gone on record: "ನೀವೂ ಬುದ್ಧಿವಂತರೇ". It is an indirect insinuation against the Members of the Parliament who have made that motion. Would it be in order?

ಶ್ರೀ ಎಸ್. ನಿಜಲಿಂಗಪ್ಪ.—ಆ ಕೃಪಲಾನಿಯವರ ಹತ್ತಿರವೇ ನೀವು ಹೇಳಿದ್ದು ಸರಿ ಎಂದು ಹೇಳಿಸುತ್ತೇನೆ.

Sri S. M. KRISHNA.—Sir, it further strengthens my point of order.

Mr. SPEAKER.—The member has stated the point of order and I will give a ruling. (*Lavghter.*)

ಶ್ರೀ ಎಸ್. ನಿಜಲಿಂಗಪ್ಪ.—ನಿಮಗೆ ಒಳ್ಳೆಯ ಮಾತು ಹೇಳಿದ ಹಾಗಾಯಿತು. ಬುದ್ಧಿವಂತರು, ಒಳ್ಳೆಯವರ ಮಾತು ಕೇಳಿ ಎಂದು ಆಯಿತು. ಸುಮ್ಮನೆ ಬಯ್ಯುವುದು ಬಿಟ್ಟರೆ ಒಳ್ಳೆಯವರಾಗುತ್ತೀರ, ನೀವೆಲ್ಲರೂ ಒಳ್ಳೆಯವರೆ ಎಂದು ಹೇಳುತ್ತೇನೆ.

ಆಹಾರದ ವಿಷಯವನ್ನು ಹೇಳಿದರು. ಇವತ್ತು ಜನ ಎಷ್ಟು ಆಹಾರ ತಿನ್ನುತ್ತಿದ್ದಾರೆ, 15 ವರ್ಷಗಳ ಕೆಳಗೆ ಎಷ್ಟು ತಿನ್ನುತ್ತಾ ಇದ್ದರು ಎಂದು ಯಾರಾದರೂ ಲೆಕ್ಕ ಹಾಕಿದ್ದೀರ? ಹಿಂದೆ 11, 12 ಔನ್ಸು ತಿನ್ನುತಿದ್ದರು; ಇವತ್ತಿನ ದಿವಸ 15-16 ಔನ್ಸು ತಿನ್ನುತ್ತಾ ಇದ್ದಾರೆ. ಇದನ್ನು ಹೆಚ್ಚು ಆಹಾರ ಬೆಳೆಯದೆ ತಿನ್ನುತ್ತಾ ಇದ್ದಾರೆಯೇ? ಆದರೆ ಇದೂ ಸಾಲದು, 20 ಔನ್ಸಾದರೂ ತಿನ್ನಬೇಕು. ಅಷ್ಟು ಬೆಳೆಯುವುದಕ್ಕೆ ಸಾಧ್ಯವಾಗಿಲ್ಲ, ಅದನ್ನು ಬೆಳೆಯಬೇಕು. ಅದನ್ನು ಬೆಳೆಯಬೇಕಾದರೆ, ನಮ್ಮ ಮಾನ್ಯ ಶಿವಪ್ಪನವರು ಹೇಳುತ್ತಿರುವ ಹಾಗೆ ಅಪಾರವಾದ ಹಣ ಖರ್ಚು ಮಾಡಬೇಕು. ಅದಕ್ಕೆ ಯೋಜನೆಗಳನ್ನು ಮಾಡುತ್ತಾ ಇದ್ದೇವೆ. ಸಾಕಷ್ಟು ಯೋಜನೆಗಳು ನಡೆಯುತ್ತಲೂ ಇವೆ. ಆದರೆ ನೀವು ಏನು ಮಾಡಿದಿರಿ ಎಂದು ವಿರೋಧ ಪಕ್ಷದವರು ಕೇಳುತ್ತಾರೆ. ಅಪ್ಪಾ, ಮೈಸೂರಿನಲ್ಲಿ ತುಂಗಭದ್ರ, ಭದ್ರ, ತುಂಗ, ಘಟಪ್ರಭ ಕಟ್ಟಿದ್ದೇವೆ, ಮಲಪ್ರಭಾಗೆ ಫೌಂಡೇಷನ್ ಹಾಕಿದ್ದೇವೆ, ಅಪ್ಪರ್ ಕೃಷ್ಣಾಗೆ ಫೌಂಡೇಷನ್ ಹಾಕುತ್ತೇವೆ, ಹೇಮಾವತಿ ಮತ್ತು ಹಾರಂಗೀಗೂ ಕಟ್ಟುತ್ತೇವೆ. ನೀವು ಇವುಗಳನ್ನು ಕಟ್ಟಿದರೆ ಏನಾಯಿತು ಎಂದು ಕೇಳುತ್ತಾರೆ. ಜನಗಳಿಗೆ ಅನುಕೂಲವಾಯಿತು ಎಂದು ಹೇಳುತ್ತೇವೆ. ಸ್ವಲ್ಪ ತಡವಾಗಿದೆ. ಈ 10 ವರ್ಷಗಳಲ್ಲಿ ಜಾಸ್ತಿ ಕೆಲಸವಾಗಿಲ್ಲವೆಂದು ಮೂರುವರೆ ಕೋಟಿರೂಪಾಯಿಗಳನ್ನು ರೈತರ ಭೂಮಿಗೆ ನೀರನ್ನು ತೆಗೆದುಕೊಂಡು ಹೋಗಿ ಬಿಡಲು ಸಾಂಕ್ಷನ್ ಮಾಡಿದ್ದೇವೆ. ರೈತನಿಗೇ ಬಿಟ್ಟರೆ ಅವನು ಕಾಲುವೆಗಳನ್ನು ತೆಗೆದು ನೀರನ್ನು ಹೊಲಗಳಿಗೆ ತೆಗೆದುಕೊಳ್ಳುವುದಿಲ್ಲ. ಅದ್ದರಿಂದ ಸರ್ಕಾರವೇ ಗದ್ದೆಯ ನೀರ್ಗಾವಲುಗಳನ್ನು ಏರ್ಪಡಿಸಲು ಹಣವನ್ನು ಒದಗಿಸಿದೆ.

ಶ್ರೀ ಎಸ್ ಶಿವಪ್ಪ.—ಯಾವ ಕಂಟ್ರಾಕ್ಟರಿಗೆ ಕೊಟ್ಟು ಮಾಡಿಸುತ್ತೀರ?

ಶ್ರೀ ಎಸ್. ನಿಜಲಿಂಗಪ್ಪ.—ನಾವೇ ಮಾಡಿಸುತ್ತೇವೆ. ಸಂತೋಷವಾಯಿತೋ? ಟ್ರಾಕ್ಟರುಗಳನ್ನು ತರಿಸಬೇಕೆಂದು ಮಾಡಿದ್ದೇವೆ. ಪಾಪ! ಏನು ಮಾಡಿದರೂ ಅನುಮಾನ ಇರುವವರಿಗೆ ಏನು ಮಾಡೋಣ! ಅನುಮಾನ ಇರತಕ್ಕಂಥವರ ಸಂಸಾರ ಚೆನ್ನಾಗಿ ನಡೆಯುವುದಿಲ್ಲ. ನಿಮ್ಮ ಪಾರ್ಟಿ ಸಂಸಾರವನ್ನೂ ಚೆನ್ನಾಗಿ ನಡೆಸಿಕೊಳ್ಳಲಾರಿರಿ. 'ಸಂಶಯಾತ್ಮಾ ವಿನಶ್ಯತಿ' ಎಂದು ಹೇಳಿದ ಹಾಗೆ ಆಗುತ್ತದೆ. ಇದನ್ನು ಏರ್ಪಾಡು ಮಾಡಲು ಮೂರುವರೆ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ. ಅದಕ್ಕೋಸ್ಕರ ಲೆವಲರುಗಳು ಮುಂತಾದ ಮೆಶಿನರಿಗಳು, ಮಣ್ಣು ತೆಗೆಯುವ ಯಂತ್ರಗಳು, ವಗೈರೆಗೆ, ಸುಮಾರು 30 ಲಕ್ಷ ರೂಪಾಯಿ ಖರ್ಚಿನಲ್ಲಿ ಆರ್ಡರ್ ಮಾಡಿದ್ದೇವೆ. ಅವು ಬೇಗ ಬರಬಹುದು, ಆದಷ್ಟು ಜಾಗ್ರತೆ ಮಾಡಿಕೊಡುತ್ತೇವೆ. ಭದ್ರ ಕೆನಾಲಿನಿಂದಲೇ ಇನ್ನು ಒಂದು ವರ್ಷದೊಳಗೆ 2 ಲಕ್ಷ ಎಕರೆಯಲ್ಲಿ ಬೆಳೆ ಬೆಳೆಯುವಂಥ ಕಾಲ ಬರುತ್ತದೆ. ಬಳ್ಳಾರಿಯಲ್ಲಿ ಕೂಡ 80 ಸಾವಿರ ಎಕರೆ ಸಾಗುವಳಿಗೆ ಬಂದಿದೆ; ರಾಯಚೂರಿನಲ್ಲಿ ಒಂದುವರೆ ಲಕ್ಷ ಎಕರೆ ಸಾಗುವಳಿಗೆ ಬಂದಿದೆ. ಇನ್ನೂ 6-7 ಲಕ್ಷ ಎಕರೆ ಬರಬಹುದು. ಬಿಜಾಪುರದಲ್ಲಿಯೂ ಭಾರಿ ಕೆಲಸ ಮಾಡುತ್ತಿದ್ದೇವೆ. ಇದು ಕಷ್ಟವಾದ ಕೆಲಸ. ತಡವಾಗಿದ್ದರೂ ಬಹಳ ಕೆಲಸವನ್ನು ಹೆಚ್ಚು ಬೆಳೆ ಬೆಳೆಯುವುದಕ್ಕೆ ಮಾಡಿದ್ದೇವೆ. ಮೈಸೂರಿನ ಪೂರ್ವ ಭಾಗದಲ್ಲಿ ಅನೇಕ ತಾಲ್ಲೂಕುಗಳಲ್ಲಿ ನೂರಾರು ಕೆರೆಗಳನ್ನು ಮಾಡುತ್ತಾ ಇದ್ದೇವೆ. ಜನಗಳೂ ಹಾಗೆ ಕೇಳಬೇಕು, ನಾವು ಮಾಡಿಕೊಡುತ್ತೇವೆ. ನಾವು ಮಾಡಿರುವ ಕೆಲಸವನ್ನು ಜನ ಸಾಕಷ್ಟು ಒಪ್ಪಿದ್ದಾರೆ. ಯೋಜನೆಯಂತೆ ಕೆಲಸ ನಡೆಯುತ್ತಾ ಇದೆ. ಮೂರನೆಯ ಯೋಜನೆಯಲ್ಲಿ 22 ಸಾವಿರ ಬಾವಿಗಳನ್ನು ತೆಗೆಯಬೇಕೆಂದಿದ್ದೇವೆ. ಇನ್ನು ನಾಲ್ಕು ವರ್ಷಗಳೊಳಗೆ 50 ಸಾವಿರ ಬಾವಿಗಳಿಗೆ ಪಂಪುಸೆಟ್ಟುಗಳನ್ನು ಕೊಡಬೇಕೆಂದು ಮನಸ್ಸು

(ಶ್ರೀ ಎಸ್. ನಿಜಲಿಂಗಪ್ಪ)

ಮಾಡಿದ್ದೇವೆ. ಇವುಗಳನ್ನು ಎನ್‌ಕಂಬ್ರೆನ್ಸ್ ಸರ್ಟಿಫಿಕೇಟ್ ಇಲ್ಲದೇನೇ ಕೊಡಬೇಕು ಎಂದು ಮಾಡಿದ್ದೇವೆ. ಅದಷ್ಟು ಜಾಗ್ರತೆ ಸಣ್ಣ ನೀರಾವರಿ ಯೋಜನೆಗಳನ್ನು ಪೂರೈಸಲು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೇವೆ. ಇಷ್ಟು ಖರ್ಚು ಮಾಡುವಾಗ ಒಂದು ವೇಳೆ ಲಂಚ ತಿಂದುಬಿಟ್ಟರೆ ಎಂದು ವಿರೋಧ ಪಕ್ಷದ ಸಂಶಯ. ದರ್ಜಿಗೆ 10 ಗಜ ಬಟ್ಟೆ ಕೊಟ್ಟಾಗ ಕಾಲು ಗಜ ಕದಿಯುತ್ತಾನೆಂದು ಬಟ್ಟೆ ಹೊಲಿಸುವುದನ್ನೇ ಬಿಡುವುದಕ್ಕೆ ಆಗುತ್ತದೋ? ಮಾಡುವ ಕೆಲಸವನ್ನು ಮಾಡಿಯೇ ಮಾಡಬೇಕು. ಎಲ್ಲಿ ಬಾವಿಗೆ ಅವಶ್ಯಕತೆ ಇದೆಯೋ ಅಲ್ಲಿ ತೋಡಿಸಲೇಬೇಕು. ಎಲ್ಲಿ ಕೆರೆಗೆ ಅವಶ್ಯಕತೆ ಇದೆಯೋ ಅಲ್ಲಿ ಕಟ್ಟಿಸಲೇಬೇಕು. ಬಟ್ಟೆ ಹೊಲಿಸಿಕೊಂಡು ಮಕ್ಕಳೂ, ನಾವೂ ತೊಡಲೇಬೇಕು. ಕಾಲು ಗಜ ದರ್ಜಿ ಕದಿಯುತ್ತಾನೆಂದು ಬಟ್ಟೆ ಹೊಲಿಸುವುದನ್ನೇ ಬಿಡುತ್ತೇವೆಯೆ? ಕಂಟ್ರಾಕ್ಟರುಗಳೂ, ಇಂಜಿನಿಯರುಗಳೂ ಸ್ವಲ್ಪ ತಿನ್ನಬಹುದು, ಆದರೆ ನೀವು ಹೇಳಿದಷ್ಟು ಇಲ್ಲ. ನೀವು ಈ ರೀತಿ ಹೇಳದೆ ಇದ್ದರೆ ನಿಮಗೆ ಸಮಾಧಾನ ಇರುವುದಿಲ್ಲ.

ಜನ ಜಾಸ್ತಿ ಆಹಾರ ತಿನ್ನುತ್ತಾ ಇದ್ದಾರೆ ಅನ್ನುವುದಕ್ಕೆ ಏನು ಗುರುತು? ನಮ್ಮ ಜನದ ಬದುಕುವ ಕಾಲ (ಸ್ಪಾನ್ ಆಫ್ ಲೈಫ್ ಅಥವ ಲಾಂಗೆವಿಟಿ) ಈ ಸುಮಾರು 16–17 ವರ್ಷಗಳಲ್ಲಿ 26 ವರ್ಷದಿಂದ 42 ವರ್ಷಕ್ಕೆ ಬಂದಿದೆ. ಪೋಲೆಂಡ್ ಮತ್ತು ಸ್ಕಾಂಡಿನೇವಿಯನ್ ದೇಶಗಳಲ್ಲಿ ಸ್ಪಾನ್ ಆಫ್ ಲೈಫ್ 60–65 ವರ್ಷವಿದೆ. ಆದರೂ ನಮ್ಮಲ್ಲಿ 26ರಿಂದ 42ಕ್ಕೆ ಏರಿಸುವುದು ಮಂತ್ರದಿಂದ ಆಗುತ್ತದೆಯೆ? ಅದು ಏನು ತೋರಿಸುತ್ತದೆ: ಜನಗಳಿಗೆ ಸಾಕಷ್ಟು ಆಹಾರ ಸಿಕ್ಕುತ್ತಾ ಇದೆ, ಮೈಗೆ ಬಟ್ಟೆ ಸಿಕ್ಕುತ್ತಾ ಇದೆ. ಬಟ್ಟೆ ಉತ್ಪತ್ತಿಯೂ ಜಾಸ್ತಿಯಾಗಿದೆ. ನಮ್ಮ ದೇಶದಿಂದ ಹೊರಗಡೆಗೆ ಬಟ್ಟೆ ಕಳುಹಿಸುತ್ತಾ ಇದ್ದೇವೆ. ಅದೂ ಅಲ್ಲದೆ ನಮ್ಮ ಜನ ತಲಾ ಒಂದಕ್ಕೆ 16-17 ಗಜ ಬಟ್ಟೆ ಉಪಯೋಗಿಸುತ್ತಾರೆ.

ಶ್ರೀ ಎಸ್. ಶಿವಪ್ಪ.—ಬಟ್ಟೆ ಬೆಲೆ ಜಾಸ್ತಿ ಇದೆ.

ಶ್ರೀ ಎಸ್. ನಿಜಲಿಂಗಪ್ಪ.—ಬಟ್ಟೆ ಬೆಲೆ ಜಾಸ್ತಿ ಇಲ್ಲದಿದ್ದರೆ, ಹತ್ತಿ ಬೆಳೆಯುವವನ ಗತಿ ಏನು, ಕೂಲಿ ತೆಗೆದುಕೊಳ್ಳುವವನ ಗತಿ ಏನು? ರೈತನ ಗತಿ ಏನು? ಬೆಲೆ ಕಡಮೆ ಮಾಡುವುದಕ್ಕೆ ನಾನು ಸಿದ್ಧನಿಲ್ಲ. ಬೆಲೆ ಜಾಸ್ತಿಯಾಗಿರುವುದನ್ನು ಆಲೋಚನೆ ಮಾಡುತ್ತಾ ಇದ್ದೇವೆ. ಹೋದ ಸಲ ಆಹಾರ ಉತ್ಪತ್ತಿ ಜಾಸ್ತಿಯಾಗಿಲ್ಲ ಎಂದು ಹೇಳುವಾಗ ಏನು ಹೇಳಿದ್ದರೋ, ಅದನ್ನೇ ಇವತ್ತೂ ಹೇಳುತ್ತಾ ಇದ್ದಾರೆ. ಮಾನ್ಯ ರೆವಿನ್ಯೂ ಮಂತ್ರಿಗಳಾದ ಕೃಷ್ಣಪ್ಪನವರು ಹೋದ ವರ್ಷ ಎಷ್ಟಿತ್ತು, ಈ ವರ್ಷ ಎಷ್ಟಿದೆಯೆಂದು ಹೇಳಿದ್ದಾರೆ. ಬೆಲೆ ಜಾಸ್ತಿಯಾಗುವುದಕ್ಕೆ ಒಂದು ಕಾರಣ ಮಧ್ಯವರ್ತಿಗಳು ಮತ್ತು ವ್ಯಾಪಾರಿಗಳು. ಹೋಲ್‌ಸೇಲಿನಲ್ಲಿ ರೀಟೇಲರುಗಳಿಗೆ ಮಾರತಕ್ಕಂಥ ಮರ್ಚೆಂಟುಗಳು ಬಹಳ ಕಾರಣರಾಗಿರುತ್ತಾರೆ. ಆದ್ದರಿಂದ ಈ ಪದ್ಧತಿಯನ್ನು ತೆಗೆದು ಕೋ-ಆಪರೇಟೀವ್ ಸೊಸೈಟಿಗಳ ಮೂಲಕ ವ್ಯವಹಾರಗಳನ್ನು ನಡೆಸಿದರೆ ಚೆನ್ನಾಗಿ ನಡೆಯುತ್ತದೆ. ಈ ಸೊಸೈಟಿಗಳನ್ನು ಪುರಮಾಡಿ, ಸತ್ಯವಂತರು, ಯೋಗ್ಯರು, ದಕ್ಷತೆಯಿಂದ ಸಮಸ್ತವನ್ನೂ ನೋಡಿದರೆ, ಪ್ರಾಮಾಣಿಕ ಕೆಲಸವಾಗುತ್ತದೆ. ಹೋದ ವರ್ಷ ಬತ್ತದ ಬೆಳೆಯಲ್ಲಿ ರೈತನಿಗೆ ಎಲ್ಲೆಲ್ಲ ಅನ್ಯಾಯವಾಗಿತ್ತೋ, ಅಲ್ಲಿ ನಾವು ಪ್ರವೇಶ ಮಾಡಿ 2–3 ರೂಪಾಯಿ ಜಾಸ್ತಿ ಬೆಲೆ ಅವನಿಗೆ ಬರುವ ಹಾಗೆ ಮಾಡಿದೆವು. ಈ ಮಧ್ಯವರ್ತಿ ಜನಗಳೇನಿದ್ದಾರೆ ಅವರು ಬಾರದ ರೀತಿಯಲ್ಲಿ ಈ ಸೊಸೈಟಿಗಳನ್ನು ಮಾಡುತ್ತೇವೆ. ವೈಯಕ್ತಿಕವಾಗಿ, ಹೇಳುವುದಾದರೆ, ನಾವು ಉತ್ಪತ್ತಿ ಮಾಡುವವರಿಗೆ ಏನಾದರೂ ಸ್ವಲ್ಪ ಅಲೋಯನ್ಸು ಮಗೆ್ರ ಕೊಟ್ಟು ಅವರ ಜೀವನವನ್ನು ಸುಗಮವಾಗಿ ಮಾಡಬೇಕು. ಧಾರಣೆವಾಸಿ ಏರಿದೆ ಎಂದು ಕಡಮೆ ಮಾಡಿ ರೈತನಿಗೆ ತೊಂದರೆ ಮಾಡಿದರೆ, ಅವನ ಗತಿ ಏನು? ನಮ್ಮ ಉತ್ಪತ್ತಿಯಲ್ಲಿ ಶೇಕಡ 55 ರಷ್ಟು ರೈತ ಉತ್ಪತ್ತಿ ಮಾಡುತ್ತಾನೆ. ಒಟ್ಟು ನ್ಯಾಷನಲ್ ಇನ್‌ಕಂನಲ್ಲಿ, ಶೇಕಡ 65ರಷ್ಟನ್ನು ಅವನು ಕಂಟ್ರಿಬ್ಯೂಟ್ ಮಾಡುತ್ತಾನೆ. ಶೇಕಡ 15ರಷ್ಟು ಕಚ್ಚಾಮಾಲನ್ನು ಅವನು ಬೆಳೆಯುತ್ತಾನೆ. ಆದ್ದರಿಂದ ಅವನಿಗೆ ತೊಂದರೆಯಾಗಬಾರದು. ಬಟ್ಟೆ ಬೆಲೆ ಜಾಸ್ತಿ ಎಂದು ನನಗೆ ಕಂಡಿಲ್ಲ. ನ್ಯಾಯವಾದಂಥ ಸೂಚನೆಯನ್ನು ಮಾಡಿದರೆ ಸರ್ಕಾರ ಒಪ್ಪಿಕೊಳ್ಳಬಹುದು. ಒಂದು ಹಂತದಲ್ಲಿ ನಿವಾರಣೆ ಮಾಡಿ ಎಂದು ಹೇಳುವುದರಲ್ಲಿ ಸ್ವಲ್ಪ ಸರಿ ಕಾಣಬಹುದು.

ಪಾನ ನಿರೋಧ ವಿಷಯವನ್ನು ಹೇಳಿದರು. ಅದು ಯಶಸ್ವಿಯಾಗಿದೆ ಎಂದು ನಾವು ಹೇಳುತ್ತೇವೆಯ? ಶ್ರೀ ರಾಮರಾಯರು ಹೇಳುತ್ತಾರೆಯೆ? ನೀವು ಹೇಳುತ್ತೀರಾ? ಯಾರಾದರೂ ಹೇಳುತ್ತಾರೆಯೇ? ಅದು ಯಶಸ್ವಿಯಾಗಿಲ್ಲ. ಆದ್ದರಿಂದ ಏನು ಮಾಡಬೇಕು? ದೇವರು ಬಂದು ನಡೆಸಿದರೂ ಯಶಸ್ವಿಯಾಗಲಿಕ್ಕೆ ಕಷ್ಟವಿದೆ. ಪ್ರಯತ್ನ ಮಾಡುತ್ತಾ ಇದ್ದೇವೆ. It is an experiment. ಕೆಲವು ಕಡೆ ಯಶಸ್ವಿಯಾಗಿದೆ. ನಾವೂ ನೀವೂ ಎಷ್ಟು ಅಪೇಕ್ಷೆ ಮಾಡುತ್ತೇವೆಯೋ ಅಷ್ಟು ಯಶಸ್ವಿಯಾಗಿಲ್ಲ.

ಒಬ್ಬ ಸದಸ್ಯರು.—ಲಾ ಮಿನಿಸ್ಟರು ಯಶಸ್ವಿಯಾಗಿದೆ ಎಂದು ಹೇಳಿದರು.

ಶ್ರೀ ಎಂ. ವಿ. ರಾಮರಾವ್ (ನ್ಯಾಯ ಶಾಖೆಯ ಮಂತ್ರಿಗಳು).—ಯಶಸ್ವಿಯಾಗಿದೆ ಎಂದು ನಾನು ಹೇಳಲಿಲ್ಲ. ಟೋಟಲ್ ಕ್ರೈಮ್ ಸ್ಟಾಟಿಸ್ಟಿಕ್ಸ್ ಕೊಡುತ್ತಾ ಪ್ರೊಹಿಬಿಶನ್ನದೂ ಹೇಳಿದೆ, ಅಷ್ಟೆ.

ಶ್ರೀ ಎಸ್. ನಿಜಲಿಂಗಪ್ಪ.—ಜನ ಕುಡಿದು ಕೆಟ್ಟುಹೋಗುತ್ತಾರೆ, ಪ್ರೊಹಿಬಿಷನ್ನಿನಿಂದ ಒಳ್ಳೆಯದಾಗುತ್ತದೆಂದು ಅದನ್ನು ಮಾಡಿದ್ದೇವೆ. ನಾವು ಎಷ್ಟು ನಿರೀಕ್ಷೆ ಮಾಡಿದ್ದೆವೋ ಅಷ್ಟರ ಮಟ್ಟಿಗೆ ಆಗಿಲ್ಲ, ಒಪ್ಪುತ್ತೇನೆ. ಅದಕ್ಕೆ ಏನು ಮಾಡಬೇಕೆಂದು ಆಲೋಚನೆ ಮಾಡುತ್ತೇವೆ.
ಪಾನ ನಿರೋಧದ ವಿಷಯದಲ್ಲಿ ಅನೇಕ ಅಭಿಪ್ರಾಯಗಳಿವೆ. ಒಂದು ಅಭಿಪ್ರಾಯವಿಲ್ಲ. ನಾವು ಮೈಸೂರು ವಿಷಯದಲ್ಲಿ ಮಾತ್ರ ಒಂದು ರೀತಿ ಮಾಡುವುದಕ್ಕಾಗುವುದಿಲ್ಲ. ಅದನ್ನು ಎಲ್ಲರೂ ಸೇರಿ ಮಾಡತಕ್ಕದ್ದು. ಅದು ಯೋಚನೆ ಮಾಡತಕ್ಕ ವಿಚಾರ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಉತ್ತರ ಪ್ರದೇಶದಲ್ಲಿ ತೆಗೆದುಹಾಕಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ.—ಅಲ್ಲಿ ನಾಲ್ಕು ಜಿಲ್ಲೆಗಳಲ್ಲಿತ್ತು. ಅದನ್ನು ತೆಗೆದುಹಾಕಿ ವಾರಕ್ಕೆ ಒಂದು ದಿನ ಪ್ರಾಹಿಬಿಷನ್ ಎಂದು ಮಾಡಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಇಲ್ಲಿಯೂ ಹಾಗೆಯೇ ಮಾಡಿ.

ಶ್ರೀ ಎಸ್. ನಿಜಲಿಂಗಪ್ಪ.—ಅದು ಸೂಚನೆ.

ಮತ್ತೊಂದೇನೆಂದರೆ ನಮ್ಮ ರಾಜ್ಯಕ್ಕೆ ಹೊಸ ರೈಲ್ವೆಗಳು ಯಾವುದೂ ಬರಲಿಲ್ಲ ಎಂಬುದು. ಅದು ನಮ್ಮ ಕೈಯಲ್ಲಿದ್ದರೆ ಮಾಡುತ್ತಿದ್ದೆವು. ಆಹಾರ ಧಾನ್ಯಗಳ ಹತೋಟಿ, ಧಾರಣೆವಾಸಿಗಳ ಹತೋಟಿ, ಇವುಗಳನ್ನೆಲ್ಲ ಮಾಡುವವರು ಯಾರು ! ನಮ್ಮ ರಾಜ್ಯದಲ್ಲಿ ರೈಲ್ವೆಗಳಾಗಬೇಕೆಂದು 40 ವರ್ಷಗಳಿಂದಲೂ ಪ್ರಯತ್ನ ಮಾಡುತ್ತಿದ್ದೇವೆ. ಸರ್ ಎಂ. ವಿಶ್ವೇಶ್ವರಯ್ಯನವರು ಭಟ್ಕಲ್ ಬಳಿ ಹಡಗು ಕಟ್ಟುತ್ತೇವೆ, ಅಲ್ಲಿಯವರೆಗೂ ರೈಲ್ವೆ ಮಾರ್ಗವನ್ನು ವಿಸ್ತರಿಸಬೇಕು, ಎಂದು ಪ್ರಯತ್ನ ಮಾಡಿದರು. ಆಗಲಿಲ್ಲ. ಆಗಿನ ಕಾಲದಿಂದಲೂ ಈ ವಿಚಾರವಿದೆ. ಒಂದು ಸಂತೋಷವೆಂದರೆ, ನಮ್ಮ ಕಾಲದಲ್ಲಿ ತೀರ್ಮಾನವಾಗಿ ಎಲ್ಲ ಅಳತೆಗಳಾಗುತ್ತಿವೆ. ಇಂಥಿಂಥ ಕಡೆ ರೈಲು ಮಾರ್ಗವನ್ನು ಹಾಕಬೇಕೆಂದು ಜಮೀನು ಅಕ್ವೈರ್ ಮಾಡುವುದಕ್ಕೆ ಪ್ರೊಸೀಡಿಂಗ್ಸ್ ಕೆಲಸ ನಡೆಯುತ್ತಿದೆ. ಇದಕ್ಕೆ ಸಂತೋಷಪಡಬೇಕೋ ಅಥವಾ ಬಯ್ಯಬೇಕೋ ಅದನ್ನು ನಿಮಗೇ ಬಿಡುತ್ತೇನೆ. ಬೆಂಗಳೂರು–ಸೇಲಂ ಲೈನ್ ಆಗುತ್ತಿದೆ. ಹಾಗೆಯೇ ಹಾಸನ–ಮಂಗಳೂರು ಲೈನೂ ಆಗುತ್ತದೆ. ಬಾಕಿ ಮಾರ್ಗಗಳೂ ಆಗುತ್ತವೆ.

ಭೂಸುಧಾರಣೆಯ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ.

ಮಂತ್ರಿಮಂಡಲದ ಗಾತ್ರದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಜವಾಬು ಕೊಡುವುದಕ್ಕೆ ಹೋಗುವುದಿಲ್ಲ. ಆ ಬಗ್ಗೆ ನಾನು ಹೇಳಿದ್ದೇನೆ. ಮೊದಲನೆ ಸಲ ಕೇಳುವುದಕ್ಕೆ ಚೆನ್ನಾಗಿರುತ್ತದೆ. ಹೇಳಿದ್ದನ್ನೇ ಹೇಳುವುದು ಚೆನ್ನಾಗಿರುವುದಿಲ್ಲ. 'ದುಗ್ಗಾಣಿ ಕೊಡುತ್ತೇನೆ ಹಾಡೋ ದಾಸಯ್ಯ, ದುಡ್ಡು ಕೊಡುತ್ತೇನೆ ಬಿಡೋ ದಾಸಯ್ಯ' ಎಂದು ಹೇಳುವ ಹಾಗೆ ಆಗುತ್ತದೆ. ಹೀಗಾಗಬಾರದು. ಹೇಳುವುದನ್ನು ಹೇಳಿದ್ದಾಯಿತು, ಪುನಃ ಕೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಶರಾವತಿ ವಿಷಯದಲ್ಲಿ ಅನೇಕ ತರಹ ದೂರುಗಳು ಬರುತ್ತವೆ. ಇದಕ್ಕೆ ಸಂಬಂಧಪಟ್ಟ ಫೈಲುಗಳು ಕೆಲವು ದಿನಗಳ ಹಿಂದೆ ನನಗೆ ಸಿಕ್ಕಿವೆ. ಇದನ್ನು ಪರಿಶೀಲಿಸುವುದು ಅಷ್ಟು ಸುಲಭವಲ್ಲ. ಆರೇಳು ವರ್ಷಗಳ ರಿಕಾರ್ಡು ಇದೆ. ಅನೇಕ ಕಂಟ್ರಾಕ್ಟ್ ಫಾರಂಗಳಿವೆ, ಅನೇಕ ಸರ್ಕಾರಿ ಆರ್ಡರುಗಳಿವೆ, ಮಂತ್ರಿಮಂಡಲದ ತೀರ್ಮಾನಗಳಿವೆ. ಈ ಕೆಲಸಕ್ಕೆ ಸಂಬಂಧಪಟ್ಟಂತೆ ಇಂಜಿನಿಯರುಗಳಿದ್ದಾರೆ, ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ ಇದೆ. ಕೆಲಸದ ಡಿಸೈನುಗಳನ್ನು ಆಗಾಗ್ಗೆ ಬದಲಾಯಿಸುತ್ತಿರುತ್ತಾರೆ. ಮೊದಲು ಕಲ್ಲಿನ ಕಟ್ಟಡ ಎಂದು ಇದ್ದುದನ್ನು ಮಣ್ಣಿನ ಕಟ್ಟೆ ಸಾಕು ಎಂದು ಹೇಳಿದರು, ಈ ಕಷ್ಟ ಬಂದಿದೆ. ಇದರಿಂದ ಅನೇಕ ವಿಚಾರಗಳು ಬದಲಾಗುತ್ತವೆ. ಮಣ್ಣಿನ ಕಟ್ಟೆಯನ್ನು ಹಾಕುವಾಗ upstream rockfill ನಂತೆಯೇ downstream rockfill ಮಾಡಬೇಕು ಎಂದು ಹೇಳಿದರು. ಪಕ್ಕದಲ್ಲಿರತಕ್ಕ ಗುಡ್ಡವನ್ನು ಹಾಗೆಯೇ ಬಿಟ್ಟರೆ ಅದರಿಂದ ಮುಂದೆ ತೊಂದರೆಯಾಗಬಹುದು ಎಂದು ಗುಡ್ಡಕ್ಕೆ ಕಲ್ಲು ಹೊದಿಸಬೇಕು ಎಂದು ಹೇಳುತ್ತಾರೆ. ಏಕೆಂದರೆ ಅಪಾರವಾದ ನೀರು ನಿಲ್ಲತಕ್ಕ ಸಂದರ್ಭದಲ್ಲಿ ಎಲ್ಲಿಯಾದರೂ, ಎಳ್ಳಷ್ಟಾದರೂ ಅದು ಸರಿಯಿಲ್ಲದೆ ಹೋದರೆ, ನೀರು ಲೀಕ್ ಆದರೆ ಜನಗಳ ಗತಿ ಏನು, ಎಷ್ಟು ನಷ್ಟವಾಗುತ್ತದೆ, 100 ಕೋಟಿ ರೂಪಾಯಿಗಳು. ನೀವು ಹೇಳತಕ್ಕದ್ದು ಅಲ್ಲಿ ಬಹಳ ದುರುಪಯೋಗ ಮಾಡಿದ್ದಾರೆ ಎಂದು. ಎಲ್ಲ ಲೆಕ್ಕ ಹಾಕಿದರೂ ಕೂಡ 40 ಲಕ್ಷ ಆದೀತು, ಪ್ರಾಯಶಃ 50 ಲಕ್ಷ ಎಂದು ಇಟ್ಟುಕೊಳ್ಳಬಹುದು. ಇದನ್ನು ನಾನು ನೋಡುತ್ತಿದ್ದೇವೆ. ನೀವುಗಳು ಹೇಳಿಬಿಟ್ಟ ಕೂಡಲೇ ಎಲ್ಲ

(ಶ್ರೀ ಎಸ್. ನಿಜಲಿಂಗಪ್ಪ) -

ಆಗುವುದಿಲ್ಲ. ಎತ್ತು ಈಯಿತು ಎಂದರೆ ಕೊಟ್ಟಿಗೆಗೆ ಕಟ್ಟುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರೂ ಅವರೇ ಇದನ್ನು ಖುದ್ದು ನೋಡುವುದಿಲ್ಲ. ಹೇಳಿಕೊಟ್ಟ ಮಾತು, ಕಟ್ಟಿಕೊಟ್ಟ ಬುತ್ತಿ ಎನ್ನುವಂತೆ ಯಾರೋ ಹೇಳುತ್ತಾರೆ ಎಂದು ಇಲ್ಲಿ ಬಂದು ಕೇಳುತ್ತಾರೆ. ಯಾರಾದರೂ ಬಂದು ನನ್ನ ಹತ್ತಿರ ಕೇಳಿದರೆ ನಾನು ಹೇಳುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ಎಲ್ಲ ಸಂದರ್ಭಗಳಲ್ಲಿಯೂ ಮಂತ್ರಿಮಂಡಲದ ತೀರ್ಮಾನಗಳಿವೆ, ಬೋರ್ಡಿನ ತೀರ್ಮಾನಗಳಿವೆ, ಕೇಂದ್ರ ಸರ್ಕಾರದಿಂದಲೂ ಹೀಗೆಯೇ ಮಾಡಬೇಕು ಎಂದು ತಿಳಿಸುತ್ತಾರೆ. ಆದುದರಿಂದ ಕೆಲವು ಸಂಬಂಧದಲ್ಲಿ ಕೊಡತಕ್ಕ ರೇಟುಗಳನ್ನು ಜಾಸ್ತಿ ಮಾಡಬೇಕಾದರೆ ಸರ್ಕಾರದ ನ್ಯಾಯ ಶಾಖೆಯನ್ನು ಮತ್ತು ಅಡ್ವೊಕೇಟ್ ಜನರಲ್ ಅವರನ್ನೂ ಕೇಳಿ ತೀರ್ಮಾನ ಮಾಡಿದ್ದೇವೆ. ಕ್ಷುಲ್ಲಕ ಆರೋಪಣೆಗಳನ್ನು ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ನಾನು ಶರಾವತಿಗೆ ಸಂಬಂಧಪಟ್ಟ ಫೈಲುಗಳನ್ನೆಲ್ಲ ನೋಡುತ್ತಿದ್ದೇನೆ. ಹಾಕಿರುವ ರೇಟುಗಳನ್ನು ಬದಲಾವಣೆ ಮಾಡುವುದಕ್ಕೆ ಬರುವುದಿಲ್ಲ, ಕೊಟ್ಟ ದುಡ್ಡಿಗೆ ಲೆಕ್ಕವಿದೆ, ಎಷ್ಟೆಷ್ಟು ದುಡ್ಡು ಕೊಟ್ಟಿದ್ದೇವೆ, ಯಾವ ಯಾವ ರೇಟುಗಳಲ್ಲಿ ಕೊಟ್ಟಿದ್ದೇವೆ, ಯಾವ ಕಂಟ್ರಾಕ್ಟರಿಗೆ ಕೊಟ್ಟಿದ್ದೇವೆ, ಯಾವ ತಾರೀಖು, ಯಾವ ಕಾಲ ಎಲ್ಲ ಇದೆ. ಇದನ್ನೆಲ್ಲ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಆಗಿರತಕ್ಕ ಮಂತ್ರಿಮಂಡಲದ ತೀರ್ಮಾನಗಳಿವೆ, ಇತರ ತೀರ್ಮಾನಗಳೂ ಇವೆ. ಅವುಗಳನ್ನೆಲ್ಲ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಅನ್ಯಾಯವೇನಾದರೂ ನಡೆದಿದೆಯೇ, ಅಲ್ಲೋಲ ಕಲ್ಲೋಲ ನಡೆದಿದೆಯೇ, illegality ಇದೆಯೇ, irregularity ಇದೆಯೇ ಎಂದು ಯೋಚನೆ ಮಾಡಬೇಕು. ಆದುದರಿಂದ ನಾನು ಮೊನ್ನೆಯ ದಿನ ಹೇಳಿದೆ ಸುಮಾರು 8-10 ದಿವಸಗಳಾಯಿತು ರಿಕಾರ್ಡುಗಳೆಲ್ಲ ಬಂದು. ರಿಕಾರ್ಡುಗಳು ಇನ್ನೂ ಬಂದಿಲ್ಲ ಎಂದರೆ ಅದನ್ನೇ ಕೆಲವರು ದೊಡ್ಡದು ಮಾಡಿದರು. ಕೆಲವು ರಿಕಾರ್ಡುಗಳು ಲಾಯರ ಕಡೆಗೆ ಇದ್ದುವು, ಕೆಲವನ್ನು ಕೋರ್ಟಿಗೆ ಕಳಿಸಿದ್ದೆವು, ಕೆಲವು ನಮ್ಮಲ್ಲಿಯೇ ಇದ್ದುವು. ಹೀಗಾಗಿ ಎಲ್ಲ ರಿಕಾರ್ಡುಗಳೂ ಬರಬೇಕಾದರೆ ಸ್ವಲ್ಪ ತಡವಾಯಿತು, ನಿಜ. ಸ್ವಲ್ಪ ತಡವಾದ್ದಕ್ಕೆ ಏನೋ ಆಗಿದೆ, ಎಂದು ಹೇಳಿದರು. ನಾನೇ ವೈಯುಕ್ತಿಕವಾಗಿ ಫೈಲುಗಳನ್ನೆಲ್ಲ ನೋಡುತ್ತಿದ್ದೇನೆ. ಅನ್ಯಾಯವಾಗುತ್ತದೆ ಎಂದು ಅನುಮಾನವಾಗ ಬೇಕಾಗಿಲ್ಲ. ಅವಸರವೇಕೆ ? ಎಲ್ಲ ವಿಷಯಗಳನ್ನೂ ಸಭೆಯ ಮುಂದೆ ಇಡುತ್ತೇನೆ. ಒಬ್ಬ ಜುಡಿಷಿಯಲ್ ಆಫೀಸರನ್ನು ನೇಮಕ ಮಾಡಬೇಕಾದ ಸಂದರ್ಭವಿದ್ದರೆ ನೇಮಕ ಮಾಡುತ್ತೇನೆ. ನಿಮ್ಮ ಮುಂದೆ ತರಬೇಕು ಎಂದರೆ ತರುತ್ತೇನೆ. ಎರಡರಲ್ಲಿ ಯಾವುದಾದರೂ ಒಂದು ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಅಲ್ಲಿ ಏನೂ ನಡೆದಿಲ್ಲದೆ ಇರಬಹುದು ಅನ್ಯಾಯ ನಡೆಯದೆ ಇದ್ದರೂ ಗುಲ್ಲು ಎಬ್ಬಿಸಿರಬಹುದು. ಎಲ್ಲಿ ನೋಡಿದರೂ ಗುಲ್ಲು, ಬರೀ ಗುಲ್ಲ, ಅನಾವಶ್ಯಕವಾಗಿ ಎದ್ದಿದೆ.

ಅಮೆರಿಕಕ್ಕೆ ಯಾರೋ ಇಂಥ ಸಮಾಚಾರವನ್ನು ಕಳಿಸಿದ್ದರು ಎಂದು ಕಾಣುತ್ತದೆ: ಒಳ್ಳೆಯದು. ಅಮೆರಿಕದಿಂದ ಬಂದು ನೋಡಿಕೊಂಡು ಇಲ್ಲಿ ಏನೂ ನಡೆದಿಲ್ಲ ಎಂದು ಹೋಗಿದ್ದಾರೆ. ಕೇಂದ್ರ ಸರ್ಕಾರದವರೂ ಸಹ ನೋಡಿ ಅಲ್ಲಿ ಏನೂ ನಡೆದಿಲ್ಲ ಎಂದು ಬರೆದಿದ್ದಾರೆ. ಆದರೂ ಜನಗಳಲ್ಲಿ ಒಂದು ಅಭಿಪ್ರಾಯ ಬಂದಿದೆಯಲ್ಲ, ಅದನ್ನು ನಿವಾರಣೆ ಮಾಡತಕ್ಕದ್ದು ನ್ಯಾಯವೆಂದು ನಾನು ತಿಳಿದಿದ್ದೇನೆ. ಏನೇನು ವಿಷಯಗಳು ಬೇಕೋ ಅದೆಲ್ಲ ನನ್ನ ಹತ್ತಿರ ಬಂದಿದೆ. ಅದನ್ನು ನಾನು ಯೋಚನೆ ಮಾಡುತ್ತೇನೆ.

ಸಾರಿಗೆ ರಾಷ್ಟ್ರೀಕರಣದ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಬಹುಶಃ ಈಗ ಹಾಗೆಯೇ ಮುಂದುವರಿಯುವುದು ಎಂದು ಕಾಣುತ್ತದೆ.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಮಂತ್ರಿಗಳನ್ನು ತೆಗೆಯುವುದು ಏನಾಗಿದೆ !

ಶ್ರೀ ಎಸ್. ನಿಜಲಿಂಗಪ್ಪ.—ಮಂತ್ರಿಗಳನ್ನು ತೆಗೆಯುವುದಿಲ್ಲ. ನೀವು ಏಕೆ ಶ್ರಮ ಪಟ್ಟುಕೊಳ್ಳುತ್ತೀರಿ !

ಮಾನ್ಯ ಸದಸ್ಯರು ಮಾತನಾಡುವಾಗ ಅವರು ಹೇಳುವುದರಲ್ಲಿ ಎಷ್ಟು ಉತ್ಪ್ರೇಕ್ಷೆ ಇಷ್ಟಿದೆ ಎನ್ನುವುದನ್ನು ಹೇಳುತ್ತೇನೆ. ಮಾನ್ಯ ಚನ್ನಬೈರೇ ಗೌಡರು ಮಾತನಾಡುವಾಗ ವರ್ಗಾವರ್ಗಿಗಳನ್ನು ಮಾಡುವುದರಿಂದ 3 ಕೋಟಿ ರೂಪಾಯಿ ಖರ್ಚಾಗಿಬಿಡುತ್ತದೆ ಎಂದು ಹೇಳಿದರು ನಾನು ವಿಚಾರಿಸಿದೆ. ಇದಕ್ಕಾಗಿ ಸರಾಸರಿ 11 ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗುತ್ತವೆ. ಮೂರು ಕೋಟಿಯಲ್ಲ. ಕೆಲವರಿಗೆ ಫಿಕ್ಸಡ್ ಟಿ. ಎ. ಕೊಡುತ್ತೇವೆ. ಅದನ್ನು ಬದಲಾವಣೆ ಮಾಡುವ ಹಾಗೆ ಇಲ್ಲ. ವರ್ಗಾವರ್ಗಿಯಿಂದ ಖರ್ಚಾಗತಕ್ಕದ್ದು 11 ಲಕ್ಷ ರೂಪಾಯಿ ಮಾತ್ರ. ಇದನ್ನು ಮೂರು ಕೋಟಿಗೆ ಏರಿಸಿದರು, ಅವರು ಹೇಳಿರುವ ಪ್ರಕಾರ ಅದು ಶೇಕಡ 2,700 ರಷ್ಟು ಆಯಿತು. ಸರ್ಕಾರ ಖರ್ಚು ಮಾಡುವುದು 3 ಕೋಟಿ ಅಲ್ಲ. ಅದು 11 ಲಕ್ಷ ಇದೆ. ಆದ್ದರಿಂದ ಬರಿ ಉತ್ಪ್ರೇಕ್ಷೆ ಮಾಡುವುದು ಬೇಡ. ಕಳೆದ ಮಹಾ ಚುನಾವಣೆಯಲ್ಲಿ ಮಾಜಿ ಮಂತ್ರಿಯೊಬ್ಬರನ್ನು ಸೋಲಿಸುವುದಕ್ಕೆ

ನಾನು ಪ್ರಯತ್ನ ಮಾಡಿದೆನು ಎಂದು ಆರೋಪ ಮಾಡಿದ್ದನ್ನು ಕೇಳಿ ನನಗೆ ಬಹಳ ವಿಷಾದವಾಯಿತು. ವಿಷಯ ಸರಿಯಾಗಿ ತಿಳಿದುಕೊಂಡು ಮಾತನಾಡಿದ್ದರೆ ಚೆನ್ನಾಗಿತ್ತು. ನಾನು ಸಾಕಷ್ಟು ವರ್ಷ ಗಳಿಂದ ಕಾಂಗ್ರೆಸ್ಸಿನಲ್ಲಿ ಇದ್ದೇನೆ. ಕಾಂಗ್ರೆಸ್ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಆ ರೀತಿ ನಾನು ಮಾಡಿದ್ದರೆ ನಾನು ಇಲ್ಲಿರಲು ಲಾಯಕ್ಕಲ್ಲ. ಇಂಥ ಅನ್ಯಾಯದ ಕಾರ್ಯ ಮಾಡಿದರೆ ನಮ್ಮ ವಂಶ ಉಳಿಯುವುದಿಲ್ಲ.

3-30 P.M.

ಆ ಮೇಲೆ ವಿದ್ಯಾಧರ ಗುರೂಜಿ ಅವರು ಬಹಳ ಆವೇಶ ಪೂರಿತವಾಗಿ ಮಾತನಾಡಿದರು. ಮೊನ್ನೆ ಮೊನ್ನೆಯ ವರೆಗೆ ಅವರು ಕಾಂಗ್ರೆಸ್ಸಿನಲ್ಲಿಯೇ ಇದ್ದವರು. ಇಲೆಕ್ಷನ್ ಬಂದಾಗ್ಗೆ ಅವರು ಬೇರೆಯಾದರು. ಇಲೆಕ್ಷನ್‌ನಲ್ಲಿ ಕಾಂಗ್ರೆಸ್ ಟಿಕೆಟ್ಟಿಗಾಗಿ ಅರ್ಜಿ ಕೊಟ್ಟು ಅವರಿಗೆ ಸ್ಥಳ ಸಿಕ್ಕದೇ ಹೋದದ್ದರಿಂದ ಈಗ ಕಾಂಗ್ರೆಸ್ಸಿಗೆ ಬಯ್ಯುತ್ತಿದ್ದಾರೆ. ಸೀಟ್ ಸಿಕ್ಕಿದ್ದರೆ ಹೊಗಳುವವರೂ ಇದ್ದಾರೆ. ಈಗ ಆ ಕಡೆ ಹೋಗಿ ತೆಗಳುತ್ತಾರೆ. ಅದು ಹೇಗೇ ಇರಲಿ. ಶ್ರೀಮಾನ್ ಐಕಳ ಅವರಂತೂ ಮಾತನಾಡುತ್ತಾ ಗಗನಕ್ಕೇ ಹಾರಿಬಿಟ್ಟರು. ಅವರ ಮಾತಿನಲ್ಲಿ ಅಷ್ಟು ಬಿಸಿ ಇದ್ದಿತು. ಅವರ ಹತ್ತಿರ ಬಂದು ಪಾತ್ರೆ ಇಟ್ಟಿದ್ದರೆ ಅದೂ ಕೂಡ ಬಿಸಿ ಆಗುತ್ತಿತ್ತು. ಅವರ ಉತ್ಸಾಹವನ್ನು ಮಾತ್ರ ನಾನು ಮೆಚ್ಚುತ್ತೇನೆ. ಆದರೆ ಅವರು ಹೇಳಿದ್ದನ್ನು ಮೆಚ್ಚುವುದಿಲ್ಲ.

ಕೊನೆಯದಾಗಿ ಹೇಳುವುದಾದರೆ ಶ್ರೀಮಾನ್ ಸುಂಠಣಕರ ಅವರು ಮಾತನಾಡುವುದರಲ್ಲಿ ಬಹಳ ಬುದ್ಧಿವಂತಿಕೆ ಚಾಣಾಕ್ಷತೆ ಉಪಯೋಗಿಸಿದ್ದಾರೆ. ಕಾಸರಗೋಡು ಮೈಸೂರು ರಾಜ್ಯಕ್ಕೆ ಬರಲಿಲ್ಲ ಹಾಗೆ ಇವೆ, ಹೀಗೆ ಇದೆ ಎಂದು ಹೇಳುತ್ತಾ ಅವರ ಮನಸ್ಸಿನಲ್ಲಿ ಇದ್ದುದನ್ನು ಕಡೆಗೆ ಹೇಳಿದ್ದಾರೆ. ಕಾಸರಗೋಡ ಬಗ್ಗೆ ಹೇಳುತ್ತಾ ನಮ್ಮಲ್ಲಿ ಭೇದಭಾವನೆ ಉಂಟುಮಾಡಲು ಪ್ರಯತ್ನ ಪಟ್ಟರು. ಮಹಾರಾಷ್ಟ್ರದವರು ನಮ್ಮ ರಾಜ್ಯದಲ್ಲಿಯೂ ಇದ್ದಾರೆ, ಕನ್ನಡಿಗರು ಅವರ ಮಹಾರಾಷ್ಟ್ರರಾಜ್ಯದಲ್ಲಿ ಯೂ ಇದ್ದಾರೆ. ಎಲ್ಲ ಕನ್ನಡ ಜನ ಇಲ್ಲಿಗೆ ಬರಬೇಕು ಎಂದು ನನ್ನ ಇಷ್ಟ. ಈ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಅದನ್ನು ಮಾಡುವುದು ಬೇಡ ಎಂದು ನಿಲ್ಲಿಸಿದ್ದೇವೆ. ಒಂದು ಮಾತನ್ನು ಮಹಾ ರಾಷ್ಟ್ರ ಸ್ನೇಹಿತರಿಗೆ ಹೇಳುತ್ತೇನೆ. ಕುಳಿತುಕೊಂಡು ಚರ್ಚೆ ಮಾಡಿ ವಿವಾದ ಇತ್ಯರ್ಥ ಮಾಡೋಣ ಎಂದು ನಾನು ಆರು ವರ್ಷಗಳ ಹಿಂದೆ ಅವರಿಗೆ ಕಾಗದ ಬರೆದಿದ್ದೇನೆ. ಕಾರವಾರ ಜಿಲ್ಲೆ ಕೇಳುವು ದಕ್ಕೆ ಹೋಗಬೇಡಿ. ಕಾರವಾರದಲ್ಲಿ ಲೈಟ್ ಹೌಸಿನಲ್ಲಿರುವ 7 ಮನೆಗಳಲ್ಲಿ ಅಷ್ಟೇ ಮರಾಠಿ ಮಾತ ನಾಡುವವರ ಮೆಜಾರಿಟಿ ಇದೆ. ಆದರೆ ತಾಲ್ಲೂಕಿನಲ್ಲಿ ಅವರ ಮೆಜಾರಿಟಿ ಇಲ್ಲ. ಇದಕ್ಕೆ ಅಂಕಿ ಅಂಶಗಳ ಆಧಾರ ಇದೆ. ಕೊಂಕಣಿ ಮಾತನಾಡುವವರು ನಮ್ಮವರು ಎಂದು ಮರಾಠಿಗರು ಹೇಳುತ್ತಾರೆ. ಇದು ಆಗದ ಮಾತು. ಕೊಂಕಣಿಗಳು ಮಹಾರಾಷ್ಟ್ರೀಯರಲ್ಲ. ಮೈಸೂರು ಮಹಾರಾಷ್ಟ್ರ ಗಡಿ ಪ್ರಶ್ನೆಯನ್ನು ಜನಸಂಖ್ಯೆಯ ಆಧಾರದ ಮೇಲೆ ಯಾವದಾದರೂ ಒಂದು ತೀರ್ಮಾನಕ್ಕೆ ಬರೋಣ. ಈ ಪ್ರಶ್ನೆ ಇಂದಲ್ಲ ನಾಳೆ ತೀರ್ಮಾನವಾಗಬೇಕಾದ ಪ್ರಶ್ನೆ. ಹೊರಗಡೆ ಹೋಗಬೇಕು ಎನ್ನುವವರಿಗೆ ಇಲ್ಲಿ ಇರಲು ಇಷ್ಟವಿಲ್ಲ. ಹೊರಗಡೆ ಉಳಿದಿರುವ ಕನ್ನಡಿಗರಿಗೆ ಇಲ್ಲಿ ಬರಲು ಇಷ್ಟವಿದೆ. ಇಂಥ ಪರಿಸ್ಥಿತಿ ಬಂದಿದೆ. ಯಾವ ಸಂದರ್ಭದಲ್ಲಾದರೂ ಇದು ತೀರ್ಮಾನವಾಗಬೇಕು. ಒಂದು ತೀರ್ಮಾನ ಮಾಡೋಣ. ಕರ್ನಾಟಕದವರು ಹೊರಗೆ ಉಳಿಯಬೇಕು ಎಂದು ನನ್ನ ಇಷ್ಟವೇ ಎಂದಿಗೂ ಇಲ್ಲ. ಅವರು ಇನ್ನೊಂದು ಮಾತನ್ನು ಹೇಳಿದರು. ಮೈಸೂರು ರಾಜ್ಯದಲ್ಲಿ ಇತರತಕ್ಕಂಥ ಅಲ್ಪ ಸಂಖ್ಯಾಕರಿಗೆ ಬಹಳ ತೊಂದರೆಯಾಗುತ್ತಿದೆ ಎಂದು ಹೇಳಿದರು. ನಾನು ಇದರ ಬಗ್ಗೆ ವಿವರ ವಾಗಿ ಲೆಕ್ಕ ಕೊಡುವುದಕ್ಕೆ ಹೋಗುವುದಿಲ್ಲ. ಇದನ್ನು ಎಲ್ಲರೂ ಯೋಚನೆ ಮಾಡಿ ನೋಡಬಹುದು. 1956 ರಲ್ಲಿ ಎಷ್ಟು ಮರಾಠಿ ಸ್ಕೂಲುಗಳು ಇದ್ದುವು. ಈಗ ನಾವು ಎಷ್ಟು ಮಾಡಿದ್ದೇವೆ. ಮರಾಠಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಇದ್ದಿತು ಈಗ ಎಷ್ಟಿದೆ ವಿದ್ಯಾಭ್ಯಾಸಕ್ಕಾಗಿ ಎಷ್ಟು ಹಣ ಖರ್ಚು ಮಾಡುತ್ತಿದ್ದೇವೆ ಎನ್ನುವುದನ್ನು ಲೆಕ್ಕ ಹಾಕಿ ನೋಡಬಹುದು. ಶೇಕಡ 25 ರಷ್ಟು ಇದ್ದುದು ಈಗ 50 ರಷ್ಟು ಜಾಸ್ತಿಯಾಗಿದೆ. ನಮ್ಮವರಿಂದ ಏನೂ ಅನ್ಯಾಯವಾಗಿಲ್ಲ ಎಂದು ನಾನು ತಿಳಿದುಕೊಂಡಿ ದ್ದೇನೆ. ತೆಲಗರಿಗೆ, ತಮಿಳು ಅಲ್ಪ ಸಂಖ್ಯಾಕರಿಗೆ ಏನೂ ಮಾಡಿಲ್ಲ ಎಂದು ಹೇಳುವುದು ಸರಿಯಲ್ಲ. ಯಾವ ಅಲ್ಪ ಸಂಖ್ಯಾಕರಿಗೂ ಭಾಷಾ ದೃಷ್ಟಿಯಿಂದ ಯಾವ ಅನ್ಯಾಯವಾಗಿಲ್ಲ. ಬೇರೆ ಬೇರೆ ರಾಜ್ಯದಲ್ಲಿ ನಮ್ಮವರಿಗೆ ಏನು ಮಾಡಿದ್ದಾರೆ, ಇಲ್ಲಿ ನಾವು ಅವರಿಗೆ ಏನು ಮಾಡಿದ್ದೇವೆ ಎಂಬುದನ್ನು ನೋಡಬೇಕು.

ಕೊನೆಯದಾಗಿ ಶ್ರೀ ರೇವಣ್ಣಸಿದ್ದಪ್ಪನವರು ಬಹಳ ಸ್ವಾರಸ್ಯವಾಗಿ ಮಾತನಾಡಿದರು. ಅವರು ಮಾತನಾಡುವುದರಲ್ಲಿ ಒರಟುತನ ಬಿಟ್ಟಿದ್ದರೆ ಚೆನ್ನಾಗಿತ್ತು. ಅವರು ಹಾಗೆಯೇ ಇರಲಿ. ಅವರು ಒಂದು ಮಾತನ್ನು ಹೇಳಿದರು. ದೇಶದಲ್ಲಿ ಇಂಡಸ್ಟ್ರೀಸ್ ಜಾಸ್ತಿಯಾಗಿಲ್ಲ ಎಂದು ಹೇಳಿದರು. ಯಾವ ಇಂಡಸ್ಟ್ರೀ ಹಾಕಿ ಎಂದು ಅವರು ಹೇಳುತ್ತಾರೆ? ಪರಿಸ್ಥಿತಿ ಹೇಗಿದೆ ನೋಡಬೇಕು. ಎಲ್ಲವೂ ತುದಿಯವರೆಗೆ ಬಂದಿವೆ. ಅಲ್ಯೂಮಿನಂ ಫ್ಯಾಕ್ಟರಿ ಬರಲಿವೆ. ರಾಸಾಯನಿಕ ಗೊಬ್ಬರ ಕಾರ್ಖಾನೆ

(ಶ್ರೀ ಎಸ್. ನಿಜಲಿಂಗಪ್ಪ)

ಮಾಡುವುದರಲ್ಲಿ ಇದ್ದೇವೆ. ಮಂಗಳೂರಿನಲ್ಲಿ ಈ ಕಾರ್ಖಾನೆ ಪ್ರಾರಂಭವಾಗಬೇಕೆಂಬ ಸಲಹೆ ಇದೆ. ಅದು ಬರುತ್ತದೆ. ಇನ್ನೂ ಹೊಸದಾಗಿ ಯಾವ ಯಾವ ಕೈಗಾರಿಕೆ ಪ್ರಾರಂಭಿಸಬೇಕು? ಒಂದು ವೇಳೆ ಹೊಸ ಕೈಗಾರಿಕೆ ಪ್ರಾರಂಭ ಮಾಡಿದರೂ ಈಗಾಗಲೇ 7–8 ಲಕ್ಷ ಕಿಲೋ ವ್ಯಾಟ್ ಎಲೆಕ್ಟ್ರಿಸಿಟಿ ಡಿಮ್ಯಾಂಡ್ ಇದೆ. ಈಗ ಅಷ್ಟು ವಿದ್ಯುತ್ ಶಕ್ತಿ ಪೂರೈಸಲು ಸಾಧ್ಯವಿದೆಯೇ? ಮುಂದಿನ ವರ್ಷ ಶರಾವತಿಯಿಂದ ವಿದ್ಯುತ್‌ಚ್ಛಕ್ತಿ ಬರುತ್ತದೆ. ಅದು ಬಂದ ವಾರವೇ ದಿನವೇ ಇದಕ್ಕೆ ತಳಹದಿ ಹಾಕೋಣ. ಈ ಬಗ್ಗೆ ನಾವು ನಿರ್ಲಕ್ಷ್ಯ ಮಾಡಿಲ್ಲ. ಎಲೆಕ್ಟ್ರಿಸಿಟಿ ಅಭಾವದಿಂದ ಕೆಲಸ ನಿಂತಿದೆ.

ಬಾಕಿ ಎಲ್ಲಾ ವಿಷಯಗಳನ್ನು ಬೇರೆ ಮಂತ್ರಿಗಳು ಮಾತನಾಡಿ ಹೇಳಿದ್ದಾರೆ. ಇದು ಬಜೆಟ್ ಸೆಷನ್‌ನಲ್ಲಿ ನಡೆಯುವ ಜನರಲ್ ಡಿಸ್ಕಷನ್ ಅಲ್ಲ. ಆದರೆ ಈ ಚರ್ಚೆ ಜನರಲ್ ಡಿಸ್ಕಷನ್ ಹಾಗೆ ಆಯಿತು. ಅಲ್ಲೊಬ್ಬ ಆರ್. ಟಿ. ಒ. ಚೆನ್ನಾಗಿಲ್ಲ, ಇಲ್ಲೊಬ್ಬ ಅಧಿಕಾರಿ ಚೆನ್ನಾಗಿಲ್ಲ ನಮಗೆ ಅನ್ಯಾಯವಾಗಿದೆ ಹಾಗೆ ಆಗಿದೆ ಹೀಗೆ ಆಗಿದೆ ಎಂದು ಹೇಳಿದರು. ಹುಳುಕ ಮರ ಇದ್ದರೆ ಅದೇನೂ ಅಂಥ ಕಾಡು ಅಲ್ಲ. ಬಜೆಟ್ ಕಾಲದಲ್ಲಿ ಆಗತಕ್ಕಂಥ ಚರ್ಚೆ ಇದು ಅಲ್ಲ. ಈ ಅವಿಶ್ವಾಸ ನಿರ್ಣಯ ತಂದಿರುವುದು ನಿಮಗೆ ಗೌರವ ಅಲ್ಲ. ಯಾರಿಗೂ ಗೌರವ ಇಲ್ಲ ಎಂಬುದನ್ನು ಎಲ್ಲರೂ ಒಪ್ಪತಕ್ಕಂಥ ಮಾತು. ಒಟ್ಟಿನಲ್ಲಿ ಈ ನಿರ್ಣಯ ತಿರಸ್ಕೃತವಾಗಬೇಕು ಎಂದು ನಾನು ಹೇಳುತ್ತೇನೆ.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಗಳವರೇ, ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ನಿರ್ಣಯ ಏಕಪ್ರಕಾರವಾಗಿ 15 ಗಂಟೆ ಕಾಲ ದೀರ್ಘ ಚರ್ಚೆಗೆ ಒಳಪಟ್ಟಿದ್ದೆ. ಚರ್ಚೆಯ ಅವಧಿಯಲ್ಲಿ ವಿರೋಧ ಪಕ್ಷದ ಅನೇಕ ಮಾನ್ಯ ಸದಸ್ಯರು ಬಹಿರಂಗವಾಗಿ ನನ್ನ ನಿರ್ಣಯಕ್ಕೆ ಅನುಮೋದನೆ ಇತ್ತಿದ್ದಾರೆ. ಅನೇಕ ಆಡಳಿತ ಪಕ್ಷದ ಸದಸ್ಯರು ಮಾತಿನಲ್ಲಿ ವಿರೋಧ ಮಾಡುತ್ತೇವೆಂದು ಹೇಳಿದರೂ ಕೂಡ ಅವರ ವಾದ ಸರಣಿ ಅನುಮೋದನೆ ಮಾಡುವ ಹಾಗೆ ಅಂಕಿ ಅಂಶಗಳನ್ನು ಕೊಟ್ಟು ಯಾವ ವಾದ ಮಾಡಿದರೋ ಅದು ರಸ್ಕಾರ ಮಾಡುವ ವಾದ ಆಗಿರಲಿಲ್ಲ. ನಮ್ಮ ವಾದದಲ್ಲಿ ತಿರುಳು ಇಲ್ಲ, ಹುರುಳು ಇಲ್ಲ ಎಂದು ಹೇಳುವುದನ್ನು ಬಿಟ್ಟರೆ ಬೇರೆ ಏನೂ ಹೇಳಲಿಲ್ಲ. ವಿರೋಧ ಪಕ್ಷದವರು ಬ್ರಹ್ಮಾಸ್ತ್ರ ಸಭೆಯ ಮುಂದೆ ತಂದು ಬಿಟ್ಟಿದ್ದಾರೆಂದು ಶ್ರೀ ಕೃಷ್ಣಪ್ಪನವರು ಹೇಳಿದರು. ನಾವು ಬ್ರಹ್ಮಾಸ್ತ್ರ ತಂದಿಲ್ಲ ಅದಕ್ಕೂ ಹೆಚ್ಚಿನ ಅಸ್ತ್ರ ನಮ್ಮ ಹತ್ತಿರ ಅದೆ. ಗುಬ್ಬಚ್ಚಿಯ ಮೇಲೆ ಬ್ರಹ್ಮಾಸ್ತ್ರ ಏಕೆ ಎಂದು ನಾನು ಕೇಳುತ್ತೇನೆ. ಈ ಬ್ರಹ್ಮಾಸ್ತ್ರ ಎದುರಿಸತಕ್ಕಂಥ ಪ್ರತಿ ಅಸ್ತ್ರ ನಿಮ್ಮ ಹತ್ತಿರ ಈ ಸಭೆಯಲ್ಲಿಲ್ಲ—ನಿಮ್ಮ ಬತ್ತಳಿಕೆಯಲ್ಲಿ ಇಂಥ ಅಸ್ತ್ರ ಇಲ್ಲ. ಆದುದರಿಂದಲೇ ಈ ಅವಿಶ್ವಾಸ ನಿರ್ಣಯ ನಿಮಗೆ ಬ್ರಹ್ಮಾಸ್ತ್ರವಾಗಿ ಪರಿಣಮಿಸಿದೆ.

ವಿದ್ಯಾ ಸಚಿವರಾದ ಶ್ರೀಮಾನ್ ಕಂಠಿಯವರು ಮಾತನಾಡಿದರು. ವಿದ್ಯಾ ಇಲಾಖೆಗೆ ಸಂಬಂಧಪಟ್ಟ ವಿಷಯ ಚರ್ಚೆ ಮಾಡುವ ಕಾಲದಲ್ಲಿ ಸ್ಪಷ್ಟೀಕರಣ ಮಾಡುತ್ತಾ ಏನೋ ಒಂದು ವಾದ ಸಭೆಯ ಮುಂದೆ ಇಟ್ಟು ಸಮಸ್ಯೆ ಪರಿಹಾರ ಮಾಡುವುದರ ಬದಲು ಮತ್ತಷ್ಟು ಜಟಿಲ ಮಾಡಿ ಗೊಂದಲ ಎಬ್ಬಿಸಿ ಬಿಡುತ್ತಾರೆ. ಸೀಟುಗಳ ಹಂಚಿಕೆ, ಪರೀಕ್ಷೆ ಏನೇನೋ ಹೇಳಿರುವುದು ಗೊಂದಲವಾಗಿ ಪರಿಣಮಿಸಿದೆ. ಹೈಕೋರ್ಟ್ ರೂಲಿಂಗ್ ಏನಿದೆ ಅದನ್ನು ಓದಿಬಿಡುತ್ತೇನೆ.

> "In the result therefore, for the reasons set out above, the writ petitions are allowed. The modification of the circular issued by the D.P.I. exhibited its own soul for the conduct of examinations at the district level for the 8th standard (4th Middle school class) is quashed as having been passed without authority. We direct that a writ of mandamus must be issued to the Director of Public Instruction that he should consider the admission of these petitioners to the first year class of the High School without reference to the district level examinations in 1963."

(Extract from Judgment)

ವಿದ್ಯಾರ್ಥಿಗಳಿಗೆ ಯಾವ ನ್ಯಾಯ ದೊರಕಿಸಿಕೊಡಬೇಕೆಂದು ಹೈಕೋರ್ಟು ಹೇಳಿತೋ ಅದಕ್ಕೆ ಯಾವ ಗತಿ ಬಂತು ಎಂಬುದನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಇದರಿಂದ ದೇಶದಲ್ಲಿ ಅನ್ಯಾಯ ನಡೆದಿದೆ ಎಂಬುದನ್ನು ಹೈಕೋರ್ಟು ವ್ಯಕ್ತಪಡಿಸಿದೆ.

ರಾಮಕೃಷ್ಣ ಹೆಗ್ಗಡೆ ಅವರು ವಾದ ಮಾಡುತ್ತಾ ನೀವು ಹೇಳುವುದರಲ್ಲಿ ತಿರುಳೇ ಇಲ್ಲ. ಇಂಥ ಸಣ್ಣ ವಿಷಯಗಳನ್ನು ತಿಳಿಸಬೇಕಾಗಿದ್ದರೆ ಸಪ್ಲಿಮೆಂಟರಿ ಡಿಮ್ಯಾಂಡ್ ಮೇಲೆ ಮಾತನಾಡಬಹುದಾಗಿತ್ತು, ಅಲ್ಪ ಕಾಲಾವಧಿ ಪ್ರಶ್ನೆ ಕಳುಹಿಸಬಹುದಾಗಿತ್ತು ಎಂದು ಹೇಳಿ ಸಭೆಯ ನಿಯಮಾವಳಿಯ ಮೇಲೆ ಒಂದು ಭಾಷಣವನ್ನೇ ಮಾಡಿದ್ದಾರೆ, ಇದು ಏನು ತೋರಿಸುತ್ತದೆ ಎಂದರೆ ಈ ಅವಿಶ್ವಾಸ ನಿರ್ಣಯದ ಅಗತ್ಯತೆ ಏನಿದೆ, ಈ ಅಸ್ತ್ರವನ್ನು ಯಾವಾಗ ಉಪಯೋಗಿಸಬೇಕೆನ್ನುವ ಅರಿವೇ ಅವರಿಗೆ ಇಲ್ಲ. ಒಂದು ವರ್ಷದ ಹಿಂದೆ ತಂದ ಅವಿಶ್ವಾಸ ನಿರ್ಣಯ ಏನಿತ್ತು, ಅಲ್ಲಿಂದ ಆಚೆಗೆ ಆದ ವಿದ್ಯಮಾನಗಳನ್ನು ವಿಚಾರ ಮಾಡಿ ಮುಖ್ಯ ಮಂತ್ರಿಗಳು ಸಮಾಧಾನಕರವಾದ ಉತ್ತರಗಳನ್ನು ಕೊಟ್ಟಿದ್ದರೆ ಇದಕ್ಕೆ ಅವಕಾಶವೇ ಇರಲಿಲ್ಲ. ಅವರ ಉತ್ತರದಿಂದಲೇ ಈಗ ತಂದಿರತಕ್ಕ ಅವಿಶ್ವಾಸ ನಿರ್ಣಯ ಸಾರ್ಥಕವಾಗಿದೆ ಎಂದು ಮುಖ್ಯ ಮಂತ್ರಿಗಳೇ ಹೇಳುತ್ತಾ ಇದ್ದಾರೆ. ಅವರೇ ಹೇಳಿದ್ದಾರೆ, ತುಲಾಭಾರಕ್ಕೆ ಸರ್ಕಾರದ ಖಜಾನೆಯಿಂದ ಹಣ ಖರ್ಚಾಗಿಲ್ಲ ಸಾರ್ವಜನಿಕರೇ ಅದನ್ನೆಲ್ಲಾ ಕೂಡಿಸಿದ್ದಾರೆ ಎಂದು, ಇವತ್ತು ರಾಷ್ಟ್ರೀಯ ರಕ್ಷಣಾ ನಿಧಿಗೂ ಸಾರ್ವಜನಿಕರಿಂದಲೇ ಹಣ ಬರುತ್ತಾ ಇರುವುದು ಅದು ಖಜಾನೆಯ ಹಣ ಅಲ್ಲ, ಸಾರ್ವಜನಿಕರಿಂದ ಅಧಿಕಾರಿಗಳ ಮುಖಾಂತರ ಬರುತ್ತಾ ಇದೆ, ರಾಷ್ಟ್ರೀಯ ರಕ್ಷಣಾನಿಧಿಗೆ ಶೇಖರ ಮಾಡುತ್ತಿದ್ದವರೇ ತುಲಾಭಾರಕ್ಕೂ ಶೇಖರ ಮಾಡಿದ್ದಾರೆ. ಅಂದ್ಮೇಲೆ ಅದು ಬೇರೆ ಇದು ಬೇರೆ ಎಂದು ಹೇಳುವುದಕ್ಕಾಗುವುದಿಲ್ಲ. ತಾವು ಹೇಳಿದ ಹಾಗೆ ಅದಕ್ಕೆ 10—15 ಸಾವಿರ ರೂಪಾಯಿ ಖರ್ಚಾಗಿದೆ.

ಶ್ರೀ ಎಸ್. ನಿಜಲಿಂಗಪ್ಪ.—ನಾನು ಹಾಗೆ ಹೇಳಲಿಲ್ಲ ಒಂದು ಕಾಸೂ ಕೂಡ ತುಲಾಭಾರಕ್ಕೆ ಖರ್ಚಾಗಿಲ್ಲ, ಜನರು ತಾವಾಗಿಯೇ ಶೇಖರಿಸಿಕೊಟ್ಟಿದ್ದಾರೆ.

ಶ್ರೀ ಎಸ್. ಶಿವಪ್ಪ.-ಖರ್ಚಾಗಿರತಕ್ಕ ವಿಷಯ ಅದು. ಅದನ್ನು ಯಾರು ಮಾಡಿದರು ಎಂಬ ವಿಷಯ ಬೇರೆ.

MR. SPEAKER.—If Government funds are not expended and if other funds are expended, is that a ground?

ಶ್ರೀ ಎಸ್. ಗೋಪಾಲಗೌಡ.—ಸರ್ಕಾರದ ಹಣ ಖರ್ಚಾಗಿದೆ, ಅದು ಮುಖ್ಯ ಮಂತ್ರಿಗಳಿಗೆ ಗೊತ್ತಿಲ್ಲ.

ಶ್ರೀ ಎಸ್. ಶಿವಪ್ಪ.—ರಾಷ್ಟ್ರೀಯ ರಕ್ಷಣಾನಿಧಿಗೆ ಹೋಗಬೇಕಾದುದ್ದು ಬೇರೆ ಕಡೆ ಹೋಗಿದೆ ಅಷ್ಟೇ ಈ ರೀತಿ ಆಗಬಾರದಾಗಿತ್ತು, ಹಣ ಖರ್ಚಾಗಿಲ್ಲ ಎಂಬುದನ್ನು ತಾವೇ ಒಪ್ಪಿಕೊಂಡಿದ್ದೀರಿ ಆದರೆ ಹಣ ಖರ್ಚಾಗಿದೆ ಅದು ತಪ್ಪು ಎಂದು ಹೇಳುವುದಕ್ಕೆ ಅವರಿಗೆ ಸಾಧ್ಯವಾಗಲಿಲ್ಲ.

ಅವರು ಹೇಳುವುದನ್ನು ನಾವು ಬಯ್ಯುವುದಕ್ಕೆ ಉಪಯೋಗಿಸಿಕೊಳ್ಳುತ್ತಿದ್ದೇವೆ ಎಂದು ಹೇಳಿದರು ನಾನು ಈ ದಿವಸ ಹೇಳಬೇಕಾಗಿದೆ ಒಂದೂವರೆ ಗಂಟೆಗಳ ಕಾಲ ಮಾಡಿದ ಭಾಷಣದಲ್ಲಿ ಅವರು ಮುಖ್ಯಮಂತ್ರಿಗಳಾದ ಮೇಲೆ ಇಂಥ ವಿಷಯದಲ್ಲಿ ಯಾವ ಉತ್ತರವನ್ನು ಕೊಟ್ಟಿದ್ದಾರೋ ಅದಕ್ಕಿಂತ ಹೆಚ್ಚಾಗಿ ಒಂದು ಮಾತನ್ನಾದರೂ ಹೇಳಿದ್ದರೆಯೇ ಎಂದರೆ ಹೇಳಿದ್ದೇ ಹೇಳೋ ಕಿಸು ಬಾಯಿದಾಸ ಎನ್ನುವ ಹಾಗೆ ಹೇಳಿದ್ದಾರೆ. ಶರಾವತಿ ಬಗ್ಗೆ ಇಡೀ ದೇಶಾದ್ಯಂತ 40–50 ಲಕ್ಷ ರೂಪಾಯಿ ದುರ್ವ್ಯಯವಾಗಿದೆ ಎಂದು ಜನ ಕೂಗುತ್ತಾ ಇದ್ದಾರೆ.

Sri S. NIJALINGAPPA.—Please don't put in my mouth what I have not said. It is not correct parliamentary manner.

Sri S. SIVAPPA.—A thin line should be drawn between these things. Whether it is irregular, whether it is illegal excess of expenditure, all these things are there. I am putting a direct question to the Chief Minister.

ನಾನು ಒಂದು. ನೇರವಾದ ಪ್ರಶ್ನೆಯನ್ನು ತಮಗೆ ಈ ನಿರ್ಣಯವನ್ನು ಮಂಡಿಸತಕ್ಕ ಕಾಲದಲ್ಲಿ ಕೇಳಿದೆ. 1962ನೇ ಇಸವಿ ನವೆಂಬರ್ ತಿಂಗಳಿನಲ್ಲಿ ತಾರಾಪೂರೆ ಕಂಪೆನಿಯವರು ಯಾವ ಒಪ್ಪಂದದ ಪ್ರಕಾರ ಒಪ್ಪಿಕೊಂಡು ಕೆಲಸ ಮಾಡುತ್ತೇವೆ ಎಂದು ಮುಂದೆ ಬಂದರೋ ಅವರಿಗೆ ಅದೇ ಕೆಲಸಕ್ಕೆ ಏಕೆ ದರವನ್ನು ಹೆಚ್ಚಿಸಿ ಹಣವನ್ನು ಕೊಟ್ಟಿರಿ ?

ಶ್ರೀ ಎಸ್. ನಿಜಲಿಂಗಪ್ಪ.-ಅದನ್ನು ಹೇಳಿದ್ದೇನೆ.

ಶ್ರೀ ಎಸ್. ಶಿವಪ್ಪ.—ದೇಶದಲ್ಲಿ ಈ ಘಟನೆಯಿಂದ ಒಂದು ನಯಾ ಪೈಸಾ ಆಗಿರಲಿ, ನೂರು ಲಕ್ಷ ರೂಪಾಯಿ ಆಗಿರಲಿ ಈ ದಿವಸ ಏನಾಗಿದೆ ಎಂದರೆ ದಿನಚರಿ ಅನ್ಯಾಯಗಳ ಪರಂಪರೆಯಲ್ಲಿ ತೊಡಗಿ ಒಂದು ಲಕ್ಷ ಎಂದರೆ ನಿಮಗೆ ಲಕ್ಷ್ಯವೇ ಇಲ್ಲ ಕೋಟಿ ಎಂದರೆ ಗೀಟು ಹಾಕುತ್ತೀರಿ. ಆದ್ದರಿಂದ ಈ ದಿವಸ ನಾನು ತಮಗೆ ಕೇಳುವುದೇನೆಂದರೆ ಒಂದು ಲಕ್ಷ ಆಗಿರಲಿ, ಒಂದು ನಯಾ ಪೈಸಾ ಆಗಿರಲಿ ನೀವು ಜವಾಬ್ದಾರಿಯುತವಾಗಿ ಶರಾವತಿ ವಿಷಯದಲ್ಲಿ ಇವತ್ತು ವಿಚಾರಣೆಯನ್ನು

(ಶ್ರೀ ಎಸ್. ಶಿವಪ್ಪ)

ನಡೆಸುತ್ತೇನೆ ಎಂದು ಹೇಳಿದಿರಾ! ಇಲ್ಲ ಇನ್ನೂ ಡೋಲಾಯಮಾನವಾದ ರೀತಿಯಲ್ಲಿ ಇದ್ದೀರಿ. ಯಾವುದನ್ನೇ ಆಗಲಿ ಡೋಲಾಯಮಾನ ರೀತಿಯಲ್ಲಿ ಇಡುವುದರಲ್ಲಿ ತಾವು ಪ್ರತಿಷ್ಠಾಪನಾಚಾರ್ಯ ರಾಗಬೇಕೆಂದು ಇದ್ದೀರೋ ಏನೋ ನನಗೆ ಗೊತ್ತಿಲ್ಲ. ಇಂಥಾ ವಿಚಾರಣೆಯ ಬಗ್ಗೆ ಶೀಘ್ರವಾಗಿ ನ್ಯಾಯಾಂಗ ವಿಚಾರಣೆಯನ್ನು ಮಾಡುತ್ತೇವೆ ಎಂದು ಹೇಳಿ ಒಂದು ವರ್ಷವಾಗಿ ಇವತ್ತಿಗೂ ಕೂಡ ಏನನ್ನೂ ಮಾಡದೆ ಆ ವಿಚಾರದಲ್ಲಿ ಏನನ್ನು ಹೇಳುತ್ತೀರೋ ಎಂಬುದನ್ನು ಬಹಳವಾಗಿ ಆಲಿಸಿ ಕೇಳಿದೆ—ಜ್ಯೂಡಿಷಿಯಲ್ ಎನ್‌ಕ್ವೈರಿ ಮಾಡಲು ಧೈರ್ಯವಾದ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೀರಿ ಎಂದು ಕಾತುರವಾಗಿದ್ದೆ, ತಾವು ಹೇಳಿದ ಮಾತಿನಲ್ಲಿ ಅದು ಬರಲೇ ಇಲ್ಲ, ಡೋಲಾಯಮಾನವಾದ ಮಾತು ನೋಡುತ್ತೇನೆ, ಮಾಡುತ್ತೇನೆ ಎಂದು ಹೇಳುತ್ತಾ ಹೋದರೆ ಹೊರತು ಸ್ಪಷ್ಟವಾದ ಮಾತು ಬರಲಿಲ್ಲ. ನಾನು ಖಂಡಿತವಾಗಿಯೂ ಹೇಳುತ್ತೇನೆ. ಇವತ್ತಿನ ದಿವಸ ಮೈಸೂರು ದೇಶದಲ್ಲಿ ಮುಖ್ಯಮಂತ್ರಿಗಳಾಗಿ ತಾವು ಏನೋಂದು ಮಹತ್ ಕಾರ್ಯ ಸಾಧನೆ ಮಾಡುತ್ತೇನೆ ಎಂದು ಹೋದ ವರ್ಷ ಈ ಸಭೆಗೆ ಹೇಳಿದಿರೋ ಅದೇ ಮಾತನ್ನು ಹೇಳಿದ್ದರೆ ಈ ನಿರ್ಣಯವನ್ನು ತಂದದ್ದಕ್ಕೂ ಸಾರ್ಥಕವಾಗುತ್ತಿತ್ತು. ನೀವು ನಿಮ್ಮ ಉದ್ದೇಶವನ್ನು ಏನು ಇಟ್ಟು ಕೊಂಡಿದ್ದೀರಿ, ನಿಮ್ಮ ಮೇಲೆ ಈ ಅವಿಶ್ವಾಸ ನಿರ್ಣಯದಿಂದ ಆದ ಒಂದು ಪರಿಣಾಮ ಏನಾಗಿದೆ ಎಂದರೆ ನಿಮ್ಮ ಉತ್ತರವನ್ನು ಕೊಡುವಾಗ ಇವತ್ತು ನೀವು ನಗುಮುಖದಿಂದ ಉತ್ತರವನ್ನು ಕೊಟ್ಟಿರಿ ಇದು ಒಂದೇ ಒಂದು ಪರಿಣಾಮವನ್ನುಂಟುಮಾಡಿದೆ. ಹೋದ ಸಾರಿ ಇದ್ದಂಥ ಕೆಂಪು ಮುಖ ಇಲ್ಲ. ನೀವು ಉಳಿಯಬೇಕಾದರೆ, ದೇಶ ಉಳಿಯಬೇಕಾದರೆ ಪ್ರಜಾಪ್ರಭುತ್ವದಲ್ಲಿ ಸಾರ್ವ ಜನಿಕರ ಅಭಿಪ್ರಾಯವನ್ನು ಕ್ರೋಢೀಕರಿಸತಕ್ಕ ಸಮಯದಲ್ಲಿ ಧೈರ್ಯವನ್ನು ಮಾಡಲೇಬೇಕಾಗು ತ್ತದೆ. ಶ್ರೀಮಾನ್ ಕೃಷ್ಣಪ್ಪನವರು ಇಂಥಾ ವಿಷಯಗಳನ್ನು ಈ ಅಸೆಂಬ್ಲಿಯಲ್ಲಿ ಏಕೆ ತರುತ್ತೀರಿ ಮುಖ್ಯ ಮಂತ್ರಿಗಳ ಕೋಣೆಯಲ್ಲಿ ಚರ್ಚೆ ಮಾಡಿ ಎಂದು ಹೇಳಿದರು. ನಾನು ಹೇಳುತ್ತೇನೆ, ಇದು ಮುಖ್ಯಮಂತ್ರಿಗಳ ಕೋಣೆಯಲ್ಲಿ ಮಾಡತಕ್ಕ ವ್ಯವಹಾರವಲ್ಲ, ದೇಶದ ಮುಖ್ಯಮಂತ್ರಿಗಳಾಗಿ ಅವರು ಜನತೆಗೆ ಜವಾಬ್ದಾರರಾಗಬೇಕು, ಪ್ರಜಾಪ್ರಭುತ್ವಕ್ಕೆ ಜವಾಬ್ದಾರರಾಗಬೇಕಾಗಿದೆ ಈ ಪ್ರಜಾಪ್ರಭುತ್ವ ಯಶಸ್ವಿಯಾಗಿ ಬಾಳಬೇಕಾದರೆ.

ದೇಶದಲ್ಲಿ ಪ್ರಜಾಪ್ರಭುತ್ವಾಡಳಿತ ಬಂದಾಗ್ಯೂ, ನೀವು ಇನ್ನೂ ಈ ಆಕಾಶಪುರಾಣ ಹೇಳತಕ್ಕ ದ್ದನ್ನು ಬಿಡಲಿಲ್ಲವಲ್ಲ ಅಂತ ನಾನು ವ್ಯಥೆಪಡಬೇಕಾಗಿದೆ. ಈ ಹಿಂದೆ ನಾನೂ ಶ್ರೀಮಾನ್ ಕೃಷ್ಣಪ್ಪ ನವರೂ ಮತ್ತು ಶ್ರೀ ಮುಲ್ಕಾ ಗೋವಿಂದ ರೆಡ್ಡಿಯವರೂ ಎಲ್ಲರೂ ಒಟ್ಟಿಗೇ ಕೆಲಸ ಮಾಡಿದ್ದೇವೆ. ಆದರೆ ಅವರಿಲ್ಲಿ ಈಗ ಮಾತನಾಡಿದ ರೀತಿ ನೀತಿ ಸರಿಯಲ್ಲ ಎಂದು ಇಷ್ಟು ಮಾತ್ರ ಹೇಳುತ್ತೇವೆ.

ಮಾನ್ಯ ಅಧ್ಯಕ್ಷರೇ, ಖಾದೀ ಬೋರ್ಡಿನ ವಿಚಾರದಲ್ಲಿ ನನ್ನ ನಿರ್ಣಯದಲ್ಲಿ ಸ್ಪಷ್ಟವಾಗಿ ಎಲ್ಲ ವಿಚಾರಗಳನ್ನೂ ಹೇಳಿದ್ದೇನೆ. ಅದೇ ರೀತಿ ಖಾದೀ ಬೋರ್ಡ್ ಮತ್ತು ವಿದ್ಯುಚ್ಛಕ್ತಿ ಮಂಡಲಿಯ ವಿಚಾರ ಇವನ್ನೆಲ್ಲಾ ಹೇಳಿದ್ದೇನೆ. ಇದರ ಜೊತೆಗೆ ದೇಶದಲ್ಲಿರತಕ್ಕ ನಿರುದ್ಯೋಗ ಸಮಸ್ಯೆ, ಆಹಾ ರದ ಸಮಸ್ಯೆ, ತುರ್ತು ಪರಿಸ್ಥಿತಿ, ಎಕಾನಮಿ ಮೆಷರ್ಸ್, ಕೈಗಾರಿಕೆಗಳ ಅಭಿವೃದ್ಧಿ ಇತ್ಯಾದಿ ವಿಚಾರಗಳನ್ನೆಲ್ಲಾ ಹೇಳಿದ್ದೇನೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಪಾನ ವಿರೋಧದ ವಿಚಾರ ಹೀಗೆ ಒಂದಲ್ಲ ಅನೇಕ ವಿಚಾರಗಳನ್ನು ಹೇಳಿದ್ದೇವೆ. ಆದರೆ ನಮ್ಮ ಸಭಾ ನಾಯಕರು ಅಧಿಕಾರಯುತ ವಾಗಿ ಏನನ್ನೂ ಹೇಳಲಿಲ್ಲ. ಶ್ರೀಮಾನ್ ಕುಂದೂರು ರುದ್ರಪ್ಪನವರು ಹೇಳಿದ ಹಾಗೆ ಹೇಳಿದರೆ ಅದರಿಂದೇನೂ ಪ್ರಯೋಜನ ಇಲ್ಲ. ಆದರೆ ಅವರು ಕುಸ್ತಿ ಮಾಡುವುದಕ್ಕೆ ತಯಾರಾಗಿದ್ದರೆ ನಮ್ಮಲ್ಲೂ ಶ್ರೀ ಜಿ. ಟಿ. ರಂಗಪ್ಪನವರು ತಯಾರಾಗಿದ್ದಾರೆ. ನಮ್ಮವರಾಗಲೇ ಒಂದು ಕೈಯನ್ನು ನಿಮ್ಮ ಮೇಲೆ ತೋರಿಸಿದ್ದಾರೆ. ಅಂಥ ಒಂದು ಗುರುತರವಾದ ಖಾದೀ ಬೋರ್ಡಿನ ವಿಚಾರದಲ್ಲಿ ನಾವು ಮಾಡಿರತಕ್ಕಂಥ ಗುರುತರವಾದ ಆಕ್ಷೇಪಣೆಗಳನ್ನೆಲ್ಲಾ ತಾವು ಒಪ್ಪಿಕೊಂಡಿದ್ದೀರಿ.

ಶ್ರೀ ಎಸ್. ನಿಜಲಿಂಗಪ್ಪ.—ನಾನು ಒಪ್ಪಿಲ್ಲವಲ್ಲ!

ಶ್ರೀ ಎಸ್. ಶಿವಪ್ಪ.—ಅದು 57-58ರಲ್ಲಿ ನಡೆದದ್ದು, ಆಗ ನಾನು ಇಲ್ಲಿರಲಿಲ್ಲ ಎಂದು ಹೇಳಿ ದ್ದೀರಿ. ಆದರೆ ಅವರು ಇನ್ನೊಂದು ಮಾತನ್ನು ಹೇಳಿದರು: ನೀವು ಪವಿತ್ರವಾದ ಖಾದಿಯನ್ನು ಹಾಕಿಲ್ಲ, ಆದುದರಿಂದ ನಿಮಗೆ ಅದರ ಅನುಭವ ಇಲ್ಲ ಎಂದು. ಮೊನ್ನೆತಾನೇ ನಿವೃತ್ತರಾದ ಆ ಬೋರ್ಡಿನ ಅಧ್ಯಕ್ಷರೇ ಅಲ್ಲಿ 5–6 ಲಕ್ಷ ರೂಪಾಯಿಗಳ ಅವ್ಯವಸ್ಥೆ ಆಗಿದೆ ಎಂದು ಹೇಳಿದ್ದಾರೆ. ಸರ್ಕಾರದವರೂ ಇದನ್ನು ಒಪ್ಪಿಕೊಂಡಿದ್ದಾರೆ. ಹೀಗೆ ಅಲ್ಲಿ 5–6 ವರ್ಷಗಳಿಂದ ಅವ್ಯವಸ್ಥೆಗಳಾಗಿ ದ್ದರೂ ಅದನ್ನು ಸರಿಪಡಿಸದೆ ಇವರೇನು ಮಾಡುತ್ತಿದ್ದರು? ಇವರು ತಮ್ಮ ಕರ್ತವ್ಯವೇನೆಂಬುದನ್ನು ತಿಳಿದುಕೊಳ್ಳದೆ ಸುಮ್ಮನೆ ಹೀಗೆ ಕಾಲಹರಣ ಮಾಡಿಕೊಂಡಿದ್ದರೆ ನಾವು ಇಂಥ ಅವಿಶ್ವಾಸ ನಿರ್ಣಯ ವನ್ನು ತಾರದೆ ನಾವು ಇನ್ನೇನು ಮಾಡಬೇಕು? ಕಾಂಗ್ರೆಸ್ಸಿನವರೇ ಮೊನ್ನೆತಾನೆ ಅಧ್ಯಕ್ಷ ಪದವಿ

ಯಿಂದ ನಿವೃತ್ತರಾದವರು ಖಾದೀ ಬೋರ್ಡಿನಲ್ಲಿ ಹಣ ಅಪವ್ಯಯ ಆಗಿದೆ ಎಂದು ಹೇಳಿದ್ದಾರೆ. ಇದರಲ್ಲಿ ಸರ್ಕಾರದವರ ಜವಾಬ್ದಾರಿಯೂ ಇದೆ. ಆ ಲೆಕ್ಕ ಪತ್ರಗಳ ಆಡಿಟಿಂಗ್ ಮತ್ತು ಅಕೌಂಟಿಂಗ್‌ಗಳ ಜವಾಬ್ದಾರಿ ಸರ್ಕಾರದವರ ಮೇಲಿದೆ. ಈ ವಿಚಾರದಲ್ಲಿ ಅಕೌಂಟೆಂಟ್ ಜನರಲ್‌ರವರ ಆಫೀಸಿನಿಂದ ಸರ್ಕಾರಕ್ಕೆ ಬೇಕಾದಷ್ಟು ಕಾಗದ ಪತ್ರಗಳು ಬಂದಿವೆ. ಆದಾಗ್ಯೂ ಸರ್ಕಾರದವರು ಒಂದು ಉದಾಸೀನಾ ಭಾವನೆಯಿಂದ ಆ ಅಕ್ಷಮ್ಯ ಅಪರಾಧವನ್ನು ತಡೆಗಟ್ಟದೆ, ತಪ್ಪುಗಳನ್ನು ಮುಚ್ಚಿಹಾಕಿಕೊಂಡು ತಪ್ಪಿತಸ್ಥರನ್ನು ಸೇಫ್‌ಗಾರ್ಡ್ ಮಾಡಿಕೊಂಡು ಬಂದಿದ್ದೀರಿ.

ಇನ್ನು ಲಂಚದ ವಿಷಯಕ್ಕೆ ಬಂದರೆ ಇದನ್ನು ತಡೆಗಟ್ಟಲು ಅವರಿಂದ ಸಾಧ್ಯವೇ ಇಲ್ಲವೆಂದೂ, ಆ ದೇವರಿಂದಲೂ ಕೂಡ ಅದನ್ನು ತಡೆಗಟ್ಟಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಹೀಗೆ ರಾಜ್ಯದ ಆಡಳಿತ ಸೂತ್ರ ಹಿಡಿದಿರತಕ್ಕ ವ್ಯಕ್ತಿಗಳು ಈ ಮಾತನ್ನು ಆಡಬಹುದೇ ಅವರ ಬಾಯಲ್ಲಿ ಇಂಥ ಶಬ್ದಗಳು ಬರಬಹುದೇ ಎಂದು ನಾನು ಕೇಳುತ್ತೇನೆ? ಈ ದಿವಸ ರಾಜ್ಯದಲ್ಲಿ ಲಂಚ ತಾಂಡವವಾಡುತ್ತಿದೆ, ಲಂಚವಿಲ್ಲದೆ ಯಾವ ಕೆಲಸಗಳೂ ಆಗುತ್ತಿಲ್ಲ. ಇಂಥ ಮಾತುಗಳನ್ನಾಡತಕ್ಕ ತಾವು ದೇಶದ ಆಡಳಿತ ನಡೆಸುವುದಕ್ಕೆ ಲಾಯಖ್ಖೇ, ಗೌರವವೇ ಎಂದು ನಾನು ಕೇಳುತ್ತೇವೆ? ದೇವರೇ ಬಂದರೂ ಲಂಚವನ್ನು ತಡೆಗಟ್ಟುವುದಕ್ಕೆ ಸಾಧ್ಯವಿಲ್ಲ ಎಂದು ಅವಿಶ್ವಾಸ ನಿರ್ಣಯ ತಂದಿರತಕ್ಕವರೂ ಹೇಳಲೊಲ್ಲಂಥ ಮಾತನ್ನು ಇಷ್ಟು ಗುರುತರವಾದ ಆಡಳಿತ ಜವಾಬ್ದಾರಿ ಹೊತ್ತಿರುವಂಥವರು ಹೇಳಬಹುದೇ ಎಂದು ಕೇಳುತ್ತೇನೆ? ಇವರು ಮಾತನಾಡುತ್ತ ಏನೋ ಲೋಕಾಭಿರಾಮವಾಗಿ ಹೇಳುವಂತೆ ಸ್ವಲ್ಪ ದುರುಪಯೋಗ ಆಗಿರಬಹುದು ಅಂತ ಹೇಳುತ್ತಿದ್ದಾರೆ. ಇವರ ಶಬ್ದಕೋಶದಲ್ಲಿ ಆ ಕೊಂಚ ಎಂಬ ಪದಕ್ಕೆ ಅರ್ಥವೇನು ? ಬಹಳ ಎಂದರೆ ಅರ್ಥವೇನು ? ಇವು ಇಷ್ಟಿಷ್ಟಿದ್ದರೆ ಕೊಂಚ ಇಷ್ಟಿಷ್ಟಿದ್ದರೆ ಬಹಳ ಎಂತ ಒಂದು ನಿಘಂಟನ್ನಾದರೂ ಮಾಡಿಬಿಡಿ. ಆಗ ನಾವೂ ಇದೇ ಮಾತನ್ನು ಜನಗಳಿಗೆ ಹೇಳುತ್ತೇವೆ. ಇಂಥ ವಿಚಾರಗಳು ನಡೆದಿರುವಾಗ ನಾವು ಈ ಒಂದು ಅವಿಶ್ವಾಸ ನಿರ್ಣಯವನ್ನು ತಂದಿದ್ದರೆ ಇದನ್ನು ಕ್ಷುಲ್ಲಕ ಎಂದು ಹೇಳಲು ನಿಮಗೆ ಮನಸ್ಸಾದರೂ ಹೇಗೆ ಒಪ್ಪೀತು ? ನಿಮ್ಮ ಕಡೆ ಇರತಕ್ಕ ಮಹಿಳಾಮಣಿಯರು ಸರಳವಾದ ಕನ್ನಡದಲ್ಲಿ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಆದರೆ ಅವರು ನಮ್ಮ ಕಡೆ ಇದ್ದಿದ್ದರೆ ಅವರ ವೀರವಾಣಿ ಇನ್ನೂ ಉಗ್ರವಾಗಿರುತ್ತಿತ್ತು. ಆದರೆ ಈಗ ಅವರು ನಿಮ್ಮ ಒಂದು ಪಂಜರದಲ್ಲಿ ಸಿಕ್ಕಿಬಿದ್ದು ಹಾಗೆ ಮಾತನಾಡಿದ್ದಾರೆ. ಆದರೆ ಒಂದು ಮಾತು ಸತ್ಯ—ಅದೇನೆಂದರೆ ನಿಮ್ಮ ನಿಮ್ಮ ಆತ್ಮಗಳಿಗಾದರೂ ಗೊತ್ತಿದೆ ನೀವು ಹೇಳತಕ್ಕದ್ದು ಸರಿಯಾಗಿಲ್ಲ, ನಿಮ್ಮ ಬಹಳ ತಪ್ಪುಗಳಿವೆ, ಲಂಚದ ಹಾವಳಿ ಜಾಸ್ತಿ ಇದೆ ಎಂದು.

ಇನ್ನು ಸಭಾನಾಯಕರು ಒಂದು ಕಡೆ ವಿರೋಧ ಪಕ್ಷ ಯಶಸ್ವಿಯಾಗಬೇಕು ಎಂದು ಹೇಳುತ್ತಾರೆ. ಇನ್ನೊಂದು ಕಡೆ ವಿರೋಧ ಪಕ್ಷದವರು ಕ್ಷುಲ್ಲಕವಾದ ನಿರ್ಣಯಗಳನ್ನು ಸಭೆಯ ಮುಂದೆ ತರುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಇದು ಒಂದಕ್ಕೊಂದು ವಿರೋಧವಾಗಿದೆ. ಹೀಗೇ ಒಬ್ಬ ಮಂತ್ರಿಗಳು ಸಹಕಾರ ಸಂಘದ ಸಂಸ್ಥೆಯಲ್ಲಿ ಗೂಳಿಗಳಿವೆ ಎಂದು ಹೇಳಿದರೆ ಅದನ್ನು ಇನ್ನೊಬ್ಬ ಮಂತ್ರಿಗಳು ಇಲ್ಲ ಎಂದು ಹೇಳುತ್ತಾರೆ. ಹೀಗೆ ಒಬ್ಬರು ಹೇಳಿದ್ದನ್ನು ಇನ್ನೊಬ್ಬರು ವಿರೋಧಿಸುತ್ತಿದ್ದಾರೆ. ಮಾನ ವಿರೋಧ ನಾವು ಯಶಸ್ವಿಯಾಗಿಲ್ಲ ಎಂದರೆ ನೀವು ಯಶಸ್ವಿ ಆಗಿದೆ ಎಂದು ಹೇಳುತ್ತೀರಿ. ಹೀಗೆ ಒಂದಕ್ಕೊಂದು ವಿರೋಧಾಭಾಸವುಳ್ಳ ಮಾತುಗಳಿಂದ ಏನು ಪ್ರಯೋಜನ ? ಇಂಥ ಮೊಸಳೆ ಕಣ್ಣೀರು ಸುರಿಸುವಂಥ ಮಾತುಗಳು ನಮಗೆ ಬೇಕಾಗಿಲ್ಲ. ಈ ದಿವಸ ಈ ಪಕ್ಷವನ್ನು ಉಳಿಸಿ ಬೆಳೆಸುವ ಜವಾಬ್ದಾರಿ ದೇಶದ ಜನತೆಯ ಮೇಲೆ ಇದೆ. ಸರ್ಕಾರವನ್ನು ಉಳಿಸುವಾ ಅಥವಾ ಉರುಳಿಸುವ ಕರ್ತವ್ಯ ಜನತೆಯ ಕೈಲಿದೆ. ದೇಶದಲ್ಲಿರತಕ್ಕ ಜನತೆಯೇ ನಮಗೆಲ್ಲರಿಗೂ ಒಂದು ನ್ಯಾಯಾಲಯ. ಈ ದಿವಸ ನೀವು ಏನು ಒಂದು ವಾದ ಮಾಡುತ್ತಿದ್ದೀರೋ ಅದನ್ನು ನೀವು ಸಮರ್ಥನೆ ಮಾಡಿರುವುದಿಲ್ಲ.

4-00 P.M.

ಇವತ್ತು ಸಹಕಾರ ಸಚಿವರಾದ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಹೇಳಿದರು : ನಿಮ್ಮ ಸಂಖ್ಯೆ ಈ ಸಭೆಯಲ್ಲಿ ಎಷ್ಟಿದೆ, ಇವತ್ತು ನಮ್ಮ ರಾಜ್ಯದಲ್ಲಿ ಹೋದ ಮಹಾ ಚುನಾವಣೆಯಲ್ಲಿ ನೀವು ಕೇವಲ ಅಲ್ಪ ಮತದಿಂದ ಆರಿಸಿ ಬಂದಿದ್ದೀರಿ ಎಂದು. ಆದರೆ ಎಲ್ಲರಿಗೂ ಕೂಡ ಗೊತ್ತು ಕಾಂಗ್ರೆಸ್ಸಿನವರು ಗಳಿಸಿದ ಮತ 100ಕ್ಕೆ 48 ಮಾತ್ರ; ಕಾಂಗ್ರೆಸ್ಸಿಗೆ ವಿರುದ್ಧ ಶೇಕಡ 52 ಜನ ಓಟುಮಾಡಿ, ನಿಮ್ಮನ್ನು ಬೇಡ ಅಂತ ಹೇಳಿದ್ದಾರೆ. ಆದ್ದರಿಂದ ಬಹುಜನರ ಬೆಂಬಲ ಕಾಂಗ್ರೆಸಿಗಿದೆ ಎಂದು ನೀವು ಹೇಳುವುದರಲ್ಲಿ ತಿರುಳಿಲ್ಲ. ಇವರ ವಾದದ ಇನ್ನೊಂದು ಯುಕ್ತಿ ಏನೆಂದರೆ, ಅವಿಶ್ವಾಸ ನಿರ್ಣಯ ಪಾಸಾದರೆ ನಾವು ಸರಕಾರ ರಚನೆ ಮಾಡಬೇಕು, ಅದು ನಮ್ಮ ಕೈಲಿ ಆಗುತ್ತದೆಯೋ ಎಂದು ಪ್ರಶ್ನಿಸುವುದು. ನಾವು ಸರಕಾರ ರಚನೆ ಮಾಡಿ, ಮುಖ್ಯ ಮಂತ್ರಿಗಳಾಗಿ, 27 ಜನ ಮಂತ್ರಿಗಳನ್ನು ತೆಗೆದುಕೊಂಡು ರಾಜ್ಯ ಆಳುವ ಆಸೆಯಿಂದ ಈ ನಿರ್ಣಯ ತಂದಿಲ್ಲ. ತಾವು ಏನು ವಚನ

(ಶ್ರೀ ಎಸ್. ಶಿವಪ್ಪ)

ಕೊಟ್ಟಿದ್ದಿರೋ, ಏನು ಪ್ರಕಟಣೆ ಮಾಡಿದ್ದಿರೋ ಅದನ್ನು ನೆರವೇರಿಸುವುದರಲ್ಲಿ ವಿಫಲರಾಗಿದ್ದೀರಿ, ಮತ್ತು ಈ ಸಭೆಯ ವಿಶ್ವಾಸವನ್ನು ಕಳೆದುಕೊಂಡಿದ್ದೀರಿ ಎಂದು ಜನತೆಗೆ ತೋರಿಸುವುದಕ್ಕೆ ಈ ನಿರ್ಣಯವನ್ನು ಮಂಡನೆ ಮಾಡಿದ್ದೇವೆ. ಈ ಸಭೆಯ ನಂಬಿಕೆಯನ್ನು ಕಳೆದುಕೊಂಡ ಮೇಲೆ, ಈ ಸಭೆಯ ವಿಶ್ವಾಸಕ್ಕೆ ನೀವು ಯೋಗ್ಯರಲ್ಲದ ಮೇಲೆ, ಈ ಸಭೆಯಲ್ಲಿರತಕ್ಕಂಥ ನೀವು ರಾಜೀನಾಮೆ ಕೊಡಬೇಕು. ನೀವು ಎಂಥ ಮೇಲ್ಪಂಕ್ತಿ ಹಾಕಬೇಕೆಂದರೆ ನಮ್ಮ ಪಕ್ಷದವರು ಮುಂದೆ ಮಂತ್ರಿಗಳಾದರೆ ನಿಮ್ಮಿಂದ ರಾಜಕೀಯ ಕಲಿಯುವ ಹಾಗಿರಬೇಕು. ಇವತ್ತು ಈ ಪ್ರಜಾಪ್ರಭುತ್ವ ಯಶಸ್ವಿಯಾಗಿ ಬೆಳೆಯಬೇಕು, ವಿರೋಧ ಪಕ್ಷದ ಸಂಖ್ಯೆ ಬೆಳೆಯಬೇಕು ಅಂತ ಮಾನ್ಯ ಮುಖ್ಯ ಮಂತ್ರಿಗಳು ಯಾವ ಮಾತಿನಲ್ಲಿ ಹೇಳಿದರೋ, ಆ ಒಂದು ಮಾತಿನಂತೆ ವಿರೋಧ ಪಕ್ಷಕ್ಕೆ ಪೋಷಕವಾಗಿರತಕ್ಕಂಥ ಅವಿಶ್ವಾಸ ನಿರ್ಣಯ ಏನು ಬಂದಿದೆ, ಅದರ ಹಿಂದೆ ಏನು ತತ್ವ ಅಡಗಿದೆ, ಅದಕ್ಕೆ ಮಾನ್ಯತೆ ಕೊಟ್ಟು ಸರಕಾರ ರಾಜೀನಾಮೆ ಕೊಡಬೇಕು. ಆವಾಗ ಕಾಂಗ್ರೆಸಿನಲ್ಲಿರತಕ್ಕಂಥ ಬಹಳ ಜನ ಪ್ರಜಾಪ್ರಭುತ್ವ ಬೆಳೆಯಬೇಕೆಂದು ಮಾತು ಮಾತಿಗೂ ಏನು ಹೇಳುತ್ತಿರುತ್ತಾರೆ, ಆ ಮಾತನ್ನು ಈಡೇರಿಸಿದ ಹಾಗಾಗುತ್ತದೆ. ಇವತ್ತು ಮಾನ್ಯ ಮುಖ್ಯ ಮಂತ್ರಿಗಳು, ಡೋಲಾಯಮಾನವಾದ ನೀತಿಯನ್ನು ಏನು ಹಾಕಿಕೊಂಡಿದ್ದಾರೆ ಅದನ್ನು ಪ್ರತಿಷ್ಠಾಪನೆ ಮಾಡಿಕೊಂಡು ಹೋಗಬಾರದು, ಅದನ್ನು ಜಾರಿಗೆ ತರಬಾರದು. ನೀವು ಅಧಿಕಾರದಿಂದ ಕೆಳಕ್ಕೆ ಇಳಿದರೆ ಹುರುಪಿನಿಂದ ಮೇಲಕ್ಕೆ ಬರಬಹುದು. ಏನು ಬಂದರೂ ಕೂಡ 27 ಮಂತ್ರಿಗಳೂ ಇರುತ್ತಾರೆ, ಯಾರೂ ಕೆಳಗೆ ಇಳಿಯುವುದಿಲ್ಲ ಎಂದು ಯಾವಾಗ ನೀವು ಒಂದು ಭರವಸೆಯನ್ನು ಕೊಟ್ಟರೋ, ಇವತ್ತು ಮಂತ್ರಿಗಳೆಲ್ಲಾ ಬಹಳ ಕಳೆಯಿಂದ ಈ ಸಭೆಗೆ ಬಂದುಬಿಟ್ಟಿದ್ದಾರೆ. ಈ ಕಾಂತಿ, ಕಳೆ ಶಾಶ್ವತವಾದುದಲ್ಲ. ಯಾವತ್ತು ಅದಕ್ಕೆ ಬಾಣ ಪ್ರಯೋಗವಾಗುತ್ತದೋ, ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಶರಾವತಿ ಬಗ್ಗೆ ಏನು ಒಂದು ಡೋಲಾಯಮಾನವಾದ ನೀತಿಯನ್ನು ಅನುಸರಿಸುತ್ತಿದ್ದಾರೆ, ಎಷ್ಟೇ ಹಣ ಖರ್ಚಾಗಿದ್ದರೂ ಎನ್ ಕ್ವಯರಿ ಮಾಡಿಸುವುದಿಲ್ಲ ಅಂತ ಏನು ಹೇಳಿದ್ದಾರೆ, ಅದರಿಂದ ನಮಗೆ ಅಸಮಾಧಾನವಾಗಿದೆ, ಅದು ದೇಶಕ್ಕೂ ಅಸಮಾಧಾನಪಡಿಸತಕ್ಕ ವಿಷಯವಾಗಿದೆ. ಈ ಎಲೆಕ್ಟ್ರಿಸಿಟಿ ಬೋರ್ಡಿನ 207 ಲಕ್ಷ ರೂಪಾಯಿಗೆ ಏನು ಲೆಕ್ಕ ಕೊಟ್ಟಿದ್ದಾರೆ. ಆ ವಿಚಾರವನ್ನು ನಾನು ಒಪ್ಪಿಕೊಂಡಿದ್ದೇನೆಂದು ಹೇಳಿದರು. The Electricity Board Council is only an advisory body. ಬೋರ್ಡಿನವರು ಕೆಲಸ ಕಾರ್ಯಗಳನ್ನು ಮಾಡಿದ್ದನ್ನು, ಕೌನ್ಸಿಲ್ ಮುಂದೆ ಇಡುತ್ತಾರೆ. ಕೌನ್ಸಿಲ್ಲಿನವರು ತೀರ್ಮಾನ ತೆಗೆದುಕೊಳ್ಳುವ ಹಾಗೆ ಇಲ್ಲ. ನಾನು ಒಪ್ಪತಕ್ಕ ಅಂಶವೇ ಇದರಲ್ಲಿಲ್ಲ. ಯಾರ ದಾಕ್ಷಿಣ್ಯಕ್ಕೂ, ಯಾರ ಒಬ್ಬರ ಹಂಗಿಗೂ ಒಳಗಾಗದೆ ಇರಿ. ಒಂದು ಮೋಹಕ್ಕೆ, ಒಂದು ಇನ್‌ಫ್ಲೂಯನ್ಸಿಗೆ ಒಳಗಾಗಿ 50 ಲಕ್ಷ ರೂಪಾಯಿ ಕೊಟ್ಟರೆ ದೇಶಕ್ಕೆ ಅನ್ಯಾಯವಾಗುತ್ತದೆ. ನಿಮಗೆ ಒಬ್ಬರ ಪ್ರಭಾವಕ್ಕೆ ಒಳಗಾಗದಂತೆ ಇರುವುದಕ್ಕೆ ಧೈರ್ಯವಿಲ್ಲ. ನಿಮ್ಮಿಂದ ಏನಾದರೂ ಕೆಲಸ ಮಾಡಿಸಬೇಕಾದರೆ, ಚುಚ್ಚಿ ಬಡಿದು ಎಬ್ಬಿಸಬೇಕಾಗಿದೆ. ಶರಾವತಿ ಹೈಡೆಲ್ ಪ್ರಾಜೆಕ್ಟಿನಲ್ಲಿ ನೀವು 30 ಲಕ್ಷ ರೂಪಾಯಿನವರೆಗೆ ಹೆಚ್ಚು ಹಣ ಕೊಟ್ಟಿದ್ದರೆ, ಅದಕ್ಕೆ ತಾವು ಜವಾಬ್ದಾರರಲ್ಲವೆ ಎಂದು ಕೇಳಬೇಕು. ಅದು ಕಂಟ್ರಾಕ್ಟುದಾರರಿಗೆ ಹೋಗಿ ನಮ್ಮ ದೇಶದ ಬೊಕ್ಕಸಕ್ಕೆ ಅಪಾರ ನಷ್ಟವಾಗಿದೆ. ಅದಕ್ಕೆ ತಾವೆಲ್ಲಾ ವೈಯುಕ್ತಿಕವಾಗಿ, ನೇರವಾಗಿ ಜವಾಬ್ದಾರರು ಎಂದು ಜನ ಅಪಾದನೆ ಮಾಡುತ್ತಾರೆ. ಸಭಾಪತಿಯವರೇ, ಪ್ರಜಾಪ್ರಭುತ್ವ ಈ ದೇಶದಲ್ಲಿ ಯಶಸ್ವಿಯಾಗಿ ಬೆಳೆಯಲು ಈ ಒಂದು ಅವಿಶ್ವಾಸ ನಿರ್ಣಯಕ್ಕೆ ಈ ಸಭೆಯ ಎಲ್ಲ ಸದಸ್ಯರೂ ಸಂಪೂರ್ಣ ಬೆಂಬಲ ಕೊಡಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ. ಈ ಮಂತ್ರಿ ಮಂಡಲ ರಾಜೀನಾಮೆ ಕೊಟ್ಟು ಜನರ ಅಗ್ನಿ ಪರೀಕ್ಷೆಗೆ ಒಳಗಾಗಿ, ಮತ್ತೆ ಪುನಃ ಮತಗಳಿಸಿ ಮೈಸೂರು ರಾಜ್ಯದ ರಾಜ್ಯಭಾರವನ್ನು ಕಟ್ಟಲಿ. ಅಂಥ ಒಂದು ಸುಯೋಗವನ್ನು ಜನತೆಗೆ ಕಲ್ಪಿಸುವುದಕ್ಕೋಸ್ಕರ ಈ ಒಂದು ಅವಿಶ್ವಾಸ ನಿರ್ಣಯವನ್ನು ಎಲ್ಲರೂ ಒಪ್ಪಿಕೊಳ್ಳಲಿ ಎಂದು ಹೇಳಿ, ಈ ನಿರ್ಣಯಕ್ಕೆ ಬೆಂಬಲ ಕೋರುತ್ತೇವೆ.

ಶ್ರೀ ಸಿ. ಎಂ. ದೇಶ್ (ಗುಬ್ಬಿ).—ಮಾನ್ಯ ಮಂತ್ರಿಗಳಾದ ಶ್ರೀ ಎಂ. ವಿ. ರಾಮರಾಯರು ನಾನು ನೋಡಲು ಹೋದಾಗ ಬಹಳ ಕರ್ಟಿಯಸ್ ಆಗಿ, ಶೇಕ್ ಹ್ಯಾಂಡ್ಸ್ ಕೊಟ್ಟು ಬರಮಾಡಿಕೊಂಡರು ; ಬಹಳ ಸಂತೋಷವಾಯಿತು. ಈವಾಗ ಜಾತೀಯತೆ ಪ್ರಶ್ನೆ ಮೇಲೆ ಕೆಲವು ಸದಸ್ಯರು ಮಾತನಾಡಿದರು. ಆ ಪ್ರಶ್ನೆ ಬಂದಾಗ ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿದೆ, ಅದಕ್ಕೆ ಯಾರ್‍ಯಾರು ಜವಾಬ್ದಾರರು, ಸಮಾಜವಾದಿ ಸಮಾಜವನ್ನು ಕಟ್ಟುವ ತಮ್ಮ ಧೋರಣೆಗೆ, ತತ್ವಕ್ಕೆ ಅದು ವಿರುದ್ಧವಾದ್ದರಿಂದ, ಈ ಜಾತೀಯತೆಯ ಕಾರ್ಯಗಳನ್ನು ಮನೋಭಾವವನ್ನು ಹೋಗಲಾಡಿಸಲು ನಿರ್ದಿಷ್ಟವಾಗಿ ಏನು ಮಾಡಿದ್ದೀರಿ ?

ಶ್ರೀ ಟಿ. ಎಸ್. ಶಿವಣ್ಣ (ಮಧುಗಿರಿ).—63 ಮಂದಿ ಪಬ್ಲಿಕ್ ಪ್ರಾಸಿಕ್ಯೂಟರುಗಳು ಮತ್ತು ಗವರ್ನ್‌ಮೆಂಟ್ ಪ್ಲೀಡರುಗಳಲ್ಲಿ, 53 ಜನ ನ್ಯಾಯಾಂಗ ಮಂತ್ರಿಗಳ ಜಾತಿಯವರೇ ನೇಮಕವಾಗಿದ್ದಾರೆಂದು ಈ ಸಭೆಯಲ್ಲಿ ಅನೇಕರು ಮಾತನಾಡಿದರು. ಅದಕ್ಕೆ ಮಾನ್ಯ ನ್ಯಾಯಾಂಗ ಮಂತ್ರಿಗಳು ಸರಿಯಾಗಿ ಉತ್ತರ ಕೊಡಲಿಲ್ಲ. ಅದಕ್ಕೆ ಈಗ ಉತ್ತರ ಕೊಡಬೇಕು.

ಶ್ರೀ ಎಸ್. ರಾಜಗೋಪಾಲ್ (ಕೆ. ಜಿ. ಎಫ್.).—ನಿನ್ನೆ ದಿವಸ ಸರಕಾರದ ಮೇಲೆ ಒಂದು ಅಪಾದನೆ ಮಾಡಿದ್ದೇನೆ. ಅದಕ್ಕೆ ಉತ್ತರ ಬರಲಿಲ್ಲ. ಇನಾಂ ಆಬಾಲಿಷನ್ ಇಲಾಖೆಯಲ್ಲಿ 30 ಲಕ್ಷ ರೂಪಾಯಿವರೆಗೆ ದುರುಪಯೋಗ, ಮೋಸವಾಗಿದೆ. ಅಲ್ಲಿ ಕಳ್ಳ ರಸೀತಿಗಳನ್ನು ಬರಸಿ 5 ಸಾವಿರ ರೂಪಾಯಿ ಕೊಡಬೇಕಾದವರಿಗೆ, ಇನಾಂ ಡೆಪ್ಯುಟಿ ಕಮಿಷನರು 10-15 ಸಾವಿರ ರೂಪಾಯಿವರೆಗೆ ಕೊಟ್ಟಿದ್ದಾರೆ, ಅಂತ ಹೇಳಿದೆ. ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದು, ಇಂಟರ್‌ವ್ಯೂ ಕೇಳಿದೆ, ಅವರು ಇಂಟರ್‌ವ್ಯೂನೂ ಕೊಡಲಿಲ್ಲ, ಅದಕ್ಕೆ ಉತ್ತರವನ್ನೂ ಕೊಡಲಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ನನ್ನ ಹತ್ತಿರ ಬಂದು ಹೇಳಬಹುದು. ಅವರ ಕಾಗದ ಏನೂ ಬಂದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಇನಾಂ ಅಬಾಲಿಷನ್ ಅಕ್ಟ್ ಪ್ರಕಾರ ಕಾಂಪೆನ್ಸೇಷನ್ ಕೊಡುವುದರಲ್ಲಿ ವ್ಯತ್ಯಾಸಗಳಿರಬಹುದು. ಅದು semi-judicial body. It is for that officer to order the compensation.

ಶ್ರೀ ಕೆ. ಲಕ್ಕಪ್ಪ.—ಕೆಲವು ಮಂತ್ರಿಗಳು ಸಾರ್ವಜನಿಕ ಕೆಲಸಗಳಲ್ಲಿ ಕೈಹಾಕಿ ಅಧಿಕಾರಿಗಳ ಮೇಲೆ ಪ್ರಭಾವ ಬೀರುತ್ತಾರೆ. ಸರ್ಕಾರದ ಗಮನಕ್ಕೆ ತಂದಾಗ ಒಂದು ಸಲ ಸರಿಪಡಿಸಿದ್ದರು. ಈ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದಕ್ಕೆ ಉತ್ತರ ಹೇಳಲಿಲ್ಲ. ಇಂಥ ಮಂತ್ರಿಗಳು ಮಂತ್ರಿಮಂಡಲದಲ್ಲಿದ್ದಾರೆ, ಮುಖ್ಯ ಮಂತ್ರಿಗಳಿಗೆ ಗೊತ್ತಾಗುವುದಿಲ್ಲ. ಅವರನ್ನು ಬಹಳ ಒಳ್ಳೆಯವರೆಂದು ಇಟ್ಟುಕೊಂಡಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ.—ಅವರು ಏನೋ ಹೇಳಿದರಂತೆ ಸರಿ ಮಾಡಿದರಂತೆ. ಮತ್ತೊಂದು ಸಾರಿ ಹೇಳಿದರೆ ಸರಿಮಾಡುತ್ತೇನೆ.

Mr. SPEAKER.—The question is :

ಶ್ರೀ ಜಿ. ಮರುಳಪ್ಪ (ಕಡೂರು).—ಇನ್ನೂ ಎರಡು ನಿಮಿಷಗಳಿವೆ. ನಾನು ಒಂದು ವಿಷಯ ಕೇಳಬೇಕಾಗಿದೆ...............

Mr. SPEAKER.—I am not allowing. I am putting it to vote of the House. The Hon'ble Members must know that when I am on my legs, nobody should stand.

ಶ್ರೀ ಎಸ್. ಗೋಪಾಲಗೌಡ.—ನಾನು ಮೊದಲೇ ನಿಂತುಕೊಂಡಿದ್ದೆ, ಸ್ವಾಮಿ.

Mr. SPEAKER.—Is it a superior right? I am sorry, I am not allowing.

The question is :

"That this House has no confidence in the Council of Ministers of the State of Mysore."

The motion was negatived.

Sri B. L. GOWDA.—Sir, I press for a division.

Mr. SPEAKER.—Yes. The bell will be rung.

(*The bell rang for two minutes*)

Mr. SPEAKER.—The question is :

"That this House has no confidence in the Council of Ministers of the State of Mysore."

Sri K. LAKKAPPA.—Sir, on a point of order. The Hon'ble Law Minister..........

Mr. SPEAKER.—There is no Point of Order when the division is on.

Sri S. M. KRISHNA.—The Hon'ble Member Sri Kundur Rudrappa is not in his seat. His vote cannot be counted. So, one vote has to be deducted.

The House divided.

Mr. SPEAKER.—The result of the division is Ayes 47, Noes 115.

The motion was negatived.

Introduction of bill.

Sri K. PUTTASWAMY (Minister for Municipal Administration).—Sir, I introduce the City of Bangalore Municipal Corporation (Amendment)-Bill, 1963, which has been published in the *Mysore Gazette.*

Mr. SPEAKER.—The City of Bangalore Municipal Corporation (Amendment) Bill, 1963, is introduced.

THE MYSORE LAND REVENUE SURCHARGE (AMENDMENT BILL, 1963.

Motion to consider.

Sri M. V. KRISHNAPPA (Minister for Revenue).—Sir, I beg to move :

> "That the Mysore Land Revenue Surcharge (Amendment) Bill, 1963, be taken into consideration."

Mr. SPEAKER.—Motion moved :

> "That the Mysore Land Revenue Surcharge (Amendment) Bill, 1963, be taken into consideration."

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಇದು ಒಂದು ಬಹಳ ಚಿಕ್ಕದಾದಂಥ ತಿದ್ದುಪಡಿ. ಈ ಮಾನ್ಯ ಸಭೆಯಲ್ಲಿ ಮೈಸೂರು ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜ ಬಿಲ್ ಪಾಸಾಗಿದೆ. ಸಭೆ ಒಪ್ಪಿಕೊಂಡ ಮೇಲೆ ಸರ್‌ಚಾರ್ಜ್ ಬಿಲ್ ಜಾರಿಗೆ ತಂದಿದ್ದೇವೆ. ಅದನ್ನು ಕಾರ್ಯರೂಪಕ್ಕೆ ತರುವಾಗ್ಗ ಕೆಲವು ಎಡರು ತೊಡರು ಬಂದು ಕ್ಲಾರಿಫಿಕೇಷನ್ ಕೇಳಿದ್ದರಿಂದ 6–7 ತಿಂಗಳು ಅನುಭವದಿಂದ ಈ ಕಾನೂನಿನಲ್ಲಿ 2–3 ತಿದ್ದುಪಡಿ ಮಾಡುವುದರಿಂದ ಪರಿಸ್ಥಿತಿ ತಿಳಿಯಾಗುತ್ತದೆ. ಇಲ್ಲದಿದ್ದರೆ ಅನಾಮಲೀಜ ಇರುತ್ತದೆ ಎಂದು ಕಂಡು ಬಂದಿತು. ಅದರಿಂದ ಈಗ ಈ 3 ತಿದ್ದುಪಡಿ ತಂದಿದ್ದೇವೆ, ಇವು ಬಹಳ ಸುಲಭವಾದ ತಿದ್ದುಪಡಿಗಳು. ಇವುಗಳಿಂದ ಸರ್ಕಾರಕ್ಕೆ ಲಾಭವಿಲ್ಲ ನಷ್ಟವಿಲ್ಲ. ಕಾನೂನು ಆದಷ್ಟು ತಿಳಿ ಆಗಿರಬೇಕು ನಿರ್ವಿವಾದವಾಗಿರಬೇಕು ಎಂಬ ದೃಷ್ಟಿಯಿಂದ ಮುಖ್ಯವಾದ ಈ 3 ತಿದ್ದುಪಡಿಗಳನ್ನು ತಂದಿದ್ದೇವೆ. ಸರ್‌ಚಾರ್ಜ್ ಕಾನೂನಿನಲ್ಲಿ, ವಾಟರ್ ಸೆಸ್, ವಾಟರ್ ರೇಟ್, ಅಥವಾ ಇರಿಗೇಷನ್ ಸೆಸ್ 15 ರೂಪಾಯಿಗಿಂತ ಕಡಿಮೆ ಕೊಡುತ್ತಿದ್ದರೆ ಸರಚಾರ್ಜ ಹಾಕಬೇಕೆಂದು ಇದೆ. ಅದರಂತೆ 15 ರೂಪಾಯಿಗಿಂತ ಜಾಸ್ತಿ ವಾಟರ್ ಸೆಸ್, ವಾಟರ್ ರೇಟ್ ಅಥವಾ ಇರಿಗೇಷನ್ ಸೆಸ್ ಕೊಡುವವರಿಗೆ ಸರ್‌ಚಾರ್ಜ ಹಾಕಬಾರದು ಎಂದು ಎಕ್ಷೆಂಪಷನ್ ಕ್ಲಾಜ ಇದೆ. ಭತ್ತ ಬೆಳೆಯುವ ವೆಟ್ ಲ್ಯಾಂಡ್ಸ ಇರುವ ರೈತ ಒಂದು ಎಕರೆಗೆ 12 ರೂಪಾಯಿ ವಾಟರ್ ಸೆಸ್ ಕೊಡುವುದಲ್ಲದೆ ಅದರ ಎರಡರಷ್ಟು ಸರ್‌ಚಾರ್ಜ ಅಂದರೆ 24 ರೂಪಾಯಿ ಕೊಡಬೇಕಾಗುತ್ತದೆ.

ವೆಟ್ ಲ್ಯಾಂಡ್ಸ್‌ಗೆ ಇದು ಡಬ್ಬಲ್ ಇದೆ. ಆದರೆ ಹೆಚ್ಚು ನೀರು ತೆಗೆದುಕೊಂಡು ಕಬ್ಬು ಬೆಳೆಯುವ ರೈತನು ಒಂದು ಎಕರೆಗೆ 18 ರೂಪಾಯಿ ವಾಟರ್ ಸೆಸ್ ಕೊಡುತ್ತಾನೆ. ಅಂಥ ರೈತನು ಸರ್ ಚಾರ್ಜ ಕೊಡಬೇಕಾಗಿಲ್ಲ.

He is already paying Rs. 15. It is a big amount.

(MR. DEPUTY SPEAKER in the Chair.)

ಇದನ್ನು ಒಳ್ಳೇ ದೃಷ್ಟಿಯಿಂದ ಮಾಡಿದೆ. ಇದರಿಂದ ಅನೇಕರಿಗೆ ಅನುಕೂಲವಾಗಿದೆ. ಭತ್ತಕ್ಕೆ ನೀರು ಒದಗಿಸಿದರೆ ಒಂದು ಎಕರೆಗೆ ಹತ್ತು—ಹನ್ನೆರಡು ರೂಪಾಯಿ ವಾಟರ್ ಸೆಸ್ ಕೊಡಬೇಕಾಗುತ್ತದೆ. ಇದಲ್ಲದೆ ಡಬ್ಬಲ್ ಸರಛಾರ್ಜ ಕೊಡಬೇಕಾಗಿರುವುದರಿಂದ ಅಂಥ ರೈತನು ಒಂದು ಎಕರೆಗೆ 24 ರೂಪಾಯಿ ಕೊಡಬೇಕಾಗುತ್ತದೆ. ಆದರೆ ಕಬ್ಬು ಬೆಳೆಯುವ ರೈತ ಸರಛಾರ್ಜ ಕೊಡಬೇಕಾಗಿಲ್ಲ.

Whereas the paddy grower for the fault of growing paddy, he has to pay Rs. 24.

ಕಬ್ಬು ಬೆಳೆಯುವ ರೈತನು ಹೆಚ್ಚು ನೀರು ಉಪಯೋಗಿಸುತ್ತಾನೆ. 18 ರೂಪಾಯಿ ವಾಟರ್ ಸೆಸ್ ಅಷ್ಟೇ ಕೊಡುತ್ತಾನೆ. ಸರಚಾರ್ಜ್ ಕೊಡಬೇಕಾಗುವುದಿಲ್ಲ. ಕಾನೂನು ಆಧಾರದ ಮೇಲೆ ಅವನು ತಪ್ಪಿಸಿಕೊಳ್ಳುತ್ತಾನೆ. ಆದುದರಿಂದ ಎಕ್ಸೆಂಪ್ಷನ್ ಲಿಮಿಟ್ 15 ರೂಪಾಯಿ ಬದಲು 30 ರೂಪಾಯಿ ಮಾಡುವುದರಿಂದ ಎಲ್ಲವೂ ಸರಿಹೋಗುತ್ತದೆ. 18 ರೂಪಾಯಿ ಕೊಡತಕ್ಕಂಥವನು ಸರಛಾರ್ಜ ಡಬ್ಬಲ್ ಕೊಡಬೇಕಾಗುತ್ತದೆ. ತಪ್ಪಿಸಿಕೊಂಡು ಹೋಗಲು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಮ್ಯಾಕ್ಸಿಮಂ ಲಿಮಿಟ್ 15ರ ಬದಲು 30 ಮಾಡಿದ್ದೇವೆ. ಕಾನೂನಿನಲ್ಲಿರುವ ಅನಾಮಲೀಜ್ ತಪ್ಪಿಸಲು ಈ ರೀತಿ ಮಾಡಬೇಕಾಗುತ್ತದೆ. ದೇಶದಲ್ಲಿ ಇಂದು ಆಹಾರ ಹೆಚ್ಚು ಉತ್ಪಾದನೆ ಮಾಡಬೇಕಾಗಿರುವ ಸಮಯದಲ್ಲಿ ಭತ್ತ ಬೆಳೆಯುವ ರೈತನು ಒಂದು ಎಕರೆಗೆ 24 ರೂಪಾಯಿ ಕೊಟ್ಟು, ಕಬ್ಬು ಬೆಳೆಯುವ ರೈತನು ಹೆಚ್ಚು ನೀರು ಉಪಯೋಗಿಸಿ ಒಂದು ಎಕರೆಗೆ 18 ರೂಪಾಯಿ ವಾಟರ್ ಸೆಸ್ ಕೊಟ್ಟು ಕಾನೂನು ಆಧಾರದ ಮೇಲೆ ಸರಛಾರ್ಜ ಕೊಡುವುದನ್ನು ತಪ್ಪಿಸಿಕೊಂಡು ಹೋಗುತ್ತಾನೆ. ಆದುದರಿಂದ ಮ್ಯಾಕ್ಸಿಮಂ ಲಿಮಿಟ್ 30 ರೂಪಾಯಿ ಇರಬೇಕು ಎಂಬುದು ಒಂದು ಮುಖ್ಯ ತಿದ್ದುಪಡಿ.

ಇನ್ನು ಎರಡನೇಯದಾಗಿ ಲ್ಯಾಂಡ್ ಕ್ಲಾಸಿಫಿಕೇಷನ್, ವೆಟ್ ಗಾರ್ಡನ್ ಡ್ರೈ ಲ್ಯಾಂಡ್ಸ್ ಎಂದು ಮಾಡಿದೆ. ನಮ್ಮ ದೇಶದಲ್ಲಿ ಕಾಫಿ ಹೆಚ್ಚಾಗಿ ಬೆಳೆಯುತ್ತದೆ. ಪರದೇಶಕ್ಕೂ ಕಳಿಸುತ್ತೇವೆ. ಸರ್ವೆ ರಿಕಾರ್ಡುಗಳಲ್ಲಿ ಕಾಫಿ ಬೆಳೆಯುವ ಭೂಮಿಯನ್ನು ಕಾಫಿಖರಾಬ್ ಲ್ಯಾಂಡ್ಸ್ ಎಂದು ಕ್ಲಾಸಿಫೈ ಮಾಡಿದ್ದಾರೆ. ಕಾಫಿ ಬೆಳೆಯುವ ಪ್ರದೇಶಕ್ಕೆ ಡ್ರೈ ಲ್ಯಾಂಡ್ಸ್ ಅಸೆಸ್ಸಮೆಂಟ್ ಹಾಕಿದ್ದಾರೆ.

Coffee planters come neither under wet nor dry. So, it is not covered by the Surcharge Act. They are going to court.

ಇದು ಸರಿಯಲ್ಲ ಎಂದು ವೆಟ್, ಗಾರ್ಡನ್, ಡ್ರೈ ಲ್ಯಾಂಡ್ಸ ಈ ಮೂರು ಕ್ಲಾಸಿಫಿಕೇಶನ್ ಜೊತೆಗೆ ಇನ್ನೊಂದು ನಾಲ್ಕನೇ ಕ್ಲಾಸ್ ಅದರ್ ಲ್ಯಾಂಡ್ಸ್ ಎಂದು ಕ್ಲಾರಿಫೈ ಮಾಡಲು ತಿದ್ದುಪಡಿ ತಂದಿದ್ದೇವೆ.

ಇನ್ನು ಮೂರನೆ ತಿದ್ದುಪಡಿ ಅಂದರೆ;

Agricultural lands converted into non-agricultural lands ಮಾಡಿ ಉಪಯೋಗಿಸುತ್ತಾರೆ. ಹಿಂದಕ್ಕೆ ಕನ್‌ವರ್ಷನ್ ಫೈನ್ ಎಂದು ಹಾಕಿ ಬಿಟ್ಟು ಕೇಳುತ್ತಾ ಇರಲಿಲ್ಲ. ಡ್ರೈ ರೇಟ್ಸ್ ಪ್ಲಾಂಟೇಷನ್ಸ್‌ಕ್ಕೆ ಹಾಕುತ್ತಿದ್ದರು.

Almost equal to the adjoining dry rates.

ಮನೆ ಕಟ್ಟಬೇಕು, ಒಂದು ಫ್ಯಾಕ್ಟರಿ ಮಾಡಬೇಕು ಎಂಬುದಕ್ಕೆ ನಾನ್-ಅಗ್ರಿಕಲ್ಚರಲ್ ಲ್ಯಾಂಡ್ ಎಂದು ಕನ್‌ವರ್ಷನ್ ಮಾಡಿಕೊಳ್ಳುವುದರಿಂದ ಲ್ಯಾಂಡ್ ರೆವೆನ್ಯೂ ಕೊಡುತ್ತಾ ಇರಲಿಲ್ಲ. ಈ ಕನವರ್ಷನ್‌ದಿಂದ.

For perpetuity, the man had freedom to use that land for whatever purpose he wanted.

ಈ ರೀತಿ ಕನವರ್ಟ್ ಮಾಡಿದ ನಂತರ ಅದು .

From that day that land will be deducted from the agricultural land.

(ಶ್ರೀ ಎಂ. ವಿ. ಕೃಷ್ಣಪ್ಪ)

ಈ ರೀತಿ ಮಾಡಿದ ಮೇಲೆ ಅಂಥ ಜಮೀನಿನ ಮೇಲೆ ಲ್ಯಾಂಡ್ ರೆವಿನ್ಯೂ ಕೊಡುತ್ತಾ ಇರಲಿಲ್ಲ. ಈ ಪದ್ಧತಿ ಜಾರಿಗೆ ಬಂದಿದೆ.

Except Madras Karnataka, Bombay and Hyderabad, the existing system is, we levy Rs. 400/- per acre. The minimum is Rs. 40/.

4-30 P.M.

ಬೆಂಗಳೂರು ಪಕ್ಕದಲ್ಲಿ ಅಜೂ ಬಾಜೂ ಒಂದು ಎಕರೆ ಅಗ್ರಿಕಲ್ಚರಲ್ ಲ್ಯಾಂಡನ್ನು ಮನೆ ಕಟ್ಟಿ ಕೊಳ್ಳಲಿಕ್ಕೆ ಕನ್‌ವರ್ಷನ್ ಮಾಡಿಕೊಡಬೇಕೆಂದು ಕೇಳಿದರೆ where he was paying Rs. 2 per acre when he was growing agricultural crops, the day it has been converted to non-agricultural use, he has to pay Rs. 400 per acre. At the end of 10 years we may increase it, but it never gets reduced. So a man living in cities, especially in Bangalore, he has to pay Rs. 400 per acre if he converts agricultural land to non-agricultural use.

ಅದು ಬಹಳ ಅಬ್‌ನಾರ್ಮಲ್ ಆಗುತ್ತದೆ. ನಾನ್ ಅಗ್ರಿಕಲ್ಚರಲ್ ಟ್ಯಾಕ್ಸ್ ಜೊತೆಗೆ:

The local Corporations are having a number of other taxes over that land which the man converts from agricultural land into non-agricultural land. Where the land is put to non-agricultural use, they have their own taxes.

ಈ ದೃಷ್ಟಿಯಿಂದ ಮನೆ ಮೇಲೆ ನಾಲ್ಕೈದು ಟ್ಯಾಕ್ಸ್‌ಗಳು ಇವೆ, ಕಟ್ಟಿದ ಇಲ್ಲದೇ ಇದ್ದರೂ ಹಾಕುತ್ತಾರೆ ಬೆಂಗಳೂರು ಸಿಟಿಯಲ್ಲಿರುವವರನ್ನು ಕೇಳಿ ಹೇಳುತ್ತಾರೆ.

Even though you don't put up a building on the non-agricultural land, you have to pay a yearly tax, not very small sums, in most cases it is big.

ಆದ್ದರಿಂದ 400 ರೂಪಾಯಿ ಕೊಡುತ್ತಾ ಇರುವವರಿಂದ 800 ರೂಪಾಯಿ ವಸೂಲು ಮಾಡ ಬಾರದೆಂದು ನಾನ್ ಅಗ್ರಿಕಲ್ಚರಲ್ ಟ್ಯಾಕ್ಸ್‌ಗೆ ಸರ್‌ಛಾರ್ಜ್ ಅನ್ವಯವಾಗುವುದಿಲ್ಲ ಎಂದು ಕ್ಲಾರಿಫೈ ಮಾಡಿ ಮೂರು ಸಣ್ಣ ತಿದ್ದುಪಡಿಗಳನ್ನು ತಂದಿದ್ದೇವೆ. ಇದನ್ನು ಮಾನ್ಯ ಸಭೆ ಒಪ್ಪುತ್ತದೆ ಎಂದು ತಿಳಿದುಕೊಂಡಿದ್ದೇನೆ.

ಚುನಾವಣೆಯ ಕಾಲದಲ್ಲಿ ಮಾನ್ಯ ಸದಸ್ಯರು ಭಾಷಣ ಮಾಡಬಹುದು. ಸರ್ಛಾರ್ಜ್‌ನಿಂದ ತೊಂದರೆಯಾಗಿದೆ ಎಂದು, ನಾನು ಅನೇಕ ಸಲ ಮಾನ್ಯ ಸಭೆಯಲ್ಲಿ ಹೇಳಿದ್ದೇನೆ ನಾವು ಸರ್ಛಾರ್ಜ್ ಹಾಕಬೇಕೆಂದು ಇರಲಿಲ್ಲ. ಲ್ಯಾಂಡ್ ರೆವಿನ್ಯೂ ಸೆಟ್ಲ್‌ಮೆಂಟ್ ಆಗುತ್ತಾ ಇದೆ, ರೀಸರ್ವೇ ಸೆಟ್ಲ್‌ಮೆಂಟ್ ಮುಗಿದ ಮೇಲೆ ಫಲವತ್ತಾದ ಭೂಮಿ ಇರುವವನು ಹೆಚ್ಚು ಕಂದಾಯ ಕೊಡುತ್ತಾನೆ ಕಡಿಮೆ ಫಲವತ್ತಾದ ಭೂಮಿ ಇರತಕ್ಕವನು ಕಡಿಮೆ ಕಂದಾಯ ಕೊಡುತ್ತಾನೆ-ಕ್ಯಾಟಗರಿ ಒಂದು, ಎರಡು, ಮೂರು ಅಂತ ಮಾಡಿ.

According to its fertility, nearness to the market, various factors, they decide the land tax per acre.

Nearly 75-80 per cent of that work is completed. The other 20 per cent work will be done within the coming 1 or 1½ years.

ಅದು ಬಹುಶಃ ಒಂದು; ಒಂದೂವರೆ ವರ್ಷ ಆಗುತ್ತದೆ. ಈಗ ಮೈಸೂರು ಸರ್ಕಾರಕ್ಕೆ ಭೂ ಕಂದಾಯದಿಂದ 4 ಕೋಟಿ ರೂಪಾಯಿ ಉತ್ಪನ್ನ ಇದೆ. ರೀಸರ್ವೆ ಸೆಟ್ಲ್‌ಮೆಂಟ್ ಆದ ತಕ್ಷಣ ಅದು ಹತ್ತು ಕೋಟಿ ಆಗುವ ಸಂಭವ ಇದೆ. ಏಕೆಂದರೆ ರೀಸರ್ವೇ ಸೆಟ್ಲ್‌ಮೆಂಟ್ 35 ವರ್ಷದ ಹಿಂದೆ ಆದದ್ದು. ಅದು ಸೈಂಟಿಫಿಕ್ ಆಗಿ ರೀಸರ್ವೇ ಆದನಂತರ ಫಲವತ್ತಾದ ಭೂಮಿ ಇದ್ದವನು ಹೆಚ್ಚು ಕೊಡಬೇಕಾಗುತ್ತದೆ. ಕಡಿಮೆ ಇದ್ದವನು ಕಡಿಮೆ ಕೊಡಬೇಕಾಗುತ್ತದೆ.

That will be possible only after the survey settlement is over. Til then we don't want to impose any surcharge. That was the decision of the Government.

ತುರ್ತು ಪರಿಸ್ಥಿತಿ ಬಂದು ಕೇಂದ್ರ ಸರ್ಕಾರದವರು ದೇಶಕ್ಕೆ ಕೊಡುತ್ತಾ ಇದ್ದ ಸಹಾಯವನ್ನು ಹೆಚ್ಚು ಮಾಡಲಿಕ್ಕೆ ಸಾಧ್ಯವಿಲ್ಲದೇ ಇರುವಾಗ ಅವರನ್ನು ನಾವು ಹೆಚ್ಚಿಗೆ ಕೇಳಲಿಕ್ಕೆ ಆಗುವುದಿಲ್ಲ, ದೇಶ ರಕ್ಷಣೆಗೆ ಕೇಂದ್ರ ಸರ್ಕಾರದವರು ಹಣವನ್ನು ಖರ್ಚು ಮಾಡುತ್ತಾ ಇರುವಾಗ ಪ್ರತಿಯೊಬ್ಬರೂ ರೈತರಾಗಲೀ ಯಾರೇ ಆಗಲಿ ಸಾಧ್ಯವಾದಷ್ಟು ಸಹಾಯ ಮಾಡಿ ನಮ್ಮ ಕೈಯಲ್ಲಿ ಎಷ್ಟಾಗುತ್ತದೆಯೋ ಅಷ್ಟನ್ನು ಕೊಡೋಣ ಎಂಬ ದೃಷ್ಟಿಯಿಂದ ಸರ್ಚಾರ್ಜ್ ಬಿಲ್ಲನ್ನು ತಂದು ಎರಡು ವರ್ಷಕ್ಕೆ ಸಭೆಯ ಒಪ್ಪಿಗೆಯನ್ನು ಪಡೆದಿದ್ದೇವೆ ಎಂಬುದು ತಮಗೆ ಗೊತ್ತೇ ಇದೆ.

It is only for two years this Surcharge Bill has been approved by the Assembly: After two years, we are going to withdraw it when the land revenue settlement is completed.

ಈಗ ಒಂದು ವರ್ಷ ಆಯಿತು ಇನ್ನೊಂದು ವರ್ಷ ಇದೆ. ಈ ಸರ್ಚಾರ್ಜ್‌ನಿಂದ ಎರಡು ಮೂರು ಕೋಟಿ ರೂಪಾಯಿ ಹೆಚ್ಚಾಗಿ ಬರುತ್ತದೆ, ರೀಸರ್ವೇ ಸೆಟ್ಲಮೆಂಟ್ ಆದಮೇಲೆ ಹತ್ತು ಕೋಟಿ ರೂಪಾಯಿಗಳಷ್ಟು ಬರುತ್ತದೆ.

We are expecting Rs. 6 crores more. We are anxious to bring as early as possible permanent settlement and withdraw the Surcharge Bill that has been voted by this House.

ಇದು ಮಾನ್ಯ ಸಭೆಗೆ ಗೊತ್ತಿದೆ ಆಗಲೇ ಒಂದೆರಡು ಸಲ ಹೇಳಿದ್ದೇನೆ. ಸರ್ಚಾರ್ಜ್ ಹಾಕಬೇಕೆಂದು ಸರ್ಕಾರದವರಿಗೆ ಇರಾದೆ ಇಲ್ಲವೇ ಇದ್ದರೂ ಕೂಡ ದೇಶದಲ್ಲಿ ತುರ್ತುಪರಿಸ್ಥಿತಿ ಬಂದು ಕೇಂದ್ರ ಸರ್ಕಾರದವರಿಗೆ ಎಲ್ಲ ಪ್ರಜೆಗಳೂ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ಲ್ಯಾಂಡ್ ರೆವಿನ್ಯೂ ಸರ್ಚಾರ್ಜ್ ತಿದ್ದುಪಡಿ ಬಿಲ್ಲನ್ನು ತಂದಿದ್ದೇವೆ, ದೇಶದಲ್ಲಿ ಪ್ರತಿಯೊಬ್ಬರೂ ದೇಶ ರಕ್ಷಣೆಗೆ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧರಾಗಿದ್ದಾರೆ, ಇದನ್ನೆಲ್ಲಾ ಮಾನ್ಯ ಸದಸ್ಯರು ಅರಿತುಕೊಂಡು ಇದನ್ನು ಒಪ್ಪುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

† **Sri V. S. PATIL.**—I was expecting some relief at the hands of our Honourable Minister so far as our lands in North Karnatak are concerned and we had great hopes that some relief would be given to us. But what we find from this Bill is, there is absolutely no question of giving any relief to anybody. But Government has skilfully put up a provision by which certain persons get exemption after taxation. As I could find from the Statement of Objects and Reasons, the person who was paying Rs. 18, per acre on land growing sugarcane, has now to pay Rs. 30; that is the maximum. So instead of giving any relief to the persons who have already been charged heavily, unscientifically and as compared to other area or other land, their taxes are more. Still those higher taxes have to be paid double. There is absolutely no relief at all. Then the Honourable Minister has given a promise to us that he is going to bring to bring a Bill for removing the defects in this particuor Act. We expected that some relief to the people in that area would be given. But, in spite of giving any relief or remission, the Hon'ble Minister is very skilfully suggesting like a doctor who benumbs that part of the body that is to be operated upon, that this Bill is to be accepted. He suggests to talk more and see that more money comes to the treasury. In our area the taxation was nearly double. Since 1948 March, we were agitating in the Bombay Assembly for reconsidering this aspect. They were giving us promises and before those promises were fulfilled, those parts came into the Mysore State. Here also, from 6 to 7 years, we also urging this question and we are all along paying heavy taxes when compared to other parts. Under this Bill, we have to pay double. I expected some relief, say, including the land assessmeut as well as the surcharge; it should not be more than 20 to 25 rupees. Then, our people

(SRI V. S. PATIL)

could have got some relief. On the other hand, great injustice is being done by this Bill to the people of North Karnatak who are already paying more taxes on land than their counter-parts this side. This injustice that is done to them should not be perpetuated or continued any longer. The Hon'ble Minister said that is only for two years. But, we do not know whether the emergency would be over by two years or it would continue further. So, this is a step-motherly treatment meted out to the people of our area, especially Belgaum area. We are pressing this before the Government again and again. Sir, I want a clarification from the Hon'ble Minister. In the Statement of Objects and Reasons in para 3, the land under coffee cultivation is classified in the survey records as coffee kharab land. I do not know the meaning by the survey settlement people to this land. Kharab means useless. If a land is of 25 acres and if any nala or road passes through it, then to that extent it will be kharab land. So, I do not know why this word is used here. This would completely mislead. Sir, I request the Minister to see his way to have some reduction, in the tax, whether land revenue or water rates, etc., so far as our area is concerned.

ಶ್ರೀ ಎನ್. ಎ. ಕರಿಲಿಂಗಣ್ಣನವರು (ಗೋಕಾಕ್-I).—ಸ್ವಾಮಿ, ಈಗ ಉತ್ತರ ಕರ್ಣಾಟಕದಲ್ಲಿರತಕ್ಕ ರೈತರಿಗೆ, ಅಂದರೆ ಘಟಪ್ರಭಾ ಕೆನಾಲ ಕೆಳಗಿರತಕ್ಕ ರೈತರಿಗೆ ನೀರಿನ ಕರಭಾರ ಸೆಸ್ಸು ಇನ್ನೂ ಅನೇಕ ಕರಭಾರಗಳು ಮತ್ತು ಇದರಮೇಲೆ ಸರ್‌ಚಾರ್ಜ್ ಹಾಕಿದರೆ ಭಾರಿ ಅನ್ಯಾಯವಾಗುವುದು. ಆದರೆ ರಾಜ್ಯದಲ್ಲಿ ಎಲ್ಲರಿಗೂ ಒಂದೇ ರೀತಿಯ ಕರಗಳನ್ನು ಹಾಕತಕ್ಕದ್ದು ನ್ಯಾಯ. ಈ ಹಿಂದೆ 1963 ರೊಳಗಾಗಿ ಈ ಕರಭಾರದ ಏಕರೂಪತೆಯನ್ನು ಮಾಡುವುದಾಗಿ ಶ್ರೀ ಡೆ॥ ಸ್ಪೀಕರ್ ಅವರ ಮುಂದೆ ತಿಳಿಸಲಾಗಿತ್ತು. ಇನ್ನೂ ಇದು ಆಗಿಲ್ಲ. ಆದ್ದರಿಂದ ಯಾವಾಗ ಇದನ್ನು ಕಡಮೆ ಮಾಡುತ್ತಾರೆ ಎಂಬುದನ್ನು ಹೇಳಬೇಕಾಗಿ ವಿನಂತಿ. ಇಷ್ಟೇ ನಾನು ಕೇಳಬೇಕೆಂದಿದ್ದ ವಿಚಾರ.

† ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸ್ವಾಮಿ, ಈಗ ಈ ಮಾನ್ಯ ಸಭೆಯ ಮುಂದೆ ಬಂದಿರತಕ್ಕ 1963ನೆಯ ಮೈಸೂರು ಭೂಕಂದಾಯ (ಸರ್‌ಚಾರ್ಜ್) ತಿದ್ದುಪಡಿ ಮಸೂದೆಯನ್ನು ನಾನು ವಿರೋಧಿಸುತ್ತ, ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ.

ಸ್ವಾಮಿ, ಈಗಾಗಲೇ ಈ ಮಸೂದೆ 1961ರಲ್ಲಿ ಬಂದು 1962ರಲ್ಲಿ ಒಂದಾವರ್ತಿ ಆಗಲೇ ತಿದ್ದುಪಡಿ ಆಗಿದೆ. ಈಗ ಮತ್ತೆ 1963ರಲ್ಲಿ ಮತ್ತೊಂದು ತಿದ್ದುಪಡಿಯಾಗಬೇಕೆಂದು ಈಗ ಸಭೆಯ ಮುಂದೆ ತಂದಿದ್ದಾರೆ. ಹೀಗೆ ನಾವು ದಿನವೂ ಹೀಗೆ ಕಾನೂನುಗಳನ್ನು ಶಾಸನ ಕಡತಕ್ಕೇರಿಸುತ್ತಾ ಹೋದರೆ ಇದರಿಂದ ಜನರಿಗೇನೂ ಒಳ್ಳೆಯದಾಗುವುದಿಲ್ಲ. ಇದು ದೇಶದ ಒಂದು ದುರದೃಷ್ಟ ಎಂದು ಹೇಳುತ್ತೇನೆ. ಇದನ್ನು ನೋಡುವುದಕ್ಕೆ ನನಗೆ ತುಂಬಾ ಬೇಸರವಾಗುತ್ತದೆ. ಈ ಕಾನೂನುಗಳನ್ನು ಮಾಡುತ್ತಿರುವ ವಿಚಾರದಲ್ಲಿ ಒಬ್ಬರು ನನ್ನ ಕ್ಷೇತ್ರದಲ್ಲಿ ಒಂದು ವ್ಯಂಗರೀತಿಯಲ್ಲಿ ಹೀಗೆ ಕೇಳಿದರು:— ನೀವು ಪ್ರತಿ ದಿನವೂ ಅಲ್ಲಿ ಕುಳಿತು ಹೀಗೆ ಕಾನೂನುಗಳನ್ನು ಮಾಡುತ್ತಿರುವುದು ವಕೀಲರಿಗೆ ಸಂಪಾದನೆ ಕಡಮೆಯಾಗಿದೆ, ಅದನ್ನು ಈಗ ಜಾಸ್ತಿಮಾಡಬೇಕೆಂದು ಹೀಗೆ ಮಾಡುತ್ತಿದ್ದರೋ ಅಥವಾ ಈ ಕಾನೂನುಗಳನ್ನು ಮಾಡತಕ್ಕ ಮುಖ್ಯ ಕಛೇರಿಯಲ್ಲಿ ಸರಿಯಾಗಿ ಕಾನೂನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಶಕ್ತಿಯಿಲ್ಲದವರು ಇರುವುದರಿಂದ ಹೀಗೆ ಮಾಡುತ್ತಿದ್ದಾರೋ ಎಂದು ಕೇಳಿದರು. ಇದನ್ನು ತಪ್ಪಿಸಬೇಕಾದರೆ ವಿಧಾನಸೌಧದಲ್ಲಿ ನಡೆಯತಕ್ಕ ಕಾರ್ಯಕಲಾಪಗಳನ್ನು ಯಾವುದಾದರೊಂದು ಡ್ರೈ ಏರಿಯಾಕ್ಕೆ ವರ್ಗಮಾಡಿದರೆ ಒಳ್ಳೆಯದಾದೀತು ಎಂದು ಹೇಳಿದರು. ಏಕೆಂದರೆ ಈಗ ಬೆಂಗಳೂರಿನಲ್ಲಿ ಮದ್ಯಪಾನಮಾಡತಕ್ಕ ಅವಕಾಶ ಇರುವುದರಿಂದ ಹೀಗೆಲ್ಲ ಮಾಡುತ್ತಿದ್ದಾರೇನೋ ಎಂದು ಒಂದು ರೀತಿಯಲ್ಲಿ ವ್ಯಂಗವಾಗಿ ಕೇಳಿದರು. ಈಗ ನನ್ನ ಕೈಲಿರತಕ್ಕ ಬಿಲ್ಲಿನಲ್ಲಿ ಏನೂ ಅರ್ಥವಾಗುತ್ತಿಲ್ಲ. ಇದನ್ನು ಯಾವುದೋ ಒಂದು ಅಮಲಿನಲ್ಲಿ ತಯಾರಿಸಿರುವಂತೆ ನನಗೆ ಭಾಸವಾಗುತ್ತಿದೆ. ಈ ಮಸೂದೆಯಲ್ಲಿ ಏನೇನೂ ಇಲ್ಲ. ಇದರಲ್ಲಿ ಕಬ್ಬು ಮತ್ತು ಕಾಫಿ ಈ ಎರಡರಮೇಲೆ ಸರ್‌ಛಾರ್ಜ್ ಹಾಕಬೇಕೆಂದು ಇದರಲ್ಲಿ ಹೇಳಿರುವುದು ವಿನಾ ಬೇರೇನೂ ಇಲ್ಲ. ಈಗ ಇವರೂ ಈ ಸರ್‌ಛಾರ್ಜನ್ನು ಕೊಡಬೇಕೆಂದು ಇದರಲ್ಲಿ ಹೇಳಿದೆ. ಅಷ್ಟು ವಿನಾ ಇದರಲ್ಲಿ ಇನ್ನೇನೂ ಇಲ್ಲ.

ಇವುಗಳಮೇಲೆ ಈ ಕರಭಾರವನ್ನು ಹಾಕಿರತಕ್ಕದ್ದು ಬಹಳ ಅನ್ಯಾಯ ಈ ಎರಡು ಬೆಳೆಗಳಿಂದ ನಮ್ಮ ದೇಶಕ್ಕೆ ಬಹಳ ಉತ್ಪತ್ತಿಯಿದೆ. ನಮ್ಮ ದೇಶಕ್ಕೆ ಈ ಬೆಳೆಗಳು ಫಾರಿನ್ ಎಕ್ಸ್‌ಛೇಂಜ್ ತರುತ್ತಿವೆ. ಇಂಥ ಬೆಳೆಗಳ ಮೇಲೆ ಸರ್‌ಛಾರ್ಜ್ ಹಾಕುವುದು ಬಹಳ ಅನ್ಯಾಯ. ನಮ್ಮ ಕಡೆ ಒಂದು ಗಾದೆ ಹೇಳುತ್ತಾರೆ. ಕಾನೂನಿನ ಒತ್ತಡ ದೇಶದಲ್ಲಿ ಜಾಸ್ತಿಯಾದ ಹಾಗೆಲ್ಲಾ ಜನರು ಪಾಪರ್ ಆಗುತ್ತಾರೆ, ದೀವಾಳಿ ಆಗುತ್ತಾರೆ ಎಂದು. ಹಾಗೆಯೇ ನಮ್ಮ ಸರಕಾರ ಕಾನೂನುಗಳನ್ನು ಮಾಡುವಾಗ ವಸ್ತುಸ್ಥಿತಿ ಏನು, ಕಾನೂನಿನಿಂದ ಸಿಗುವ ಪ್ರಯೋಜನವಾದರೂ ಏನು, ಅವುಗಳಲ್ಲಿರುವ ಎಡರು ತೊಡರುಗಳು ಏನು ಎಂಬುದನ್ನು ವಿವೇಚನೆ ಮಾಡಿದ್ದಾರೆಯೇ ? ಈಗ 1962ನೇ ಇಸವಿಯಲ್ಲಿ ಸರ್ಚಾರ್ಜ್ ತಂದಿರಿ. ಅದರಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಾತು ಹೇಳುವುದಾದರೆ, ಈ ಸರ್ಛಾರ್ಜಿನಲ್ಲಿ ಶೇಕಡ 75ರಷ್ಟನ್ನು ಕೊಡುವವರು ಭೂಮಾಲೀಕರು ಮತ್ತು 8 ಮಠದವರು. ದೊಡ್ಡ ಭೂಮಾಲೀಕರು ವಸೂಲು ಮಾಡಕೂಡದೆಂದು ಹೇಳಿ ಹೈಕೋರ್ಟಿಗೆ ಹೋಗಿ ತಡೆ ಅರ್ಜಿಯನ್ನು ಹೊಂದಿದ್ದಾರೆ. ಅವರು ಈಗ ಸರ್ಛಾರ್ಜು ಕೊಡುತ್ತಾ ಇಲ್ಲ. ಈಗ ಪಾಪ, 100 ರೂಪಾಯಿಗಿಂತ ಕಡಿಮೆ ಸರ್ಛಾರ್ಜು ಕೊಡುವ ಬಡವರು ಎಲ್ಲಿದ್ದಾರೆ ಅವರ ಹತ್ತಿರ ಜುಲುಮ್ ಮಾಡಿ ವಸೂಲು ಮಾಡುತ್ತಿದ್ದಾರೆ. ಬಡವರಿಂದ ಅವರ ಮನೆ ಮಠ ಹರಾಜು ಹಾಕಿ ವಸೂಲು ಮಾಡಿ ಅಂತ ಹೇಳಿ ತಮ್ಮ ಆಫೀಸರುಗಳಿಗೆ ಆರ್ಡರ್ ಕೊಟ್ಟಿದ್ದಾರೆ. ಅದೇ ಯಾರಾದರೂ ದೊಡ್ಡ ಭೂಮಾಲೀಕರಿದ್ದರೆ ಬಹಳ ಜಾಗರೂಕತೆಯಿಂದ ಮಾಡಿ, ಅವರು ಅಸಮಧಾನರಾದರೆ ಪುನಃ ರಿಟ್‌ಅರ್ಜಿ ಹಾಕಿ ಯಾರು ಎಂದು ತಮ್ಮ ಅಫೀಸರುಗಳಿಗೆ ಬರೆದಿದ್ದಾರೆ. ಇದರಿಂದ ಜನಗಳಲ್ಲಿ ಒಂದು ರೀತಿಯ ಜಿಗುಪ್ಸೆ ಆಗಿದೆ.

ಇನ್ನು ಈ ಸರ್ಛಾರ್ಜಿನ ಪರಿಣಾಮ ನೋಡಿ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಮಟ್ಟಿಗೆ ಹೇಳುವುದಾದರೆ ನಮ್ಮ ಜಿಲ್ಲೆ ಮದ್ರಾಸ್ ಪ್ರಾಂತ್ಯದಲ್ಲಿರುವಾಗ 1904ನೇ ಇಸವಿಯಲ್ಲಿ ರೀಸೆಟಲ್‌ಮೆಂಟ್ ಆಗಿ ಜಮೀನನ್ನು ವಿಂಗಡಿಸುವಾಗ ನಂಜ ಬಾಗಾಯಿತು, ಕುಂಜ ಅಂತ ಹೇಳಿ ಮೂರು ವಿಭಾಗಗಳಾಗಿ ಮಾಡಿದರು. ನಂಜದಲ್ಲಿ ಕೂಡ ಫಸ್ಟ್, ಸೆಕೆಂಡ್ ಅಂಡ್ ಥರ್ಡ್ ಕ್ಲಾಸ್ ಅಂತ ಮಾಡಿ ಅದಕ್ಕೆ ಬೇಕಾದಷ್ಟು ಅಸೆಸ್‌ಮೆಂಟ್ ಆವಾಗಲೇ ಹಾಕಿದ್ದಾರೆ. ಅಷ್ಟು ಮಾತ್ರವಲ್ಲದೆ, ಪುನಃ 1934ರಲ್ಲಿ ರೀಸೆಟಲ್‌ಮೆಂಟ್ ಆಗಿದೆ. ಸಾಧಾರಣವಾಗಿ ಹನ್ನೆರಡೂವರೆ ಪರ್ಸೆಂಟ್ ಆಕ್ಚುಯಲ್ ಅಸೆಸ್‌ಮೆಂಟ್ ಸರ್ಛಾಜನ್ನು ಆವಾಗಲೆ ಏರಿಸಿದ್ದಾರೆ ಮಾತ್ರವಲ್ಲದೆ, ಈ ಅಸೆಸ್‌ಮೆಂಟು 20-4-1934ರ ನೋಟಿಫಿಕೇಶನ್ನಿನಲ್ಲಿ ಆಗಿದ್ದು, ಆ ಆರ್ಡರ್ ಪ್ರಕಾರ ಇನ್ನು ಬರುವ 30 ವರ್ಷಗಳವರೆಗೆ ಭೂಮಿಮೇಲೆ ಯಾವ ತರಹ ಸರ್ಛಾರ್ಜಾಗಲಿ, ಇನ್ನಾವತರಹ ಹೇಮೆಂಟಾಗಲಿ ಹಾಕಲಿಕ್ಕೆ ಸಾಧ್ಯವಿಲ್ಲ. ಈ ಒಂದು ಕಾನೂನು ಇದೆ. ಈ ಕಾನೂನು ಅಡಿಯಲ್ಲಿ ಇವತ್ತು ಹೈಕೋರ್ಟಿನಲ್ಲಿ 8+5=13 ರಿಟ್ ಪೆಟಿಶನ್ನುಗಳು ದಾಖಲಾಗಿವೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದ ಬರಬೇಕಾದ ಸರ್ಛಾರ್ಜಿನ ಮುಕ್ಕಾಲು ಅಂಶ ಈ ರಿಟ್ ಹಾಕಿರುವವರಿಂದ ವಸೂಲು ಮಾಡಿಕೊಳ್ಳಬೇಕಾಗಿದೆ. ಇನ್ನು ಕಾಲು ಅಂಶ, ಪಾಪ, ಬಡವರುಗಳಿಂದ ಬರಬೇಕು ಎಂದು ಅಂದಾಜು ಮಾಡಲಾಗಿದೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳವರಿಗೂ ಬರೆದೆ : ನಿಮ್ಮ ಆಫೀಸರುಗಳು ಬಂದು ಹಿಂಸೆ ಕೊಟ್ಟು ಈ ಕಂದಾಯ ವಸೂಲು ಮಾಡುತ್ತಿದ್ದಾರೆ ಎಂದು. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಪರಿಸ್ಥಿತಿ ಬೇರೆ ಜಿಲ್ಲೆಗಳಂತೆ ಅಲ್ಲ. ಇಲ್ಲಿ ಶೇಕಡ 80 ರಷ್ಟು ಚಾಲುಗೇಣಿ ರೈತರು ಇದ್ದಾರೆ. ಭೂಮಾಲೀಕರು ಚಾಲುಗೇಣಿ ರೈತರಿಗೆ ಗೇಣಿ ರಸೀತಿ ಕೊಡದೆ ಚಾಲಿಸುತ್ತಾ ಇದ್ದಾರೆ. ಟೆನೆನ್ಸಿ ಆಕ್ಟ್ ಪ್ರಕಾರ ಟೆನೆಂಟುಗಳಿಗೆ ಪ್ರೊಟೆಕ್ಷನ್ ಇದೆ ಅಂತ ಹೇಳುತ್ತೀರ. ಆದರೆ ನಮ್ಮಲ್ಲಿ ಸರ್ಛಾರ್ಜ್ ಪೇಮೆಂಟಿಗೆ ಏನುಮಾಡಿದ್ದಾರೆಂದರೆ ಶೇಕಡ 50 ರಷ್ಟು ಚಾಲುಗೇಣಿ ರೈತರ ಮನೆಗಳನ್ನು ಜಫ್ತಿ ಮಾಡಿಸಿದ್ದಾರೆ. ಅದನ್ನೂ ನಾನು ಬರೆದಿದ್ದೇನೆ. ಜೊತೆಗೆ ಅಧಿಕಾರಿಗಳಿಗೂ ದುಡ್ಡು ಕೊಟ್ಟಿದ್ದಾರೆ. ಅದಕ್ಕಿಂತಲೂ ದೊಡ್ಡ ಅನ್ಯಾಯವೆಂದರೆ ಇಡೀ ಮೈಸೂರು ರಾಜ್ಯದಲ್ಲಿ ಅತ್ಯಧಿಕ ಪೇಮೆಂಟನ್ನು ಮಾಡುವ ಜಿಲ್ಲೆ ದಕ್ಷಿಣ ಕನ್ನಡ ಜಿಲ್ಲೆ. ದಕ್ಷಿಣ ಕನ್ನಡ ಜಿಲ್ಲೆಗೆ ಕೊಟ್ಟಿರುವ ನೀರಾವರಿ ಸೌಲಭ್ಯ ತಗೆದು ನೋಡಿದರೆ, ಅದರಲ್ಲಿ ನಮ್ಮ ಜಿಲ್ಲೆ ಬಹಳ ಹಿಂದುಳಿದಿದೆ. ನಮ್ಮ ಪಕ್ಕದ ಶಿವಮೊಗ್ಗ ಜಿಲ್ಲೆಗೆ ಹೋಲಿಸಿ ನೋಡಿದರೆ ನಮ್ಮಲ್ಲಿ ದೊಡ್ಡ ಕೆನಾಲ್ ಒಂದೂ ಆಗಿಲ್ಲ. ಶಿವಮೊಗ್ಗಕ್ಕೆ ಕೊಟ್ಟಿರುವ ಸೌಲಭ್ಯದಲ್ಲೇ ಶೇಕಡ ಒಂದರಷ್ಟು ಆಗಿಲ್ಲ. 12,000 ಚಿಲ್ಲರೆ ಎಕರೆಗೆ ನೀರಾವರಿ ಸೌಲಭ್ಯವನ್ನು ಒದಗಿಸಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ 3 ಬೆಳೆ ತೆಗೆಯುತ್ತಾರೆ. ವರ್ಷಕ್ಕೆ ಮೂರು ಬತ್ತದ ಬೆಳೆ ತೆಗೆಯುತ್ತಾರೆ. ಅಷ್ಟು ನೀರಾವರಿ ಇರುವ ಪ್ರಾಂತ್ಯದಲ್ಲಿ ಎಕರೆಯೊಂದಕ್ಕೆ 2 ರೂಪಾಯಿ ಅಸೆಸ್‌ಮೆಂಟ್ ಇದ್ದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಕರೆಯೊಂದಕ್ಕೆ 10 ರೂಪಾಯಿ ಪೇಮೆಂಟ್ ಇದೆ. ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದ್ದೀರ ಎಂದು ನನಗನಿಸುತ್ತದೆ. ಮಾತ್ರವಲ್ಲದೆ, ಶ್ರೀಮಾನ್ ಕೃಷ್ಣಪ್ಪನವರು ಹೇಳಿದರು ; ದೇಶಕ್ಕೆ ತುರ್ತು ಪರಿಸ್ಥಿತಿ ಬಂದಿದೆ. ಸರ್ಕಾರಕ್ಕೆ ಇನ್ನೂ ಹಣ ಬೇಕಾಗುತ್ತದೆ,

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಆದ್ದರಿಂದ 1962, 63, 64ರಲ್ಲಿ ರೈತರ ಮೇಲೆ ಸರ್ಛಾರ್ಜ್ ಹೊರಿಸಿದೆ. ಆದರೆ ತುರ್ತು ಪರಿಸ್ಥಿತಿಯಲ್ಲಿ ರೈತನಿಗೆ ಇವತ್ತು ಶ್ಮಶಾನದಲ್ಲಿ ದಾರಿ ಮಾಡಿಕೊಟ್ಟಿದ್ದೀರ ಅಂತ ಹೇಳುತ್ತೇನೆ. ತುರ್ತು ಪರಿಸ್ಥಿತಿಯಲ್ಲಿ ರೈತನಿಗೆ ನೀವು ಕೊಟ್ಟಿರುವ ಸೌಲಭ್ಯವಾದರೂ ಏನು ? ಎಂದು ಪ್ರಶ್ನೆ ಕೇಳುತ್ತೇನೆ. ನಿಮಗೆ ಅವನ ಶೋಚನೀಯಸ್ಥಿತಿ ಏನುಗೊತ್ತಿದೆ. ಮಂತ್ರಿಗಳು ಜಿಲ್ಲೆಗೆ ಟೂರ್‌ಮೇಲೆ ಬಂದ ಕೂಡಲೇ ಹಾರ ತುರಾಯಿ ಅವರಮೇಲೆ ಹಾಕುತ್ತಾರೆ. ಯಾರು ಯಾರು ದೊಡ್ಡ ಭೂಮಾಲೀಕರು ಇದ್ದಾರೆ, ಕಾಂಗ್ರೆಸ್ ಪುಡಾರಿಗಳು ಇದ್ದಾರೆ, ಅವರ ಜೊತೆ ಆಲೋಚನೆ ಮಾಡಿ, ರೈತರ ಸ್ಥಿತಿಗತಿ ಅರಿತುಕೊಳ್ಳುತ್ತಾರೆ. ಅವರೆಲ್ಲಾ ನೋಡುವುದಕ್ಕೆ ದಪ್ಪಗೆ ಇರುತ್ತಾರೆ, ನನ್ನ ಹಾಗೆ ತೆಳ್ಳಗೆ ಇರುವುದಿಲ್ಲ. ಸರಿ, ಅವರು ಕೊಟ್ಟ ಅಂಕಿ ಅಂಶಗಳನ್ನು ತೆಗೆದುಕೊಂಡು ರೈತ ಸುಖವಾಗಿದ್ದಾನೆ ಅಂದುಕೊಂಡು ಅವರ ಜೊತೆ ಹೊರಟುಬಿಡುತ್ತಾರೆ. ವಾಸ್ತವವಾಗಿ ನಿಮ್ಮ ಆಡಳಿತದಲ್ಲಿ ರೈತನಿಗೆ ನಿಜವಾದ ಸೌಲಭ್ಯ ಸಿಗುವಂಥ ಒಂದು ವ್ಯವಹಾರವನ್ನೂ ನಡೆಸಿಕೊಂಡು ಬರಲಿಲ್ಲ. ನೀರಾವರಿ ಸೌಲಭ್ಯ ಒದಗಿಸುವುದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಕಾಂಗ್ರೆಸ್ ಮಾಡಿದ್ದೀರಿ. ಕಾಂಗ್ರೆಸ್ಸಿನವರು ಸಂಸ್ಥೆಮಾಡಿಕೊಂಡು ಬೇಕಾದಷ್ಟು ದುರ್ವಿನಿಯೋಗ ಮಾಡುತ್ತಿದ್ದಾರ.

ಶ್ರೀ ಎಂ. ವಿ. ಕೃಷ್ಣಪ್ಪ.—ಯಾರೋ ಕಾಂಗ್ರೆಸ್ಸಿನವರು ಸೊಸೈಟಿ ಮಾಡಿಕೊಂಡು ಹಂಚುತ್ತಿದ್ದಾರೆ. ಸರಕಾರದವರು ಬೇಕಾದಷ್ಟು ಕೊಟ್ಟಿದ್ದಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಬೇರೆಯವರು ಸೊಸೈಟಿ ಮಾಡಲಿಕ್ಕೆ ಏಕೆ ಪರ್ಮಿಶನ್ ಕೊಟ್ಟಿರಿ ? ರೈತರಿಗೆ ಗೊಬ್ಬರದ ಗುಂಡಿ ಮುಚ್ಚಲಿಕ್ಕೆ ಜಿಂಕ್‌ಶೀಟುಗಳು ಸಿಗುವುದಿಲ್ಲ. ಅಂತೂ ಒಟ್ಟಿನಲ್ಲಿ ರೈತರ ಕಷ್ಟ ನೋಡುವವರಿಲ್ಲ. ಏನು ಸವಲತ್ತು ಒದಗಿಸದಿದ್ದರೂ ಅವರು ಕರಕೊಡಬೇಕು. ಒಟ್ಟಿನಲ್ಲಿ ಹೇಳುವುದಾದರೆ ರೈತನಿಗೆ ಕೊಟ್ಟಿರುವ ಏನು ಎಲ್ಲಾ ಸೌಲಭ್ಯ ಇದೆ ಅದು ಶಾಸ್ತ್ರಿಗಳ ಪಂಚಾಂಗದ ಸೌಲಭ್ಯ. ಒಬ್ಬ ರೈತ ಉಳಿವೆ ಕಾಲಕ್ಕೆ ಮಳೆ ಬರುತ್ತದೊ ಎಂದು ಆಕಾಶ ನೋಡಿದರೆ ಮಳೆ ಇಲ್ಲ. ಪಂಚಾಂಗ ನೋಡಿದರೆ ಮಳೆ ಇದೆ ಅಂತ ಶಾಸ್ತ್ರಿಗಳು ಬರೆದಿದ್ದಾರೆ. ಅದರಮೇಲೆ ಬತ್ತನೆ ಬೀಜವನ್ನು ಹೂದುವುದಕ್ಕೆ ತಯಾರು ಮಾಡಿದರೆ ಮಳೆ ಬರಲಿಲ್ಲ. ಶಾಸ್ತ್ರಿಗಳಮೇಲೆ ರೈತ ಬಹಳ ವಿಶ್ವಾಸ ನಂಬಿಕೆ ಇಟ್ಟುಕೊಂಡಿದ್ದ. ಮೂರು ದಿವಸಗಳಾದರೂ ಮಳೆ ಬರಲಿಲ್ಲ. ಆದರೆ ಮಳೆ ಬರುತ್ತದೆ ಎಂದು ಪಂಚಾಂಗದಲ್ಲಿದೆ. ಆದ್ದರಿಂದ ಪಂಚಾಂಗ ಹಿಂದುವುದಕ್ಕೆ ಶುರುಮಾಡಿದ, ಅದರೊಳಗೆ ಮಳೆ ಇದೆಯೆಂದು ಆ ತರಹ ಆಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಅತ್ಯಧಿಕವಾದ ಕಂದಾಯ ಹಿಂದೆ ಇದ್ದ ದೆಸೆಯಿಂದಾಗಿ 1962ನೇ ಇಸವಿಯಲ್ಲಿ ತಂದಿದ್ದಂಥ ನೂರಕ್ಕೆ ನೂರುಪಾಲು ಸರ್ಛಾರ್ಜ್‌ಹಾಕುವಂಥ ತಿದ್ದುಪಡಿ ತುಂಬಾ ಅನ್ಯಾಯವೆಂದು ಹೇಳಿದ್ದೆವು. ಒಂದುಕಡೆ ನೇಫಾ ಗಡಿಯಲ್ಲಿ ನಮ್ಮ ದೇಶದ ರಕ್ಷಣೆಗಾಗಿ ಯುದ್ಧ ಮಾಡಲು ಯೋಧರು ಆವಶ್ಯಕ. ಅದೇ ರೀತಿಯಲ್ಲಿ ಅತ್ಯಾವಶ್ಯಕ ವಸ್ತುಗಳನ್ನು ದೇಶಕೆ ಮತ್ತು ನಮ್ಮ ಯೋಧರಿಗೆ ಒದಗಿಸುವುದು ಮುಖ್ಯ. ಅದಕ್ಕೆ ನಮ್ಮ ರೈತರು ಆಹಾರ ಧಾನಗಳನ್ನು ಬೆಳೆಸದೆಹೋದಲ್ಲಿ ಅದರಿಂದ ಬಹಳತೊಂದರೆಯುಂಟಾಗುತ್ತದೆ.

5-00 P.M.

ಶ್ರೀ ಎಂ. ವಿ. ಕೃಷ್ಣಪ್ಪ.—ಬತ್ತ ಬೆಳೆಯುವವರು ಕಡಮೆಕೊಡಬೇಕು. ಜಾಸ್ತಿ ಕೊಡಬಾರದು ಎಂದು ಇದನ್ನು ತಂದಿದ್ದೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಮ್ಮಲ್ಲಿ ನೀರಾವರಿ ಇಲ್ಲ. ನಾವು ನೂರಕ್ಕೆ ನೂರರಷ್ಟು ಸರ್ಛಾರ್ಜನ್ನು ಕೊಡಬೇಕು. ರೈತನು ಜೀವನಾಶ್ಯಕವಾದ ಕೆಲವು ವಸ್ತುಗಳನ್ನು ಬೆಳೆಯುತ್ತಾನೆ. ಇನ್ನು ಇತರ ಆವಶ್ಯಕ ವಸ್ತುಗಳ ಬೆಲೆ ಎಲ್ಲಿಯವರೆಗೆ ಏರಿ ಹೋಗಿದೆ ಎಂದರೆ, ನಾನಾದರೂ ಹೇಳುತ್ತೇನೆ ರಷ್ಯಾ ದೇಶದವರು ಸ್ಪೂಟ್ನಿಕ್ ಎಷ್ಟು ಎತ್ತರಕ್ಕೆ ಹಾರಿಸಿದ್ದಾರೆಯೋ ಅಷ್ಟು ಎತ್ತರಕ್ಕೆ ನಮ್ಮಲ್ಲಿ ಬೆಲೆಗಳು ಏರಿಹೋಗಿವೆ. ರಷ್ಯಾದೇಶದವರು ಅತಿ ಎತ್ತರಕ್ಕೆ ಸ್ಪೂಟಿಕ್ ಹಾರಿಸಿದ್ದರೆ ನಾವು ಜೀವನಾವಶ್ಯಕವಾದ ವಸ್ತುಗಳ ಬೆಲೆಯನ್ನು ಅತಿ ಎತ್ತರಕ್ಕೆ ಹಾರಿಸುವುದರಲ್ಲಿ ಹೆಸರು ಗಳಿಸಿದ್ದೇವೆ. ಇಂಥ ಏರಿಕೆಯ ಬೆಲೆಗಳಿಂದ ರೈತ ಜೀವಿಸುವುದು ಬಹಳ ಕಷ್ಟ.

ಗೋಮಾಳಗಳನ್ನು ರೈತರು ಗೋವುಗಳನ್ನು ಮೇಯಿಸುವುದಕ್ಕಾಗಿ ಇಟ್ಟಿರುವುದು. ಆದರೆ ಇವತ್ತು ಏನುಮಾಡುತ್ತಾರೆಂದರೆ ಕೆಲವರು ಬೆಂಗಳೂರಿಗೆ ಬಂದು 10-20 ಎಕರೆ ಭೂಮಿಯನ್ನು ಗೇರುಬೀಜದ ಗಿಡಗಳನ್ನು ಬೆಳೆಸಲು ಇಲ್ಲಿಂದ ಆರ್ಡರ್ ಮಾಡಿಸಿಕೊಂಡು ಹೋಗುತ್ತಾರೆ. ನಮ್ಮ ಕಡೆ ಮನೆಕಟ್ಟಲಿಕ್ಕೆ ಸ್ಥಳವಿಲ್ಲ ಎಂದು ಹೇಳುತ್ತಾರೆ. ಯಾರಿಗೆ ಒಂದು ಇಂಚು ಸ್ಥಳವಿಲ್ಲ ಎಂದು ಹೇಳುತ್ತಾರೆಯೋ ಅಂಥ ಭೂಮಿಯನ್ನು ದರಖಾಸ್ತಿನಲ್ಲೇ ಕೆಲವರಿಗೆ ಕೊಡುತ್ತಾರೆ.

ಖಾದಿಬೋರ್ಡ್ ಕೆಲವು ಕಾಂಗ್ರೆಸ್ಸಿನವರು ಮೇಯುವಂಥ ಗೋಮಾಳ ಎಂದು ಮೊನ್ನೆ ದಿವಸ ಹೇಳಿದರು. ಪ್ರತಿ ಊರಿನ ಬಳಿ ಇರುವ ಗೋಮಾಳಗಳೆಲ್ಲ ಹೋಗಿ ಇಂದು ಗೋವುಗಳಿಗೆ ಮೇಯುವುದಕ್ಕೆ ಸ್ಥಳವಿಲ್ಲವಾಗಿದೆ. ರೈತರಿಗೆ ಹಸರೆಲೆ ಗೊಬ್ಬರಕ್ಕೂ ತೊಂದರೆಯಾಗಿದೆ.

ಆ ಮೇಲೆ ಸಹಕಾರಿ ಸಂಸ್ಥೆಗಳೇನಿವೆ ಅವುಗಳಲ್ಲಿ ರೈತರಿಗೆ ಬೇಕಾದ ಸೌಲಭ್ಯಗಳು ಸಿಕ್ಕುವುದಿಲ್ಲ. ಇವು ಸಹಕಾರಿ ಸಂಸ್ಥೆಗಳಾಗಿ ಸರಿಯಾದ ಕೆಲಸಮಾಡದೇ ಇರುವುದರಿಂದ ನಾನು ಸ್ವಕಾರಿ ಸಂಸ್ಥೆಗಳು ಎಂದು ಹೇಳುತ್ತಿದ್ದೇನೆ. ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡಲು ಅವಕಾಶ ಸಿಕ್ಕಿದರೆ ಇದಕ್ಕಿಂತ ಚೆನ್ನಾಗಿ ಮಾತನಾಡುತ್ತಿದ್ದೆ. ಇದು ರೈತರಿಗೆ ಸಂಬಂಧಪಟ್ಟ ಬಿಲ್ ಆಗಿರುವುದರಿಂದ ರೈತರಿಗೆ ಏನುಸೌಲಭ್ಯಗಳು ಕೊಡಬೇಕೆಂದು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು.—ರೈತರ ಎಲ್ಲ ಸೌಲಭ್ಯಗಳ ವಿಚಾರವೂ ಇಲ್ಲಿ ಬರುವುದಿಲ್ಲ, ಸರ್ಛಾರ್ಜ್ ವಿಷಯ ಬಗ್ಗೆ ಮಾತ್ರ ಮಾತನಾಡಬೇಕು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಕಾಂಗ್ರೆಸ್ ರಾಜ್ಯದಲ್ಲಿ ರೈತರು ಖಂಡಿತವಾಗಿ ದಿವಾಳಿಯಾಗುತ್ತಾರೆಂದು ಹೇಳುತ್ತೇನೆ. ಶೇಕಡ 71.2 ರಷ್ಟಿರುವ ರೈತರಿಗಾಗಿ ಏನೂಮಾಡವುದಿಲ್ಲ ಎಂದು ಹೇಳುತ್ತಿದ್ದೇನೆ.

ಮತ್ತೊಂದು ವಿಷಯವನ್ನು ಹೇಳುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವಿಷಯ ಹೇಳುವುದಾದರೆ ನಮ್ಮ ಸರ್ಕಾರದ ಅಂಕಿ ಅಂಶಗಳ ಪ್ರಕಾರ 9,76,92 ಹೆಕ್ಟರ್ ಪೈಕಿ ಸಾಧಾರಣ 2,098,74 ಹೆಕ್ಟರ್‌ನಷ್ಟು ವಿಸ್ತೀರ್ಣಜಾಗದಲ್ಲಿ ನಮ್ಮ ದಕ್ಷಿಣಕನ್ನಡ ಜಿಲ್ಲೆಯೊಂದರಲ್ಲೇ ಬತ್ತವನ್ನು ಬೆಳೆಯುತ್ತಾರೆ. ಇಡೀ ರಾಜ್ಯದಲ್ಲಿ ಐದನೆಯ ಒಂದು ಭಾಗಕ್ಕಿಂತಲೂ ಜಾಸ್ತಿಯಾಗುತ್ತದೆಂದು ಹೇಳುತ್ತೇನೆ. ಇಂಥ ರೈತರನ್ನು ತಾವು ಕೆಣಕುವುದಕ್ಕೆ ಹೋದರೆ ಸರ್ಕಾರ ಯೋಚಿಸಿರುವ ಆಹಾರ ಧಾನ್ಯಗಳ ಉತ್ಪನ್ನವೇನಿದೆ ಅದಕ್ಕೆ ದೊಡ್ಡ ಕಂಟಕಪ್ರಾಯವಾಗುತ್ತದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ.

ಇಷ್ಟನ್ನು ಹೇಳಿ ನಮ್ಮ ದಕ್ಷಿಣಕನ್ನಡ ಜಿಲ್ಲೆಯ ರೈತರಮೇಲೆ ಹೊರಿಸಿರತಕ್ಕ ಸರ್‌ಛಾರ್ಜನ್ನು ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ವೈ. ಮಂಜಯ್ಯ ಶೆಟ್ಟಿ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಸಭೆಯಮುಂದಿರುವ ವಿಧೇಯಕವನ್ನು ಸಮರ್ಥಿಸುತ್ತ ಕೆಲವು ವಿಚಾರಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಮಾನ್ಯ ಮಿತ್ರರಾದ ಭಾಸ್ಕರ ಶೆಟ್ಟಿಯವರು ಅನೇಕ ರೀತಿಯ ಅಪಾದನೆಗಳನ್ನು ಸರ್ಕಾರದ ಮೇಲೆ ಹಾಕಿದರು. ಅವಿಶ್ವಾಸ ಠರಾವಿನ ಚರ್ಚೆಯ ಕಾಲದಲ್ಲಿ ಏನೇನು ಹೇಳಬೇಕು ಎಂದು ಮನಸ್ಸಿನಲ್ಲಿತ್ತೋ ಅದನ್ನೆಲ್ಲ ಬಹುಶಃ ಈ ವಿಧೇಯಕವನ್ನು ಚರ್ಚೆಮಾಡುವ ಸಂಬಂಧದಲ್ಲಿ ಹೇಳಿದ್ದಾರೆಂದು ಕಾಣುತ್ತದೆ. ಅನೇಕ ವಿಚಾರಗಳು ಅವರು ಹೇಳಿದ್ದರಲ್ಲಿ ಸತ್ಯಾಂಶವಿದ್ದಂತೆ ಕಂಡುಬರುವುದಿಲ್ಲ. ಆದಾಗ್ಯೂ ಸಭೆಯ ಮುಂದೆ ಸರ್ಛಾರ್ಜು ತಿದ್ದುಪಡಿ ಕಾನೂನು ಬಂದಿದೆ. ಭೂಮಿಯಮೇಲೆ ಸರ್ಛಾರ್ಜು ಹಾಕುವಂತಾದ್ದು ಅವಶ್ಯವಿದೆಯೋ ಇಲ್ಲವೋ ಎಂಬ ಪ್ರಶ್ನೆ ಒಂದು ವರ್ಷದ ಹಿಂದೆ ಚರ್ಚೆಯಾಗಿದೆ. ತುರ್ತು ಪರಿಸ್ಥಿತಿ ಇಲ್ಲದೆ ಇದ್ದ ಪಕ್ಷದಲ್ಲಿ ಆ ಕಾನೂನು ಖಂಡಿತವಾಗಿ ಪಾಸಾಗುತ್ತಿರಲಿಲ್ಲ. ತುರ್ತು ಪರಿಸ್ಥಿತಿಯಿಂದಾಗಿ ದೇಶದ ಪ್ರಗತಿ ಕಾರ್ಯಗಳು ಮುಂದುವರಿಯಬೇಕಾದ ಪ್ರಶ್ನೆ ಇರುವುದರಿಂದ ದೇಶದ ಸಂರಕ್ಷಣೆ ಬಗ್ಗೆ ವಿಶೇಷರೀತಿಯ ಹಣದ ಸವಲತ್ತು ಬೇಕಾದ್ದರಿಂದ ಹೆಚ್ಚಿನ ತೆರಿಗೆ ಎತ್ತಬೇಕಾದ್ದರಿಂದ ಆ ರೀತಿಯ ಒಂದು ಕಾನೂನು ಒಂದುವರ್ಷದ ಹಿಂದೆ ಪಾಸಾಗಿದೆ. ಆ ಕಾನೂನಿನಲ್ಲಿ ಕೆಲವು ಮಟ್ಟಿನ ತಿದ್ದುಪಡಿಯಾಗಬೇಕೆಂದು ಈ ಒಂದು ವಿಧೇಯಕವನ್ನು ಮಾನ್ಯ ರೆವೆನ್ಯೂ ಸಚಿವರು ನಮ್ಮ ಮುಂದೆ ಇಟ್ಟಿದ್ದಾರೆ. ತುರ್ತುಪರಿಸ್ಥಿತಿ ಇದ್ದಾಗ್ಯೂ ಈ ಭೂಮಿಯಮೇಲೆ ಹಾಕಿದ ಸರ್ಛಾರ್ಜನ್ನು ಸ್ವಲ್ಪಮಟ್ಟಿಗೆ ಲಘುಮಾಡಿದ್ದರೆ ಉಪಕಾರವಾಗುತ್ತಿತ್ತು ಎಂದು ನಾನು ಹೇಳಲು ಇಚ್ಛಿಸುತ್ತೇನೆ.

ಈ ಸರ್‌ಛಾರ್ಜ್ ಕಾನೂನು ಬಗ್ಗೆ ವಿಶೇಷರೀತಿಯಲ್ಲಿ ತಿಳುವಳಿಕೆ ಕೊಡತಕ್ಕದ್ದು ಅಗತ್ಯವಿತ್ತು. ಈ ತುರ್ತು ಪರಿಸ್ಥಿತಿ ಇಲ್ಲದೇ ಇದ್ದರೆ ಈ ಕಾನೂನು ತರುವುದು ಸ್ವಲ್ಪಕಷ್ಟವಾಗುತ್ತಿತ್ತು. ಎರಡುವರ್ಷ ಕಾಲ ಮಾತ್ರ ಕಾನೂನು ಇರತಕ್ಕದ್ದು ಎಂದು ಪರಿಗಣಿಸಲ್ಪಟ್ಟಿದೆ. ಇಡೀ ದೇಶದ ಒಂದೇ ಸಮನಾಗಿ ತೀರ್ವ ಕಂದಾಯ ಹಾಕಲು ಪ್ರಯತ್ನ ಮಾಡುತ್ತೇವೆಂದು ಸರ್ಕಾರ ಭರವಸೆ ಕೊಟ್ಟಿದ್ದಾರೆ. ಈ ಮೇರೆಗೆ ಯಾವಯಾವ ರೀತಿಯಲ್ಲಿ ಎಷ್ಟರಮಟ್ಟಿಗೆ ಒಂದೇ ರೀತಿ ಕಂದಾಯ ಹಾಕಲು ಸರಕಾರ ಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿಸಿದ್ದರೆ ಬಹಳ ಉಪಕಾರವಾಗುತ್ತಿತ್ತು. ಒಂದು ದೂರು ವಿಶೇಷವಾದ ರೀತಿಯಲ್ಲಿದೆ. ನಮ್ಮ ದೇಶದ 19 ಜಿಲ್ಲೆಗಳಲ್ಲಿ 19 ರೀತಿಯಿಂದ ಕಂದಾಯ ಹಾಕುವ ಕ್ರಮ ಇದೆ. ಒಂದೇರೀತಿಯ ಫಲವತ್ತಾದ ಭೂಮಿ 19 ಜಿಲ್ಲೆಗಳಲ್ಲಿ ಇದ್ದಾಗ್ಯೂ ಕೂಡ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿಯಿಂದ ಕಂದಾಯ ವಸೂಲಾಗುತ್ತಾ ಇದೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಕೊಟ್ಟಷ್ಟು

(ಶ್ರೀ ವೈ. ಮಂಜಯ್ಯಶೆಟ್ಟಿ)

ಹೆಚ್ಚಿನ ಕಂದಾಯ ದರ ಬೇರೆ ಯಾವ ಜಿಲ್ಲೆಯಲ್ಲಿಯೂ ಇಲ್ಲ ಎಂದು ಹೇಳಿದರೆ ಅದು ಉತ್ಪ್ರೇಕ್ಷೆ ಮಾತು ಹೇಳಿದಂತಾಗಲಾರದು.

Mr. DEPUTY SPEAKER.—We are here concerned only with water rate.

Sri Y. MANJAYYA SHETTY.—It may not be out of place, if I say these things. It relates to the Surcharge Act (Amendment) Bill and it relates to the amendments to the Surcharge Act which was passed in 1962.

Mr. DEPUTY SPEAKER.—The Debate is confined only to water rate and irrigation case.

ಶ್ರೀ ವೈ. ಮಂಜಯ್ಯ ಶೆಟ್ಟಿ.—ಸರ್‌ಛಾರ್ಜ್ ಬದಲಾಗಿ ಒಂದೇರೀತಿ ಇರುವ ಭೂಕಂದಾಯ ಜಾರಿಗೆ ತಂದಿದ್ದರೆ ಸರಕಾರದವರಿಗೆ ಒಂದು ವರ್ಷಕ್ಕೆ ಆರೆಂಟು ಕೋಟಿ ರೂಪಾಯಿ ಹೆಚ್ಚಿಗೆ ಸಿಕ್ಕುತ್ತಿತ್ತು. ಆ ರೀತಿ ಮಾಡಿದರೆ ಯಾರೂ ಸರಕಾರವನ್ನು ದೂರುವ ಪ್ರಸಂಗ ಬರಲಿಕ್ಕಿಲ್ಲ. ನಮ್ಮ ಜಿಲ್ಲೆಯಲ್ಲಿ ಒಂದು ಎಕರೆಗೆ 10-12 ರೂಪಾಯಿ ಕಂದಾಯ ಕೊಡುವವರು ಇದ್ದರೆ ಬೇರೆ ಜಿಲ್ಲೆಯಲ್ಲಿ 3-4 ರೂಪಾಯಿ ಕಂದಾಯ ಕೊಡುತ್ತಾ ಇದ್ದಾರೆ. ಸರ್‌ಛಾರ್ಜ್ 12 ರೂಪಾಯಿ ಕೊಡುವವರು ಇನ್ನು ಮುಂದೆ 24 ರೂಪಾಯಿ ಕೊಡುವ ಪ್ರಸಂಗ ಇದೆ, ಬೇರೆ ಜಿಲ್ಲೆಗಳಲ್ಲಿ 3 ರೂಪಾಯಿ ಬದಲು 6 ರೂಪಾಯಿ ಕೊಡಬೇಕಾಗುತ್ತದೆ. ಈ ಕ್ರಮದಿಂದ ಜನರಲ್ಲಿ ಅತೃಪ್ತಿ ಹುಟ್ಟಿದೆ. ಒಂದು ವರ್ಷದ ಮಟ್ಟಿಗೆ ಸರ್‌ಛಾರ್ಜ್ ಇಟ್ಟುಕೊಂಡು ಮುಂದಿನವರ್ಷ ಬದಲಾವಣೆಮಾಡಲಾಗುವುದೆಂದು ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ಆ ಭರವಸೆ ಪರಿಪೂರ್ಣ ಮಾಡಿದರೆ ಒಳ್ಳೆಯದಾಗುತ್ತಿತ್ತು. ಸರ್‌ಛಾರ್ಜ್ ತೀರ್ವೆ ವಸೂಲಿಕ್ರಮ ಬಹಳ ಕಷ್ಟಕ್ಕೆ ಬಂದಿದೆ. ನಮ್ಮ ಜಿಲ್ಲೆಯಲ್ಲಿ ಪ್ರತಿ ವರ್ಷ 31 ನೇ ಮಾರ್ಚಿಯೊಳಗಾಗಿ ಒಂದು ಪೈ ಬಾಕಿ ಇಲ್ಲದೆ ಕಂದಾಯ ವಸೂಲಿಯಾಗುತ್ತಾ ಇದೆ. ಸರ್‌ಛಾರ್ಜ್ ವಸೂಲ್ಮಾಡುವುದು ಎಷ್ಟರ ಮಟ್ಟಿಗೆ ಕಷ್ಟವಾಗಿದೆ ಎಂಬುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆ. ಇದುವರೆಗೆ ಪಟೇಲ ಶ್ಯಾನುಭೋಗರು ಬಾಕಿ ವಸೂಲ್ಮಾಡುತ್ತಿದ್ದರು. ಇಂದು ರೆವೆನ್ಯೂ ಇನ್‌ಸ್ಪೆಕ್ಟರ್ ತಹಶೀಲದಾರರು ಪ್ರತಿಯೊಂದು ಗ್ರಾಮದಲ್ಲಿ ಪ್ರತಿಯೊಂದು ಮನೆಗೆ ಹೋಗಿ ಎಷ್ಟು ಪ್ರಯತ್ನಪಟ್ಟರೂ ವಸೂಲಾಗುತ್ತಾ ಇಲ್ಲ. ಸರಕಾರದ ಆಡಳಿತದಲ್ಲಿ ಅದರಲ್ಲೂ ತೀರ್ವೆ ವಸೂಲಕ್ರಮದಲ್ಲಿ ಒಂದು ರೀತಿಯ ಕಷ್ಟ ಬಂದಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಇನ್ನು ಮುಂದೆ ಸರ್‌ಛಾರ್ಜ್ ವಸೂಲ್ಮಾಡುವುದು ಇದ್ದ ಪಕ್ಷದಲ್ಲಿ ಸರಕಾರ ಕಂದಾಯ ವಸೂಲ್ಮಾಡಲು ಬಹಳ ಕಷ್ಟವಾಗುವುದು. ಕಂದಾಯ ಕೊಡುವವರ ಮನಸ್ಸಿನಲ್ಲಿ ಸಹ ಒಂದು ರೀತಿ ಪರಿಣಾಮ ಹುಟ್ಟಿ ಕಂದಾಯ ಕೊಡದೆ ಸರಕಾರಕ್ಕೆ ಹೆಚ್ಚಿನ ತೊಂದರೆ ಕೊಡುವ ಪ್ರಸಂಗ ಬರಬಹುದು ಎಂಬುದನ್ನು ದಯೆಯಿಟ್ಟು ಆಲೋಚನೆಮಾಡಿ ಆದಷ್ಟು ಬೇಗ ಒಂದೇ ರೀತಿಯಾಗಿ ಮಾಡಲು 19 ಜಿಲ್ಲೆಗಳಲ್ಲಿನ ಸರ್ವೆ ಸೆಟಲ್‌ಮೆಂಟ್ ಕಾರ್ಯ ಬಹು ಶೀಘ್ರದಿಂದ ಮಾಡಿ ಒಂದೇ ಸಮನಾಗಿ ಎಲ್ಲಕಡೆ ಕಂದಾಯ ಹಾಕುವಂತೆ ಮಾಡಿ ಸರಕಾರಕ್ಕೆ ಹೆಚ್ಚು ಹಣ ಬರುವಂತೆ ಮಾಡಬೇಕು. ಹೀಗೆ ಮಾಡದೆ ಈ ರೀತಿ ಸರ್‌ಛಾರ್ಜ್ ಹೇರುವುದು ಮಾಡಿದರೆ ಕೆಲವು ಜಿಲ್ಲೆಗಳಲ್ಲಿ ಭೂಮಾಲೀಕರು ರೈತರಿಗೆ ಕಷ್ಟ ಕೊಡುವಂತೆ ಆಗಬಾರದು ಎಂದು ಹೇಳಿ ಈ ಸಭೆಯ ಮುಂದೆ ತಂದಿರುವ ಈ ವಿಧೇಯಕವನ್ನು ನಾನು ಸಮರ್ಥಿಸುತ್ತೇನೆ.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈ ತಿದ್ದುಪಡಿ ಮಸೂದೆ ಶ್ರೀಮಾನ್ ಕೃಷ್ಣಪ್ಪನವರು ತಂದಿದ್ದಾರೆ. ಈಗ ಎಮರ್ಜೆನ್ಸಿ ಇದೆ ಈ ಮಸೂದೆ ತರಬೇಕಾಯಿತು ಎಂದು ಒಂದು ಮಾತು ಹೇಳಿದರು. ಈ ಎಮರ್ಜೆನ್ಸಿ ಕಾರಣ ಯಾವ ಮಂತ್ರಿ ಉಪಯೋಗಿಸುವುದಿಲ್ಲ? ಹೀಗೆ ಹೇಳುವುದರ ಬದಲು ಇದನ್ನು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಹಾಕಿದ್ದರೆ ಚೆನ್ನಾಗಿತ್ತು. ನಾನು ಹೇಳುವುದನ್ನು ಲೈಟ್ ಆಗಿ ತೆಗೆದುಕೊಳ್ಳಬಾರದು. ಇದರಲ್ಲಿ ಒಂದು ಮುಖ್ಯ ಅಂಶ ಯಾವುದು ಎಂದರೆ :—

> Where the water rate is Rs. 12 per acre on land growing sugaracane, the paddy grower will have to pay Rs. 24 per acre whereas the sugarcane grower who takes more water will pay only Rs. 18/ per acre. It is considered necessary to avoid this anomaly and for this purpose, it is proposed to limit the

aggregate amount payable as water rate surcharge, to Rs. 30 per acre per annum.

ಆ ಮೇಲೆ 4ನೇ ಪುಟದಲ್ಲಿ ಹೀಗೆ ಹೇಳಿದೆ :—

"......In order to clarify the position, it is proposed to amend section 3 of the Act by specifying a fourth class of lands as 'other lands' and providing for a levy of surcharge of seventy-five per cent of the land revenue on such lands."

ಈ ಕಾಫಿ ಖರಾಬ್ ಲ್ಯಾಂಡ್ಸ್ ಅಂದರೆ ಏನು ಸ್ವಾಮಿ? ಶೇಕಡ 75 ರಷ್ಟು ಹಾಕುವುದು ಅಂದರೆ ಅರ್ಥವಾಗುವುದಿಲ್ಲ. ಸೆಂಟ್ ಪರ್ಸೆಂಟ್ ಹಾಕಬಹುದು. ಯಾಕೆಂದರೆ ಕಾಫಿ ಪ್ಲಾಂಟೇ ಷನ್ನುಗಳಿಗೆ ಕಂಪ್ಲೀಟ್ ವಿನಾಯಿತಿ ಕೊಟ್ಟಿದ್ದೀರಿ. ಮುಖ್ಯವಾಗಿ ಹೇಳುವುದು ಏನೆಂದರೆ ಬಡ ರೈತರ ಮೇಲೆ ಪೂರ್ತಿ ಕಂದಾಯ ಹಾಕಬೇಡಿ ಎಂದು ಹೇಳುತ್ತೇನೆ. ಕಾಫಿ ಪ್ಲಾಂಟರ್ಸ್ ಬಹಳ ಶ್ರೀಮಂತರಾಗಿದ್ದಾರೆ. ನೀವು ಯಾವುದೋ ಒಂದು ಅಜ್ಞಾತ ಪ್ರೇರಣೆಯಿಂದ ಶ್ರೀಮಂತರ ಕಡೆ ಹೋಗುತ್ತಿದ್ದೀರಿ.

"It is considered that land on which non-agricultural assessment is paid need not be subject to surcharge. Necessary provision for this purpose is made in third proviso proposed to be added to section 3.".

ಮನೆ ಕಟ್ಟಿಸುವುದಕ್ಕೆ ಜಮೀನು ತೆಗೆದುಕೊಂಡರೆ 400 ರೂಪಾಯಿಗಿಂತ ಜಾಸ್ತಿ ಹಾಕುವು ದಿಲ್ಲ ಎಂದರೆ ಏನು ಸ್ವಾಮಿ? ಇವತ್ತಿನ ದಿವಸ ಬೆಂಗಳೂರು ನಗರ ಸುತ್ತುಮುತ್ತ ಒಂದು ಎಕರೆ ಜಮೀನು ಕೊಂಡು ಅದರಲ್ಲಿ ಹತ್ತು ಸೈಟ್ಸ್ ಮಾಡಿ ಒಂದೊಂದು ಸೈಟ್ 3,000 ಅಥವಾ 4,000 ರೂಪಾಯಿಗಳಿಗೆ ಮಾರುತ್ತಿದ್ದಾರೆ. ಒಂದು ಎಕರೆಗೆ 40,000 ರೂ. ವರೆಗೆ ಅವನಿಗೆ ಬರುತ್ತದೆ. ಇಷ್ಟು ಬೆಲೆ ಬರುತ್ತಿರುವಾಗ, ಅಂಥವನು ಒಂದು ಎಕರೆಗೆ 400 ರೂಪಾಯಿ ಕೊಡುವುದು ಜಾಸ್ತಿ ಎಂದು ಹೇಳಿದರೆ ಅರ್ಥವಾಗುವುದಿಲ್ಲ. ಸ್ವಲ್ಪ ವಿವೇಚನೆ ಇರಬೇಕು. ಕನ್‌ವರ್ಷನ್ ಛಾರ್ಜಸ್ 400 ರೂ. ಬದಲು ಎರಡು ಮೂರು ಸಾವಿರ ರೂಪಾಯಿ ಹಾಕಿದ್ದರೂ ಕೂಡ ಅದು ಜಾಸ್ತಿ ಯಾಗುವುದಿಲ್ಲ.

ಐದು ಎಕರೆಗಿಂತ ಕಡಿಮೆ ಇರತಕ್ಕವನು ಸರ್‌ಛಾರ್ಜ್ ಕೊಡದೇಕಾಗಿಲ್ಲ. ಅಂತಹ ಸಂದರ್ಭದಲ್ಲಿ ಅವನು ತಹಸೀಲ್ದಾರರ ಹತ್ತಿರ ಹೋಗಿ ಅವರಿಗೆ ಸರಿಯಾದ ಸಮಜಾಯಿಷಿ ಕೊಡಬೇಕು. ರೈತನನ್ನು ಎಷ್ಟು ರೀತಿಯಲ್ಲಿ ಈ ಅಧಿಕಾರಿಗಳ ಮನೆ ಮನೆಗೆ ಅಲೆಸುತ್ತೀರಿ ಎಂಬ ದೃಷ್ಟಿಯಿಂದ ಹೇಳುತ್ತೇನೆ. ಅವನು ಪಂಚಾಯ್ತಿ ಹತ್ತಿರ ಅಹವಾಲು ಹೋಗಬೇಕು, ಅಧಿಕಾರಿಗಳಿಗೆ ಅಹವಾಲು ಸಲ್ಲಿಸಬೇಕು. ಈ ಸಂಬಂಧದಲ್ಲಿ ನನ್ನ ಸಲಹೆ ಏನೆಂದರೆ ಎರಡರಿಂದ ಐದು ಮೈಲಿ ವ್ಯಾಪ್ತಿಯಲ್ಲಿರತಕ್ಕ ಪಂಚಾಯ್ತಿ ಗಳಿಗೇ ಈ ಅಧಿಕಾರವನ್ನು ಏಕೆ ಕೊಟ್ಟು ಬಿಡಬಾರದು ? ಅದರಿಂದ ರೈತರಿಗೆ ಅನಾನುಕೂಲವಾಗು ವುದಿಲ್ಲ. ಇದನ್ನು ಬಿಟ್ಟು ತಹಸೀಲ್ದಾರರಿಗೆ ಈ ಅಧಿಕಾರವನ್ನು ಕೊಡುತ್ತಿದ್ದೀರಿ, ಒಂದು ಕಡೆ ಪಂಚಾಯ್ತಿ ಇದೆ ತಾಲ್ಲೂಕು ಬೋರ್ಡು ಇದೆ, ಇಷ್ಟೆಲ್ಲಾ ಇದ್ದೂ ಕೂಡ ಈ ಬೋರ್ಡು ಆಡಳಿತ ಏಕೆ ? ಇದರಿಂದ ಅರಾಜಕತೆ ಆಗುತ್ತದೆ. ತಾಲ್ಲೂಕು ಆಫೀಸಿನಲ್ಲಾಗತಕ್ಕ ಕೆಲಸ ಕಾರ್ಯಗಳನ್ನು ತಾಲ್ಲೂಕು ಬೋರ್ಡಿಗೆ ಬಿಟ್ಟುಕೊಟ್ಟು ಅಹವಾಲನ್ನು ತೆಗೆದುಕೊಂಡು ಹೋಗುವಾಗ ತಹಸೀಲ ದಾರರನ್ನು ಬಿಟ್ಟು ಪಂಚಾಯ್ತಿಗೆ ಸಲ್ಲಿಸಬೇಕೆಂದು ಮಾಡಿದರೆ ದೇಶಾದಂತ ಆಡಳಿತಕ್ಕೆ ಖರ್ಚು ಮಾಡುತ್ತಾ ಇರುವುದು ಬಹಳ ಕಡಿಮೆಯಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ. ಎಲ್ಲಾ ಕಡೆಯಲ್ಲೂ ಕಂದಾಯ ಜಾಸ್ತಿಯಾಗುತ್ತಾ ಇದೆ. ಹಾಗಿರುವಾಗ ಇದನ್ನು ತರುವುದು ಅಷ್ಟು ಒಳ್ಳೆಯದಲ್ಲ ಮತ್ತು ಪುನಃ ನೀವೇ ಇದಕ್ಕೆ ಒಂದು ತಿದ್ದುಪಡಿಯನ್ನು ತರಬೇಕಾಗುತ್ತದೆ. ನಿಜ ವಾಗಿಯೂ ಜನಗಳಿಗೆ ಒಳ್ಳೆಯದು ಮಾಡುವುದಕ್ಕೆ ಒಂದು ದಾರಿ ಯಾವುದೆಂದರೆ ತಾಲ್ಲೂಕು ಬೋರ್ಡು ಮತ್ತು ಪಂಚಾಯ್ತಿ ಆಡಳಿತವನ್ನು ನೀವು ಭದ್ರಪಡಿಸಬೇಕು. ಆಗಲೇ ಪಂಚಾಯ್ತಿ ರಾಜ್ಯ ಸ್ಥಾಪನೆಯಾಗಿ ನಿಜವಾಗಿಯೂ ಜನಗಳ ಸ್ವಯಂಆಡಳಿತ ಬಂದು ಎಲ್ಲ ವ್ಯವಹಾರಗಳೂ ಚೆನ್ನಾಗಿ ನಡೆಯುವುದಕ್ಕೆ ಮಾರ್ಗವಾಗುತ್ತದೆ. ಇಷ್ಟು ಹೇಳಿ ನಾಲ್ಕು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೇ, ಈಗ ಸಭೆಯ ಮುಂದಿ ಬಂದಿರತಕ್ಕ ಮಸೂದೆಯಲ್ಲಿ ರೈತರ ಮೇಲೆ ಹಾಕಿದ್ದ ಕರಭಾರ ಕಡಮೆ ಆಗುವುದರಿಂದ ನಾನು ಇದನ್ನು

(ಶ್ರೀ ಸಿದ್ದಯ್ಯ ಕಾಶಿಮಠ)

ಸ್ವಾಗತ ಮಾಡುತ್ತೇನೆ. ಈ ಹಿಂದೆ 1961ರಲ್ಲಿ ಪಾಸಾದ ಸರ್‌ಛಾರ್ಜ್ ಶಾಸನಕ್ಕೆ 1962 ರಲ್ಲಿ ಒಂದು ತಿದ್ದುಪಡಿಯನ್ನು ತಂದಿದ್ದ ಕಾಲಕ್ಕೆ ಜನರು ನಮ್ಮ ಮುಂದೆ ಬಂದು ಕೆಲವೊಂದು ವಿಚಾರಗಳನ್ನು ನಮ್ಮ ಮುಂದೆ ಇಟ್ಟು ಅವರಿಗೆ ಆಗತಕ್ಕ ತೊಂದರೆಗಳನ್ನು ತಪ್ಪಿಸಬೇಕೆಂದು ಕೇಳಿಕೊಂಡಿದ್ದರು. ಆಗ 100ಕ್ಕೆ 100 ಭಾಗ ಹಾಕಿದ್ದ ತೆರಿಗೆಯನ್ನು ಈಗ 75ಕ್ಕೆ ಇಳಿಸಿರುವುದು ಬಹಳ ಸಂತೋಷದ ವಿಷಯ. ಈ ಹಿಂದಿನಿಂದಲೂ ಮುಂಬೈ ಕರ್ಣಾಟಕ ಪ್ರದೇಶದಲ್ಲಿರತಕ್ಕ ರೈತರು ಸರ್ಕಾರಕ್ಕೆ ಹೆಚ್ಚು ಕಂದಾಯವನ್ನು ಕೊಡುತ್ತಾ ಬಂದಿದ್ದಾರೆ. ಈ ಹಿಂದೆ ಅಮಲನ್ನು ಜಾರಿಗೆ ತಂದಾಗ ಅವರಿಗೆ ಬಹಳ ತೊಂದರೆಯಾಗಿತ್ತು. ಅಲ್ಲಿಯ ಕೆಲವು ಪ್ರಮುಖ ರೈತರು ಈರುಳ್ಳಿ, ಆಲೂಗಡ್ಡೆ ಇತ್ಯಾದಿಗಳ ಮೇಲೆ ಹಾಕಿರತಕ್ಕ ಕರಭಾರ ಜಾಸ್ತಿಯಾಗಿದೆ ಎಂದು ರೆಪ್ರಸೆಂಟ್ ಮಾಡಿಕೊಂಡಾಗ, ರಾಜ್ಯದಲ್ಲಿ ಒಂದು ಏಕರೂಪತೆಯ ಕಾನೂನನ್ನು ಜಾರಿಗೆ ತರುವತನಕ ಅವರಿಗೆ ಒಂದು ರಿಯಾಯಿತಿಯನ್ನು ಕೊಡುವುದಾಗಿ ಆಗ ತಿಳಿಸಲಾಗಿತ್ತು. ಹಿಂದಿನಿಂದಲೂ ಆ ಡೊಮಿನಿಯನ್ ಹಳ್ಳಿಗಳಲ್ಲಿರತಕ್ಕ ರೈತರು ಸಂಸ್ಥಾನಾದಳಿತಕ್ಕೊಳಪಟ್ಟ ಹಳ್ಳಿಗಳಲ್ಲಿರತಕ್ಕ ರೈತರುಗಳಿಗಿಂತ ಒಂದಕ್ಕೆ ಎರಡುಪಟ್ಟು ಜಾಸ್ತಿ ಕಂದಾಯವನ್ನು ಕೊಡುತ್ತಾ ಬಂದಿದ್ದಾರೆ. ಈಗಲಾದರೂ ಇದನ್ನು ವಜಾ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

5.30 P.M.

ಇನ್ನು ಎರಡನೆಯದಾಗಿ, ಈ ವಾಟರ್ ಸೆಸ್ಸನ್ನು 30 ರೂಪಾಯಿಗಳಿಗೆ ಜಾಸ್ತಿ ಆಗಬಾರದೆಂದು ಹೇಳಿದ್ದಾರೆ. ನಮ್ಮ ಬೊಂಬಾಯಿ ಪ್ರಾಂತ್ಯದ ಕರ್ಣಾಟಕದವರಿಗೆ ಇದೂ ಕೂಡ ಬಹಳ ಜಾಸ್ತಿ ಆಯಿತು. ಇದನ್ನು ಹಳೇ ಮೈಸೂರು ಏರಿಯಾದಲ್ಲಿರುವಂತೆ 20 ರೂಪಾಯಿಗಳಿಗೆ ಇಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಆಕ್ಟ್ 1962ನ ಏಪ್ರಿಲನಿಂದ ಜಾರಿಗೆ ಬರಬೇಕೆಂದು ಹೇಳಿದ್ದಾರೆ. ಆದರೆ ಈ ಹಿಂದೆ ಕೆಲವರಿಂದ ಈಗಾಗಲೆ ಈ ಸರ್‌ಛಾರ್ಜನ್ನು ವಸೂಲು ಮಾಡಿದ್ದಾರೆ. ಅದನ್ನು ತಾವು ಗಣನೆಯಲ್ಲಿಟ್ಟುಕೊಂಡು ಅದನ್ನು ವಾಪಸ್ಸು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೆಲವು ಡ್ರೈ ಲ್ಯಾಂಡಿನವರ ವಿಚಾರವನ್ನು ಹೇಳಬೇಕಾಗಿದೆ. ಕೆಲವು ಕಡೆ ಈ ಡ್ರೈ ಲ್ಯಾಂಡುಗಳು ರೈತರ ವಶದಲ್ಲಿದ್ದು ಅವರ ಹಿಂದಿನಿಂದಲೂ ಕಂದಾಯವನ್ನು ಆ ಜಮೀನುಗಳಿಗೆ ಕೊಟ್ಟುಕೊಂಡು ಬರುತ್ತಿದ್ದಾರೆ. ಆದರೆ ಆ ಜಮೀನುಗಳು ಅರಣ್ಯ ಇಲಾಖೆಯವರ ವಶದಲ್ಲಿರುತ್ತವೆ. ಇದನ್ನು ಸರ್ಕಾರದವರು ಸ್ವಲ್ಪ ಪರಿಶೀಲನೆ ಮಾಡಿ ಆ ನಾನ್-ಅಗ್ರಿಕಲ್ಚರಲ್ ಲ್ಯಾಂಡಿಗೆ ಯಾವ ರೀತಿ ಅವರು ತೆರಿಗೆ ಕೊಡಬೇಕು ಎಂಬುದನ್ನು ತಾವು ಸ್ವಲ್ಪ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ವಿ. ರಾಮೇಗೌಡ (ಮಾಲೂರು).—ಸ್ವಾಮಿ ನಾನು ಈ ತೆರಿಗೆ ಮಸೂದೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತಾ ಈಗ ಒಂದು ಕ್ಲಾರಿಫಿಕೇಷನ್ ಕೇಳಬೇಕೆಂದು ನಿಂತಿದ್ದೇನೆ. ತಾವು 1961ರಲ್ಲಿ ತಂದ ವಸೂದೆಯ ಪ್ರಕಾರ ರೂ. 1ಕ್ಕೆ 37 ನ.ಪೈ. ಸರ್‌ಛಾರ್ಜ್ ತೆರಿಗೆಯನ್ನು 1962 ರಿಂದ ವಸೂಲು ಮಾಡಬೇಕಾಗಿತ್ತು. ಏಕೆಂದರೆ ಈ ಶಾಸನವನ್ನು 61ರಲ್ಲಿ ಚುನಾವಣೆಗೆ ಬಂದಿದ್ದರಿಂದ ಜಾರಿಗೇ ಕೊಡಲಿಲ್ಲ. ಆದರೆ ಇದನ್ನು 1962 ರಲ್ಲಿ ವಸೂಲು ಮಾಡಲಿಲ್ಲ. ಆದುದರಿಂದ ಇದನ್ನು ಮನ್ನಾ ಮಾಡುತ್ತೀರಾ ಹೇಗೆ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ಕೆಲವು ಕಡೆ ವಸೂಲಾಗಿದೆ. ಇನ್ನು ಕೆಲವು ಕಡೆ ಆಗಿಲ್ಲ. ಆದುದರಿಂದ ಇದನ್ನು ಎಲ್ಲರೂ ಕೊಡಲೇಬೇಕು. ಮನ್ನಾ ಮಾಡುವುದಕ್ಕೆ ಆಗುವುದಿಲ್ಲ.

[MR. SPEAKER in the Chair.]

Sri SANJEEVANATH AIKALA (Suratkal).—Mr. Speaker, never I came across in my life as a Legislator with such an instance where the Hon'ble Minister came before the House so apologetically, with an amendment Bill to an amendment Bill. This 1963 amendment Bill is an amendment to the Amendment Bill 1962. The Minister put it plainly before the House that this is an unscientific measure. Sir, I ask the

Minister through you, with what justification they have brought this Bill when they themselves agree that this is a very unscientific Bill. This is most uncalled for I refer to the hardship caused to my district by this measure. Sri Bhasker Setty and Sri Manjayya Setty have already referred to it. We have before us an unanswered question about the surcharge collected in my district. Sir, only 33⅓ per cent of the surcharge has been collected in my district. Our district is always very perfect and very prompt in the payment of revenue. But in this regard there is an arrear of 66⅔ per cent of surcharge. That alone shows what an amount of injustice this surcharge has been causing to our district. Sir, when we were in the erstwhile Madras State, in the year 1904 the settlement of the lands were done according to which lands were classified into three classess. In 1932 to 1934 there was reclassification of land and the land revenue was increased by bearly 50 per cent. For a first class land, the land revenue is 10 to 12 rupees whereas for a similar category of land in the Mysore State it is hardly 2 to 3 rupees. Though it was a heavy taxation, the people of South Kanara and North Kanara have promptly paid it. For this prompt payment we are now punished with this surcharge. When other people are to pay only 4 rupees, we have to pay 20 rupees. Is the Government justified in again inflicting this heavy burden on the people of our area who have all along been paying the revenue so promptly ? What have you done in the case of other people ? Sir, in the erstwhile Hyderabad State, the land revenue has not been paid regularly and completely for the last so many years and it has to be written off. In view of this, is it fair, is it correct and is it just to collect heavy surcharge in our district ?

Now, a lot of writ petitioos are pending before the High Court.

MR. SPEAKER.—Let the Hon'ble Member not discuss that matter.

SRI SANJEEVANATH AIKALA.—I do not go into the merits of these cases.

SRI G. V. GOWDA.—Sir, when writ petitions in this regard are pending before the High Court, can a Bill of this kind be introduced to amend the provisions ? Without discussing the merit of the Bill we cannot go on. Suppose I say that certain provisions are unconstitutional.

MR. SPEAKER.—Legislation is not prevented under the doctrine of *sub judice*. What is prevented is a discussion of the matter awaiting a decision of Court and that too in a manner as to influence the dicision of the Court.

SRI G. V. GOWDA.—The arguments advanced by the petitioner in the Court would have to be advanced here also.

SRI M. V. KRISHNAPPA.—The High Court has given the judgment already. They have declared that the law was just and not *ultra vires*.

SRI SANJEEVANATH AIKALA.—The Hon'ble Revenue Minister is giving wrong information.

SRI M. V. KRISHNAPPA.—My information is very correct. It may not suit my friend's ideas but what I have said is correct.

Sri SANJEEVANATH AIKALA.—I am speaking on facts. The judgments are yet to be delivered and meanwhile stay of payment of surcharges has been given. Many of the landlords have filed writ petitions. When that is the position, it is very wrong and erroneous and incorrect to bring this Amendment Bill.

Sir, I would like to speak on the mode and method of collection of this surcharge. The bill was passed in the month of March 1963. But the Government issued an order to collect the surcharge in the very rainy days of July, August and September. Government could have collected it immediately. These were the months when the people are left with hardly any cash and are disposing off their paddy and other stocks for husbanding the fields. In such a lean time, it is regrettable that the Government should have enforced collection. There were several cases of misdeeds in the course of collection. Government wanted to collect interest on the surcharge also from August onwards.

Mr. SPEAKER.—The question of recovery comes under another Act, and not under this Bill.

Sri SANJEEVANATH AIKALA.—I am saying that the mode of collection is logically bad and unscientific. I with the Revenue Minister to consider these facts on its merits. I want him to consider whether they are justified in imposing this surcharge in South Kanara. I wish that South Kanara district is excluded from the payment of surcharge. Hon'ble Minister should see that justice is done to them. I implead with him and if he fails, then there is a greater body which will do justice.

Sri V. S. PATIL.—I want to know whether the Revenue Minister issued orders to charge interest on surcharge after August.

M. V. KRISHNAPPA.—Whatever rules apply to land revenue also apply to surcharge.

†Sri G. V. GOWDA.—The word surcharge is defined in the Act of 1961 in section 63. To my knowledge, surcharge means an additional or extra burden of a fraction of an existing levy. If the additional levy is equal to or more than the original charge itself, it ceases to be a surcharge. The same point has been raised in the High Court also. Under the S. R. Act, nothing should be done to affect the interests of any area that has come to this State under integration. Different kinds of assessment prevail in the several parts of the State. It is inevitable and has to be continued till uniformity is achieved. But by levying this surcharge we are widening the gulf. The interest of the ryots are seriously affected thereby. It amounts to an exercise of power which is not called for.

The amendment bill seeks to give retrosepctive effect. Already the year 1962-63 is over and I do not know whether the large amounts due in 1962-63 Act has been callected. If it has been collected by amending Section 3, exemption is given only if it exceeds Rs. 30. Then all the cases have to be reopened. I do not know whether it would lead to complications if already collections have been made. Now the ryot is asked to pay what he was not liable to pay under Act of 1963.

A difference is sought to be made between the land used for agricultural purposes and land used for non-agricultural purposes. What is levied by way of surcharge is on land revenue and not on the land. Such being the case, I fail to understand why discrimination should be made between lands used for agricultural and non-agricultural purposes. Coming to exemptions to discriminate against persons who hold lands but who are not carrying on agricultural operations on land is not good. If the Government so wants let them say that if a particular land is converted for non-agricultural purposes, the land revenue may be removed and they may be taxed by some other way. The Hon'ble Minister went on to say that the lands which are used for non-agricultural purposes are subjected to pay Rs. 400, Rs. 500, Rs. 600 per annum, which means they will bea ffected to a larger extent Let them levy surcharge at 10 per cent or atleast 5 per cent. Then it will not amount to discrimination in that case. In order to avoid discrimination, it is desirable not to move that particular amendment *viz.*, giving exemption in respect of any land for which non-agricultural assessment is payable. It is called land revenue. It is stated:

> " 'land revenue' means all sums and payments received or claimable as land revenue or as *judi*, jodi, quit rent kattubadi or other amount of like nature, by whatever name called, by or on behalf of Government from any person on account of land held by or vested in him........."

That is the criterion and not the purpose for which the land is used.

Sri M. V. KRISHNAPPA.—It is not 'land revenue'.

Sri G. V. GOWDA.—If the Hon'ble Minister were to say that it does not become land revenue, then no question of giving any exemption would arise. Therefore, I am submitting that by this amendment we will be inviting troubles in asmuch as the Government will be forced to reopen all cases, because the exemption is enhanced in respect of irrigation cess, water cess, etc.

So far as 1961 Act is concerned, it has replaced certain enactments which existed then, especially the Madras Land Revenue Additional Surcharge Act, 1955. Under that Act, though the surcharge is to be collected, it should be distributed to the Local bodies. That was the purpose for which the enactment was adopted and passed. This particular piece of legislation replaces those enactments. The amount collected has got to be paid to the Local Bodies. So far as surcharge collected under the Madras Act, 1955, is concerned, I am told that, in Kollegal Taluk, the same is not being credited to the Taluk Board. I request the Hon'ble Minister to see that whatever amount is collected under the Madras Act 30 of 1955, which has to be paid to the Local Body as per the provisions of the Act, is paid to them. I also request the Hon'ble Minister to take very early steps in this behalf. I have been requesting for this from a long time. Even in 1961, this matter was raised and Government has not done anything so far to pay the amount that is legitimately due to the Taluk Board and the Village Panchayat. It has been

(SRI G. V. GOWDA)

said and assurances have been given that only during 1962-63 and the current year 1963-64, this Act would be given effect to and collections would be made. I do not know whether it would be possible for the Government to complete survey and resettlement work by the end of 1963-64. This Act remains in force only till the expiry of 1963-64. Therefore, I submit that instead of inviting complications inasmuch as to reopen cases which have been already noticed by the Government, it is better not to press for this amendment. I do not know how many cases there are, where a person who pays the water rate of Rs. 12 per acre on land growing paddy and Rs. 18 per acre on land growing sugarcane. A paddy grower will have to pay more tax. In respect of Coffee plantations, a levy of surcharge of 75 per cent of the land revenue is proposed. The assessment determined on such lands corresponds more or less to the assessment determined on dry lands, and it carries the same rate that is prevailing over the dry land. Therefore, even in that respect, the Hon'ble Minister could have thought of enhancing it to cent per cent and I should say that deserves reconsideration. In order to shoulder more burden, is it not desirable to welcome an evil which is of a shorter character ? So, it is better to re-examine all the issues.

With these observations, I request that the amount collected under the Madras Act of 1955 is paid to the concerned persons early.

Mr. SPEAKER.—I think, we can sit for another half an hour and complete the discussion on the Bill. I have proposed motion at 4.30 P.M. and we have just covered an hour and a half.

† ಶ್ರೀ ಜಿ. ಎನ್. ದೇಸಾಯಿ (ಹಾನಗಲ್).—ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಮಂತ್ರಿಗಳು ಮಂಡಿಸಿದಂಥ ಈ ವಿಧೇಯಕವನ್ನು ಸ್ವಾಗತಿಸುತ್ತ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ತಿದ್ದುಪಡಿ ವಿಧೇಯಕದ ಉದ್ದೇಶದಲ್ಲಿ ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ಮಂಡಿಸಲಾಗಿದೆ ಎಂದು ಬರೆದಿದೆ. ಅದು ನ್ಯಾಯವಾದದು. ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಈ ತಿದ್ದುಪಡಿಯನ್ನು ಸ್ವೀಕರಿಸಿದ ಮೇಲೆ ಕೂಡ ಇನ್ನೂ ಕೆಲವು ಅಸಮಾನತೆಗಳು ಇದರಲ್ಲಿ ಉಳಿಯುತ್ತವೆ ಎಂದು ನನಗನ್ನಿಸುತ್ತದೆ. ಅದೇನೆಂದರೆ ರಾಜ್ಯಾದ್ಯಂತವಾಗಿ ವಾಟರ್ ರೇಟು ಏಕರೂಪವಾಗಿಲ್ಲ. ಕಾವೇರಿ ಪ್ರದೇಶದಲ್ಲಿ ಒಂದು ರೇಟು, ಘಟಪ್ರಭಾ ಪ್ರದೇಶದಲ್ಲಿ ಒಂದು ರೇಟು, ತುಂಗಭದ್ರ ಪ್ರದೇಶದಲ್ಲಿ ಒಂದು ರೇಟು, ಹೀಗೆ ನಾನಾ ರೀತಿ ಇದೆ. ಈ ರೇಟುಗಳು ಎಲ್ಲಿಯವರೆಗೆ ಏಕರೂಪ (ಯೂನಿಫಾರಂ) ವಾಗಿ ಇರುವುದಿಲ್ಲವೋ ಅವರೆಗೆ ಈ ತಿದ್ದುಪಡಿಯಲ್ಲಿರುವ ಪ್ರಾವಿಸೋ ಏನಿದೆ ಒಂದು ಎಕರೆಗೆ 30 ರೂಪಾಯಿ ಇರಬೇಕೆಂದು ಹೇಳಿರುವುದು ಅದು ಸಾಮಾನ್ಯವಾಗಿ ಎಲ್ಲ ಕಡೆಯೂ ಹಾಕಲಾಗುವುದಿಲ್ಲವೆಂದು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಘಟಪ್ರಭ ಕೆಳಗೆ 30 ರೂಪಾಯಿ ವಾಟರ್ ರೇಟ್ ಮತ್ತು ಸೆಸ್ ಇಲ್ಲಾ ಅವರಿಗೆ ಇದರಿಂದ ಯಾವ ಸವಲತ್ತೂ ಸಿಕ್ಕುವುದಿಲ್ಲ. ಅವರಿಗೆ 30 ರೂಪಾಯಿಗಿಂತ ಹೆಚ್ಚಾಗಿ ಹಾಕದಂತೆ ಮಾಡಬೇಕು. ಒಂದು ವೇಳೆ ಅದು ಸಾಧ್ಯವಾಗದೆ ಇದ್ದರೆ ಈ ವರ್ಷದ ಫಸಲು ಆಗುವುದರೊಳಗೆ ಎಲ್ಲ ಕಡೆಯೂ ಯೂನಿಫಾರಂ ರೇಟುಗಳನ್ನು ಮಾಡಬೇಕು ಎಂದು ನನ್ನ ಸಲಹೆ ಇದೆ.

ಇನ್ನೊಂದು ಮಾತು ಎಂದರೆ ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಸ್ಥಿತಿ ಬೇರೆ ಇದೆ. ಅಲ್ಲಿ ಬಾಗಾಯಿತು ಜಮೀನುಗಳಿಗೆ ಒಂದು ಎಕರೆ 15-16 ರೂಪಾಯಿ ಕರ ಹಾಕುತ್ತಾರೆ. ಇದರಲ್ಲಿ ಭೂಮಿಯ ಕರ ಮತ್ತು ನೀರಿನ ಕರ ಎರಡೂ ಕೂಡಿಸಿ ಕನ್‌ಸಾಲಿಡೇಟೆಡ್ ಅಸೆಸ್‌ಮೆಂಟ್ ಎಂದು ವಸೂಲು ಮಾಡುತ್ತಾರೆ. ಒಂದು ಎಕರೆಗೆ 16 ರೂಪಾಯಿ ಕರಹಾಕುವುದರ ಜೊತೆಗೆ ಇರಿಗೇಷನ್ ಸೆಸ್ ಎಂದು $11\frac{1}{2}$ ರೂಪಾಯಿ ಬೀಳುತ್ತದೆ. ಇವೆರಡರ ಮೇಲೆ ಸೆಂಟ್ ಪರ್‌ಸೆಂಟ್ ಸರ್‌ಚಾರ್ಜ್ ವಸೂಲಿಯಾದಲ್ಲಿ 60 ರೂಪಾಯಿಗಳವರೆಗೂ ನಾವು ಕಂದಾಯ ಪ್ರತಿಸಲ ಕೊಡಬೇಕು. ಇದಲ್ಲದೆ ಲೋಕಲ್ ಫಂಡ್ ಮತ್ತು ಹೆಲ್ತ್ ಸೆಸ್ ಕೂಡ ಕೊಡಬೇಕಾಗುತ್ತದೆ. ಈ ತೊಂದರೆ ಅವರಿಗೆ ಆಗು

ತ್ತಿದೆ. ಇತರ ಪ್ರದೇಶಗಳಲ್ಲಿ ವಾಟರ್ ರೇಟ್, ವಾಟರ್ ಸೆಸ್, ಇರಿಗೇಷನ್ ಸೆಸ್ ಹೀಗೆ ಬೇರೆ ಕಾಣಿಸಿರುತ್ತಾರೆ. ಆದರೆ ನಮ್ಮಲ್ಲಿ ಕನ್‌ಸಾಲಿಡೇಟೆಡ್ ಅಸೆಸ್‌ಮೆಂಟ್ ಎಂದು ಭೂಮಿಯ ಕಂದಾಯ ವಾಟರ್‌ಸೆಸ್‌ಎರಡನ್ನೂ ತೆಗೆದುಕೊಳ್ಳುತ್ತಾರೆ. ವಾಟರ್‌ಸೆಸ್ಸನ್ನು ಕಂದಾಯದಿಂದ ಬೇರ್ಪಡಿಸಬೇಕು. ಇಲ್ಲದೆ ಹೋದರೆ ಕಂದಾಯ ಕೂಡ 30 ರೂಪಾಯಿ ಕೊಡುವಂತೆ ತಿದ್ದುಪಡಿಯನ್ನು ಮಾಡಬೇಕೆಂದು ಕಂದಾಯ ಮಂತ್ರಿಗಳಲ್ಲಿ ನನ್ನ ವಿನಂತಿ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri TIRUMALADEVA RAYALU** (Gangavati).—Sir, while supporting this amendment, I would like to point to the Government that in Hyderabad State under Thungabhadra project, a flat land revenue has been fixed on sugarcane that is Rs. 36 including watertax and excluding health cess and all local cesses. In this amendment, it is mentioned that persons who are paying less then Rs.18 are exempted. But in ex-Hyderabad area, last year the agriculturists were paying more than Rs. 36 and they had to pay Rs. 36 as surcharge also. That works up to Rs. 72 and including several cesses, it will come to Rs. 76. I therefore request the Government to fix a uniform land revenue on sugarcane with a little difference wherever necessary to suit local conditions.

Sir, Bellary district under the old Canal, they are paying Rs. 18, wheres in similar conditions,in Hyderabad we are paying Rs. 24, Bellary people will be paying Rs. 36 including surcharge,whereas in the old canal we have to pay Rs. 48 excluding health and local cess. This difference I feel is rather unjust and unfair. Once again, I request the Government to consider it and make a uniform land revenue throughout the State.

With these few words, I thank the Chair for giving me this opportuniny.

6-00. P.M.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಸ್ವಾಮಿ, ಸರ್‌ಛಾರ್ಜ್ ಅಮೆಂಡಮೆಂಟ್ ಬಿಲ್ಲು ಈ ಮೊದಲು ಸಭೆಯಮುಂದೆ ಬಂದಾಗ್ಗೆ ಮಾನ್ಯ ಸದಸ್ಯರು ಏನೇನು ಹೇಳಿದ್ದರೋ ಅದನ್ನೇ ಈಗ ಸಹ ಸರಕಾರದ ಗಮನಕ್ಕೆ ತಂದಿದ್ದಾರೆ. ಅವುಗಳಿಗೆ ಉತ್ತರ ಕೊಟ್ಟಿರುವುದರಿಂದ ಈಗ ಪುನಃ ಅದೇ ವಿಷಯ ತೆಗೆದು ಕೊಂಡು ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಈ ತಿದ್ದುಪಡಿ ಮಸೂದೆಗೆ ದಕ್ಷಿಣ ಕನ್ನಡ ಜಿಲ್ಲೆಯ ಸದಸ್ಯರಿಂದ ವಿರೋಧ ಬಂದಿದೆ. ನಾಲ್ಕೈದು ಜನ ಸದಸ್ಯರು ಮಾತನಾಡಿದರು. ಅವರು ಹೇಳಿದ ಹಾಗೆ ರೈತರಿಗೆ ಕಷ್ಟವಾಗುತ್ತದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಪ್ರತಿ ವರುಷ ಕರಾರುವಾಕಾಗಿ ಒಂದು ಕಾಸು ಸಹ ಬಾಕಿ ಇಟ್ಟುಕೊಳ್ಳದೆ ಕಂದಾಯ ಕೊಡುವ ಜನ ಅವರು. ರೆಮಿಷನ್ ಕೇಳುವುದಿಲ್ಲ ಸಸ್ಪೆನ್‌ಷನ್ ಕೇಳುವುದಿಲ್ಲ, ಅವರಿಗೆ ದೇವರು ಅನುಕೂಲವಾಗಿ ಮಳೆ ಕೊಡುತ್ತಾನೆ. To the last pie has been collected ಎಂದು ಡಿ. ಸಿ. ಇಂದ ಟೆಲಿಗ್ರಾಮ್ ನಮಗೆ ಮೊದಲು ಸೌತ್ ಕೆನರಾ ಡಿಸ್ಟ್ರಿಕ್ಟಿನಿಂದ ಬರುತ್ತದೆ. ಆದ್ದರಿಂದ ಇಂಥ ಜನರಿಗೆ ಕಷ್ಟ ಕೊಡುವುದಕ್ಕೆ ನಮಗೆ ಇಷ್ಟವಿಲ್ಲ. ಈವರ್ಷ ಅವರಿಗೆ ಸ್ವಲ್ಪ ತೊಂದರೆಯಾಗುತ್ತದೆ. ಆದರೆ ಈ ತಿದ್ದುಪಡಿ ಮಸೂದೆಯಿಂದ ಅವರು ಜಾಸ್ತಿ ಕೊಡಬೇಕಾಗಿಲ್ಲ. Not a single pie will be added in South Kanara as a result of this amendment. ಈ ತಿದ್ದುಪಡಿ ಉದ್ದೇಶ ಏನು ಎಂಬುದನ್ನು ಈ ಮೊದಲೇ ಹೇಳಿದ್ದೇನೆ. ಭತ್ತ ಬೆಳೆಯುವ ರೈತನು ಒಂದು ಎಕರೆಗೆ 12 ರೂಪಾಯಿ ಕೊಡತಕ್ಕವನು 24 ರೂಪಾಯಿ ಕೊಡಬೇಕಾಗುತ್ತದೆ. ಆದರೆ 18 ರೂಪಾಯಿ ಕೊಡತಕ್ಕಂಥ ಕಬ್ಬು ಬೆಳೆಯುವ ರೈತನು ಇದರಿಂದ ತಪ್ಪಿಸಿಕೊಳ್ಳುತ್ತಾನೆ. ಇದು ಹೀಗೆ ಉಳಿದರೆ ಸರಕಾರಕ್ಕೆ ಕಣ್ಣಿದೆಯೇ ಎಂದು ನೀವೇ ಕೇಳುತ್ತೀರಿ. ಭತ್ತ ಬೆಳೆಯುವವನು ನಾಲ್ಕೈದು ತಿಂಗಳು ನೀರು ತೆಗೆದುಕೊಳ್ಳುವವನಿಂದ ಎರಡರಷ್ಟು ವಸೂಲ್ಮಾಡುತ್ತೇವೆ. ಆದರೆ 12 ತಿಂಗಳು ನೀರು ತೆಗೆದುಕೊಂಡು ಕಬ್ಬು ಬೆಳೆಯುವವನು 18 ರೂಪಾಯಿ ಕೊಟ್ಟು ತಪ್ಪಿಸಿಕೊಳ್ಳುತ್ತಾನೆ. ಇಂಥ ಅಭ್ಯಾಸವಿರುವುದು ಒಳ್ಳೆಯದಲ್ಲ. ಇದನ್ನು ಸರಿಪಡಿಸಬೇಕಾಗಿರುವುದರಿಂದ ಈ ತಿದ್ದುಪಡಿ ತರಲಾಗಿದೆ. ಬಹು ಮಟ್ಟಿಗೆ ಮಂಡ್ಯ ಜಿಲ್ಲೆಯಲ್ಲಿ ಕಡಿಮೆ ದರ ಇದೆ. ಉತ್ತರ ಕರ್ನಾಟಕದಲ್ಲಿ ಜಾಸ್ತಿ ಕೊಡುತ್ತಾರೆ. Already they are paying Rs. 100

(ಶ್ರೀ ಎಂ. ವಿ. ಕೃಷ್ಣಪ್ಪ)

Rs.120 per acre. This surcharge has not affected them. ಈ ತಿದ್ದುಪಡಿ ಮಸೂದೆಯಿಂದ ಅವರಿಗೆ ತೊಂದರೆ ಆಗುವುದಿಲ್ಲ. ಉತ್ತರ ಕರ್ನಾಟಕದ ರೈತರಿಗೆ ಇದರಿಂದ ಅಫೆಕ್ಟ್ ಆಗುವುದಿಲ್ಲ. 15 ರಿಂದ 20 ರೂಪಾಯಿವರೆಗೆ ಕೊಡತಕ್ಕವರು ಈ ತಿದ್ದುಪಡಿಯಿಂದ ಹೆಚ್ಚಿಗೆ ಕೊಡಬೇಕಾಗುತ್ತದೆ. ಅಂಥ ಜನ ಬಹಳ ಕಡಿಮೆ ಇದ್ದಾರೆ. ಇಂಥಾ ಅನಾಮಲಿ ಆಭಾಸ ಇರಬಾರದು ಎಂಬುದು ಇದರ ಮೂಲ ಉದ್ದೇಶ. ಈ ತಿದ್ದುಪಡಿಯಿಂದ ಸರಕಾರಕ್ಕೆ ಹೆಚ್ಚು ಲಾಭ ಬರುತ್ತದೆ ಎಂದು ಅಲ್ಲ. ಅನಾಮಲಿ ರಿಮೂವ್ ಮಾಡುವುದಕ್ಕೆ ಈ ಅಮೆಂಡ್‌ಮೆಂಟ್ ತಂದಿದ್ದೇವೆ.

ಇನ್ನು ಕಾಫಿ ಖರಾಬ ಅಂದರೆ ಏನು ಎಂದು ಕೆಲವು ಸದಸ್ಯರು ಕೇಳಿದರು. ಇದು ಬೇರೆ ಭಾಷೆ ಬಂದಿರತಕ್ಕ ಪದ. ಸರ್ವೆ ಮಾಡುವುದನ್ನು ಮಹಾರಾಷ್ಟ್ರದವರಿಂದ ನಾವು ಕಲಿತಿದ್ದೇವೆ. It is the Maharashtrians who came first to Mysore for survey work. ಉತ್ತರದಿಂದ ಇಲ್ಲಿಗೆ ಬಂದಿರತಕ್ಕ ಸರ್ವೇಯರ್ಸ್‌ಗಳಿಗೆ ನಾವು ಬಾಂದಿನವರು ಎಂದು ಕರೆಯುತ್ತೇವೆ. ಬಾಂದಿನವರ ಅನೇಕ ಶಬ್ದಗಳು ಬಳಕೆಯೊಳಗೆ ಬಂದಿವೆ. They have acquired different meanings ಅಂಥ ಪದಗಳಿಗೆ ಇಂದ ಬೇರೆ ಅರ್ಥ ಇರುತ್ತದೆ. ಉದಾಹರಣೆಗೆ 'ಹಲಕಾ' ಪದ ಉತ್ತರ ದೇಶದಲ್ಲಿ ಸಾಮಾನ್ಯವಾಗಿ ಉಪಯೋಗಿಸುತ್ತಾರೆ. ಅದಕ್ಕೆ ಅಲ್ಲಿ ಕೆಟ್ಟ ಅರ್ಥವಿಲ್ಲ. ಆದರೆ ನಮ್ಮ ದೇಶದಲ್ಲಿ ಅದಕ್ಕೆ ತದ್ವಿರುದ್ಧವಾದ ಕೆಟ್ಟ ಅರ್ಥ ಬರುತ್ತದೆ. ಒಳ್ಳೆ ಅರ್ಥ ಇರುವ ಶಬ್ದಗಳಿಗೆ ಕೆಟ್ಟ ಅರ್ಥ ಬಳಕೆಯೊಳಗೆ ಬರುತ್ತದೆ. 'ಹಲಕಾ' ಶಬ್ದದಂತೆಯೇ ಖರಾಬ ಶಬ್ದಕ್ಕೂ ಅರ್ಥ ಬಂದಿರಬೇಕು. Land where agricultural crops could be brought up is called good land. The rest is called kharab. ಸರ್ವೆ ಮಾಡಿದಾಗ್ಗೆ ಖರಾಬ ಶಬ್ದ ಬಳಕೆಯೊಳಗೆ ಬಂದದೆ. ಅದರಂತೆ ಕಾಫಿ ಖರಾಬ ಪದ ಉಪಯೋಗದಲ್ಲಿ ಬಂದಿದೆ. Where agricultural crops could not be grown plantation could be grown. ಫುಟ್ ಖರಾಬ್ ಅನ್ನುವುದಕ್ಕೆ ಅರ್ಥವಿದೆ. ತಾಲ್ಲೂಕು ಆಫೀಸಿನಲ್ಲಿ ಬಹಳ ಪದಗಳು ಉರ್ದುನಲ್ಲಿರುವುವು ಇನ್ನೂ ಬಳಕೆಯಲ್ಲಿವೆ. ಖಾವಂದ್ ಹುಜೂರ್ ಜನಾಬಿಗೆ ಗರೀಬನಾದ ನನ್ನ ಅಹವಾಲು ಅರ್ಜಿ ಎಂದು ಬರೆಯುತ್ತಾರೆ. ಖರಾಬು ಎಂದರೆ ಕೆಟ್ಟದ್ದು ಎಂದು ಅಲ್ಲ.

Perhaps in those days it was not meant for agriculture, but it was meant for other crops.

ಆದ್ದರಿಂದ ಕಾಫಿ ಖರಾಬು ಎಂದು ಸೇರಿಸಿದೆ. 3ನೇ ತಿದ್ದುಪಡಿ ಅಗ್ರಿಕಲ್ಚರಲ್ ಲ್ಯಾಂಡ್ಸ್‌ಗೆ ಮಾತ್ರ ಅನ್ವಯಿಸುತ್ತದೆ.

Strictly speaking, surcharge should apply to only agricultural lands and agricultural land revenue.

ನಾನು ಅಗ್ರಿಕಲ್ಚರಲ್ ಉಪಯೋಗಕ್ಕೆ ಬರುವ ಭೂಮಿಯ ಮೇಲೆ ಅಧಿಕಾರ ಇದೆಯೋ ಇಲ್ಲವೋ ಎಂಬ ಉದ್ದೇಶ ಅಲ್ಲ. ಇದನ್ನು ಬರೀ ಕ್ಲಾರಿಫಿಕೇಷನ್‌ಗೆ ತಂದಿದ್ದೇವೆಯೇ ಹೊರತು ಬೇರೆ ಉದ್ದೇಶವಿಲ್ಲ ಎಂದು ಹೇಳುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತುರ್ತು ಪರಿಸ್ಥಿತಿಯಲ್ಲಿ ರೈತರು ಆಹಾರ ಬೆಳೆದರೆ ತಾನೇ ನಮ್ಮ ಜವಾನರು ಪುಷ್ಟಿಯಾಗಿ ತಿಂದು ಯುದ್ಧ ಮಾಡುವುದಕ್ಕೆ ಅವಕಾಶವಾಗುವುದು. ಪಾಶ್ಚಿಮಾತ್ಯ ದೇಶಗಳಲ್ಲಿ ಯಾವ ರೀತಿ ಸಬ್ಸಿಡಿ ಕೊಡುತ್ತಾರೋ ಆ ರೀತಿ ಸಬ್ಸಿಡಿಕೊಟ್ಟು ಈ ಸರ್‌ಛಾರ್ಜನ್ನು ಏಕೆ ಪೂರ್ತಿ ವಜಾ ಮಾಡಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ.—ವರ್ಷಕ್ಕೆ ಡೆವಲಪ್‌ಮೆಂಟ್ ಪ್ರೋಗ್ರಾಂಗೆ 50 ಕೋಟಿ ರೂಪಾಯಿ ಬೇಕು. ಈಗ ನಮಗೆ 35 ಕೋಟಿ ರೂಪಾಯಿ ಇಂಕಂಟ್ಯಾಕ್ಸ್‌ನಿಂದ ಬರುತ್ತದೆ, ಇನ್ನೂ 15 ಕೋಟಿ ರೂಪಾಯಿ ಸಾಲದಾಗಿದೆ. ಅದನ್ನು ತುಂಬಿಕೊಳ್ಳುವುದಕ್ಕೆ ರೈತನ ದೃಷ್ಟಿಯಿಂದ ವಸೂಲುಮಾಡಿ ಅವನಿಗಾಗಿಯೇ ಖರ್ಚು ಮಾಡುತ್ತೇವೆಯೇ ಹೊರತು ಬೇರೆ ಎಲ್ಲೋ ಹಿಮಾಚಲ ಪ್ರದೇಶದಲ್ಲಿ ಖರ್ಚು ಮಾಡುವುದಕ್ಕೆ ಹೋಗುವುದಿಲ್ಲ. ಕೆರೆ ಕಟ್ಟೆಗಳನ್ನು ಕಟ್ಟಬೇಕು ಅವರಿಗೇ ಹೋಗುತ್ತದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಖುಷ್ಕಿ ಜಮೀನು 5 ಎಕರೆಗಿಂತ ಕಡಿಮೆ ಇದ್ದರೆ ಎಕ್ಸೆಂಪ್ಷನ್ ಇದೆ. ಇದನ್ನು ಅಧಿಕಾರಿಗಳು ತಿಳಿಯದೇ ವಸೂಲು ಮಾಡುತ್ತಿದ್ದಾರೆಯೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ವಿಷಯದಲ್ಲಿ ಪ್ರಶ್ನೆ ಬಂದಾಗ 3—4 ಸಾರಿ ಹೇಳಿದ್ದೇನೆ. ಹೋದ ವರ್ಷ ಈ ಬಿಲ್ಲು ಬಂದಾಗ ಕಂದಾಯದ ವಸೂಲಿ ಕ್ರಮ ನಡೆದಿತ್ತು. ಆಗ ಎಲ್ಲೆಲ್ಲಿ ವಸೂಲು ಮಾಡಿದ್ದಾರೆ ಅವರುಗಳಿಗೆಲ್ಲಾ ಈ ವರ್ಷ ಅಥವಾ ಮುಂದಿನ ವರ್ಷದ ಕಂದಾಯದಲ್ಲಿ ವಸೂಲಿ ಮಾಡಿರುವುದನ್ನು ವಜಾ ಹಾಕಿಕೊಳ್ಳುತ್ತಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಠಾಧಿಪತಿಗಳು ಮತ್ತು ದೊಡ್ಡ ಭೂಮಾಲೀಕರು ಹೈಕೋರ್ಟಿಗೆ ರಿಟ್ ಪೆಟಿಷನ್ ಹಾಕಿ ಸ್ಟೇ ಆರ್ಡರು ತಂದಿರುವುದರಿಂದ ಕೊನೇ ತೀರ್ಮಾನ ಬರುವವರೆಗೂ ಈ ಸರ್‌ಛಾರ್ಜ್ ವಸೂಲು ಮಾಡದೇ ತಡೆ ಹಿಡಿಯುತ್ತೀರಾ ಮತ್ತು ಆಗಸ್ಟ್‌ನಿಂದ ತಾವು ಮಾರ್ವಾಡಿ ವ್ಯಾಪಾರ ಮಾಡಿದ್ದೀರಿ—6 ಪರ್ಸೆಂಟ್ ಬಡ್ಡಿ ವಸೂಲು ಮಾಡಬೇಕೆಂದು ಅದನ್ನು ಹೇಗೆ ಮಾಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಿಂದೆ ರಿಟ್ ಪೆಟಿಷನ್ ಹಾಕಿದ್ದರಲ್ಲಿ ಜಡ್ಜ್‌ಮೆಂಟ್ ಬಂದಿದೆ. Under this Act, he is exempted, but land tax is being collected now. ಬಡ್ಡಿ ವಸೂಲು ಮಾಡುತ್ತಿರುವುದು ಕಾನೂನುಬದ್ಧವಾಗಿದೆ.

ಶ್ರೀ ವಿ. ಎಂ. ದೇವ್.—ನಮ್ಮ ತಾಲ್ಲೂಕಿನಲ್ಲಿ ಈ 5 ಎಕರೆಗಿಂತ ಕಡಿಮೆ ಇರುವವರಿಗೆ ಎಕ್ಸಂಪಷನ್ ಕೊಡುತ್ತಾ ಇಲ್ಲ. ಯಾರು ಹೇಳಿದರೂ ಈ ಅಧಿಕಾರಿಗಳು ಕೇಳುವುದಿಲ್ಲ, ವಸೂಲು ಮಾಡದಿದ್ದರೆ ನಮ್ಮನ್ನು ಜವಾಬ್ದಾರರನ್ನಾಗಿ ಮಾಡುತ್ತಾರೆ. ಆದ್ದರಿಂದ ಕೊಟ್ಟೇಕೊಡಬೇಕೆಂದು ಹೇಳುತ್ತಾರೆ. ಆದ್ದರಿಂದ ಅವರಿಗೆ ಸರಿಯಾದ ತಿಳಿವಳಿಕೆ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಕ್ಲಾರಿಫೈ ಮಾಡಿದ್ದೇವೆ. ತಾಲ್ಲೂಕು ಆಫೀಸಿನಲ್ಲಿ ಡಿಕ್ಲರೇಷನ್ ಫಾರಂ ಇರುತ್ತದೆ. ಅದನ್ನು ಭರ್ತಿಮಾಡಿ ಅಮಲ್ದಾರರಿಗೆ ಕೊಟ್ಟರೆ ಸಾಕು ಅವರು ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಐದು ಎಕರೆ ಒಳಗೆ ಇದ್ದರೆ ವಸೂಲು ಮಾಡಕೂಡದೆಂದು ಕಾನೂನಿನಲ್ಲಿ ಇದೆ ವಸೂಲು ಮಾಡುತ್ತಾ ಇದ್ದರೆ ಏನು ಮಾಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೋದ ವರ್ಷ ವಸೂಲಿ ಕ್ರಮ ನಡೆದಿತ್ತು, ತುರ್ತು ಪರಿಸ್ಥಿತಿ ದೇಶಕ್ಕೆ ದುಡ್ಡು ಬೇಕು ಎಂದು ಹೇಳಿ ವಸೂಲು ಮಾಡಿದ್ದಾರೆ, ಈಗ ಅದನ್ನು ವಜಾ ಹಾಕಿಕೊಳ್ಳುತ್ತಾರೆ.

ಶ್ರೀ ವಿ. ಎಂ. ದೇವ್.—ನನ್ನ ತಾಲ್ಲೂಕಿನಲ್ಲಿ ಕೇಳಿದರೆ ಅಮಲ್ದಾರರೂ ಕೂಡ ನಮ್ಮನ್ನು ಜವಾಬ್ದಾರರನ್ನಾಗಿ ಮಾಡುತ್ತಾರೆ. ಆದ್ದರಿಂದ ಕೊಟ್ಟೇಕೊಡಬೇಕೆಂದು ವಸೂಲು ಮಾಡುತ್ತಾ ಇರುವುದನ್ನು ತಮ್ಮ ಗಮನಕ್ಕೆ ತಂದೆ. ಅದನ್ನು ತಾವು ಸ್ವಲ್ಪ ವಿಚಾರಿಸಬೇಕು ?

ಶ್ರೀ ಎಂ. ವಿ. ಕೃಷ್ಣಪ್ಪ.—ಡೆಪ್ಯೂಟಿ ಕಮಿಷನರಿಗೆ ತಿಳಿವಳಿಕೆ ಕೊಟ್ಟಿದ್ದೇವೆ. ತಾವು ಹೇಳುವಂತೆ ಯಾರಾದರೂ ಹೇಳಿದ್ದರೆ ಮತ್ತೆ ಪುನಃ ಸರ್ಕ್ಯುಲರ್ ಕಳುಹಿಸಿ ಯಾವ ದೃಷ್ಟಿಯಿಂದ 5 ಎಕರೆಗೆ ಎಕ್ಸಂಪಷನ್ ಕೊಟ್ಟಿದ್ದೇವೆಯೋ ಅದನ್ನು ನೆರವೇರಿಸಲು ಪ್ರಯತ್ನ ಮಾಡುತ್ತೇವೆ.

Sri V. S. PATIL.—One point was raised by one of the members that in Dharwar District there are some bagayat lands, they are assessed at Rs. 16 per acre and in addition they are paying Rs. 14 per acre as water rate. Rs. 16 as assessment per acre and Rs. 14 as water rate. So already they are paying Rs. 30 per acre and under the provisions of the present Bill, these people will have to pay double. Is that the correct position ?

Sri M. V. KRISHNAPPA.—The aggregate amount will be taken for the consideration of charging surcharge.

Sri V. S. PATIL.—This matter should be made plain that the aggregate amount means the water rate including assessment. Is that the intention of the Government. They are simply looking to the amount of water rate only.

Sri M. V. KRISHNAPPA.—You please write to me about such cases. We will clarify. Because, there is a lot of confusion about surcharge. Different rates of land revenue, water rate, water cess are existing. If there is any difficulty and confusion we are prepared to clarify.

Mr. SPEAKER.—The question is :

> "That the Mysore Land Revenue (Surcharge) (Amendment) Bill, 1963, be taken into consideration."

The motion was adopted.

Mr. SPEAKER.—The Bill will now be taken, clause by clause. Clause 2. The question is :

"That clause 2 stand part of the Bill."

The motion was adopted.

Clause 2 was added to the Bill.

Mr. SPEAKER.—Clause 3. There is an amendment.

Sri M. V. KRISHNAPPA.—Sir, I beg to move :

"That in item (*b*), for the second proviso proposed to be inserted, the following proviso shall be substituted, namely :—

'Provided also that no surcharge shall be payable :—(i) where water cess, water rate or irrigation cess is not less than thirty rupees per acre per annum ; or

(ii) in respect of any land for which non-agricultural assessment is payable.' "

Mr. SPEAKER.—Amendment moved :

"That in item (*b*), for the second proviso proposed to be inserted, the following proviso shall be substituted, namely :—

'Provided also that no surcharge shall be payable :—(i) where water cess, water rate or irrigation cess is not less than thirty rupees per acre per annum ; or

(ii) in respect of any land for which non-agricultural assessment is payable'."

Mr. SPEAKER.—The question is :

"That in item (*b*), for the second proviso proposed to be inserted, the following proviso shall be substituted, namely :—

'Provided also that no surcharge shall be payable :—(i) where water cess, water rate or irrigation cess is not less than thirty rupees per acre per annum ; or

(ii) in respect of any land for which non-agricuitural assessment is payable'."

The amendment was adopted.

Mr. SPEAKER.—The question is :

"That clause 3, as amended, stand part of the Bill."

The motion was adopted.

Clause 3, as amended, was added to the Bill.

MR. SPEAKER.—Clause 1, the Title and the Preamble. The question is:

"That clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass

SRI M. V. KRISHNAPPA.—Sir, I beg to move:

"That the Mysore Land Revenue (Surcharge) (Amendment) Bill, 1963, as amended, be passed."

MR. SPEAKER.—The question is:

"That the Mysore Land Revenue (Surcharge) (Amendment) Bill, 1963, as amended, be passed."

The motion was adopted.

SRI GANGADHARA NAMOSHI.—Sir, to-morrow we may meet at 1 P.M.

MR. SPEAKER.—But many Members have already left the Hall.

HON'BLE MEMBERS.—We shall inform them, Sir.

MR. SPEAKER.—Yes. Now the House will rise to meet again at One P.M. to-morrow.

The House adjourned at Twenty-five Minutes past Six of the Clock to meet again at One of the Clock on Thursday, the 10th October 1963.

WD 1314—GPB—900—26-12-63

KSA LIBRARY, B'lore
B004798
328.32402 548 LAD,1963
JJ33